ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಕನ್ನಡ ಭವನ, ಬೆಂಗಳೂರು - 560 002

ಬರ್ಕ್‌ವೈಟ್ ಕಂಡ ಭಾರತ

ಅನುವಾದ

ಡಾ. ಕೆ.ಆರ್. ಸಂಧ್ಯಾರೆಡ್ಡಿ



ಬರ್ಕ್‌ವೈಟ್ ಕಂಡ ಭಾರತ

(ಮಾರ್ಗರೆಟ್ ಬರ್ಕ್‌ವೈಟ್ ಅವರ Half way to freedom
ಕೃತಿಯ ಅನುವಾದ)

ಅನುವಾದಕರು

ಡಾ. ಕೆ.ಆರ್. ಸಂಧ್ಯಾರೆಡ್ಡಿ

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

"BOURKE WHITE Kanda Bharatha" - Translation of Margaret Bourke-White's Half way to Freedom by Dr. K.R. Sandhya Reddy, Published by Ashoka N. Chalavadi, Administrative Officer, Kannada Book Authority, J.C. Road, Bangalore - 560 018

© : ಈ ಆವೃತ್ತಿಯ ಗ್ರಂಥಸ್ವಾಮ್ಯ - ಕನ್ನಡ ಪುಸ್ತಕ ಪ್ರಾಧಿಕಾರ

Pages : x + 196

Price : Rs. 75/-

First Edition : 2001
Second Edition : 2007

Copies : 1,000

ISBN : 81-7713-077-3

ಪ್ರಕಾಶಕರು
ಅಶೋಕ್ ಎನ್. ಚಲವಾದಿ
ಆಡಳಿತಾಧಿಕಾರಿಗಳು
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು - 560 002

ಪುಟಗಳು : x + ೧೯೬

ಬೆಲೆ : ರೂ. ೭೫/-

ಪ್ರಥಮ ಮುದ್ರಣ : ೨೦೦೧
ದ್ವಿತಿಯ ಮುದ್ರಣ : ೨೦೦೭

ಪ್ರತಿಗಳು : ೧೦೦೦

ಮುದ್ರಣ
ಇಳಾ ಮುದ್ರಣ
ನಂ. ೩೬, ೪೦ ಅಡಿ ರಸ್ತೆ, ರಾಘವನಗರ
ನ್ಯೂ ಟಿಂಬರ್‌ಯಾರ್ಡ್ ಲೇಔಟ್
ಬೆಂಗಳೂರು - ೫೬೦ ೦೨೬
✆ : ೨೬೭೫೭೧೫೯

ಒಂದು ದಿನ ಒಳಕೊಂಡಿತ್ತು ನೋಡಾ

ನಮ್ಮ ಕಣ್ಣೆದುರಿಗೆ ಎರಡು ವಾಸ್ತವಗಳಿವೆ. ಒಂದು– ಜನಾಂಗಿಕ ಸಂಸ್ಕೃತಿಯ ಸ್ಮೃತಿ ಸಂಚಯಗಳಂತಿರುವ ಜನಪದ ಪುರಾಣ ಕಥನಗಳನ್ನು ತಲೆಮಾರಿನಿಂದ ತಲೆಮಾರಿಗೆ ಬಾಯಿಂದ ಬಾಯಿಗೆ ನೆನಪಿನ ವಾಹಕದಲ್ಲಿ ಸೃಜನಶೀಲವಾಗಿ ಕಾಪಾಡಿಕೊಂಡು ಬಂದ ಮೌಖಿಕ ಜಗತ್ತು. ಇದು ಈಗಾಗಲೇ ನಮ್ಮ ನಡುವೆ ಕಣ್ಮರೆಯಾಗುತ್ತಿರುವ ಜಗತ್ತು. ಇನ್ನೊಂದು – ಬದುಕಿನ ಎಲ್ಲ ಜ್ಞಾನಶಾಖೆಗಳ ಮಾಹಿತಿ ಭಂಡಾರವನ್ನೂ ತನ್ನ ಸೂಚ್ಯಂಕದಲ್ಲಿ ದಾಖಲಿಸಿಕೊಳ್ಳುತ್ತಾ, ಮನುಷ್ಯನ ಸೃಜನಶ್ರಮದ ಕಾಲದೀರ್ಘತೆಯನ್ನು ತನ್ನ ಅಣುಕ್ಷಣಗಳ ಹ್ರಸ್ವತೆಗೆ ತಂದಿಟ್ಟುಕೊಂಡು ದೈತ್ಯ ಸಾಧನೆಯನ್ನು ಮೆರೆಯುತ್ತಿರುವ ಗಣಕ ಜಗತ್ತು. ಇದು ದಿನದಿಂದ ದಿನಕ್ಕೆ ಗಣನೆಗೆ ಸಿಗದ ವೇಗದಲ್ಲಿ ಚಲಿಸುತ್ತಿರುವ ಜ್ಞಾನ ಜಗತ್ತು.

ಮೌಖಿಕ ಸೃಜನ ಪ್ರತಿಭೆಯ ಪ್ರತೀಕ ಸಿರಿಯಜ್ಜಿ. ಗಣಕ ಜ್ಞಾನದ ವೇಗದ ಪ್ರತೀಕ ಶಕುಂತಲಾದೇವಿ. ಸಿರಿಯಜ್ಜಿಯದು ಕೇವಲ ನೆನಪಲ್ಲ; ಅದೊಂದು ಸೃಜನ ಪ್ರತಿಭೆ. ಅದು ಭೂತವಲ್ಲ, ವರ್ತಮಾನ. ಪರಂಪರೆಯನ್ನು ಅರಗಿಸಿಕೊಂಡ ಸಮಕಾಲೀನವಾದ ಸೃಜನೆ. ಅದು ಕೇವಲ ವ್ಯಕ್ತಿಯಲ್ಲ, ಅದೊಂದು ಸಮುದಾಯ ಪ್ರಜ್ಞೆ, ಶಂಕುತಲಾ ದೇವಿಯವರ ಜ್ಞಾನಶಕ್ತಿ ೨x೨=೪ರ ಲೆಕ್ಕಾಚಾರದ ಆಗಾಧ ನೆನಪಿನ ಕೋಶ. ಇದು ತಾಂತ್ರಿಕ ನೈಪುಣ್ಯತೆ ಹಾಗೂ ಪರಿಕಲ್ಪನೆಗಳ ಅದ್ಭುತ ಸಮೀಕರಣದ ಜ್ಞಾನಶಕ್ತಿ. ಇಲ್ಲಿ ಪರಿಭಾವಿಸಬೇಕಾದ ಬಹು ಮುಖ್ಯ ವಿಚಾರವೆಂದರೆ, ಮೊದಲನೆಯದು ಭಾವಪ್ರತಿಭೆಯ ಸೃಜನೆಯ ಫಲ. ಎರಡನೆಯದು ಬುದ್ಧಿ ಸಂಚಯದ ತರ್ಕದ ಫಲ. ಇಂದು ಈ ಎರಡು ವಾಸ್ತವಗಳ ನಡುವೆ ಅಕ್ಷತ ಲೋಕದ ಚಲನೆ ಹಲವು ಸನಾಲುಗಳಿಗೆ ಹಲವು ಬಿಕ್ಕಟ್ಟುಗಳಿಗೆ ಮುಖಾಮುಖಿಯಾಗಿದೆ.

ಜ್ಞಾನದ ಶೋಧ ವಿಸ್ತರಣೆಗೊಂಡಂತೆ, ಬಹಳಷ್ಟು ನಿತ್ಯದ ಭಯಗಳಾಗಿ ನಮ್ಮೆದುರು ಬಚ್ಚಿಕೊಳ್ಳುತ್ತಿವೆ. ಮಾಹಿತಿ ತಂತ್ರಜ್ಞಾನದ ವೇಗಧಾಳಿಗೆ ಸಿಲುಕಿ ಜಗತ್ತಿನ ಬಹುತೇಕ ಭಾಷೆಗಳು ಕಣ್ಮರೆಯಾಗುವ ಆತಂಕವನ್ನು ಹಲವು ಜನ ಭಾಷಾತಜ್ಞರು ಗಂಭೀರ ಸಮಸ್ಯೆಯಾಗಿ ಜಗತ್ತಿನ ಮುಂದಿಟ್ಟಿದ್ದಾರೆ. ಈ ಆತಂಕದ ಆವರಣದಲ್ಲಿ ನಮ್ಮ ಕನ್ನಡ ಭಾಷೆಯ ಸ್ಥಿತಿ ಏನು? ಇದು ಇಂದು ನಾವು ಕೇಳಿಕೊಳ್ಳಬೇಕಾದ ಪ್ರಮುಖ ಪ್ರಶ್ನೆ. ಭಾಷೆ ಎಂಬುದು ಕೇವಲ ಸಂವಹನ ಸಂಕೇತವಲ್ಲ. ಅದು ಸಮುದಾಯದ ಸಂಸ್ಕೃತಿ, ನಾಗರಿಕತೆ, ಸೃಜನಶಕ್ತಿ, ಬುದ್ಧಿಭಾವನೆಗಳು ಸಂಲಗ್ನಗೊಂಡ ಬದುಕಿನ ಪ್ರತೀಕ. ಅದು ಸಮುದಾಯದ ಉಸಿರು. ಇಂಥ ಭಾಷೆಯ ಅಳಿಯುವಿಕೆ ಎಂದರೆ ಬದುಕಿನ ಎಲ್ಲ ಕ್ಷೇತ್ರಗಳ ಪ್ರಮುಖ ವ್ಯಾವಹಾರಿಕತೆಯಿಂದ ಆ

ಭಾಷೆಯನ್ನು ಹೊರಗಿಡುವುದು;ಆಡಳಿತ ಶಿಕ್ಷಣ ಸಂಪರ್ಕ ಮಾಧ್ಯಮ ಸ್ಥಾನದಿಂದ ಆ ಭಾಷೆಯನ್ನು ಕಣ್ಮರೆ ಮಾಡುವುದು. ಇದರ ಅರ್ಥ ಬಹುದೊಡ್ಡ ಭಾಷಿಕ ಸಮುದಾಯ ವೊಂದನ್ನು ಜ್ಞಾನದ ಬೆಳಕಿನಿಂದ ದೂರವಿಡುವುದು. ಜಾಗತಿಕ ಬದುಕಿನ ಸುಖ ಸವಲತ್ತುಗಳಿಂದ ವಂಚಿಸುವುದು. ಇಂಥ ಹಲವು ಆಘಾತಕಾರೀ ಆತಂಕಗಳ ವಾತಾವರಣದಲ್ಲಿ ಇಂದು ಕನ್ನಡ ಅಕ್ಷರ ಲೋಕ ತನ್ನ ಗತಿಯನ್ನು ಕಂಡುಕೊಳ್ಳಬೇಕಾಗಿದೆ.

ಸಾವಿರಾರು ವರ್ಷಗಳ ಇತಿಹಾಸದಲ್ಲಿ ಸಾಂಸ್ಕೃತಿಕ, ರಾಜಕೀಯ ದಬ್ಬಾಳಿಕೆಯನ್ನು ಸಮರ್ಥವಾಗಿ ಎದುರಿಸಿ, ಬೆಳೆದುಬಂದ ಕನ್ನಡ ಭಾಷೆಗೆ, ಕನ್ನಡ ಬದುಕಿಗೆ ಆತಂಕ ಮೈಯುಂಡ ಬಾಳು. ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳಿಂದ ಮೊದಲ್ಗೊಂಡ ಹಿತಮಿತ ಮೃದುವಚನ, ನುಡಿ ಟಠಡಢಣ, ಮಾತು ಜ್ಯೋತಿರ್ಲಿಂಗ, ಹಲಗೆ ಬಳಪವ ಪಿಡಿಯದೊಂದಗ್ಗಳಿಕೆಯಲ್ಲಿ ಒಲಿದಂತೆ ಹಾಡಿದ ಹಲವು ಕಾಲದ ಹಲವು ನಿಟ್ಟಿನ ನುಡಿಸಾಧಕರ ಮಾರ್ಗದೇಸಿಗಳ ಸಮಾಹಿತದಲ್ಲಿ ತನಗೆದುರಾದ ಆತಂಕ ಆಘಾತಗಳನ್ನು ಕನ್ನಡದ ದೀಪ ಬೆಳಗಿದೆ. ಇದರರ್ಥ ಆಯಾ ಕಾಲದ ಕನ್ನಡ ಸಮುದಾಯ ತನ್ನ ಕಾಲದ ಸವಾಲುಗಳಿಗೆ ತಕ್ಕ ವಿವೇಕ ತೋರಿ ಸೃಜನಶೀಲವಾಗಿದೆ. ಆದರೆ, ಇಂದಿನ ಆತಂಕ ಹಿಂದೆಂದಿನ ಆಕ್ರಮಣ ಗಳಿಗಿಂತ ಭಯಾನಕವಾದುದು. ಈ ಭಯಾನಕತೆಯನ್ನು ಎದುರಿಸುವ ಹಾಗೂ ಆರೋಗ್ಯಕರ ವಾಗಿ ಅದನ್ನು ಅರಗಿಸಿಕೊಂಡು ಬೆಳೆಯುವ ಸತ್ವಶಕ್ತಿ ಭಾಷೆಗಿದ್ದರೂ, ಭಾಷಿಕ ಸಮುದಾಯದ ಇಚ್ಛಾಶಕ್ತಿಯ ಕೊರತೆ ಎದ್ದುಕಾಣುವ ಸಂಗತಿ.ಈ ಇಚ್ಛಾಶಕ್ತಿ ಹೊರಗಿನಿಂದ ಆಮದು ಮಾಡಿಕೊಳ್ಳುವ ಸರಕಲ್ಲ; ಬದುಕನ್ನು ರೂಪಿಸುವ ಪ್ರಭುತ್ವ ಹಾಗೂ ಪ್ರಭುತ್ವವನ್ನು ಆಯ್ಕೆ ಮಾಡಿಕೊಳ್ಳುವ ಜನಸಮುದಾಯದೊಳಗೆ ಅರಿವೇ ಗುರುವಾಗಿ ಮೂಡಬೇಕಾದ ಪ್ರಜ್ಞಾವಿಶೇಷ. ಈ ಪ್ರಜ್ಞಾ ವಿಶೇಷ ಸಿರಿಯಜ್ಜಿಯ ಸಮುದಾಯವನ್ನು ಕಡೆಗಣಿಸದೆ ಸಮೀಕರಣದ ಜ್ಞಾನಶಕ್ತಿಗೆ ಮಣೆ ಹಾಕಬೇಕಿದೆ. ಸಾಮಾಜಿಕ ನ್ಯಾಯವನ್ನು ಸಂಸ್ಕೃತಿಯನ್ನು ರುಚಿ ವಿಶೇಷತೆಯನ್ನು ಪರಿಭಾವನೆಗೆ ತಂದುಕೊಂಡು ಜಂಗಮಶೀಲವಾಗಬೇಕಿದೆ. ಅತಿರೇಕಗಳ ಅವಾಂತರದಿಂದ ಸಮುದಾಯವನ್ನು ಕಾಪಾಡುವ ಶಕ್ತಿ ಅಕ್ಷರ ಲೋಕಕ್ಕಿದೆ. ಆದ್ದರಿಂದ ಅಕ್ಷರ ಲೋಕ ಸೃಜನಶಿಲತೆಯನ್ನು ಎಚ್ಚರದಿಂದ ಉಳಿಸಿಕೊಳ್ಳುತ್ತಾ, ಜ್ಞಾನದ ಹೊಸ ವಿಸ್ತರಣೆಗೆ ತೆರೆದುಕೊಳ್ಳುವ ಅಗತ್ಯವಿದೆ.

ವಿಜ್ಞಾನದ ಹೊಸ ಹೊಸ ಆವಿಷ್ಕಾರಗಳಿಗೆ ಪ್ರತಿಸ್ಪಂದಿಸುತ್ತಾ ಬೆಳೆಯುವ ಭಾಷೆಯ ಸೃಜನಶೀಲತೆ ಪ್ರಕಾಶಿಸುತ್ತದೆ. ವೈಜ್ಞಾನಿಕ ವಿಚಾರ ಸೃಜನಶೀಲಭಾವದಲ್ಲಿ ಅಭಿವ್ಯಕ್ತಗೊಂಡಾಗ ಅದಕ್ಕೊಂದು ಮಾನವೀಯತೆಯ ಪ್ರಭೆ ಪ್ರಾಪ್ತವಾಗುತ್ತದೆ. ಹೊಸಕಾಲದ ಸಂವೇದನೆಗಳಿಗೆ ವೈಜ್ಞಾನಿಕ ವಿಚಾರಗಳಿಗೆ ತಾತ್ವಿಕ ತರ್ಕದೀಪ್ತಿಗಳಿಗೆ ತೆರೆದುಕೊಳ್ಳುವ ನಮ್ಯಗುಣ ಜೀವಂತ ಭಾಷೆಯೊಂದರ ದೊಡ್ಡಶಕ್ತಿ, ಕಾಲದ ಅಗತ್ಯಗಳಿಗೆ ಸ್ಪಂದಿಸಬಲ್ಲ ನಮ್ಯಗುಣ ಕನ್ನಡ ಭಾಷೆಯ ದೊಡ್ಡ ಶಕ್ತಿ, ಜಾಗತಿಕ ಮಟ್ಟದಲ್ಲಿ ವಿಸ್ತರಣೆಗೊಳ್ಳುತ್ತಿರುವ ಎಲ್ಲ ಜ್ಞಾನಶಾಖೆಗಳ ಪರಿಭಾಷಿಕ ಶಬ್ದ ಸಂಪತ್ತನ್ನು ಸ್ವೀಕರಿಸುತ್ತಾ, ತನ್ಮುಖೇನ ವಿಷಯಜ್ಞಾನವನ್ನು ಅರಗಿಸಿಕೊಂಡು ಭಾಷೆ

ಬೆಳೆಯಬೇಕಿದೆ. ಕನ್ನಡದ ಜ್ಞಾನ ಚೇತನಗಳ ಇಚ್ಛಾಶಕ್ತಿ ಈ ದಿಸೆಯಲ್ಲಿ ಹೆಚ್ಚು ಕ್ರಿಯಾಶೀಲವಾಗಬೇಕಾದ ಅಗತ್ಯವಿದೆ. ಅಲ್ಲಮನ ಒಂದು ವಚನ ಹೀಗಿದೆ–

ಹಿಂದಣ ಅನಂತವನು ಮುಂದಣ ಅನಂತವನು
ಒಂದು ದಿನ ಒಳಕೊಂಡಿತ್ತು ನೋಡಾ
ಒಂದು ದಿನವನೊಳಕೊಂಡು ಮಾತಾಡುವ ಮಹಾಂತನ
ಕಂಡು ಬಲ್ಲವರಾರಯ್ಯ
ಆದ್ಯರು ವೇದ್ಯರು ಅನಂತ ಹಿರಿಯರು ಕಾಲದಂತುವನರಿಯದೆ
ಅಂತೆ ಹೋದರು ಕಾಣಾ ಗುಹೇಶ್ವರ

ಜಗತ್ತಿನ ಜ್ಞಾನಕ್ಕೆ ಹಿಂದಣ ಪರಂಪರೆಯ ಅಪಾರತೆ ಇದೆ. ಮುಂದಣ ಭವಿಷ್ಯದ ಅನಂತತೆ ಇದೆ. ವರ್ತಮಾನದಲ್ಲಿ ಈ ಎರಡೂ ಸಂಲಗ್ನಗೊಂಡ ಭಾವದಲ್ಲಿ ಸೃಜನಶೀಲವಾದಾಗ ಅದು ಅಳಿಯದ ಮಾತಾಗುತ್ತದೆ. ಆ ಮಾತು ಜ್ಯೋತಿರ್ಲಿಂಗ ರೂಪಿಯಾಗುತ್ತದೆ. ನಿಜವಾದ ಪುಸ್ತಕಗಳು ಮಾತು ಜ್ಯೋತಿರ್ಲಿಂಗವಾದ ಸಂಸ್ಕೃತಿ ಸಂಚಯದ ಜ್ಞಾನದೀವಿಗೆಗಳು. ಜ್ಞಾನವನ್ನು ಕೇವಲ ಪಂಡಿತಮಾನ್ಯರ ಸ್ವತ್ತಾಗಿಸದೆ, ಜನಸಾಮಾನ್ಯರ ಬದುಕಾಗಿಸುವುದು ಅಕ್ಷರಲೋಕದ ಗುರಿಯಾಗಬೇಕು. ಜ್ಞಾನ ಪರಂಪರೆಗಳನ್ನು ಶೋಧನೆಗೆ ಹಚ್ಚುತ್ತಾ, ಆತ್ಮಾವಲೋಕನದ ಒಳಮುಖೀದರ್ಶನ ದೀಪ್ತಿಯಲ್ಲಿ ಸತ್ಯವನ್ನು ಮನಗಾಣಿಸಬೇಕು. ಕಂಡ ಸತ್ಯದ ಬೆಳಕಿನಲ್ಲಿ ವರ್ತಮಾನದ ದಾರಿ ತೆರೆದು ಭವಿಷ್ಯದ ಮುಂಗಾಣ್ಕೆಯಿಂದ ಗುರಿಯ ಕಡೆ ಹೆಜ್ಜೆ ಹಾಕಬೇಕು. ಇದು ಬದುಕಿನ ಗತಿಶೀಲ ಗುಣವಾದಾಗ ಅತಿರೇಕಗಳಿಗೆ ಅವಕಾಶವಿರುವುದಿಲ್ಲ.

ಇದು ಜಾಗತೀಕರಣದ ಯುಗ. ಈ ಪ್ರಕ್ರಿಯೆಯ ವೇಗ ಅಪರಿಮಿತವಾದಷ್ಟು ಅಪಾಯಕಾರಿಯೂ ಆಗಿದೆ. ಜಾಗತೀಕರಣದ ಧಾಳಿಯಲ್ಲಿ ಏಕಸಂಸ್ಕೃತಿ, ಏಕಜೀವನಶೈಲಿ, ಏಕಭಾಷಾಧಿಪತ್ಯಕ್ಕೆ ಜಗತ್ತನ್ನು ಒಳಗುಮಾಡುವುದರಿಂದ ಆಗುವ ದುಷ್ಪರಿಣಾಮವೆಂದರೆ, ಜೀವನ ವೈವಿಧ್ಯತೆಯ ಬಹುಮುಖೀ ಸಂಸ್ಕೃತಿಗಳ ಸಾವು. ಅತಿರೇಕದ ವೈಪರೀತ್ಯಕ್ಕೆ ಒಳಗಾಗಿ ಬದುಕನ್ನು ಬರಡಾಗಿಸುವ ಹಾಗೂ ಅಸಮಾನತೆಯ ಪ್ರಮಾಣವನ್ನು ಅಗಾಧವಾಗಿಸುವ ಅಪಾಯದಿಂದ ಈ ಸಮುದಾಯಗಳನ್ನು ರಕ್ಷಿಸುವ ಅಗತ್ಯ ಇಂದಿನ ತುರ್ತು. ಈ ತುರ್ತಿನ ಸನ್ನಿವೇಶದಲ್ಲಿ ವಿವೇಕದ ದಾರಿ ತೋರಿ ಅತಿರೇಕಕ್ಕೆ ಕಡಿವಾಣವನ್ನು ಹಾಕಿ ಸಂಸ್ಕೃತಿಯನ್ನು, ಬದುಕನ್ನು ಮಾನವಕೋಟಿಯನ್ನು ಸಂರಕ್ಷಿಸಬಲ್ಲ ಶಕ್ತಿ ಅಕ್ಷರಲೋಕಕ್ಕಿದೆ. ಏಕರೂಪೀ ಗುಣದಿಂದ ಕೂಡಿದ ಗಣಕೀಕರಣದ ಏಕಾಧಿಪತ್ಯಕ್ಕಿಂತ ಬಹುರೂಪೀ ಗುಣದ ಪ್ರತಿಭಾ ಸಂಪನ್ನತೆಯಿಂದ ಹೊಳೆವ ಅಕ್ಷರಲೋಕ ಜಗತ್ತಿನ ವೈವಿಧ್ಯತೆಯನ್ನು ಸಂರಕ್ಷಿಸುತ್ತದೆ, ವೈವಿಧ್ಯತೆಗಳೊಳಗಿನ ಸೃಜಶೀಲತೆಯನ್ನು ಬೆಳೆಸುತ್ತದೆ.

ಪುಸ್ತಕಗಳು ಅಕ್ಷರ ಲೋಕದ ಮೂರ್ತರೂಪಗಳು; ಅಮೂರ್ತವಾದ ಜ್ಞಾನಸಂಪತ್ತನ್ನು ಧಾರಣ ಮಾಡಿಕೊಂಡ ಶಬ್ದರೂಪಗಳು. ಶಬ್ದ ಕೇವಲ ಅರ್ಥದ ಅಭಿದಾವೃತ್ತಿಯಲ್ಲಿ ನೆಲೆ ನಿಲ್ಲುವುದಲ್ಲ, ವ್ಯಂಜನಾ ವ್ಯಾಪಾರದಲ್ಲಿ ಅನುಭಾವಿಕವಾಗುವುದು. ಈ ವ್ಯಂಜನಾ ವ್ಯಾಪಾರ

ಬುದ್ಧಿಭಾವಗಳ ವಿದ್ಯುದಾಲಿಂಗನ ಪ್ರಭೆಯ ಫಲಿತ. ಹೀಗಾಗಿ ಪುಸ್ತಕಗಳು ಸಂಸ್ಕೃತಿ ನಾಗರಿಕತೆಗಳ ಸಂಚಯಿತ ಫಲವಾದಷ್ಟೇ ನಿರಂತರವಾಗಿ ಉಜ್ಜೀವಿಸುವ ಧಾತು ದ್ರವ್ಯಗಳು.

ಕನ್ನಡ ಪುಸ್ತಕ ಪ್ರಾಧಿಕಾರವು ಕರ್ನಾಟಕದಾದ್ಯಂತ ಪುಸ್ತಕ ಸಂಸ್ಕೃತಿಯನ್ನು ಬೆಳೆಸುವ ಸದುದ್ದೇಶದಿಂದ ಪ್ರಾರಂಭವಾದ ಒಂದು ಸಂಸ್ಕೃತಿ ಕೇಂದ್ರ, ವಾಚನಾಭಿರುಚಿಯನ್ನು ಬೆಳೆಸುವುದು ಹಾಗೂ ಪುಸ್ತಕೋದ್ಯಮವನ್ನು ಆರೋಗ್ಯಕರವಾಗಿ ಪೋಷಿಸುವುದು ಪ್ರಾಧಿಕಾರದ ಹೊಣೆ ಯಾಗಿರುತ್ತದೆ. ಅದಕ್ಕಾಗಿ ಹಲವು ರೀತಿಯ ಕಾರ್ಯಯೋಜನೆಗಳನ್ನು ಪ್ರಾಧಿಕಾರ ರೂಪಿಸಿ ಕೊಂಡಿದೆ. ಯುವ ಸಮುದಾಯದಲ್ಲಿ ವಾಚನಾಭಿರುಚಿ ಹೆಚ್ಚಿಸಲು ವಾಚನಾಭಿರುಚಿ ಕಮ್ಮಟ ಗಳನ್ನು ನಡೆಸುತ್ತಿದೆ. ಪ್ರಕಾಶಕರು, ಲೇಖಕರು ಹಾಗೂ ಓದುಗರ ನಡುವೆ ಚಿಂತನಾ ಕಮ್ಮಟಗಳನ್ನು ನಡೆಸುತ್ತಿದೆ. ಇವುಗಳ ಜೊತೆಗೆ ಎರಡನೆಯ ಆದ್ಯತೆಯಾಗಿ ಪುಸ್ತಕ ಪ್ರಕಟಣೆಯ ಜವಾಬ್ದಾರಿ ಯನ್ನು ನಿರ್ವಹಿಸುತ್ತಿದೆ. ಶೈಕ್ಷಣಿಕ ಶಿಸ್ತಿನಲ್ಲಿ ಅಧ್ಯಯನ ಮಾಡುವ ಪರಾಮರ್ಶನ ಗ್ರಂಥಗಳ ಜೊತೆಗೆ ಜನಸಾಮಾನ್ಯರಿಗೆ ಅಗತ್ಯವಾಗಿ ಬೇಕಾದ ಅರಿವನ್ನು ಹಂಚುವ ಪುಸ್ತಕಗಳ ಪ್ರಕಟಣೆಯೂ ಪ್ರಾಧಿಕಾರದ ಉದ್ದೇಶವಾಗಿದೆ. **ಬರ್ಕ್‌ವೈಟ್ ಕಂಡ ಭಾರತ** ಒಂದು ಅಪರೂಪದ ಕೃತಿ. ಸ್ವಾತಂತ್ರ್ಯ ಸಂದರ್ಭದ ಬಹಳ ಮುಖ್ಯ ಘಟ್ಟವಾದ ವಿಭಜಿತ ಭಾರತದ ದಾರುಣ ಅನುಭವ ಗಳನ್ನು ಸೆರೆಹಿಡಿದಿರುವ ಕೃತಿ ಇದು. ಗಾಂಧೀಜಿಯವರ ಛಾಯಾ ಚಿತ್ರಗಳನ್ನು ಸೆರೆ ಹಿಡಿಯಲು ಬಯಸಿದ ಕಲಾವಿದೆ ಆ ದಿನಗಳಲ್ಲಿ ತಾನು ಕಂಡ ಅನುಭವಗಳನ್ನು ಹಾಗೂ ಗಾಂಧೀಜಿಯವರ ವ್ಯಕ್ತಿತ್ವದ ಔನ್ನತ್ಯವನ್ನು ಇಲ್ಲಿ ಹೃದಯಸ್ಪರ್ಶಿ ಭಾವದಲ್ಲಿ ತೆರೆದಿಟ್ಟಿದ್ದಾರೆ. ಕನ್ನಡಕ್ಕೆ ಈ ಕೃತಿಯನ್ನು ಕೊಟ್ಟ ಡಾ! ಸಂಧ್ಯಾರೆಡ್ಡಿ ಅವರಿಗೆ ಪ್ರಾಧಿಕಾರದ ಕೃತಜ್ಞತೆಗಳು.

ಪ್ರೊ ಎಸ್. ಜಿ. ಸಿದ್ಧರಾಮಯ್ಯ
ಅಧ್ಯಕ್ಷರು

ಮೊದಲ ಆವೃತ್ತಿಗೆ ಬರೆದ ಅನುವಾದಕರ ಮಾತು

ಅಮೆರಿಕಾದ 'ಲೈಫ್' ಪತ್ರಿಕೆಗಾಗಿ ಕೆಲಸ ಮಾಡಲು ೧೯೪೬ರಲ್ಲಿ ಭಾರತಕ್ಕೆ ಬಂದ ಮಾರ್ಗರೆಟ್ ಬರ್ಕ್‌ವೈಟ್ ಮೂಲತಃ ಒಬ್ಬ ಫೋಟೊ ಜರ್ನಲಿಸ್ಟ್, ಬರ್ಕ್‌ವೈಟ್ ಭಾರತಕ್ಕೆ ಬಂದ ಸಂದರ್ಭದಲ್ಲಿ ಭಾರತ ಸ್ವತಂತ್ರವಾಗುವ ದಿನಗಳು ಸಮೀಪಿಸುತ್ತಿದ್ದವು. ಆದರೆ ಅವಿಭಾಜಿತವಾಗಿಯೇ ಸ್ವಾತಂತ್ರ್ಯವನ್ನು ಪಡೆಯುವ ಭಾರತದ ಕನಸು ನುಚ್ಚುನೂರಾಗಿತ್ತು. ಜನಸಾಮಾನ್ಯರ ಬದುಕು ಕೋಮುದಳ್ಳುರಿಯಲ್ಲಿ ಬೇಯುತ್ತಿತ್ತು. ಈ ಸಂದರ್ಭದ ಅನೇಕ ಸಂಗತಿಗಳನ್ನು ತೀರ ಹತ್ತಿರದಿಂದ ಕಂಡ ಬರ್ಕ್‌ವೈಟ್ ಅದನ್ನು Half way to Freedom ಎಂಬ ತನ್ನ ಗ್ರಂಥದಲ್ಲಿ ಛಾಯಾಚಿತ್ರಗಳೊಂದಿಗೆ ದಾಖಲಿಸಿದ್ದಾಳೆ. ಕೋಮುಗಲಭೆಗಳು, ಬರಗಾಲಕ್ಕೆ ತುತ್ತಾದ ಜನರ ಬವಣೆಗಳು, ಚರ್ಮಹದ ಮಾಡುವ ಕಾರ್ಖಾನೆಗಳಲ್ಲಿ ದುಡಿಯುವ ಬಾಲಕಾರ್ಮಿಕರು, ಲೇವಾದೇವಿಗಾರರು, ರಾಜಮಹಾರಾಜರು ಹಾಗೂ ಕೈಗಾರಿಕೋದ್ಯಮಿಗಳ ವ್ಯಕ್ತಿತ್ವ ಧೋರಣೆಗಳು, ಆರ್.ಎಸ್.ಎಸ್. ಚಟುವಟಿಕೆಗಳು, ಗಾಂಧೀಜಿ, ಭಾರತದ ಸಾಂಸ್ಕೃತಿಕ ಪದ್ಧತಿಗಳು, ಮುಂತಾದ ಅನೇಕ ಸಂಗತಿಗಳು ಬರ್ಕ್‌ವೈಟ್ ಪುಸ್ತಕದಲ್ಲಿವೆ. ತಾನು ಕಂಡ ಭಾರತವನ್ನು ಯಾವುದೇ ಪೂರ್ವಾಗ್ರಹ, ಅತಿರೇಕಗಳಿಲ್ಲದೆ ಚಿತ್ರಿಸಿರುವುದು ಬರ್ಕ್‌ವೈಟ್ ವೈಶಿಷ್ಟ್ಯ. ಅಂದಿನ ಭಾರತದ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಬದುಕಿನ ಅನೇಕ ಸೂಕ್ಷ್ಮ ವಿವರಗಳು ಇಲ್ಲಿ ಮಾತ್ರವೇ ಸಿಗುತ್ತವೆ. ಸ್ವತಃ ಬರ್ಕ್‌ವೈಟ್‌ಳೇ ತೆಗೆದಿರುವ ಇಲ್ಲಿನ ಅಪೂರ್ವ ಛಾಯಾಚಿತ್ರಗಳೂ ಕೂಡ ಬರ್ಕ್‌ವೈಟ್ ಬರಹಕ್ಕೆ ಪೂರಕವಾಗಿದ್ದು ಅಂದಿನ ಭಾರತದ ಬದುಕಿನ ದಾಖಲೆಗಳಾಗಿವೆ. ಭಾರತೀಯ ಬದುಕಿನ ಬಗ್ಗೆ ಬರ್ಕ್‌ವೈಟ್‌ಗಿದ್ದ ಕಾಳಜಿ, ಕುತೂಹಲ, ನಮ್ಮ ಮನತಟ್ಟುತ್ತದೆ. ಈ ಪುಸ್ತಕ ಪ್ರಕಟವಾಗಿ ಅರ್ಧಶತಮಾನ ಕಳೆದಿದೆ. ಬರ್ಕ್‌ವೈಟ್ ಅಟೆನ್ ಬರೊ ಅವರ 'ಗಾಂಧಿ' ಚಲನಚಿತ್ರದಲ್ಲಿರುವ ಫೋಟೋ ಜರ್ನಲಿಸ್ಟ್ ಪಾತ್ರಕ್ಕೆ ಈ ಬರ್ಕ್‌ವೈಟ್‌ಳೇ ಆಧಾರ.

ಬರ್ಕ್‌ವೈಟಳ ಈ ಪುಸ್ತಕವನ್ನು ಲಂಕೇಶ್ ಬಹುವಾಗಿ ಮೆಚ್ಚಿಕೊಂಡಿದ್ದರು. ಅವರ ಬಳಿಯಿದ್ದ ಪ್ರತಿಯನ್ನು ನನಗೆ ಕೊಡುತ್ತಾ ಇದನ್ನು ಕನ್ನಡಕ್ಕೆ ಅನುವಾದಿಸಿದರೆ ಚೆನ್ನಾಗಿರುತ್ತದೆ ಎಂದು ಸೂಚಿಸಿದರು. ಅನುವಾದದ ಕೆಲಸ ಮುಗಿಸಿ ಹಸ್ತಪ್ರತಿಯನ್ನು ಒಪ್ಪಿಸಿದಾಗ ಲಂಕೇಶ್ ಅವರಿಗೆ ತೀವ್ರ ಅನಾರೋಗ್ಯ. ಆದರೂ ಪುಸ್ತಕದ ಬಗ್ಗೆ ಚರ್ಚೆ ಮಾಡಿದ್ದರು. ಈ ಪುಸ್ತಕದ ಒಟ್ಟು ದನಿಗೆ ಹೊಂದುವಂತೆ 'ಅರೆಬರೆ ಸ್ವಾತಂತ್ರ್ಯ' ಎಂಬ ಶೀರ್ಷಿಕೆ ಕೊಟ್ಟರೂ ಚೆನ್ನಾಗಿರುತ್ತೆ. ಆ ಬಗ್ಗೆ ಮುನ್ನುಡಿಯಲ್ಲಿ ಪ್ರಸ್ತಾಪಿಸುತ್ತೇನೆ ಎಂದು ತಿಳಿಸಿದ್ದರು. ಆದರೆ ನಾನು ಹಸ್ತಪ್ರತಿ ತಲುಪಿಸಿದ ಹದಿನೈದು ದಿನಗಳಲ್ಲಿ ಲಂಕೇಶ್ ನಿಧಾನರಾಗಿದ್ದು ಅತ್ಯಂತ ದುಃಖದ ಸಂಗತಿ.

ಇಂತಹ ಒಂದು ಒಳ್ಳೆಯ ಪುಸ್ತಕದ ಬಗ್ಗೆ ನನ್ನ ಗಮನ ಸೆಳೆದ ಅವರನ್ನು ಕೃತಜ್ಞತೆಯಿಂದ ಸ್ಮರಿಸುತ್ತೇನೆ.

ಲಂಕೇಶ್ ಅವರ ಆಸೆ ಈಗ ಪುಸ್ತಕದ ಪ್ರಾಧಿಕಾರದ ಮೂಲಕ ಈಡೇರುತ್ತಿದೆ. ಉತ್ತಮ ಪುಸ್ತಕಗಳ ಪ್ರಕಟಣೆಯ ಬಗ್ಗೆ ತುಂಬ ಕಾಳಜಿ ಹೊಂದಿರುವ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರೂ ಮತ್ತು ನನ್ನ ಪೂಜ್ಯ ಗುರುಗಳೂ ಆದ ಡಾ. ಎಚ್.ಜೆ. ಲಕ್ಕಪ್ಪಗೌಡ ಅವರು ಈ ಪುಸ್ತಕದ ಪ್ರಕಟಣೆ ಕೈಗೊಂಡಿರುವುದಕ್ಕಾಗಿ ನನ್ನ ಕೃತಜ್ಞತಾಪೂರ್ವಕ ವಂದನೆಗಳು. ಪ್ರಕಟಣೆಗೆ ಮೊದಲು ಹಸ್ತಪ್ರತಿಯನ್ನು ಪರಿಶೀಲಿಸಿ ಸೂಕ್ತ ಸಲಹೆಗಳನ್ನು ನೀಡಿದ ಶಿಕ್ಷಣ ತಜ್ಞ ಶ್ರೀ ಎಸ್. ಮಂಚಯ್ಯ, ಪ್ರೊ. ಇಕ್ಬಾಲ್ ಅಹ್ಮದ್ ಹಾಗೂ ಪ್ರೊ. ಎಂ.ಆರ್. ವಿಶ್ವನಾಥರೆಡ್ಡಿ ಅವರುಗಳಿಗೂ ನನ್ನ ವಂದನೆಗಳು ಸಲ್ಲುತ್ತವೆ.

೨೦-೦೨-೨೦೦೧ **ಡಾ. ಕೆ.ಆರ್. ಸಂಧ್ಯಾರೆಡ್ಡಿ**

ದ್ವಿತೀಯ ಮುದ್ರಣ ಕುರಿತು....

ಈ ಅನುವಾದ ಕೃತಿ ಕರ್ನಾಟಕದಾದ್ಯಂತ ಓದುಗರ ಗಮನ ಸೆಳೆದು, ಪ್ರಕಟವಾದ ಒಂದೆರಡು ವರ್ಷಗಳಲ್ಲಿಯೇ ಇದರ ಎಲ್ಲ ಪ್ರತಿಗಳು ಮುಗಿದುಹೋದವು. ಅನೇಕ ಕಡೆಗಳಲ್ಲಿ ಕೃತಿಯ ಬಗ್ಗೆ ವಿಚಾರ ಸಂಕಿರಣಗಳು ನಡೆದ ಸಂಗತಿ ತಿಳಿಯಿತು. ಈ ಕೃತಿಯ ಕೆಲವು ಭಾಗಗಳನ್ನು ಪ್ರಕಟಿಸಿದ ಐಕ್ಯರಂಗ ಪತ್ರಿಕೆಯು "ಇದು ಎಲ್ಲ ಪ್ರಜಾಪ್ರಭುತ್ವ ಪ್ರೇಮಿಗಳೂ ಅವಶ್ಯವಾಗಿ ಓದಲೇಬೇಕಾದ ಪುಸ್ತಕ" ಎಂದು ಬರೆಯಿತು. ಇದನ್ನು ಪೂರ್ತಿಯಾಗಿ ಓದಬಯಸಿದವರು ಪುಸ್ತಕದ ಪ್ರತಿಗಳ ಬಗ್ಗೆ ಪದೇಪದೇ ವಿಚಾರಿಸುತ್ತಿದ್ದರು. ದ್ವಿತೀಯ ಮುದ್ರಣಕ್ಕೆ ಇದೆಲ್ಲವೂ ಕಾರಣ.

ಮೂಲ ಕೃತಿಯಲ್ಲಿ ಬರ್ಕ್‌ವೈಟ್ ತೆಗೆದ ಕಪ್ಪು ಬಿಳುಪಿನ ಅಪೂರ್ವ ಛಾಯಾಚಿತ್ರಗಳಿವೆ. ಕನ್ನಡದ ಮೊದಲ ಮುದ್ರಣದಲ್ಲಿ ಯಾವ ಛಾಯಚಿತ್ರಗಳೂ ಇಲ್ಲ. ಪ್ರಸ್ತುತ ಮುದ್ರಣದಲ್ಲಿ ಕೆಲವು ಛಾಯಾಚಿತ್ರಗಳಿವೆ. ಅಲ್ಲದೆ, ಮೊದಲ ಮುದ್ರಣದಲ್ಲಿ ಕೈಬಿಡಲಾಗಿದ್ದ 'ರಾಜಮಹಾರಾಜರು ಮತ್ತು ಅವರ ಪ್ರಜೆಗಳು' ಹಾಗೂ 'ಭಾರತ ಏನು ಮಾಡಬೇಕು' ಎಂಬ ಎರಡು ಅಧ್ಯಾಯಗಳನ್ನು ಈಗ ಸೇರ್ಪಡೆ ಮಾಡಿಕೊಳ್ಳಲಾಗಿದೆ.

ದ್ವಿತೀಯ ಮುದ್ರಣಕ್ಕೆ ಅನುವು ಮಾಡಿಕೊಟ್ಟ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಪ್ರೊ. ಎಸ್.ಜಿ. ಸಿದ್ಧರಾಮಯ್ಯ ಅವರಿಗೂ ಹಾಗೂ ಸಮಿತಿಯ ಎಲ್ಲ ಸದಸ್ಯರಿಗೂ ನನ್ನ ಕೃತಜ್ಞತೆಗಳು.

ಎಂದಿನಂತೆ ಅಚ್ಚುಕಟ್ಟಾಗಿ, ಸುಂದರವಾಗಿ ಮುದ್ರಿಸಿಕೊಟ್ಟಿರುವ ಇಳಾ ಮುದ್ರಣದ ಬಿ. ಗುರುಮೂರ್ತಿ ಅವರಿಗೂ ಅವರ ಸಿಬ್ಬಂದಿಯವರಿಗೂ ನನ್ನ ಪ್ರೀತಿಪೂರ್ವಕ ವಂದನೆಗಳು.

೨೦-೦೨-೨೦೦೧ **ಡಾ. ಕೆ.ಆರ್. ಸಂಧ್ಯಾರೆಡ್ಡಿ**
ಬೆಂಗಳೂರು

ಪರಿವಿಡಿ

ಅಧ್ಯಾಯ ೧

ಎರಡು ದೇಶಗಳ ಜನನ

ಭಾರತಕ್ಕೆ ಸ್ವಾತಂತ್ರ್ಯ ಬಂದಿದ್ದರ ಜೊತೆ ಜೊತೆಗೇ, ದೇಶಗಳ ಇತಿಹಾಸದಲ್ಲಿ ಅತ್ಯಂತ ಅಪರೂಪದ ಘಟನೆಯೊಂದನ್ನು ನೋಡುವ ಅವಕಾಶ ಜಗತ್ತಿಗೆ ಸಿಕ್ಕಿತು. ಅಂದರೆ ಒಂದು ದೇಶಕ್ಕಾಗಿ ಹೋರಾಟ ನಡೆದು ಎರಡು ದೇಶಗಳು ಒಟ್ಟಿಗೇ ಜನ್ಮತಾಳಿದ್ದವು. ಈ ಜನನ ಅತ್ಯಂತ ನೋವು ಪ್ರಯಾಸಗಳಿಂದ ಕೂಡಿತ್ತು.

ಭಾರತ ಮತ್ತು ಪಾಕಿಸ್ತಾನ ಎಂಬ ಈ ಎರಡೂ ದೇಶಗಳ ಐತಿಹಾಸಿಕ ಆರಂಭದ ದಿನಗಳನ್ನು ನೋಡುವ ಮತ್ತು ದಾಖಲಿಸುವ ಅವಕಾಶ ನನಗೆ ಸಿಕ್ಕಿದ್ದು ನನ್ನ ಅದೃಷ್ಟ.

೧೯೪೭ರ ಶರತ್ಕಾಲದಲ್ಲಿ ಉತ್ತರ ಭಾರತದ ಪಂಜಾಬ್ ಪ್ರದೇಶಕ್ಕೆ ನಾನು ಹೋದೆ. ಹೊಸದಾಗಿ ಹುಟ್ಟುವ ಈ ಸಾರ್ವಭೌಮ ರಾಷ್ಟ್ರಗಳ ಫೋಟೋ ತೆಗೆಯುವುದು ನನ್ನ ಉದ್ದೇಶ. ಈ ದೇಶಗಳ ನಡುವೆ ಅಪಾರ ಜನಸಮೂಹ ವಿನಿಮಯದ ಕೆಲಸ ನಡೆಯುತ್ತಿತ್ತು. ಪಾಕಿಸ್ತಾನಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಗಳು ನಮ್ಮ ಆಕ್ಸ್‌ಫರ್ಡ್ ರಸ್ತೆಯ ಚಾರಿಂಗ್ ಕ್ರಾಸನ್ನು ನೆನಪಿಸುವಂತಿದ್ದವು. ಆದರೆ ಇಲ್ಲಿ ಎರಡೂ ದಿಕ್ಕುಗಳಲ್ಲಿ ಮೋಟಾರು ಕಾರುಗಳಿಗೆ ಬದಲಾಗಿ ಎತ್ತಿನ ಗಾಡಿಗಳು, ಹೆಂಗಸರನ್ನು ಹೊತ್ತು ಸಾಗುತ್ತಿದ್ದ ಕತ್ತೆಗಳು, ಚಿಕ್ಕಮಕ್ಕಳನ್ನು ಕೈಲಾಗದ ಮುದುಕರನ್ನು ಹೆಗಲ ಮೇಲೆ ಹೊತ್ತಿದ್ದ ಪುರುಷರ ಸಾಲುಸಾಲುಗಳು ಕಾಣುತ್ತಿದ್ದವು.

ಎಷ್ಟೋ ಗರ್ಭಿಣಿಯರಿಗೆ ರಸ್ತೆಯಲ್ಲೇ ಹೆರಿಗೆಯಾಯಿತು. ರಸ್ತೆಯಲ್ಲಿ ನಡೆಯುತ್ತಲೇ ಬಳಲಿಕೆಯಿಂದ ಕುಸಿದು ಬಿದ್ದು ಜನ ಸಾಯುತ್ತಿದ್ದರು. ಕೆಲವರು ಕಾಲರಾದಿಂದ ಸತ್ತರು. ಆದರೆ ಇದಕ್ಕೂ ಹೆಚ್ಚಿನ ಮಂದಿ ಇನ್ನು ನಮ್ಮಿಂದ ಸಾಧ್ಯವಿಲ್ಲ ಎಂದು ರಸ್ತೆಯಲ್ಲೇ ಕುಳಿತುಬಿಟ್ಟಿದ್ದರು. ಕೆಲವು ಮಕ್ಕಳು ಸಾವನ್ನು ಎದುರುನೋಡುತ್ತ ಹೀಗೆ ಕುಸಿದು ಕುಳಿತ ತಂದೆತಾಯಿಗಳ, ಅಜ್ಜಂದಿರ ಕೈಹಿಡಿದು ಮುಂದಕ್ಕೆ ಕರೆದೊಯ್ಯುವಂತೆ ಎಳೆಯುತ್ತಿದ್ದವು. ಆದರೆ ಅವರು ಇನ್ನು ಮೇಲೇಳುವುದಿಲ್ಲ ಎಂದು ಅವುಗಳಿಗೆ ಗೊತ್ತಿರಲಿಲ್ಲ. ಪಾಕಿಸ್ತಾನ ಎಂದರೆ ಪರಿಶುದ್ಧರ ಭೂಮಿ ಎಂದರ್ಥ. ಆದರೆ ಅನೇಕ ಪರಿಶುದ್ಧರು ಆ ಭೂಮಿಯನ್ನು ತಲುಪಲೇ ಇಲ್ಲ. ಅವರು ಹೊರಟಿದ್ದ ಕನಸಿನ ನಾಡಿನ ದಾರಿಯ ಉದ್ದಕ್ಕೂ ಗೋರಿಗಳ ಸಾಲಿತ್ತು.

ಎತ್ತುಗಳ ತುಳಿತದಿಂದ ಎದ್ದ ಧೂಳು ಇಡೀ ರಸ್ತೆ ಉದ್ದಕ್ಕೂ ಮೋಡದಂತೆ ಮೇಲೆದ್ದಿತ್ತು. ಕತ್ತಲಾಗುತ್ತಿದ್ದಂತೆ ಜನ ರಸ್ತೆಯ ಬದಿಯಲ್ಲೆ ತಂಗುತ್ತಿದ್ದರು. ಅಲ್ಲೆ ಚಿಕ್ಕದಾಗಿ ಬೆಂಕಿ ಹಾಕಿಕೊಂಡು

ಚಪಾತಿಗಳನ್ನು ಬೇಯಿಸುತ್ತಿದ್ದರು. ಮೇಲೆ ಕವಿದಿದ್ದ ಧೂಳಿನೊಂದಿಗೆ ಈ ಬೆಂಕಿಯ ಬೆಳಕೂ ಸೇರಿ ಬೆಂಕಿಯ ಮೋಡವೊಂದು ಅವರೆಲ್ಲರನ್ನೂ ಆವರಿಸಿದಂತೆ ಕಾಣುತ್ತಿತ್ತು.

ಈ ದೇಶಗಳ ಎರಡೂ ಕಡೆಯ ಗಡಿಗಳಿಂದ ಬರುವ ಬೃಹತ್ ಜನಪ್ರವಾಹ ಬೈಬಲ್ ಕಾಲದ ವಾತಾವರಣವೊಂದನ್ನು ನೆನಪಿಗೆ ತರುತ್ತಿತ್ತು. ಹಳೆಯ ಒಡಂಬಡಿಕೆಯ ಕಾಲದಲ್ಲಿ ನಡೆದ ಇಸ್ರೇಲಿಗಳ ವಲಸೆ ಬಹುಶಃ ಇದೇ ರೀತಿ ಇದ್ದಿರಬೇಕು. ಇಸ್ರೇಲಿನ ಜನಸಂಖ್ಯೆ ಎಂಟು ಲಕ್ಷ. ಗ್ರಂಥದಲ್ಲಿ ಪುರುಷರ ಸಂಖ್ಯೆಯನ್ನು ಮಾತ್ರ ಗಣನೆಗೆ ತೆಗೆದುಕೊಂಡು ಎಂಟು ಲಕ್ಷ ಎಂದು ಹೇಳಿದೆ. ಹೆಂಗಸರೂ ಹಾಗೂ ಮಕ್ಕಳ ಸಂಖ್ಯೆಯನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಈ ಸಂಖ್ಯೆ ಖಂಡಿತ ಅದರ ಮೂರುಪಟ್ಟು ಅಥವಾ ನಾಲ್ಕುಪಟ್ಟು ಹೆಚ್ಚಾಗುತ್ತದೆ. ಇಷ್ಟಿದ್ದರೂ ಸಹ ಭಾರತದ ವಿಭಜನೆಯ ಸಂದರ್ಭದಲ್ಲಿ ನಡೆಯುತ್ತಿದ್ದ ಮುಸ್ಲಿಂ, ಸಿಖ್, ಹಿಂದೂಗಳ ಈ ಜನವಲಸೆಯ ಎದುರು ಎಕ್ಸೊಡಸ್‌ನಲ್ಲಿ ತಿಳಿಸಿದ ಜನವಲಸೆ ಏನೇನೂ ಅಲ್ಲ. ನಾನು ಫೋಟೋ ತೆಗೆಯುತ್ತಿದ್ದ ಸಂದರ್ಭದಲ್ಲಿ ಸುಮಾರು ಐದು ದಶಲಕ್ಷ ಮಂದಿ ರಸ್ತೆಗಳಲ್ಲಿ ಇದ್ದರು. ಇನ್ನೂ ಅನೇಕ ಲಕ್ಷಮಂದಿ ಇವರೊಂದಿಗೆ ಸೇರಿಕೊಳ್ಳಲಿದ್ದರು. ಇದು ಲಕ್ಷಾಂತರ ನತದೃಷ್ಟ ಜನಕ್ಕೆ ಸ್ವಾತಂತ್ರ್ಯದಿಂದ ಸಿಕ್ಕ ಮೊದಲ ಕಹಿಫಲ.

ಭಾರತದ ಸ್ವಾತಂತ್ರ್ಯಕ್ಕಾಗಿ ಸುದೀರ್ಘ ಕಾಲದಿಂದ ನಡೆದ ಹೋರಾಟದ ಕೊನೆಯ ಘಟ್ಟದಲ್ಲಿ ಈ ಎರಡು ದೇಶಗಳ ಸಿದ್ಧಾಂತ ಹುಟ್ಟಿಕೊಂಡಿತ್ತು. ಭಾರತದ ಎಲ್ಲ ಧರ್ಮಗಳವರೂ ಒಗ್ಗಟ್ಟಿನಿಂದಲೆ ಹೋರಾಡುತ್ತ ಬಂದಿದ್ದರು. ಅಂತಿಮ ಘಟ್ಟದಲ್ಲಿ ವಿಭಜನೆಗಾಗಿ ಪಟ್ಟು ಹಿಡಿಯಲಾಯಿತು. ಇನ್ನೇನೋ ಉದ್ದೇಶಗಳನ್ನು ಹೊಂದಿದ್ದ ನಾಯಕರು ಅವಸರವಸರವಾಗಿ ಭೂಪಟದ ಮೇಲೆ ವಿಭಜನೆಯ ಗೆರೆಗಳನ್ನು ಎಳೆದಿದ್ದರು. ಜನರ ಅಗತ್ಯತೆಗಳಿಗೂ ಇವರ ಉದ್ದೇಶಗಳಿಗೂ ತಾಳೆಯೇ ಇರಲಿಲ್ಲ. ಇವರು ಮಾಡಿದ ಕೆಲಸದಿಂದ ಜನಸಾಮಾನ್ಯರ ಬದುಕು ಅನಿರೀಕ್ಷಿತವಾಗಿ ತೀವ್ರತರವಾದ ಬದಲಾವಣೆಗೆ ತುತ್ತಾಗಿತ್ತು. ವಾಸ್ತವವಾಗಿ ಹಿಂದೂ ವ್ಯಾಪಾರಿಗಳು ಮತ್ತು ಕಾರ್ಖಾನೆ ಕಾರ್ಮಿಕರ ಸಮಸ್ಯೆಗಳಿಗೂ ಮುಸ್ಲಿಂ ವ್ಯಾಪಾರಿಗಳು, ಹಾಗೂ ಗಿರಣಿ ಕಾರ್ಮಿಕರ ಸಮಸ್ಯೆಗಳಿಗೂ ಯಾವ ವ್ಯತ್ಯಾಸವೂ ಇರಲಿಲ್ಲ. ಭಾರತದ ಯಾವ ಕಡೆಯ ಜನರಿಗೇ ಆಗಲಿ ಅವರಿಗೆ ಬೇಕಾಗಿದ್ದುದು ಜೀವನಮಟ್ಟದ ಸುಧಾರಣೆ, ಶಿಕ್ಷಣ, ರೈತರಿಗೆ ಭೂಮಿ, ಭೂಮಿಯ ಫಲವತ್ತತೆಯಲ್ಲಿ ಸುಧಾರಣೆ, ಕೈಗಾರಿಕಾ ಅಭಿವೃದ್ಧಿ, ಆರೋಗ್ಯ ಮತ್ತು ವೈದ್ಯಕೀಯ ಸೌಲಭ್ಯಗಳು.... ಸ್ವಾತಂತ್ರ್ಯ ಬಂದರೆ ಸಾಕು ತಮ್ಮ ಬದುಕು ಎಲ್ಲ ವಿಧದಲ್ಲಿಯೂ ಶ್ರೀಮಂತವಾಗಿಬಿಡುತ್ತದೆ, ಸುಧಾರಿಸುತ್ತದೆ ಎಂದು ಜನ ನಂಬಿದ್ದರು. ಆದರೆ ಭಾರತದ ವಿಭಜನೆ ಈ ಕನಸಿಗೆ ತಡೆ ಹಾಕಿತು. ಪ್ರಗತಿಯನ್ನು ಮುಂದೂಡಿತು. ಯಾಕೆಂದರೆ ಇದು ಆರ್ಥಿಕವಾಗಿ ಅನುಕೂಲಕಾರಿಯಲ್ಲದ ಹಾಗೂ ಅವಾಸ್ತವಿಕವಾದ ವಿಭಜನೆಯಾಗಿತ್ತು. ಆದರೂ ಈ ವಿಭಜನೆಯ ಗೆರೆ ಎಳೆದಾಗ ಈ ಅವಸ್ತಾವಿಕತೆಯನ್ನು ವಾಸ್ತವಗೊಳಿಸಲು ಜನರೇ ಮುಂದಾಗಿದ್ದರು.

ಗಡಿರೇಖೆಯುದ್ದಕ್ಕೂ ಇವರ ಪ್ರವಾಹ ಇಮ್ಮುಖವಾಗಿ ಹರಿದಿತ್ತು. ಹಿಂದೂಗಳು ಮತ್ತು

ಸಿಖ್ಖರು ಭಾರತದ ಒಕ್ಕೂಟದ ಕಡೆಗೆ ಬಂದರು. ಮುಸ್ಲಿಮರು ತಮ್ಮ ಹೊಸ ನಾಡಿನ ಕಡೆಗೆ ಹೊರಟರು. ಅದು ತಮ್ಮ ಕನಸಿನ ನಾಡಾಗುತ್ತದೆ ಎಂದು ಅವರು ನಿರೀಕ್ಷಿಸಿದ್ದರು. ಅವರಿಗೆ ಒಳಗೊಳಗೇ ಭಯ ತುಂಬಿತ್ತು. ತಮ್ಮ ನಾಯಕ ಎಂಥವನೋ ಎಂಬ ಸಂದೇಹ ಕಾಡಿತ್ತು. ಅವರ ನಿರೀಕ್ಷೆಯು ತೂಗುಯ್ಯಾಲೆಯಾಡುತ್ತಿತ್ತು. ಭೂಪಟದ ಮೇಲೆ ಸುಮ್ಮನೆ ಎಳೆದ ಗೆರೆಯಲ್ಲಿ ಈಗ ಜನ ಮೂಡತೊಡಗಿದ್ದರು. ತಾವೇ ಬೇರೆ ಅವರೇ ಬೇರೆ ಎಂಬ ಮತವಿರೋಧ ಸ್ಪಷ್ಟವಾಗಿ ಒಡೆದು ಕಾಣುತ್ತಿತ್ತು. ಒಟ್ಟಿನಲ್ಲಿ ಇದು ಮಕ್ಕಳಾಟವಾಗಿರಲಿಲ್ಲ. ಮಾನವ ಸಂಕಷ್ಟಗಳ ಮೇಲೆ ಮಹಾಪ್ರಯೋಗವನ್ನು ನಡೆಸಿದ ಹಾಗಿತ್ತು. ಕೇವಲ ಪೆನ್ನುಗಳಿಂದ ಹಾಕಿದ ಗೆರೆಗಳು, ಮೊದಲೇ ಬವಣೆ ಪಡುತ್ತಿದ್ದ ಜನರ ಸಂಕಷ್ಟಗಳನ್ನು ಇನ್ನಷ್ಟು ಹೆಚ್ಚಿಸಿದ್ದವು. ಇದು ಸಾಲದೆಂಬಂತೆ ೧೯೦೦ರಿಂದೀಚಿನ ಎಲ್ಲ ವರ್ಷಗಳಿಗಿಂತ ಈ ವರ್ಷ ಉತ್ತರಭಾರತ ಭಾರೀ ಪ್ರವಾಹದ ವಿಕೋಪಕ್ಕೆ ತುತ್ತಾಗಿತ್ತು. ಪಂಚನದಿಗಳ ನಾಡು ಎಂದು ಹೆಸರಾದ ಪಂಜಾಬಿನಲ್ಲಿ ಐದು ನದಿಗಳೂ ಈ ಸಲ ದಡ ಮೀರಿ ಹರಿದಿದ್ದವು. ಕಾಲುವೆ ರೂಪದಲ್ಲಿ ನಿರ್ಮಿಸಲಾಗಿದ್ದ ಎಲ್ಲ ಮಣ್ಣಿನ ತಡೆಗೋಡೆಗಳೂ ಪ್ರವಾಹದ ಹಾವಳಿಯಲ್ಲಿ ಧೂಳೀಪಟವಾಗಿದ್ದವು. ಪ್ರವಾಹದ ನೀರು ಹೊಲಗಳ ಮೇಲೆ ಉಕ್ಕಿ ಹರಿದಿತ್ತು. ನಿರಾಶ್ರಿತ ವಲಸೆಗಾರರು ಪ್ರವಾಹದ ನಡುವೆ ಸಿಕ್ಕಿ ಬಿದ್ದಿದ್ದರು. ಸ್ವತಃ ನಾವೇ ಒಂದು ಸಲ ಉಕ್ಕಿ ಹರಿಯುತ್ತಿದ್ದ ರಾವಿ ನದಿಯ ಪ್ರವಾಹದಲ್ಲಿ ಸಿಕ್ಕಿ ಬಿದ್ದೆವು. ಮೊದಲೇ ಎಚ್ಚರಿಕೆ ಸಿಕ್ಕಿದ್ದರಿಂದ ಅದರಿಂದ ಪಾರಾಗಲು ಸಾಧ್ಯವಾಯಿತು. ಆದರೆ ನನಗಿದ್ದಂತಹ ಸೌಲಭ್ಯಗಳು ಸಹಸ್ರಾರು ಮಂದಿ ರೈತರ ಪಾಲಿಗೆ ಇರಲಿಲ್ಲ. ಅವರಿಗೆ ಮೊದಲೇ ಎಚ್ಚರಿಕೆ ಕೊಡಲು ಯಾರೂ ಇರಲಿಲ್ಲ. ಜೀಪಿನಂತಹ ಅನುಕೂಲ ಅವರಿಗಿರಲಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಬಿಯಾಸ್ ನದಿ ಬಹಳಷ್ಟು ಜನರನ್ನು ಬಲಿ ತೆಗೆದುಕೊಂಡಿತು. ನದಿ ಮತ್ತು ರೈಲ್ವೆ ದಿಬ್ಬದ ಮಧ್ಯದಲ್ಲಿದ್ದ ಒಂದು ಸ್ಥಳದಲ್ಲಿ ಸುಮಾರು ನಾಲ್ಕು ಸಾವಿರ ಮುಸ್ಲಿಮರು ಒಂದು ರಾತ್ರಿ ಬಿಡಾರ ಹೂಡಿದ್ದರು. ಮಾರನೇ ಬೆಳಿಗ್ಗೆ ಅದರಲ್ಲಿ ಬದುಕುಳಿದವರು ಒಂದು ಸಾವಿರ ಮಂದಿ ಮಾತ್ರ, ಆ ಪ್ರದೇಶ ರಣರಂಗದಂತಾಗಿತ್ತು. ಎಲ್ಲೆಲ್ಲೂ ಮಗುಚಿಬಿದ್ದಿದ್ದ ಎತ್ತಿನಗಾಡಿಗಳು. ತೇಲಾಡುತ್ತಿದ್ದ ಪಾತ್ರೆ ಸಾಮಾನುಗಳು, ಕೆಸರು ಮಣ್ಣಿನಲ್ಲಿ ಸಿಕ್ಕಿಕೊಂಡಿದ್ದ ವ್ಯವಸಾಯದ ಉಪಕರಣಗಳು. ಇದಾದ ಕೆಲವು ದಿನಗಳ ನಂತರ ಈ ಪ್ರವಾಹದಿಂದ ಬದುಕುಳಿದವರ ಒಂದು ಬಿಡಾರ ಪ್ರದೇಶವನ್ನು ನೋಡುವ ಅವಕಾಶ ನನಗೆ ಸಿಕ್ಕಿತು. ಅಲ್ಲಿ ರಾತ್ರಿ ತಂಗಲು ಅವರು ವ್ಯವಸ್ಥೆ ಮಾಡಿಕೊಳ್ಳುತ್ತಿದ್ದರು. ಒಬ್ಬಾತ ರಸ್ತೆ ಬದಿಯಲ್ಲಿ ಗೋರಿ ತೋಡುತ್ತಿದ್ದ. ಆತನ ಹೆಸರು ರಸಿಕ್. ಆತ ಮೂಲತಃ ಜಲಂಧರ್‌ನವನು. ಅಲ್ಲಿ ಆತನಿಗೂ ಆತನ ಸೋದರರಿಗೂ ಸೇರಿದಂತೆ ಹತ್ತು ಎಕರೆಗಳಷ್ಟು ಕಿತ್ತಲೆ ಹಣ್ಣಿನ ತೋಪಿತ್ತು. ಈತನ ಎರಡು ವರ್ಷದ ಮಗ ಈ ಮಧ್ಯಾಹ್ನ ಸತ್ತಿದ್ದ. ಅವನಿಗಾಗಿ ಈ ಗೋರಿ. ತನ್ನ ಮಗನನ್ನು ಹೂಳುವುದಕ್ಕೆ ಸೂಕ್ತ ಸ್ಥಳ ಸಿಗುವವರೆಗೆ ಆತ ಎಷ್ಟೋ ದೂರದಿಂದ ಮಗನ ಹೆಣವನ್ನು ಹೊತ್ತುಕೊಂಡೇ ನಡೆದಿದ್ದ. ಇದಕ್ಕೆ ಎರಡು ದಿನಗಳ ಹಿಂದಿನ ರಾತ್ರಿ ಅವರೆಲ್ಲ ರಾತ್ರಿ ತಂಗಲು ಎಂದಿಗಿಂತ ಹೆಚ್ಚು ಪ್ರಶಸ್ತ ಸ್ಥಳ ಸಿಕ್ಕಿದೆ ಎಂಬ ಸಂತೋಷದಿಂದ ಎಲ್ಲ ವ್ಯವಸ್ಥೆ ಮಾಡಿಕೊಂಡಿದ್ದರು. ಪಾಕಿಸ್ತಾನದ ಗಡಿ ಕೇವಲ ೫೦ ಮೈಲುಗಳಷ್ಟು ದೂರವಿತ್ತು. ಮಧ್ಯರಾತ್ರಿ

ಜನರ ಗದ್ದಲದಿಂದ ರಸಿಕ್‌ಗೆ ಎಚ್ಚರವಾಯಿತು. ಎದ್ದುನೋಡಿದ. ನೀರಿನ ಮಟ್ಟ ಭರದಿಂದ ಮೇಲೇರುತ್ತಿತ್ತು. ರಸಿಕ್ ಮತ್ತು ಅವನ ಕುಟುಂಬದ ಜನರೆಲ್ಲ ಎತ್ತಿನ ಗಾಡಿಯ ಮೇಲೇರಿದರು. ನೀರು ಗಾಡಿಯ ಚಕ್ರಗಳ ಗುಂಭದವರೆಗೆ ಏರಿತು. ನಂತರ ಗಾಡಿಯ ಮೇಲೆ ನಿಂತಿದ್ದವರ ಮೊಣಕಾಲುಮಟ್ಟ, ಎದೆಯ ಮಟ್ಟದವರೆಗೂ ನೀರು ಏರಿತು. ಎರಡು ರಾತ್ರಿ ಎರಡು ಹಗಲು ಅವರು ಪ್ರವಾಹದ ಮಧ್ಯೆ ಗಾಡಿಯ ಮೇಲೆ ಅನ್ನ ನೀರಿಲ್ಲದೆ ನಿಂತಿದ್ದರು. ಅವರ ಜೊತೆಗೆ ಬರುತ್ತಿದ್ದ ಅನೇಕರು ಅವರ ಕಣ್ಣೆದುರೇ ನೀರಿನಲ್ಲಿ ಕೊಚ್ಚಿಕೊಂಡು ಹೋಗುತ್ತಿದ್ದರು. ಈ ಪ್ರಯಾಣ ಮುಗಿದ ನಂತರ ಮತ್ತೆ ಬದುಕನ್ನು ಆರಂಭಿಸುವುದಕ್ಕಾಗಿ ಅವರಿಗೆ ಅತ್ಯಗತ್ಯವಾಗಿ ಬೇಕಾಗಿದ್ದ ಜಾನುವಾರುಗಳು ನೀರಿನಲ್ಲಿ ಮುಳುಗಿದ್ದವು. ನೀರಿನ ಮಟ್ಟ ಕೆಳಗಿಳಿದಾಗ ರಸಿಕ್ ಕುಟುಂಬ ಕೆಳಗಿಳಿದು ಪ್ರಯಾಣ ಮುದುವರೆಸಿತು. ಆದರೆ ಈ ಆಯಾಸ ಬಳಲಿಕೆಯನ್ನು ತಾಳಿಕೊಳ್ಳಲಾರದ ಅವನ ಮಗ ಮಧ್ಯಾಹ ಸತ್ತು ಹೋದ.

ವಲಸೆ ಹೋಗುತ್ತಿದ್ದ ಜನರನ್ನು ಈ ಪ್ರವಾಹ ಮತ್ತು ಹಸಿವಿಗಿಂತ ಹೆಚ್ಚು ಭೀಕರವಾಗಿ ಕಾಡಿದ್ದು ವಿರೋಧಿ ಮತದವರ ಧಾಳಿಯ ಭೀತಿ. ರಸ್ತೆಯಲ್ಲಿ ವಲಸೆಗಾರರ ಮೇಲೆ ಯಾವಾಗ ಬೇಕಾದರೂ ಧಾಳಿ ನಡೆಯಬಹುದಿತ್ತು. ದೇಶವನ್ನು ಎರಡು ಹೋಳು ಮಾಡಿದ್ದ ರಾಜಕೀಯ ಒತ್ತಡಗಳು ಎಷ್ಟರಮಟ್ಟಿಗೆ ಮತೀಯ ದ್ವೇಷವನ್ನು ಕೆರಳಿಸಿದ್ದವೆಂದರೆ ಜನರ ಆಲೋಚನಾ ವಿಧಾನವೇ ಬದಲಾಗಿತ್ತು. ತಮ್ಮ ಧರ್ಮಕ್ಕೆ ಸೇರಿಲ್ಲದ ಯಾವುದೇ ಜನರೂ ಲೂಟಿ, ಸುಲಿಗೆ ಕೊಲೆಗೆ ಬಲಿಯಾಗುತ್ತಿದ್ದರು. ರಸ್ತೆಯ ಪ್ರಯಾಣಕ್ಕಿಂತ ರೈಲು ಪ್ರಯಾಣ ಇನ್ನಷ್ಟು ಅಪಾಯಕಾರಿ ಯಾಗಿತ್ತು. ನಿರಾಶ್ರಿತರನ್ನು ತುಂಬಿಕೊಂಡ ರೈಲುಗಾಡಿ ಹಳಿ ಬದಲಾಯಿಸುವಾಗ ಮತ್ತು ಬೇರೆ ಡಬ್ಬಿಗಳನ್ನು ಜೋಡಿಸಲೆಂದು ನಿಲ್ಲಿಸಿದ ಸಂದರ್ಭದಲ್ಲಿ ಅವುಗಳ ಮೇಲೆ ಸುಲಭವಾಗಿ ಆಕ್ರಮಣ ನಡೆಯುತ್ತಿತ್ತು. ಅಮೃತಸರದಲ್ಲಿದ್ದ ರೈಲ್ವೆ ನಿಲ್ದಾಣವಂತೂ ಮುಸ್ಲಿಮರಿಗೆ ನಡುಕ ಹುಟ್ಟಿಸುವ ತಾಣವಾಗಿತ್ತು. ಅಮೃತಸರ ಸಿಖ್ಖರ ಪವಿತ್ರ ಯಾತ್ರಾಸ್ಥಳ. ಆದ್ದರಿಂದ ಅದು ಉಗ್ರಮತೀಯರ ಕೇಂದ್ರಸ್ಥಾನ. ಪಾಕಿಸ್ತಾನವನ್ನು ಪ್ರವೇಶಿಸುವ ಮೊದಲು ರೈಲು ಹಾದು ಹೋಗಬೇಕಿದ್ದ ಕೊನೆಯ ದೊಡ್ಡ ಜಂಕ್ಷನ್ ಇದು. ಹೀಗೆ ಧಾಳಿಗೆ ತುತ್ತಾಗಿ ಧ್ವಂಸವಾಗಿದ್ದ ರೈಲು ನಿಲ್ದಾಣವನ್ನು ನಾನು ನೋಡಿದೆ. ಅಲ್ಲಿ ಸಾವಿರಾರು ಮುಸ್ಲಿಂ ನಿರಾಶ್ರಿತರು ಪ್ರಾಣ ಕಳೆದುಕೊಂಡಿದ್ದರು. ಉದ್ದುದ್ದ ಗಡ್ಡಗಳನ್ನು ಬಿಟ್ಟುಕೊಂಡು ಗಾಢನೀಲಿಯ ಪೇಟ ಕಟ್ಟಿದ್ದ ಉಗ್ರ ಅಕಾಲಿಪಂಥದ ಸಿಖ್ಖರು ಪ್ಲಾಟ್‌ಫಾರಂನ ಉದ್ದಕ್ಕೂ ಕಾಲಿನ ಮೇಲೆ ಕಾಲು ಹಾಕಿಕೊಂಡು ಕೂತಿದ್ದರು. ಅವರೆಲ್ಲ ಒಳ್ಳೆಯ ಅನುಕೂಲಸ್ಥರಂತೆಯೇ ಕಾಣುತ್ತಿದ್ದರು. ಈ ದೇಶಭಕ್ತರು ಮೊಣಕಾಲುಗಳ ನಡುವೆ ಉದ್ದನೆಯ ಬಾಗಿದ್ದ ಕತ್ತಿಗಳನ್ನಿಟ್ಟುಕೊಂಡು ಮುಂದಿನ ರೈಲು ಬರುವುದನ್ನೇ ತಣ್ಣಗೆ ನಿರೀಕ್ಷಿಸುತ್ತಿದ್ದವರು. ಆದರೆ ಮುಸ್ಲಿಮರು ಮಾತ್ರವೇ ಹೀಗೆ ಬಲಿಯಾಗುತ್ತಿದ್ದರೆಂದಲ್ಲ. ಪಾಕಿಸ್ತಾನ ಗಡಿಯಿಂದ ಭಾರತವನ್ನು ಪ್ರವೇಶಿಸುವುದಕ್ಕೆ ಮೊದಲು ಸಿಗುತ್ತಿದ್ದ ಕೊನೆಯ ಜಂಕ್ಷನ್ ಲಾಹೋರ್. ಅದನ್ನು ದಾಟಿ ಬರುವಾಗ ಸಿಖ್ಖರು ಇಂಥದೇ ಬರ್ಬರ ಧಾಳಿಗೆ ತುತ್ತಾಗುತ್ತಿದ್ದರು. ಪಾಕಿಸ್ತಾನದ ಹೆದ್ದಾರಿಗಳಲ್ಲಿ ಬರುತ್ತಿದ್ದ ಹಿಂದೂ ಸಿಖ್ ನಿರಾಶ್ರಿತರನ್ನು ಕಂಡರೆ ಮುಸ್ಲಿಮರ ಕೋಪ ಕೆರಳುತ್ತಿತ್ತು.

ಲೈಫ್‌ಗಾಗಿ ನಾನು ಈ 'Great Migration' ಫೋಟೋ ಸರಣಿ ಸಿದ್ಧಪಡಿಸುತ್ತಿದ್ದೆ. ನನ್ನ ಜೊತೆಗೆ ಲೀ ಎಟಿಂಗ್‌ಟನ್ ಫ್ರಿಜೆಲ್ ಇದ್ದಳು. ನಾನು ತೆಗೆಯುವ ಚಿತ್ರಗಳಿಗೆ ಶೀರ್ಷಿಕೆ ರಚಿಸುವುದು ಆಕೆಯ ಕೆಲಸ. ಹೀಗೆ ನಾವು ನಮಗೆ ಬೇಕಾದ ಸಾಮಗ್ರಿ ಸಂಗ್ರಹಿಸುತ್ತ ಪಂಜಾಬಿನ ಸುಮಾರು ನಾನೂರು ಮೈಲು ಉದ್ದಗಲಗಳಲ್ಲಿ ಸಂಚರಿಸಿದ್ದೆವು. ಈ ಕೆಲಸ ಹೆಂಗಸರಿಗೆ ಅಸಾಧ್ಯ ಎಂದು ನಮಗೆ ಎಚ್ಚರಿಕೆ ಕೊಟ್ಟಿದ್ದರು. ಒಂದು ಕಡೆಯಿಂದ ಇನ್ನೊಂದು ಕಡೆಗೆ ವಾಹನ ವ್ಯವಸ್ಥೆ ಸಿಗುವುದು ಕಷ್ಟವಾಗುತ್ತದೆ ಎಂದಿದ್ದರು. ಧಾಳಿಕೋರರು ಹೆಂಗಸರನ್ನು ಅಪಹರಿಸಿದ ಭಯಂಕರ ಘಟನೆಗಳು ವರದಿಯಾಗಿದ್ದವು. ಈ ಅಪಹರಣ ವರದಿಗಳ ಬಗ್ಗೆ ನಾನಾಗಲೀ, ಲೀ ಆಗಲೀ ಹೆಚ್ಚು ತಲೆಕೆಡಿಸಿಕೊಳ್ಳಲಿಲ್ಲ. ಆದರೆ ಪ್ರತಿದಿನದ ನಮ್ಮ ಪ್ರಯಾಣಕ್ಕೆ ಸರಿಯಾದ ಡ್ರೈವರ್‌ನನ್ನು ಹೊಂದಿಸಿಕೊಳ್ಳುವುದು ನಮಗೆ ನಿರಂತರ ಸಮಸ್ಯೆಯಾಗಿತ್ತು. ನಮ್ಮ ಡ್ರೈವರ್ ನಾವು ಯಾವ ಭಾಗದಲ್ಲಿ ಸಂಚರಿಸುತ್ತೇವೋ ಅಲ್ಲಿನ ಧಾರ್ಮಿಕ ವಾತಾವರಣಕ್ಕೆ ಹೊಂದಿಕೆಯಾಗುವಂಥವನಾಗಿರಬೇಕಿತ್ತು. ಗಡಿಪ್ರದೇಶವನ್ನು ದಾಟುವಾಗ ಯಾವ ಧರ್ಮಗಳ ವಿರುದ್ಧವೆನಿಸದಂಥವನಾಗಿರಬೇಕಿತ್ತು. ಈ ಸಂದರ್ಭಕ್ಕಾಗಿ ನಾವು ಬ್ರಿಟಿಷ್ ಕ್ಯಾಪ್ಟನ್ ಒಬ್ಬರ ಸೇವೆಯನ್ನು ಪಡೆದುಕೊಂಡೆವು. ಪಾಕಿಸ್ತಾನ ಸೇನೆಯಲ್ಲಿ ಅವರು ಅಧಿಕಾರಿಯಾಗಿದ್ದರು. ಅವರು ನಮ್ಮ ಅಗತ್ಯತೆಗೆ ತಕ್ಕಂತಿದ್ದರು. ಆ ದಿನವೆಲ್ಲ ನಮ್ಮ ಕಣ್ಣಿಗೆ ಕಂಡದ್ದು ತುಂಬ ದುಃಖ ತರುವಂಥ ಸಂಗತಿಗಳು. ನಾವು ಮೊತ್ತಮೊದಲ ಬಾರಿಗೆ ಕಾಲರಾ ವ್ಯಾಧಿಯ ವಿಕೋಪವನ್ನು ನೋಡಿದೆವು. ಕಸೂರ್ ಎಂಬಲ್ಲಿ ಸ್ವಲ್ಪ ಸುಧಾರಿತವೆಂದು ಹೇಳಬಹುದಾದ ಆಸ್ಪತ್ರೆಗೆ ಭೇಟಿ ಕೊಟ್ಟೆವು. ಅಲ್ಲಿ ಕಾಲರಾದಿಂದ ನರಳುತ್ತಿದ್ದ ಸುಮಾರು ೮೦೦ ಮಂದಿ ರೋಗಿಗಳು ಜಾಗವಿಲ್ಲದೆ ನೆಲದ ಮೇಲೇ ಮಲಗಿದ್ದರು. ಅವರಲ್ಲಿ ಕೆಲವರು ಬದುಕಿಕೊಳ್ಳಬಹುದು ಎಂದು ಹೇಳಿದ ರಾದರೂ ಅವರನ್ನು ನೋಡಿದಾಗ ನಮಗೆ ಅಂಥ ಭರವಸೆಯೇನೂ ಮೂಡಲಿಲ್ಲ. ಅವರಿಗೆ ಎಂತಹ ಚಿಕಿತ್ಸೆ ಸಿಗುತ್ತದೆ ಎಂಬುದರ ಮೇಲೆ ಅವರ ಉಳಿವು ಅಳಿವು ಅವಲಂಬಿಸಿತ್ತು. ಬಹುಶಃ ನನ್ನನ್ನು ತುಂಬ ಕಂಗಾಲು ಮಾಡಿದ ದೃಶ್ಯ ಇದೇ ಇರಬೇಕು. ಇವರೆಲ್ಲ ಅಮಾಯಕ ರೈತರು. ತಮ್ಮ ಪೂರ್ವಿಕರ ಕಾಲದಿಂದ ನೆಲೆಸಿದ್ದ ಮನೆಗಳನ್ನು ಅನಿವಾರ್ಯವಾಗಿ ತೊರೆದು ಬಂದಿದ್ದರು. ತಮ್ಮ ಕನಸಿನ ನಾಡು ಸಿಗುತ್ತದೆ ಎಂದು ನಂಬಿ ಬಂದಿದ್ದವರು ಕೆಲವರು.

ಒಂದು ಸಲ ಸಂಜೆಯಾಗುತ್ತಿದ್ದಂತೆ ನಾವು ಲಾಹೋರಿಗೆ ಹಿಂದಿರುಗುತ್ತಿದ್ದಾಗ ಅಲ್ಲಿನ ಒಂದು ಹೊಲದಲ್ಲಿ ಜನರ ಗುಂಪು ಕಂಡಿತು. ಅವರೆಲ್ಲ ಚೂಪುಕತ್ತಿಗಳನ್ನು ಸಿಕ್ಕಿಸಿದ್ದ ಉದ್ದಕೋಲು ಗಳನ್ನು ಹಿಡಿದಿದ್ದರು. ಅಲ್ಲಿಂದ ಮುಂದೆ ರಸ್ತೆಯಲ್ಲಿ ತಿರುವು ತೆಗೆದುಕೊಂಡಾಗ ನಿರಾಶ್ರಿತರನ್ನು ತುಂಬಿಕೊಂಡ ಒಂದು ಟ್ರಕ್ ಹೋಗುತ್ತಿದ್ದುದು ಕಂಡುಬಂತು. ಅದರಲ್ಲಿದ್ದವರೆಲ್ಲ ಹಿಂದೂಗಳು. ಈ ಮುಸ್ಲಿಂ ಪ್ರದೇಶದಲ್ಲಿ ಅವರು ಸಿಕ್ಕಿಕೊಂಡಿದ್ದರು. ನಾವು ಮೊದಲು ಹೊಲದಲ್ಲಿ ನೋಡಿದ ಜನ ಭರ್ಜಿಗಳನ್ನು ಹಿಡಿದು ಇವರನ್ನು ಅಟ್ಟಿಸಿಕೊಂಡು ಬರುತ್ತಿದ್ದರು. ಓಡಿಬಂದ ಜನ ಟ್ರಕ್ ಮೇಲೆ ಹತ್ತಿ ಅಲ್ಲಿದ್ದ ಬಟ್ಟೆ ಬರೆ ವಸ್ತುಗಳನ್ನೆಲ್ಲ ಎಳೆದಾಡಿ ಕೆಳಕ್ಕೆಸೆದರು. ಒಬ್ಬ ಕೈಕೊಡಲಿಯಿಂದ ಜನರನ್ನು ಕೊಚ್ಚುತ್ತಿದ್ದ. ಟ್ರಕ್‌ನಲ್ಲಿದ್ದವರು ಭಯದಿಂದ ಅರಚುತ್ತಿದ್ದರು. ನಮ್ಮ ಜೀಪನ್ನು ಡ್ರೈವ್ ಮಾಡುತ್ತಿದ್ದ ಕ್ಯಾಪ್ಟನ್ ಜೀಪಿನಿಂದ ಹೊರಹಾರಿ, ಅಲ್ಲಿಂದ ದೂರ

ಹೋಗುವಂತೆ ಆಕ್ರಮಣಕಾರರಿಗೆ ಅಪ್ಪಣೆ ಮಾಡಿದ. ರಿವಾಲ್ವರ್‌ನಿಂದ ಗಾಳಿಯಲ್ಲಿ ಗುಂಡು ಹಾರಿಸಿದ. ಆದರೆ ಟ್ರಕ್ ಮುಂದೆ ಹೋಗದಂತೆ ದಪ್ಪತಂತಿಯ ಬೇಲಿ ಅಡ್ಡವಾಗಿತ್ತು. ಈ ತಡೆಯನ್ನು ಕ್ಯಾಪ್ಟನ್ ತೆಗೆದುಹಾಕುತ್ತಿದ್ದಾಗ ಧಾಳಿಕೋರರು ಪುನಃ ಹಿಂಭಾಗದಿಂದ ಟ್ರಕ್ ಮೇಲೆ ಹತ್ತಿದರು. ಕೈಯಲ್ಲಿದ್ದ ಭರ್ಜಿ ಕೊಡಲಿಗಳನ್ನು ಮನಬಂದತ್ತ ಬೀಸುತ್ತಿದ್ದರು. ಈ ಸ್ಥಳದಿಂದ ನಾವು ಕೇವಲ ಮೂರು ಗಜಗಳ ಅಂತರಲ್ಲಿದ್ದೆವು. ಕ್ಯಾಪ್ಟನ್ ಅವರಲ್ಲಿ ಒಬ್ಬನ ಮೇಲೆ ಗುಂಡು ಹಾರಿಸಿದ. ಇತರರು ಟ್ರಕ್ಕಿನಿಂದ ಇಳಿದು ಕತ್ತಲಲ್ಲಿ ಓಡಿ ಮರೆಯಾದರು. ನಮ್ಮ ಜೀಪು ಮುಂದೆ ಹೊರಟಾಗ ಎಲ್ಲಿಂದಲೋ ಕೆಲವು ಗುಂಡುಗಳು ಹಾರಿದ ಶಬ್ದ ಕೇಳಿಸಿತು.

ಜನವಲಸೆಯನ್ನು ಹಿಂಬಾಲಿಸುತ್ತ ನಾವು ವಾರಗಟ್ಟಲೆ ತಿರುಗಾಡಿದೆವು. ನಮ್ಮ ಬಟ್ಟೆಬರೆಗಳು ಧೂಳಿನಿಂದ ರಟ್ಟಿನಂತಾಗಿದ್ದವು. ಕೂದಲು ಬೂದಿಬಣ್ಣಕ್ಕೆ ತಿರುಗಿತ್ತು. ಕ್ಯಾಮರಾಗಳಲ್ಲಿಯೂ ಧೂಳು ಕಟ್ಟಿಕೊಂಡಿತ್ತು. ನಾವೂ ಕೂಡ ಈ ಓಡಾಟದಲ್ಲಿ ಎಷ್ಟು ಸುಸ್ತಾಗಿದ್ದೆವೆಂದರೆ ನಮ್ಮ ಕಣ್ಣ ಮುಂದೆಯೇ ನಡೆದ ಎಷ್ಟೋ ಹೃದಯವಿದ್ರಾವಕ ಘಟನೆಗಳ ಫೋಟೋ ತೆಗೆಯುವುದನ್ನು ಬಿಟ್ಟುಬಿಟ್ಟೆವು. ನನ್ನ ನೆಗೆಟಿವ್‌ಗಳೆಲ್ಲ ಮುಗಿದವು. ಲೀ ಎಲ್ಲ ಫೋಟೋಗಳಿಗೂ ಸೂಕ್ತ ಕ್ಯಾಪ್ಶನ್ ಬರೆದಳು. ವಿಮಾನದಲ್ಲಿ ಅವುಗಳನ್ನು ಲೈಫ್‌ಗೆ ಕಳಿಸಿದೆವು. ಆಮೇಲೆ ಲೀ, ಇನ್ನೊಂದು ಹೊಸ ಯೋಜನೆಯ ಮೇಲೆ ಜಗತ್ತಿನ ಇನ್ನೊಂದು ಭಾಗಕ್ಕೆ ಹೋದಳು. ಇಷ್ಟೆಲ್ಲ ಆದರೂ ಸಹಸ್ರ ಸಹಸ್ರ ರೈತಾಪಿ ಜನರ ಈ ದುರಂತ ಪ್ರಯಾಣ ನಡೆದೇ ಇತ್ತು. ಮುಂದೇನು ಎಂದು ಅವರಿಗೆ ಗೊತ್ತಿರಲಿಲ್ಲ. ಪಾಕಿಸ್ತಾನವನ್ನು ಬಿಟ್ಟು ಹೊರಟಿದ್ದ ಸಿಖ್ ಮತ್ತು ಹಿಂದೂಗಳ ಸಂಖ್ಯೆ ಸುಮಾರು ನಾಲ್ಕು ದಶಲಕ್ಷ. ಇದಕ್ಕೆ ಪ್ರತಿಯಾಗಿ ಭಾರತದಿಂದ ಪಾಕಿಸ್ತಾನದ ಕಡೆ ಹೊರಟಿದ್ದ ಮುಸ್ಲಿಮರ ಸಂಖ್ಯೆ ಆರು ದಶಲಕ್ಷ. ಹೀಗಾಗಿ ಈ 'ಪರಿಶುದ್ಧ' ಪುಟ್ಟನಾಡು ಈ ಸಂಖ್ಯಾಬಾಹುಳ್ಯದಿಂದಲೇ ಕುಸಿದುಹೋಗುವ ಅಪಾಯದಲ್ಲಿದ್ದಂತೆ ತೋರುತ್ತಿತ್ತು.

ಮುಸ್ಲಿಂ ರೈತರು ಭಾರತದಲ್ಲಿ ಎಲ್ಲೆಲ್ಲಿದ್ದರೊ ಅದು ಮುಖ್ಯವಲ್ಲ. ಆದರೆ ಈಗ ಪಾಕಿಸ್ತಾನಕ್ಕೆ ಬಂದ ಮೇಲೆ ತಾವು ಇಂಥ ಸ್ಥಳದಲ್ಲಿ ನೆಲೆಸಬೇಕು ಎಂದು ಅವರು ನಿರ್ಧರಿಸಿಕೊಂಡು ಬಿಟ್ಟಿದ್ದರು. ಹೀಗೆ ಅವರು ನಿರ್ಧರಿಸಿಕೊಂಡಿದ್ದ ಸ್ಥಳದ ಹೆಸರು ಲ್ಯಾಲ್‌ಪುರ. ಪ್ರತಿಯೊಬ್ಬರೂ ಅಲ್ಲಿಯೇ ಹೊಲ ಮಾಡಿಕೊಳ್ಳುವ ಆಸೆಯಿಟ್ಟುಕೊಂಡಿದ್ದರು. ಯಾಕೆಂದರೆ ಇಡೀ ಭಾರತ ಉಪಖಂಡದಲ್ಲಿ ಇದರಷ್ಟು ಫಲವತ್ತಾದ ಭೂಮಿ ಇನ್ನೊಂದಿರಲಿಲ್ಲ. ಪೂರ್ವ ಮತ್ತು ಪಶ್ಚಿಮ ಪಂಜಾಬಿನ ನಡುವೆ ರಾಷ್ಟ್ರೀಯ ವಿಭಜನಾಗೆರೆ ಎಳೆದಾಗ ಲ್ಯಾಲ್‌ಪುರ ಪಾಕಿಸ್ತಾನಕ್ಕೆ ಸೇರಿಕೊಂಡು ಬಿಟ್ಟಿತು. ಕೇವಲ ಮೂವತ್ತು ವರ್ಷಗಳ ಹಿಂದೆ ಲ್ಯಾಲ್‌ಪುರ ಸಿಕ್ಕುಸಿಕ್ಕಾದ ಕಾಡು ಪ್ರದೇಶವಾಗಿತ್ತು. ಭಾರತದ ವೀರಾಗ್ರಣಿಗಳು ಎಂದು ಪ್ರಸಿದ್ಧರಾಗಿದ್ದ ಹಾಗೂ ಅತ್ಯಂತ ಕಷ್ಟಪಟ್ಟು ದುಡಿಯುವುದಕ್ಕೆ ಹೆಸರಾಗಿದ್ದ ಸಿಖ್ಖರು ಇಲ್ಲಿ ಬಂದು ನೆಲೆಸಿದ್ದು ಕುತೂಹಲಕಾರಿ. ಮೊದಲನೇ ಮಹಾಯುದ್ಧದಲ್ಲಿ ಹೋರಾಡಿದ್ದಕ್ಕೆ ಬಳುವಳಿಯಾಗಿ ಈ ಕಾಡುಪ್ರದೇಶದಲ್ಲಿ ಅವರಿಗೆ ಭೂಮಿಯನ್ನು ಕೊಡಲಾಗಿತ್ತು. ಇಲ್ಲಿ ಬಂದು ನೆಲೆಸಿದ ಸಿಖ್ಖರು ಕಾಡನ್ನು ಸವರಿದರು. ಕಾಲುವೆ ತೋಡಿದರು. ಉಳುಮೆ ಮಾಡಿದರು. ಕೇವಲ ಒಂದೇ ಒಂದು ತಲೆಮಾರಿನೊಳಗಾಗಿ ಈ ಭೂಮಿಯಲ್ಲಿ

ಇವರು ಗೋಧಿ, ಹತ್ತಿ ಹಾಗೂ ಎಣ್ಣೆಬೀಜಗಳ ಸಮೃದ್ಧ ಬೆಳೆ ತೆಗೆಯತೊಡಗಿದರು. ಬಲವಾದ ಸುತ್ತುಗೋಡೆಯಿರುವ ಹಳ್ಳಿಗಳನ್ನು ಕಟ್ಟಿಕೊಂಡರು. ಪ್ರತಿ ಹಳ್ಳಿಯ ಮಧ್ಯೆ ಒಂದು ಗುರುದ್ವಾರ. ಎಲ್ಲರೂ ಆರಾಧನೆಗಾಗಿ ಅಲ್ಲಿ ಸೇರುತ್ತಿದ್ದರು.

ಮುಸ್ಲಿಮರಂತೆ ಸಿಖ್ಖರು ಕೂಡ ಏಕದೇವೋಪಾಸಕರು. ಹಿಂದೂಗಳಂತೆ ನೂರಾರು ದೇವರುಗಳನ್ನು (ಜೊತೆಗೆ ಮರ, ನದಿ, ಗೋವು ಸೇರಿದಂತೆ) ಪೂಜಿಸುವವರಲ್ಲ. ಹೀಗಿದ್ದೂ ಇವರಿಬ್ಬರೇ ಯಾಕೆ ಬದ್ಧವೈರಿಗಳಂತೆ ಸೆಣಸಾಡಿದರು ಎಂಬುದು ಅರ್ಥವಾಗದ ಸಂಗತಿ. ಈ ಕಾರಣದಿಂದಲೇ ನನಗೆ ಈ "ಧಾರ್ಮಿಕ ಯುದ್ಧ"ಗಳೆಲ್ಲ ನಿಜಕ್ಕೂ ಧಾರ್ಮಿಕ ಕಾರಣಕ್ಕಾಗೇ ನಡೆಯುತ್ತಿವೆಯೇ ಎಂಬ ಪ್ರಶ್ನೆ ಕಾಡತೊಡಗಿತ್ತು. ಬಹುಶಃ ಇವರೆಲ್ಲ ಧರ್ಮದ ಸೋಗಿನಲ್ಲಿ ಇನ್ನಾವುದೋ ಉದ್ದೇಶಕ್ಕೆ ಹೋರಾಡುತ್ತಿದ್ದಾರೆ ಎನ್ನಿಸಿತು. ಇಂತಹ ಧಾರ್ಮಿಕ ವೈಮನಸ್ಯಗಳ ಪ್ರಾಯೋಗಿಕ ಅನುಕೂಲಗಳೇನು ಎಂಬುದು ಮುಂದೆ ನನಗೆ ಮನವರಿಕೆಯಾಯಿತು.

ರಸ್ತೆಗಳಲ್ಲಿ ನನಗೆ ಎದುರಾದ ಸಿಖ್ಖರು ಹೇಳಿದ ಪ್ರಕಾರ "ಏನು ನಡೆಯುತ್ತಿದೆ ಎಂದು ಗೊತ್ತಾಗುವುದಕ್ಕೂ ಮೊದಲೇ ದುರಂತ ಬಂದೆರಗಿತ್ತು. ನಾವು ನಮ್ಮ ನಾಡನ್ನು ಬಿಟ್ಟು ಹೋಗಬೇಕಾಗಬಹುದು ಎಂದು ನಮ್ಮ ನಾಯಕರು ನಮಗೆ ತಿಳಿಸಲೇ ಇಲ್ಲ. ಅಷ್ಟೆಲ್ಲ ಶ್ರಮಪಟ್ಟು ಸುಧಾರಿಸಿದ್ದ ಭೂಮಿಯನ್ನು ನಾವು ಬಿಟ್ಟುಬರಬೇಕಾಯಿತು" ಎಂದು ಅವರು ಹೇಳಿದರು. "ಇಡೀ ಪಂಜಾಬನ್ನು ನಮಗೇ ಬಿಟ್ಟುಕೊಡುತ್ತಾರೆ. ನಮಗೆ ನಮ್ಮದೇ ಆದ ಸಿಖ್‌ಸ್ಥಾನ ಸಿಗುತ್ತೆ ಎಂದು ನಾವು ಅಂದುಕೊಂಡಿದ್ದೆವು." ಎಂಬ ಮಾತನ್ನಂತೂ ಪದೇಪದೇ ಅವರು ಹೇಳುತ್ತಿದ್ದರು. ಮುಖ್ಯವಾಗಿ ಲ್ಯಾಲ್‌ಪುರ ಜಿಲ್ಲೆಯನ್ನು ಬಿಟ್ಟುಹೋಗಬೇಕಾದವರಂತೂ ಇಂತಹ ಹಠಾತ್ ಉಚ್ಚಾಟನೆಯಿಂದ ದಂಗಾಗಿದ್ದರು. ಇಲ್ಲಿದ್ದ ಹಳ್ಳಿಗಳಲ್ಲಿ ಮುಸ್ಲಿಮರ ಸಂಖ್ಯೆ ಶೇಕಡಾ ೨೫ ರಿಂದ ೪೦ರಷ್ಟು ಮಾತ್ರ. ಸಿಖ್ ರೈತರೊಂದಿಗೆ ಅವರ ಸಂಬಂಧ ಸ್ನೇಹಮಯವಾಗಿತ್ತು. ಸುತ್ತಮುತ್ತಲ ಜಿಲ್ಲೆಗಳಲ್ಲಿ ರಕ್ತಪಾತ ಆರಂಭವಾದಾಗ, ಇಲ್ಲಿ ನಿಮಗೆ ಏನೂ ತೊಂದರೆಯಾಗುವುದಿಲ್ಲ. ನಾವೆಲ್ಲ ಸೋದರರಂತೆ ಬಾಳುತ್ತಿದ್ದೇವೆ ಎಂದು ಮುಸ್ಲಿಮರು ಹೇಳಿದ್ದರು. ಆದರೆ ವಿಭಜನೆಯನ್ನು ಸಾಧಿಸುವುದಕ್ಕಾಗಿ ಹುಟ್ಟುಹಾಕಿದ್ದ ವಿದ್ವೇಷದ ಭಾವನೆ ಎಲ್ಲ ನಿಯಂತ್ರಣವನ್ನೂ ಮೀರಿ ವ್ಯಾಪಿಸಿತ್ತು. ವಿಭಜನೆಗೆ ಧಾರ್ಮಿಕ ಆಧಾರವೇ ಮುಖ್ಯ ಕಾರಣವಾದಾಗ ಎಲ್ಲರೂ ಬರ್ಬರವಾಗಿ ವರ್ತಿಸಿದ್ದರು. ಎಲ್ಲೋ ಅಲ್ಲೊಂದು ಇಲ್ಲೊಂದು ಗುಂಪು ಸರಿಯಾಗಿ ಯೋಚಿಸುತ್ತಿದ್ದರೂ ಈ ಭಯೋತ್ಪಾದಕತೆಯನ್ನು ಅಡಗಿಸಲು ಅವರಿಂದ ಸಾಧ್ಯವಾಗಲಿಲ್ಲ.

ಈ ಬಿಕ್ಕಟ್ಟು ಹೇಗೆ ಬೆಳೆಯಿತು ಎಂದು ಗುರದಿತ್ ಸಿಂಗ್ ವಿವರಿಸಿದ. ೧೮ ಮೈಲುದ್ದದ ವರೆಗೆ ಇದ್ದ ಹಾಗೂ ಸಾವಿರಾರು ಎತ್ತಿನ ಗಾಡಿಗಳು ಒಂದರ ಹಿಂದೊಂದರಂತೆ ಶಿಸ್ತಾಗಿ ಚಲಿಸುತ್ತಿದ್ದ ವಲಸೆಯ ಪ್ರವಾಹದಲ್ಲಿ ಗುರುದಿತ್ ಸಿಂಗ್ ಮತ್ತು ಅವನ ಸಹೋದರರು ಹಾಗೂ ಅವರ ಪತ್ನಿಯರ ಇಡೀ ಕುಟುಂಬವೂ ಒಂದಾಗಿತ್ತು. ಹೀಗೇ ಹೋಗುತ್ತಿರುವಾಗ ಅವರ ಗಾಡಿಯ ಚಕ್ರ ಮುರಿದ ಕಾರಣ ಅದನ್ನು ಸರಿಪಡಿಸುವುದಕ್ಕಾಗಿ ಅವರು ಒಂದು

ಕಡೆ ಸ್ವಲ್ಪ ಕಾಲ ನಿಲ್ಲಲೇಬೇಕಾಯಿತು. ಗಾಡಿಯ ಮೇಲೆ ಬೈಸಿಕಲ್ಲುಗಳು, ಹಾಸಿಗೆಗಳು, ಕೃಷಿ ಉಪಕರಣಗಳು, ಅಡಿಗೆ ಸಾಮಾನುಗಳು ಹೀಗೆ ಹೊರಲಾರದಷ್ಟು ಹೊರೆಯನ್ನು ಏರಿಸಿದ್ದರು. ಉದ್ದುದ್ದ ಗಡ್ಡಗಳು, ರೋಮಭರಿತ ತೋಳುಗಳು, ಧೂಳು ಮುಸುಕಿದ ಹುಬ್ಬುಗಳು, ಜಡ್ಡುಗಟ್ಟಿದ ತಲೆಗೂದಲ ಆ ಕುಟುಂಬದ ಗಂಡಸರೆಲ್ಲ ಸೇರಿ ಗಾಡಿಯ ಚಕ್ರವನ್ನು ಸರಿಪಡಿಸಲು ಹೆಣಗಾಡುತ್ತಿದ್ದಾಗ ಈ ಭೂಮಿಯ ಮೇಲಿನ ಯಾವುದೋ ವಿಚಿತ್ರ ದೈತ್ಯ ಪೀಳಿಗೆಯವರಂತೆ ಕಾಣುತ್ತಿದ್ದರು. ಗುರುದಿತ್‌ಸಿಂಗ್ ಇದ್ದ ಹಳ್ಳಿಯ ಜನ ಹಳ್ಳಿಯನ್ನು ಬಿಡಲೇಬೇಕಾಗಿ ಬಂದ ಪರಿಸ್ಥಿತಿ ನಿರ್ಮಾಣವಾಗಿದ್ದು ಹೀಗೆ : ಮೊದಲನೆಯ ರಾತ್ರಿ, ಹಳ್ಳಿಯ ಗೋಡೆಯ ಹೊರಗೆ ಕಬ್ಬಿನ ಹೊಲದಲ್ಲಿ ಕೆಲವೊಂದು ಮುಸ್ಲಿಮರು ಗುಂಪುಕೂಡಿ, ಎಲ್ಲ ಹೊರಗೆ ಬನ್ನಿ ಎಂದು ಕೂಗಾಡುತ್ತಿದ್ದರು. ಆ ರಾತ್ರಿ ಅಷ್ಟಕ್ಕೇ ಮುಗಿಯಿತು. ಮಾರನೇ ರಾತ್ರಿ ಹೆಚ್ಚಿನ ಸಂಖ್ಯೆಯಲ್ಲಿ ಮುಸ್ಲಿಮರು ಹಳ್ಳಿಯನ್ನು ಸುತ್ತುವರೆದರು. ಅವರೆಲ್ಲ ಇಲ್ಲಿನವರಲ್ಲ; ಯಾವುದೋ ದೂರದ ಕಡೆಯಿಂದ ಬಂದ ಮುಸ್ಲಿಮರು. ಮಧ್ಯರಾತ್ರಿಯ ಹೊತ್ತಿಗೆ 'ಅಲ್ಲಾ ಹೋ ಅಕ್ಬರ್' ಎಂದು ಕೂಗಲಾರಂಭಿಸಿದರು. ಮನೆಯ ಛಾವಣಿಗಳನ್ನು ಹತ್ತಿ ನೋಡಿದ ಸಿಖ್ಖರಿಗೆ ದೂರದಲ್ಲಿ ಕೆಂಪು ಬೆಂಕಿಯ ಜ್ವಾಲೆಗಳು ಕಾಣಿಸಿದವು. ಇತರ ಹಳ್ಳಿಗಳನ್ನು ಹೀಗೇ ಸುತ್ತುವರೆದು ಬೆಂಕಿ ಹಚ್ಚಿದ್ದಾರೆ ಎಂದು ಅರ್ಥವಾಯಿತು. ಇನ್ನೂ ಬೆಳಕಾಗಿರಲಿಲ್ಲ. ಆಗ ಮುಸ್ಲಿಂ ಶಾಲಾಮಾಸ್ತರರೊಬ್ಬರು ನೀವು ಯಾರೂ ಇಲ್ಲಿಂದ ಹೋಗಬೇಡಿ. ನಾವು ಮೊದಲಿನಿಂದಲೂ ನಿಮ್ಮೊಂದಿಗೆ ಶಾಂತಿಯಿಂದ ಬಾಳಿದ್ದೇವೆ. ನಿಮಗೆ ನಾವು ರಕ್ಷಣೆ ಕೊಡುತ್ತೇವೆ. ಸಾಯವುದಿದ್ದರೆ ನಿಮ್ಮೊಂದಿಗೆ ನಾವೂ ಸಾಯುತ್ತೇವೆ ಎಂದು ಸಿಖ್ಖರಿಗೆ ಹೇಳಿದರು. ಆದರೆ ಮಾರನೇ ರಾತ್ರಿ ಕಬ್ಬಿನ ಹೊಲದಿಂದ ಜೋರಾಗಿ ನಗಾರಿಗಳನ್ನು ಬಡಿಯುವ ಶಬ್ದ ಕೇಳಿಸಿತು. ಇದು ಆಕ್ರಮಣದ ಸೂಚನೆ ಎಂದು ಸಿಖ್ಖರಿಗೆ ಅರ್ಥವಾಯಿತು. ದೂರದಲ್ಲಿ ಎಲ್ಲೆಲ್ಲೂ ಬೆಂಕಿಯ ಜ್ವಾಲೆಗಳು ಉರಿಯುತ್ತಿದ್ದವು. ಮಧ್ಯರಾತ್ರಿಯಾಗಿದ್ದಾಗ ಶಾಲಾಮಾಸ್ತರರು ಬಂದರು. ಆಗ "ನಾವು ಏನೂ ಮಾಡುವಂತಿಲ್ಲ" ಎಂದು ಹೇಳಿ ಒಂದು ಪತ್ರವನ್ನು ಸಿಖ್ಖರ ಕೈಗೆ ಕೊಟ್ಟರು. ಅಲ್ಲಿದ್ದ ಜನರಲ್ಲಿ ಹೆಚ್ಚು ವಿದ್ಯಾವಂತನಾಗಿದ್ದ ಮಾಸ್ತರನಿಂದ ಒತ್ತಾಯಪೂರ್ವಕವಾಗಿ ಆ ಪತ್ರವನ್ನು ಬರೆಸಲಾಗಿತ್ತು. ಅದರ ಒಕ್ಕಣೆ ಹೀಗಿತ್ತು. "ಇದು ನಮ್ಮ ದೇಶ. ನೀವು ಈ ಜಾಗವನ್ನು ಬಿಟ್ಟು ಹೋಗಬೇಕು. ಈ ಭೂಮಿ ಮತ್ತು ಇಲ್ಲಿನ ಆಸ್ತಿಯೆಲ್ಲವೂ ಪಾಕಿಸ್ತಾನಕ್ಕೆ ಸೇರಿರುವುದರಿಂದ ನೀವು ಇಲ್ಲಿನ ಯಾವುದೇ ಚರಸ್ವತ್ತನ್ನೂ ತೆಗೆದುಕೊಂಡು ಹೋಗಬಾರದು." ಪತ್ರ ಕೊಡುವಾಗ ಮಾಸ್ತರರು ಅಳುತ್ತಿದ್ದರು.

ಮುಂದೆ ಬೆಲೊಕಿ ಎಂಬ ಸ್ಥಳದಿಂದ ದೊಡ್ಡ ವಲಸೆ ಹೊರಡುತ್ತಿದೆ ಎಂದು ತಿಳಿದುಕೊಂಡ ಗ್ರಾಮಸ್ಥರು ಟೌನ್‌ಹಾಲ್‌ಗೆ ಪತ್ರ ಬರೆದು ತಮಗೆ ಬೆಂಗಾವಲು ಕಳಿಸಬೇಕೆಂದು ಮನವಿ ಮಾಡಿಕೊಂಡರು. ಜಿಲ್ಲಾ ಮ್ಯಾಜಿಸ್ಟ್ರೇಟರು ಅವರ ರಕ್ಷಣೆಗಾಗಿ ಸೈನಿಕರನ್ನು ಕಳಿಸಿದರು. ಗ್ರಾಮಸ್ಥರು ಎತ್ತಿನ ಗಾಡಿಗಳಲ್ಲಿ ಎಷ್ಟೆಷ್ಟು ಸಾಧ್ಯವೋ ಅಷ್ಟಷ್ಟು ತಮ್ಮ ಸಾಮಾನುಸರಂಜಾಮನ್ನು ಹೇರಿಕೊಂಡು ಹೊರಟರು. ಲೂಟಿಗಾರರು ಲೂಟಿ ಮಾಡದಂತೆ ಎಲ್ಲ ಮನೆಗಳಿಗೂ ಮ್ಯಾಜಿಸ್ಟ್ರೇಟ್ ಬೀಗ ಹಾಕಿಸಿದ. ಸ್ವತಃ ಮುಸ್ಲಿಮನಾಗಿದ್ದ ಆತ ವ್ಯವಸಾಯದಲ್ಲಿ ಪರಿಣತರಾಗಿದ್ದ

ಜನ ಊರು ಬಿಟ್ಟು ಹೋಗುವುದನ್ನು ದುಃಖದಿಂದ ನೋಡುತ್ತ ನಿಂತಿದ್ದ. ಬೇರೆ ಕಡೆಯಿಂದ ಇಲ್ಲಿಗೆ ವಲಸೆ ಬರುವ ಜನರ ಕೃಷಿವಿಧಾನ ಬೇರೆ ರೀತಿಯಿರುತ್ತದೆ. ಇಲ್ಲಿನ ನೀರಾವರಿ ಸೌಲಭ್ಯಗಳನ್ನು ಸಮರ್ಥವಾಗಿ ಬಳಸಿಕೊಳ್ಳುವುದಕ್ಕೆ ಅವರಿಗೆ ತಕ್ಷಣ ಸಾಧ್ಯವಾಗುವುದಿಲ್ಲ ಎಂದು ಅವನು ಚಿಂತಿಸುತ್ತಿದ್ದ.

ಜನರ ವಲಸೆ ಆರಂಭವಾದಾಗಿನಿಂದ ಈ ಇಡೀ ಪ್ರದೇಶದ ಕೊಯಿಲು, ಬಿತ್ತನೆ ಮೊದಲಾದ ಕೆಲಸಗಳೆಲ್ಲವೂ ಅಸ್ತವ್ಯಸ್ತಗೊಂಡಿದ್ದವು. ಮುಂದಿನ ಬೆಳೆ ವಿಳಂಬವಾಗುವುದರಿಂದ ಆಹಾರದ ತೀವ್ರ ಕೊರತೆ ಎದುರಾಗಲಿತ್ತು. ನಿರಾಶ್ರಿತರ ವಲಸೆ ಹೆಚ್ಚುತ್ತಲೇ ಇದ್ದುದರಿಂದ ಇದನ್ನು ತಪ್ಪಿಸಲು ಬರುವಂತಿರಲಿಲ್ಲ.

ಪ್ರತಿಯೊಬ್ಬರೂ ಒಂದಲ್ಲ ಒಂದು ನಷ್ಟಕ್ಕೆ ಗುರಿಯಾಗಿದ್ದರು. ಅಮೃತಸರದಲ್ಲಿ ನೆಲೆಸಿದ್ದ ಒಬ್ಬ ಶ್ರೀಮಂತ ಮುಸ್ಲಿಂ ಮಹಿಳೆಯ ಮನೆಯ ಭಾಗ ಭಾರತಕ್ಕೆ ಸೇರಿಹೋದ್ದರಿಂದ ತನ್ನ ಅಮೂಲ್ಯ ಆಭರಣಗಳನ್ನೆಲ್ಲ ಬಾವಿಗೆ ಹಾಕಿ ಗಡಿದಾಟಿ ಪಾಕಿಸ್ತಾನಕ್ಕೆ ಬಂದಿದ್ದಳು. ಅನಂತರ ಯಾರಾದರೊಬ್ಬ ಮುಳುಗುಗಾರ ಸಿಕ್ಕರೆ ಆ ಸ್ಥಳಕ್ಕೆ ಹೋಗಿ ಆಭರಣಗಳನ್ನು ತೆಗೆದುಕೊಂಡು ಬರಬೇಕೆಂದು ಹುಚ್ಚಿಯಂತೆ ಪರದಾಡುತ್ತಿದ್ದಳು. ಒಬ್ಬಾತ ಕುದುರೆ ತಳಿ ಬೆಳೆಸುವುದರಲ್ಲಿ ನಿಷ್ಣಾತ, ಅವನು ದೇಶದಲ್ಲಿಯೇ ಅತ್ಯುತ್ತಮವಾದ ಕುದುರೆ ತಳಿಗಳನ್ನು ನಿರ್ಮಿಸಿದ್ದ. ವಿಭಜನೆಯ ನಂತರ ಆತ ಪಾಕಿಸ್ತಾನದಲ್ಲಿ ಉಳಿದ. ಆತನ ಬಳಿ ಹೆಣ್ಣುಕುದುರೆಗಳು ಮಾತ್ರ ಉಳಿದವು. ಪ್ರತಿ ಬೇಸಿಗೆಯಲ್ಲಿಯೂ ಬೀಜದ ಕುದುರೆಗಳನ್ನು ಮೇಯುವುದಕ್ಕಾಗಿ ಕಾಶ್ಮೀರದ ಬೆಟ್ಟದ ತಪ್ಪಲಲ್ಲಿ ಬಿಡುವುದು ಅವನ ಪದ್ಧತಿಯಾಗಿತ್ತು. ಈಗ ಆ ಭಾಗವೆಲ್ಲ ಭಾರತಕ್ಕೆ ಸೇರಿದ್ದರಿಂದ ಬೀಜದ ಕುದುರೆಗಳು ಭಾರತದಲ್ಲೇ ಉಳಿದವು. ಕಾಶ್ಮೀರದ ಆ ಭಾಗದಲ್ಲಿ ಮುಸ್ಲಿಮರ ಸಂಖ್ಯೆ ಹೆಚ್ಚಾಗಿತ್ತಾದ್ದರಿಂದ ಆ ಭಾಗ ಭಾರತಕ್ಕೆ ಸೇರಬಹುದೆಂಬ ಊಹೆಯೂ ಆತನಿಗಿರಲಿಲ್ಲ.

ಹೀಗೆ ಸಮಸ್ಯೆಗಳು ಹೆಚ್ಚುತ್ತಲೇ ಇದ್ದವು. ಪಾಕಿಸ್ತಾನದ ಬ್ಯಾಂಕುಗಳ ಕೆಲಸ ನಿಂತುಹೋಗಿತ್ತು. ಬ್ಯಾಂಕಿನ ಗುಮಾಸ್ತರೆಲ್ಲ ಹಿಂದೂಗಳು. ಹೀಗಾಗಿ ಅವರು ಭಾರತಕ್ಕೆ ಹೋಗಿಬಿಟ್ಟರು. ಇಡೀ ಅಂಗಡಿ ಬೀದಿಗಳು ನಿರ್ಜನವಾಗಿದ್ದವು. ಅಂಗಡಿಗಳೆಲ್ಲ ಬಹುತೇಕವಾಗಿ ಹಿಂದೂಗಳಿಗೆ ಸೇರಿದ್ದವು. ಅವರು ನಗದು ಹಣ ತೆಗೆದುಕೊಂಡು ಭಾರತಕ್ಕೆ ಹೋದರು. ಹತ್ತಿ ಮಾರಾಟದ ಕೇಂದ್ರ ಕಟ್ಟಡ ಈಗ ಬಿಕೋ ಎನ್ನುತ್ತಿತ್ತು. ಹತ್ತಿಯ ದಲ್ಲಾಳಿಗಳೆಲ್ಲ ಹಿಂದೂಗಳು. ಸುಮಾರು ಮನ್ನೂರು ಮಂದಿ ಬ್ರೋಕರುಗಳಲ್ಲಿ ಕೇವಲ ಹತ್ತುಮಂದಿಯನ್ನು ಬಿಟ್ಟು ಉಳಿದವರೆಲ್ಲ ಭಾರತಕ್ಕೆ ಪಲಾಯನ ಮಾಡಿದ್ದರು. ಪಾಕಿಸ್ತಾನದ ಬಂಗಾರದ ಎಳೆ ಎಂದು ಪ್ರಸಿದ್ಧವಾಗಿದ್ದ ಸೆಣಬಿನ ಸಂಪತ್ತೆಲ್ಲವೂ ಕೊಳ್ಳುವವರಿಲ್ಲದೆ ಗಡಿಪ್ರದೇಶದಲ್ಲಿ ರಾಶಿರಾಶಿಯಾಗಿ ಬಿದ್ದಿತ್ತು. ಏಕೆಂದರೆ ಸೆಣಬಿನ ಗಿರಣಿಗಳು ಭಾರತದಲ್ಲಿದ್ದವು. ಉಕ್ಕಿನ ಗಿರಣಿಗಳು ಭಾರತದಲ್ಲಿದ್ದವು. ಪಾಕಿಸ್ತಾನದಲ್ಲಿ ಒಂದೇ ಒಂದು ಬೆಂಕಿಪೊಟ್ಟಣದ ಕಾರ್ಖಾನೆ ಇರಲಿಲ್ಲ. ಇದಕ್ಕೆ ಪ್ರತಿಯಾಗಿ ಭಾರತದಲ್ಲಿದ್ದ ತೊಗಲು ಕೆಲಸಗಾರರು, ಬಟ್ಟೆ ಹೊಲಿಯುವವರು, ಮೆಕ್ಯಾನಿಕ್‌ಗಳು, ಎಲೆಕ್ಟ್ರಿಶಿಯನ್‌ಗಳೆಲ್ಲ ಮುಸ್ಲಿಮರಾಗಿದ್ದು ಅವರೆಲ್ಲ ಭಾರತ ಬಿಟ್ಟು ಹೋಗಿದ್ದರು. ಇದರಿಂದ

ಟೆಲಿಫೋನ್ ಜಾಲಕ್ಕೆ ಬಹಳ ಧಕ್ಕೆಯಾಗಿತ್ತು. ಡಯಲ್‌ಫೋನುಗಳನ್ನು ರಿಪೇರಿ ಮಾಡುವವರೇ ಇಲ್ಲವಾಗಿತ್ತು. ನಗರಗಳ ನಡುವೆ ಸಂಪರ್ಕ ಅತ್ಯಂತ ಕಷ್ಟವಾಯಿತು.

ನಾನು ಭಾರತಕ್ಕೆ ಸ್ವಾತಂತ್ರ್ಯ ಸಿಗುವ ಒಂದೂವರೆ ವರ್ಷದ ಮೊದಲು ಬಂದವಳು. ಆಗಿನಿಂದಲೂ ಅಧಿಕಾರಕ್ಕಾಗಿ ನಿರಂತರ ಹೋರಾಟ ನಡೆಯುವುದನ್ನು ನೋಡುತ್ತಲೇ ಇದ್ದೆ. ಅಂತಿಮವಾಗಿ ಸ್ವತಂತ್ರವಾದ, ಒಂದು ಏಕೀಕೃತ ರಾಷ್ಟ್ರದ ಬದಲಿಗೆ ಅಂಗವಿಕಲವಾದ ಅವಳಿ ಜವಳಿಗಳು ಹುಟ್ಟಿದ್ದವು. ಜಗಳದ ಆರಂಭದಲ್ಲಿಯೇ ರಕ್ತಪಾತ ಶುರುವಾಗಿತ್ತು. ಪಾಕಿಸ್ತಾನಕ್ಕಾಗಿ ಹೋರಾಡುವವರು ನಮಗೆ ಪ್ರತ್ಯೇಕ ರಾಷ್ಟ್ರಬೇಕು; ಇಲ್ಲದಿದ್ದರೆ ನಾವು ಶಾಂತಿಯಿಂದಿರಲು ಸಾಧ್ಯವಿಲ್ಲ ಎಂದು ಹೇಳುತ್ತಲೇ ಇದ್ದರು. ಅಂತೂ ಅವರ ಪ್ರತ್ಯೇಕ ರಾಷ್ಟ್ರದ ಕನಸು ನನಸಾಗಿತ್ತು. ಆದರೆ ಜನಕ್ಕೆ ಶಾಂತಿ ಸಿಗಲಿಲ್ಲ. ತಾವು ಸಾಧಿಸಿದ್ದೇನು ಎಂಬುದು ಇಷ್ಟು ಬೇಗ ಅವರಿಗೆ ಗೊತ್ತಾಗುವುದು ಸಾಧ್ಯವಿರಲಿಲ್ಲ. ಮುಸಲ್ಮಾನರ ಪಾಕಿಸ್ತಾನ ಹೀಗಿರುತ್ತೆ ಎಂದು ಯಾರಿಗೆ ಗೊತ್ತಿತು ಎಂದು ಈ ವಲಸೆಯಲ್ಲಿ ಬೇಸತ್ತು ಹೋಗಿದ್ದ ಒಬ್ಬ ಮುಸ್ಲಿಂ ವ್ಯಕ್ತಿ ಹೇಳುತ್ತಿದ್ದ.

ನಮಗೆ ಸಿಖ್‌ಸ್ತಾನ ಸಿಗುತ್ತದೆ ಎಂದು ಹೇಳುತ್ತಿದ್ದ ಸಿಖ್ಖರು ಈಗ ಅಷ್ಟೆಲ್ಲ ತಾವು ಹಸನು ಮಾಡಿಟ್ಟಿದ್ದ ಭೂಮಿಯನ್ನು ಬಿಟ್ಟುಬರುವಾಗ ನಮಗೆ ಸುಖವೆಂಬುದು ಇನ್ನು ಕನಸೇ ಸರಿ ಎಂದರು. ಗಡ್ಡಪೇಟಗಳಿಗೆಲ್ಲ ದಟ್ಟವಾಗಿ ಧೂಳು ಮೆತ್ತಿಕೊಂಡಿದ್ದರೂ ಒಂದಿಷ್ಟೂ ಬೇಸರಿಸದೆ ಆತ್ಮಗೌರವದಿಂದ ಇದ್ದ ಒಬ್ಬ ಸಿಖ್ ವ್ಯಕ್ತಿ ಹೇಳಿದ ಮಾತು ನನಗಿನ್ನೂ ನೆನಪಿದೆ. ಆತ ಹೇಳಿದ "ಈ ಮುಸಲ್ಮಾನರ ಭವಿಷ್ಯವೂ ಕೂಡ ಅಂಧಕಾರಮಯವಾಗಿದೆ. ಅವರೂ ನಮ್ಮಂತೆಯೇ ನಿಸ್ಸಹಾಯಕರು. ನಮ್ಮಂತೇ ಅವರೂ ತಮ್ಮ ಮನೆ ಮಾರುಗಳನ್ನು ಕಳೆದು ಕೊಂಡಿದ್ದಾರೆ. ನಮ್ಮ ಹಾಗೇ ಅವರೂ ದುರದೃಷ್ಟದ ಬಲಿಪಶುಗಳು."

❑

ಅಧ್ಯಾಯ ೨

ಕಲ್ಕತ್ತೆಯಲ್ಲಿ ಪ್ರತ್ಯಕ್ಷ ಕದನ

ಈ ಭಯಾಕನ ವಲಸೆ ಯಾಕೆ ನಡೆಯಿತು? ಸಹಸ್ರಾರು ಜನರನ್ನು ಅವರ ಪೂರ್ವಿಕರ ನೆಲೆಗಳಿಂದ ಬಲಾತ್ಕಾರವಾಗಿ ಎಬ್ಬಿಸಿ ಯಾವುದೋ ಗೊತ್ತಿಲ್ಲದ ಮತ್ತು ಯಾರಿಗೂ ಬೇಡದ ಈ ಭರವಸೆಯ ನಾಡಿಗೆ ಓಡಿಸಿದ್ದು ಯಾಕೆ? ಬ್ರಿಟಿಷರ ಆಳ್ವಿಕೆಯಿಂದ ವಿಮೋಚನೆ ಪಡೆಯುವುದಕ್ಕಾಗಿ ಹಿಂದೂಗಳು ಮುಸ್ಲಿಮರು ಅನೇಕ ವರ್ಷಗಳಿಂದ ಜೊತೆಜೊತೆಯಾಗಿ ನಿಂತು ಹೋರಾಡಿದ್ದರು. ಇನ್ನೇನು ಸ್ವಾತಂತ್ರ್ಯ ಕೈಗೆ ಸಿಕ್ಕಿತು ಎನ್ನುವಾಗ ಭಾರತ ಧಾರ್ಮಿಕ ಕಾರಣಗಳಿಂದ ಹರಿದು ಚೂರಾಯಿತು. ಯಾಕೆ?

ಭಾರತವನ್ನು ಸೀಳುವ ಪ್ರತ್ಯಕ್ಷ ಘಟನೆ ಆರಂಭವಾಗಿದ್ದು ಕಲ್ಕತ್ತದ ಬೀದಿಗಳಲ್ಲಿ. ಆದರೆ ಅದರ ನಿರ್ಣಯವಾಗಿದ್ದು ಮುಂಬೈನಲ್ಲಿ. ಅದು ಒಬ್ಬ ವ್ಯಕ್ತಿಯ ನಿರ್ಧಾರವಾಗಿತ್ತು. ಮತ್ತು ಈ ನಿರ್ಧಾರವನ್ನು ಕೈಗೊಂಡ ವ್ಯಕ್ತಿ ಏನೂ ಆಗಿಲ್ಲವೆಂಬಂತೆ ಶಾಂತವಾಗಿ, ಏನೋ ಲೆಕ್ಕಾಚಾರ ಹಾಕುತ್ತ ವಿರಕ್ತನಂತೆ ಕುಳಿತಿದ್ದ. ಒಂದು ಪ್ರತ್ಯೇಕ ಇಸ್ಲಾಮಿಕ್ ರಾಜ್ಯವನ್ನು ಸ್ಥಾಪಿಸಬೇಕೆಂಬ ಈ ನಿರ್ಧಾರ ನಾವಂದುಕೊಂಡಂತೆ ಯಾರೋ ಒಬ್ಬ ಪುರಾತನ ವೇಷಭೂಷಣದ, ನೀಳಗಡ್ಡದ, ದೈವಾಂಶಸಂಭೂತ ಮುಸ್ಲಿಮನಿಂದ ಬಂದದ್ದಲ್ಲ. ಅದು ಬಂದಿದ್ದು ಇಂಗ್ಲಿಷ್ ಶಿಕ್ಷಣ ಪಡೆದ ಪಾಶ್ಚಾತ್ಯ ವೇಷಭೂಷಣ ಧರಿಸಿದ, ಚೊಕ್ಕವಾಗಿ ಮುಖಕ್ಷೌರ ಮಾಡಿದ, ಅಲುಗಿನಷ್ಟೆ ಹರಿತವಾದ ಬುದ್ಧಿಯುಳ್ಳ ಮತ್ತು ಅಟಾರ್ನಿ ಅಟ್ ಲಾ ಆದ ಒಬ್ಬ ಮುಸ್ಲಿಮನಿಂದ. ಮುಸ್ಲಿಂ ಲೀಗ್‌ನ ನೇತಾರ ಹಾಗೂ ಪಾಕಿಸ್ತಾನದ ರೂವಾರಿ ಮಹಮದ್ ಅಲಿ ಜಿನ್ನಾ ಸ್ವತಂತ್ರ ಏಕೀಕೃತ ಭಾರತಕ್ಕಾಗಿ ಗಾಂಧೀ ನೆಹರೂ ಜೊತೆ ಹೋರಾಟ ಮಾಡಿದ್ದ. ಆದರೆ ಪ್ರತ್ಯೇಕ ಪಾಕಿಸ್ತಾನವನ್ನು ಸಾಧಿಸುವ ಆಕಾಂಕ್ಷೆಯಿಂದ ಆತ ತನ್ನ ಬದುಕಿನ ಕೊನೆಗಾಲದಲ್ಲಿ ಹಿಂದಿನದೆಲ್ಲ ಸಂಪೂರ್ಣ ಮರೆತ. ೧೯೪೮ರ ಸೆಪ್ಟೆಂಬರ ತಿಂಗಳಿನಲ್ಲಿ ತನ್ನ ೭೬ನೇ ವಯಸ್ಸಿನಲ್ಲಿ ಕೊನೆ ಉಸಿರೆಳೆಯುವ ಮೊದಲೇ, ಜಗತ್ತಿನ ಬಹುದೊಡ್ಡ ಇಸ್ಲಾಮಿಕ್ ರಾಷ್ಟ್ರದ ನೇತಾರನಾಗುವ ಜಿನ್ನಾ ಕನಸು ನನಸಾಯಿತು.

ಭಾರತಕ್ಕೆ ಒಂದು ಅವಿಭಜಿತ ದೇಶವಾಗಿಯೇ ಸ್ವಾತಂತ್ರ್ಯ ದೊರಕುವ ನಿರೀಕ್ಷೆ ಇನ್ನೇನು ಕೈಗೂಡುವುದರಲ್ಲಿದ್ದಾಗ ಕನಸುಗಳನ್ನೆಲ್ಲ ನುಚ್ಚುನೂರು ಮಾಡುವಂತಹ ನಿರ್ಣಯವನ್ನು ಜಿನ್ನಾ ಯಾವಾಗ ಕೈಗೊಂಡನೋ ಬಹಶಃ ಆ ಕ್ಷಣವೇ ಆತನ ಅಧಿಕಾರದ ಪರಾಕಾಷ್ಠ ಸ್ಥಿತಿ ಎಂದು ನನಗನ್ನಿಸುತ್ತದೆ. ಜಿನ್ನಾ ತೀರಿಕೊಳ್ಳುವುದಕ್ಕೆ ಸರಿಯಾಗಿ ಎರಡು ವರ್ಷಗಳ ಮೊದಲು ಇಂತಹ ಒಂದು ನಿರ್ಣಯವನ್ನು ಕೈಗೊಂಡಿದ್ದ.

೧೯೪೬ರ ಜುಲೈ ಕೊನೆಯ ಭಾಗದಲ್ಲಿ ಮಲಬಾರ್ ಹಿಲ್‌ನ ಮೇಲಿದ್ದ ತನ್ನ ಗೃಹದಲ್ಲಿ ಜಿನ್ನಾ ಒಂದು ಪತ್ರಿಕಾಗೋಷ್ಠಿ ಕರೆದ. ಈ ಪತ್ರಿಕಾಗೋಷ್ಠಿ ಅದುವರೆಗಿನ ಇತಿಹಾಸವನ್ನೇ ತಿರುವುಮುರುವು ಮಾಡಿತ್ತು. ಕ್ವಾದೇ-ಇ-ಅಜಂ ಅಥವಾ ಮಹಾನ್ ನಾಯಕ ಪತ್ರಿಕಾಗೋಷ್ಠಿ ಕರೆಯುವುದೇ ಅಪರೂಪ. ಹಾಗೆಂದೇ ವಿದೇಶೀ ಹಾಗೂ ಸ್ವದೇಶೀ ಪತ್ರಕರ್ತರೆಲ್ಲ ತರಾತುರಿಯಿಂದ ಪತ್ರಿಕಾಗೋಷ್ಠಿಗೆ ಧಾವಿಸಿ ಬಂದಿದ್ದರು. ಹೀಗೆ ಬಂದಿದ್ದಕ್ಕೂ ಸಾರ್ಥಕ ಎನಿಸುವಂಥ ಭಾರೀ ಸುದ್ದಿಯೇ ಅವರಿಗೆ ಸಿಕ್ಕಿತು. ಪ್ರತ್ಯಕ್ಷ ಹೋರಾಟದ ದಿನ ಬರುತ್ತದೆ ಎಂದು ಜಿನ್ನಾ ದಿಟ್ಟವಾಗಿ ಘೋಷಿಸಿದರು. ಸರಿಯಾಗಿ ಇದಾದ ಎರಡು ವಾರಗಳ ನಂತರ ನಡೆದ ಒಂದು ಘಟನೆಯು, ಮುಂದಿನ ಹನ್ನೆರಡು ತಿಂಗಳು ಕಾಲ ನಡೆದ ಭಾರೀ ಧಾರುಣವಾದ ಕ್ಷೋಭೆ, ಗಲಭೆಗಳಿಗೆ ನಾಂದಿಯಾಯಿತು. ಅದು ಕೊನೆಗೊಂಡಿದ್ದು ಭಾರತದ ವಿಭಜನೆಯಲ್ಲಿ ಹಾಗೂ ಹೇಳತೀರದಷ್ಟು ಹಿಂಸಾತ್ಮಕ ತಲ್ಲಣ ತುಂಬಿದ ಜನವಲಸೆಯಲ್ಲಿ. ಅಲ್ಲಿಯತನಕ ನಾವೆಲ್ಲ ಕಾಂಗ್ರೆಸ್ ಪಕ್ಷ ಮತ್ತು ಮುಸ್ಲಿಂ ಲೀಗ್ ನಡುವಿನ ಈ ಭಿನ್ನಾಭಿಪ್ರಾಯವು ಹೇಗೋ ಪರಿಹಾರವಾಗಿ ಬಿಡುತ್ತದೆ ಮತ್ತು ಸ್ವಾತಂತ್ರ್ಯದ ನಂತರ ಅವಿಭಜಿತ ಭಾರತ ಅಸ್ತಿತ್ವಕ್ಕೆ ಬರುತ್ತದೆ ಎಂದೇ ಅಂದುಕೊಂಡಿದ್ದೆವು. ಈ ವಿಭಜನೆಯ ಪರವಾಗಿ ಜಿನ್ನಾ ವಾದವೇನು ಎಂಬುದು ಎಲ್ಲರಿಗೂ ಗೊತ್ತಿತ್ತು. ಆತನ ಪ್ರಕಾರ ಭಾರತದಲ್ಲಿ ಹಿಂದೂಗಳ ಸಂಖ್ಯೆ ಪ್ರತಿ ಒಬ್ಬ ಮುಸ್ಲಿಮನಿಗೆ ಮೂರರಷ್ಟಿದೆ. ಹಿಂದೂ ಪ್ರಾಬಲ್ಯವು ಮುಸ್ಲಿಮರನ್ನು ಹೊಸಕಿಹಾಕುತ್ತದೆ. ಹಿಂದೂಗಳು ಹಸುವನ್ನು ಪೂಜಿಸುತ್ತಾರೆ. ಆದರೆ ಮುಸ್ಲಿಮರು ಅದನ್ನು ತಿನ್ನುತ್ತಾರೆ. ಧರ್ಮ, ಪದ್ಧತಿ, ಸಂಸ್ಕೃತಿ ಈ ಎಲ್ಲ ದೃಷ್ಟಿಯಿಂದಲೂ ಹಿಂದೂಗಳು ಮತ್ತು ಮುಸ್ಲಿಮರು ಭಿನ್ನ. ಇದು ಜಿನ್ನಾ ನಿಲುವಾದರೆ, ಎರಡು ರಾಷ್ಟ್ರಗಳ ಸಿದ್ಧಾಂತವನ್ನು ವಿರೋಧಿಸುತ್ತಿದ್ದವರದು ಇನ್ನೊಂದು ರೀತಿಯ ನಿಲುವು. ಅವರ ಪ್ರಕಾರ, ಹಿಂದೂ ಮುಸ್ಲಿಮರ ನಡುವೆ ಯಾವುದೇ ಜನಾಂಗೀಯ ಭೇದವಿಲ್ಲವಾದ್ದರಿಂದ ಅವರಲ್ಲಿ ಒಡಕು ಮೂಡುವ ಸಾಧ್ಯತೆ ಕಡಿಮೆ. ಭಾರತದಲ್ಲಿರುವ ೯೫% ಮುಸ್ಲಿಮರೆಲ್ಲ ಮತಾಂತರಗೊಂಡ ಹಿಂದೂಗಳೇ ಆಗಿದ್ದಾರೆ. ಇದಕ್ಕಿಂತ ಮುಖ್ಯವಾಗಿ ಜಿನ್ನಾ ಅವರ ಅಜ್ಜ ಹಿಂದೂ ಆಗಿದ್ದ ಎಂಬ ಅಂಶವನ್ನು ಅವರು ಎತ್ತಿ ಹೇಳಲು ಮರೆಯುತ್ತಿರಲಿಲ್ಲ. ಇಂತಹ ಒಂದು ನಿರ್ಣಾಯಕ ಘಟ್ಟದಲ್ಲಿ, ಭಾರತದ ಫ್ಯೂಡಲಿಸ್ಟ್ ಶಕ್ತಿಗಳ ವಿರುದ್ಧ ದೃಢಕ್ರಮ ಕೈಗೊಳ್ಳಲು ವಿಫಲರಾಗಿದ್ದೇ ಭಾರತದ ನೇತಾರರ ಒಂದು ದೊಡ್ಡ ದೌರ್ಬಲ್ಯ. ಬರಿಯ ಘೋಷಣೆಗಳಿಂದಲೇ ಜನರನ್ನು ಸಂಮೋಹಗೊಳಿಸುವ ಶಕ್ತಿಗೆ ಇದ್ದ ವ್ಯಕ್ತಿಗೆ ಶತಮಾನಗಳಿಂದ ಜನರಲ್ಲಿ ಮಡುಗಟ್ಟಿಕೊಂಡು ಬಂದಿದ್ದ ನೋವು ಸಂಕಷ್ಟಗಳನ್ನು ಒಂದು ಧಾರ್ಮಿಕ ವಿದ್ವೇಷವಾಗಿ ಪರಿವರ್ತಿಸುವುದಕ್ಕೆ ಯಾವ ಕಷ್ಟವೂ ಆಗಲಿಲ್ಲ. ಪಾಶ್ಚಾತ್ಯ ಶೈಲಿಯ ಉಡುಗೆತೊಡುಗೆ ಹಾಗೂ ಆಧುನಿಕ ನಡವಳಿಕೆಗಳ ಮಹತ್ವಾಕಾಂಕ್ಷೀ ವಕೀಲನೊಬ್ಬ ಧರ್ಮವನ್ನು ಬ್ರೀಫ್‌ಕೇಸಿನಿಂದ ಒಂದು ದಸ್ತಾವೇಜನ್ನು ತೆಗೆದು ತೋರಿಸುವ ರೀತಿಯಲ್ಲಿ ಬಳಸಿಕೊಂಡಿದ್ದ.

ಆ ಮಧ್ಯಬೇಸಿಗೆಯ ಮುಂಜಾನೆ ಪತ್ರಿಕಾಗೋಷ್ಠಿ ಕರೆದಿದ್ದ ಜಿನ್ನಾ ಯಾರ ಮೇಲಾದರೂ ಪ್ರಭಾವ ಬೀರುವಂಥ ವ್ಯಕ್ತಿತ್ವ ಹೊಂದಿದ್ದವನೇ. ಆತ ಮನೆಯ ವಿಶಾಲವಾದ ವರಾಂಡದಲ್ಲಿ

ನಿಂತುಕೊಂಡು ವರದಿಗಾರರನ್ನು ಬರಮಾಡಿಕೊಳ್ಳುತ್ತಿದ್ದ. ಶಿಸ್ತಾಗಿ ಹೊಲೆದಿದ್ದ ಸೂಟು, ಟೈ, ಸಾಕ್ಸ್‌ಗಳಲ್ಲಿ ಕಂಗೊಳಿಸುತ್ತಿದ್ದ ಅವನ ಸರ್ವವೇಷಭೂಷಣವೂ ಅವನ ತಲೆಗೂದಲಿಗೆ ಮ್ಯಾಚ್ ಆಗುವಂತಿತ್ತು. ಆತ ನಮ್ಮೊಂದಿಗೆ ನಡೆದುಕೊಳ್ಳುತ್ತಿದ್ದ ರೀತಿ ಸೌಹಾರ್ದಯುತವಾಗಿದ್ದರೂ ಔಪಚಾರಿಕವಾಗಿತ್ತು. ಒಂಟಿ ಗಾಜಿನ ಕನ್ನಡಕವನ್ನು ಕಣ್ಣಿಗೆ ಸಿಕ್ಕಿಸಿಕೊಂಡು ಆತ ಭಾಷಣ ಶುರು ಮಾಡುತ್ತಿದ್ದಂತೆ ಪ್ರಜ್ಞಾಪೂರ್ವಕವಾಗಿ ಆತ ಏನೋ ಅಭಿನಯ ಮಾಡುತ್ತಿದ್ದಾನೆ ಎಂದು ತೋರುತ್ತಿತ್ತು. ಹಿಂದೆ ಆತ ಇಂಗ್ಲೆಂಡಿನಲ್ಲಿದ್ದಾಗ ಷೇಕ್ಸ್‌ಪಿಯರನ ನಾಟಕಗಳಲ್ಲಿ ಅಭಿನಯಿಸುತ್ತಿದ್ದ. ಆದರೆ ಅದು ಆತನ ಬದುಕಿನ ಇಸ್ಲಾಮೇತರ ಅಧ್ಯಾಯ.

ಪತ್ರಿಕಾಗೋಷ್ಠಿಯಲ್ಲಿ ಆತನ ಮಾತು ಸ್ವಗತ ಭಾಷಣದಂತಿತ್ತು. ಮಂಜುಗಡ್ಡೆಯಷ್ಟು ತಣ್ಣಗಿದ್ದ ಆತನ ದನಿಯಲ್ಲಿ ಮುಂದೆ ಬರಲಿರುವ ಉರಿಬೆಂಕಿಯಂತಹ ಘಟನೆಗಳ ಸೂಚನೆಯಿತ್ತು. 'ನಾವು ಒಂದು ಹೋರಾಟವನ್ನು ಆರಂಭಿಸಲು ಸಿದ್ಧತೆ ನಡೆಸಿದ್ದೇವೆ. ಅದರ ರೂಪುರೇಷೆಗಳನ್ನು ಸಿದ್ಧಪಡಿಸಲಾಗಿದೆ' ಎಂದು ಜಿನ್ನಾ ಹೇಳಿದರು. ಬಹು ರಹಸ್ಯವಾದ ವಿಚಾರವೊಂದನ್ನು ಕುತೂಹಲ ಕೆರಳಿಸುವ ರೀತಿಯಲ್ಲಿ ಹೊರಗೆಡಹುವಂತೆ ಆತ ಹೇಳುತ್ತಿದ್ದುದನ್ನು ಕೇಳಿಸಿಕೊಳ್ಳುವುದಕ್ಕಾಗಿ ನಾವು ಆತನ ಸಮೀಪವೇ ಕುಳಿತಿದ್ದರೂ ಉಸಿರಾಟದ ಸದ್ದೂ ಮಾಡದಷ್ಟು ಮೌನವಾಗಿದ್ದೆವು. ಆತ ಕಾನ್‌ಸ್ಟಿಟ್ಯೂಯೆಂಟ್ ಅಸೆಂಬ್ಲಿಯನ್ನು ಬಾಯ್ಕಾಟ್ ಮಾಡಲು ನಿರ್ಧರಿಸಿರುವುದಾಗಿ ತಿಳಿಸಿದ. ಲೀಗ್ ಮತ್ತು ಕಾಂಗ್ರೆಸ್‌ಗಳೆರಡನ್ನೂ ಒಳಗೊಂಡ ಒಂದು ಮಧ್ಯಂತರ ಸರ್ಕಾರಕ್ಕೆ ಅಧಿಕಾರವನ್ನು ಹಸ್ತಾಂತರ ಮಾಡಬೇಕೆಂದಿರುವ ಬ್ರಿಟಿಷ್ ಯೋಜನೆಯನ್ನು ಸಾರಾಸಗಟಾಗಿ ತಿರಸ್ಕರಿಸುತ್ತಿದ್ದೇವೆ ಎಂದ. 'ಹಿಂದೂಗಳದೇ ಮೇಲುಗೈಯಾಗಿರುವ ಕಾಂಗ್ರೆಸ್‌ನ ವಿರುದ್ಧ ಆತ ತನ್ನ ವಾಕ್‌ಪ್ರವಾಹವನ್ನು ಹರಿಯಬಿಟ್ಟಾಗ ಆತನ ದನಿ ಯಾವುದೇ ಏರಿಳಿತಗಳಿಲ್ಲದೆ ಭಾವನಾರಹಿತವಾಗಿತ್ತು. ಬ್ರಿಟಿಷರ ದಾಸ್ಯ ಕೊನೆಗೊಳ್ಳುತ್ತ ಬಂದ ಈ ಘಟ್ಟದಲ್ಲಿ ಅವರ ಧಾಳಿಯೆಲ್ಲಾ ವಿರೋಧ ಪಕ್ಷದ ಕಡೆಗೆ ತಿರುಗಿರುವುದು ಸ್ಪಷ್ಟವಾಗಿ ಗೊತ್ತಾಗುತ್ತಿತ್ತು. ನಮ್ಮನ್ನು ನಾವು ರಕ್ಷಿಸಿಕೊಳ್ಳುವ ದೃಷ್ಟಿಯಿಂದ ಸಂವಿಧಾನಿಕ ವಿಧಾನಗಳನ್ನು ಮೀರುವ ಅನಿವಾರ್ಯತೆ ಒದಗಿದೆ. ನಾವು ಈಗ ಕೈಗೊಂಡಿರುವ ನಿರ್ಣಯ ಬಹಳ ಗಂಭೀರವಾದುದು. ಮುಸ್ಲಿಮರಿಗೆ ಪ್ರತ್ಯೇಕ ಪಾಕಿಸ್ತಾನವನ್ನು ಕೊಡದಿದ್ದರೆ ಅವರು ನೇರ ಹೋರಾಟಕ್ಕಿಳಿಯುತ್ತಾರೆ. "ನೇರ ಹೋರಾಟ" ಎಂಬ ನುಡಿಗಟ್ಟು ಕೇಳುತ್ತಿದ್ದಂತೆ ನಮ್ಮ ಕಿವಿಗಳು ನೆಟ್ಟಗಾದವು. ಈ ನೇರ ಹೋರಾಟ ಯಾವ ರೀತಿಯದು ಎಂಬುದೇ ನಮ್ಮೆಲ್ಲರ ಕುತೂಹಲವನ್ನು ಕೆಣಕಿದ ಸಂಗತಿ. 'ಹೋಗಿ ಕಾಂಗ್ರೆಸ್ಸಿನವರನ್ನು ಕೇಳಿ, ಅವರ ಯೋಜನೆಗಳೇನಿವೆಯೋ ಕೇಳಿ' ಎಂದು ಜಿನ್ನಾ ಅಬ್ಬರಿಸಿದ. ಅವರು ನಿಮ್ಮಲ್ಲಿ ವಿಶ್ವಾಸವಿರಿಸಿದರೆ ನಾನೂ ನಿಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತೇನೆ ಎಂದ. ಒಂದು ಕ್ಷಣ ಸಂಪೂರ್ಣ ನೀರವ, ನಿಶ್ಶಬ್ದ. ಮನೆಯ ಮುಂದಿನ ಹಸಿರು ಹುಲ್ಲುಹಾಸಿನ ಮೇಲೆ ಗುಟುಕರಿಸುತ್ತಿದ್ದ ಪಾರಿವಾಳಗಳ ಸದ್ದು ಮಾತ್ರ ಕೇಳುತ್ತಿತ್ತು. ತಾನು ಹೇಳುವ ವಿಷಯಕ್ಕೆ ಏನೇನೂ ಹೊಂದಿಕೆಯಾಗದ ದನಿಯಲ್ಲಿ ಜಿನ್ನಾ ಮತ್ತೆ ತನ್ನ ಮಾತನ್ನು ಮುಂದುವರೆಸಿದ. 'ನಾನೊಬ್ಬನೇ ಕೈಯೊಡ್ಡಿ ಕೇಳಿಕೊಳ್ಳಬೇಕು ಎಂದು ನೀವೂ ಯಾಕೆ ನಿರೀಕ್ಷಿಸುತ್ತೀರಿ? ನನಗೂ ಕೂಡ ತೊಂದರೆ ಕೊಡಲು ಬರುತ್ತದೆ' ಎಂದು ಮಾತು ಮುಗಿಸಿದ.

ಮಾರನೇ ದಿನ ಕ್ವೈದೇ-ಇ-ಆಜಂ, ಮುಸ್ಲಿಂ ಜನಸಮುದಾಯದೆದುರು ಭಾಷಣ ಮಾಡುವುದಕ್ಕಾಗಿ ಡಬಲ್‌ಬ್ರೆಸ್ಟೆಡ್ ಸೂಟ್‌ನ ವೇಷ ಬದಲಾಯಿಸಿ ಮುಸ್ಲಿಂ ವೇಷ ಹಾಕಿಕೊಂಡ. ತಲೆಯ ಮೇಲೊಂದು ತುರ್ಕಿಟೋಪಿ. ಜಿನ್ನಾನ ದೊಡ್ಡದೊಡ್ಡ ಭಾವಚಿತ್ರಗಳು ವೇದಿಕೆ ಯನ್ನಲಂಕರಿಸಿದ್ದವು. ಇಂದಿನಿಂದ ಇನ್ನು ಎರಡು ವಾರಕ್ಕೆ ಸರಿಯಾಗಿ ಅಂದರೆ ಆಗಸ್ಟ್ ೧೬, ನೇರ ಹೋರಾಟದ ದಿನ ಎಂದು ಘೋಷಿಸಿದ ಜಿನ್ನಾ ಕಾಂಗ್ರೆಸಿನ ವಿರುದ್ಧ ದೋಷಾರೋಪಣೆಗಳ ಸುರಿಮಳೆ ಸುರಿಸಿದ. ನಿಮಗೆ ಶಾಂತಿಬೇಕಿದ್ದರೆ ನಾವು ಯುದ್ಧ ಮಾಡುವುದಿಲ್ಲ ಎಂದು ಪ್ರಕಟಿಸಿದ. ನಿಮಗೆ ಯುದ್ಧ ಬೇಕಿದ್ದರೆ ನಾವು ಯಾವುದೇ ಹಿಂಜರಿಕೆಯಿಲ್ಲದೆ ಯುದ್ಧದ ಆಹ್ವಾನವನ್ನು ಸ್ವೀಕರಿಸುತ್ತೇವೆ. ನಮಗೆ ಬೇಕಿರುವುದು Divided India ಇಲ್ಲವೇ Destroyed India. ಈ ಮಾತುಗಳನ್ನು ಕೇಳುತ್ತಿದ್ದಂತೆ ಮುಸ್ಲಿಂ ಬೆಂಬಲಿಗರು ಆಸನಗಳ ಮೇಲೆ ಕುಪ್ಪಳಿಸಿದರು. ತುರ್ಕಿ ಟೋಪಿಗಳು ಗಾಳಿಯಲ್ಲಿ ಹಾರಾಡಿದವು.

ಈಗ ಅದು ರಾಜಕಾರಣಿಗಳ ನಡುವಿನ ಯುದ್ಧವಾಗಿತ್ತು. ಎರಡೂ ಪಕ್ಷಗಳ ನಡುವೆ ಪರಸ್ಪರ ದೋಷಾರೋಪಣ ಪತ್ರಗಳ ವಿನಿಮಯವಾಯಿತು. ಕಾಂಗ್ರೆಸ್‌ನಲ್ಲಾಗಲೀ ಲೀಗ್ ನಲ್ಲಾಗಲೀ ಸಹಿಷ್ಣುತೆಯ ಮಾತೇ ಇರಲಿಲ್ಲ. ದೋಷಾರೋಪಣೆಯ ಕೆಂಡದಂಥ ಮಾತುಗಳು ಭಾರತೀಯರ ಮೇಲೆ ಭಯಂಕರ ಪರಿಣಾಮ ಉಂಟುಮಾಡಿದವು. ನಿರ್ಣಾಯಕವಾದ ಆ ಹದಿನೈದು ದಿನಗಳಲ್ಲಿ ಭಾವೋದ್ರೇಕದ ಉನ್ಮಾದ ಬೆಳೆಯುತ್ತಾ ಹೋಯಿತು. ಭೀತಿ ಮತ್ತು ವಿನಾಶದ ಮುನ್ಸೂಚನೆಯ ವಾತಾವರಣದಲ್ಲಿ ನೇರ ಹೋರಾಟದ ದಿನ ಉದಯಿಸಿತು.

ನಾನು ತಿಳಿದಿರುವ ಪ್ರಕಾರ ಆ ದಿನದಂದು ನಡೆದ ಎಲ್ಲ ಘಟನೆಗಳೂ ಕಲ್ಕತ್ತದ ಒಂದು ಚಿಕ್ಕ ಟೀ ಅಂಗಡಿಯಿಂದ ಆರಂಭವಾದವು. ಕಲ್ಕತ್ತದಲ್ಲಿ ಭೀಕರ ಗಲಭೆಗಳಾಗುತ್ತಿರುವ ಸುದ್ದಿ ಕೇಳುತ್ತಿದ್ದಂತೆಯೇ ನಾನು ಮುಂಬೈನಿಂದ ವಿಮಾನ ಹತ್ತಿ ನೇರವಾಗಿ ಕಲ್ಕತ್ತಕ್ಕೆ ಬಂದಿಳಿದೆ. ನಗರದ ಮಾಮೂಲು ಜೀವನ ಎಷ್ಟು ಅಸ್ತವ್ಯಸ್ತವಾಗಿತ್ತೆಂದರೆ ಪಾಳುಬಿದ್ದ ಬಜಾರ್ ಜಿಲ್ಲೆಯ ಕೇಂದ್ರ ಸ್ಥಾನಕ್ಕೆ ತಲುಪಲು ಸಾಕಷ್ಟು ಕಾಲ ಹಿಡಿಯಿತು. ನೇರ ಹೋರಾಟವನ್ನು ಕಣ್ಣಾರೆ ಕಂಡವರಲ್ಲಿ ಉಳಿದುಕೊಂಡಿದ್ದ ಏಕೈಕ ವ್ಯಕ್ತಿಯನ್ನು ಹುಡುಕುತ್ತ ಬಂದ ನನಗೆ ಆ ವ್ಯಕ್ತಿ ಅಂದರೆ ನಂದಲಾಲ, ತನ್ನ ಟೀ ಅಂಗಡಿಯ ಮುರುಕು ಅವಶೇಷಗಳ ನಡುವೆ ಕಾಣಿಸಿಕೊಂಡ.

೩೬ ಹ್ಯಾರಿಸನ್ ರಸ್ತೆಯಲ್ಲಿ, ಯಾವಾಗಲೂ ಗಲಭೆಯ ಸಾಧ್ಯತೆ ಇರುವಂತಹ ಸ್ಥಳದಲ್ಲೆ, ನಂದಲಾಲನ "ಈಸ್ಟ್‌ಬೆಂಗಾಲ್ ಕ್ಯಾಬಿನ್" ಇತ್ತು. ಅಲ್ಲಿ ಹಿಂದೂಗಳೇ ಹೆಚ್ಚಾಗಿರುವ ಒಂದು ಮುಖ್ಯರಸ್ತೆಯ ಅಡ್ಡವಾಗಿ ಮುಸ್ಲಿಂ ಅಂಗಡಿಗಳ ಒಂದು ಬೀದಿ ಇದೆ. ನಂದಲಾಲ ಸಾಂಪ್ರದಾಯಿಕ ಉಡುಗೆಯಲ್ಲಿದ್ದ. ಅನೇಕ ಬಂಗಾಳಿಗಳಂತೆ ಅವನು ಸಾಕಷ್ಟು ವಿದ್ಯಾವಂತ ಮತ್ತು ಸ್ವಲ್ಪಮಟ್ಟಿಗೆ ಇಂಗ್ಲಿಷ್‌ನಲ್ಲಿ ಮಾತಾಡುತ್ತಿದ್ದ.

ಮುಂಭಾಗದಲ್ಲಿ ಉದ್ದವಾಗಿ ಚಾಚಿಕೊಂಡ ಒಲೆಯಿರುವ ಈಸ್ಟ್ ಬೆಂಗಾಲ್ ಕ್ಯಾಬಿನ್ ನಮ್ಮ ನೆಡಿಕ್ಸ್ ಸ್ಟ್ಯಾಂಡ್‌ನ ಏಷಿಯಾ ಆವೃತ್ತಿಯಂತಿತ್ತು. ಅದರ ಎದುರಿಗಿದ್ದ ಮಿನರ್ವ

ಬ್ಯಾಂಕಿಂಗ್ ಕಾರ್ಪೊರೇಷನ್ನಿನ ಹಿಂದೂ ಗುಮಾಸ್ತರುಗಳೇ ಈ ಟೀ ಅಂಗಡಿಗೆ ಆಗಾಗ್ಗೆ ಬರುವಂಥ ಗ್ರಾಹಕರು. ಅದೇ ರೀತಿ ಸಮೀಪದಲ್ಲೆ ಇದ್ದ Happy home Boarding Houseನ ಜನರೂ ಸಹ ಈ ಅಂಗಡಿಗೆ ಆಗಾಗ್ಗೆ ಬರುವಂಥವರೇ. ನಂದಲಾಲ ಈ ಎರಡು ಹಿಂದೂ ಕಟ್ಟಡಗಳ ಆಶ್ರಯದ ಸುರಕ್ಷಿತ ನೆರಳಿನಲ್ಲಿದ್ದ. ಅದರ ಮಿರ್ಜಾಪುರ ರಸ್ತೆಯ ಮೂಲೆಯಿಂದಲೇ ಮುಸ್ಲಿಮರ ನೆಲೆ ಆರಂಭವಾಗುತ್ತಿತ್ತು.

ಆಗಸ್ಟ್ ೧೬ರಂದು ಬೆಳಗ್ಗೆ ನಂದಲಾಲ ಒಲೆ ಹಚ್ಚಿದ. ಎಂದಿನಂತೆ ಸಿಹಿಮಿಠಾಯಿಗಳು ತುಂಬಿದ ತಟ್ಟೆಗಳನ್ನು ಒಪ್ಪವಾಗಿ ಜೋಡಿಸಿಟ್ಟ. ಅವನ ಕಿರಿಯ ಮಗ ಮಾವಿನಕಾಯಿಯ ಉಪ್ಪಿನ ಕಾಯಿ ಮತ್ತು ಚಟ್ನಿ ತುಂಬಿದ ಜಾಡಿಗಳನ್ನು ತಂದಾಗ ರಸ್ತೆಯಲ್ಲಿ ಯಾಕೋ ಈವತ್ತು ಜನರೇ ಇಲ್ಲವಲ್ಲ ಅಂದ ನಂದಲಾಲ. ಕಲ್ಕತ್ತದ ಮುಖ್ಯ ಬೀದಿಗಳಲ್ಲಿ ಆರಾಮಾಗಿ ಓಡಾಡಿಕೊಂಡಿರುವ ದನಗಳು ಎಂದಿನಂತೆ ರಸ್ತೆಯ ಮಧ್ಯೆ ಮಲಗಿದ್ದವು. ಆ ದಿನ ಮೊದಲ ಟ್ರಾಮ್‌ಕಾರು ಹ್ಯಾರಿಸನ್ ರಸ್ತೆಗೆ ಆಗಮಿಸಿದಾಗ ಮಲಗಿದ್ದ ದನಗಳು ಮನಸ್ಸಿಲ್ಲದ ಮನಸ್ಸಿನಿಂದ ಎದ್ದು ಆಚೆಗೆ ಸರಿದವು. ಈ ಟ್ರಾಮ್‌ಕಾರನ್ನು ನೋಡುತ್ತಿದ್ದಂತೆ ಈ ದಿನ ಎಲ್ಲ ದಿನಗಳಂತಿಲ್ಲ ಎಂಬ ಅಂಶ ನಂದಲಾಲನಿಗೆ ಖಚಿತವಾಯಿತು. ಮಾಮೂಲು ದಿನಗಳಲ್ಲಿ. ಜನ ಅದರಲ್ಲಿ ಕಿಕ್ಕಿರಿದು ತುಂಬಿರುತ್ತಿದ್ದರು. ಜಾಗ ಸಾಲದೆ ಅದರ ಪ್ಲಾಟ್‌ಫಾರಂ, ಮೆಟ್ಟಿಲು ಹಾಗೂ ಹಿಂಭಾಗದಲ್ಲೂ ಜೋತಾಡಿಕೊಂಡಿರುತ್ತಿದ್ದರು. ಈ ದಿನ ಅದು ಸಂಪೂರ್ಣ ಖಾಲಿಯಿತ್ತು.

ಅದಾದ ನಂತರ ಘಟನೆಗಳು ಎಷ್ಟು ಬೇಗ ಸಂಭವಿಸಿದ್ದವೆಂದರೆ ಅವುಗಳನ್ನು ಒಂದು ಕ್ರಮದಲ್ಲಿ ನೆನಪಿಸಿಕೊಳ್ಳುವುದೇ ನಂದಲಾಲ್‌ಗೆ ಅಸಾಧ್ಯವಾಯಿತು. ಮೊದಲು ಹ್ಯಾರಿಸನ್ ರಸ್ತೆಯಲ್ಲಿ ಅಬ್ಬರಿಸುತ್ತ ಎರಡು ಲಾರಿಗಳು ಬಂದವು. ಅವನಿಗೆ ಸ್ಪಷ್ಟವಾಗಿ ನೆನಪಿತ್ತು. ಇಟ್ಟಿಗೆ ಚೂರುಗಳನ್ನು ಶೀಸೆಗಳನ್ನು ಹಿಡಿದಿದ್ದ ಜನರು ಲಾರಿಗಳಿಂದ ಕೆಳಗೆ ಧುಮುಕಿದ್ದೇ ಹಿಂದೂ ಅಂಗಡಿಗಳನ್ನೆಲ್ಲಾ ಧ್ವಂಸ ಮಾಡತೊಡಗಿದಾಗ ಅವರು ಮುಸ್ಲಿಂ ಗೂಂಡಾಗಳು ಎನ್ನುವುದು ನಂದಲಾಲ್‌ಗೆ ಖಚಿತವಾಯಿತು. ಕೆಲವರು Happy homeನ ಪಕ್ಕದಲ್ಲಿದ್ದ ಫರ್ನೀಚರ್ ಅಂಗಡಿಗೆ ನುಗ್ಗಿದರು. ಅಲ್ಲಿದ್ದ ಪೀಠೋಪಕರಣಗಳು, ಹಾಸುಗಳನ್ನು ಕಿತ್ತುಕಿತ್ತು ರಸ್ತೆಗೆ ಎಸೆದರು, ಇನ್ನೂ ಕೆಲವರು ಬೆಂಗಾಲ್ ಕ್ಯಾಬಿನ್‌ನತ್ತ ನುಗ್ಗಿದರು, ಕೂಡಲೇ ನಂದಲಾಲ ಬೇಗಬೇಗನೆ ಕಿಟಕಿ ಬಾಗಿಲುಗಳನ್ನು ಮುಚ್ಚಿದ. ಮನೆಯೊಳಗೆ ಓಡುವಂತೆ ಮಗನಿಗೆ ತಿಳಿಸಿದ.

ರಸ್ತೆಯ ಮೇಲೆ ಕಲ್ಲುಗಳು ಮಳೆಸುರಿದಂತೆ ಬೀಳುತ್ತಿದ್ದವು. ನಂದಲಾಲ ಕಿಟಕಿಯ ಸಲಾಕೆಯನ್ನು ಹಾಕಿ ಮುಗಿಸುವಷ್ಟರ ಹೊತ್ತಿಗೆ ಅವನ ದೇಹದ ನಾನಾ ಭಾಗಗಳಿಗೆ ಕಲ್ಲುಗಳ ಹೊಡೆತ ಬಿದ್ದು ರಕ್ತ ಸುರಿಯುತ್ತಿದ್ದರೂ ಅದು ಅವನಿಗೆ ಅರಿವೇ ಆಗಿರಲಿಲ್ಲ. ಗೂಂಡಾಗಳು ಅವನ ಅಂಗಡಿಯ ಹತ್ತಿರಕ್ಕೆ ಬರುವಷ್ಟರ ಹೊತ್ತಿಗೆ ಅವನು ಮನೆಯೊಳಗೆ ಸೇರಿಕೊಂಡಿದ್ದ. ಬಾಗಿಲ ಮೇಲೆ ದಬದಬನೆ ಬಡಿಯುತ್ತಿರುವ ಸದ್ದು ಅವನಿಗೆ ಕೇಳಿಸುತ್ತಿತ್ತು. ಬಾಗಿಲಿಗೆ ಎರಡು ಬಲವಾದ ಸಲಾಕೆಯ ಅಗುಳಿಗಳನ್ನು ಹಾಕಿದ್ದ. ನಂತರ ಅವನು ಒಳಗಿನ ಅಂಗಳಕ್ಕೆ ಓಡಿದ. ಅಲ್ಲಿ ವಠಾರದ ಮನೆಗಳಿದ್ದವು. ಅವುಗಳನ್ನು ಆವರಿಸಿದಂತೆ ಗೋಡೆ ಇತ್ತು. ಗೋಡೆ

ಹತ್ತಿ ಬರುತ್ತಿದ್ದ ಗೂಂಡಾಗಳು ಹೊಡಿಹೊಡಿ ಎಂದು ಕೂಗುತ್ತಿದ್ದರು. ಗೋಡೆಯ ಮೇಲಿಂದ ಒಂದು ತಲೆ ಕಾಣಿಸಿಕೊಂಡಿತು. ಅದರ ಹಿಂದೆಯೇ ಇನ್ನೂ ಅನೇಕ ತಲೆಗಳು ಕಂಡವು. ಅಷ್ಟು ಹೊತ್ತಿಗೆ ನಂದಲಾಲನ ಮನೆಯಲ್ಲಿದ್ದ ಜನರೆಲ್ಲ ತಾರಸಿ ಹತ್ತಿ, ಅಲ್ಲಿಂದ ಪ್ರತಿದಾಳಿ ಆರಂಭಿಸಿದ್ದರು. ಗೋಡೆ ಹತ್ತುತ್ತಿದ್ದವರ ಮೇಲೆ ಹೂಕುಂಡಗಳನ್ನು ಎತ್ತಿಎತ್ತಿ ಹಾಕುತ್ತಿದ್ದಂತೆ ಅವರೆಲ್ಲ ಪರಾರಿಯಾದರು.

ಈ ಯಶಸ್ವಿ ಪ್ರತಿಧಾಳಿಯ ನಂತರ ಅವರ ಗಮನ ನಂದಲಾಲನ ಕಡೆಗೆ ಹರಿಯಿತು. ಕೆಲವರು ಅವನ ಸಹಾಯಕ್ಕೆ ಧಾವಿಸಿದಿರು. ಮನೆಯತ್ತ ಹತ್ತಿ ಬರುವ ಮೆಟ್ಟಿಲುಗಳ ಮೇಲೆ ಕೈಗೆ ಸಿಕ್ಕ ಬೆಂಚು ಟೇಬಲುಗಳನ್ನು ಇಟ್ಟು ಧಾಳಿಕಾರರು ಮೆಟ್ಟಿಲು ಹತ್ತಿ ಬಾರದಂತೆ ತಡೆ ನಿರ್ಮಿಸಿದರು. ಮೊಗಸಾಲೆಯಲ್ಲಿದ್ದ ಬೈಸಿಕಲ್ಲುಗಳನ್ನು ನಂದಲಾಲ ಆ ವಸ್ತುಗಳ ಮಧ್ಯೆ ತುರುಕಿದ. ನಂತರ, ಕುಟುಂಬದ ಹೆಂಗಸರೆಲ್ಲ ಗುಂಪಾಗಿ ಮುದುರಿಕೊಂಡು ಕೂತಿದ್ದ ಮೇಲಿನ ಹಜಾರಕ್ಕೆ ಅವರು ಧಾವಿಸಿದರು.

ನಂದಲಾಲ್ ಮೆಲ್ಲಗೆ ಕಿಟಕಿಯಿಂದ ಹೊರಗಿಣುಕಿ ನೋಡಿದ. ರಸ್ತೆಯಲ್ಲಿ ಅಂತಹ ಉದ್ರೇಕ, ಕ್ಷೋಭೆ, ಜನಸಂದಣಿಯನ್ನು ಹಿಂದೆಂದೂ ಅವನು ನೋಡಿರಲಿಲ್ಲ. ಹ್ಯಾಪಿಹೋಂನ ಎದುರಿಗೆ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದ ರಾಶಿರಾಶಿ ಸೋಫಾ ಹಾಸುಗಳ ಮೇಲೆ ಮುರಿದ ರಿಕ್ಷಾಗಳು. ಆ ರಾಶಿಯಿಂದ ಉರಿಯುವ ಬೆಂಕಿಯ ಜ್ವಾಲೆಗಳು ಮೇಲೇಳುತ್ತಿದ್ದವು. ಗಾಳಿಗೆ ಹೊಗೆ ಚೆದುರಿದಾಗ ಕೆಲವು ವ್ಯಕ್ತಿಗಳು ಬ್ಯಾಂಕ್ ಕಟ್ಟಡದ ಮೆಟ್ಟಿಲುಗಳ ಮೇಲೆ ನಿಂತು ಜನರತ್ತ ಶೀಸೆಗಳನ್ನು ತೂರಿ ಎಸೆಯುತ್ತಿದ್ದುದು ಕಂಡುಬಂತು. ನೆಲಕ್ಕೆ ಬಿದ್ದ ಸೀಸೆಗಳು ಹ್ಯಾಂಡ್ ಗ್ರೆನೇಡ್‌ಗಳಂತೆ ಸಿಡಿಯುತ್ತಿದ್ದವು. ಸಮೃದ್ಧ ಲಕ್ಷ್ಮಿ ಎಂಬ ರೆಡಿಮೇಡ್ ಬಟ್ಟೆಗಳ ಅಂಗಡಿಯ ಮುಂದೆ ತೂಗುಹಾಕಿದ್ದ ಬಟ್ಟೆಗಳು ಬೆಂಕಿ ಹತ್ತಿ ಉರಿಯುತ್ತಿದ್ದವು. ಈ ಅಂಗಡಿಗಳ ಹಿಂದಿದ್ದ ಜನವಸತಿಯ ಸ್ಥಳದಿಂದಲೂ ಬೆಂಕಿಯ ಜ್ವಾಲೆಗಳು ಮೇಲೇಳುತ್ತಿದ್ದವು. ಇದೆಲ್ಲವೂ ಗೂಂಡಾಗಳು ವ್ಯವಸ್ಥಿತವಾಗಿ ನಡೆಸಿದ ದೊಂಬಿ ಎಂದು ನಂದಲಾಲನಿಗೆ ಅರ್ಥವಾಯಿತು. ಭಾರತದಲ್ಲಿ ಗೂಂಡಾಗಿರಿಯೂ ಕೂಡ ಒಂದು ವೃತ್ತಿ. ಕಲ್ಕತ್ತದಂತಹ ಬಂದರು ಶಹರಿನಲ್ಲಿ ಅವರ ಕಳ್ಳಸಾಗಾಣಿಕೆಯ ದಂಧೆ ಬಿರುಸಾಗಿ ನಡೆಯುತ್ತದೆ. ಮುಷ್ಕರಗಳನ್ನು ಹತ್ತಿಕ್ಕಲು ಅಥವಾ ಕೋಮುಗಲಭೆಗಳನ್ನು ಉಂಟುಮಾಡಲು ಇವರ ಸೇವೆಯನ್ನು ಬಾಡಿಗೆಗೆ ಪಡೆಯುವುದೂ ಉಂಟು.

ಹೊತ್ತೇರಿದ ನಂತರ ನಂದಲಾಲ್ ಮನೆಯ ಛಾವಣಿ ಮೇಲೇರಿ ನೋಡಿದ. ಮುಸ್ಲಿಂ ಸ್ವಯಂ ಸೇವಾಕರ್ತರು ಧರಿಸುವಂತಹ ಹಸಿರು ತೋಳುಪಟ್ಟಿಯನ್ನು ಧರಿಸಿದ್ದ ಹುಡುಗರು ರಿಪ್ಪನ್ ಕಾಲೇಜಿನ ಕಡೆ ಓಡುತ್ತಿದ್ದರು. ಜನಸಂದಣಿಯೂ ಈಗ ಕಾಲೇಜಿನ ದಿಕ್ಕಿನ ಕಡೆಗೇ ತಿರುಗಿತು. ಭಾರತದ ಎಲ್ಲ ಕಾಲೇಜುಗಳಂತೆ ರಿಪ್ಪನ್ ಕಾಲೇಜೂ ಸಹ ಕುದಿಕುದಿಯುವ ರಾಜಕಾರಣದ ಮೂಸೆಯಾಗಿತ್ತು. ಇತ್ತೀಚೆಗೆ ಹಿಂದೂಮುಸ್ಲಿಂ ಭಿನ್ನಾಭಿಪ್ರಾಯದ ಮೇಲೆ ಒತ್ತು ಹೆಚ್ಚಾದಂತೆ ರಾಜಕಾರಣವನ್ನು ಆವರಿಸಿದ್ದ ಧರ್ಮಾಂಧತೆ ವಿದ್ಯಾರ್ಥಿಗಳ ಕ್ಷೇತ್ರವನ್ನೂ ಹೊಕ್ಕಿತ್ತು. ಒಂದು ಬೀದಿಯ ಆಚೆಗಿದ್ದ ಆ ಕಾಲೇಜಿನ ಕೋಟೆಯಂತಹ ಆವರಣದಲ್ಲಿ

ಏನೇನಾಗುತ್ತಿದೆ ಎಂಬುದು ನಂದಲಾಲ್‌ಗೆ ಕಾಣುವಂತಿರಲಿಲ್ಲ. ಆದರೆ ಕಾಲೇಜಿನ ಸೂರಿನ ಮೇಲೆ ಭಯಂಕರ ಹೊಡೆದಾಟ ನಡೆದಿತ್ತು. ಆ ದಿನ ಬೆಳಿಗ್ಗೆಯಷ್ಟೇ ಅಲ್ಲಿನ ಹಿಂದೂ ವಿದ್ಯಾರ್ಥಿಗಳು ಧ್ವಜಸ್ಥಂಭದ ಮೇಲೆ ಹಾರಿಸಿದ್ದ ಕಾಂಗ್ರೆಸ್ ಪಕ್ಷದ ಮೂರು ಬಣ್ಣದ ಬಾವುಟದ ಸುತ್ತ ಯುವಕರು ಕಾದಾಡುತ್ತಿದ್ದರು. ವಿರೋಧೀ ಗುಂಪಿನವರು ಮುಸ್ಲಿಂಲೀಗ್‌ನ ಬಾವುಟ ಹಿಡಿದು ಧ್ವಜಸ್ಥಂಭದ ಕಡೆಗೆ ನುಗ್ಗುತ್ತಿದ್ದರು. ಅಂತಿಮವಾಗಿ ಇಸ್ಲಾಮಿಕ್ ನಕ್ಷತ್ರ ಮತ್ತು ಚಂದ್ರನ ಚಿಹ್ನೆ ಇರುವ ಹಸಿರು ಧ್ವಜ ಸ್ಥಂಭದ ಮೇಲೆ ಹಾರಾಡಿತು. ಕೆಳಗೆ ನಿಂತಿದ್ದ ಗುಂಪಿನಿಂದ ಅಲ್ಲಾ ಹೋ ಅಕ್ಬರ್ ಎಂಬ ಒಕ್ಕೊರಲಿನ ದನಿ ರಸ್ತೆಗಳವರೆಗೂ ಹರಿದುಬಂತು.

ರಸ್ತೆಗಳಲ್ಲಿ, ಓಣಿಗಳಲ್ಲಿ, ಹಿಂದೂಗಳಿಂದ 'ಜೈಹಿಂದ್' ಎಂಬ ಕೂಗು, ಮುಸ್ಲಿಮರಿಂದ 'ಪಾಕಿಸ್ತಾನ್ ಜಿಂದಾಬಾದ್' ಎಂಬ ಕೂಗು ಕೇಳಿಸುತ್ತಿತ್ತು. ಇದ್ದಕ್ಕಿದ್ದ ಹಾಗೆ ಈ ಶಬ್ದಗಳನ್ನು ಮರೆಮಾಡುವಂತಹ ಒಂದು ಹೊಸ ಶಬ್ದ ಕೇಳಿಸಿತು. ಕಾಲೇಜಿನ ಎದುರಿಗಿದ್ದ ಒಂದು ಅಪಾರ್ಟ್‌ಮೆಂಟಿನ ಕಿಟಕಿಯಿಂದ ಪಟಪಟನೆ ಗುಂಡುಗಳು ಹಾರುವ ಸದ್ದು. ಸದ್ದನ್ನು ಕೇಳುತ್ತಿದ್ದಂತೆ ನಂದಲಾಲನ ಕೈಕಾಲುಗಳು ತಣ್ಣಗಾದವು. ಭಾರತದಲ್ಲಿ ಗಲಭೆಗಳ ಸಂದರ್ಭದಲ್ಲಿ ಗುಂಡಿನ ಬಳಕೆ ಅಪರೂಪ. ದೊಂಬಿಯಲ್ಲಿ ತೊಡಗಿದ ಜನ ಹೊಸದೊಂದು ಉನ್ಮಾದಕ್ಕೆ ಸಿಲುಕಿದ್ದರು. ಹ್ಯಾರಿಸನ್ ರಸ್ತೆಯಲ್ಲಿ ಜನ ಭಯಭೀತರಾಗಿ ಕಂಗೆಟ್ಟು ಓಡಿದರು.

ಇದಾದ ನಂತರ ಅನೇಕ ದಿನಗಳವರೆಗೆ ದೊಂಬಿ ಹಾಗೇ ಮುಂದುವರೆಯಿತು. ನಂದಲಾಲ ತನ್ನ ಕುಟುಂಬ ಹಾಗೂ ಬಂಧುಗಳ ಜೊತೆ ಮಹಡಿಯ ಹಜಾರದಲ್ಲಿ ಅಡಗಿಕೊಂಡೇ ಇರಬೇಕಾಯಿತು. ಇಟ್ಟಿಗೆ ಕಲ್ಲಿನ ಚೂರುಗಳು ಕಿಟಕಿ ಬಾಗಿಲುಗಳ ಮೇಲೆ ಬೀಳುವ ಶಬ್ದ ಕೇಳಿಸುತ್ತಲೇ ಇತ್ತು. ಮಕ್ಕಳು ಹಸಿವಿನಿಂದಲೋ, ಭಯದಿಂದಲೋ ಒಂದೇ ಸಮನೆ ಅಳುತ್ತಿದ್ದವು.

ಒಂದು ರಾತ್ರಿ, ನಂದಲಾಲ್ ನೆರೆಹೊರೆಯ ಮುಸ್ಲಿಮನೊಬ್ಬ ಹಿಂದೂ ಕಾಲೇಜಿನ ಒಂಬತ್ತು ಹುಡುಗಿಯರನ್ನು ನಂದಲಾಲನ ಬಳಿಗೆ ಕರೆತಂದ. ನಂದಲಾಲನಿಗೆ ಪರಮಾಶ್ಚರ್ಯ. ಮುಸಲ್ಮಾನರಲ್ಲಿ ದಯಾಪರವಾದ ಭಾವನೆ ಇರುತ್ತದೆಂಬುದು ಅವನಿಗೆ ಮರತೇ ಹೋದಂತಾಗಿತ್ತು. ಗುಲ್ಜಾರ್ ರಿಪೇರ್ ಕಂಪನಿಯ ಮಾಲಿಕ ಈ ಹುಡುಗಿಯರನ್ನು ರಕ್ಷಿಸುವ ಯೋಜನೆ ರೂಪಿಸಿದ್ದ. ಆ ಅಂಗಡಿಯ ಹಿಂದಿನ ಓಣಿ ಈಸ್ಟ್‌ಬೆಂಗಾಲ್ ಕ್ಯಾಬಿನ್‌ಗೆ ಅಂಟಿಕೊಂಡಂತೆ ಇತ್ತು. ಆ ಹುಡುಗಿಯರಿಗೆ ಮುಸ್ಲಿಮರಂತೆ ಬುರ್ಖಾ ಹಾಕಿ ಮುಸ್ಲಿಮರಿರುವ ತಾಣದಿಂದ ಹಿಂದೂಗಳ ಬಳಿಗೆ ರಹಸ್ಯವಾಗಿ ದಾಟಿಸಿಕೊಂಡು ತರಲಾಗಿತ್ತು. ನಂದಲಾಲ ಮನೆಯ ಅಂಗಳ ಹಿಂದೂ ಮುಸ್ಲಿಂ ಬೀದಿಗಳಿಗೆ ಸಂಪರ್ಕ ಕಲ್ಪಿಸುವಂತೆ ಇದ್ದುದರಿಂದ ಹುಡುಗಿಯರಿಗೆ ನಂದಲಾಲ ಮಾತ್ರವೇ ಸರಿಯಾದ ಆಶ್ರಯ ಕೊಡಬಲ್ಲ ಎಂದು ಈ ಯೋಜನೆಯನ್ನು ರೂಪಿಸಿದರು ನಿಶ್ಚಯಿಸಿದರು.

ನಾಲ್ಕನೇ ದಿನದ ಹೊತ್ತಿಗೆ ದೊಡ್ಡದೊಡ್ಡ ಅಸ್ತ್ರಗಳು ಬಳಕೆಯಾಗುವಷ್ಟು ಗಲಭೆಯಲ್ಲಿ ಪ್ರಗತಿಯಾಗಿತ್ತು. ಸೋಡಾ ಬಾಟಲಿಗಳ ಬದಲಿಗೆ ಕಬ್ಬಿಣದ ದೊಡ್ಡದೊಡ್ಡ ಸಲಾಕೆಗಳು

ಬಳಕೆಗೆ ಬಂದಿದ್ದವು. ಈ ಕಂಬಿಗಳನ್ನು ತರುವುದು ಕಷ್ಟವೇನಾಗಿರಲಿಲ್ಲ. ಶ್ರದ್ಧಾನಂದ ಪಾರ್ಕಿಗೆ ಸುತ್ತುವರೆದಿದ್ದ ಬೇಲಿಗಳಿಗೆ ಬಳಸಲಾಗಿದ್ದ ಕಂಬಿಗಳನ್ನು ದೊಂಬಿಯ ಜನ ಸುಲಭವಾಗಿ ಕಿತ್ತು ತಂದಿದ್ದರು. ಈ ಸಲಾಕೆಗಳ ಬಡಿದಾಟ ಅತಿ ಭಯಾನಕ ಸ್ಥಿತಿ ತಲುಪುವ ವೇಳೆಗೆ ಮೂರು ಮಿಲಿಟರಿ ಟ್ಯಾಂಕುಗಳು ಬಂದಿಳಿದವು. ಮೆಶಿನ್‌ಗನ್ನುಗಳಿಂದ ಗುಂಡಿನ ಸುರಿಮಳೆ ಯಾಯಿತು. ಎಷ್ಟೋ ವಿಳಂಬದ ನಂತರ ಪೊಲೀಸರು ಕಾಣಿಸಿಕೊಂಡರು.

ಮಿಲಿಟರಿ ಬೆಂಗಾವಲಿಲ್ಲದ ಹೊರತು ಈ ಜಾಗಕ್ಕೆ ಹೋಗಲು ಸಾಧ್ಯವಿಲ್ಲ ಎಂದು ಪೊಲೀಸರು ನಿಶ್ಚಯಿಸಿಬಿಟ್ಟಿದ್ದರು. ಇದಕ್ಕೆ ಕಾರಣವೂ ಇತ್ತು. ಹಿಂದೂ ಮುಸ್ಲಿಮರು ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡುತ್ತಿದ್ದ ಸಂದರ್ಭದಲ್ಲಿ ಬ್ರಿಟಿಷರಿಗೆ ನಿಷ್ಠೆಯಿಂದಿದ್ದ ಪೊಲೀಸರು ಸ್ವಾತಂತ್ರ್ಯ ಹೋರಾಟಗಾರರ ಮೇಲೆ ಸಾಕಷ್ಟು ಬಲಪ್ರಯೋಗ ಮಾಡಿದ್ದರು. ಈ ಕಾರಣಕ್ಕೆ ಜನ ತಮ್ಮ ಮೇಲೆ ಸೇಡು ತೀರಿಸಿಕೊಳ್ಳಬಹುದು ಎಂಬ ಭಯ ಅವರನ್ನು ಕಾಡುತ್ತಿತ್ತು. ಮಿಲಿಟರಿಯವರು ಕ್ರಮ ಕೈಗೊಂಡನಂತರ ಹಾಗೂ ಅಂತಿಮವಾಗಿ ಹಿಂದೂ ಮುಸ್ಲಿಂ ನಾಯಕರು ತಮ್ಮ ಅಭಿಪ್ರಾಯ ಭೇದ ಮರೆತು ಜನರಿಗೆ ಜಂಟಿಯಾಗಿ ಮನವಿ ಮಾಡಿಕೊಂಡ ನಂತರ ದೊಂಬಿಗಲಭೆಗಳು ತಣ್ಣಗಾಗುತ್ತ ಬಂದವು.

ಐದನೇ ದಿನ ಕಲ್ಕತ್ತದಲ್ಲಿ ಶಾಂತಿ ನೆಲೆಸಿತು. ರಸ್ತೆಗಳಲ್ಲಿ ಎಲ್ಲಿ ನೋಡಿದರೂ ಇಟ್ಟಿಗೆ ಚೂರುಗಳು ಒಡೆದ ಬಾಟಲಿಗಳು, ಕೊಳೆತು ಊದಿಕೊಂಡ ದನಗಳ ಅವಶೇಷಗಳು, ಸುಟ್ಟು ಕರಕಲಾದ ವಾಹನಗಳು... ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದ ಹೆಣಗಳನ್ನು ದಾಟಿಕೊಂಡು ವಿಕ್ಟೋರಿಯಾ ಗಾಡಿಗಳು ಮುಂದೆ ಹೋಗುತ್ತಿದ್ದವು. ಅಧಿಕೃತ ಎಣಿಕೆಯ ಪ್ರಕಾರ ಈ ಗಲಭೆಗಳಲ್ಲಿ ಸತ್ತವರ ಸಂಖ್ಯೆ ಆರು ಸಾವಿರ. ಅನಧಿಕೃತ ಮೂಲಗಳ ಪ್ರಕಾರ ಹದಿನಾರು ಸಾವಿರ. ಡೆಟ್ರಾಯಿಟ್ ನಗರದಷ್ಟು ದೊಡ್ಡದಾದ ಈ ಮಹಾನಗರದಲ್ಲಿ ಹಿಂದೂ ಮುಸ್ಲಿಮರೆಂಬ ಭೇದವಿಲ್ಲದೆ ಎಲ್ಲ ಹೆಣಗಳ ಮೇಲೂ ರಣಹದ್ದುಗಳು ಹಾರಾಡುತ್ತಿದ್ದವು. ಅವುಗಳ ಹರಡಿದ ರೆಕ್ಕೆಗಳಿಂದ ಇಡೀ ನಗರವೇ ಕತ್ತಲು ಕವಿದಂತೆ ಕಪ್ಪಾಗಿತ್ತು.

ಸಹಸ್ರಾರು ಮಂದಿ ಕಲ್ಕತ್ತ ಬಿಟ್ಟು ಹೋಗಲಾರಂಭಿಸಿದರು. ಜಗತ್ತಿನಲ್ಲೆ ಬಹು ದೊಡ್ಡದಾದ ಹುಗ್ಲೀ ನದಿಯ ಉಕ್ಕಿನ ಸೇತುವೆಯ ಮೇಲೆ ಗಂಡಸರು ಹೆಂಗಸರು, ಮಕ್ಕಳು ಜಾನುವಾರಗಳ ಒಂದು ಪ್ರವಾಹವೇ ಹರಿದಿತ್ತು. ಅವರೆಲ್ಲರ ಗುರಿಯೂ ಒಂದೇ - ಅದು ಹೌರಾ ರೈಲ್ವೆ ಸ್ಟೇಶನ್. ರೈಲುಗಳು ಅಷ್ಟೆಲ್ಲ ಮಂದಿಯನ್ನು ತುಂಬಿಕೊಂಡು ಹೋಗುವುದು ಸಾಧ್ಯವಿರಲಿಲ್ಲ. ಜನ ಮುಂದಿನ ರೈಲಿಗಾಗಿ ಕಾಯುತ್ತಾ ಪ್ಲಾಟ್‌ಫಾರಂನ ಮೇಲೆ ಹಾಗೇ ಗುಂಪುಗುಂಪಾಗಿ ಕುಳಿತರು. ಹೀಗೆ ಕೂರುವಾಗಲೇ ಹಿಂದೂಗಳದೇ ಒಂದು ಗುಂಪು, ಮುಸ್ಲಿಮರದೇ ಒಂದು ಗುಂಪು ಎಂದು ಸಹಜವಾಗಿಯೇ ಎರಡು ಗುಂಪಾಗಿತ್ತು, ಬಿಳಿಯ ಬಣ್ಣದ ಹಸುಗಳು, ಅವುಗಳನ್ನು ಸುತ್ತುವರೆದು ಕುಳಿತಿದ್ದ ಕುಟುಂಬಗಳಿಂದ ಹಿಂದೂಗಳ ಗುಂಪನ್ನು ಸುಲಭವಾಗಿ ಗುರುತಿಸಬಹುದಿತ್ತು. ಯಾವುದಾದರೊಂದು ರೈಲು ಕಂಡರೆ ಸಾಕು ಜನರೆಲ್ಲ ಒಬ್ಬರ ಮೇಲೊಬ್ಬರು ನುಗ್ಗಿ ಸ್ಥಳ ಗಿಟ್ಟಿಸಲು ಓಡುತ್ತಿದ್ದರು. ತಾವು ಸುರಕ್ಷಿತ ಎಂದು ತಿಳಿದುಕೊಂಡಿದ್ದ ಹಳ್ಳಿಯನ್ನು ಹೇಗೋ ತಲುಪಿಬಿಟ್ಟರೆ ಸಾಕು ಎಂದಷ್ಟೇ ಅವರ ನಿರೀಕ್ಷೆ.

ಈ ನಿರ್ವಸಿತರು ಎಷ್ಟು ಬೇಗನೇ ತಮ್ಮ ಹಳ್ಳಿಗಳನ್ನು ಸೇರಬೇಕೆಂದಿದ್ದರೋ ಅದಕ್ಕಿಂತ ಬೇಗನೆ ಗಲಭೆ ಅವರ ಹಳ್ಳಿಗಳನ್ನು ತಲುಪಿಬಿಟ್ಟಿತ್ತು. ಭಾರತದಲ್ಲಿ ಇಡೀ ವರ್ಷ ಭುಗಿಲೆದ್ದ ಈ ದೊಂಬಿ, ಗಲಭೆ, ಪ್ರತೀಕಾರಗಳ ಸರಣಿ ಪ್ರಕ್ರಿಯೆಗೆ ಕಲ್ಕತ್ತ ಒಂದು ಆರಂಭ ಬಿಂದು ಮಾತ್ರ.

ಈ ಸರಣಿ ದುರಂತದ ಎರಡನೆಯ ಕೇಂದ್ರ ಬಿಂದು ಆಗ್ನೇಯ ಬಂಗಾಳದಲ್ಲಿದ್ದ ನೌಖಾಲಿ.

ಜೌಗು ಕೆಸರು ತುಂಬಿದ್ದ ಪ್ರದೇಶದಲ್ಲಿ ಕೆಲವು ಹಿಂದೂಗಳೊಡನೆ ನಾನು ಮಾತಾಡಿದೆ. ಇಡೀ ಹಳ್ಳಿಯ ಜನರು ತಮ್ಮ ನೆಲೆಯನ್ನು ತೊರೆದು ನದೀ ತೀರ ಪ್ರದೇಶಕ್ಕೆ ಬಂದಿದ್ದರು. ಇಸ್ಲಾಂಗೆ ಬಲಾತ್ಕಾರದ ಮತಾಂತರ, ತಮ್ಮ ದೇವರ ವಿಗ್ರಹಗಳನ್ನು ನೀರಿಗೆಸೆಯುವಂತೆ ಮಾಡಿದ ಒತ್ತಾಯ, ಗೋಮಾಂಸ ತಿನ್ನುವಂತೆ ಬಲಾತ್ಕಾರ, ಮೊದಲಾದ ಗೋಳಿನ ಕಥೆಗಳನ್ನು ಹೇಳಿಕೊಂಡರು. ಮುಸ್ಲಿಂ ಗೂಂಡಾಗಳು ಮನೆಯ ಕಿಟಕಿ ಕಟ್ಟೆಯ ಮೇಲೆ ಹಸಿಮಾಂಸ ತಂದಿಟ್ಟರು, ನಮ್ಮ ಮನೆ ಅಪವಿತ್ರವಾಯಿತು ಎಂದು ಒಬ್ಬ ಹೆಂಗಸು ರೋದಿಸಿದಳು.

ಗಾಂಧೀಜಿಯವರಿಗೆ ನೌಖಾಲಿ ಸಂಚಾರದ ಕಷ್ಟವನ್ನು ತಾಳಿಕೊಳ್ಳಲು ವಯಸ್ಸು ಮೀರಿದ್ದರೂ ಅದನ್ನು ಲೆಕ್ಕಿಸದೆ ಕೆಸರು ತುಂಬಿದ ಅರಣ್ಯ ಪ್ರದೇಶದಲ್ಲಿ ಬರಿಗಾಲಿನಲ್ಲಿ ನಡೆದಾಡುತ್ತ ಗ್ರಾಮೀಣ ಜನರಲ್ಲಿ ಆತ್ಮವಿಶ್ವಾಸವನ್ನು ಮತ್ತೆ ಮೂಡಿಸುವ ಪ್ರಯತ್ನ ಮಾಡಿದ್ದರು. ಕಾರ್ಮಿಕ ಸಂಘಟನೆಗಳು ಮತ್ತು ರೈತ ಸಂಘಟನೆಗಳ ಗೇಣಿದಾರರು ಎಲ್ಲರೂ ಒಗ್ಗಟ್ಟಾಗಿರಬೇಕು ಎಂಬ ಅಂಶವನ್ನು ಒತ್ತಿ ಹೇಳತೊಡಗಿದ್ದರು. ಇಷ್ಟೆಲ್ಲ ಗಲಾಟೆ ಗಲಭೆಗಳ ನಡುವೆಯೂ ಐವತ್ತು ಲಕ್ಷ ಹಿಂದೂ ಮತ್ತು ಮುಸ್ಲಿಂ ಗೇಣಿದಾರರು ಒಟ್ಟಾಗಿ, ಬಹುಕಾಲದಿಂದ ಇತ್ಯರ್ಥವಾಗದೆ ಉಳಿದಿದ್ದ ಭೂಸುಧಾರಣೆಗಳಿಗಾಗಿ ತೇಭಾಗ ಚಳುವಳಿಯಲ್ಲಿ ಹೋರಾಡತೊಡಗಿದ್ದು ಗಮನಾರ್ಹವಾಗಿತ್ತು. ಅಲ್ಲಿ ಧಾರ್ಮಿಕ ಸಂಘರ್ಷದ ಮಾತೇ ಇರಲಿಲ್ಲ. ಆದರೆ ಹಿಂದೂ ಮುಸ್ಲಿಂ ಸೌಹಾರ್ದದ ಈ ಸಣ್ಣಪುಟ್ಟ ದ್ವೇಷಗಳ ನಡುವೆ, ಉರಿಯುತ್ತಿರುವ ಹಳ್ಳಿಗಳಿದ್ದವು. ಮತಾಂಧತೆಯ ಬೆಂಕಿ ಉರಿಯುತ್ತಿತ್ತು. ಬಂಗಾಳದ ಸಂಘರ್ಷದ ಕಿಡಿಗಳು ಪಶ್ಚಿಮದ ಬಿಹಾರದತ್ತ ಹಾರಿದವು. ಅಲ್ಲಿ ಮುಸ್ಲಿಂ ಅಲ್ಪಸಂಖ್ಯಾತರ ಮೇಲೆ ಹಿಂದೂಗಳು ನಿರ್ದಯವಾಗಿ ಸೇಡು ತಿರಿಸಿಕೊಂಡರು. ಬಿಹಾರದಿಂದ ಬೆಂಕಿಯ ಉರಿನಾಲಿಗೆಗಳು ಪಂಜಾಬಿನತ್ತ ಚಾಚಿದವು. ಅಲ್ಲಿ ಎಂತಹ ಸ್ಫೋಟಕ ಸ್ಥಿತಿ ಉಂಟಾಯಿತೆಂದರೆ ಅದರ ಮುಂದೆ ಕಲ್ಕತ್ತದ ಗಲಭೆಗಳು ಏನೂ ಅಲ್ಲ ಎನ್ನುವಂತಾಯಿತು. ತಿಂಗಳುಗಟ್ಟಲೆ ನಡೆದ ಹಿಂಸಾತ್ಮಕ ದೊಂಬಿಗಳು ಭಾರತ ಪಾಕಿಸ್ತಾನಗಳ ಭೇದಭಾವನೆಯನ್ನು ಇನ್ನಷ್ಟು ತೀವ್ರಗೊಳಿಸಿದವು. ಜಿನ್ನಾ ವಾದಕ್ಕೆ ಇನ್ನಷ್ಟು ಒತ್ತು ಸಿಕ್ಕಿತು. ಅಂತೂ ನಂದಲಾಲ್ ಯಾವತ್ತು ತನ್ನ ಮನೆಬಾಗಿಲಲ್ಲಿಯೇ ಸ್ಫೋಟಗೊಂಡ ನೇರಹೋರಾಟವನ್ನು ನೋಡಿದನೋ ಆ ದಿನದಿಂದ ಸರಿಯಾಗಿ ಒಂದು ವರ್ಷಕ್ಕೆ ಒಂದು ದಿನ ಕಡಿಮೆ ಅಂದರೆ ಆಗಸ್ಟ್ ೧೫, ೧೯೪೭ರಂದು ರಕ್ತಮಯ ಭಾರತದಿಂದ ರಕ್ತಮಯ ಪಾಕಿಸ್ತಾನವನ್ನು ಕತ್ತರಿಸಿ ತೆಗೆಯಲಾಯಿತು.

ಅಧ್ಯಾಯ ೩

ದೇವಮಾನವ

"ಭಾರತದ ಎಲ್ಲ ಪ್ರದೇಶಗಳ ಜನರಲ್ಲಿ ಶಾಂತಿ ನೆಲಸುವಂತೆ ಮಾಡುವ" ಉದ್ದೇಶದಿಂದ ಗಾಂಧೀಜಿಯವರು ೧೯೪೮ರ ಜನವರಿಯಲ್ಲಿ ಉಪವಾಸ ಹೂಡಲು ನಿರ್ಧರಿಸಿದರು. ಗಾಂಧೀಜಿಯವರ ಈ ನಿರ್ಧಾರ ಕೇವಲ ಒಬ್ಬ ಮಹಿಳೆಗೆ ಮಾತ್ರ ಗೊತ್ತಿತ್ತು. ಆ ಮಹಿಳೆ ಸುಶೀಲಾ ನಯ್ಯರ್.

ಇದು, ಗಾಂಧೀಜಿಯವರು ಇದುವರೆಗೆ ಹೂಡಿದ ಉಪವಾಸಗಳಲ್ಲಿ ಹದಿನಾರನೆಯದು. ಹಿಂದಿನ ಉಪವಾಸಗಳಿಗಿಂತ ಇದು ಹೆಚ್ಚು ಸ್ಫೋಟಕವಾಗಿತ್ತು. ಮೊದಲಿನ ಉಪವಾಸಗಳೆಲ್ಲ ಬ್ರಿಟಿಷ್ ರಾಜ್ಯದ ವಿರುದ್ಧ ಹೂಡಿದಂಥವು. ಆದರೆ ಈಗಿನದು ಯಾವ ಸ್ವತಂತ್ರ ಭಾರತ ಸರ್ಕಾರದ ಸ್ಥಾಪನೆಗೆ ಗಾಂಧೀಜಿ ಅಷ್ಟೆಲ್ಲ ದುಡಿದಿದ್ದರೋ ಅಂತಹ ಸರ್ಕಾರದ ಲೋಪದೋಷ ಗಳ ವಿರುದ್ಧ ಮಾಡುತ್ತಿರುವ ಉಪವಾಸವಾಗಿತ್ತು.

ಉಳಿದ ಉಪವಾಸಗಳಿಗಿಂತ ಈ ಉಪವಾಸದ ನಿರ್ಧಾರ ಆತಂಕಕಾರಿಯಾಗಿತ್ತು. ಗಾಂಧಿ ಯವರ ಈ ಇಳೀ ವಯಸ್ಸಿನಲ್ಲಿ ನಡೆಯುತ್ತಿರುವ ಈ ಉಪವಾಸ ಅವರ ಕೊನೆಯ ಉಪವಾಸವೂ ಆಗಬಹುದಿತ್ತು. ಈ ಉಪವಾಸದ ಪರಿಣಾಮ ಏನಾಗಬಹುದು ಎಂದು ಅತ್ಯಂತ ಖಚಿತವಾಗಿ ತಿಳಿದಿದ್ದುದು ಸುಶೀಲಾ ನಯ್ಯರ್ ಅವರಿಗೆ. ಏಕೆಂದರೆ ಅವರು ಕಳೆದ ಅನೇಕ ವರ್ಷಗಳಿಂದ ಗಾಂಧಿಯವರ ಆಪ್ತ ವೈದ್ಯೆಯಾಗಿದ್ದರು.

ಅತ್ಯಂತ ಸಾಧಾರಣವಾಗಿ ಕಾಣುವ, ಪುಟ್ಟ ಆಕಾರದ, ಸರಳ ಮುಖಭಾವದ ಈ ಮಹಿಳೆ ಗಾಂಧಿಯನ್ನು ಮೊದಲು ನೋಡಿದ್ದು ಶಾಲಾ ಹುಡುಗಿಯಾಗಿದ್ದಾಗ. ಆಕೆ ಪಶ್ಚಿಮ ಪಂಜಾಬ್ ಭಾಗದಿಂದ ಬಂದವರು. ತಮ್ಮ ದೊಡ್ಡ ಅಣ್ಣ ಪ್ಯಾರೇಲಾಲ್ ಅವರೊಂದಿಗೆ ಇರುವುದಕ್ಕಾಗಿ ಲಾಹೋರ್‌ನಿಂದ ಬಂದ ಸುಶೀಲಾ ಮೊದಲು ಇಂಗ್ಲಿಷ್ ವಿದ್ಯಾಭ್ಯಾಸ ಮಾಡಿದರು. ಅನಂತರ ವೈದ್ಯಕೀಯ ಅಭ್ಯಾಸ ಮಾಡಿದರು. ವಿಶ್ವವಿದ್ಯಾಲಯದ ಆರ್ಟ್ಸ್ ವಿಭಾಗದ ವಿದ್ಯಾರ್ಥಿಯಾಗಿದ್ದ ಪ್ಯಾರೆಲಾಲ್, ಗಾಂಧಿಯವರು ಕ್ವಿಟ್ ಇಂಡಿಯಾ ಕುರಿತು ಮಾತಾಡಿದ ಸಭೆಗಳಲ್ಲಿ ಭಾಗವಹಿಸಿದ್ದರು. ಅಣ್ಣನ ಮೂಲಕ ಗಾಂಧಿ ವಿಚಾರಗಳಿಂದ ಪ್ರಭಾವಿತಳಾಗಿ ಸುಶೀಲಾ ಕೂಡಾ 'ಗಾಂಧೀ ವಲಯ' ಸೇರಿದ್ದಳು. ಅಣ್ಣ ತಂಗಿ, ಇಬ್ಬರೂ ಈಗ ತಮ್ಮ ಬದುಕನ್ನು ರಾಷ್ಟ್ರಸೇವೆಗೆ ಮುಡಿಪಾಗಿಡುವ ಹೊಸ್ತಿಲಲ್ಲಿದ್ದರು. ಗಾಂಧೀಜಿಯವರ ಸೇವೆಯಲ್ಲಿ ತಮ್ಮ ಜೀವನ ಕಳೆಯುವುದಕ್ಕಾಗಿ ತಮ್ಮ ವಿದ್ಯಾಭ್ಯಾಸವನ್ನು ಬಿಟ್ಟುಬಿಡಲು ನಿರ್ಧರಿಸಿದ್ದರು. ಗಾಂಧೀಜಿಯವರಿಗೆ ವೈದ್ಯಕೀಯ ಸೇವೆ ಮಾಡಲು ಸುಶೀಲಾ, ಗಾಂಧಿಯವರ

ಪ್ರಕಟಿಸುತ್ತಿದ್ದ ಮ್ಯಾಗಜೈನ್ ಹಾಗೂ ಪತ್ರಿಕೆಗಳಿಗೆ ಟಿಪ್ಪಣಿ ಬರೆಯುತ್ತಾ, ಗಾಂಧಿಯವರ ಕಾರ್ಯದರ್ಶಿ ಹಾಗೂ ಸಾಹಿತ್ಯದ ಸಹಾಯಕನಾಗಿ ಕೆಲಸ ಮಾಡಲು ಪ್ಯಾರೇಲಾಲ್ ಹೀಗೆ ಈ ಇಬ್ಬರೂ ನಿರ್ಧರಿಸಿದ್ದರು.

ಗಾಂಧೀಜಿಯವರನ್ನು ಮೊದಲು ನೋಡಿದಾಗ ಇವರಿಬ್ಬರಿಗೂ ಹೊಸ ಕ್ಷಿತಿಜವೊಂದು ತಮ್ಮ ಕಣ್ಣಮುಂದೆ ತೆರೆದುಕೊಂಡಂತಾಗಿತ್ತು. ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸುವುದಕ್ಕಾಗಿ ಕಾಲೇಜುಗಳನ್ನು ತೊರೆದು ಬಂದ ಸಹಸ್ರಾರು ವಿದ್ಯಾರ್ಥಿಗಳ ಪಾಲಿಗೆ ಹಾಗೂ ೨೦ ಮತ್ತು ೩೦ರ ದಶಕಗಳಲ್ಲಿ ಸಹಸ್ರಾರು ಭಾರತೀಯರ ಪಾಲಿಗೆ ಗಾಂಧಿಯವರು ನಿಜವಾಗಿಯೂ ಒಂದು ಹೊಸ ದಿಗಂತವನ್ನು ತೋರಿಸಿದ್ದರು. ಪ್ಯಾರೇಲಾಲ್ ಬರೆದದ್ದು ಗಾಂಧಿಗೆ ಇಷ್ಟವಾಯಿತು. ಅವರು ಪ್ಯಾರೇಲಾಲ್‌ಗೆ 'ನಾನು ನಿನ್ನ ಲೇಖನಿ ಹಾಗೂ ಬೌದ್ಧಿಕ ಶಕ್ತಿಯನ್ನು ಬಳಸಿಕೊಳ್ಳಬೇಕೆಂದಿದ್ದೇನೆ' ಎಂದು ಹೇಳಿದರು.

. ಗಾಂಧಿಯವರನ್ನು ಮೊದಲು ನೋಡಿದ ತಕ್ಷಣ ಹೇಗೆನ್ನಿಸಿತು ಎಂದು ಪ್ಯಾರೆಲಾಲ್ ಮತ್ತು ಸುಶೀಲ ಅವರೂ ಸೇರಿದಂತೆ ನಾನು ನೂರಾರು ಭಾರತೀಯರನ್ನು ಕೇಳಿದ್ದೆ. ಅನೇಕರು ಗಾಂಧಿ ವಿಚಾರಗಳನ್ನು ಒಪ್ಪದಿರಬಹುದು. ಆದರೆ ಪ್ರತಿಯೊಬ್ಬರೂ ಸಹ ತಮ್ಮ ಜೀವನದ ಯಾವುದೋ ಒಂದು ಘಟ್ಟದಲ್ಲಿ ಗಾಂಧೀ ಪ್ರಭಾವಕ್ಕೆ ಒಳಗಾಗಿದ್ದೆವು ಎಂದು ಹೇಳಿದ್ದಾರೆ. ಆದರೆ ಇವರೆಲ್ಲರಿಗಿಂತ ನನಗೆ ಈ ಇಬ್ಬರು ಅಣ್ಣತಂಗಿಯರ ಅಭಿಪ್ರಾಯ ಮುಖ್ಯವಾಗಿತ್ತು. ಗಾಂಧಿಯವರ ಯಾವ ಗುಣಗಳು ತಮ್ಮ ಎಲ್ಲವನ್ನೂ ಬಿಟ್ಟು ಗಾಂಧಿಯವರನ್ನು ಹಿಂಬಾಲಿಸುವಂತೆ ಜನರನ್ನು ಪ್ರೇರೇಪಿಸುತ್ತವೆ ಎಂಬುದನ್ನು ನಾನು ತಿಳಿಯಬೇಕಿತ್ತು. ಪ್ಯಾರೇಲಾಲ್ ಹೇಳಿದರು - ''ಗಾಂಧಿಯವರ ಪ್ರಖರತೆ, ಕಗ್ಗಲ್ಲಿನಂಥ ಶಕ್ತಿ ಅದರ ಜೊತೆಗೂಡಿದ ಅವರ ಅಸಾಧಾರಣ ಶಾಂತ ಮನಸ್ಥಿತಿ, ಅವರ ದನಿಯಲ್ಲಿರುವ ಯಾವುದೋ ಒಂದು ರೀತಿಯ ಕಾರ್ಯಪಟುತ್ವ ನನ್ನನ್ನು ಆಕರ್ಷಿಸಿದವು. ಗಾಂಧಿಯವರ ಧ್ವನಿಯ ವಿಶಿಷ್ಟತೆಯ ಬಗ್ಗೆ ಪ್ಯಾರೇಲಾಲ್ ವಿಶೇಷ ಕಾಳಜಿಯಿಂದ ವಿವರಣೆ ನೀಡಿದರು...." ಅವರು ಅತ್ಯಂತ ಅಧಿಕಾರಯುತವಾಗಿ ಮಾತಾಡುತ್ತಾರೆ. ಅಲ್ಲಿ ಅಸೀಮನಾದ ಜವಾಬ್ದಾರಿ ತುಂಬಿರುತ್ತದೆ.... ಆತನಲ್ಲಿ ಪವಾಡ ಸದೃಶವಾದ ಏನೋ ಒಂದು ಶಕ್ತಿ ಇದೆ.

"ನೀವು ಬೇರೆ ರೀತಿಯ ಪದ ಬಳಸುತ್ತಿದ್ದೀರಿ ಬಹಳ ಜನ ಅವರ ಕುರಿತು ಹೇಳುವಾಗ 'ಸಂತ' ಎಂಬ ಪದ ಬಳಸುತ್ತಾರೆ" ಎಂದು ನಾನು ಹೇಳಿದೆ. ಗಾಂಧಿಗೆ ಆ ಪದ ಸೂಕ್ತವಲ್ಲ ಎಂಬ ಖಚಿತ ದನಿಯಲ್ಲಿ. "ಇಲ್ಲ... ಹಾಗಲ್ಲ" ಎಂದು ಪ್ಯಾರೇಲಾಲ್ ಹೇಳಿದರು. "ನಾನು ಗಾಂಧಿಯವರನ್ನು ನೋಡುವ ರೀತಿ ಶಿಷ್ಯನೊಬ್ಬ ಸಂತನನ್ನು ನೋಡುವ ರೀತಿಗಿಂತ ಬೇರೆ. ಆತ ಒಬ್ಬ ಪ್ರವಾದಿ, ಸಂದೇಶದೂತ. ಇದು ನನ್ನಲ್ಲಿ ಮೂಡಿರುವ ಚಿತ್ರ, ಆತನ ಈ ಸಾಮರ್ಥ್ಯದ ಎದುರು ಮಹಾಚಕ್ರವರ್ತಿಗಳೂ ಕೂಡ ಅಲ್ಪರೂ, ಏನೇನೂ ಮಹತ್ವವಿಲ್ಲದವರೂ ಆಗಿಬಿಡುತ್ತಾರೆ."

ಅಸಹಕಾರ ಚಳುವಳಿಯ ಭೀಕರ ದಿನಗಳಲ್ಲಿ ಸುಶೀಲಾ ಮತ್ತು ಪ್ಯಾರೇಲಾಲ್ ಇಬ್ಬರೂ ಜೈಲಿನ ಒಳಗೂ ಹೊರಗೂ ಗಾಂಧಿಯವರೊಂದಿಗೇ ಇದ್ದರು. ಗಾಂಧಿಯವರ ಪತ್ನಿಗೆ ಸೆರೆಮನೆಯಲ್ಲಿ ಖಾಯಿಲೆಯಾದಾಗ ಅವರ ಕೊನೆ ಉಸಿರಿನವರೆಗೆ ಅವರನ್ನು ಸುಶೀಲಾ ಉಪಚರಿಸಿದರು. ಸ್ವಾತಂತ್ರ್ಯ ಬಂದನಂತರ ಭಾರತದಾದ್ಯಂತ ವ್ಯಾಪಿಸಿದ ಅನಿರೀಕ್ಷಿತ ಸುಂಟರಗಾಳಿಯ ಸಂದರ್ಭದಲ್ಲಿ ಗಾಂಧಿಯವರ ಆಹಾರ, ಪಥ್ಯ, ಬೆಳಗಿನ ಮಾಲೀಸು, ಪ್ರಾರ್ಥನಾಸಭೆಗೆ ಸಹಾಯ..... ಇದೆಲ್ಲವನ್ನೂ ನೋಡಿಕೊಳ್ಳುತ್ತಿದ್ದವರು ಸುಶೀಲಾ.

ಸೋಮವಾರದ ಪ್ರಾರ್ಥನಾ ಸಭೆಗಳ ಸಂದರ್ಭದಲ್ಲಿ ಸುಶೀಲಾಗೆ ಹೆಚ್ಚು ಕೆಲಸ. ಆಕೆಯ ದನಿ ಮಧುರವಾಗಿರಲಿಲ್ಲ. ಆದರೂ ಗಾಯನದ ನೇತೃತ್ವ ವಹಿಸುವುದರ ಜೊತೆಗೆ ಗಾಂಧಿಯವರ ಪ್ರಾರ್ಥನಾ ಸಭೆಯ ಭಾಷಣವನ್ನು ಇಡೀ ಜನಸಮೂಹಕ್ಕೆ ಕೇಳಿಸುವಂತೆ ಜೋರಾಗಿ ಓದಿ ಹೇಳುವ ಕೆಲಸವನ್ನು ಅವರು ಮಾಡಬೇಕಿತ್ತು. ಸೋಮವಾರ ಗಾಂಧಿಯವರ ಮೌನವ್ರತದ ದಿನ. ಉಳಿದ ಆರುದಿನಗಳು ಗಾಂಧಿ ಎಲ್ಲ ವಿಷಯಗಳ ಬಗ್ಗೆಯೂ ಎಲ್ಲರೊಂದಿಗೂ ಮಾತಾಡುತ್ತಿದ್ದರು. ಎಳೆಯ ಮಕ್ಕಳನ್ನು ಹೇಗೆ ಬೆಳೆಸಬೇಕು. ಯಾವ ರೀತಿ ಆಹಾರ ಕೊಡಬೇಕು, ಏನೇ ಬಾಧೆಯಾದರೂ ಮಣ್ಣು ಮೆತ್ತುವ ಚಿಕಿತ್ಸೆ ಎಷ್ಟು ಒಳ್ಳೆಯದು ಎಂದು ತಾಯಂದಿರಿಗೆ ತಿಳುವಳಿಕೆ ಹೇಳುತ್ತಿದ್ದರು. ಪ್ರಾರ್ಥನೆಗೆ ದಂಡುದಂಡಾಗಿ ಬರುತ್ತಿದ್ದ ಜನರಿಗೆ ಕಿತ್ತಲೆಸಿಪ್ಪೆಯನ್ನು, ಕಡಲೇಕಾಯಿ ಸಿಪ್ಪೆಯನ್ನು ಎಲ್ಲೆಂದರಲ್ಲಿ ಹಾಕಬಾರದು ಎಂದು ಗಾಂಧಿ ಬುದ್ಧಿವಾದ ಹೇಳುತ್ತಿದ್ದರು. ದೇಶವನ್ನು ಹೇಗೆ ನಡೆಸಬೇಕು ಎಂಬ ಬಗ್ಗೆ ಸರ್ಕಾರಗಳ ಮುಖ್ಯಸ್ಥರಿಗೆ ಉಪನ್ಯಾಸ ನೀಡುತ್ತಿದ್ದರು. ಆದರೆ ಸೋಮವಾರಗಳಂದು ಮಾತ್ರ ಅವರು ಒಂದೇ ಒಂದು ಶಬ್ದವನ್ನೂ ಉಚ್ಚರಿಸುತ್ತಿರಲಿಲ್ಲ. ಒಂದು ವೇಳೆ ಮಂಗಳವಾರಕ್ಕೆ ಮುಂದೂಡುವುದೂ ಕೂಡ ಸಾಧ್ಯವಿಲ್ಲ ಎಂಬಂತಹ ತುರ್ತುವಿಷಯ ಬಂದಾಗ ಅವರು ತಮಗೇ ವಿಶಿಷ್ಟವಾದ ದೊಡ್ಡದೊಡ್ಡ ಗೀಚು ಅಕ್ಷರಗಳಲ್ಲಿ ಒಂದು ಸಾಲಿನಷ್ಟು ಬರೆದು ತೋರಿಸುತ್ತಿದ್ದರು.

ಗಾಂಧಿಯವರು ಧ್ಯಾನ ಮತ್ತು ಪ್ರಾರ್ಥನೆಗೆ ಹೆಚ್ಚು ಸಮಯ ವಿನಿಯೋಗಿಸುವ ದೃಷ್ಟಿಯಿಂದ ಸೋಮವಾರ ಮೌನವ್ರತ ಆಚರಿಸುತ್ತಾರೆ ಎಂಬುದು ಎಲ್ಲರಲ್ಲಿಯೂ ಇದ್ದ ಒಂದು ಸಾಮಾನ್ಯ ಅಭಿಪ್ರಾಯ. ಆದರೆ ಎಲ್ಲ ದಿನಗಳಲ್ಲಿಯೂ ಗಾಂಧೀಜೀ ಪ್ರಾರ್ಥನೆಗೆ ಹೆಚ್ಚಿನ ಸಮಯವನ್ನು ವಿನಿಯೋಗಿಸುತ್ತಿದ್ದರು. ಬೆಳಿಗ್ಗೆ ನಾಲ್ಕು ಗಂಟೆಗೇ ಎದ್ದು ಬಹುತೇಕ ಹಿಂದೂಗಳಂತೆ ಶುಭ ಮುಹೂರ್ತದಲ್ಲಿ ಪ್ರಾರ್ಥನೆ ಮಾಡುತ್ತಿದ್ದರು. ಇಡೀ ವಾರದಲ್ಲಿ ಒಂದು ದಿನವಾದರೂ ತಾವು ಮಾತಾಡುವ ಅವಕಾಶವೇ ಇರಬಾರದು ಎಂಬುದೇ ಗಾಂಧೀಜಿಯವರು ತಮ್ಮ ಮೌನವ್ರತಕ್ಕೆ ನೀಡುತ್ತಿದ್ದ ಕಾರಣ. ಮೌನ ಆಚರಣೆಯಿಂದ ವಿಶ್ರಾಂತಿ ಸಿಗುವುದರಿಂದ ಆಯುಷ್ಯಮಾನ ಹೆಚ್ಚಾಗುತ್ತದೆ ಎಂದು ಉಪನಿಷತ್ತುಗಳಲ್ಲಿ ಹೇಳಿದೆ ಎಂದು ಗಾಂಧಿಯವರೇ ಒಂದು ಸಲ ಹೇಳಿದ್ದರು.

ಸೋಮವಾರ ಅವರು ತಮ್ಮ ವಿಚಾರಗಳನ್ನು ಹಾಗೂ ಜನರಿಗೆ ನೀಡಬೇಕಾದ ಸಲಹೆಗಳನ್ನು ಒಂದು ನೋಟ್‌ಬುಕ್ಕಿನಲ್ಲಿ ಬರೆದು, ಪ್ರಾರ್ಥನೆಯಾದ ನಂತರ ಜನರಿಗೆ ಅದನ್ನು ಓದುವಂತೆ

ಹೇಳಿ ಸುಶೀಲಾ ಕೈಗೆ ಕೊಡುತ್ತಿದ್ದರು. ಜನವರಿ ೧೨ರ ಆ ವಿಶೇಷ ದಿನದಂದು ಪ್ರಾರ್ಥನೆ ಆರಂಭವಾಗುವುದಕ್ಕೆ ಇನ್ನು ಐದು ನಿಮಿಷವಿದೆ ಎನ್ನುವಾಗ ಗಾಂಧಿ ಸುಶೀಲಾಗೆ ನೋಟ್‌ಬುಕ್ ಕೊಟ್ಟರು. ಪ್ರಾರ್ಥನಾ ಸಭೆ ನಡೆಯುವ ಉದ್ಯಾನಕ್ಕೆ ಹೋಗುವ ಮೊದಲು ಸುಶೀಲಾ ಒಮ್ಮೆ ಅದರಲ್ಲಿ ಬರೆದಿರುವುದರ ಮೇಲೆ ಕಣ್ಣಾಡಿಸಿದರು. 'Fasting is the lost resort in place of sword' ಎಂಬ ವಾಕ್ಯ ಓದುತ್ತಿದ್ದಂತೆ ಆಕೆ ಬೆಚ್ಚಿದರು. ಈ ವಾಕ್ಯದ ನಂತರ, ಧರ್ಮಗಳ ಹೆಸರಿನಲ್ಲಿ ನಡೆಯುತ್ತಿರುವ ಬರ್ಬರ ಹೋರಾಟದ ವಿರುದ್ಧ, ಸರ್ಕಾರದಲ್ಲಿರುವ ಕಾಂಗ್ರೆಸ್ಸಿನವರ ನೈತಿಕ ಅವನತಿಯ ವಿರುದ್ಧ ಹಾಗೂ ಕುಂದುತ್ತಿರುವ ಭಾರತದ ಘನತೆಯನ್ನು ಹಾಗೂ ದಕ್ಷಿಣ ಏಷಿಯಾದಲ್ಲಿ ಅದರ ಸಾರ್ವಭೌಮತೆಯನ್ನು ಪುನಃ ಸ್ಥಾಪಿಸುವ ಉದ್ದೇಶದಿಂದ ತಾವು ಉಪವಾಸ ಆರಂಭಿಸುತ್ತಿರುವುದಾಗಿ ಗಾಂಧಿ ತಿಳಿಸಿದ್ದರು.

ಭಾರತ ಅಷ್ಟೆಲ್ಲ ಕಷ್ಟಪಟ್ಟು ಸ್ವಾತಂತ್ರ್ಯ ಗಳಿಸಿದ ಆರಂಭದಲ್ಲಿಯೇ ಇಂತಹ ಧಾರ್ಮಿಕ ರಕ್ತಪಾತ ಬಿರುಗಾಳಿಯಂತೆ ಎಲ್ಲೆಡೆ ವ್ಯಾಪಿಸಿದ್ದು ಗಾಂಧಿಯವರಿಗೆ ತೀವ್ರ ಅವಮಾನ ವಾದಂತಾಗಿತ್ತು. ರಾಜಧಾನಿಯಾಗಿರುವ ದೆಹಲಿ, ಧಾರ್ಮಿಕ ಸಹಿಷ್ಣುತೆಗೆ ಮಾದರಿಯಾಗಿರಬೇಕು ಎಂದು ಅವರು ಬಯಸಿದ್ದರು. ಆದರೆ ಅಲ್ಲಿಯೇ ಮುಸ್ಲಿಂ ಅಲ್ಪಸಂಖ್ಯಾತರ ಮೇಲೆ ನಡೆದಿದ್ದ ಹೇಯ ಕಾರ್ಯಾಚರಣೆಯಿಂದ ಅವರು ತೀರಾ ಕಂಗೆಟ್ಟರು. ದೆಹಲಿಯಲ್ಲಿ ಹಿಂದೆಂದೂ ಕಂಡು ಬರದಂತಹ ವಸತಿ ವ್ಯವಸ್ಥೆಯ ಕೊರತೆಯಿಂದಾಗಿ ದೊಂಬಿ ಗಲಭೆಗಳ ಪ್ರಮಾಣ ಇನ್ನಷ್ಟು ಹೆಚ್ಚಾಗಿತ್ತು. ಸಹಸ್ರಾರು ಹಿಂದೂಗಳು ಸಿಖ್ಖರು ಪಾಕಿಸ್ತಾನದಲ್ಲಿದ್ದ ತಮ್ಮ ಮೂಲ ಮನೆಮಠಗಳನ್ನು ತೊರೆದು ದೆಹಲಿಗೆ ಓಡಿ ಬಂದಿದ್ದರು. ಆದರೆ ಇಲ್ಲಿ ಅವರಿಗೆ ವಸತಿಯೇ ಇರಲಿಲ್ಲ. ತಮ್ಮ ಮನೆಗಳನ್ನೂ ಹೊಲಗದ್ದೆಗಳನ್ನೂ ಪಾಕಿಸ್ತಾನದ ಮುಸ್ಲಿಮರಿಗೆ ಬಿಟ್ಟು ಬಂದಿದ್ದ ಅವರು ಈಗ ದೆಹಲಿಯಲ್ಲಿ ಮುಸ್ಲಿಮರ ಮನೆಗಳನ್ನು ಬಲಾತ್ಕಾರದಿಂದ ಸ್ವಾಧೀನಪಡಿಸಿಕೊಳ್ಳತೊಡಗಿದಗ್ದರು. ದೆಹಲಿ ಪೊಲೀಸ್‌ನಲ್ಲಿ ಹೆಚ್ಚಿನವರೆಲ್ಲ ಹಿಂದೂಗಳು ಮತ್ತು ಸಿಖ್ಖರು. ಆದ್ದರಿಂದ ಮುಸ್ಲಿಮರ ಉಚ್ಚಾಟನೆ, ಅವರ ಮೇಲೆ ನಡೆಯುತ್ತಿದ್ದ ಹಲ್ಲೆ ಕೊಲೆ ಸುಲಿಗೆಗಳನ್ನು ಪೊಲೀಸರು ನಿಷ್ಕ್ರಿಯರಾಗಿ ನೋಡುತ್ತ ನಿಂತಿದ್ದರು. ಮುಸ್ಲಿಮರ ಮಸೀದಿಗಳು ಹಾಗೂ ಪವಿತ್ರ ಗೋರಿಗಳ ಪ್ರದೇಶಕ್ಕೆ ನುಗ್ಗಿದ ಹಿಂದೂಗಳು ಮತ್ತು ಸಿಕ್ಖರು ಅಲ್ಲಿದ್ದ ಮುಸ್ಲಿಮರನ್ನು ಬಲಾತ್ಕಾರದಿಂದ ಹೊರಕ್ಕೆ ಹಾಕಿ ತಮ್ಮ ಕುಟುಂಬಗಳೊಂದಿಗೆ ಅಲ್ಲಿ ನೆಲಸತೊಡಗಿದಾಗ, ಈ ಬಗ್ಗೆ ಏನಾದರೂ ಮಾಡಲೇಬೇಕು ಎಂದು ಗಾಂಧಿಯವರಿಗೆ ಸ್ಪಷ್ಟವಾಯಿತು. ಮುಸ್ಲಿಮರು ಶಾಂತಿಯಿಂದ ಸುರಕ್ಷಿತವಾಗಿ ತಮ್ಮ ಪ್ರಾರ್ಥನಾ ಸ್ಥಳಗಳಿಗೆ ಹೋಗುವಂತಹ ವಾತಾವರಣ ನಿರ್ಮಾಣವಾಗಿದೆ ಎಂದು ಮನವರಿಕೆಯಾಗದ ಹೊರತು ನಾನು ಉಪವಾಸ ನಿಲ್ಲಿಸುವುದಿಲ್ಲ ಎಂಬ ಷರತ್ತನ್ನು ಗಾಂಧಿ ಹಾಕಿದರು. ಪಾಕಿಸ್ತಾನ ಎಂಬ ಮುಸ್ಲಿಂ ರಾಜ್ಯವನ್ನು ನಿರ್ಮಿಸಿದ ನಂತರವೂ ಭಾರತದ ಎಲ್ಲೆಯೊಳಗಿದ್ದ ಮುಸ್ಲಿಂ ಅಲ್ಪಸಂಖ್ಯಾತರ ಸಂಖ್ಯೆ ೪೦ ದಶಲಕ್ಷಕ್ಕೂ ಹೆಚ್ಚಾಗಿತ್ತು. ಅವರಲ್ಲಿ ಅನೇಕರು ದೇಶ ವಿಭಜನೆಯನ್ನು ವಿರೋಧಿಸಿದ್ದರು. ಅವಿಭಾಜಿತ ಭಾರತದಲ್ಲಿ ತಮ್ಮ ಬದುಕನ್ನು ಮುಂದುವರೆಸಬೇಕು, ಇಲ್ಲಿಯೇ ತಮ್ಮ ಉದ್ಯೋಗವನ್ನು ಮುಂದುವರೆಸಿಕೊಂಡು ಹೋಗಬೇಕು ಎಂಬುದು ಅವರ ಬಯಕೆ.

ಆದರೆ 'ಈ ದಿನ ಯಾವ ಮುಸ್ಲಿಮ್ ಜೀವವೂ ಹಿಂದೂ ಮತ್ತು ಸಿಕ್ಕರ ಕತ್ತಿ, ಬಾಂಬು, ಬುಲೆಟ್ಟುಗಳ ಭಯದಿಂದ ಮುಕ್ತವಾಗಿಲ್ಲ' ಎಂದು ಗಾಂಧಿ ಬರೆದರು.

ಮಾರನೇ ದಿನ ಬೆಳಗ್ಗೆ ಉಪಾಹಾರದ ನಂತರ ಉಪವಾಸ ಆರಂಭವಾಗಬೇಕಿತ್ತು. ದೆಹಲಿಗೆ ಬಂದಾಗಿನಿಂದ ಇಂತಹ ಉಪವಾಸ ನಡೆಸುವ ಯೋಜನೆ ಗಾಂಧಿಯವರ ತಲೆಯಲ್ಲಿ ಇದ್ದೇ ಇತ್ತು. ಆದರೆ ಅವರು ಈ ನಿರ್ಣಯ ಕೈಗೊಳ್ಳಲು ಹಿಂಜರಿದಿದ್ದರು. ಅವರೇ ಹೇಳುವಂತೆ 'I did not feel sure whether it was the voice of the reason or of Saton in my breast. But for the last three days I have been listening to the call of the God.'

ಗಾಂಧೀಜಿಯವರ ಉಪವಾಸ ಕುರಿತ ಈ ಮಹತ್ವದ ಪ್ರಕಟಣೆಯನ್ನು ಮಾಡಬೇಕಿದ್ದ ಸೋಮವಾರದ ಆ ಪ್ರಾರ್ಥನಾ ಸಭೆಯಲ್ಲಿ ಜನರ ಸಂಖ್ಯೆ ಎಂದಿಗಿಂತ ಕಡಿಮೆ ಇತ್ತು. ಸೋಮವಾರ ಗಾಂಧಿಯವರು ಮಾತಾಡುವುದಿಲ್ಲ ಎಂದು ಆ ದಿನದ ಪ್ರಾರ್ಥನಾ ಸಭೆಗೆ ಹೆಚ್ಚಿನ ಜನ ಬರುತ್ತಿರಲಿಲ್ಲ. ಇಷ್ಟಾದರೂ ಕೆಲವೇ ನಿಮಿಷಗಳಲ್ಲಿ ಗಾಂಧಿಯವರ ಉಪವಾಸದ ಸುದ್ದಿ ಇಡೀ ದೇಶಕ್ಕೆ ಹಬ್ಬಿಬಿಟ್ಟಿತು. ಯಂತ್ರಯುಗದ ಬಗ್ಗೆ ಗಾಂಧಿಯವರು ಎಷ್ಟೇ ಪೂರ್ವಾಗ್ರಹ ಪೀಡಿತರಾಗಿದ್ದರೂ ಸಂವಹನಕ್ಕೆ ಸಂಬಂಧಿಸಿದ ಮಾಧ್ಯಮಗಳ ಅನುಕೂಲತೆಯನ್ನು ಮಾತ್ರ ಯಾವುದೇ ರಾಜಕೀಯ ನಾಯಕರಂತೆಯೇ ಅತ್ಯಂತ ಸಮರ್ಥವಾಗಿ ಬಳಸಿಕೊಳ್ಳುತ್ತಿದ್ದರು. ಸ್ವಾತಂತ್ರ್ಯ ದಿನಾಚರಣೆ ಮುಗಿದ ಕೆಲವು ದಿನಗಳಲ್ಲಿಯೇ ಅವರು ತಮ್ಮ ರಾತ್ರಿಯ ಪ್ರಾರ್ಥನಾ ಸಭೆಯ ಭಾಷಣಗಳನ್ನು ರೇಡಿಯೋ ಮೂಲಕ ದೇಶಕ್ಕೆ ಪ್ರಸಾರ ಮಾಡಲಾರಂಭಿಸಿದರು. ಹೀಗಾಗಿ ಅವರು ಮಕ್ಕಳ ತಂದೆ ತಾಯಂದಿರಿಗೆ ಕೊಡುವ ಚೂರುಪಾರು ಸಲಹೆಗಳಿಂದ ಹಿಡಿದು ಸಕ್ಕರೆ ಮತ್ತು ಬಟ್ಟೆಯ ಬೆಲೆ ಹತೋಟಿ ತೆಗೆಯುವುದಕ್ಕೆ ಸಂಬಂಧಿಸಿದಂತೆ ನೀಡಿದ ಸಲಹೆಗಳನ್ನೂ ಒಳಗೊಂಡಂತೆ ಅವರ ಆಲೋಚನೆಗಳೆಲ್ಲವೂ ಆಕಾಶವಾಣಿಯ ಮೂಲಕ ದೇಶದ ನಾಲ್ಕೂ ಮೂಲೆಗಳನ್ನೂ ತಲುಪುವಂತಾಯಿತು.

ನಾನು ಆ ರಾತ್ರಿ ಈ ಸುದ್ದಿಯನ್ನು ಅಮೆರಿಕಾಗೆ ಪ್ರಸಾರ ಮಾಡಬೇಕಿತ್ತು. ಗಾಂಧಿಯವರ ಉಪವಾಸದ ಮಹತ್ವವನ್ನು ಅಮೆರಿಕನ್ನರಿಗೆ ತಿಳಿಸಿ ಕೊಡುವುದು ಸುಲಭಸಾಧ್ಯವಲ್ಲ. ಏಕೆಂದರೆ ಅಮೆರಿಕದಲ್ಲಿ ಈ ಪರಿಕಲ್ಪನೆಯನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಬೇಕಾದ ಸಂವಾದಿ ಸನ್ನಿವೇಶವಿಲ್ಲ. ಭಾರತದಲ್ಲಿ ಜನರು ಬೇರೆ ಬೇರೆ ಕಾರಣಗಳಿಗಾಗಿ ಉಪವಾಸ ಮಾಡುತ್ತಾರೆ. ಸಾಲ ಕೊಟ್ಟವನು ಸಾಲಗಾರನಾಗಿರುವವನ ಮನೆಯ ಮುಂದೆ ಉಪವಾಸ ಕುಳಿತು ಅವನು ಮನಕರಗಿ ಸಾಲ ಹಿಂದಿರುಗಿಸುವ ಹಾಗೆ ಮಾಡುತ್ತಾನೆ. ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಸಾಮೂಹಿಕ ಉಪವಾಸ ಕಾರ್ಯಕ್ರಮಗಳನ್ನು ಆಗಾಗ್ಗೆ ಏರ್ಪಡಿಸುತ್ತಿದ್ದರು. ಆದರೆ ಉಪವಾಸವನ್ನು ಗಾಂಧಿಯವರಷ್ಟು ಪರಿಣಾಮಕಾರಿಯಾಗಿ ಯಾರೂ ಬಳಸಿಕೊಂಡಿಲ್ಲ. ಗಾಂಧಿಯವರು ಜನರ ಪಾಲಿಗೆ ಒಬ್ಬ ಸೇನಾನಾಯಕನಿದ್ದಂತೆ. ಅವರ ಉಪವಾಸ ಇಡೀ ದೇಶವನ್ನೇ ಕಲಕಿಬಿಡುತ್ತಿತ್ತು. ಒಳಗೊಳಗೇ ಅಡಗಿದ್ದ ಎಲ್ಲ ವಿಚಾರಗಳನ್ನು ಅದು ಒಂದು ವಿಶಿಷ್ಟ ರೀತಿಯಲ್ಲಿ ಮೇಲಕ್ಕೆ ತಂದು ಬಹಿರಂಗಗೊಳಿಸುತ್ತಿತ್ತು.

ಜವಹರಲಾಲ್ ನೆಹರೂ ಅವರೊಂದಿಗೆ ಮಾತಾಡಿದರೆ ನನ್ನ ಕೆಲಸ ಸುಲಭವಾಗಬಹುದು ಎಂದು ಅನ್ನಿಸಿತು. ನೆಹರೂ ಅವರ ಆಲೋಚನಯ ರೀತಿ ಪಾಶ್ಚಾತ್ಯರು ಪೌರ್ವಾತ್ಯರನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗುವಂತಹ ಒಂದು ಸೇತುವೆಯನ್ನು ಕಲ್ಪಿಸಬಲ್ಲದು. ನಾನು ನೆಹರೂ ಅವರನ್ನು ನೋಡಲು ಹೋದೆ. ಕೆಂಪುಕಲ್ಲಿನ ದೊಡ್ಡ ಸಚಿವಾಲಯ ಕಟ್ಟಡದ ದಕ್ಷಿಣ ಭಾಗದಲ್ಲಿರುವ ಪ್ರಧಾನಮಂತ್ರಿ ಕಛೇರಿಯಲ್ಲಿ ಅವರು ಕೂತಿದ್ದರು. ಈಗ ಎರಡು ವರ್ಷಗಳ ಮೊದಲು ನಾನು ಅವರನ್ನು ನೋಡಿದ್ದೆ. ಆಗ ಭಾರತಕ್ಕೆ ಸ್ವಾತಂತ್ರ್ಯ ನೀಡುವ ಯೋಜನೆಗಳನ್ನು ರೂಪಿಸುವುದಕ್ಕಾಗಿ ಭಾರತದ ನಾಯಕರೊಂದಿಗೆ ಮಾತಾಡಲು ಮೊದಲ ಬಾರಿಗೆ ಬ್ರಿಟಿಷ್ ಕ್ಯಾಬಿನೆಟ್ ಆಯೋಗ ಬಂದಿತ್ತು. ನೆಹರೂ ಅವರ ತಲೆಗೂದಲು ಈಗ ಮೊದಲಿಗಿಂತ ಹೆಚ್ಚು ಬೆಳ್ಳಗಾಗಿದ್ದವು.

ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿತಾದರೂ ಅದು ಅವಿಭಜಿತ ಭಾರತಕ್ಕೆ ಸಿಕ್ಕಲಿಲ್ಲ. ಬದಲು ಸ್ವಾತಂತ್ರ್ಯದೊಂದಿಗೆ ಭಾರತ ಎರಡು ಹೋಳಾಗಿತ್ತು. ಶಾಂತಿ ಮತ್ತು ಪ್ರಗತಿಗೆ ಬದಲಾಗಿ ಅಪಾರ ರಕ್ತಪಾತ ಹಾಗೂ ಪ್ರಾಣಹಾನಿಯಾಗಿತ್ತು. ಈ ನೋವಿನ ಗೆರೆಗಳು ನೆಹರೂ ಮುಖದಲ್ಲಿ ಅಚ್ಚೊತ್ತಿದ್ದವು. ಅವರ ಮುಖದಲ್ಲಿ ಯಾವಾಗಲೂ ಕಂಡುಬರುತ್ತಿದ್ದ ಒಂದು ರೀತಿಯ ಆಧ್ಯಾತ್ಮಿಕ ಭಾವ ಈ ನೋವಿನಿಂದ ಇನ್ನೂ ಗಾಢವಾಗಿದೆ ಅನ್ನಿಸಿತು.

ಗಾಂಧಿಯವರ ಉಪವಾಸದ ಪರಿಣಾಮ ಯಾವ ರೀತಿಯದು ಎಂಬುದನ್ನು ವ್ಯಕ್ತಪಡಿಸುವುದಕ್ಕೆ ನನಗೆ ಅಗತ್ಯವಾದಷ್ಟೆ ಮಾತುಗಳನ್ನು ಪಂಡಿತ್ ನೆಹರೂ ಹೇಳಿದರು.

"ತಮ್ಮನ್ನು ತಾವೇ ದಂಡಿಸಿಕೊಳ್ಳುವ ಕ್ರಿಯೆ ಭಾರತೀಯ ಮನಸ್ಸುಗಳ ಮೇಲೆ ಬಹಳ ಪ್ರಭಾವ ಬೀರುತ್ತದೆ. 'ತಮ್ಮನ್ನು ತಾವೇ' ಎಂಬ ಮಾತನ್ನು ನೆಹರೂ ವಿಶೇಷವಾಗಿ ಒತ್ತಿ ಹೇಳಿದರು. ಗಾಂಧಿಯವರು ಇತರ ಎಲ್ಲರಿಗಿಂತ ಭಿನ್ನವಾದ ಜನಸೇವಕ. ಭಾರತದಲ್ಲಿ ಜನರ ನಡುವೆ ಏಳುತ್ತಿರುವ ಅಡ್ಡಗೋಡೆಗಳು ಗಾಂಧಿಯವರಿಗೆ ಬಹಳ ದುಃಖ ಉಂಟುಮಾಡಿವೆ. ಜನರ ಮನಸ್ಸನ್ನು ಪರಿವರ್ತಿಸಲು ಹಾಗೂ ಅವರನ್ನು ತಪ್ಪುದಾರಿಯಿಂದ ಸರಿದಾರಿಗೆ ತರುವುದಕ್ಕಾಗಿ ಗಾಂಧಿ ಈ ಅಂತಿಮ ಕ್ರಮ ಕೈಗೊಂಡಿದ್ದಾರೆ. ಉಪವಾಸದಿಂದ ಎರಡು ರೀತಿಯ ಕೆಲಸಗಳಾಗುತ್ತವೆ. ಸಮಸ್ಯೆಯನ್ನು ಬೇಗ ಪರಿಹರಿಸಬೇಕು ಎಂಬ ಒಂದು ತುರ್ತನ್ನು ಅದು ಉಂಟುಮಾಡುತ್ತದೆ. ಮತ್ತು ಜನರು ಹಳೆಯ ರೀತಿಯ ಆಲೋಚನೆಗಳನ್ನು ಬಿಟ್ಟು ಹೊಸ ರೀತಿ ಆಲೋಚಿಸುವಂತೆ ಮಾಡುತ್ತದೆ. ಅದು ಒಂದು ಅನೂಕೂಲಕರವಾದ ಮಾನಸಿಕ ಬದಲಾವಣೆಯನ್ನು ತರುತ್ತದೆ. ಈ ಬದಲಾವಣೆಯ ಪ್ರಯೋಜನವನ್ನು ಪಡೆದುಕೊಳ್ಳುವುದು ಇತರರಿಗೆ ಸೇರಿದ್ದು.

"ಇದರಿಂದ ರಕ್ತಪಾತ ನಿಲ್ಲುವುದೆ? ಇಷ್ಟೆಲ್ಲ ದ್ವೇಷ ತಾಂಡವವಾಡುತ್ತಿರುವಾಗ" ಎಂದು ನಾನು ಕೇಳಿದೆ.

ನೆಹರೂ ಹೇಳಿದರು "ನಿಜಕ್ಕೂ ಈ ದ್ವೇಷದಲ್ಲಿ ಮುಳುಗಿ ಹೋಗಿರುವವರ ಮೇಲೆ ಇದು ಪರಿಣಾಮ ಬೀರುವುದಿಲ್ಲ. ಆದರೆ ಮಧ್ಯಮ ವರ್ಗದ ಮೇಲೆ ಇದು ಬಹಳ ಪ್ರಭಾವ

ಬೀರುತ್ತದೆ. ಒಂದು ರೀತಿ ಚುನಾವಣಾ ಪ್ರಚಾರದಂತೆ..." ಅನಂತರ, ನಾನು ಈ ಮೊದಲು ಊಹಿಸಿದ್ದನ್ನೇ ನೆಹರೂ ದೃಢಪಡಿಸಿದರು. ಅದೇನೆಂದರೆ ತಮಗೆ ಬಹಳ ಆಪ್ತರಾಗಿದ್ದಂತಹ ಸರ್ಕಾರದ ನಾಯಕರುಗಳಿಗೂ ಗಾಂಧಿ ತಮ್ಮ ಉಪವಾಸದ ವಿಷಯ ತಿಳಿಸಿರಲಿಲ್ಲ. ಇದು ಸಂಪೂರ್ಣವಾಗಿ ಅವರ ಸ್ವಂತ ನಿರ್ಣಯವಾಗಿತ್ತು. "ನಾನು ಮಧ್ಯಾಹ್ನ ಅವರನ್ನು ಭೇಟಿಯಾಗಿದ್ದೆ. ಅವರು ಮೌನವ್ರತದಲ್ಲಿದ್ದರು. ಏನೂ ಹೇಳಲಿಲ್ಲ. ಈ ಗಲಭೆಯ ಬಗ್ಗೆ ಏನಾದರೂ ಒಂದು ಕ್ರಮ ಕೈಗೊಳ್ಳಬೇಕು ಎಂದು ಅವರು ಬಹಳ ಸಮಯದಿಂದ ಚಿಂತಿಸುತ್ತಿದ್ದರು. ಉಪವಾಸದ ನಿರ್ಧಾರ ತೆಗೆದುಕೊಂಡ ನಂತರ ಅವರ ಮನಸ್ಸಿನಲ್ಲಿ ನಿರಾಳಭಾವ ಮೂಡಿದೆ" ಎಂದರು ನೆಹರೂ.

"ಈ ವಿಷಯ ನಿಮಗೆ ಮೊದಲೇ ತಿಳಿದಿದ್ದರೆ ಇದನ್ನು ನಿಲ್ಲಿಸಲು ಪ್ರಯತ್ನಿಸುತ್ತಿದ್ದಿರಾ" ಎಂದು ಕೇಳಿದೆ. "ಸಾಮಾನ್ಯವಾಗಿ ಯಾರೇ ಆದರೂ ಹಾಗೆ ಪ್ರಯತ್ನಿಸುವುದು ಸಹಜ. ಆದರೆ ಅವರ ಕೆಲಸದ ರೀತಿಯಲ್ಲಿ ಏನೋ ಒಂದು ವಿಕ್ಷಿಪ್ತತೆ ಇರುತ್ತದೆ" ಎಂದರು ನೆಹರೂ.

ನಾನು ಪ್ರಧಾನಿ ನೆಹರೂ ಅವರೊಂದಿಗೆ ಮಾತಾಡಿ ಹಿಂದಿರುಗುವಾಗ ರಾತ್ರಿ ಬಹಳ ಹೊತ್ತಾಗಿತ್ತು. ಮಧ್ಯರಾತ್ರಿಯಾಗಿದ್ದರೂ ಕೂಡ ವಿಷಯ ಪ್ರಸಾರದ ಕೆಲಸವನ್ನು ನಾನಿನ್ನೂ ಆರಂಭಿಸಿರಲಿಲ್ಲ. ನಾನು ನೋಡಬೇಕಾದ ಇನ್ನೂ ಒಬ್ಬ ವ್ಯಕ್ತಿಯಿದ್ದರು. ಆ ವ್ಯಕ್ತಿ ಒಬ್ಬ ಹೆಂಗಸು. ಆಕೆ ಗಾಂಧಿಯವರಿಗೆ ತೀರ ನಿಕಟವಾಗಿದ್ದ ಕೆಲವೇ ಕೆಲವರ ಪೈಕಿ ಒಬ್ಬಳು.

ಗಾಂಧೀಜಿಯವರು ಪಾಶ್ಚಾತ್ಯರಿಗೆ ಕಾಣಿಸುವಂತೆ ಒಬ್ಬ ಅಲೌಕಿಕ ವ್ಯಕ್ತಿಯಲ್ಲ. ಅವರೂ ಕೂಡ ಎಲ್ಲರಂತೆಯೇ ಒಬ್ಬ ಮಾನವಜೀವಿ ಎಂಬುದನ್ನು ಪಾಶ್ಚಾತ್ಯರಿಗೆ ಮನವರಿಕೆ ಮಾಡಿಕೊಡಬೇಕಾದರೆ ಗಾಂಧೀಜಿಯವರ ದಿನನಿತ್ಯದ ಜೀವನಕ್ರಮದ ಬಗ್ಗೆ ಅವರಿಗೆ ಅತ್ಯಂತ ನಿಕಟವಾಗಿದ್ದ ವ್ಯಕ್ತಿಗಳು ಏನು ಹೇಳುತ್ತಾರೆ ಎಂಬುದನ್ನು ತಿಳಿದುಕೊಳ್ಳುವುದು ಅಗತ್ಯವಾಗಿತ್ತು. ಆದ್ದರಿಂದ ನಾನು ಆರೋಗ್ಯ ಸಚಿವೆ ರಾಜಕುಮಾರಿ ಅಮೃತ್‌ಕೌರ್ ಅವರ ಮನೆಗೆ ಹೋದೆ.

ಕ್ರಿಶ್ಚಿಯನ್ ಆಗಿದ್ದ ರಾಜಕುಮಾರಿ, ಕಪುರ್ತಲದ ದಿವಗಂತ ಮಹಾರಾಜರ ಮರಿ ಮೊಮ್ಮಗಳು. ಆಕೆಯ ವಿಧಿ ಬೇರೆಯೇ ತಿರುವುದ ಪಡೆಯದಿದ್ದರೆ ಆಕೆ ರಾಜಕುಮಾರಿಯಾಗೇ ಬದುಕಬಹುದಿತ್ತು. ಆದರೆ ಆಕೆ ಇನ್ನೂ ತುಂಬ ಚಿಕ್ಕವಳಿದ್ದಾಗ ಆಕೆಯ ತಂದೆ ಕಪುರ್ತಲವನ್ನು ಬಿಟ್ಟು ಲಾಹೋರ್‌ಗೆ ಹೋದರು. ಲಾಹೋರಿನ ಅವರ ಮನೆ ಬಂಡಾಯಗಾರರು ಸೇರುವ ಸ್ಥಳವಾಯಿತು. ಈ ಬಂಡಾಗರಾರಲ್ಲಿ ಗಾಂಧೀ ಕೂಡ ಒಬ್ಬರು. ಬಂಡಾಯಗಾರರು ಆ ಮನೆಯಲ್ಲಿ ಸಭೆಗಳನ್ನು ನಡೆಸುತ್ತಿದ್ದ ಒಂದು ಸಂದರ್ಭದಲ್ಲಿ ರಾಜಕುಮಾರಿ ಬಾಗಿಲಿನಿಂದ ಹೊರಗೆ ಇಣುಕಿ ನೋಡಿದರು. ಅದು ಆಕೆಗೆ ಗಾಂಧಿಯ ಮೊದಲ ದರ್ಶನ. ಗಾಂಧಿಯನ್ನು ನೋಡಿದ ಮೊದಲ ನೋಟದಲ್ಲೆ ನಾನು ಅವರಿಗೆ ಶರಣಾಗಿಬಿಟ್ಟೆ ಎಂದು ಆಕೆ ತನ್ನ ಗೆಳತಿಯೊಡನೆ ಹೇಳಿದಳಂತೆ. ಸತ್ಯ ಎಂಬ ಒಂದೇ ಒಂದು ಧರ್ಮವನ್ನು ಭೋದಿಸುವ ಆ ಹಿಂದೂ ನಾಯಕನ ಬಗ್ಗೆ ಕ್ರಿಶ್ಚಿಯನ್ ಬಾಲೆಗೆ ಸಂಪೂರ್ಣ ನಂಬಿಕೆ, ವಿಶ್ವಾಸ ಮೂಡಿತು

ಗಾಂಧಿ ಆಶ್ರಮದಲ್ಲಿರುವುದಕ್ಕಾಗಿ ಮತ್ತು ದೇಶದಾದ್ಯಂತ ಓಡಾಡಿಕೊಂಡು ಕೆಲಸ ಮಾಡುತ್ತಿದ್ದ ಆಲೆಮಾರಿಗಳಂತಹ ಗಾಂಧೀ ಅನುಯಾಯಿಗಳೊಂದಿಗೆ ಸೇರಿಕೊಳ್ಳುವುದಕ್ಕಾಗಿ ತನ್ನನ್ನು ಕಳಿಸಬೇಕೆಂದು ಆಕೆ ತಂದೆತಾಯಿಗಳಿಗೆ ದುಂಬಾಲು ಬಿದ್ದಳು. ಸುಮಾರು ೩೦ ವರ್ಷಗಳ ಬಹುತೇಕ ಕಾಲವನ್ನು ಆಕೆ ಗಾಂಧಿಯವರಿಗಾಗಿ ಮೀಸಲಿಟ್ಟಳು. ಭಾರತದ ಸ್ವಾತಂತ್ರ್ಯ ದಿನದಂದು ಆಕೆಗೆ ಭಾರತದ ಹೊಸ ಸರ್ಕಾರದಲ್ಲಿ ಆರೋಗ್ಯ ಸಚಿವೆಯ ಖಾತೆಯನ್ನು ಕೊಡಲಾಯಿತು.

ನಾನು ರಾಜಕುಮಾರಿಯವರ ಮನೆಗೆ ಹೋದಾಗ ದೀಪಗಳು ಇನ್ನೂ ಉರಿಯುತ್ತಿದ್ದವು. ಸಚಿವೆ ನೆಲದ ಮೇಲೆ ಕುಳಿತು ಕಾಗದಪತ್ರಗಳನ್ನು ನೋಡುತ್ತಿದ್ದರು. ರಾಶಿರಾಶಿ ಕಾಗದ ಪತ್ರಗಳ ನಡುವೆ ನಸುಗಪ್ಪು ಬಣ್ಣದ ಸೀರೆಯಲ್ಲಿ ಕುಳಿತಿದ್ದ ಆಕೆಯ ಮುಖದ ಮೇಲೆ ತಲೆಗೂದಲಿನ ಸುರುಳಿಗಳು ಜೋತಾಡುತ್ತಿದ್ದವು. ಗಾಂಧಿಯವರ ಉಪವಾಸ ನಿರ್ಧಾರದ ಬಗ್ಗೆ ನಾನು ಸಂಕ್ಷಿಪ್ತವಾಗಿ ಕೇಳಿದಾಗ ಆಕೆ ವ್ಯಥೆ ತುಂಬಿದ ಮುಖವನ್ನು ಮೇಲೆತ್ತಿ ನನ್ನನ್ನೇ ದಿಟ್ಟಿಸಿದರು. ಈ ಉಪವಾಸದಿಂದ ಅವರಿಗೆ ಸಮಾಧಾನ ಶಾಂತಿ ಸಿಗುವುದಾದರೆ ನಾವೇಕೆ ಬೇಡವೆನ್ನೋಣ ಎನ್ನುವಾಗಲೂ ಆಕೆಯ ಮುಖದಲ್ಲಿ ಅಪಾರ ವೇದನೆಯಿತ್ತು. ದೇಶದಲ್ಲಿ ನಡೆದಿರುವ ರಕ್ತಪಾತ, ಹಿಂಸಾಚಾರಗಳಿಂದ ಗಾಂಧಿ ಎಷ್ಟು ಕಂಗಾಲಾಗಿದ್ದಾರೆ ಎಂಬುದು ಆಕೆಗೆ ತಿಳಿದಿತ್ತು. ಈ ಹಿನ್ನೆಲೆಯಲ್ಲಿ ಗಾಂಧೀಜಿ ಉಪವಾಸದ ನಿರ್ಧಾರದಲ್ಲಿ ಆಶ್ಚರ್ಯವೇನಿಲ್ಲ ಎಂಬುದನ್ನು ಆಕೆ ಒತ್ತಿ ಹೇಳಿದರು. ಕೊನೆಯಲ್ಲಿ ಆಕೆ ಹೇಳಿದರು "ಭಾರತ ಇಬ್ಭಾಗವಾಗಿದ್ದು ತೀರ ಅಸಹಜ. It was such an unnatural Division of Idnia...."

ಪ್ರಾರ್ಥನಾ ಸಭೆಯಲ್ಲಿ ಗಾಂಧೀಜಿಯವರ ಉಪವಾಸದ ನಿರ್ಧಾರ ಪ್ರಕಟವಾದ ಕೂಡಲೇ ಆಕೆ ಗಾಂಧೀಜಿ ಬಳಿ ಹೋದಾಗ ಅವರ ಮುಖದ ಮೇಲೆ ಅಸೀಮ ಶಾಂತ ಭಾವ ಮೂಡಿದ್ದನ್ನು ಆಕೆ ಕಂಡರಂತೆ. ಈ ಮಾತನ್ನು ಹೇಳಿದರೂ ಕೂಡ ಗಾಂಧಿಯವರ ಉಪವಾಸದಿಂದ ಆಕೆಗಾಗಿದ್ದ ನೋವು, ವ್ಯಥೆ ಮತ್ತೆ ಮುಖದಲ್ಲಿ ವ್ಯಕ್ತವಾಗಿತ್ತು.

"ಈ ಉಪವಾಸವನ್ನು ಅವರು ತಡೆದುಕೊಳ್ಳಬಲ್ಲರೆ" ಎಂದು ನಾನು ಕೇಳಿದೆ. ರಾಜಕುಮಾರಿ ಮೆಲ್ಲಗಿನ ದನಿಯಲ್ಲಿ ಹೇಳಿದರು - "ಅವರು ಒಂದು ವೇಳೆ ಸತ್ತರೂ ಏನು ಮಾಡುವಂತಿಲ್ಲ. ನಾವು ಅವರ ಮನಸ್ಸನ್ನು ತಿರುಗಿಸುವ ಪ್ರಯತ್ನಕ್ಕೂ ಹೋಗಬಾರದು. ತಮ್ಮ ನಿರ್ಧಾರವನ್ನು ಅವರೇ ಮಾಡಬೇಕು. ಆತ ದೇವರಿಗೆ ಸೇರಿದವರು".

❑

ಅಧ್ಯಾಯ ೪

ಗಾಂಧಿಯ ಅಂತಿಮ ಉಪವಾಸ

ಮಾರನೇ ಬೆಳಿಗ್ಗೆ ನಾನು ನವದೆಹಲಿಯ ಅಲ್ಬುಕರ್ಕ್ ರಸ್ತೆಯಲ್ಲಿರುವ ಬಿರ್ಲಾ ಭವನಕ್ಕೆ ಹೋದೆ. ಗಾಂಧಿ ಅಲ್ಲೇ ಇರುತ್ತಿದರು. ನಾನು ಹೋದಾಗ ಅವರು ತಮ್ಮ ಉಪವಾಸಕ್ಕೆ ಮೊದಲಿನ ಕೊನೆಯ ಆಹಾರವನ್ನು ಸೇವಿಸುತ್ತಿದ್ದರು. ಉಪಹಾರ ಮುಗಿಸಲು ಅವರಿಗೆ ಅರ್ಧಗಂಟೆಬೇಕಾಯಿತು. ಹಾಗೆಂದರೆ ಅವರು ಎಂದಿಗಿಂತ ಹೆಚ್ಚು ತಿಂದರು ಎಂದರ್ಥವಲ್ಲ. ಆ ಸಸ್ಯಾಹಾರದ ಪ್ರತಿಯೊಂದು ತುತ್ತನ್ನೂ ಅವರು ನಿಧಾನವಾಗಿ ಎಚ್ಚರಿಕೆಯಿಂದ ಅಗಿದು ತಿನ್ನುತ್ತಿದ್ದರು. ನಾನು ಬಿರ್ಲಾ ಭವನದ ಹುಲ್ಲುಹಾಸಿನ ಅಂಚಿನಲ್ಲಿ ನಿಂತು ನೋಡುತ್ತಿದ್ದೆ. ಉದ್ಯಾನವನದ ಮಧ್ಯೆ ಒಂದು ಮಂಚದ ಮೇಲೆ ಗಾಂಧಿ ಕಾಲುಮಡಚಿ ಕೂತಿದ್ದರು. ಅವರ ಪಕ್ಕ ಕೂತಿದ್ದ ಪ್ರಮುಖ ವ್ಯಕ್ತಿ, ಈ ದೇವಮಾನವನಿಗೆ ತಮ್ಮ ನಿರ್ಧಾರವನ್ನು ಬದಲಿಸುವಂತೆ ಹೇಳುತ್ತಿರಬಹುದೇನೋ ಎಂದು ನಾನು ಯೋಚಿಸಿದ್ದೆ.

ನಾನು ನಿಂತಿದ್ದ ಸ್ಥಳಕ್ಕೆ ಆ ಪ್ರಮುಖ ವ್ಯಕ್ತಿಯ ಬೆನ್ನು ಮಾತ್ರ ಕಾಣುತ್ತಿತ್ತು. ಆದರೂ ಬೆನ್ನುಭಾಗದಿಂದಲೇ ಅವರನ್ನು ಸರ್ದಾರ್ ವಲ್ಲಭಬಾಯ್ ಪಟೇಲ್ ಎಂದು ಸ್ಪಷ್ಟವಾಗಿ ಗುರುತಿಸಬಹುದಿತ್ತು. ಉದ್ದಕ್ಕೆ ಇಳಿಬಿದ್ದ ಅವರ ಉಡುಪು ಮತ್ತು ಬಿಸಿಲಿಗೆ ಹೊಳೆಯುತ್ತಿದ್ದ ದೊಡ್ಡ ತಲೆಯನ್ನು ನೋಡಿದಾಗ ರೋಮನ್ ಸೆನೆಟರ್ ವಿಗ್ರಹಗಳ ನೆನಪಾಗುತ್ತಿತ್ತು. ವಲ್ಲಭಬಾಯ್ ಪಟೇಲರು ಪ್ರಧಾನಮಂತ್ರಿ ನೆಹರೂ ಅವರ ಡೆಪ್ಯೂಟಿ ಆಗಿದ್ದರೂ ಕೂಡ ಅನೇಕ ಮಂದಿಯ ದೃಷ್ಟಿಯಲ್ಲಿ ಅವರು ನೆಹರೂಗಿಂತ ಹೆಚ್ಚು ಪ್ರಭಾವಶಾಲಿಯಾದ ವ್ಯಕ್ತಿಯಾಗಿದ್ದರು. ಇನ್ನೂ ಕೆಲವರು ಭಾರತದಲ್ಲೇ ಅತ್ಯಂತ ಶಕ್ತಿಶಾಲಿ ವ್ಯಕ್ತಿಯೆಂದರೆ ಸರ್ದಾರ್ ಪಟೇಲ್ ಎನ್ನುತ್ತಿದ್ದರು. ಗಾಂಧಿಯವರು ಹಿಂದಿನ ಸಂಜೆ ಮಾಡಿದ ಅತ್ಯಂತ ಕೌತುಕದ ಘೋಷಣೆಯ ನಂತರ ಈ ನಿರ್ಧಾರದಿಂದ ಅತ್ಯಂತ ಮುಜುಗರಕ್ಕೊಳಗಾದ ವ್ಯಕ್ತಿ ಪಟೇಲರು ಎಂದು ಜನ ಹೇಳತೊಡಗಿದ್ದರು.

ಗಾಂಧಿಯವರ ಮಂಚದ ಬಳಿ, ಪಟೇಲರು ಹಸಿರು ಬಣ್ಣದ ಬೆತ್ತದ ಕುರ್ಚಿಯಿಂದ ಮುಂದಕ್ಕೆ ಬಾಗಿಕೊಂಡು ಕುಳಿತಿದ್ದರು. ಮಾತಾಡುವಾಗ ಅವರ ಕೈ ಅತ್ತಿತ್ತ ಆಡುತ್ತಿತ್ತು. ಅವರಿಬ್ಬರ ವಯಸ್ಸಿನಲ್ಲಿ ಕೆಲವೇ ವರ್ಷಗಳ ಅಂತರವಿತ್ತು. ಸ್ವಾತಂತ್ರ್ಯಕ್ಕಾಗಿ ನಡೆದ ಸುದೀರ್ಘ ಹೋರಾಟದಲ್ಲಿ ಪಟೇಲರು ಗಾಂಧೀಜಿಯವರ ಬಲಗೈಬಂಟನಂತಿದ್ದರು. ಅನೇಕ [illegible] ಅವರು ಗಾಂಧಿಯವರೊಂದಿಗೇ ಜೈಲುವಾಸ ಅನುಭವಿಸಿದ್ದರು. ಇಪ್ಪತ್ತರ ದಶಕದ ಮಧ್ಯ[illegible] ಅವರು ತೆರಿಗೆ ಸಂದಾಯದ ವಿರುದ್ಧ ಬಾರ್ಡೋಲಿಯಲ್ಲಿ ಸತ್ಯಾಗ್ರಹ ನಡೆಸಿದಾಗ ಅವ[illegible]

'ಸರ್ದಾರ್' ಎಂಬ ಬಿರುದು ಸಿಕ್ಕಿತ್ತು. ಗಾಂಧಿ ಪಟೇಲರು ಮಾತಾಡುವಾಗ ಅಡಿಗೆ ಮನೆಯಿಂದ ಹೊರಬಂದ ಉಪಹಾರದ ತಟ್ಟೆಗಳು ನನ್ನ ಮುಂದೆಯೇ ಹಾದುಹೋದವು. ಹೀಗಾಗಿ ಗಾಂಧಿಯವರ ಕೊನೆಯ ಉಪಾಹರದಲ್ಲಿದ್ದ ಪದಾರ್ಥಗಳು ಯಾವುವು ಎಂಬುದನ್ನು ತಿಳಿದಂತಾಯಿತು. ಮಡಿವಂತ ಹಿಂದೂಗಳ ಆಹಾರ ಪಥ್ಯಕ್ರಮವನ್ನೇ ಗಾಂಧಿ ಅನುಸರಿಸು ತ್ತಿದ್ದರು. ಅವರು ಮಾಂಸ ತಿನ್ನುತ್ತಿರಲಿಲ್ಲ. ಹಿಂದೂಗಳು ಗೋವನ್ನು ಪೂಜ್ಯಭಾವನೆಯಿಂದ ಕಾಣುತ್ತಾರೆ. ಗಾಂಧೀಜಿಯೂ ಇದನ್ನು ಪಾಲಿಸುತ್ತಿದ್ದರು. ಹೀಗಾಗಿ ಅವರು ಹಸುವಿನ ಹಾಲಿಗೆ ಬದಲಾಗಿ ಮೇಕೆಯ ಹಾಲನ್ನು ಕುಡಿಯುತ್ತಿದ್ದರು. ಬೆಳಗಿನ ಉಪಾಹಾರದಲ್ಲಿದ್ದ ಪದಾರ್ಥಗಳೆಂದರೆ ಮೇಕೆಯ ಹಾಲಿನ ಮೊಸರಿನಲ್ಲಿ ಬೆರೆಸಿದ ಬೇಯಿಸಿದ ಸೊಪ್ಪು ಮತ್ತು ಕತ್ತರಿಸಿದ ಸೇಬು ಹಾಗೂ ಕಿತ್ತಳೆ ಚೂರುಗಳು.

ಬಿರ್ಲಾ ಅವರ ತೋಟದಲ್ಲಿ ಗಾಂಧಿಯವರಿಗಾಗಿ ವ್ಯವಸ್ಥೆ ಮಾಡಿದ್ದ ಮೇಜಿನ ಮೇಲಿದ್ದ ಬಿಳಿಯ ಹಾಸು ಹಾಗೂ ಬೆಳ್ಳಿಯ ಪಾತ್ರೆಗಳು ಎದ್ದು ಕಾಣುತ್ತಿದ್ದವು. ಜನವರಿಯ ಮುಂಜಾವಿನಲ್ಲಿ ಆ ದೃಶ್ಯ ಇನ್ನಷ್ಟು ಸುಂದರವಾಗಿತ್ತು. ಹೂವಿನ ಪಾತಿಗಳಿಗೆಕೆಂಪು ಇಟ್ಟಿಗೆಗಳ ಅಂಚು ಆ ಬಣ್ಣದ ಹಿನ್ನೆಲೆಯಲ್ಲಿ ಅರಳಿದ ಚೆಂಡುಹೂ ಮತ್ತು ನಾಸ್ಟೂರಿಯಂಗಳು ಮನೋಹರವಾಗಿದ್ದವು. ಗಾಂಧೀಜಿಯವರ ಉಪಾಹಾರದ ಮೇಜಿನ ಹಿಂದೆ ಗಂಟೆಯಾಕಾರದ ಹೂಗಳ ಬಳ್ಳಿ ಕಮಾನಿಗೆ ಹಬ್ಬಿತ್ತು. ಅವರ ಮಂಚಕ್ಕೆ ಸ್ವಲ್ಪದೂರದಲ್ಲಿ ಅಲಂಕಾರಿಕ ಇಟ್ಟಿಗೆಗಳಿಂದ ರಚಿಸಲಾಗಿದ್ದ ಕೊಳದಿಂದ ಹರಿಯುತ್ತಿದ್ದ ತೊರೆಯೊಂದಿಗೆ ನೇರಳೆ ಬಣ್ಣದ ಹೂ ಬಳ್ಳಿಗಳು ಚಾಚಿಕೊಂಡಿದ್ದವು. ನಾನು ಭಾರತದಲ್ಲಿದ್ದಷ್ಟು ಕಾಲವೂ ನನ್ನನ್ನು ಅಚ್ಚರಿಗೊಳಿಸಿದ ಒಂದು ಸಂಗತಿಯೆಂದರೆ ಸಹಸ್ರಾರು ಜನರ ದೃಷ್ಟಿಯಲ್ಲಿ ಸರಳತೆಯ ಪ್ರತೀಕವಾಗಿದ್ದ ಗಾಂಧೀಜಿ, ಭಾರತದ ಅತ್ಯಂತ ಶ್ರೀಮಂತ ಜವಳಿ ಉದ್ಯಮಿಯ ಮನೆಯಲ್ಲಿರಲು ಒಪ್ಪಿಕೊಂಡಿದ್ದೇಕೆ? ನನಗೆ ಎಂದಾದರೂ ಅವಕಾಶ ಸಿಕ್ಕಿದ್ದರೆ ಈ ಬಗ್ಗೆ ಗಾಂಧಿ ಏನು ಹೇಳುತ್ತಾರೆ ಎಂದು ಕೇಳಿಬಿಡುತ್ತಿದ್ದೆ.

ಸಾಮಾನ್ಯ ಮನುಷ್ಯರ ದೃಷ್ಟಿಯಲ್ಲಿ ಬಿರ್ಲಾ ಎಂದರೆ ಭಾರೀ ಕೈಗಾರಿಕೋದ್ಯಮದ ಪ್ರತೀಕ ಮತ್ತು ಪಟೇಲರು ಇದಕ್ಕೆ ವಕ್ತಾರ. ಜನಸಾಮಾನ್ಯರು ಪಟೇಲರನ್ನು ಶ್ರೀಮಂತರೊಂದಿಗೆ, ನೆಹರೂ ಅವರನ್ನು ಎಡಪಂಥೀಯ ಮನೋಭಾವದೊಂದಿಗೆ ಸಮೀಕರಿಸುತ್ತಿದ್ದರು. ಪಟೇಲರು ಕೈಗಾರಿಕೋದ್ಯಮಿಗಳ ಹಾಗೂ ಮಹಾರಾಜರುಗಳ ಪರವಾಗಿ ಮಾತಾಡಿದರೆ ನೆಹರೂ ಸಾಮಾನ್ಯ ಮನುಷ್ಯನ ಹಕ್ಕುಗಳ ಬಗ್ಗೆ ಕಾಳಜಿ ವಹಿಸುತ್ತಿದ್ದರು. ಪಟೇಲ್ ಮತ್ತು ನೆಹರೂ ಅವರ ಧೋರಣೆಗಳಲ್ಲಿನ ಈ ಘರ್ಷಣೆ ಯಾವಾಗಲೂ ಕುದಿಯುತ್ತ ಸ್ಫೋಟಕ ಸ್ಥಿತಿಯಲ್ಲಿ ಇರುತ್ತಿತ್ತು. ಆದರೂ ಅದು ಎಂದೂ ಸ್ಫೋಟಗೊಳ್ಳಲಿಲ್ಲ.

ಪಟೇಲರು ಒಳಾಡಳಿತ ವ್ಯವಹಾರಗಳ, ಸಂಸ್ಥಾನಗಳ ಹಾಗೂ ವಾರ್ತಾ ಮತ್ತು ಪ್ರಸಾರ ಇಲಾಖೆಯ ಹೊಣೆ ವಹಿಸಿಕೊಂಡಿದ್ದರು. ಸಂಪುಟವು ಪಟೇಲರ ಗುಂಪು, ನೆಹರೂ ಗುಂಪು ಎಂದು ಸಮಾನವಾಗಿ ಇಬ್ಭಾಗಗೊಂಡಿತ್ತು. ಯಾರು ಇದರಲ್ಲಿ ನಿಜವಾಗಿಯೂ ಬಲಶಾಲಿಗಳು ಎಂಬುದನ್ನೇನಾದರೂ ಬಹಿರಂಗವಾಗಿ ಪರೀಕ್ಷೆಗೊಡ್ಡಿ ನೋಡಿದರೆ ಪಟೇಲರು ಸುಗಮವಾಗಿ

ಕಾರ್ಯನಿರ್ವಹಿಸುವಂತಹ ಒಂದು ರಾಜಕೀಯ ವ್ಯವಸ್ಥೆಯನ್ನು ಅನೇಕ ವರ್ಷಗಳಿಂದಲೇ ರೂಪಿಸಿಕೊಂಡು ಬಂದಿದ್ದರು ಎಂಬ ಅಂಶ ಗೋಚರಿಸುತ್ತಿತ್ತು. ನೆಹರೂಗೆ ಪಟೇಲರಿಗಿಂತ ಹೆಚ್ಚಿನ ದೂರದೃಷ್ಟಿಯಿದ್ದರೂ ಮತ್ತು ಎಷ್ಟೇ ಜನಪ್ರಿಯರಾಗಿದ್ದರೂ, ಅಪಾರಸಂಖ್ಯೆಯ ನಿಷ್ಠಾವಂತ ಅನುಯಾಯಿಗಳನ್ನು ಪಡೆದಿದ್ದರೂ ಪಟೇಲರು ಸಾಧಿಸಿದ್ದನ್ನು ಅವರು ಸಾಧಿಸಿರಲಿಲ್ಲ.

ಹಿಂದಿನರಾತ್ರಿ ಗಾಂಧಿಯವರ ಬಹುಮಹತ್ವದ ಉಪವಾಸ ನಿರ್ಣಯ ಪ್ರಕಟವಾದ ಮೇಲಂತೂ ಪ್ರಧಾನಮಂತ್ರಿ ಮತ್ತು ಉಪಪ್ರಧಾನಮಂತ್ರಿಯ ನಡುವಿನ ಭಿನ್ನಾಭಿಪ್ರಾಯಗಳಿಂದ ಸರ್ಕಾರವೇ ಇಬ್ಭಾಗವಾಗಿ ಬಿಡುತ್ತದೆ ಎಂಬ ಗುಸುಗುಸು ಸುದ್ದಿಗೆ ಮತ್ತೆ ಜೀವ ಬಂದಂತ್ತಿತ್ತು. ಧಾರ್ಮಿಕ ಅಲ್ಪಸಂಖ್ಯಾತರ ಸಮಸ್ಯೆಯ ಜೊತೆಗೆ ಈಗ, ಅದು ಪರಿಹಾರವಾಗುವತನಕ ಗಾಂಧಿಯವರು ಉಪವಾಸ ನಿಲ್ಲಿಸುವುದಿಲ್ಲ ಎಂಬ ಷರತ್ತು ಸೇರಿಕೊಂಡಿತ್ತು. ಇದರಿಂದ ಏನೇನಾಗಲಿದೆಯೋ ಎಂಬ ಸ್ಫೋಟಕಸ್ಥಿತಿ ನಿರ್ಮಾಣವಾಗಿತ್ತು.

ಗಾಂಧಿಯವರು ಅತ್ಯಂತ ನಿಧಾನವಾಗಿ ತಮ್ಮ ಕೊನೆಯ ಉಪಾಹಾರ ಮಾಡುತ್ತಿದ್ದಾಗ, ಅವರೊಂದಿಗೆ ಮಾತಾಡುತ್ತಿದ್ದ ಪಟೇಲರ ಹಸ್ತವಿನ್ಯಾಸಗಳ ತೀವ್ರತೆ ಹೆಚ್ಚುತ್ತಾ ಹೋಯಿತು. ಗಾಂಧಿಯವರ ಉಪವಾಸದ ನಿರ್ಧಾರ ಸರ್ಕಾರವನ್ನು ಎಂತಹ ಬಿಕ್ಕಟ್ಟಿಗೆ ಸಿಕ್ಕಿಸಿದೆ ಎಂಬ ಅಂಶವನ್ನು ಪಟೇಲರು ಗಾಂಧಿಯವರಿಗೆ ಮನವರಿಕೆ ಮಾಡಿಕೊಡಲು ಯತ್ನಿಸುತ್ತಿದ್ದಾರೆ ಎಂದು ಸ್ಪಷ್ಟವಾಗಿ ಊಹಿಸಬಹುದಿತ್ತು. ಅನೇಕ ಮುಸ್ಲಿಮರನ್ನು ನಂಬುವುದಕ್ಕಾಗುವುದಿಲ್ಲ ಎಂದು ಕೇವಲ ಒಂದು ವಾರದ ಹಿಂದೆ ಪಟೇಲರು ಹೇಳಿಕೆ ನೀಡಿದ್ದರು. ಲಕ್ನೋದಲ್ಲಿ ಭಾಷಣ ಮಾಡುತ್ತಾ ಅವರು ಆರ್.ಎಸ್.ಎಸ್. ಎಂಬ ಮೊದಲ ಅಕ್ಷರಗಳಿಂದ ಗುರುತಿಸಲಾಗುವ ಕಟ್ಟಾ ಹಿಂದೂ ಯುವಕರ ಚಳುವಳಿಗೆ ಸಾರ್ವಜನಿಕವಾಗಿಯೇ ಉತ್ತೇಜನ ವ್ಯಕ್ತಪಡಿಸಿದ್ದರು.

ಈ ರಾಷ್ಟ್ರೀಯ ಸ್ವಯಂ ಸೇವಕ ಸಂಘದಲ್ಲಿ ಹೊಸದಾಗಿ ಸೇರಿಕೊಂಡಿದ್ದವರೆಲ್ಲ ಮುಖ್ಯವಾಗಿ ಆಫೀಸುಗಳ ಗುಮಾಸ್ತರು ಅಥವಾ ವ್ಯಾಪಾರಿ ಕುಟುಂಬಗಳಿಂದ ಬಂದ ಹುಡುಗರು. ದೈಹಿಕಬಲ, ಶಿಸ್ತನ್ನು ಬೆಳೆಸುವುದು ಈ ಸಂಘಟನೆಯ ಉದ್ದೇಶ ಎಂದು ಅವರು ಮೇಲೆ ಹೇಳಿಕೊಳ್ಳುತ್ತಿದ್ದರು. ಯಾವುದೇ ಖಾಲಿ ಜಾಗವಿರಲಿ ಅಲ್ಲಿ ಬೆಳಗಿನ ಹೊತ್ತು ಈ ಯುವಕರು ಗುಂಪು ಸೇರುತ್ತಿದ್ದರು. ಕವಾಯತು ಮಾಡುತ್ತಿದ್ದರು. ಭಾಗವಹಿಸಿದ ಪ್ರತಿಯೊಬ್ಬರಿಗೂ ಒಂದು ಲೋಟ ಹಾಲು ಸಿಗುತ್ತಿತ್ತು. ಇದು ಕಡಿಮೆ ಆದಾಯದ ಗುಂಪುಗಳಿಗೆ ಬಲವಾದ ಆಕರ್ಷಣೆಯಾಗಿತ್ತು. ಈ ಹಾಲಿನ ಖರ್ಚನ್ನು ಯಾರು ವಹಿಸಿಕೊಳ್ಳುತ್ತಾರೆ ಎಂಬುದು ಎಂದಿಗೂ ಬಹಿರಂಗವಾಗುತ್ತಿರಲಿಲ್ಲ. ಆದರೂ ಕೆಲವು ದೊಡ್ಡದೊಡ್ಡ ಕೈಗಾರಿಕೋದ್ಯಮಿಗಳು ಹಾಗೂ ಕೆಲವು ಮಹಾರಾಜರುಗಳು ಇದಕ್ಕೆ ಅನುಕೂಲ ಒದಗಿಸುತ್ತಿದ್ದಾರೆ ಎಂಬ ಸುದ್ದಿ ಇತ್ತು. ತಮ್ಮದು ರಾಜಕೀಯ ಸಂಘಟನೆಯಲ್ಲ ಎಂದು ಆರ್.ಎಸ್.ಎಸ್. ಹೇಳುತ್ತಿ ಆದರೂ ಈ ತರುಣರು ಕುಡಿಯುತ್ತಿದ್ದ ಹಾಲಿನೊಂದಿಗೆ ಜನಾಂಗೀಯ ಪ್ರಜ್ಞೆ ಜಾಗೃತಗೊಳಿಸುವ ತಿಳುವಳಿಕೆಯೂ ಸಾಕಷ್ಟು ಒಳಸೇರುತ್ತಿತ್ತು. ಅವರ ರಹಸ್ಯ ಸಾ

ಕೆಲವು ಭಾಗಗಳನ್ನು ಓದುವ ಅವಕಾಶ ನನಗೆ ಸಿಕ್ಕಿತ್ತು. ಹಿಂದೂ ಪಾರಮ್ಯದ ಬಗ್ಗೆ ಅದರಲ್ಲಿದ್ದ ಪ್ರತಿಯೊಂದು ಸಾಲೂ ಸಹ, ಜರ್ಮನಿಯಲ್ಲಿ ೩೦ರ ದಶಕದಲ್ಲಿ ತಲೆಎತ್ತಿದ ಜನಾಂಗೀಯವಾದವು, ತಮ್ಮದೇ ಶ್ರೇಷ್ಠ ಜನಾಂಗ, ಎಂದು ಹೇಗೆ ಅಲ್ಲಿನ ಜನರಿಗೆ ಬೋಧಿಸುತ್ತಿತ್ತೋ ಅದನ್ನೇ ನೆನಪಿಸುವಂತಿತ್ತು.

ಪ್ರಜಾಪ್ರಭುತ್ವದ ಧೋರಣೆಗಳು ಸರಿಯಾಗಿಲ್ಲ. ಮುಸ್ಲಿಮರನ್ನು ಹಿಂದೂ ರಾಷ್ಟ್ರದ ಸಂಪೂರ್ಣ ಅಧೀನದಲ್ಲಿರುವ ವಿದೇಶೀಯರು ಎಂದು ಪರಿಗಣಿಸಬೇಕು ಎಂಬ ಆರ್.ಎಸ್.ಎಸ್. ನಿಲುವು ನಂಬಿಕೆಗಳನ್ನು ನೋಡಿದಾಗ ಈ ಯುವ ಚಳುವಳಿಯು ಪಶ್ಚಿಮದ ಫ್ಯಾಸಿಸ್ಟ್ ಹಾಗೂ ಸರ್ವಾಧಿಕಾರಿ ಧೋರಣೆಯಂತೆಯೇ ಬೆಳೆಯುವ ಹಾಗೂ ಜ್ಯೂಗಳ ವಿರುದ್ಧ ನಾಜಿಗಳು ವರ್ತಿಸಿದಂತೆ ಇವರೂ ಕೂಡ ಅಲ್ಪಸಂಖ್ಯಾತರ ವಿರುದ್ಧ ವರ್ತಿಸುವ ಅಪಾಯ ಎದ್ದು ಕಾಣುತ್ತಿತ್ತು.

ಈ ಸಂಘಟನೆಯು, ಹಿಂದೂ ಮಹಾಸಭಾ ಎಂಬ ದೊಡ್ಡ ಸಂಘಟನೆಯೊಂದರ ಕವಲಾಗಿದ್ದು ಧಾರ್ಮಿಕ ಸಂಪ್ರದಾಯಗಳು ಹಾಗೂ ಜಾತೀಯ ಆಚಾರ ವಿಚಾರಗಳನ್ನು ಸಂರಕ್ಷಿಸಿಕೊಳ್ಳುವುದು ಮಹಾಸಭಾದ ಉದ್ದೇಶವಾಗಿತ್ತು. ಮತ್ತು ೨೦೦೦ ವರ್ಷಗಳ ಹಿಂದಿನ ಪರಿಶುದ್ಧ ಹಿಂದೂಧರ್ಮವನ್ನು ಪುನರ್ ಸ್ಥಾಪಿಸಬೇಕು ಎಂದು ಅದು ಪ್ರತಿಪಾದಿಸುತ್ತಿತ್ತು. ಧಾರ್ಮಿಕ ದೊಂಬಿಗಲಭೆಗಳು ನಡೆದಾಗ ಇದರದು ಮುಖ್ಯಪಾತ್ರ, ರಾಷ್ಟ್ರೀಯ ಜೀವನದಲ್ಲಿ ಮುಸ್ಲಿಮರಿಗೆ ಯಾವುದೇ ಸ್ಥಾನ ನೀಡುವುದನ್ನು ತೀವ್ರವಾಗಿ ವಿರೋಧಿಸುತ್ತಿದ್ದ ಈ ಉಗ್ರ ಸಂಘಟನೆಗೆ ಕಾಂಗ್ರೆಸ್ಸಿನಲ್ಲಿ ಪ್ರಾತಿನಿಧ್ಯ ನೀಡಬೇಕು ಎಂದು ಪಟೇಲರು ಲಕ್ನೋದಲ್ಲಿ ಭಾಷಣ ಮಾಡುವಾಗ ಸೂಚಿಸಿದ್ದರಿಂದ ಎಲ್ಲೆಡೆಯೂ ಕೋಲಾಹಲ ಮೂಡಿತ್ತು. ಇದಕ್ಕೆ ಪ್ರತಿಯಾಗಿ ನೆಹರೂ ಅವರು ಪ್ರಜೆಗಳು ಯಾವ ಧರ್ಮಕ್ಕೇ ಸೇರಿದವರಾಗಿರಲಿ ಎಲ್ಲರನ್ನೂ ಸಮಾನವಾಗಿ ಪರಿಗಣಿಸಬೇಕು ಎಂದು ಉಗ್ರವಾಗಿ ಪ್ರತಿಪಾದಿಸುತ್ತಿದ್ದರು. ಸ್ವತಃ ಉಚ್ಚವರ್ಗಕ್ಕೆ ಸೇರಿದ್ದ ನೆಹರೂ ಅಪ್ರತಿಮ ಧೈರ್ಯ ತೋರಿಸಿದ್ದರಿಂದ ಎಲ್ಲ ಧರ್ಮಗಳ ಜನರ ಗೌರವವನ್ನೂ ಸಂಪಾದಿಸಿದ್ದರು. ಅವರ ಧೈರ್ಯ ಯಾವ ರೀತಿಯದೆಂದರೆ ಒಂದು ಸಲ ಮುಸ್ಲಿಂ ಅಂಗಡಿ ಗಳನ್ನು ಲೂಟಿ ಮಾಡುತ್ತಿದ್ದ ಹಾಗೂ ಮುಸ್ಲಿಂ ವ್ಯಾಪಾರಿಗಳನ್ನು ಕೊಲೆ ಮಾಡುತ್ತಿದ್ದ ಹಿಂದೂಗಳನ್ನು ನೋಡಿದ ಅವರು ಕೂಡಲೇ ಕಾರಿನಿಂದಿಳಿದು ಹಿಂದೂಗಳನ್ನು ಬರಿಗೈನಿಂದಲೇ ಹೊಡೆದಿದ್ದರು.

ಪಟೇಲ್ ಮತ್ತು ಗಾಂಧೀಜಿಯ ನಡುವೆ ಈ ಅಲ್ಪಸಂಖ್ಯಾತ ಸಮಸ್ಯೆಯ ಬಗ್ಗೆ ಅದೇನು ವಾದವಿವಾದ ನಡೆದಿತ್ತೋ ಏನೋ ಆದರೆ ಬಣ್ಣಬಣ್ಣದ ಉಡುಪುಗಳಲ್ಲಿದ್ದ ಹೆಂಗಸರು ಗುಂಪುಗುಂಪಾಗಿ ಬಂದು ಪೋರ್ಟಿಕೋದಲ್ಲಿ ಸದ್ದಿಲ್ಲದೆ ಕುಳಿತಾಗ ಇದುವರೆಗಿನ ನಾಟಕೀಯ ಸನ್ನಿವೇಶಕ್ಕೆ ಮತ್ತಷ್ಟು ರಂಗು ಬಂದಂತಾಯಿತು. ಹೀಗೆ ಬಂದವರಲ್ಲಿ ಮುಸ್ಲಿಂ ಹೆಂಗಸರೇ ಹೆಚ್ಚಾಗಿದ್ದರು. ಕೊನೆಗೊಮ್ಮೆ ಸರ್ದಾರರು ತಾವು ಹೇಳಲಿದ್ದ ಮುಖ್ಯ ವಿಷಯಕ್ಕೆ ಬಂದಂತಿತ್ತು. ಅವರು ಆಕಾಶದತ್ತ ಬೆರಳು ಮಾಡಿ ಆಕಾಶವೇ ಕಳಚಿ ಬೀಳುವುದೇನೋ ಎಂದು ಸೂಚಿಸುತ್ತಿದ್ದಂತೆ ಕಂಡಿತು. ಅನಂತರ ಅವರು ಕುರ್ಚಿಯಿಂದೆದ್ದು ಥಟ್ಟನೆ ಹೊರಟುಹೋದರು.

ಉಪವಾಸವನ್ನು ಔಪಚಾರಿಕವಾಗಿ ಆರಂಭಿಸುವ ಗಳಿಗೆ ಹತ್ತಿರವಾಯಿತು. ಈ ಗಳಿಗೆಗೆ ಸಾಕ್ಷಿಯಾಗಿ ಬಂದಿದ್ದ ಗಂಡಸರ ಹಾಗೂ ಹೆಂಗಸರ ಗುಂಪು ಗಾಂಧಿಯವರ ಮಂಚಕ್ಕೆ ಸಮೀಪ ಸರಿಯಿತು. ಈ ಗುಂಪಿನಲ್ಲಿ ನೆಹರೂ ಸೋದರಳಿಯನ ಹೆಂಡತಿ ಮತ್ತು ಪಟೇಲರ ಮಗಳೂ ಕೂಡ ಇದ್ದರು. ನಾನು ಗಾಂಧಿಯವರಿಂದ ಕೇವಲ ಒಂದು ಮಾರು ದೂರದಲ್ಲಿದ್ದೆ. ಅವರು ಬೇಯಿಸಿದ ಸೊಪ್ಪಿನ ಕೊನೆಯ ತುತ್ತನ್ನು ಬಾಯಿಗಿಟ್ಟುಕೊಂಡರು. ಹಾಗೂ ಮೇಕೆಹಾಲಿನ ಕೊನೆಯ ಗುಟುಕನ್ನು ಕುಡಿದರು. ತಮ್ಮ ಪ್ರಸಿದ್ಧವಾದ ಐದು ಶಿಲಿಂಗ್ ಬೆಲೆಯ ಗಡಿಯಾರವನ್ನು ಎದುರಿಗಿಟ್ಟುಕೊಂಡರು. ಗಾಂಧಿಯವರ ಹಳೆಯ ಗಡಿಯಾರವನ್ನು ಯಾರೋ ಒಬ್ಬ ಕದ್ದಿದ್ದ. ಅನಂತರ ಗಡಿಯಾರದ ತಯಾರಕರು ಈಗಿನ ಹೊಸ ಗಡಿಯಾರವನ್ನು ಕೊಟ್ಟಿದ್ದರು. ಈಗ ಗುಂಪಿನಲ್ಲಿದ್ದ ಕೆಲವು ಹೆಂಗಸರು ಅಳತೊಡಗಿದ್ದರು. ೭೯ನೇ ಈ ಇಳಿ ವಯಸ್ಸಿನಲ್ಲಿ ಗಾಂಧಿಯವರ ದೇಹದ ಮೇಲೆ ಉಪವಾಸದ ಪರಿಣಾಮವೇನಾಗಬಹುದು ಎಂದು ಅವರಿಗೆ ತಿಳಿದಿತ್ತು. ಗಾಂಧಿ ಆ ಹೆಂಗಸರ ಕಡೆ ತಿರುಗಿ, ತೀರ ಸಮೀಪದಲ್ಲಿರುವವರಿಗೆ ಮಾತ್ರವೇ ಕೇಳಿಸುವಷ್ಟು ಮೆಲ್ಲಗಿನ ದನಿಯಲ್ಲಿ "ನಾನೇನು ಮಾಡಬೇಕೆನ್ನುತ್ತೀರಿ? ಇಡೀ ಜಗತ್ತೇ ಹುಚ್ಚುಹುಚ್ಚಾಗಿ ವರ್ತಿಸುತ್ತಿದೆ. ನಾನೂ ಹಾಗೇ ಮಾಡಲೆ? ಇಲ್ಲ ನಾನು ಹುಚ್ಚನಾಗುವುದು ದೇವರಿಗಾಗಿ ಮಾತ್ರ" ಅಂದರು. ಗಡಿಯಾರದ ಮುಳ್ಳು ಹನ್ನೊಂದು ತೋರಿಸಿತು. ಉಪವಾಸ ಆರಂಭವಾಗಿತ್ತು.

ಗಾಂಧೀಜಿ ಯಾವ ಧಾರ್ಮಿಕ ಐಕ್ಯತೆಗಾಗಿ ಉಪವಾಸವನ್ನು ಆರಂಭಿಸಿದ್ದರೋ ಅಂತಹ ಉಪವಾಸವನ್ನು ಪ್ರಾರ್ಥನೆಯಿಂದಲೇ ಆರಂಭಿಸುವುದು ಸಾಂಕೇತಿಕವಾಗಿತ್ತು. ಈ ಪ್ರಾರ್ಥನೆ ಜಗತ್ತಿನ ಮೂರು ಬಹುದೊಡ್ಡ ಧರ್ಮಗಳ ಪ್ರಾರ್ಥನೆಗಳನ್ನು ಒಳಗೊಂಡಿತ್ತು. ಮೊದಲು ಕುರಾನಿನ ಕೆಲವು ಭಾಗಗಳ ಪಠಣವಾಯಿತು. ನಂತರ ಮಹಿಳೆಯರು ಕ್ರಿಶ್ಚಿಯನ್ ಸ್ತೋತ್ರಗಳನ್ನು ಪಠಿಸಿದರು. ಈ ಸ್ತೋತ್ರಗಳಲ್ಲಿ ಗಾಂಧಿಯವರಿಗೆ ಅತ್ಯಂತ ಪ್ರಿಯವಾದುದನ್ನು ಸುಶೀಲಾ ಅಯ್ಯರ್ ಮಾಡ್ಡಿದ್ದರು ಅವು ಭವಿಷ್ಯದ ಸೂಚನೆಯಂತಿದ್ದವು. 'When I survey the wondrous cross on which the prince of glory died'...... ನಂತರ ಭಗವದ್ಗೀತೆಯ ಶ್ಲೋಕಗಳನ್ನು ಪಠಿಸಲಾಯಿತು. ಭಗವದ್ಗೀತೆಯ ಈ ಸಾಲುಗಳು ದೇವರ ಹಾಗೂ ಮಾನವಜೀವಿಗಳ ವಿಷಯದಲ್ಲಿ ತಮ್ಮ ಕರ್ತವ್ಯಗಳೇನು ಎಂಬುದನ್ನು ಹೇಳುತ್ತಿದ್ದವು. ಕೊನೆಯದು ರಾಮಧುನ್. ಆದರೆ ಇದಕ್ಕೆ ಗಾಂಧಿಯವರ ಸ್ವಂತದ ರಚನೆಯನ್ನೂ ಸೇರಿಸ ಲಾಗಿತ್ತು. ಹಿಂದೂ ಮುಸ್ಲಿಮರ ಸೋದರತ್ವವನ್ನು ಸಾರುವ ಹಾಗೂ ಎಲ್ಲ ದೇವರೂ ಒಬ್ಬನೇ, ಎಲ್ಲರಿಗೂ ದೇವರೊಬ್ಬನೇ ಎಂಬುದನ್ನು ಹೇಳುವ ರಚನೆ ಪ್ರಸ್ತುತ ಸಂದರ್ಭಕ್ಕೆ ಬಹಳ ಸೂಕ್ತವಾಗಿತ್ತು. ಈ ರಚನೆಯ ಕೊನೆಯ ಸಾಲುಗಳು-

ಈಶ್ವರ ಅಲ್ಲಾ ತೇರೋನಾಮ್
ಸಬ್‌ಕೋ ಸನ್ಮತಿ ದೇ ಭಗವಾನ್....

ಸಾಯಂಕಾಲ ನಾವು ಪುನಃ ಪ್ರಾರ್ಥನಾ ಸಮಯಕ್ಕೆ ಬಂದೆವು. ಗಾಂಧೀಜಿಯವರ ಸಂಜೆಯ ಪ್ರಾರ್ಥನಾ ಸಭೆಗಳಲ್ಲಿ ಯಾವುದೋ ಒಂದು ರೀತಿಯ ಆತ್ಮೀಯ ವಾತಾವರಣ

ತುಂಬಿರುತ್ತಿತ್ತು. ಬಿರ್ಲಾ ಭವನದ ಭವ್ಯ ಉದ್ಯಾನವನದ ಔಪಚಾರಿಕ ವ್ಯವಸ್ಥೆಯೂ ಅದನ್ನು ಅಳಿಸುವುದು ಸಾಧ್ಯವಿರಲಿಲ್ಲ. ಸುತ್ತಮುತ್ತಲಿನ ಜನ ಗುಂಪುಗುಂಪಾಗಿ ಬರುತ್ತಿದ್ದರು. ಸದ್ದು ಮಾಡದೆ ನೆಲದ ಮೇಲೆ ಕುಳಿತ ಅವರ ಮನಸ್ಸುಗಳು ಕುಂದಿದ್ದವು. ಅವರೆಲ್ಲ ಕೆಳದನಿಯಲ್ಲಿ ಪರಸ್ಪರ ಮಾತಾಡಿಕೊಳ್ಳುತ್ತಿದ್ದರು. ಯಾವುದೋ ಮಗು ಅತ್ತಾಗ ಕೂಡಲೇ ಅದನ್ನು ಸಮಾಧಾನ ಪಡಿಸಿದರು. ಗಾಂಧಿ ಬರುತ್ತಾರೋ ಇಲ್ಲವೋ ಎಂದು ಎಲ್ಲರೂ ಕಾತುರದಿಂದ ನಿರೀಕ್ಷಿಸುತ್ತಿದ್ದರು.

ಜನವರಿ ತಿಂಗಳ ನಿರ್ಮಲ ಆಕಾಶದಿಂದಿಳಿದ ಸಂಜೆಯ ಸೂರ್ಯನ ಕಿರಣಗಳಲ್ಲಿ ಮನೋಹರವಾದ ಹುಲ್ಲಿನ ಹಾಸು ಹೊಳೆಯುತ್ತಿತ್ತು. ನೀಳ ಕಂದು ಬಣ್ಣದ ಕಾಲುಗಳನ್ನು ಉದ್ಯಾನದ ಕಾಲುಹಾದಿಯಲ್ಲಿ ದೃಢವಾಗಿ ಊರುತ್ತ ಗಾಂಧಿ ಬಂದರು. ಅವರ ದುರ್ಬಲ ತೋಳುಗಳು ಎರಡು ಚಿಕ್ಕಮಕ್ಕಳ ಹೆಗಲುಗಳ ಮೇಲಿದ್ದವು. ಉದ್ಯಾನದ ಆವರಣದ ಕಮಾನಿನ ಕೆಳಗೆ ಹಾಸಿದ್ದ ಚೌಕಾಕಾರದ ಹಾಸಿನ ಮೇಲೆ ಅವರು ಕುಳಿತರು. ಗಾಂಧಿಯವರ ಮುಂದಿದ್ದ ಎಲ್ಲ ಮೈಕ್ರೋಫೋನುಗಳ ಮೇಲೂ 'ಚಿಕಾಗೊ' ಎಂಬ ದೊಡ್ಡ ಅಕ್ಷರಗಳ ಲೇಬಲ್ ಇತ್ತು.

ಮಹಾತ್ಮರ ಸುತ್ತ ಹಾಡುತ್ತಿರುವವರ ದನಿ ಸ್ವಲ್ಪವೂ ಚೆನ್ನಾಗಿಲ್ಲ ಎಂದು ಚಾರಿ ನನ್ನ ಕಿವಿಯಲ್ಲಿ ಹೇಳಿದ. ಆತ ಪೀಪಲ್ಸ್ ಏಜ್‌ನ ಕರೆಸ್ಪಾಂಡೆಂಟ್. ಅವನು ಅತ್ಯುತ್ತಮ ಹಾಡುಗಾರ.

ಪ್ರಾರ್ಥನೆ ಮುಗಿಯುತ್ತ ಬಂದಂತೆ ಎಲ್ಲ ಕಡೆ ಒಂದು ರೀತಿಯ ಸ್ತಬ್ಧತೆ ಕವಿಯಿತು. ಮುಕ್ತಾಯ ಹರಿತದಲ್ಲಿ ಗಾಂಧಿಯೂ ದನಿ ಸೇರಿಸಿದರು. ಹೆಂಗಸರು ಗೀತೆಯ ಕೊನೆಯ ಸಾಲುಗಳಿಗೆ ಲಯಬದ್ಧವಾಗಿ ಕೈತಟ್ಟುತ್ತಿದ್ದರು. ಗಾಂಧಿಯವರು ಮಾತಾಡುವುದನ್ನೇ ನಿರೀಕ್ಷಿಸುತ್ತ ಜನ ಮೌನವಾಗಿದ್ದರು.

ಗಾಂಧಿಯವರು ತಮ್ಮ ಮಾತಿನ ಮೊದಲಿನಲ್ಲಿಯೇ ತಾವು ಈ ದಿನ ಎಂದಿಗಿಂತ ಸ್ವಲ್ಪ ದೀರ್ಘವಾಗಿ ಮಾತಾಡುವುದಾಗಿ ವಿನಂತಿಸಿಕೊಂಡರು. ಸುಮಾರು ಆರು ಅಥವಾ ಎಂಟು ನಿಮಿಷಗಳ ಕಾಲ ಮಾತಾಡಿದರೆ ಸಾಕು ಎಂಬುದು ಅವರ ಪದ್ಧತಿ. ನಾಳೆಯಿಂದ ನಿಮ್ಮ ಬಳಿ ಬಂದು ಮಾತಾಡುತ್ತೇನೋ ಇಲ್ಲವೋ ಹೇಳಲಾರೆ. ಆದರೆ ಒಬ್ಬ ಹುಡುಗಿಯಂತೂ ಬರುತ್ತಾಳೆ. ಪ್ರಾರ್ಥನೆ ಎಂದಿನಂತೆ ನಡೆದುಕೊಂಡು ಹೋಗುತ್ತದೆ ಎಂದರು. ಅನಂತರ ಅವರು ತಾವು ಉಪವಾಸ ಆರಂಭಿಸಲು ಕಾರಣವೇನು ಎಂಬುದನ್ನು ಸರಳವಾಗಿ ತಿಳಿಸಿದರು. ಅವರು ಹಿಂದೂಸ್ತಾನಿಯಲ್ಲಿ ಅತ್ಯಂತ ನಿಧಾನವಾಗಿ ಮಾತಾಡುತ್ತಿದ್ದಾಗ ನನ್ನ ಭಾರತೀಯ ಸ್ನೇಹಿತರು ಅದರ ಭಾಷಾಂತರವನ್ನು ಆಗಿಂದಾಗಲೇ ನನ್ನ ಕಿವಿಯಲ್ಲಿ ಹೇಳುತ್ತಿದ್ದರು. "ಇಲ್ಲಿ ಹಿಂದೂಗಳೂ ಮುಸ್ಲಿಮರೂ ಸಿಕ್ಖರೂ ಸೋದರರಂತೆ ಬದುಕಬೇಕು. ಈಗ ನಡೆಯುತ್ತಿರುವುದನ್ನು ಗಮನಿಸಿ. ನಮ್ಮ ಅಂತರಂಗದ ಶೋಧನೆ ಮಾಡಿಕೊಂಡು ಈಗಾಗುತ್ತಿರುವುದನ್ನು ನಿಲ್ಲಿಸದಿದ್ದರೆ ನಮಗೆ ಭವಿಷ್ಯವೇ ಇಲ್ಲ. ಬೇರೆ ಎಲ್ಲೋ ಇರುವ ಮುಸ್ಲಿಮರು ಏನೇ ಮಾಡಿದರೂ ಸಹ ಹಿಂದೂಗಳಾಗಲೀ, ಸಿಕ್ಖರಾಗಲೀ ಪ್ರತೀಕಾರ ಕ್ರಮ ಕೈಗೊಳ್ಳಬಾರದು. ನಾನು ಮುಸ್ಲಿಮರ ಪರವಾಗಿ ಉಪವಾಸ ಮಾಡುತ್ತಿದ್ದೇನೆ ಎಂದು ಕೆಲವರು ಹೇಳುತ್ತಿದ್ದಾರೆ. ಇದು ಸ್ವಲ್ಪ ಮಾತ್ರ ನಿಜ. ನಾನು ಉಪವಾಸ ಮಾಡುತ್ತಿರುವುದು ನನ್ನ ಶುದ್ಧೀಕರಣಕ್ಕಾಗಿ".

ಇದೇ ಅವರ ಉಪವಾಸದ ನಿಜವಾದ ಕಾರಣ ಎಂದು ನನಗನ್ನಿಸಿತು. ಅವರು ಸ್ವತಃ ತಮ್ಮನ್ನು ತಾವೇ ಪರೀಕ್ಷೆಗೆ ಒಡ್ಡಿಕೊಂಡಿದ್ದರು. ತಮ್ಮ ನಿಲುವನ್ನು ಸಮರ್ಥಿಸಿಕೊಳ್ಳಲು ಅವರಿಗೆ ತಮ್ಮದೇ ಆದ ಧಾರ್ಮಿಕ ನಿಲುವು ಇತ್ತು. ಇದು ಮಾನವನ ಸೋದರತ್ವದಲ್ಲಿ ಅವರು ಹೊಂದಿದ್ದ ನಂಬಿಕೆ. ಇಂತಹ ನಂಬಿಕೆ ಕ್ರಿಶ್ಚಿಯನ್ ಧರ್ಮಕ್ಕೆ ಎಷ್ಟು ಅಗತ್ಯವೋ ಹಿಂದೂ ಧರ್ಮಕ್ಕೂ ಅಷ್ಟೇ ಅಗತ್ಯ. ಈಗ ಅವರ ಅಹಿಂಸಾತತ್ವಕ್ಕೆ ದೊಡ್ಡದೊಂದು ಸವಾಲು ಎದುರಾಗಿತ್ತು. ಭಾರತದಾದ್ಯಂತ ವ್ಯಾಪಿಸಿದ ಈ ಹಿಂಸಾತ್ಮಕ ಅವ್ಯವಸ್ಥೆಯನ್ನು ಒಪ್ಪಿಕೊಳ್ಳುವುದಕ್ಕೆ ಅವರು ಸಿದ್ಧವಿರಲಿಲ್ಲ. ರಕ್ತಪಾತದ ಇನ್ನೊಂದು ಕಲ್ಕತ್ತ, ಇನ್ನೊಂದು ಪಂಜಾಬನ್ನು ಸಹಿಸಿಕೊಳ್ಳುವುದು ಅವರಿಗೆ ಅಸಾಧ್ಯವಾಗಿತ್ತು. ಗಾಂಧಿಯವರು ತಮ್ಮ ಬದುಕಿನ ಅತ್ಯಂತ ಕಠಿಣವಾದ ಸವಾಲನ್ನು ಈಗ ಎದುರಿಸುತ್ತಿರುವುದು ಸ್ಪಷ್ಟವಾಗಿತ್ತು. ಇದು ಅಂತರಂಗದ ದ್ವೇಷವನ್ನು ಜಯಿಸಬೇಕಾದ ಸಮರವಾಗಿತ್ತು. ಮೂವತ್ತು ಮೂರು ವರ್ಷಗಳ ಕಾಲ ಅವರು ಹೊರಗಿನ ಶಕ್ತಿಯೊಂದರ ವಿರುದ್ಧ ಹೋರಾಡಿದ್ದರು. ಅಹಿಂಸೆ ಎಂಬ ಶಸ್ತ್ರ ಹಿಡಿದು ಜನರನ್ನು ಸ್ವಾತಂತ್ರ್ಯ ಸಮರದಲ್ಲಿ ತೊಡಗಿಸಿದ್ದರು. ಈಗ ಅವರಿಗೆ ಇದಕ್ಕಿಂತ ಕಠಿಣ ಕೆಲಸ ಎದುರಾಗಿತ್ತು. ಇದು ಮಾನವರ ಹೃದಯಗಳಲ್ಲಿರುವ ತಾಳ್ಮೆ ಮತ್ತು ಏಕತಾಭಾವನೆಯನ್ನು ಗೆದ್ದುಕೊಳ್ಳುವ ಕೆಲಸ. ಗಾಂಧಿಯವರು ಅತ್ಯಂತ ಶಾಂತವಾದ ದನಿಯಲ್ಲಿ ಮಾತಾಡುತ್ತಿರುವಾಗ ಜನರ ಅಂತರಂಗದ ಬಲವನ್ನು ಸಾಕಾರಗೊಳಿಸುವಂಥ ನಿಜವಾದ ಸಾಮರ್ಥ್ಯ ಅವರಿಗೆ ಮಾತ್ರ ಇದೆ ಅನ್ನಿಸಿತು. ಯಾಕೆಂದರೆ ಅವರು ಬೇರೆ ಇನ್ನಾರಿಗಿಂತಲೂ ಜನರ ಹೃದಯಗಳಿಗೆ ಆಪ್ತ ವಾಗಿದ್ದರು.

ಸುಮಾರು ಆರುನೂರಕ್ಕೂ ಹೆಚ್ಚು ಜನರಿದ್ದ ಆ ಸಭೆ ಗಾಂಧಿಯವರ ಪ್ರತಿಯೊಂದು ಮಾತನ್ನೂ ನೆಟ್ಟಕಿವಿಯಿಂದ ಆಲಿಸುತ್ತಿತ್ತು. "ಭಾರತದ ಈ ಒಕ್ಕೂಟದಲ್ಲಿರುವ ಹಿಂದೂಗಳು ಮತ್ತು ಸಿಕ್ಖರು ಅತ್ಯಂತ ಪರಾಕ್ರಮಶಾಲಿಗಳಾಗಿರಬೇಕು. ಅವರು ಈ ಧೈರ್ಯದ ಎಂತಹ ಪರಾಕಾಷ್ಠಸ್ಥಿತಿ ತಲುಪಬೇಕೆಂದರೆ ಒಂದು ವೇಳೆ ಪಾಕಿಸ್ತಾನದಲ್ಲಿ ಪ್ರತಿಯೊಬ್ಬ ಹಿಂದೂ, ಪ್ರತಿಯೊಬ್ಬ ಸಿಕ್ಖನ ಕೊಲೆಯಾದರೂ ಕೂಡ ಒಬ್ಬನೇ ಒಬ್ಬ ಮುಸ್ಲಿಮನಿಗೂ ತೊಂದರೆ ಯಾಗದಂತೆ ಅವರು ನೋಡಿಕೊಳ್ಳಬೇಕು. ಇಲ್ಲಿ ಒಬ್ಬ ಮುಸ್ಲಿಮನ ಕೊಲೆಯಾಯಿತೆಂದರೆ ಅದು ಹೇಡಿತನವೇ ಹೊರತು ಧೈರ್ಯವಲ್ಲ. ನನ್ನ ಉಪವಾಸದಿಂದ ಮುಸ್ಲಿಮರ ಮೇಲೆ ಭಾರೀ ಜವಾಬ್ದಾರಿ ಹೊರಿಸಿದಂತಾಗುತ್ತದೆ. ಅವರೂ ಕೂಡ ಭಾರತದ ಒಕ್ಕೂಟದಲ್ಲಿ ಸೋದರರಂತೆ ಬದುಕಬೇಕು ಮತ್ತು ಅವರು ಸರ್ಕಾರಕ್ಕೆ ವಿಧೇಯರಾಗಿರಬೇಕು, ಇದು ಅವರ ಕೃತ್ಯಗಳಲ್ಲಿ ವ್ಯಕ್ತವಾಗಬೇಕು". ಈ ಮಾತುಗಳ ನಂತರ ಗಾಂಧೀ ಇದ್ದಕ್ಕಿದ್ದಂತೆ ಇನ್ನೊಂದು ವಿಷಯಕ್ಕೆ ಧುಮುಕಿದರು. ಇದುವರೆಗೆ ಈ ವಿಷಯ ಗುಸುಗುಸು ಸುದ್ದಿಯಾಗಿತ್ತು ಅಷ್ಟೆ. ಸರ್ಕಾರದಲ್ಲಿ ಒಡಕು ಮೂಡಲಿದೆ ಎಂಬ ಈ ಗುಸುಗುಸು ಸುದ್ದಿಯ ಬಗ್ಗೆ ತನಿಖೆ ನಡೆಸಿದ್ದ ನಾವು ಗಾಂಧಿಯವರು ಆ ವಿಷಯವನ್ನೇ ನೇರವಾಗಿ ಕೈಗೆತ್ತಿಕೊಂಡಾಗ ಚಕಿತರಾದೆವು.

"ನೆಹರೂ ಗಾಂಧಿ ಸರಿಯಾಗಿದ್ದಾರೆ, ಪಟೇಲರು ಮಾತ್ರ ಕೆಟ್ಟವರು ಎಂದು ಕೆಲವರು

ಹೇಳುತ್ತಾರೆ. ಆದರೆ ಈ ರೀತಿಯ ಅಭಿಪ್ರಾಯ ಸರಿಯಲ್ಲ. ಸರ್ದಾರರು ಏನಾದರೂ ತಪ್ಪು ಮಾಡಿದರೆ ತಪ್ಪು ಎಲ್ಲಿದೆ ಎಂದು ಅವರಿಗೆ ತೋರಿಸುವುದನ್ನು ಬಿಟ್ಟು ಅವರು ಕೆಟ್ಟವರು ಎಂದು ದೂರುವುದು ಸರಿಯಲ್ಲ. "ಎಲ್ಲ ಮುಸ್ಲಿಮರನ್ನೂ ನಾನು ನಂಬಲಾರೆ. ನೆನ್ನೆಯವರೆಗೂ ನಮ್ಮ ಶತ್ರುಗಳಾಗಿದ್ದು ಈಗ ನಾವು ನಿಮ್ಮ ಸ್ನೇಹಿತರು ಎಂದು ಹೇಳುವ ಮುಸ್ಲಿಂಲೀಗ್‌ನ ಜನರನ್ನು ನಾನು ನಂಬಲಾರೆ" ಎಂದು ಸರ್ದಾರ್ ಹೇಳಿದ್ದಾರೆ.

ಕುಟುಂಬದಲ್ಲಿರುವ ಸೋದರನಿಗೆ ತನ್ನ ಅನುಮಾನಗಳನ್ನು ವ್ಯಕ್ತಪಡಿಸುವ ಹಕ್ಕಿದೆ. ನಿಮ್ಮ ನಾಲಗೆ ಬಹಳ ಹರಿತ ಎಂದು ಸರ್ದಾರ್ ಅವರಿಗೆ ನಾನು ಯಾವಾಗಲೂ ಹೇಳುವುದುಂಟು. ಸರ್ದಾರ್ ಮತ್ತು ನೆಹರೂ ಸರ್ಕಾರವನ್ನು ಜೊತೆಯಾಗಿ ನಡೆಸುತ್ತಿದ್ದಾರೆ. ಸರ್ದಾರರು ಜನರ ಪ್ರತಿನಿಧಿ. ಈ ಜನರಲ್ಲಿ ಮುಸ್ಲಿಮರೂ ಸೇರಿದ್ದಾರೆ. ಈ ಮಾತಿನ ಮೂಲಕ ಗಾಂಧಿಯವರು ಸರ್ದಾರರಿಗೆ ಅವರ ಕರ್ತವ್ಯವನ್ನು ನೆನಪು ಮಾಡಿಕೊಡುತ್ತಿದ್ದಾರೆ. ಪ್ರಜಾಪ್ರಭುತ್ವ ರಾಜ್ಯದಲ್ಲಿ ಎಲ್ಲರಿಗೂ ಸಮಾನ ಗಮನವನ್ನು ನೀಡಬೇಕಾದ ಅಗತ್ಯವನ್ನು ತಿಳಿಸುತ್ತಿದ್ದಾರೆ ಎಂದು ನನಗನ್ನಿಸಿತು. ಇದು ನೆಹರೂ ಮತ್ತು ಪಟೇಲರನ್ನು ಒಟ್ಟಿಗೆ ತರುವ ಪ್ರಯತ್ನ ಮಾತ್ರವೇ ಆಗಿರಲಿಲ್ಲ. ಇದರಲ್ಲಿ ಗಾಂಧೀಜಿಯವರೂ ಸೇರಿದ್ದರು. ಈ ಮೂರೂ ಜನ ತ್ರಿಮೂರ್ತಿಗಳಿದ್ದಂತೆ. ಮೂವತ್ತು ವರ್ಷಗಳ ಕಾಲ ಅವರು ಜೊತೆಯಾಗಿ ಸ್ವಾತಂತ್ರ್ಯಕ್ಕಾಗಿ ಹೋರಾಡಿದ್ದರು. ಒಂದು ರೀತಿಯ ಪ್ರವಾದಿ ಚೇತನವಾಗಿದ್ದ ಗಾಂಧಿ ಸ್ವಾತಂತ್ರ್ಯ ಗಳಿಸುವ ದಾರಿಯನ್ನು ತೋರಿಸಿದ್ದರು. ಆದರ್ಶವಾದಿಯಾಗಿದ್ದ ನೆಹರೂ ಅವರನ್ನು ಗಾಂಧಿಯವರು ತಮ್ಮ ರಾಜಕೀಯ ಉತ್ತರಾಧಿಕಾರಿ ಎಂದು ನಾಮಕರಣ ಮಾಡಿದ್ದರು. ಪಟೇಲರದು ಒಬ್ಬ ರಾಜಕೀಯ ತಜ್ಞನ ನುರಿತ ಕೈ ಮತ್ತು ಹರಿತನಾಲಗೆಯಾಗಿತ್ತು.

"ನಾನು ಎಷ್ಟು ಕಾಲ ಉಪವಾಸ ಮಾಡಬಹುದು? ಭಾರತದಲ್ಲಿರುವ ಎಲ್ಲ ಧರ್ಮಗಳ ಜನರೂ ಸೋದರರಂತೆ ಬೆರೆತು ನಿರ್ಭೀತಿಯಿಂದ ಓಡಾಡುವವರೆಗೆ. ಹೀಗಾಗದಿದ್ದಲ್ಲಿ ನನ್ನ ಉಪವಾಸಕ್ಕೆ ಮುಕ್ತಾಯವೇ ಇಲ್ಲ."

ಆ ಮುಸ್ಸಂಜೆಯಲ್ಲಿ ಅಷ್ಟೊಂದು ಕಾಳಜಿಯಿಂದ ಮಾತಾಡುತ್ತಿದ್ದ ಪುಟ್ಟ ಆಕಾರದ ಗಾಂಧಿಯವರು ಒಂದು ಮಹಾನ್ ಚೇತನ ಎಂಬ ಭಾವನೆ ಪ್ರಾರ್ಥನಾ ಸಭೆಯಲ್ಲಿದ್ದ ಪ್ರತಿಯೊಬ್ಬರ ಮನಸ್ಸಿನಲ್ಲೂ ಮೂಡಿದೆ ಎಂದು ನನಗನ್ನಿಸಿತು. ಈ ದೇಶವನ್ನು ಕಬಳಿಸುತ್ತಿದ್ದ ದ್ವೇಷಾಗ್ನಿಯ ವಿರುದ್ಧ ಹೋರಾಡಲು ಅವರು ತಮ್ಮ ಬಡಕಲು ದೇಹದಲ್ಲಿ ಉಳಿದಿದ್ದ ಎಲ್ಲ ಶಕ್ತಿಯನ್ನೂ ಒಟ್ಟುಗೂಡಿಸುವಂತಿತ್ತು. "ನಾನು ಒಂಟಿಯಲ್ಲ. ದಾರಿಯಲ್ಲಿ ಕತ್ತಲು ಕವಿದಿದ್ದರೂ ದೇವರು ನನ್ನ ಜೊತೆಗಿದ್ದಾನೆ" ಎಂದು ತಮ್ಮ ಮಾತನ್ನು ಮುಕ್ತಾಯಗೊಳಿಸುತ್ತ ಹೇಳಿದರು.

ಗಾಂಧಿಯವರು ಎದ್ದು ಹೊರಡುವುದಕ್ಕೆ ಸುಶೀಲಾ ಮತ್ತು ಅಭಾ ನೆರವಾದರು. ಗುಂಪು ಮೌನವಾಗಿ ಅವರಿಗೆ ದಾರಿಬಿಟ್ಟುಕೊಟ್ಟಿತು. ಸೊಂಟ ಮುಚ್ಚುವಷ್ಟು ಅರಿವೆಯನ್ನು ಸುತ್ತಿಕೊಂಡಿದ್ದ ಆ ತೆಳುಕಂದುಬಣ್ಣದ ದೇಹ ಮನೆಯ ಕಡೆ ಮರೆಯಾಯಿತು. ನಾವು ಗಾಂಧೀಜಿಯನ್ನು ಮತ್ತೆ ನೋಡುತ್ತೇವೆಯೇ ಎಂಬ ಪ್ರಶ್ನೆ ಮನಸ್ಸಿನಲ್ಲಿ ತಲೆ ಎತ್ತಿತು.

ಆತನಲ್ಲಿ ನಿಜವಾಗಿ ದೈವಿಕಶಕ್ತಿ ಇದೆ ಎಂದು ಹೇಳಿದ ದನಿಯನ್ನು ನಾನು ಗುರುತಿಸಿದೆ. ಅಂಚೆಕಛೇರಿಯ ಗುಮಾಸ್ತನಾಗಿದ್ದ ಆತ ಈ ಮಾತನ್ನು ನನ್ನ ಕಿವಿಯಲ್ಲಿ ಮೆಲ್ಲಗೆ ಉಸುರಿದ. "ಅವರು ದೇವರೇ. ದೇವರಂತೆಯೇ ಅನೇಕ ಪವಾಡಗಳನ್ನು ಮಾಡಿದ್ದಾರೆ. ಆದರೆ ಈಗಿನ ಪವಾಡದಲ್ಲಿ ಅವರು ಯಶಸ್ವಿಯಾದರೆ ಅದು ಅವರ ಬದುಕಿನ ಬಹು ದೊಡ್ಡ ಪವಾಡ" ಎಂದನಾತ.

❑

ಅಧ್ಯಾಯ ೫

ಶಾಂತಿಯ ಭರವಸೆ

ಮಾರನೇ ದಿನ ಬೆಳಿಗ್ಗೆ ನಾನು ಒಂದು ಟ್ಯಾಕ್ಸಿ ಹಿಡಿದಾಗ ಆದ ಅನುಭವದಿಂದ ಗಾಂಧಿಯವರು ಮುಂದೆ ಸಾಧಿಸಿದ ಪವಾಡದ ಸ್ವರೂಪ ನನಗೆ ಸರಿಯಾಗಿ ಅರ್ಥವಾಯಿತು. ಟ್ಯಾಕ್ಸಿಕ್ಯಾಬ್‌ನ ಡ್ರೈವರ್ ಒಬ್ಬ ಸಿಖ್. ಪುಟ್ಟಪುಟ್ಟ ನೀಲಿ ಗುಲಾಬಿ ಮೊಗ್ಗುಗಳ ವಿನ್ಯಾಸವಿದ್ದ ಅತ್ಯಂತ ಕಲಾತ್ಮಕವಾಗಿ ಸುರುಳಿಸುರುಳಿಯಾಗಿ ಸುತ್ತಿದ ಪೇಟ ಧರಿಸಿದ್ದ ಅವನು. ಅಸಮಾಧಾನದಿಂದ ಕುದಿಯುತ್ತಿದ್ದ ಅವನ ಕಣ್ಣುಗಳಿಗೂ ಅಂದವಾದ ಅವನ ತಲೆ ಉಡುಪಿಗೂ ಸಾಮರಸ್ಯವಿದ್ದಂತೆ ಕಾಣಲಿಲ್ಲ. ಅವನು ಅಲ್ಪಸ್ವಲ್ಪ ಇಂಗ್ಲಿಷ್ ಕೂಡ ಮಾತಾಡಬಲ್ಲ ಎಂದು ಗೊತ್ತಾದ ಮೇಲೆ ನಾನು ಎಲ್ಲರನ್ನೂ ಕೇಳುತ್ತಿದ್ದಂತೆ ಗಾಂಧಿ ಉಪವಾಸದ ಬಗ್ಗೆ ಅವನ ಅಭಿಪ್ರಾಯವನ್ನೂ ಕೇಳಿದೆ. ಹಾಗೆ ಕೇಳಿದ ಕೂಡಲೇ "ಆ ಮುದುಕ ಉಪವಾಸ ಮಾಡಲಿ, ಸಾಯಲಿ" ಎಂಬ ಅತ್ಯಂತ ಕಹಿಯಾದ ಮಾತು ಅವನಿಂದ ಹೊರಟಿತು. "ಗಾಂಧಿ ಜಿನ್ನಾ ಇಬ್ಬರೂ ಸಾಯಲಿ. ಈ ಒಡಕು ಹುಟ್ಟಿದ್ದೆ ಜಿನ್ನಾನಿಂದ. ಅದರಿಂದ ಸಿಖ್ಖರಿಗೆ ಎಷ್ಟೆಷ್ಟು ಕಷ್ಟನಷ್ಟಗಳಾಗಿವೆ. ಹೀಗಿದ್ದೂ ಗಾಂಧಿ ನಮ್ಮ ವಿರುದ್ಧ ಉಪವಾಸ ಮಾಡುತ್ತಿದ್ದಾನೆ. ಈ ಇಬ್ಬರು ಮುದುಕರೂ ಸತ್ತರೆ ಸಾಯಲಿ. ಇವರೇ ನಮ್ಮ ಎಲ್ಲ ತೊಂದರೆಗಳಿಗೆ ಕಾರಣ" ಎಂದ.

ಸಿಖ್ ಮತ್ತು ಹಿಂದೂ ನಿರಾಶ್ರಿತರು ಮುಸ್ಲಿಮರ ಮಸೀದಿ ಗೋರಿಗಳನ್ನು ಬಳಸಬಾರದು ಎಂದು ಗಾಂಧಿ ನಿಷೇಧಿಸಿದ್ದು ಈ ಸಿಖ್ಖನಿಗೆ ಎಲ್ಲಿಲ್ಲದ ಕೋಪ ಬರಿಸಿತ್ತು. ಅವನ ಮನೆಗೆ ತಂಗುವುದಕ್ಕೆ ಬರತೊಡಗಿದ್ದ ನೆಂಟರಿಷ್ಟರ ಪ್ರವಾಹ ಎಷ್ಟು ಹೆಚ್ಚಾಗಿತ್ತೆಂದರೆ ಎಂಥ ಸಾಧು ಸ್ವಭಾವದವನಿಗೂ ಅದರಿಂದ ತಲೆ ಕೆಟ್ಟು ಹೋಗುವಂತಿತ್ತು. ಅವನ ಹೆಂಡತಿಯ ಸಕಲ ಬಂಧು ಬಳಗವೂ ಪಾಕಿಸ್ತಾನವನ್ನು ತೊರೆದು ದೆಹಲಿಗೆ ಬಂದಿತ್ತು. ಅವರ ವಸತಿಗಾಗಿ ಆಗಷ್ಟೆ ಅವನು ಮುಸ್ಲಿಂ ಗೋರಿಯೊಂದರ ಬಳಿ ತಕ್ಕ ವ್ಯವಸ್ಥೆ ಮಾಡಿ ಬಂದಿದ್ದ. ಅಷ್ಟರಲ್ಲಿ ಗಾಂಧಿಯವರು ಎಲ್ಲ ನಿರಾಶ್ರಿತರೂ ಮುಸ್ಲಿಮರ ಪವಿತ್ರ ಸ್ಥಳಗಳನ್ನು ಬಿಟ್ಟು ಈಚೆ ಬರಬೇಕು. ಅಲ್ಪಸಂಖ್ಯಾತರು ತಮ್ಮ ಆರಾಧನಾಸ್ಥಳಗಳಿಗೆ ಮುಕ್ತವಾಗಿ ಹೋಗಿಬರುವಂತಾಗಬೇಕು ಎಂದು ಒತ್ತಡ ತಂದಿದ್ದರು. ಹೀಗಾಗಿ ಈ ಡ್ರೈವರನ ಪುಟ್ಟಮನೆ ಚಿಕ್ಕಪ್ಪಗಳು, ಚಿಕ್ಕಮ್ಮಗಳು, ಅತ್ತೆಯರು, ದಾಯಾದಿಗಳು ಹಾಗೂ ಅವರ ಸಂಬಂಧಿಗಳಿಂದ ಕಿಕ್ಕಿರಿದು ಹೋಗಿತ್ತು. ಇನ್ನೂ ಅನೇಕರು ಮನೆಯೊಳಗೆ ಜಾಗ ಸಿಗದೆ ಬಯಲಿನಲ್ಲಿ ಉಳಿದಿದ್ದರು.

ನಮ್ಮ ಟ್ಯಾಕ್ಸಿಕ್ಯಾಬ್ ಅಲ್ಬುಕರ್ಕ್ ರಸ್ತೆ ಪ್ರವೇಶಿಸಿ ಬಿರ್ಲಾಭವನ ಸಮೀಪಿಸಿತು. ಆ ಭವನದ ಗೇಟಿನ ಹೊರಗೆ ನಿಂತಿದ್ದ ನೂರಾರು ಜನರು ಘೋಷಣೆಗಳನ್ನು ಕೂಗುತ್ತಿದ್ದರು.

"ಗಾಂಧಿ ಮುರ್ದಾಬಾದ್" ಎಂಬ ಆ ಘೋಷಣೆಯನ್ನು ನಾನು ಕೇಳಿದ್ದು ಅದೇ ಮೊದಲು. ಉಳಿದ ಜನರಿಗಿಂತ ಸ್ವಲ್ಪ ಶಾಂತವಾಗಿ ಕಂಡುಬಂದ ಕೆಲವು ಹಿಂದೂಗಳನ್ನು ಸಿಖ್ಖರನ್ನೂ ನಾನು ಸಮೀಪಿಸಿ ಅವರನ್ನು ಪ್ರಶ್ನಿಸುತ್ತಿದ್ದ ಹಾಗೆಯೇ ನೂರಾರು ಮಂದಿ ನನ್ನನ್ನು ಮುತ್ತಿಕೊಂಡರು. ಇಂಗ್ಲಿಷನ್ನು ಬಲ್ಲ ಕೆಲವರು ಉತ್ಸಾಹದಿಂದ ತಮ್ಮ ಅಭಿಪ್ರಾಯಗಳನ್ನು ಹೇಳತೊಡಗಿದರು - ಮುಸ್ಲಿಮರನ್ನು ನಂಬಲೇಬಾರದು ಎಂದು ಸರ್ದಾರಜಿಯೇ ಹೇಳಿದ್ದಾರೆ. ಹೋದ ವಾರವಷ್ಟೇ ಲಕ್ನೋದಲ್ಲಿ ಅವರು ಈ ಮಾತು ಹೇಳಿದ್ದಾರೆ ಎಂದು ಒಬ್ಬ ಹಿಂದೂ ಯುವಕ ಹೇಳಿದ. ಅವನು ಕಪ್ಪು ಸ್ವಸ್ತಿಕ ಚಿಹ್ನೆಯ ಕೇಸರಿ ತೋಳುಪಟ್ಟಿ ಕಟ್ಟಿಕೊಂಡಿದ್ದ. ಹಿಂದೂ ಮಹಾಸಭಾದವರ ಈ ಲಾಂಛನ ನೋಡಿದಾಗಲೆಲ್ಲ ನಾಜಿ ಬ್ಯಾಡ್ಜ್‌ಗಳಿಗೂ ಇದಕ್ಕೂ ಇರುವ ಸಾಮ್ಯ ನನಗೆ ಥಟ್ಟನೆ ನೆನಪಾಗುತ್ತಿತ್ತು.

ಈ ಸರ್ಕಾರ ಯಾವುದಾದರೊಂದು ವಸತಿ ಯೋಜನೆಯನ್ನೇ ಯಾಕೆ ಮಾಡಬಾರದು. ದೆಹಲಿಯಲ್ಲಿ ನಲವತ್ತು ಸಾವಿರ ಮನೆಗಳನ್ನು ಕಟ್ಟಲಿ. ಉಪವಾಸಕ್ಕೆ ಬದಲು ಅಂಥ ಯೋಜನೆಗಳನ್ನಾದರೂ ಮಾಡಿದರೆ ಈ ಗಲಭೆಗಳು ಬೇಗ ಬಗೆಹರಿಯಬಹುದು. ಹೀಗೆ ಹೇಳಿದವನು ವಯಸ್ಸಾದ ಒಬ್ಬ ಹಿಂದೂ ನಿರಾಶ್ರಿತ. ಹಣ್ಣುಗಳ ಸಗಟು ವ್ಯಾಪಾರಿಯಾಗಿದ್ದ ಅವನು ವಾಸಿಸುತ್ತಿದ್ದ ರಾವಲ್ಪಿಂಡಿಯ ಭಾಗ ಈಗ ಪಾಕಿಸ್ತಾನಕ್ಕೆ ಸೇರಿಹೋಗಿತ್ತು. ದೆಹಲಿಯಲ್ಲಿ ಖಾಲಿಯಿರುವ ಅರಮನೆಗಳಲ್ಲೆಲ್ಲ ಜನರಿಗೆ ವಸತಿ ಕೊಡಲಿ ಎಂದು ಇನ್ನೊಬ್ಬ ಹಿಂದೂ ಯುವಕ ಹೇಳಿದ. ಅವನು ಲಾಹೋರಿನ ಎಲೆಕ್ಟ್ರಿಕಲ್ ವರ್ಕರ್ಸ್ ಯೂನಿಯನ್ನಿನ ಕಾರ್ಯದರ್ಶಿ ಎಂದು ನಂತರ ತಿಳಿಯಿತು. ಹೌದಲ್ಲವೇ ಎಷ್ಟು ಅರ್ಥಪೂರ್ಣವಾದ ಸೂಚನೆ ಎಂದು ಯೋಚಿಸಿದೆ. ಗಾಂಧಿ ತತ್ವದ ಅನುಷ್ಠಾನಕ್ಕೆ ಇದಕ್ಕಿಂತ ಒಳ್ಳೆಯ ಉದಾಹರಣೆ ಇರಲು ಸಾಧ್ಯವೆ? ಮಹಾರಾಜರುಗಳು, ಬಂಡವಾಳಶಾಹಿಗಳು ತಮ್ಮ ಎಲ್ಲ ಸಂಪತ್ತು ಜನರಿಗೇ ಸೇರಿದ್ದು ಎಂದು ಘೋಷಿಸುವುದಾದರೆ ಎಷ್ಟು ಆದರ್ಶವಾಗಿರುತ್ತದೆ. ಆದರೆ ಕಿನ್ನರ ಕಥಾಲೋಕದ ಇಂಥ ಸಂಗತಿಗಳು ಭಾರತದಲ್ಲಿ ವಾಸ್ತವವಾಗಲು ಸಾಧ್ಯವೇ ಇರಲಿಲ್ಲ.

ನಾನು ಈ ಜನರ ಮಧ್ಯೆ ನಿಂತಿದ್ದಾಗ ಬಿರ್ಲಾ ಭವನದ ಮುಂಬಾಗಿಲು ತೆರೆಯಿತು. ನೆಹರೂ, ಪಟೇಲ್, ಮೌಲಾನಾ ಅಜಾದರು ಅಲ್ಲಿಂದ ಹೊರಬಂದರು. ಒಳ್ಳೆಯ ವಿದ್ವಾಂಸರಾಗಿದ್ದ ಮೌಲಾನಾ ಅಜಾದರು ಭಾರತದ ಶಿಕ್ಷಣ ಸಚಿವರಾಗಿದ್ದರು. ಈ ಮೂವರೂ ಗಾಂಧೀಜಿಯೊಂದಿಗೆ ಮಾತುಕಥೆ ನಡೆಸಿ ಹೊರಬಂದಿದ್ದು ಸ್ಪಷ್ಟವಾಗಿತ್ತು. ಮೂವರೂ ಅವರವರ ಕಾರು ಹತ್ತಿದ್ದರು. ಕೊನೆಯದು ನೆಹರೂ ಕಾರು, ಮೊದಲಿನವರೆಡೂ ರಸ್ತೆ ಸೇರಿದವು. ನೆಹರೂ ಕಾರು ಗೇಟಿನಿಂದ ಇನ್ನೇನು ಹೊರಗೆ ತಿರುಗಿಕೊಳ್ಳಬೇಕು ಅನ್ನುವಷ್ಟರಲ್ಲಿ ಜನ ಮತ್ತೆ ಕೂಗತೊಡಗಿದರು. "ಸರ್ದಾರ್ ಪಟೇಲ್ ಜಿಂದಾಬಾದ್" ಎಂಬ ಕೂಗು ಒಂದು ಕಡೆ, "ಗಾಂಧಿ ಮುರ್ದಾಬಾದ್" ಎಂಬ ಕೂಗು ಇನ್ನೊಂದು ಕಡೆ ಕೇಳುತ್ತಿತ್ತು. ಈ ಘೋಷಣೆ ಕಿವಿಗೆ ಬೀಳುತ್ತಿದ್ದಂತೆ ಕೋಪದಿಂದ ಕೆಂಪಾಗಿದ್ದ ನೆಹರೂ ಕಾರಿನಿಂದ ಹೊರಗೆ ಬಂದರು. "ಇಂಥ ಮಾತನ್ನು ಯಾರಾದರೂ ಹೇಳುತ್ತಾರೆಯೇ, ಬೇಕಿದ್ದರೆ ನನ್ನನ್ನು ಮೊದಲು ಕೊಲ್ಲಿ" ಎಂದು ನೆಹರೂ ಚೀರಿದಾಗ ಗುಂಪು ತಣ್ಣಗಾಯಿತು. ಜನ ಮೆಲ್ಲಗೆ ಚೆದುರತೊಡಗಿದರು.

ಆ ಸಂಜೆ ಪ್ರಾರ್ಥನಾ ಸಭೆಯಲ್ಲಿ ಹೆಚ್ಚಿನ ಜನ ಸೇರಿರಲಿಲ್ಲ. ಆದರೆ ಪ್ರಾರ್ಥನೆಗಾಗಿಯೇ ಬಂದ ಜನ ಗಾಂಧೀಜಿ ಬಗ್ಗೆ ಬಹಳ ಭಕ್ತಿ ಗೌರವ ಇಟ್ಟುಕೊಂಡ ಜನರಾಗಿದ್ದರು. ಗಾಂಧೀಜಿಯವರು ಉಪವಾಸದಿಂದ ಎಷ್ಟು ಬಳಲಿರಬಹುದು ಎಂದು ಅವರೆಲ್ಲ ಕಳವಳಗೊಂಡಿದ್ದರು. ನಾನು ಹಾಗೇ ನೋಡುತ್ತಿದ್ದಾಗ ನನ್ನ ಭಾರತೀಯ ಸ್ನೇಹಿತ ಕಣ್ಣಿಗೆ ಕಂಡ. ಆತನ ಹೆಸರು ಬೇಡಿ. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಪದವೀಧರ. ಸಾಕಷ್ಟು ಹೆಸರು ಮಾಡಿದ್ದ ಲೇಖಕನೂ ಹೌದು. ಅಷ್ಟೇ ಅಲ್ಲ ಸಿಖ್ ಧರ್ಮವನ್ನು ಸ್ಥಾಪಿಸಿದ ಸಂತ ಗುರುನಾನಕರ ನೇರ ಸಂತತಿಯವನೂ ಆಗಿದ್ದ. ಆತನ ಧಮನಿಗಳಲ್ಲಿ ಸಂತನ ರಕ್ತ ಹರಿಯುತ್ತಿದ್ದರೂ ಯಾವುದೇ ರೀತಿಯ ಮತಮೋಹ ಆತನಲ್ಲಿರಲಿಲ್ಲ. ಆತನ ಉಡುಪು ಸಾಂಪ್ರದಾಯಿಕ ಶೈಲಿಯಲ್ಲಿತ್ತು. ಆದರೂ ಆತ ಬಹಳ ಪ್ರಗತಿಪರ, ಸುಧಾರಿತ ಹಾಗೂ ವಿಶಾಲಮನಸ್ಸಿನವನಾಗಿದ್ದ.

ಗಾಂಧಿಯವರ ಉಪವಾಸ ಹೆಚ್ಚು ಜನರನ್ನು ಸೆಳೆಯುತ್ತಿಲ್ಲವಲ್ಲ ಎಂದು ನಾನು ಆಶ್ಚರ್ಯ ವ್ಯಕ್ತಪಡಿಸಿದೆ. ಅದಕ್ಕೆ ಅಷ್ಟು ಬೇಗ ಆ ನಿರ್ಣಯಕ್ಕೆ ಬರಬೇಡಿ. ಇನ್ನೆರಡು ದಿನ ಕಳೆಯಲಿ ಆಗ ನೋಡಿ ಗಾಂಧಿಯವರ ಜೀವದ ಬಗ್ಗೆ ಆತಂಕ ಹೇಗೆ ಹೆಚ್ಚಾಗುತ್ತದೆ. ಅವರ ಉಪವಾಸ ಮುಂದುವರೆದಂತೆ ಜನರ ಮನೋಭಾವವೇ ಬೇರೆಯಾಗುತ್ತದೆ ಎಂದು ಹೇಳಿದ. ಗಾಂಧೀಜಿಯವರ ಈ ಹಿಂದಿನ ಅನೇಕ ಉಪವಾಸಗಳ ಪರಿಣಾಮವನ್ನು ಆತ ತಿಳಿದಿದ್ದ.

ಆ ಸಂಜೆಯ ಸಭೆಯಲ್ಲಿ ಸೈನಿಕ ಸಮವಸ್ತ್ರದಲ್ಲಿ ಬಂದ ಕೆಲವು ತರುಣರಿದ್ದರು. ಅವರೆಲ್ಲ ಭಾರತೀಯ ಸೇನೆಯ ಯೋಧರು. ಪಾಕಿಸ್ತಾನದಿಂದ ಕಾಶ್ಮೀರವನ್ನು ಪ್ರವೇಶಿಸಿ ಅಲ್ಲಿನ ಹಳ್ಳಿಗಳನ್ನು ಸುಡುತ್ತ, ಜನರನ್ನು ಹೆದರಿಸುತ್ತಾ, ಹೆಂಗಸರನ್ನು ಅಪಹರಿಸುತ್ತಾ, ಮುಸ್ಲಿಂ ಹಿಂದೂ ಎಂಬ ಭೇದವಿಲ್ಲದೆ ರೈತರ ಸುಲಿಗೆಯಲ್ಲಿ ತೊಡಗಿದ್ದ ಮಹಮ್ಮದೀಯ ಬುಡಕಟ್ಟು ಜನರೊಂದಿಗೆ ಕಾಶ್ಮೀರದ ಮುಂಚೂಣಿಯಲ್ಲಿ ಹೋರಾಡುತ್ತಿದ್ದ ಈ ಯೋಧರು ರಜೆಯ ಮೇಲೆ ದೆಹಲಿಗೆ ಬಂದಿದ್ದರು. ಪರ್ವತ ಪ್ರದೇಶದ ದಾರಿಗಳಲ್ಲಿ ಚಳಿಗಾಲದ ಹಿಮ ಬೀಳುವುದು ಹೆಚ್ಚಾಗುತ್ತಿದ್ದಂತೆ ಆ ಧಾಳಿಕೋರರು ಗೆರಿಲ್ಲಾ ಹೋರಾಟಕ್ಕೆ ತೊಡಗಿದ್ದರು. ಹೀಗಾಗಿ ಈ ಯೋಧರಿಗೆ ಸ್ವಲ್ಪ ರಜೆ ಸಿಕ್ಕಿತ್ತು. ಬೇಡಿಯೂ ಕೂಡ ಕಾಶ್ಮೀರದಿಂದ ಬಂದವರೇ. ಜನರ ಚಳುವಳಿಯಲ್ಲಿಯೂ ಅವರು ಪಾಲುಗೊಂಡಿದ್ದರು. ಈ ಯೋಧರೊಂದಿಗೆ ಮಾತಾಡಲು ಅವರ ಭಾಷಾಂತರ ನೆರವಾಯಿತು. ಗಾಂಧಿಯವರು ತಮ್ಮ ಜೀವವನ್ನು ಹೀಗೆ ಅಪಾಯಕ್ಕೊಡ್ಡಿಕೊಳ್ಳುವುದು ಸರಿಯಲ್ಲ. ಅವರು ಚೆನ್ನಾಗಿ ತಿಂದು ಬಲವಾಗಿರಬೇಕು ಎಂದು ಒಬ್ಬ ಸೈನಿಕ ಹೇಳಿದ. ಅವರೇ ಉಪವಾಸ ಕುಳಿತು ಬಿಟ್ಟರೆ ಹೇಗೆ. ನಾವೇನಾದರೂ ಉಪವಾಸ ಕುಳಿತರೆ ಕಾಶ್ಮೀರವನ್ನು ಧಾಳಿಕೋರರು ಸಂಪೂರ್ಣ ಆಕ್ರಮಿಸಿ ಬಿಡುತ್ತಾರೆ ಎಂದು ಒಬ್ಬ ವೈರ್‌ಲೆಸ್ ಆಪರೇಟರ್ ಆಗಿದ್ದವನು ಹೇಳಿದ. ಭಾರತದಲ್ಲಿ ನಾವು ಮುಸ್ಲಿಮರಿಗೆ ರಕ್ಷಣೆ ನೀಡಬೇಕು ಆದರೆ ಹೋರಾಟ ನಡೆಯುತ್ತಿರುವ ಕಾಶ್ಮೀರದಲ್ಲಿ ಇದು ಹೇಗೆ ಸಾಧ್ಯ ಎಂದು ಇನ್ನೊಬ್ಬ ತನ್ನ ಗೊಂದಲವನ್ನು ಹೇಳಿಕೊಂಡ.

ಈ ಬಗ್ಗೆ ನಾನು ಇನ್ನಷ್ಟು ಚೆನ್ನಾಗಿ ಚರ್ಚಿಸಬೇಕು ಎಂದುಕೊಂಡಿದ್ದೆ. ಅಷ್ಟರಲ್ಲಿ ಹೆಂಗಸರ

ಗುಂಪೊಂದು ಪ್ರಾರ್ಥನಾ ಸಭೆಯ ಬಳಿ ಹೋಯಿತು. ಅವರು ಪ್ರಾರ್ಥನೆ ಆರಂಭಿಸುವುದನ್ನೇ ನಾವು ಕಾಯುತ್ತಾ ಕುಳಿತೆವು. ಆದರೆ ಅವರೂ ಕೂಡ ಯಾರಿಗೋ ಕಾಯುತ್ತಿದ್ದಂತೆ ಕಂಡಿತು. ಆಗ ಗಾಂಧಿಯವರೇ ಸ್ವತಃ ಅಭಾ ಮತ್ತು ತಮ್ಮ ಸೋದರನ ಮೊಮ್ಮಗಳ ಮೇಲೆ ಕೈ ಊರಿಕೊಂಡು ಸಭೆಗೆ ಬಂದಾಗ ನಮಗೆ ನಂಬುವುದೇ ಕಷ್ಟವಾಯಿತು.

ಗಾಂಧಿ ಸಾಕಷ್ಟು ಬಳಲಿದ್ದರು. ಮೈಕಿನ ಮೂಲಕ ಅವರ ದನಿ ಅತ್ಯಂತ ಕ್ಷೀಣವಾಗಿ ಕೇಳಿಸುತ್ತಿತ್ತು. ಕೆಲವೊಮ್ಮೆ ಏನೂ ಕೇಳಿಸುತ್ತಿರಲಿಲ್ಲ. ಇದಲ್ಲದೆ ಆ ಮೈಕೂ ಸರಿಯಾಗಿರಲಿಲ್ಲ. ಅದರ ದೋಷದಿಂದಾಗಿ ಗಾಂಧಿಯವರ ಮಾತು ಇನ್ನಷ್ಟು ಕೇಳದಂತಾಗಿತ್ತು. ಆದರೆ ಅಸ್ಪಷ್ಟವಾಗಿ ಕೇಳಿಸಿದಷ್ಟರಿಂದಲೇ ನಮಗೆ ಅರ್ಥವಾಗಿದ್ದೇನೆಂದರೆ ನೆನ್ನೆಯ ದಿನದ ಮಾತಿನಲ್ಲಿ ಅವರು ಭಾರತದ ಆಂತರಿಕ ಪರಿಸ್ಥಿತಿಯ ಬಗ್ಗೆ ಹೇಳಿದ್ದರು. ಈ ದಿನ ಅವರ ಮಾತು ಪಾಕಿಸ್ತಾನವನ್ನು ಕುರಿತಿತ್ತು. ಪಾಕಿಸ್ತಾನದ ಕರಾಚಿಯಲ್ಲಿ ಇತ್ತೀಚೆಗೆ ನಡೆದ ಸಿಖ್ಖರ ಬರ್ಬರ ಹತ್ಯೆ ಕುರಿತು ಅವರು ಪ್ರಸ್ತಾಪಿಸಿದರು ಮತ್ತು ಗುಜರಾತ್ ರೈಲ್ವೆ ನಿಲ್ದಾಣದಲ್ಲಿ ನಿರಾಶ್ರಿತರ ರೈಲೊಂದರ ಮೇಲೆ ಆಕ್ರಮಣ ಮಾಡಿ ಅಲ್ಲಿದ್ದ ನೂರಾರು ಮಂದಿ ಹಿಂದೂ ಮಹಿಳೆಯರನ್ನು ಅಪಹರಿಸಿಕೊಂಡು ಹೋಗಿರುವ ಘಟನೆಯನ್ನು ಪ್ರಸ್ತಾಪಿಸಿದರು. ಇಂತಹ ಘಟನೆಗಳಿಗೆ ಪಾಕಿಸ್ತಾನ ತಡೆಹಾಕಬೇಕು ಎಂದು ಹೇಳಿದರು. ಪಾಕಿಸ್ತಾನ ಹೆಸರಿಗೆ ತಕ್ಕಂತೆ 'ಪಾಕ್' (ಪರಿಶುದ್ಧ) ಆಗಬೇಕು ಇಂತಹ ಪರಿಶುದ್ಧ ಭೂಮಿಯನ್ನು ನಾನು ಪ್ರತಿಯೊಬ್ಬ ಮುಸ್ಲಿಮನ ದೈನಂದಿನ ಜೀವನದಲ್ಲಿ ಕಾಣಬಯಸುತ್ತೇನೆ. ಕೇವಲ ಕಾಗದದ ಮೇಲಲ್ಲ. ಭಾರತವೂ ಕೂಡ ಹೆಮ್ಮೆಯಿಂದ ಪಾಕಿಸ್ತಾನವನ್ನು ಅನುಕರಿಸುವಂತಾಗಬೇಕು. ನಾನೇನಾದರೂ ಬದುಕಿದ್ದರೆ, ಪಾಕಿಸ್ತಾನವನ್ನು ಮೀರಿಸುವಂತೆ ಬದುಕಿ ಎಂದು ಭಾರತೀಯರಿಗೆ ಹೇಳುವಂತಾಗಬೇಕು. ನನ್ನ ಉಪವಾಸಕ್ಕೆ ನೀವು ಕೊಡಬಹುದಾದ ಪ್ರತಿಫಲ ಅದೇ. ಅದಕ್ಕಿಂತ ಕಡಿಮೆಯ ಯಾವ ಪ್ರತಿಫಲವನ್ನೂ ನಾನು ಒಪ್ಪಲಾರೆ ಎಂದರು. ಈ ಹಂತದಲ್ಲಿ ಮೈಕು ಮತ್ತೆ ಗದ್ದಲ ಮಾಡ ಲಾರಂಭಿಸಿತು. ಅದನ್ನು ಸರಿಪಡಿಸುವ ಹೊತ್ತಿಗೆ ಗಾಂಧಿಯವರು ಹೇಳುತ್ತಿದ್ದ ಮಾತುಗಳು ಇವು - "ಆಗ ನನ್ನ ಜೀವನದ ಸಂಧ್ಯಾಕಾಲದಲ್ಲಿ ನಾನು ಈ ಜನ್ಮದಲ್ಲಿ ನನ್ನ ಕನಸು ನನಸಾದುದಕ್ಕಾಗಿ ಮಗುವಿನಂತೆ ಕುಣಿದು ಕುಪ್ಪಳಿಸುತ್ತೇನೆ. ಇಂತಹ ಕನಸಿನ ಸಾಕಾರಕ್ಕಾಗಿ ಯಾರು ತಾನೆ ತಮ್ಮ ಬದುಕನ್ನು ಬಲಿದಾನ ಮಾಡಲು ಇಚ್ಛಿಸುವುದಿಲ್ಲ? ಆಗ ಮಾತ್ರ ನಾವು ಭಾರತದಲ್ಲಿ ನಿಜವಾದ ಸ್ವಾತಂತ್ರ್ಯ ಕಾಣುತ್ತೇವೆ."

ಮಾರನೇ ದಿನ ಜನ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಪ್ರಾರ್ಥನಾ ಸಭೆಗೆ ಸೇರಿದ್ದರು. ಆದರೆ ಆದಿನ ಗಾಂಧಿ ಬರಲಿಲ್ಲ. ಸುಶೀಲಾ ನೇತೃತ್ವದಲ್ಲಿ ಪ್ರಾರ್ಥನೆ ನಡೆಯಿತು. ಪ್ರಾರ್ಥನೆ ಮುಗಿದ ನಂತರ ಜನರೆಲ್ಲ 'ಗಾಂಧಿ ದರ್ಶನ'ಕ್ಕಾಗಿ ಒತ್ತಾಯಿಸತೊಡಗಿದರು. ಜನರ ಒತ್ತಾಯ ಹೆಚ್ಚಾದಾಗ ಗಂಡಸರು ಹೆಂಗಸರು ಬೇರೆ ಸಾಲು ಮಾಡಿಕೊಂಡು ಗಾಂಧೀದರ್ಶನಕ್ಕೆ ಬರಬಹು ದೆಂದು ತಿಳಿಸಲಾಯಿತು. ನಾನು ಆ ಸಾಲಿನಲ್ಲಿ ಸೇರಿಕೊಂಡೆ. ಬಿರ್ಲಾಭವನದ ಭವ ಉದ್ಯಾನವನದ ನಡುವೆ ಸಂಜೆ ಬೆಳಕಿನಲ್ಲಿ ನಿಧಾನವಾಗಿ ನಾವು ಮುಂದೆ ಸಾಗಿದವು.

ಕೈಸಾಲೆಯಲ್ಲಿ ಗಾಂಧಿಯವರ ಮಂಚವಿತ್ತು. ಅತ್ಯಂತ ಬಡಕಲು ದೇಹದ ಗಾಂಧಿ ಗಾಢನಿದ್ದೆಯಲ್ಲಿರುವಂತೆ ಮಲಗಿದ್ದರು.

ಅಲ್ಲಿ ಮಲಗಿದ್ದ ಪುಟ್ಟ ಶರೀರ ಹಾಗೂ ಅವರನ್ನು ಸುತ್ತುವರೆದು ಭಕ್ತಿಯಿಂದ ಮೌನವಾಗಿ ಸಾಗುತ್ತಿದ್ದ ಜನರ ಸಾಲನ್ನು ಕಂಡಾಗ ನನಗಾದ ಭಾವನೆಯನ್ನು ಹೇಗೆ ತಿಳಿಸಬೇಕೆಂಬುದೇ ಗೊತ್ತಾಗುತ್ತಿಲ್ಲ. ಒಬ್ಬ ಪ್ರಮುಖ ವ್ಯಕ್ತಿ ಮಲಗಿರುವುದನ್ನು ಸಾರ್ವಜನಿಕರಿಗೆ ಪ್ರದರ್ಶಿಸುವ ಇಂತಹ ಸಂಗತಿಯನ್ನು ಯೂರೋಪಿನಲ್ಲಾಗಲೀ, ಅಮೆರಿಕಾದಲ್ಲಾಗಲೀ ಊಹಿಸುವುದೇ ಅಸಾಧ್ಯ. ತಮ್ಮ ನಾಯಕರ ಬಗೆಗೆ ಅಸಾಧಾರಣವಾದ ಆಪ್ತತೆ ಹಾಗೂ ಅದನ್ನು ಬಹಿರಂಗವಾಗಿ ಪ್ರದರ್ಶಿಸುವ ಇಂತಹ ಮನೋಭಾವ ಭಾರತದಲ್ಲಿ ಮಾತ್ರ ಸಾಧ್ಯ. ಇದನ್ನು ಬೇರೆಲ್ಲಿಯೂ ನಾನು ನೋಡಲಿಲ್ಲ.

ಇದಾದ ನಂತರ ಸಾರ್ವಜನಿಕರೂ ಕೂಡ ಉಪವಾಸ ಕೈಗೊಳ್ಳತೊಡಗಿದರು. ಪ್ರತಿದಿನ ಪ್ರತಿಗಂಟೆಯೂ ಶಾಂತಿ ಸೂಚಕ ಮೆರವಣಿಗೆ ಹಾಗೂ ಶಾಂತಿಪಾಲನಾ ಪಡೆಗಳ ಬೃಹತ್ ಸಭೆಗಳ ಸಂಖ್ಯೆ ಹೆಚ್ಚುತ್ತಾ ಹೋಯಿತು. ಬೆಂಗಾವಲಿನಲ್ಲಿ ಸಾಗುತ್ತಿದ್ದ ಟ್ರಕ್ಕುಗಳ ಮೇಲೆ 'ಮಹಾತ್ಮಾಜಿಯವರ ಜೀವ ನಮ್ಮ ಜೀವಕ್ಕಿಂತ ಅಮೂಲ್ಯ ಎಂಬ ಬ್ಯಾನರ್‌ಗಳು, ವಿಶ್ವವಿದ್ಯಾಲಯಗಳ ಪ್ರೊಫೆಸರುಗಳೂ, ವಿದ್ಯಾರ್ಥಿಗಳೂ ಮಹಾತ್ಮರಿಗೆ ಮೊದಲು ನಾವು ಸಾಯುತ್ತೇವೆಂದು ಘೋಷಿಸಿದರು. ಗಲಭೆಗಳಿಗೆ ತುತ್ತಾದವರ ವಿಧವೆಯರು, ಅನಾಥರಾದ ಮಕ್ಕಳು ಸಹಾನುಭೂತಿಯ ಉಪವಾಸ ಮಾಡಿದರು. ಅವರಿಗೆ ಸಿಗುತ್ತಿದ್ದ ಆಹಾರ ಪಡಿತರದ ದೃಷ್ಟಿಯಿಂದ ಹೇಳುವುದಾದರೆ ಅವರ ಉಪವಾಸ ಎಂದೋ ಆರಂಭವಾಗಿತ್ತು. ಅವರೆಲ್ಲ ಬಿರ್ಲಾಭವನಕ್ಕೆ ಹೋಗಿ, ನಾವು ಪ್ರತೀಕಾರದಲ್ಲಿ ತೊಡಗುವುದಿಲ್ಲ. ನಮ್ಮ ಹಾಗೇ ಸಂಕಟಕ್ಕೆ ತುತ್ತಾಗಿರುವ ಮುಸ್ಲಿಂ ವಿಧವೆಯರ ಬಗ್ಗೆ, ಮುಸ್ಲಿಂ ಅನಾಥ ಮಕ್ಕಳ ಬಗ್ಗೆ ಸಹಾನುಭೂತಿಯಿಂದ ವರ್ತಿಸುತ್ತೇವೆ ಎಂದು ಗಾಂಧೀಜಿಯ ಮುಂದೆ ಪ್ರಮಾಣ ಮಾಡಿದರು. ಅನೇಕ ಮಹಾರಾಜರುಗಳು ತಮ್ಮ ರೋಲ್ಸ್‌ರಾಯ್ಸ್‌ಗಳಲ್ಲಿ ಬಿರ್ಲಾಭವನಕ್ಕೆ ಬಂದರು. ಉಪವಾಸ ನಿಲ್ಲಿಸುವಂತೆ ಗಾಂಧಿಯವರನ್ನು ಕೇಳಿಕೊಂಡರು. ಬಾಂಬೆಯ ಅಸ್ಪೃಶ್ಯರು ಗಾಂಧೀಜಿಯವರಿಗೆ ಒಂದು ಟೆಲಿಗ್ರಾಂ ಮನವಿ ಕಳಿಸಿ ನಿಮ್ಮ ಜೀವದ ಜೋಪಾನದ ಹೊಣೆ ನಮ್ಮದು ಎಂದು ತಿಳಿಸಿದ್ದರು.

ಇದೆಲ್ಲದರ ಮಧ್ಯೆ ಸುಶೀಲಾ ದಿನವೂ ಒಂದು ಚಿಕ್ಕ ಬೆರಳಚ್ಚು ಪ್ರಕಟಣೆಯನ್ನು ಸಿದ್ಧಪಡಿಸಿ ಬಿರ್ಲಾಭವನದ ಗೇಟಿನ ಹೊರಗೆ ಗೋಡೆಯ ಮೇಲೆ ಅಂಟಿಸುತ್ತಿದ್ದರು. ಅದರಲ್ಲಿ ಮಹಾತ್ಮರು ಹೇಗೆ ನಿದ್ದೆ ಮಾಡಿದರು. ಅವರ ಮೂತ್ರಪಿಂಡಗಳ ಕಾರ್ಯಸ್ಥಿತಿ ಯಾವ ರೀತಿ ಇದೆ ಎಂಬ ವಿವರಗಳು ಇರುತ್ತಿದ್ದವು. ಕೋಮು ಸಾಮರಸ್ಯದ ಬಗ್ಗೆ ತಮಗೆ ಯಾವುದೇ ವರದಿ ಬಂದಾಗ ಗಾಂಧಿಯವರು 'ನನ್ನ ಉಪವಾಸವನ್ನು ಮುರಿಯುವುದಕ್ಕಾಗಿ ನನಗೆ ಮೋಸಮಾಡಬೇಡಿ. ನೀವು ಹಾಗೇನಾದರೂ ಮಾಡಿದರೆ ಅದು ನೀವು ನನಗೆ ಬಹುದೊಡ್ಡ ಘಾಸಿ ಮಾಡಿದಂತೆ. ನಾನೂ ನರಳುತ್ತೇನೆ. ಭಾರತವೂ ನರಳುತ್ತದೆ' ಎಂದು ಹೇಳುತ್ತಿದ್ದರು.

ಈ ಮಧ್ಯೆ ಒಂದು ಸಂಜೆಯ ಸುಂದರ ಅನುಭವವನ್ನು ಮರೆಯಲಾರೆ. ಉಪವಾಸದ ಐದನೇ ದಿನ ಮುಗಿಯುತ್ತ ಬಂದಿತ್ತು. ಮೆರವಣಿಗೆಗಳ ಗಾತ್ರ ದಿನೇದಿನೇ ಬೆಳೆಯುತ್ತ ಬೃಹತ್ ಪ್ರಮಾಣ ತಲುಪಿತ್ತು. ಉರ್ದು ಪಾರ್ಕಿನಲ್ಲಿ ಭಾರೀ ಸಭೆ. ಕೆಂಪುಕೋಟೆಯಿಂದ ಜುಮ್ಮಾ ಮಸೀದಿಯವರೆಗಿನ ವಿಶಾಲ ಆವರಣದಲ್ಲಿ ಕಿಕ್ಕಿರಿದು ಸೇರಿದ್ದರು. ಆ ಸಭೆಯಿಂದ ಸುಮಾರು ಐದುಸಾವಿರದಷ್ಟು ಸೈಕಲ್ ಸವಾರರೂ ಪ್ರಾರ್ಥನಾ ಸಭೆಗೆ ಬಂದರು. ಇವರ ಹಿಂದೆ ರೈಲ್ವೆ ಕಾರ್ಮಿಕರ ಸಂಘ, ಅಂಚೆ ಮತ್ತು ತಂತಿ ಇಲಾಖೆಯ ನೌಕರರು, ಸರ್ಕಾರಿ ಮುದ್ರಣಾಲಯದ ನೌಕರರ ಸಂಘ, ಮಿಲಿಟರಿ ಲೆಕ್ಕಿಗ ಗುಮಾಸ್ತರು, ದೆಹಲಿಯ ವುಮೆನ್ಸ್ ಲೀಗ್‌ಗಗಳ ಮೆರವಣಿಗೆಗಳು ಒಂದರ ಹಿಂದೊಂದರಂತೆ ಬಂದವು. ಅದು ರೋಮಾಂಚಕಾರಿಯಾದ ದೃಶ್ಯ. ಬಣ್ಣಬಣ್ಣದ ಬ್ಯಾನರ್‌ಗಳು, ಬಿರ್ಲಾ ಗೇಟಿನೊಳಗೆ ಪ್ರವೇಶಿಸಿದವು. ಹುಲ್ಲುಹಾಸಿನ ಮೇಲೆ, ಹೂಪಾತಿಗಳಲ್ಲಿ, ಅಮೃತಶಿಲೆ ಹಾಸಿದ ವಿಶಾಲ ತಾರಸಿಯ ಮೇಲೆ ಎಲ್ಲೆಲ್ಲೂ ಜನ, ಕತ್ತಲು ಆವರಿಸುತ್ತಿತ್ತು. ಆದರೂ ಬಿರ್ಲಾಭವನದ ದೊಡ್ಡ ದೊಡ್ಡ ಕಿಟಕಿಗಳಿಂದ ತೂರಿ ಬರುತ್ತಿದ್ದ ಬೆಳಕಲ್ಲಿ, ಆ ಜನ ಪ್ರವಾಹದಲ್ಲಿಯೂ ಕೆಲವರನ್ನು ಗುರುತಿಸಲು ಸಾಧ್ಯವಾಯಿತು. ಇನ್ನೂ ಮೆರವಣಿಗೆಗಳು ಬರುತ್ತಲೇ ಇದ್ದವು. ಧಾರ್ಮಿಕ ಒಗ್ಗಟ್ಟನ್ನು ಕಾಪಾಡುತ್ತೇವೆ. ಮಹಾತ್ಮರ ಜೀವಕ್ಕಾಗಿ ನಮ್ಮ ಜೀವನವನ್ನು ಪಣಕೊಡುತ್ತೇವೆ ಎಂದು ಜನ ಕೂಗುತ್ತಲೇ ಇದ್ದರು.

ಈ ಘೋಷಣೆಗಳ ಕೂಗು ತಾರಕಕ್ಕೆ ಮುಟ್ಟಿದಾಗ ಗಾಂಧಿಯವರ ಆರೋಗ್ಯ ತಪಾಸಣೆಗೆ ಬರುತ್ತಿದ್ದ ಇಬ್ಬರು ವೈದ್ಯರಲ್ಲಿ ಒಬ್ಬರಾದ ಡಾ. ಜೀವರಾಜ ಮೆಹ್ತಾ ಪೋರ್ಟಿಕೋಗೆ ಬಂದು ಪದ್ರದರ್ಶನಕಾರರನ್ನು ಕುರಿತು ಇಲ್ಲೇನು ಜಾತ್ರೆ ನೋಡಲು ಬಂದಿದ್ದೀರಾ, ಯಾಕಿಷ್ಟು ಕೂಗಾಡುತ್ತಿದ್ದೀರಿ ಎಂದು ಜನರನ್ನು ಬೈಯುತ್ತಿದ್ದ ಕ್ಷಣದಲ್ಲಿಯೇ ನೆಹರೂ ಬಂದರು. ಅವರಿಗೆ ಜನರ ಮನೋಭಾವ ಅರ್ಥವಾಯಿತು. ಗಾಂಧಿಯವರು ಶ್ರಮಿಸುತ್ತಿರುವುದೇ ಈ ಉದ್ದೇಶಕ್ಕಾಗಿ ಎಂಬುದನ್ನು ಅರ್ಥಮಾಡಿಕೊಂಡ ಅವರು ಕೂಡಲೇ ಅಲ್ಲಿದ್ದ ಒಂದು ಸಿಮೆಂಟ್ ಕಟ್ಟೆಯನ್ನೇರಿ ಏನೋ ಹೇಳಿದರು. ಅದು ನನಗೆ ಕೇಳಿಸಲಿಲ್ಲ. ಆದರೆ ಅವರು ಇಂದು ಪ್ರಾರ್ಥನಾ ಸಭೆಯಲ್ಲಿ ಭಾಷಣ ಮಾಡುವುದಾಗಿ ಹೇಳಿದ್ದಾರೆ ಎಂಬುದು ಜನರ ಮಾತಿನಿಂದ ತಿಳಿಯಿತು. ನೆಹರೂ ಭಾಷಣಕ್ಕಾಗಿ ಜನರೆಲ್ಲ ತರಾತುರಿಯಲ್ಲಿ ಉದ್ಯಾನದ ಹಿಂಭಾಗಕ್ಕೆ ಹೋಗತೊಡಗಿದರು. ಹಿಂದೂಸ್ತಾನಿ, ಇಂಗ್ಲಿಷ್‌ಗಳೆರಡರಲ್ಲೂ ಅತ್ಯಂತ ಸುಂದರವಾಗಿ ಮಾತಾಡಬಲ್ಲ ನೆಹರೂ ಈ ಸಂದರ್ಭದಲ್ಲಿ ಹಿಂದೂಸ್ತಾನಿಯಲ್ಲಿ ಮಾತಾಡುವುದು ಖಚಿತವಾಗಿತ್ತು. ನೆಹರೂ ಹೇಳುವ ಪ್ರತಿಯೊಂದು ಮಾತನ್ನು ನಾನು ಕೇಳಿಸಿಕೊಳ್ಳಬೇಕಾಗಿತ್ತು. ಅದಕ್ಕಾಗೇ ಒಳ್ಳೆಯ ಅನುವಾದಕರಿಗಾಗಿ ಹುಡುಕಾಡಿದೆ. ಎಂತಹ ಗುಂಪಿನಲ್ಲೂ ಎದ್ದು ಕಾಣುವ ಬೇಡಿ ತಕ್ಷಣ ಕಣ್ಣಿಗೆ ಕಂಡರು. ಪಂಡಿತ್ ನೆಹರೂ, ಪ್ರಾರ್ಥನಾ ಸ್ಥಳದಲ್ಲಿದ್ದ ಪುಟ್ಟ ವೇದಿಕೆ ಹತ್ತಿದರು. ಗದ್ದಲ ಮಾಡದಂತೆ ಕೂರಬೇಕೆಂದು ಜನರನ್ನು ವಿನಂತಿಸಿಕೊಂಡರು. ನೆಹರೂ ಯಾವುದೇ ಸಿದ್ಧತೆ ಇಲ್ಲದೆ ತಮ್ಮ ಭಾಷಣ ಆರಂಭಿಸಿದರು. ಭಾರತಕ್ಕೆ ಸ್ವಾತಂತ್ರ್ಯ ಸಿಗಬೇಕೆಂಬುದು ನಮ್ಮ ಕನಸಾಗಿತ್ತು. ಏಷಿಯಾದ ಭವಿಷ್ಯ ಹೇಗಿರಬೇಕು ಎಂಬುದನ್ನು ನಾನು ನನ್ನ ಹೃದಯಲ್ಲಿಯೇ ರೂಪಿಸಿಕೊಂಡಿದ್ದೆ. ಭಾರತ ಒಂದು ಗುಲಾಮ ರಾಷ್ಟ್ರವಾಗಿದ್ದರೂ ಕೂಡ ಈ ಸಾಧನೆಯಲ್ಲಿ

ಯಶಸ್ವಿಯಾಯಿತು. ಈ ಪ್ರಕ್ಷುಬ್ಧ ಜಗತ್ತಿನಲ್ಲಿ ಭಾರತ ಒಂದು ಮಹಾನ್ ಸ್ವತಂತ್ರ ರಾಷ್ಟ್ರವಾಗಿ ಬೇರೆಯವರಿಗೆ ಮಾರ್ಗದರ್ಶಿಯಾಗಿರುತ್ತದೆ ಎಂದು ನಾವು ಭಾವಿಸಿದ್ದೆವು. ಇದು ನಮ್ಮ ಯುವಕರೆಲ್ಲರ ಅಭೀಪ್ರೆಯಾಗಿತ್ತು. ನಮ್ಮ ಹೆಮ್ಮೆಯ ವಿಷಯವಾಗಿತ್ತು. ದೇಶಗಳ ಸ್ವಾತಂತ್ರ್ಯ ಇರುವುದು ಭೂಪಟಗಳ ಮೇಲಲ್ಲ; ಸ್ವಾತಂತ್ರ್ಯದ ಭಾವನೆ ಜನರ ಹೃದಯಗಳಿಂದ ಉಕ್ಕುವಂಥದ್ದು.

ಹೊರಗಿನ ಯಾವುದೇ ಶಕ್ತಿಯೂ ಭಾರತವನ್ನು ಮುಕ್ತಗೊಳಿಸುವುದು ಸಾಧ್ಯವಿಲ್ಲ ಎಂಬ ಮಾತನ್ನು ನೆಹರೂ ಹೇಳಿದಾಗ ನಾನು ಈ ಮಾತಿನ ಬಗ್ಗೆ ಯೋಚಿಸತೊಡಗಿದೆ. ನಾನು ಭಾರತದಲ್ಲಿದ್ದ ಸುಮಾರು ಎರಡು ವರ್ಷಗಳ ಅವಧಿಯಲ್ಲಿ ಇಲ್ಲಿನ ನೂರಾರು ಮಂದಿಯೊಂದಿಗೆ ಮಾತಾಡಿದ್ದೆ. ಆಗ ನನಗೆ ಗೊತ್ತಾದ ಒಂದು ಅಂಶವೇನೆಂದರೆ ಸ್ವಾತಂತ್ರ್ಯವನ್ನು ಬ್ರಿಟಿಷ್ ಕಾಮನ್‌ವೆಲ್ತ್ ತಾನಾಗಿಯೇ ಭಾರತಕ್ಕೆ ಬಿಟ್ಟುಕೊಟ್ಟಿತ್ತು ಎಂಬುದು ಒಂದು ತಪ್ಪು ಕಲ್ಪನೆ. ಭಾರತವು ಪಡೆದುಕೊಂಡ ಪ್ರತಿಯೊಂದು ರಿಯಾಯಿತಿ ಹಾಗೂ ಅನುಕೂಲವೂ ಸಹ ಹೋರಾಟ ಮತ್ತು ಬಲಿದಾನ ನಂತರವೇ ಬಂದದ್ದು. ಮೊದಲ ಮಹಾಯುದ್ಧದ ನಂತರ ನಡೆದ ಜನರ ಚಳುವಳಿಗಳಲ್ಲಿ ಸಾವಿರಾರು ಜನ ಬಂಧನಕ್ಕೊಳಗಾದರು. ವರ್ಷಾನುಗಟ್ಟಲೆ ಜೈಲುಗಳಲ್ಲಿದ್ದರು (ನೆಹರೂ ಇದರ ಸಂಪೂರ್ಣ ಅನುಭವ ಪಡೆದರು.) ಹಂತಹಂತವಾಗಿ ಸ್ವಾತಂತ್ರ್ಯದೆಡೆಗೆ ಸಾಗುವ ಮೆಟ್ಟಿಲುಗಳನ್ನು ನಿರ್ಮಿಸಲಾಗಿತ್ತು. ಅಂತಿಮವಾಗಿ Royal Indian Navyಯಲ್ಲಿ ಶ್ರೇಣೀಕರಣದ ಬಗ್ಗೆ ಬಂಡಾಯವೆದ್ದಾಗ ಈ ಹೋರಾಟ ಕೊನೆಯ ಘಟ್ಟ ಮುಟ್ಟಿತ್ತು. ಬ್ರಿಟನ್ನಿನ ಸ್ವಂತದ ಸಶಸ್ತ್ರಪಡೆಗಳವರೇ ನೌಕಾನೆಲೆಗಳಿಂದ ಹೊರಬಿದ್ದು ಬೀದಿಗಳಲ್ಲಿ ಹೋರಾಟ ನಡೆಸುತ್ತಿದ್ದ ಜನರ ಜೊತೆ ಸೇರಿದ್ದರು. ಇಂತಹ ಸಂದರ್ಭದಲ್ಲಿ ಬ್ರಿಟಿಷ್ ಆಡಳಿತವು ಹಿಂದೆ ಸರಿಯುವುದಲ್ಲದೆ ಅದಕ್ಕೆ ಬೇರೆ ಮಾರ್ಗವೇ ಉಳಿದಿರಲಿಲ್ಲ. ಆದರೆ ಬ್ರಿಟಿಷರು ಎಷ್ಟೇ ನ್ಯಾಯಸಮ್ಮತವಾಗಿ ಗಂಭೀರವಾಗಿ ಹೊರಹೋದಂತೆ ಕಂಡರೂ ಅವರು ಒಡೆದು ಆಳುವ ನೀತಿಯನ್ನು ಬಳುವಳಿಯಾಗಿ ಬಿಟ್ಟುಹೋಗಿದ್ದರು. ಈಗ ಸ್ವಾತಂತ್ರ್ಯ ಬಂದಿತ್ತು. ಆದರೆ ಭಾರತ ಒಡೆದು ಎರಡು ಹೋಳಾಗಿತ್ತು. ಭಾರತ ತನ್ನ ಸ್ವಾತಂತ್ರ್ಯದ ಫಲವನ್ನು ಅನುಭವಿಸುವುದಕ್ಕೆ ಮೊದಲೇ, ಉದ್ಭವಿಸಿದ ಈ ಕಹಿಯನ್ನು ಹೇಗಾದರೂ ನಿವಾರಿಸಬೇಕಾದ್ದರಿಂದ, ಕ್ಷಣಕ್ಷಣಕ್ಕೂ ಆರೋಗ್ಯ ಕ್ಷೀಣಿಸುತ್ತಿದ್ದ ಗಾಂಧಿ ತಮ್ಮ ಅಂತಿಮ ಮಹಾನ್ ಹೋರಾಟ ನಡೆಸಿದ್ದರು.

ನೆಹರೂ ಭಾಷಣ ಮುಂದುವರೆಸುತ್ತ 'ಮೂವತ್ತು ವರ್ಷಗಳ ಹಿಂದೆ ಗಾಂಧೀಜಿ ಈ ದೇಶದ ರಂಗದ ಮೇಲೆ ಕಾಣಿಸಿಕೊಂಡರು. ನೋಡಿದವರಿಗೆ ವಿಚಿತ್ರ ಎನ್ನಿಸುವ ವ್ಯಕ್ತಿ. ಉಡುಪಿನಲ್ಲಿ ಯಾವ ಸೌಂದರ್ಯವೂ ಇಲ್ಲ. ಮಾತಿನಲ್ಲಿ ಯಾವುದೇ ತೋರಿಕೆ ಇಲ್ಲ. ಅವರು ಉನ್ನತ ಹಂತದ ರಾಜಕೀಯ ವ್ಯವಹಾರಗಳಲ್ಲಿ ತೊಡಗಲಿಲ್ಲ. ಅವರು ಹೇಳಿದ್ದು ಇಷ್ಟೆ : ಸತ್ಯವನ್ನು ಬಿಡಬೇಡಿ. ನಮ್ಮ ಗುರಿ ಒಳ್ಳೆಯದಾಗಿದ್ದರೆ ಅದಕ್ಕೆ ನಾವು ಹಿಡಿಯುವ ದಾರಿಯೂ ನ್ಯಾಯಬದ್ಧವಾಗಿರಬೇಕು. ನಾವು ಸ್ವತಂತ್ರರಾಗಬೇಕಾದರೆ ಮೊದಲು

ನಮ್ಮನಮ್ಮಲ್ಲಿರುವ ಬಂಧನಗಳ್ನು ಬಿಡಿಸಿಕೊಳ್ಳಬೇಕು. ವಿಮೋಚಿತರಾದ ಜನರು ಮಾತ್ರ ಸ್ವತಂತ್ರ ಭೂಮಿಯ ಅಸ್ತಿವಾರವನ್ನು ಹಾಕಲು ಸಾಧ್ಯ. ಇದು ಗಾಂಧಿ ಬೋಧಿಸಿದ ಪಾಠ. ಋಜುಮಾರ್ಗವನ್ನು ಬಿಟ್ಟು ನಡೆದರೆ ನಮ್ಮ ನಾಶವಾದಂತೆಯೇ.

ಕತ್ತಲು ಪೂರ್ಣ ಕವಿದಿತ್ತು. ನೆಹರೂ ಅಸ್ಪಷ್ಟವಾಗಿ ಕಾಣಿಸುತ್ತಿದ್ದರು. ಅವರ ದನಿ ಮಾತ್ರ ಕತ್ತಲನ್ನು ಸೀಳಿಕೊಂಡು ಬರುತ್ತಿತ್ತು. ಆಗ ಯಾರೋ ಒಬ್ಬ ವ್ಯಕ್ತಿ ತನ್ನ ಬೈಸಿಕಲ್ ಲೈಟನ್ನು ಹಾಕಿ ನೆಹರೂ ಕಡೆಗೆ ತಿರುಗಿಸಿದ. ಆಗ ಸಭೆಯಲ್ಲಿದ್ದ ಇತರ ಬೈಸಿಕಲ್‌ಗಳವರೂ ಬೈಸಿಕಲ್ ದೀಪ ಹಾಕಿ ಇದೇ ರೀತಿ ಸಭೆಯತ್ತ ತಿರುಗಿಸಿದರು. ಇಡೀ ಉದ್ಯಾನದಲ್ಲಿ ಮಿಣುಕು ಹುಳು ಗಳು ಮಿನುಗುತ್ತಿರುವಂತೆ ಒಂದು ಮನೋಹರವಾದ ದೃಶ್ಯ ರೂಪುಗೊಂಡಿತು.

ನೆಹರೂ ಹೇಳುತ್ತಿದ್ದರು- ನಾನು ಧಾರ್ಮಿಕಶ್ರದ್ಧೆಯವನಲ್ಲ; ಆದರೆ ನಾವು ಪೂರ್ವದಲ್ಲಿ ಏನು ಕರ್ಮ ಮಾಡುತ್ತೇವೋ ಅದಕ್ಕೆ ತಕ್ಕ ಬೆಲೆ ಸಲ್ಲಿಸಬೇಕಾಗುತ್ತದೆ ಎಂಬುದನ್ನು ನಾನು ನಂಬುತ್ತೇನೆ. ಇಂತಹ ಕೃತ್ಯಗಳೇ ನಮ್ಮ ಭವಿಷ್ಯವನ್ನು ನಿರ್ಧರಿಸುತ್ತವೆ. ಅದು ಒಂದು ರಾಷ್ಟ್ರವೇ ಆಗಿರಲಿ, ದೇಶವೇ ಆಗಿರಲಿ ಅದು ಇಂದು ಏನು ಬಿತ್ತುತ್ತದೆ ಅದರ ಫಲವನ್ನು ನಾಳೆ ಅನುಭವಿಸಲೇಬೇಕು. ನಾವು ಸ್ವತಂತ್ರ್ಯ ಗಳಿಸಿರಬಹುದು ಆದರೆ ದುಃಖ ನಮ್ಮನ್ನು ಆವರಿಸಿದೆ. ನಾನು ಮತ್ತೆಮತ್ತೆ ಯೋಚಿಸುತ್ತೇನೆ. ನಮ್ಮ ಯಾವ ತಪ್ಪಿಗಾಗಿ ಇಂದಿನ ದುಃಸ್ಥಿತಿ ಒದಗಿತು?

ಭಾರತದ ಆಧ್ಯಾತ್ಮಿಕ ಮುಂದಾಳತ್ವದಲ್ಲಿ ಏಷಿಯನ್ ರಾಷ್ಟ್ರಗಳ ಮಹಾ ಒಕ್ಕೂಟ ಸ್ಥಾಪಿತವಾಗಬೇಕು ಎಂಬ ಕನಸನ್ನು ನೆಹರೂ ಕಂಡಿದ್ದರು. ಈ ವಿಷಯವನ್ನು ಇಂದಿನ ಭಾಷಣದಲ್ಲಿ ಅವರು ಪ್ರಸ್ತಾಪಿಸಬಹುದು ಎಂದು ನಾನು ಕುತೂಹಲದಿಂದ ನಿರೀಕ್ಷಿಸುತ್ತಿದ್ದೆ. ಹೊಸ ಭಾರತವನ್ನು ಕುರಿತು, ಏಷಿಯಾದಲ್ಲಿ ಭಾರತ ಯಾವ ಸ್ಥಾನದಲ್ಲಿರಬೇಕು ಎಂಬುದನ್ನು ಕುರಿತು ಮತ್ತು ಏಷಿಯಾದ ಮೂಲಕ ಜಗತ್ತಿನಲ್ಲಿ ನಮ್ಮ ಪಾತ್ರವೇನು ಎಂಬುದನ್ನು ಕುರಿತು ತಮ್ಮ ಕನಸನ್ನು ನೆಹರೂ ವಿವರಿಸತೊಡಗಿದರು. "ನನ್ನ ಈ ಕನಸು ಈಗಲೂ ಇದೆ. ಅದು ಇನ್ನೂ ಅಳಿಸಿಹೋಗಿಲ್ಲ. ಆದರೆ ನನ್ನ ಒಂದೇ ಒಂದು ಆತಂಕವೇನೆಂದರೆ ನಮ್ಮ ಈ ಬದುಕಿನ ಅಲ್ಪಾಯುಷ್ಯದ ಅವಧಿಯಲ್ಲಿ ಅದು ನನಸಾಗುವುದನ್ನು ನೋಡುವ ಭಾಗ್ಯ ನಮಗಿದೆಯೆ?"

"ನಮ್ಮ ಹೃದಯವನ್ನೇ ಒಡೆಯುವಂತಹ ಈ ನಿರಾಶಾದಾಯಕ ಸ್ಥಿತಿಯಲ್ಲಿ ಒಂದು ಭರವಸೆ ಏನೆಂದರೆ ಗಾಂಧಿಯಂತಹ ವ್ಯಕ್ತಿಯನ್ನು ಹುಟ್ಟುಹಾಕಿದ ಸತ್ವಶಾಲಿ ಭೂಮಿ ನಮ್ಮದು. ಇನ್ನೊಬ್ಬ ಗಾಂಧಿ ಇನ್ನೂ ಒಂದು ಸಾವಿರ ವರ್ಷಗಳ ನಂತರ ಹುಟ್ಟಬಹುದು. ಸದ್ಯಕ್ಕೆ ಗಾಂಧಿಯವರು ತಮ್ಮ ೨೦ ವರ್ಷಗಳ ಅನುಭವದಿಂದ ಕೊಟ್ಟಿರುವ ಮಾರ್ಗದರ್ಶನದಿಂದ ನಮ್ಮ ಬದುಕನ್ನು ರೂಪಿಸಿಕೊಳ್ಳೋಣ. ಅವರು ನಮ್ಮನ್ನು ಹೊಸ ಗುರಿಯತ್ತ ಕೊಂಡೊಯುತ್ತಾರೆಯೇ ಹೊರತು ಭ್ರಮಾಲೋಕದ ಕಡೆಗಲ್ಲ" ಎಂದು ನೆಹರೂ ಮಾತು ಮುಗಿಸಿದರು.

ರಾತ್ರಿ ನಾನು ನೆಹರೂ ಅವರೊಂದಿಗೆ ಡಿನ್ನರ್ ವೇಳೆಗೆ ಭೇಟಿಯನ್ನು ಗೊತ್ತುಪಡಿಸಿದ್ದೆ. ನೆಹರೂ ಭಾಷಣ ಮುಗಿಯುತ್ತಿದ್ದಂತೆ ನಾನು ಬೇಗಬೇಗ ಆ ಜಾಗದಿಂದ ಹೊರಟೆ. ಜನರ ಹಾಗೂ ಬೈಸಿಕಲ್‌ಗಳ ಮಧ್ಯದಿಂದ ಜಾಗ ಮಾಡಿಕೊಂಡು ಹೋಗುವುದು ಪ್ರಯಾಸವೇ ಆಯಿತು. ಗೇಟಿನ ಬಳಿ ಬರುವಷ್ಟರಲ್ಲಿ ಅಲ್ಲೊಂದು ಘರ್ಷಣೆ ನಡೆಯುತ್ತಿತ್ತು. ಸಭೆಗೆ ಬರಲು ಪ್ರಯತ್ನಿಸುತ್ತಿದ್ದ ಸಿಖ್ಖರ ನಿಯೋಗವೊಂದು ತನಗೆ ಸ್ಥಳಾವಕಾಶ ಸಿಗಲಿಲ್ಲ ಎಂದು ಕೂಗಾಡುತ್ತಿತ್ತು. 'ನಮಗೆ ಇಲ್ಲಿ ಜಾಗವಿಲ್ಲ. ನಮಗೆ ಭಾರತದಲ್ಲಿ ಜಾಗವಿಲ್ಲ, ಆದರೂ ಮುಸ್ಲಿಮರ ಬಗ್ಗೆ ಈ ನಾಯಕರು ಕೃಪೆ ತೋರಿಸುತ್ತಿದ್ದಾರೆ' ಎಂಬುದು ಅವರ ಆಕ್ರೋಶ. ಪೊಲೀಸರು ಲಾಠಿ ಬೀಸತೊಡಗಿದ್ದರು.

ಇಷ್ಟಾಗುವಾಗ ಇದ್ದಕ್ಕಿದ್ದಂತೆ ನೆಹರೂ ನನ್ನ ಸಮೀಪವೇ ಬಂದಿದ್ದರು. ಮರುಕ್ಷಣವೇ ಗೇಟಿಗೆ ಅಂಟಿಕೊಂಡಿದ್ದ ಕಾಂಕ್ರೀಟ್ ಗೋಡೆ ಹತ್ತಿ ಸಮತೋಲನ ಮಾಡಿಕೊಂಡು ನಿಂತರು (ಆಗ ನೆಹರೂಗೆ ೫೯ರ ವಯಸ್ಸು ಅವರು ಪ್ರತಿದಿನವೂ ವ್ಯಾಯಾಮದ ಅಂಗವಾಗಿ ಶೀರ್ಷಾಸನ ಮಾಡುತ್ತಿದ್ದರು.) ಆ ದೊಡ್ಡ ಜನರ ಗುಂಪನ್ನುದ್ದೇಶಿಸಿ ಹಾಸ್ಯಮಯ ಶೈಲಿಯಲ್ಲಿ ಮಾತಾಡಿದರು. 'ನೋಡಿ ನಮ್ಮ ಹಿಂದೆ ಕೆಲವೇ ಲಾಠಿಗಳಿವೆ. ಆದರೆ ಮಹಾತ್ಮರ ಹಿಂದೆ ನೋಡಿ ಎಷ್ಟಿವೆ ಅಂತ!' ಶ್ರೋತೃಗಳಿಗೆ ತಕ್ಕಂತೆ ನೆಹರೂ ಶೈಲಿ ಬದಲಾಗಿತ್ತು. ಅವರ ಸಾಮರ್ಥ್ಯಕ್ಕೆ ನಾನು ಬೆರಗಾದೆ. ಸಭೆಯಲ್ಲಿ ಮಾತಾಡುವಾಗ ಅವರು ಎಷ್ಟು ಗಂಭೀರವಾಗಿದ್ದರು. ಅವರ ಮಾತುಗಳು ಆಲೋಚನಾಪೂರಿತವಾಗಿದ್ದವು. ತಮ್ಮ ತಲೆಯಲ್ಲಿರುವ ಆಲೋಚನೆಗಳಿಗೆ ದನಿಕೊಡುವ ರೀತಿಯಲ್ಲಿ ಆ ನಿಶ್ಶಬ್ದ ಜನ ಸಮೂಹದೆದುರು ಅವರು ಮಾತಾಡಿದ್ದರು. ಈಗ ಇಲ್ಲಿ ಎಷ್ಟು ತಮಾಷೆಯಾಗಿ ಮುಕ್ತವಾಗಿ ಮಾತಾಡುತ್ತಿದ್ದಾರೆಂದರೆ ಗಲಾಟೆ ಮಾಡುತ್ತಿದ್ದ ಜನರನ್ನೆಲ್ಲ ಅವರ ಮಾತು ಆಕರ್ಷಿಸಿಬಿಟ್ಟಿತ್ತು.

ನೆಹರೂ ಇನ್ನು ಅಲ್ಲಿದ್ದ ಹಾಗೆಯೇ ನಾನು ಹೊರಟುಹೋದೆ. ರಾತ್ರಿ ಅವರನ್ನು ಊಟದ ವೇಳೆಯಲ್ಲಿ ಭೇಟಿ ಮಾಡಿದೆ. ಬೇಯಿಸಿದ ಮ್ಯಾಕ್ರೋನಿ ಊಟವನ್ನು ಮುಗಿಸಿ ನಾವು ಮೇಲೆದ್ದಾಗ ನೆಹರೂ ಹೇಳಿದರು ಈಗ ನಾನು ಉಪವಾಸ ಆರಂಭಿಸುತ್ತಿದ್ದೇನೆ. ಇಡೀ ದೆಹಲಿ ನಾಳೆ ಉಪವಾಸವಿರುತ್ತದೆ.....' ನಾನು ಅಲ್ಲಿಂದ ಹೊರಡುವಾಗ ತುಂಬಾ ಚಿಂತಾಕ್ರಾಂತರಾಗಿದ್ದ ಕಾಂಗ್ರೆಸ್ ಪಕ್ಷದ ಒಬ್ಬ ಅಧಿಕಾರಿ ಬಂದರು. ಗಾಂಧಿಯವರ ತೂಕದಲ್ಲಿ ವ್ಯತ್ಯಾಸವಾಗಿರುವ ಬಗ್ಗೆ ಅವರು ಆತಂಕಕಾರಿಯಾದ ಸುದ್ದಿ ತಂದಿದ್ದರು. ಇನ್ನು ಇಪ್ಪತ್ನಾಲ್ಕು ಗಂಟೆ ಮಾತ್ರ ಅವಕಾಶ. ಅನಂತರ ಪರಿಸ್ಥಿತಿ ಕೈಮೀರಿ ಹೋಗುತ್ತದೆ ಎಂದು ಹೇಳಿದರು.

ಮಾರನೇ ಬೆಳಿಗ್ಗೆ ನಾನು ಬಿರ್ಲಾ ಭವನಕ್ಕೆ ಹೋದೆ. ಕಾತುರದಿಂದ ಕಾಯುತ್ತಿದ್ದ ಜನಗಳ ಜೊತೆಗೆ ನಿಂತುಕೊಂಡೆ. ಮಧ್ಯಾಹ್ನ ೧೨ ಗಂಟೆ ಕಳೆದು ಕೆಲವು ನಿಮಿಷಗಳಾಗಿರಬಹುದು. ಅಷ್ಟರಲ್ಲಿ ಒಳಗಿನಿಂದ ಹೆಂಗಸರು ಸಂತಸದಿಂದ ಚೀರಾಡಿದ್ದು ಕೇಳಿಸಿತು. ನಾನು ಕ್ಯಾಮರಾ ಹಿಡಿದು ಒಳಗೆ ಓಡಿದೆ. ಸುಶೀಲಾ, ಗಾಂಧಿಯವರ ಸೋದರಳಿಯನ ಮೊಮ್ಮಗಳು ಇನ್ನಿತರ ಹಲವರು ಅಲ್ಲಿದ್ದರು. ಪ್ರತಿಯೊಬ್ಬರೂ ಸಂತೋಷದಿಂದ ನಗುತ್ತಿದ್ದರು. ಉತ್ಸಾಹದಿಂದ ಚೀರಾಡುತ್ತಿದ್ದರು. ಗಾಂಧಿ ಉಪವಾಸವನ್ನು ನಿಲ್ಲಿಸುವ ನಿರ್ಧಾರ ಮಾಡಿದ್ದರು.

ಶಾಂತಿ ಒಪ್ಪಂದದ ಕಾರ್ಯಕ್ರಮ ಸಿದ್ಧವಾಗಿತ್ತು. ಮೊದಲು ಎಂದೂ ಯಾವ ಒಪ್ಪಂದಕ್ಕೂ ಬರದ ಸಿಖ್ ಮತ್ತು ಹಿಂದೂ ಧರ್ಮದ ವಿವಿಧ ಬಣಗಳನ್ನು ಪ್ರತಿನಿಧಿಸುವ ನಾಯಕರು ಗಾಂಧಿಯವರ ಸಮ್ಮುಖದಲ್ಲಿ ಇದಕ್ಕೆ ಸಹಿ ಮಾಡಿದರು. ಈ ಪ್ರತಿನಿಧಿಗಳಲ್ಲಿ ಸುಧಾರಣಾವಾದಿಗಳು, ಫೆನೆಟಿಕ್‌ಗಳು ಎಲ್ಲ ಇದ್ದರು. ಪಟ್ಟಿಯ ಇನ್ನೊಂದು ತುದಿಯಲ್ಲಿದ್ದ ಸಹಿದಾದರರೆಂದರೆ ಹಿಂದೂ ಪಾರಮ್ಯವನ್ನು ಎತ್ತಿ ಹಿಡಿಯುವ ಹಿಂದೂ ಮಹಾಸಭಾದ ಮುಖಂಡರು ಹಾಗೂ ಅಷ್ಟೇ ಮತನಿಷ್ಠೆಯ ಸಿಖ್ ಧರ್ಮದ ಅಕಾಲಿ ಶಾಹಿದಿ ಜಾತಾದವರು. ಎಂದೂ ಯಾರಿಗೂ ಕಾಣಿಸಿಕೊಳ್ಳದ ಮತ್ತು ಬಹುತೇಕ ನಿಗೂಢವೇ ಆಗಿದ್ದ ಆರ್.ಎಸ್.ಎಸ್. ಅಧ್ಯಕ್ಷರೇ ಸ್ವತಃ ಆ ಬೆಳಿಗ್ಗೆ ಅಲ್ಲಿ ಸಹಿ ಮಾಡಲು ಬಂದಿದ್ದರಂತೆ. ಇದನ್ನು ಕೇಳಿದಾಗ ಗಾಂಧಿ ನಿಜವಾಗಿ ಪವಾಡವನ್ನೇ ಸಾಧಿಸಿದ್ದಾರೆ ಅಥವಾ ಆರ್.ಎಸ್.ಎಸ್. ನಾಯಕರು ಇಲ್ಲಿ ವ್ಯಂಗ್ಯ ಮಾಡಿದ್ದಾರೆ ಎಂದು ನನಗನ್ನಿಸಿತು. ಆರ್.ಎಸ್.ಎಸ್. ಬಣದವರ ಧ್ಯೇಯವಾಕ್ಯ 'ಇಸ್ಲಾಮನ್ನು ಬುಡಸಮೇತ ನಿರ್ಮೂಲ ಮಾಡಬೇಕು' ಎಂಬುದು ನನ್ನ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿತ್ತು.

ಪಾಕಿಸ್ತಾನದ ಹೈಕಮಿಷನರ್ ಕೂಡ ಖುದ್ದಾಗಿ ಬಂದಿದ್ದರು. ಪಾಕಿಸ್ತಾನ ಹಾಗೂ ಭಾರತದಲ್ಲಿರುವ ಗಾಂಧಿ ಅನುಯಾಯಿಗಳಿಂದ ಟೆಲಿಗ್ರಾಮುಗಳ ಮಹಾಪೂರವೇ ಹರಿದು ಬಂದಿತ್ತು. ಡೆಸ್ಕು ಮೇಜು ಕಿಟಕಿಯ ಕಟ್ಟೆ... ಎಲ್ಲೆಲ್ಲೂ ಟೆಲಿಗ್ರಾಮುಗಳು.

ಕೋಣೆಯ ಮೂಲೆಯಲ್ಲಿದ್ದ ನೆಲದ ಮೇಲೆ ಕುಳಿತಿದ್ದ ಗಾಂಧೀಜಿ ಸಣಕಲು ಕೈಯಲ್ಲಿ ಟೆಲಿಗ್ರಾಂ ಹಿಡಿದು ಮುಗುಳ್ನಗುತ್ತಿದ್ದರು.

ಆಭಾ, ಹಣ್ಣಿನರಸದ ಉದ್ದನೆಯ ಗಾಜಿನ ಲೋಟಾ ಹಿಡಿದುಕೊಂಡು ಬಂದಳು. ಗಾಂಧಿಯ ಮುಂದೆ ಅವಳು ಮೊಣಕಾಲೂರಿ ಕುಳಿತಾಗ ಗಾಂಧಿ ಅವಳಿಗೆ ಮುದ್ದುಕೊಟ್ಟರು. ಹಣ್ಣಿನ ರಸದ ಮೊದಲ ಗುಟುಕನ್ನು ಕುಡಿಯುವ ಮೊದಲೇ ಮೈಕ್ ಎಲ್ಲಿ ಎಂದು ಕೇಳಿದರು. ಜನಸೇನೆಗೆ ಈಗಲೂ ಜನರಲ್ ಆಗಿಯೇ ಉಳಿದ ಗಾಂಧಿ, ಉಪವಾಸ ನಿಲ್ಲಿಸುವ ನಿರ್ಧಾರವನ್ನು ತಮಗಾಗಿ ಕಾಯುತ್ತಾ ಕುಳಿತ ಜನರಿಗೆ ಮೊದಲು ತಿಳಿಸಬೇಕಾದ ಕರ್ತವ್ಯವನ್ನು ಮರೆಯಲಿಲ್ಲ. ಅತ್ಯಂತ ಕ್ಷೀಣ ದನಿಯಲ್ಲಿ ತಮ್ಮ ನಿರ್ಧಾರವನ್ನು ಘೋಷಿಸಿದರು. ಸಂಪುಟದಲ್ಲಿದ್ದ ಮುಸ್ಲಿಂ ಸಚಿವ ಮೌಲಾನಾ ಆಜಾದ್ ಹಾಗೂ ಪಂಡಿತ್ ನೆಹರೂ ಒಬ್ಬರಾದ ನಂತರ ಒಬ್ಬರಂತೆ ಹಣ್ಣಿನ ರಸವನ್ನು ಗಾಂಧಿಯವರಿಗೆ ಕೊಡುವ ಸಂಪ್ರದಾಯ ಮಾಡಿದರು. ಅನಂತರ ಹೆಂಗಸರು ಕಿತ್ತಳೆಯ ತೊಳೆಗಳಿದ್ದ ದೊಡ್ಡ ದೊಡ್ಡ ಟ್ರೇಗಳನ್ನು ತಂದರು. ಗಾಂಧಿ ಅದರ ಮೇಲೆ ಕೈ ಇಟ್ಟಾಗ ಅದು ಗಾಂಧೀಪ್ರಸಾದವಾಯಿತು. ಎಲ್ಲರ ಮುಂದೂ ತಟ್ಟೆಗಳನ್ನು ಹಿಡಿದಾಗ ಎಲ್ಲರೂ ಕಾತುರದಿಂದ ಕೈಚಾಚಿ ತೆಗೆದುಕೊಂಡರು. ತಮಗೆ ಸಿಕ್ಕ ತೊಳೆಯ ಚೂರುಗಳನ್ನು ಪಕ್ಕದವರಿಗೂ ಹಂಚಿದರು. ಮೇಜಿನ ಮೇಲೆ ನಿಂತು ಫೋಟೋ ತೆಗೆಯುತ್ತಿದ್ದ ವಿದೇಶಿಯಳಾದ ನನಗೂ ಕೂಡ ಗಾಂಧೀ ಪ್ರಸಾದವನ್ನು ಕೊಡಲು ಅವರು ಮರೆಯಲಿಲ್ಲ.

ಗಾಂಧಿಯವರ ಉಪವಾಸ ಇಡೀ ರಾಷ್ಟ್ರದ ಭಾವನೆಗಳನ್ನು ಕಲಕಿತ್ತು. ಆತ್ಮಶೋಧನೆಗೆ ಪ್ರೇರಣೆ ನೀಡಿತ್ತು. ಯಾವಾಗಲೂ ಆಸ್ಫೋಟಕ ಸ್ಥಿತಿಯಲ್ಲಿ ಇರುತ್ತಿದ್ದ ಕೆಲವು ಗಡಿ ಪ್ರದೇಶಗಳಲ್ಲಿ

ಹಾಗೂ ಎಲ್ಲಿ ನಿರಾಶ್ರಿತರು ಅಪಾರ ಸಂಖ್ಯೆಯಲ್ಲಿ ಜಮಾಯಿಸಿದ್ದರೋ ಅಂಥ ಎಲ್ಲೊ ಒಂದೆರಡು ಕಡೆ ಕೆಲವು ಹಿಂಸಾತ್ಮಕ ಘಟನೆಗಳು ನಡೆದದ್ದನ್ನು ಹೊರತುಪಡಿಸಿದರೆ ಗಾಂಧೀಜಿ ಯವರು ತಮ್ಮ ಜೀವವನ್ನೇ ಪಣವಾಗಿಟ್ಟು ಆಚರಿಸಿದಂಥ ಈ ಉಪವಾಸ ತನ್ನ ಕೆಲಸವನ್ನು ಸಾಧಿಸಿತ್ತು. ಇಡೀ ದೇಶದ ಅಂತರಂಗದ ಆಳವನ್ನು ಕಳಕಿತ್ತು. ಜನ ಶಾಂತಿಯತ್ತ ಮನಸ್ಸು ಮಾಡಿದ್ದರು.

ಹಿಂದೂ ಪಂಡಿತರು ಜ್ಯೋತಿಷ್ಯ ಗ್ರಂಥಗಳನ್ನು ತಡಕಾಡಿ, ಗಾಂಧಿಯವರಿಗೆ ಒಂದು ನೂರಾ ಇಪ್ಪತ್ತೈದು ವರ್ಷಗಳಷ್ಟು ಆಯಸ್ಸಿದೆ ಎಂದು ಅರ್ಥಹಚ್ಚಿ ಹೇಳಿದರು. ಅವರ ಪ್ರಕಾರ ಇದು ಗಾಂಧಿಯವರ ಕನಿಷ್ಠವಯಸ್ಸು. ನೂರಾಮುವತ್ತು ವರ್ಷಗಳವರೆಗೂ ಗಾಂಧಿ ಬದುಕಬಹುದು ಎಂಬ ಆಶಾವಾದವನ್ನೂ ಅವರು ಸೂಚಿಸಿದ್ದರು.

ಆದರೆ ಜೀವನದ ಅಡಿಪಾಯವೇ ತಲೆಕೆಳಗಾಗಿ ಬೇರೆ ದಾರಿಯೇ ಕಾಣದಂಥ ನಿರಾಶ್ರಿತರನ್ನು ಒಳಗೊಂಡ ಆರ್.ಎಸ್.ಎಸ್.ನ ಉಗ್ರ, ಉತ್ಸಾಹೀ ಯುವ ಸದಸ್ಯರ ಸಂಖ್ಯೆ ಹೆಚ್ಚುತ್ತಾ ಹೋಯಿತು. ಅವರು ದಿನವೂ ಬೆಳಿಗ್ಗೆ ಸಿಗುವ ಹಾಲಿಗಾಗಿ, ದೈಹಿಕ ವ್ಯಾಯಾಮಕ್ಕಾಗಿ ಒಂದು ಕಡೆ ಸೇರುತ್ತಿದ್ದರು. ಎರಡು ಸಾವಿರ ವರ್ಷಗಳ ಹಿಂದಿನ ಪರಿಶುದ್ಧ ಹಿಂದೂ ಧರ್ಮದ ವೈಭವವನ್ನು ಕುರಿತು ತಮ್ಮ ಕಲ್ಪನೆಗಳಲ್ಲಿ ಮೈಮರೆಯುತ್ತಿದ್ದರು.

❑

ಅಧ್ಯಾಯ ೬

ದೆಹಲಿಯ ಗಿರಣಿ ಕಾರ್ಮಿಕರು

ಗಾಂಧೀಜಿಯ ಉಪವಾಸದಾದ್ಯಂತವೂ ಹಾಗೂ ಮತೀಯ ಐಕ್ಯತೆಗಾಗಿ ಅವರು ಸಾರಿದ ಯುದ್ಧದಾದ್ಯಂತವೂ ಒಂದು ಗುಂಪು ಮಾತ್ರ ಸದಾಕಾಲ ಗಾಂಧೀಜಿಯವರ ಬೆಂಬಲಕ್ಕಿತ್ತು. ಈ ಗುಂಪಿನ ಸದಸ್ಯರಿಗೆ ಮಹಾತ್ಮರ ಕೆಲವೊಂದು ವಿಚಾರಗಳ ಬಗ್ಗೆ ಭಿನ್ನಾಭಿಪ್ರಾಯ ಇತ್ತಾದರೂ ಅವರು ಗಾಂಧಿಯವರಿಗೆ ಸತತ ಒತ್ತಾಸೆಯಾಗಿ ನಿಂತರು. ಹೀಗೆ ಒತ್ತಾಸೆಯಾಗಿ ನಿಂತ ಗುಂಪೇ ಕಾರ್ಮಿಕ ವರ್ಗ.

ಮತೀಯ ಹೆಸರಿನಲ್ಲಿ ಅತ್ಯಂತ ಪೈಶಾಚಿಕ ಸ್ವರೂಪದ ಗಲಭೆ ಹೋರಾಟಗಳು ನಡೆದಾಗ ಆ ಮಹಾಸನ್ನಿಯಿಂದ ದೂರ ನಿಂತ ವರ್ಗವೆಂದರೆ ಕಾರ್ಮಿಕ ವರ್ಗ. ಹಿಂದೂ ಮುಸ್ಲಿಂ ದ್ವೇಷದ ಸೋಂಕು ಇವರಿಗೆ ತಟ್ಟಲೇ ಇಲ್ಲ ಎನ್ನಬಹುದು. ಇದು ಸಹಜವೇ ಆಗಿತ್ತು. ಯಾಕೆಂದರೆ ಮಾಲೀಕರು ಮತ್ತು ಕಾರ್ಮಿಕ ಸಂಬಂಧದ ಮೇಲೆ ಊಳಿಗಮಾನ್ಯ ಪದ್ಧತಿಯ ಕರಾಳ ನೆರಳು ಇನ್ನೂ ಹಾಗೇ ಉಳಿದಿದ್ದ ಸಂದರ್ಭದಲ್ಲಿ ಕಾರ್ಮಿಕ ವರ್ಗವು ಆ ಸಂಬಂಧವಾಗಿ ಮಾಡಬೇಕಾಗಿದ್ದ ಹೋರಾಟವೇ ಸಾಕಷ್ಟಿತ್ತು. ಕಾರ್ಮಿಕ ಸಂಘಟನೆಯನ್ನು ದುರ್ಬಲಗೊಳಿಸುವುದಕ್ಕೆ ಅಥವಾ ಅಲ್ಲಿ ಮುಷ್ಕರವೇಳುವಂತೆ ಮಾಡುವುದಕ್ಕೆ ಮತೀಯ ಗಲಭೆಗಳನ್ನು ಬಳಸಿಕೊಂಡ ಸಂದರ್ಭಗಳನ್ನು ಅವರು ಕಂಡಿದ್ದರು. ಹೀಗಾಗಿ ಗಾಂಧೀಜಿಯವರ ಉಪವಾಸ ಸಂದರ್ಭದಲ್ಲಿ ಬಿರ್ಲಾ ಗೇಟುಗಳೊಳಗೆ ಪ್ರವೇಶಿಸಿದ ಶಾಂತಿ ಸಂದೇಶದ ಮೆರವಣಿಗೆಗಳಲ್ಲಿ ಕಾರ್ಮಿಕ ಸಂಘಟನೆಗಳ ಮೆರವಣಿಗೆಗಳೇ ಹೆಚ್ಚಿನ ಸಂಖ್ಯೆಯಲ್ಲಿದ್ದವು. ಬಸ್ಸು ಮತ್ತು ಟ್ರಾಮ್‌ಕಾರು ಆಪರೇಟರುಗಳು, ಲೋಕೋಮೊಟಿವ್‌ಗಳ ನಿರ್ವಹಣಾ ಅನುಪಾಲನಾ ಕಾರ್ಮಿಕರು, ಅಚ್ಚುಮೊಳೆ ಜೋಡಿಸುವವರು, ಸರ್ಕಾರಿ ಗುಮಾಸ್ತರು. ....ಹೀಗೆ ಅನೇಕ ಸಂಘಟನೆಗಳವರು ತಮ್ಮತಮ್ಮ ಬ್ಯಾನರುಗಳನ್ನು ಹಿಡಿದುಕೊಂಡು ಬಂದಿದ್ದರು. ಎಲ್ಲ ಕಾರ್ಮಿಕ ಸಂಘಟನೆಗಳವರೂ ಶಾಂತಿ ಪಾಲಿಸುತ್ತೇವೆ ಎಂಬ ಪ್ರಮಾಣ ವಚನದೊಂದಿಗೆ ತಮ್ಮ ನಿಯೋಗಗಳನ್ನು ಕಳಿಸಿದ್ದರು. ಗಾಂಧೀಜಿಯವರ ಜೀವವನ್ನು ಉಳಿಸಿಕೊಳ್ಳಬೇಕೆಂಬ ಮನವಿಯನ್ನು ಕಳಿಸಿದ್ದರು. ಆದರೆ ಇವುಗಳಲ್ಲಿ ಅಗತ್ಯವಾಗಿ ಇರಲೇಬೇಕಾದ ಒಂದು ಸಂಘಟನೆ ಮಾತ್ರ ಇರಲಿಲ್ಲ. ಅದರ ಗೈರುಹಾಜರಿ ಎದ್ದು ಕಾಣುತ್ತಿತ್ತು. ಹೀಗೆ ಗೈರುಹಾಜರಾಗಿದ್ದ ಸಂಘಟನೆ ಯಾವುದೆಂದರೆ ಎಲ್ಲವುಗಳಿಗಿಂತ ಬಹು ದೊಡ್ಡದಾದ ಜವಳಿ ಕಾರ್ಮಿಕರದು. ಜವಳಿ ಉದ್ಯಮವು ದೆಹಲಿಯಲ್ಲಿ ಮಾತ್ರವಲ್ಲ ಇಡೀ ದೇಶದಲ್ಲಿ ಬಹು ದೊಡ್ಡ ಉದ್ಯಮವೆನಿಸಿಕೊಂಡಿತ್ತು. ಮತ್ತು ಭಾರತದ ಅತಿ ದೊಡ್ಡ ಜವಳಿ ಗಿರಣಿಯ ಮಾಲೀಕರು ಶ್ರೀ ಬಿರ್ಲಾ. ಉಪವಾಸ ಆರಂಭವಾದ ನಂತರ ಕೆಲವೊಂದು ನೇಕಾರರು ವೈಯಕ್ತಿಕವಾಗಿ ಬಿರ್ಲಾ ಭವನದೊಳಗೆ ಬಂದಿದ್ದರು: ಆದರೆ ಇಂತಹ

ಒಂದು ಅತಿದೊಡ್ಡ ಸಂಘಟನೆಯ ಸಂಘಟಿತ ರೂಪದ ಮೆರವಣಿಗೆ ಬಿರ್ಲಾ ಗೇಟಿನೊಳಗೆ ಬರಲೇ ಇಲ್ಲ.

ಇದು ನನಗೆ ಬಹಳ ಕುತೂಹಲಕಾರಿಯಾಗಿ ಕಂಡಿತು. ಉಪವಾಸದ ಭರಾಟೆ ಎಲ್ಲ ಶಾಂತವಾದ ನಂತರ ಒಂದು ದಿನ ಹಳೇ ದೆಹಲಿಯ ದೂರದ ಮೂಲೆಯಲ್ಲಿರುವ ಗಿರಣಿ ಜಿಲ್ಲೆಗೆ ಹೋದೆ. ದೆಹಲಿ, ಹೇಗೆ ಹೇಗೋ ಚಾಚಿಕೊಂಡಿರುವ ಬಹುದೊಡ್ಡ ನಗರ. ಅದು ವಾಸ್ತವವಾಗಿ ಒಟ್ಟು ಎಂಟು ನಗರಗಳು ಸೇರಿ ಆದ ಒಂದು ಸಂಯುಕ್ತ ನಗರ. ಇದರಲ್ಲಿ ಏಳು ನಗರಗಳು ಹಳೆಯವು. ಒಂದು ಹೊಸದು. ಹೊಸದೆಹಲಿಯಿಂದ ದೂರದ ಕಾರ್ಖಾನೆ ಸ್ಥಳಗಳಲ್ಲಿ ಭಯಾನಕ ರಸ್ತೆಗಳು, ಇಕ್ಕಟ್ಟಿನ ಓಣಿಗಳನ್ನು ನೋಡುತ್ತಿದ್ದಂತೆ ದೆಹಲಿಯ ಕಣ್ಣುಕೋರೈಸುವ ಆಧುನಿಕ ಸರ್ಕಾರಿ ಕಟ್ಟಡಗಳು, ಬಹು ಅಂತಸ್ತುಗಳ ಹೋಟೆಲುಗಳು, ರಾಜ ಮಹಾರಾಜರುಗಳ ಭವ್ಯ ಗುಮ್ಮಟದ ಅರಮನೆಗಳು ಮರೆತೇ ಹೋಗುತ್ತವೆ.

ಬಿರ್ಲಾ ಮಾಲಿಕತ್ವದ ಬಹುದೊಡ್ಡ ಗಿರಣಿಗಳೆಲ್ಲ ಇರುವುದು ಶಾಬ್ಜಿ ಮಂಡಿಯಲ್ಲಿ. ಅಲ್ಲಿನ ಪೇಟೆ ಪ್ರದೇಶದ ಅಂಕುಡೊಂಕಿನ ಇಕ್ಕಟ್ಟಿನ ರಸ್ತೆಗಳಲ್ಲಿ ಟ್ರಾಮ್ ಕಾರುಗಳು, ಬಸ್ಸುಗಳು, ಎತ್ತಿನ ಬಂಡಿಗಳು, ಕುದುರೆಗಾಡಿಗಳು ಒಂದನ್ನೊಂದು ಉಜ್ಜಿಕೊಂಡೇ ಹೋಗಬೇಕು. ಕಾರ್ಖಾನೆ, ಅಂಗಡಿ, ಉಪಾಹಾರದ ಸ್ಥಳಗಳ ನಡುವೆ ಎಲ್ಲೆಲ್ಲಿ ಜಾಗವಿದೆಯೋ ಅಲ್ಲೆಲ್ಲ ಉಸಿರುಕಟ್ಟಿದಂತೆ ಸಿಕ್ಕಿ ಹಾಕಿಕೊಂಡಿರುವ ಕಾರ್ಮಿಕರ ವಸತಿಗಳು.

ಇಂತಹ ಒಂದು ವಸತಿ ಸ್ಥಳಕ್ಕೆ ನಾನು ಹೋದೆ. ನನ್ನ ಅದೃಷ್ಟಕ್ಕೆ ಇಂಗ್ಲಿಷ್ ಅರ್ಥವಾಗುವ ಯಾರಾದರೊಬ್ಬ ವ್ಯಕ್ತಿ ಸಿಗಬಹುದೇ ಎಂದು ನಿರೀಕ್ಷಿಸುತ್ತ ಸಂದಿಗೊಂದಿಗಳನ್ನು ನುಗ್ಗಿಕೊಂಡು ಹೋಗುತ್ತಾ ಸಣ್ಣಸಣ್ಣ ಬಿಲಗಳಂತಹ ಕೋಣೆಗಳಿರುವ ಜಾಗಕ್ಕೆ ಕಾಲಿಟ್ಟೆ. ಇಂತಹ ಸಾಲುಸಾಲು ಮನೆಗಳಿರುವುದನ್ನು ಬಸ್ತಿ ಎನ್ನುತ್ತಾರೆ. ಅಲ್ಲಿ ಒಂದು ಕಡೆ ನೀರಿನ ನಲ್ಲಿ. ಅದರ ಪಕ್ಕದ ಮಣ್ಣುದಿಬ್ಬದ ಮೇಲೆ ಹಲವು ಮಂದಿ ಗಂಡಸರು, ಹೆಂಗಸರು, ಮಕ್ಕಳು ನಿಂತೋ ಕುಳಿತೋ ಇದ್ದರು.

ನಾನು ಆ ಜಾಗಕ್ಕೆ ಕಾಲಿಟ್ಟಕೂಡಲೇ ನೂರಾರು ಮಂದಿ ನನ್ನನ್ನು ಪ್ರಶ್ನಾರ್ಥಕವಾಗಿ ಸುತ್ತುವರೆದರು. ಅವರು ನನ್ನನ್ನು ನಾನು ಅವರನ್ನು ಕೂತಹಲದಿಂದ ನೋಡುತ್ತಾ ನಿಂತೆವು. ಇವರು ಅದೇ ಜನ. ಜಗತ್ತಿನ ಯಾವುದೇ ಊರಿನ ಗಿರಣಿ ಪ್ರದೇಶಗಳಲ್ಲಿ ಕಾಣುವಂತಹ ಬಡಕಲು ದೇಹ, ಉಬ್ಬಿದ ನರಗಳು, ಕುಶಲಕೈಗಳು, ಕಾತುರ ನಿರೀಕ್ಷೆ ತುಂಬಿದ ಕಣ್ಣಿನ ಚುರುಕು ಜನ. ಇವರೆಲ್ಲ ಇವರಿಗೇ ವಿಶಿಷ್ಟವಾದ ಸೀರೆ, ಧೋತಿಗಳಲ್ಲಿದ್ದರು ಮತ್ತು ಸಾಮಾನ್ಯವಾಗಿ ಗಿರಣಿ ಕೆಲಸದಲ್ಲಿ ಬಿಳುಚಿಕೊಂಡ ಬಣ್ಣವನ್ನು ಮರೆಮಾಚುವ ಕಪ್ಪುಚರ್ಮದವರು ಎಂಬುದೊಂದು ವ್ಯತ್ಯಾಸ ಬಿಟ್ಟರೆ ನಾನು ಫೋಟೋ ತೆಗೆಯಲು ಭೇಟಿ ನೀಡಿದ ಯೂರೋಪಿನ ನೂರಾರು ಕಾರ್ಖಾನೆ ಪ್ರದೇಶಗಳಲ್ಲಿನ ಯಾವುದೋ ಒಂದು ಪ್ರದೇಶದಲ್ಲಿದ್ದೇನೆ ಅಂತಲೇ ಅನ್ನಿಸುತ್ತಿತ್ತು. ನನ್ನ ಬಗ್ಗೆ ಇವರಿಗಿದ್ದ ಅಚ್ಚರಿ ತಣ್ಣಗಾಗುತ್ತಿದ್ದಂತೆ ಅವರಿಗೂ ನನಗೂ ಇದ್ದ ಅಡೆತಡೆ ಮಾಯವಾಯಿತು. ನಮ್ಮನ್ನು ನೋಡುವುದಕ್ಕೆ ಯಾರು ಬರುತ್ತಾರೆ ಎಂದು ಒಬ್ಬ

ವ್ಯಕ್ತಿ ಹೇಳಿದ. ಹಾಗೆ ಹೇಳಿದ ವ್ಯಕ್ತಿಯ ಕೆಲಸ ಸೀರೆಯ ಅಂಚುಗಳಿಗಾಗಿ ಮಗ್ಗಗಳಲ್ಲಿ ಬಣ್ಣದ ದಾರಗಳನ್ನು ಅಣಿಗೊಳಿಸುವುದು. ಸಣ್ಣ ನೀಲಿ ಅಥವಾ ಕೆಂಪು ನೇಯ್ಗೆಯ ಅಂಚಿನ ಬಿಳಿಯ ಸೀರೆಗಳು ಇಲ್ಲಿ ಹತ್ತಿರವೇ ಇದ್ದ ಒಂದಾನೊಂದು ಬಿರ್ಲಾ ಗಿರಣಿಯ ಮುಖ್ಯ ಉತ್ಪಾದನೆ. ಮಾತಾಡಿದ ವ್ಯಕ್ತಿಯ ಹೆಸರು ರಾಮದಾಸ್. ಅವನು ಚಿಕ್ಕ ಹುಡುಗನಾಗಿದ್ದಾಗ ಯಾವುದೋ ಇಂಗ್ಲಿಷ್ ಕುಟುಂಬದಲ್ಲಿ ಸೇವಕನಾಗಿದ್ದನಂತೆ. ಹೀಗಾಗಿ ಅವನಿಗೆ ಅಲ್ಪಸ್ವಲ್ಪ ಇಂಗ್ಲಿಷ್ ಅರ್ಥವಾಗುತ್ತಿತ್ತು. ರಾಮದಾಸ್‌ನ ಭಾಷಾಂತರದ ನೆರವಿನಿಂದ ನನ್ನ ಹಾಗೂ ಗಿರಣಿ ಕಾರ್ಮಿಕರ ಸಂಭಾಷಣೆ ಮುಂದಕ್ಕೆ ಬೆಳೆಯಿತು.

ನಾನು ಇಲ್ಲಿಗೆ ಯಾಕೆ ಬಂದೆ ಎನ್ನುವುದನ್ನು ಅವರಿಗೆ ಹೇಳಬೇಕಿರಲಿಲ್ಲ. ಯಾಕೆಂದರೆ ಗಾಂಧಿಯವರ ಇತ್ತೀಚಿನ ಉಪವಾಸದ ವಿಷಯ ಎಲ್ಲರ ಬಾಯಲ್ಲಿಯೂ ಇದ್ದ ಮಾತು. ಗಾಂಧಿಯ ಹೆಸರು ಪ್ರಸ್ತಾಪಿತವಾಗುತ್ತಿದ್ದಂತೆ ರಾಮದಾಸ್ ಭಾಷಾಂತರಿಸುವುದಕ್ಕೂ ಮೊದಲೇ ಎಲ್ಲರೂ ಅವರ ಅಭಿಪ್ರಾಯ ಹೇಳತೊಡಗಿದರು. "ಗಾಂಧೀಜೀ ಈ ದೇಶಕ್ಕೆ ಒಳ್ಳೆಯವರಿರ ಬಹುದು. ಆದರೆ ನಮಗಲ್ಲ. ಯಾಕೆಂದರೆ ಅವರು ಬಿರ್ಲಾ ಮನೆಯಲ್ಲಿದ್ದಾರೆ." ಇನ್ನೊಬ್ಬ ಹೇಳಿದ "ಗಾಂಧೀಜೀ ಬಹುದೊಡ್ಡ ಮನುಷ್ಯನಿರಬಹುದು. ಆದರೆ ನಮಗಾಗಿ ಏನೂ ಮಾಡಲಿಲ್ಲ. ಅವರು ಬಿರ್ಲಾ ಋಣದಲ್ಲಿದ್ದಾರೆ. ಅವನ ಅನ್ನ ತಿನ್ನುತ್ತಿದ್ದಾರೆ. ಹೀಗಿದ್ದಾಗ ನಮಗೆ ಏನು ಸಹಾಯ ಮಾಡುತ್ತಾರೆ? ಇಲ್ಲಿ ಗುಂಡು ಹಾರಿಸಿದಾಗಲೂ ಅವರು ಸುಮ್ಮನಿದ್ದರು" (ನಾನು ಈ ಬಗ್ಗೆ ವಿವರವಾಗಿ ವಿಚಾರಿಸೋಣ ಎಂದುಕೊಂಡೆ. ಅಷ್ಟರಲ್ಲಿ ಮಾತು ಮುಂದಕ್ಕೆ ಹೋಯಿತು). "ಗಾಂಧೀಜಿ ಬಿರ್ಲಾಮನೆಯಲ್ಲಿದ್ದಾರೆ. ಆತನಿಗೆ ಅವರಿಂದ ಏನೋ ಅನುಕೂಲ ಆಗುತ್ತಿರಬೇಕು." "ಕಾರ್ಮಿಕರಿಗಂತೂ ಬಿರ್ಲಾ ಒಳ್ಳೆಯವನಲ್ಲ. ಆದರೆ ಹೊರಜಗತ್ತಿಗೆ ಬಹುದೊಡ್ಡ ಮನುಷ್ಯನಂತೆ ತೋರಿಸಿಕೊಳ್ಳುತ್ತಾನೆ. ತನ್ನ ದೊಡ್ಡಸ್ತಿಕೆ ತೋರಿಸುವುದಕ್ಕಾಗಿ ದೇವಸ್ಥಾನಗಳನ್ನು ಕಟ್ಟಿಸುತ್ತಾನೆ."

ಬಿರ್ಲಾ ನಿರ್ಮಾಣದ ದೇವಸ್ಥಾನಗಳ್ನು ನೋಡಿದವರು ಅವುಗಳ ಸೌಂದರ್ಯವನ್ನು ಮರೆಯುವಂತಿಲ್ಲ. ನವದೆಹಲಿಯಲ್ಲಿ ಬಿರ್ಲಾಗಳು ದೇವಸ್ಥಾನ ಕಟ್ಟಿಸಿದ್ದನ್ನು ಬಹುದೊಡ್ಡ ಧಾರ್ಮಿಕ ಕಾರ್ಯ ಎಂದು ಜನ ಭಾವಿಸಿದ್ದರು. ಈ ಜವಳಿ ಜಗತ್ತಿನ ಮಹಾರಾಜನ ಹಿರಿಯ ಸೋದರ ತುಂಬಾ ಆಸ್ತಿಕನಾದ ಹಿಂದೂವಾಗಿದ್ದು ಆತ ಇಷ್ಟು ಭವ್ಯವಲ್ಲದಿದ್ದರೂ ಇನ್ನು ಅನೇಕ ಕಡೆ ಇಂಥದೇ ದೇವಾಲಯಗಳನ್ನು ನಿರ್ಮಿಸಿದ್ದರು.

"ಆ ದೇವಸ್ಥಾನವನ್ನು ಕಟ್ಟಿದ್ದು ನಮ್ಮ ಬೆವರಿನಿಂದ" ಎಂದು ಆ ಜನ ಹೇಳಿದರು. ಮಹಾಯುದ್ಧದ ವರ್ಷಗಳಲ್ಲಿ ಅಧಿಕೃತ ಸರ್ಕಾರೀ ಲೆಕ್ಕ ಪರಿಶೋಧನೆಗಳ ಪ್ರಕಾರ ಜವಳಿ ಕೈಗಾರಿಕೆಗೆ ಶೇಕಡ ೫೦೦ ರಿಂದ ೭೦೦ರಷ್ಟು ಲಾಭ ಗಳಿಕೆಯಾಗಿತ್ತು. "ನಮಗೇಕೆ ಬೇಕು ಈ ದೇವಸ್ಥಾನಗಳು. ಬೆವರು ಸುರಿಸಿ ಕೆಲಸ ಮಾಡುವ ಜನಕ್ಕೆ ದೇವಸ್ಥಾನ ಕಟ್ಟಿಕೊಂಡು ಏನಾಗಬೇಕು?" "ಅದೇ ಮರ, ಕಾಂಕ್ರೀಟ್ ಹಾಕಿ ನಮಗೆ ಸ್ವಲ್ಪವಾದರೂ ಚೆನ್ನಾಗಿರುವ ಮನೆಗಳನ್ನು ಕಟ್ಟಿಕೊಡಬಹುದಲ್ಲ" "ಇನ್ನೂರೈವತ್ತು ಜನಕ್ಕೆ ಒಂದೇ ಕಕ್ಕಸು" ಎಂದು ಅವರು

ಬಾಗಿಲೇ ಇಲ್ಲದ ಒಂದು ಹಳೆಯ ಕೋಣೆಯತ್ತ ಬೆರಳು ಮಾಡಿ ತೋರಿಸಿದರು. ಅಲ್ಲಿ ಗೋಪ್ಯತೆಗೆ ಅವಕಾಶವೇ ಇರಲಿಲ್ಲ. ಹೆಂಗಸರೂ ಅದನ್ನೇ ಬಳಸಬೇಕಿತ್ತು. ಧರ್ಮಕ್ಕೆ ಕೊಟ್ಟಷ್ಟೇ ಪ್ರಾಮುಖ್ಯತೆಯನ್ನು ಮಾನಕ್ಕೆ ಕೊಡುವ ಹಿಂದೂ ಹೆಂಗಸರ ಸ್ಥಿತಿ ಹೇಗಿರಬಹುದು? ಅಲ್ಲಿ ಒಂದೇ ಒಂದು ನಲ್ಲಿ ಇತ್ತು. ಅರವತ್ತು ಮನೆಗಳಿಗೆ ಅದೊಂದೇ ನಲ್ಲಿ. ಸ್ನಾನಕ್ಕೆ ಎಲ್ಲಿಯೂ ಪ್ರತ್ಯೇಕ ಜಾಗವಿರಲಿಲ್ಲ. ದಿನವೂ ಸ್ನಾನ ಎಂಬುದೂ ಕೂಡ ಹಿಂದೂಗಳಿಗೆ ಒಂದು ಧಾರ್ಮಿಕ ವಿಧಿ. ಶುಚಿತ್ವಕ್ಕೂ ದೈವತ್ವಕ್ಕೂ ಇಷ್ಟೊಂದು ನಿಕಟ ಸಂಬಂಧವಿರುವಾಗ ಕೇವಲ ಒಂದು ನಲ್ಲಿಯಲ್ಲಿ ಇಷ್ಟು ಜನರ ಅಗತ್ಯ ಪೂರೈಸುವುದು ಹೇಗೆ? ಆದ್ದರಿಂದಲೇ ಅವರಿಗೆ ದೇವಸ್ಥಾನದಲ್ಲಿ ಕೊಳವಿರುವುದಕ್ಕಿಂತ ತಮಗೆ ಉತ್ತಮ ನಲ್ಲಿ, ಸರಿಯಾದ ನೀರಿನ ವ್ಯವಸ್ಥೆ ಇರಬೇಕಿತ್ತು ಅನ್ನಿಸಿದ್ದು ಸಹಜವೇ ಆಗಿತ್ತು. ಬಿರ್ಲಾ ದೇವಾಲಯಗಳಲ್ಲಿ ಎಲ್ಲರಿಗೂ ಪ್ರವೇಶ ನೀಡಿರುವ ಬಗ್ಗೆ ಅವರ ಪ್ರಕಟಣೆಯ ಪತ್ರಿಕೆಗಳು ಬಹಳ ಪ್ರಚಾರ ನೀಡುತ್ತಿದ್ದವು. ಸವರ್ಣೀಯ ಹಿಂದೂಗಳ ಜೊತೆಗೆ ಅಸ್ಪೃಶ್ಯರಿಗೂ ದೇವಸ್ಥಾನದ ಪ್ರವೇಶ ನೀಡುವುದು ಒಳ್ಳೆಯದೇ ಆಯಿತು ಎಂದು ರಾಮದಾಸ್ ಹೇಳಿದ. ಅವನು ಸವರ್ಣೀಯನಾಗಿದ್ದರೂ ಈ ಮಾತು ಹೇಳಿದ್ದ. ಆದರೆ ಅನೇಕ ಸವರ್ಣೀಯರು, ಅಸ್ಪೃಶ್ಯರು ಪ್ರವೇಶಿಸಿದಂತಹ ದೇವಾಲಯಗಳನ್ನು ಬಹಿಷ್ಕರಿಸಿದ್ದರು. ಸರಿಯಾದ ತಿಳುವಳಿಕೆಯ ಜನ ಈ ಭೇದಭಾವದ ಆಚರಣೆಯನ್ನು ವಿರೋಧಿಸಿದ್ದರು. ದೇವಸ್ಥಾನಕ್ಕೆ ಹೋದಮೇಲೆ ಎಲ್ಲರೂ ಭಕ್ತರೇ ತಾನೆ! ಇದು ರಾಮದಾಸನ ವಿಚಾರಧಾರೆ. ಅದೇ ರೀತಿ ಕಾರ್ಖಾನೆಯಲ್ಲಿ ಕೆಲಸ ಮಾಡುವವರೆಲ್ಲ ಕಾರ್ಮಿಕರೇ ತಾನೆ? ಅಸ್ಪೃಶ್ಯರನ್ನು ಕುರಿತು ಬಿರ್ಲಾ ಜನ ಅಷ್ಟೊಂದು ಕೊಚ್ಚಿಕೊಳ್ಳುತ್ತಿದ್ದರು. ಗಾಂಧೀಜಿ ತಮ್ಮ ಪತ್ರಿಕೆಗೆ 'ಹರಿಜನ್' ಎಂದು ಹೆಸರಿಟ್ಟಿದ್ದರು. ಗಾಂಧೀಜಿಯ ಹೆಸರು ಹೇಳುವ ಜನ ಇಲ್ಲಿಗೆ ಬಂದು ಬಿರ್ಲಾ ಅವರದೇ ಸ್ವಂತ ಗಿರಣಿಗಳಲ್ಲಿ ಹರಿಜನರು ಯಾವ ಸ್ಥಿತಿಯಲ್ಲಿ ಬದುಕುತ್ತಿದ್ದಾರೆ ಎಂಬುದನ್ನು ನೋಡಬಾರದೆ? ನಾನು ಈಗ ನೋಡಿದ ಬಸ್ತಿಯಲ್ಲಿನ ನೆಲಕ್ಕೆ ಗಾರೆ ಇತ್ತು. ನೀರು ಹರಿದು ಹೋಗಲು ತೆರೆದ ಚರಂಡಿಗಳಾದರೂ ಇದ್ದವು. ಆದರೆ ಅಸ್ಪೃಶ್ಯರ ಮನೆಗಳಲ್ಲಿ ಮಣ್ಣಿನ ನೆಲ. ಕೊಳಕು ನೀರು ಹರಿದು ಮನೆಯ ಮುಂದೆ ನಿಂತಿರುತ್ತಿತ್ತು. ಅವರು ವಾಸಿಸುತ್ತಿದ್ದ 'ಚಾಲ್'ಗಳಿಗೆ ಹೋಲಿಸಿದರೆ ಬಸ್ತಿಗಳೇ ಅರಮನೆಗಳು. ಕೆಲವು ಬಸ್ತಿಗಳು ಮಾತ್ರ ಉಳಿದ ಬಸ್ತಿಗಳಿಗಿಂತ ಉತ್ತಮ ಸ್ಥಿತಿಯಲ್ಲಿದ್ದವು. ಆದರೆ ಅವು ಕಾರ್ಮಿಕರಿಗಾಗಿ ಇರಲಿಲ್ಲ. ಕಾರ್ಮಿಕರನ್ನು ಕೆಲಸಕ್ಕೆ ತರುವ, ಬೇಡದಿದ್ದಾಗ ಓಡಿಸುವ ಮಧ್ಯವರ್ತಿಗಳಿಗೆ ಅವು ಮೀಸಲು. ಕಾರ್ಖಾನೆ ನಡೆಸುತ್ತಿದ್ದ ಸ್ಕೂಲುಗಳು ಹಾಗೂ ಹಾಲಿನ ವಿತರಣೆ ಮೊದಲಾದ ಸೌಲಭ್ಯಗಳೆಲ್ಲ ಸಿಗುತ್ತಿದ್ದುದು ಕಾರ್ಖಾನೆಯ ಇಂತಹ ನಿಷ್ಠಾವಂತ ಸೇವಕರಿಗೆ ಹಾಗೂ ಅವರ ಮಕ್ಕಳಿಗೆ ಮಾತ್ರ.

ಇಲ್ಲಿದ್ದ ಕಾರ್ಮಿಕರ ಪಾಲಿಗೆ, ಕೆಲಸಕ್ಕೆ ಸೇರಿಸಿಕೊಳ್ಳುವ ಹಾಗೂ ಕೆಲಸದಿಂದ ಓಡಿಸುವ ವ್ಯವಸ್ಥೆ ಒಂದು ದುಃಸ್ವಪ್ನ. ಯಾವಾಗ ತೆಗೆದುಹಾಕುತ್ತಾರೋ ಎಂಬ ಭಯದ ಕತ್ತಿ ಸದಾ ತೂಗುತ್ತಲೇ ಇರುತ್ತಿತ್ತು. ಒಂದೇ ಗಿರಣಿಯಲ್ಲಿ ೧೫ ರಿಂದ ೨೫ ವರ್ಷಗಳಷ್ಟು ಕಾಲ ಕೆಲಸ ಮಾಡಿದವನೂ ಕೂಡ ಯಾವುದೇ ಕ್ಷಣದಲ್ಲಿ ಕೆಲಸ ಕಳೆದುಕೊಳ್ಳಬಹುದಿತ್ತು. ಬಿಟ್ಟು ಹೋಗುವಾಗ ಅವರಿಗೆ ಕೊಡಬೇಕಾದ ಹಣ ದಲ್ಲಾಳಿಗಳ ಪಾಲಾಗುತ್ತಿತ್ತು. ಗಿರಣಿಯಲ್ಲಿ ಹಿಂದಿನವಾರ

ನಡೆದ ಕಾರ್ಮಿಕರ ಹಾಗೂ ಮ್ಯಾನೇಜರುಗಳ ದೊಡ್ಡ ಸಭೆಯಲ್ಲಿ ಈ ಎಲ್ಲ ಅಂಶಗಳ ಬಗ್ಗೆ ಚರ್ಚಿಸಬೇಕು ಎಂದು ಅವರು ಅಂದುಕೊಂಡಿದ್ದರು. ಆದರೆ ಯಾವಾಗಲೂ ಆಗುವಂತೆ 'ಕಂಪನಿಯ ಜನ' ಮಾತ್ರ ಮೈಕಿನ ಬಳಿ ಕೂತಿದ್ದರು. ಯಾರಾದರೂ ಮಾತಾಡಲು ಎದ್ದುನಿಂತರೆ ಅವನನ್ನು ಕಮ್ಯುನಿಸ್ಟ್ ಎಂದು ಕರೆದು ಕೆಲಸದಿಂದ ಓಡಿಸಲಾಗುತ್ತಿತ್ತು.

ಈಗ ಹೊಸದೊಂದು ಬೆಳವಣಿಗೆ ನಡೆದಿತ್ತು. ಕಾಮಿಕ ಸಂಘಟನೆಗಳನ್ನು ಇನ್ನೊಂದು ರೀತಿಯಲ್ಲಿ ಏರ್ಪಡಿಸುವ ಕೆಲಸ ಬಹುದೊಡ್ಡ ಪ್ರಮಾಣದಲ್ಲಿ ನಡೆದಿತ್ತು. ಈ ಬಗ್ಗೆ ಆಸಕ್ತಿ ವಹಿಸಿದ್ದವರು ಬೇರೆ ಯಾರೂ ಅಲ್ಲ, ಸ್ವತಃ ಬಿರ್ಲಾ ಮತ್ತು ಪಟೇಲ್. ಈ ಹೊಸ ಸಂಘಟನೆಯ ಹೆಸರು ಇಂಟಕ್ (INTUC). ಇಂಟಕ್ ಅಸ್ತಿತ್ವಕ್ಕೆ ಬಂದು ಹಳೆಯ ಭಾರತೀಯ ಕಾರ್ಮಿಕ ಒಕ್ಕೂಟದ ಸ್ಥಾನವನ್ನು ಆಕ್ರಮಿಸತೊಡಗಿತ್ತು. ಇದಕ್ಕೆ ಗೃಹಸಚಿವರಾದ ಪಟೇಲರ ಬಲವಾದ ಒತ್ತಾಸೆ ಇದ್ದುದರಿಂದ, ಸರ್ಕಾರದ ಪ್ರಾಯೋಜಕತ್ವದಲ್ಲಿದ್ದ ಅನೇಕ ಕಂಪನಿಗಳು ಅದರಲ್ಲಿ ಸೇರಿಕೊಳ್ಳತೊಡಗಿದ್ದವು. ಇದರಿಂದ ಅದು ವಿಶಾಲ ವ್ಯಾಪ್ತಿಯನ್ನು ಪಡೆದುಕೊಳ್ಳತೊಡಗಿತ್ತು. ಮುಷ್ಕರಗಳನ್ನು ಮಾಡದಿರುವುದೇ ಇಂಟಕ್‌ನ ನಿರ್ಣಯ ಎಂಬುದನ್ನು ಪಟೇಲರು ತಮ್ಮ ಭಾಷಣಗಳ ಮೂಲಕ ಪ್ರಚಾರ ಮಾಡುತ್ತಿದ್ದರು. ಈ ನಿರ್ಣಯವನ್ನು ಮೂರು ವರ್ಷಗಳ ಅವಧಿಗೆ ವಿಸ್ತರಿಸುವ ಯೋಜನೆಯೂ ಇತ್ತು. ನನ್ನ ಸುತ್ತ ಕುಳಿತಿದ್ದ ಕಾರ್ಮಿಕರಿಗೆ ಇಂಟಕ್‌ನಲ್ಲಿ ವಿಶ್ವಾಸವಿರಲಿಲ್ಲ. ಮತ್ತು ಈಗ ನಡೆದಿರುವ ಬೆಳವಣಿಗೆಯ ಬಗ್ಗೆ ಅವರು ತೀವ್ರ ತಳಮಳ ಗೊಂಡಿದ್ದರು. ಎಲ್ಲರೂ ಇನ್ನಷ್ಟು ಒತ್ತೊತ್ತಾಗಿ ಸರಿದುಕೂರುತ್ತಾ 'ನಾವೆಲ್ಲರೂ ಕುರಿಗಳಂತೆ ಅನುಸರಿಸಬೇಕು ಎಂಬುದು ಇಂಟಕ್‌ನವರ ನಿರೀಕ್ಷೆ' ಎಂದು ಹೇಳಿದರು.

ಅವರ ಮಾತು ಇಲ್ಲಿಂದ ಸಂಬಳಭತ್ಯೆಗಳ ಕಡೆಗೆ ಹರಿಯಿತು. ತುಟ್ಟಿಭತ್ಯೆ ಜೀವನವೆಚ್ಚ, ಇತ್ಯಾದಿಯಾಗಿ ಅವರು ಪಡೆಯುವುದಕ್ಕೂ ಭಯಾನಕವಾಗಿ ಏರುತ್ತಿದ್ದ ಬೆಲೆಗಳಿಗೂ ತಾಳೆ ಇರಲಿಲ್ಲ. ಯುದ್ಧದ ವರ್ಷಗಳಲ್ಲಿ ಜವಳಿ ಕೈಗಾರಿಕೆ ಉತ್ತುಂಗ ಸ್ಥಿತಿಯಲ್ಲಿದ್ದಾಗ ಅವರಿಗೆ ೫೦%ನಷ್ಟು ತುಟ್ಟಿಭತ್ಯೆಯ ಹೆಚ್ಚಳ ಸಿಕ್ಕಿತ್ತು. ಆದರೆ ಅದೇ ಅವಧಿಯಲ್ಲಿ ಬೆಲೆಗಳು ೩೦% ಏರಿದ್ದವು. ಮತ್ತು ಈ ಮೂರುಪಟ್ಟಿನ ಏರಿಕೆಯೂ ಸಹ ಸರ್ಕಾರದ ಸೂಚಿಯಲ್ಲಿ ಪ್ರಕಟಿಸಲಾಗಿದ್ದ 'ನಿಯಂತ್ರಣ' ಬೆಲೆಗಳಿಗೆ ಮಾತ್ರ ಅನ್ವಯಿಸುತ್ತಿತ್ತು. ಇದರಲ್ಲಿ ಕಾಳಸಂತೆಯ ಬೆಲೆಗಳು ಸೇರದಿದ್ದುದು ಸಹಜ. ಈಗ ಬೆಲೆಗಳ ನಿಯಂತ್ರಣ ತೆಗೆದುಹಾಕುವ ಎಲ್ಲ ಸಾಧ್ಯತೆಯೂ ಇತ್ತು. ಹಿಟ್ಟು ಮತ್ತು ಸಕ್ಕರೆ ಮೊದಲಾದವುಗಳ ನಿಯಂತ್ರಣ ತೆಗೆದುಹಾಕುವ ಬಗ್ಗೆ ಪತ್ರಿಕೆಗಳು ತೀವ್ರವಾಗಿ ಪ್ರತಿಭಟಿಸಿದವು. ಮುಖ್ಯವಾಗಿ ಬಿರ್ಲಾ ಮಾಲಿಕತ್ವದ ವೃತ್ತಪತ್ರಿಕೆಗಳು ಹಾಗೂ ಗಾಂಧೀಜಿಯವರೇ ಪ್ರಕಟಿಸುತ್ತಿದ್ದ ಹರಿಜನ ಪತ್ರಿಕೆ ಕೂಡ ಪ್ರತಿಭಟಿಸಿದವು ಎಂದು ಒಬ್ಬ ಕಾರ್ಮಿಕ ಒತ್ತಿ ಹೇಳಿದ. ನಿಯಂತ್ರಣ ಬೆಲೆಗಳೂ ಕೂಡ ಉಸಿರುಕಟ್ಟಿಸುವಂತಿದ್ದವು. ಸಾಮಾನ್ಯ ಜನರಿಗೆ ಅಗತ್ಯವಾದ ವಸ್ತುಗಳು, ಸ್ವತಃ ಗಿರಣಿ ಕಾರ್ಮಿಕರೇ ನೂಲು ತೆಗೆದು ನೇಯ್ದ ಹತ್ತಿ ಬಟ್ಟೆಗಳೂ ಸಹ ಕಾಳಸಂತೆಯಲ್ಲಿ ಮಾಯವಾಗಿ ಹೊಸ ಬೆಲೆಗಳೊಂದಿಗೆ ಕಾಣಿಸಿಕೊಳ್ಳುತ್ತಿದ್ದವು. ಆ ಬೆಲೆಗೆ ಕಂಡುಕೊಳ್ಳುವ ಸಾಮರ್ಥ್ಯ ಶ್ರೀಮಂತರಿಗೆ ಮಾತ್ರ ಸಾಧ್ಯವಿತ್ತು. 'ನಾವು ಅಷ್ಟೆಲ್ಲ

ನೇಯ್ದ ಸಾವಿರಾರು ಗಜ ಬಟ್ಟೆ ಎಲ್ಲಿಗೆ ಹೋಗುತ್ತೆ? ನಮ್ಮ ಇಡೀ ಜೀವಮಾನದಲ್ಲಿ ಒಂದು ಶರ್ಟೇ ಗತಿ" ಎಂದು ಒಬ್ಬ ಹೇಳಿದ.

ನಾವು ಎಷ್ಟು ಹೊತ್ತು ಮಾತಾಡಿದ್ದೆವೆಂದರೆ ಸೂರ್ಯ ಮುಳುಗಿದ್ದೇ ಗೊತ್ತಾಗಿರಲಿಲ್ಲ. ನನಗೆ ಇದ್ದಕ್ಕಿದ್ದಂತೆ ಛಳಿಯಾಗತೊಡಗಿದಾಗ ಅದು ನನ್ನ ಅರಿವಿಗೆ ಬಂತು. ಭಾರತದಲ್ಲಿ ಬಿರುಬಿಸಿಲಿನ ಹಗಲು ಕಳೆದು ಸೂರ್ಯ ಮುಳುಗುತ್ತಿದ್ದಂತೆ ಅದೆಲ್ಲಿಂದ ಇಷ್ಟು ಛಳಿ ನುಗ್ಗುತ್ತದೋ! ಈ ಹವಮಾನದ ವ್ಯತ್ಯಾಸಕ್ಕೆ ನನಗೆ ಇದುವರೆಗೆ ಹೊಂದಿಕೊಳ್ಳಲಾಗಿರಲಿಲ್ಲ. ಛಳಿಯನ್ನು ತಾಳಲಾರದೆ ನಾನು ಹೊರಡೋಣ ಎಂದು ಹೊರಟಾಗ ನೀವು ಇನ್ನೊಂದು ಜಾಗವನ್ನು ನೋಡಬೇಕು ಎಂದು ಅವರು ಕೇಳಿಕೊಂಡರು. ಬಸ್ತಿಗಳಲ್ಲಿ ಅವಕಾಶಕ್ಕಿಂತ ಹೆಚ್ಚು ಜನ ಇದ್ದರೂ ಅವರವರು ಅವರ ಕುಟುಂಬಗಳೊಂದಿಗೆ ವಾಸಿಸುವಷ್ಟು ಸ್ಥಳಾವಕಾಶ ವಾದರೂ ಇರುತ್ತಿತ್ತು. ಆದರೆ ಇದಕ್ಕಿಂತ ಹೆಚ್ಚು ಟಿಪಿಕಲ್ ಆದ ಮನೆಗಳನ್ನು ನಾನಿನ್ನೂ ನೋಡಿರಲಿಲ್ಲ. ಅವರು ಕರೆದುಕೊಂಡು ಹೋದ ಜಾಗ ವಿಚಿತ್ರವಾಗಿತ್ತು. ಆ ಗೂಡುಗಳು ಇದಕ್ಕಿಂತ ಸರಳವಾಗಿರಲು ಸಾಧ್ಯವೇ ಇಲ್ಲ ಎನ್ನುವಷ್ಟು ಸರಳವಾಗಿದ್ದವು. ಒಂದು ವಿಶಾಲವಾದ ಕೋಣೆಯೊಳಗೆ ಸಮಾನಾಂತರವಾಗಿ ಕಟ್ಟಿದ ಉದ್ದನೆಯ ಸಾಲುಸಾಲು ಗೂಡುಗಳು, ಒಂದೇ ಗೋಡೆಯ ಎರಡು ಬದಿಗಳಲ್ಲಿ ಒಂದೇ ರೀತಿಯ ಸಣ್ಣಸಣ್ಣ ಬಿಲದಂತಹ ಗೂಡುಗಳು ಇಂತಹ ಒಂದು ಕೋಣೆಯೊಳಗೆ ರಾಮದಾಸ್ ನನ್ನನ್ನು ಕರೆದುಕೊಂಡು ಹೋದ. ಅದರ ಅಳತೆ ಸುಮಾರು 9x12 ಅಡಿ ಇರಬಹುದು. ಆ ಕೋಣೆಗೆ ಒಂದೇ ಸಣ್ಣ ಕಿಟಕಿ. ಸ್ವಲ್ಪ ಹೊತ್ತೇರಿದ ನಂತರ ಅದರ ಮೂಲಕ ಸ್ವಲ್ಪ ಬೆಳಕು ಇಣುಕುತ್ತಿರಬಹುದು. ನೆಲದ ಮೇಲೆ ಒತ್ತೊತ್ತಾಗಿ ಸುರುಳಿ ಸುತ್ತಿಕೊಂಡಂತೆ ಬಿದ್ದಿದ್ದ ಆಕೃತಿಗಳೆಲ್ಲ ಮಲಗಿದ್ದ ಮನುಷ್ಯರವು ಎಂದು ತಕ್ಷಣ ಗುರುತಿಸುವುದು ನನಗೆ ಸಾಧ್ಯವಾಗಲಿಲ್ಲ. ಒಂದೊಂದು ಕೋಣೆಯಲ್ಲಿ ಇಪ್ಪತ್ತೈದು ಜನ ಇರುತ್ತಾರೆ ಎಂದು ರಾಮದಾಸ್ ಹೇಳಿದ. ಆತನ ದನಿ ಕೇಳಿ ಮಲಗಿದ್ದ ಕೆಲವು ಆಕೃತಿಗಳು ಮಿಸುಕಾಡಿದವು. ಕೆಲವು ಎದ್ದು ಕುಳಿತವು. ಇವರೆಲ್ಲರೂ ನೇಕಾರರೇ. ಅವರಿಗೆ ತಿಂಗಳಿಗೆ ಸರಾಸರಿ ೩೫ ರೂಪಾಯಿಯ ಸಂಬಳ. ಜೊತೆಗೆ ತುಟ್ಟಿಭತ್ಯೆ ಸೇರಿದರೆ ೪೪ ರೂಪಾಯಿ. ಅವರು ಮಲಗುತ್ತಿದ್ದ ಈ ನೆಲದ ತುಣುಕಿಗೆ ಬಾಡಿಗೆ ಕೊಡಬೇಕಿತ್ತು. ವಾರಕ್ಕೆ ತಲಾ ಎರಡು ರೂಪಾಯಿ ೧೨ ಆಣೆ. ಮೊದಲ ನೋಟಕ್ಕೆ ಈ ಬಾಡಿಗೆ ನ್ಯಾಯಸಮ್ಮತವಾಗಿದೆ ಅನ್ನಿಸಿತು. ಇದರಿಂದ ಮಾಲೀಕನಿಗೆ ಎಷ್ಟು ಸಿಗುತ್ತದೆ ಎಂದು ಲೆಕ್ಕ ಹಾಕಿದೆ. ಇಲ್ಲಿ ನೀರು, ಲೈಟು, ಒಲೆ ಮೊದಲಾದ ಯಾವ ಅನುಕೂಲವೂ ಇರಲಿಲ್ಲ. ಪ್ರತ್ಯೇಕ ಕಕ್ಕಸೂ ಇರಲಿಲ್ಲ. ಇಷ್ಟು ಸ್ಥಳಾವಕಾಶಕ್ಕೆ ಕಂಪನಿಯು ತಿಂಗಳಿಗೆ ೨೫ ಪೌಂಡುಗಳಿಗೆ ಸಮನಾದ ಬಾಡಿಗೆಯನ್ನು ವಸೂಲು ಮಾಡುತ್ತಿತ್ತು. ಯಾರೋ ಒಬ್ಬರು ಒಂದೇ ಒಂದು ಕ್ಯಾಂಡಲ್ ಹಚ್ಚಿ ಮೇಲಿಟ್ಟರು. ಮಲಗಿದ್ದವರೆಲ್ಲ ಪೂರ್ತಿಯಾಗಿ ಎದ್ದು ತಮ್ಮ ಅನಿಸಿಕೆಗಳನ್ನು ಹೇಳತೊಡಗಿದರು. "ನೋಡಿ, ನಾವು ಒಟ್ಟಿಗೆ ಕೂರುವಷ್ಟು ಜಾಗವಿಲ್ಲ. ಮಲಗಲು ಹೇಗೆ ಜಾಗ ಆಗುತ್ತೆ ಮಿಲ್‌ನಲ್ಲಿ ಮೂರು ಶಿಫ್ಟ್ ಇರುವುದರಿಂದ ಇಷ್ಟಾದರೂ ಆಗುತ್ತದೆ. ಕೆಲವರು ಶಿಫ್ಟ್‌ನಲ್ಲಿದ್ದಾಗ ಉಳಿದವರು ಮಲಗುತ್ತಾರೆ. ನಮಗೆ ರಜೆ ಸಿಗುವುದೂ ಕಷ್ಟ ನಾವೆಲ್ಲ ಒಟ್ಟಿಗೆ ಸೇರುವುದಕ್ಕೂ ಅವಕಾಶವಿಲ್ಲ".

ನೀವು ರಜಾದಿನ ಏನು ಮಾಡುತ್ತೀರಿ ಎಂದು ಸುಮಾರು ೧೪ ವರ್ಷವಿರಬಹುದಾದ ಒಬ್ಬ ಹುಡುಗನನ್ನು ಕೇಳಿದೆ. ಜಮುನಾದಾಸ್ ಎಂಬ ಹೆಸರಿನ ಆ ಹುಡುಗ ನನ್ನ ಪ್ರಶ್ನೆಗೆ ಉತ್ತರಿಸಲು ತೀರ ನಾಚಿಕೊಂಡು ಬರಿಗಾಲಿನಿಂದ ನೆಲ ಕೆರೆಯುತ್ತ ನಿಂತ. ನಾನು ಬಿಡಲಿಲ್ಲ. ನನಗೆ ತಿಳಿದು ಬಂದ ಪ್ರಕಾರ ರಜಾದಿನಗಳಲ್ಲೂ ಈ ಹುಡುಗರು ಆಟ ಆಡುತ್ತಿರಲಿಲ್ಲ. ಭಾನುವಾರ ಮತ್ತು ಇತರ ಯಾವುದಾದರೂ ರಜಾದಿನಗಳಲ್ಲಿ ಅವರು ಬಟ್ಟೆ ಒಗೆದುಕೊಳ್ಳುತ್ತಿದ್ದರು. ಜಮುನಾದಾಸ್, ತಾನು ಒಂದೆರಡು ವರ್ಷ ಶಾಲೆಗೆ ಹೋಗಿದ್ದೆ ಎಂದು ಹೇಳುವಾಗ ಅವನ ಕಾಂತಿಹೀನ ಕಣ್ಣುಗಳಲ್ಲಿ ಲವಲವಿಕೆಯ ಬೆಳಕು ಚಿಮ್ಮಿತು. ಅವನು ಆಟ ಆಡುವುದನ್ನು ನಿಲ್ಲಿಸಿ ಎಷ್ಟು ದಿನಗಳಾಗಿದ್ದವೋ. ಇವನಿಗಿಂತ ಚಿಕ್ಕ ಹುಡುಗರೂ ಕೂಡ ಈ ಮಿಲ್ಲಿನಲ್ಲಿ ಎಂಟು ಗಂಟೆಗಳ ಕಾಲ ದುಡಿಯುತ್ತಾರೆ ಎಂದು ಕೆಲವರು ಹೇಳಿದರು. ಆಹಾರ ಪದಾರ್ಥಗಳೆಲ್ಲ ತುಟ್ಟಿ. ಹೊಟ್ಟೆ ತುಂಬುವಷ್ಟು ಆಹಾರವೂ ಅವರ ಪಾಲಿಗೆ ಸಾಧ್ಯವಿರಲಿಲ್ಲ. ಆಟ ಆಡಲು ಶಕ್ತಿ ಎಲ್ಲಿಂದ ಬರಬೇಕು. ಎಷ್ಟೋ ಮಂದಿ ತಮ್ಮ ಕುಟುಂಬಗಳನ್ನು ಹಳ್ಳಿಯಲ್ಲಿಯೇ ಬಿಟ್ಟುಬಂದಿದ್ದರು. ಆ ಕುಟುಂಬಗಳ ಪೋಷಣೆಗೂ ಇವರು ದುಡಿದಿದ್ದನ್ನು ಬಳಸಿಕೊಳ್ಳಬೇಕಿತ್ತು. ಇಂಥವರಿಗೆ ಹೊಟ್ಟೆತುಂಬ ಊಟಮಾಡುವುದಕ್ಕೂ ಅವರು ದುಡಿದದ್ದು ಸಾಧ್ಯವಾಗುತ್ತಿರಲಿಲ್ಲ. ಕುಟುಂಬಗಳನ್ನು ಇಲ್ಲೇ ತಂದಿಟ್ಟುಕೊಳ್ಳಲು ವಸತಿಯ ಸಮಸ್ಯೆ. ಎಲ್ಲರಂತೆ ಇವರಿಗೂ ತಮ್ಮ ಕಣ್ಣಮುಂದೆಯೇ ತಮ್ಮ ಮಕ್ಕಳು ಬೆಳೆಯಬೇಕು ಎಂಬ ಆಸೆ ಇತ್ತು. ನೀರಿಗೆ, ಸೀಮೆಎಣ್ಣೆಗೆ ಕ್ಯೂನಿಂತು ಕಾದು ತರುವುದಕ್ಕೆ ಮನೆಯ ಜನರಿಲ್ಲವಾದ ಕಾರಣ ಇವರಲ್ಲೆ ಕೆಲವರು ಆ ಕೆಲಸವನ್ನು ಹಂಚಿಕೊಂಡು ಮಾಡುತ್ತಿದ್ದರು. ಮತ್ತೆ ಇವರಲ್ಲಿಯೇ ಒಬ್ಬ ಅಡುಗೆಯ ಕೆಲಸ ವಹಿಸಿಕೊಂಡಿರುತ್ತಿದ್ದ. ಆದರೂ ತಮ್ಮ ಕುಟುಂಬಗಳಿಂದ ತಾವು ದೂರವಾಗಿರುವ ವ್ಯಥೆಯನ್ನು ಅವರು ಅನುಭವಿಸುತ್ತಿದ್ದರು. ಇದರ ಜೊತೆಗೆ, ಈಗ ಮತೀಯಗಲಭೆಗಳು ನಡೆಯುತ್ತಿರುವುದರಿಂದ ಊರಿನಲ್ಲಿರುವ ತಮ್ಮ ಕುಟುಂಬಗಳ ಗತಿ ಏನಾಗಿದೆಯೋ ಎಂಬ ಆತಂಕವೂ ಸೇರಿ ಅವರು ಇನ್ನಷ್ಟು ದುಃಖಗೊಂಡಿದ್ದರು. ಬರುವ ಹಣ ಹೊಟ್ಟೆ ಬಟ್ಟೆಗೇ ಸಾಲದಿರುವಾಗ ಗಲಭೆಗಳಿಂದಾಗಿ ಇರುವ ಮನೆಮಠಗಳಿಗೆ ಏನಾದರೂ ಹಾನಿಯಾದರೆ ಎಂಬ ಚಿಂತೆಯೂ ಸೇರಿತ್ತು.

ಡಿಸೆಂಬರ್ ೮ರಂದು (ಗಾಂಧೀಜಿ ಉಪವಾಸ ಆರಂಭಿಸುವುದಕ್ಕೆ ಕೇವಲ ೫ ವಾರಗಳ ಮೊದಲು) ಈ ಗಿರಣಿ ಕೆಲಸಗಾರರು ತಮ್ಮ ತುಟ್ಟಿಭತ್ಯೆ ಹೆಚ್ಚಿಸಬೇಕು ಎಂದು ಮ್ಯಾನೆಜರ್ ಹತ್ತಿರ ಹೋಗಿ ಕೇಳಿದ್ದರು. ಬೆಲೆಗಳು ಏರುತ್ತಿವೆ. ನಮ್ಮ ಕುಟುಂಬಗಳನ್ನು ಸಾಕುವುದಕ್ಕೇ ಆಗುತ್ತಿಲ್ಲ ಎಂದಾಗ ನಿಮಗೆ ನಾವು ಕೊಡುವ ಸಂಬಳದಿಂದ ತೃಪ್ತಿ ಇಲ್ಲದಿದ್ದರೆ ಕೆಲಸ ಬಿಟ್ಟು ಹೋಗಬಹುದು ಎಂದು ಅವನು ಹೇಳಿದ್ದ. ಕಾರ್ಮಿಕರು ಸುಮ್ಮನಾಗಲಿಲ್ಲ. ಹೆಚ್ಚುಹೆಚ್ಚು ಕಾರ್ಮಿಕರು ಬಂದು ಸೇರತೊಡಗಿದಾಗ ಮ್ಯಾನೇಜರ್ ಕಿಟಕಿಯಿಂದ ತಲೆ ಹೊರಗೆ ಹಾಕಿ ಈ ಜನ ಮಾತು ಕೇಳುತ್ತಿಲ್ಲ. ಒತ್ತಾಯ ಮಾಡುತ್ತಿದ್ದಾರೆ ಎಂದು ಯಾರಿಗೋ ಹೇಳಿದ. ಆಮೇಲೆ ಅವನು ಫೋನಿನಲ್ಲಿ ಮಾತಾಡಿದ್ದನ್ನು ಕೆಲಸಗಾರರು ನೋಡಿದರು. ಅವನು ಫೋನ್ ಮಾಡಿದ ಕೆಲವೇ ನಿಮಿಷಗಳಲ್ಲಿ ನಾಲ್ಕು ಮಂದಿ ಕಾನ್‌ಸ್ಟೇಬಲ್‌ಗಳು ಬಂದರು. [illegible]

ತುದಿಯಿಂದ ತಿವಿದು ಜನರನ್ನು ಕಾಂಪೋಂಡಿನಿಂದ ಹೊರಗೆ ಅಟ್ಟತೊಡಗಿದರು. ಅಷ್ಟೇ ಅಲ್ಲ ಯಾವ ಮುನ್ನೆಚ್ಚರಿಕೆಯನ್ನೂ ಕೊಡದೆ ಇದ್ದಕ್ಕಿದ್ದಂತೆ ಗುಂಡು ಹಾರಿಸಿದರು. ಒಬ್ಬ ಕಾರ್ಮಿಕ ಸತ್ತ. ಇನ್ನೂ ಅನೇಕರು ತೀವ್ರವಾಗಿ ಗಾಯಗೊಂಡರು.

ಈ ಬಗ್ಗೆ ಗಾಂಧೀಜಿಯವರಿಗೆ ವಿಷಯ ತಿಳಿಸುವುದಕ್ಕಾಗಿ ಐದು ಜನ ಕಾರ್ಮಿಕರ ನಿಯೋಗ ಬಿರ್ಲಾ ಭವನದ ಕಡೆಗೆ ಹೊರಟಿತು. ನವದೆಹಲಿಯಲ್ಲಿರುವ ಅಲ್ಬುಕರ್ಕ್ ರಸ್ತೆಗೂ ಹಳೆ ನಗರದಲ್ಲಿರುವ ಶಾಬ್ಜಿಮಂಡಿಗೂ ಬಹಳ ದೂರದ ಹಾದಿ. ಅವರ ದುರಾದೃಷ್ಟ, ಅಷ್ಟು ದೂರ ಅವರು ಬರುವಷ್ಟರಲ್ಲಿ ರಾತ್ರಿ ಒಂಬತ್ತು ಗಂಟೆ ದಾಟಿತ್ತು. ಕಾವಲುಗಾರರು ಅವರನ್ನು ಗೇಟಿನಲ್ಲಿಯೇ ತಡೆದು ನಾಳೆ ಬನ್ನಿ ಎಂದು ತಿಳಿಸಿದರು. ಮಾರನೇ ದಿನ ಈ ಐದೂಮಂದಿ ಬೆಳಿಗ್ಗೆ ಸಮಯಕ್ಕೆ ಸರಿಯಾಗಿ ಪುನಃ ಬಂದರು. ಆದರೆ ಗಾಂಧಿಯವರಿಗೆ ಡಿಸೆಂಬರ್ ೧೩ರವರೆಗೆ ಬಿಡುವೇ ಇಲ್ಲ ಎಂದು ತಿಳಿಸಲಾಯಿತು. ಅಂದರೆ ಇನ್ನು ನಾಲ್ಕು ದಿನ ಗಾಂಧಿಯನ್ನು ನೋಡುವಂತಿರಲಿಲ್ಲ. ೧೩ನೇ ತಾರೀಖು ಬಂದರು ಉಪಯೋಗವೇನೂ ಆಗಲಿಲ್ಲ. ಬಿರ್ಲಾ ಮನೆಯಲ್ಲಿ ಅವರು ವಾಸವಾಗಿರುವುದರಿಂದ ಗಾಂಧೀಜಿಯವರು ಬಹುಶಃ ಕಾರ್ಮಿಕರ ಸಮಸ್ಯೆಗೆ ಸರಿಯಾಗಿ ಗಮನಕೊಡುವುದಿಲ್ಲ ಎಂದು ಕಾರ್ಮಿಕರು ನಿರ್ಧರಿಸಿದರು.

ಆದರೂ ಯಾವುದೇ ಮುನ್ಸೂಚನೆ ಇಲ್ಲದೆ, ಕಾಂಪೌಂಡಿನೊಳಗಿದ್ದ ಕೆಲಸಗಾರರ ಗುಂಪಿನ ಮೇಲೆ ಗುಂಡು ಹಾರಿಸಿದ್ದರಿಂದ ಅವರು ಮತ್ತಷ್ಟು ಕೆರಳಿದರು. ಹೇಗಾದರೂ ನ್ಯಾಯ ಪಡೆಯಬೇಕು ಎಂದು ನಿರ್ಧರಿಸಿದರು. ಇದಕ್ಕಾಗಿ ಅವರು ಸರ್ಕಾರದ ಬೇರೆಬೇರೆ ನಾಯಕರನ್ನು ಭೇಟಿ ಮಾಡಲು ಪ್ರಯತ್ನಿಸಿದರು. ಪಟೇಲರೂ ಸೇರಿದಂತೆ ಎಲ್ಲರ ಮನೆ ಬಾಗಿಲನ್ನೂ ತಟ್ಟಿದರು. ಗೃಹಮಂತ್ರಿ ಪಟೇಲರ ಮನೆಬಾಗಿಲು ಇವರಿಗೆ ತೆರೆಯದಿರುವುದರ ಬಗ್ಗೆ ಆಶ್ಚರ್ಯವೇನೂ ಇಲ್ಲ. ಮುಷ್ಕರರಹಿತ ಕಾರ್ಖಾನೆಗಳು ಎಂಬ ಇಂಟಕ್ ನಿಲುವನ್ನು ಎಲ್ಲರೂ ತಾವಾಗಿಯೇ ಒಪ್ಪಿಕೊಳ್ಳುವಂತಾಗಬೇಕು ಎಂಬ ದೃಷ್ಟಿಯಿಂದ ಎಡಬಿಡದೆ ಪ್ರಚಾರ ಭಾಷಣಗಳಲ್ಲಿ ತೊಡಗಿದ್ದ ಪಟೇಲ್ ಅವರಿಗೆ ಸಮಯ ಸಿಗದಿದ್ದರಲ್ಲಿ ಅಚ್ಚರಿ ಏನೂ ಇಲ್ಲ. ಕಾರ್ಮಿಕರ ನಗರ ಎಂದು ಪ್ರಸಿದ್ಧವಾಗಿದ್ದ ಮುಂಬೈನಲ್ಲಿ ಇತ್ತೀಚೆಗೆ ಮೂರು ವರ್ಷ ಕಾಲ ಮುಷ್ಕರವೇ ಇರಕೂಡದು ಎಂಬ ನಿಲುವನ್ನು ಪ್ರತಿಭಟಿಸಿ ನಗರದಾದ್ಯಂತ ಒಂದು ದಿನದ ಹರತಾಳ ನಡೆದಿತ್ತು. ಇದಕ್ಕೆ ಪಟೇಲ್ ಅವರ ಪ್ರತಿಕ್ರಿಯೆ "Strikes are a nuisance" ನಿಜಕ್ಕೂ ಮರೆಯಲಾಗದ ಮಾತು! ಅಂತೂ ಈ ಐದುಮಂದಿ ನೇಕಾರರ ಗುಂಪು ಎಬ್ಬಿಸಬಹುದಾಗಿದ್ದ ಒಂದು ಸಣ್ಣ ಕಿರಿಕಿರಿಯನ್ನೂ ಸಹ, ಸ್ವಲ್ಪ ಧೈರ್ಯವಾಗಿ ಮಾತಾಡುತ್ತಿದ್ದ ಒಬ್ಬ ಕಾರ್ಮಿಕನ ಬಂಧನ ಹಾಗೂ ಉಳಿದ ನಾಲ್ವರನ್ನೂ ಬೇರೆಬೇರೆ ಕಡೆಗೆ ಚೆದುರಿಸುವ ಮೂಲಕ ಸದ್ದಿಲ್ಲದೆ ಅಡಗಿಸಲಾಯಿತು.

ನಾನು **ಹೊರಟಾಗ**, ಕತ್ತಲಲ್ಲಿ ಇನ್ನಷ್ಟು ಕಪ್ಪಾಗಿ ಕಾಣುತ್ತಿದ್ದ ತೆರೆದ ಚರಂಡಿಗಳ, ಎತ್ತರದ ಗೋಡೆಗಳ ನಡುವಿನಿಂದ ರಾಮದಾಸ್ ಹುಷಾರಾಗಿ ನಮ್ಮನ್ನು ಕರೆದುಕೊಂಡು ಬರುತ್ತಿದ್ದಾಗ ಒಂದು ಮಾತು ಹೇಳಿದ - "ಸ್ವಾತಂತ್ರ್ಯ ಬಂದ ನಂತರ ಹೀಗೆಲ್ಲ ವಿಚಾರಣೆಯಿಲ್ಲದೆ

ಯೂನಿಯನ್ ಲೀಡರುಗಳನ್ನು ಜೈಲಿನಲ್ಲಿಡುವುದಿಲ್ಲ ಎಂದು ಅಂದುಕೊಂಡಿದ್ದೆವು. ಆದರೆ ಈಗಲೂ ಹಾಗೇ ನಡೆಯುತ್ತಿದೆ.''

ನಾವು ಟ್ಯಾಕ್ಸಿ ಬಳಿ ಬಂದೆವು. ಡ್ರೈವರ್ ಸ್ಟೀರಿಂಗ್ ಮೇಲೆ ತಲೆ ಇಟ್ಟು ಗೊರಕೆ ಹೊಡೆಯುತ್ತ ಮಲಗಿದ್ದ. ಅದನ್ನು ನೋಡಿ ನಾವು ನಕ್ಕ ಸದ್ದಿಗೆ ಅವನಿಗೆ ಎಚ್ಚರವಾಯಿತು. ಗಲಿಬಿಲಿಗೊಂಡು ಎದ್ದು ಕುಳಿತ. ನಾನು ಟ್ಯಾಕ್ಸಿಯಲ್ಲಿ ಕೂರುತ್ತಿದ್ದಾಗ ರಾಮದಾಸ್ ಹೇಳಿದ–''ಬ್ರಿಟಿಷ್ ಸಾಮ್ರಾಜ್ಯಾಧಿಪತ್ಯ ಕೊನೆಯಾದ ಮೇಲೆ ಒಂದಂತೂ ಏನೂ ವ್ಯತ್ಯಾಸವಾಗಿಲ್ಲ. ಹಾಗೇ ಇದೆ. ಗಳಿಸಿದ ಲಾಭವನ್ನೆಲ್ಲ ತಾನೇ ಇಟ್ಟುಕೊಳ್ಳುವ ಸ್ವಾತಂತ್ರ್ಯ ಮಾಲೀಕನಿಗಿದೆ. ಗಲಾಟೆ ಮಾಡದೆ ಶಾಂತಿಯನ್ನು ಪಾಲಿಸಿಕೊಂಡು ಹೋಗಬೇಕಾದ ಸ್ವಾತಂತ್ರ್ಯ ಕಾರ್ಮಿಕರಿಗಿದೆ.''

❑

ಅಧ್ಯಾಯ ೭

ಕೈಗಾರಿಕಾ ನೇತಾರರು

ಬಿರ್ಲಾ : ಟ್ರಸ್ಟೀಶಿಪ್‌ನ ದೂತ

ನಾನು ಹೊಟೆಲಿಗೆ ಹಿಂದಿರುಗಿದಾಗ ನನಗಾಗಿ ಒಂದು ಟೆಲಿಫೋನ್ ಸಂದೇಶವಿತ್ತು. ನಾನು ಹಿಂದಿನ ದಿನವಷ್ಟೇ ಕೇಳಿದ್ದ ಹಾಗೂ ನನಗೆ ಬಹುವಾಗಿ ಅಗತ್ಯವಾಗಿದ್ದ ಒಂದು ಭೇಟಿಯ ಕಾರ್ಯಕ್ರಮ ನಿಗದಿಯಾಗಿತ್ತು. ಮಾರನೇ ದಿನ ಮಧ್ಯಾಹ್ನ ಬಿರ್ಲಾಗೃಹದಲ್ಲಿ ಶ್ರೀ ಜಿ.ಡಿ. ಬಿರ್ಲಾ ಅವರೊಂದಿಗೆ.

ಘನಶ್ಯಾಮದಾಸ್‌ಜಿ ಬಿರ್ಲಾ ಅವರ ಹೆಸರು ಬಹುವಾಗಿ ಜವಳಿ ಉದ್ಯಮದೊಂದಿಗೇ ಕೇಳಿಬರುತ್ತಿದ್ದರೂ ಅವರು ಇನ್ನೂ ಹಲವಾರು ಉದ್ಯಮಗಳಿಗೆ ಪ್ರಸಿದ್ಧರಾಗಿದ್ದರು. ಅದರಲ್ಲಿ ಮುಖ್ಯವಾದುದು ಸಕ್ಕರೆಯ ಉದ್ಯಮ. ಸಕ್ಕರೆಯ ಮೇಲಿನ ನಿಯಂತ್ರಣ ತೆಗೆಯಬೇಕು ಎಂಬ ಹೋರಾಟ ನಡೆಯುತ್ತಿದ್ದ ಕಾರಣ ಈ ಉದ್ಯಮ ಬಹಳ ಸುದ್ದಿಯಲ್ಲಿತ್ತು. ಬಿರ್ಲಾ ನಡೆಸುತ್ತಿದ್ದ ಇನ್ನಿತರ ಉದ್ಯಮಗಳೆಂದರೆ ಮೋಟಾರು ಕಾರುಗಳು, ಬೈಸಿಕಲ್‌ಗಳು, ಬಾಯ್ಲರ್‌ಗಳು, ಕ್ಯಾಲ್ಸಿಯಂ ಕಾರ್ಬೈಡ್‌ಗಳು, ಕೈಗಾರಿಕಾ ಆಲ್ಕೊಹಾಲ್, ಲಿನೋಲಿಯಂ, ವುಲನ್, ಫ್ಲಾಕ್ಸ್, ತುಪ್ಪ, ಮಾರ್ಗರೀನ್, ಸ್ಟಾರ್ಚ್, ಕನ್‌ಫೆಕ್ಷನರಿ, ಬ್ಯಾಂಕಿಂಗ್ ಹಾಗೂ ಇನ್‌ಶೂರೆನ್ಸ್.... ಇಷ್ಟೆಲ್ಲದರ ಜೊತೆಗೆ ಅವರು ಅನೇಕ ವೃತ್ತಪತ್ರಿಕೆಗಳ ಮಾಲೀಕರಾಗಿದ್ದರು ಮತ್ತು ರೇಡಿಯೋ ಬಗ್ಗೆಯೂ ಬಹಳ ಆಸಕ್ತಿ ವಹಿಸಿದ್ದರು. ಅವರು ಕೆಲವು ಕಾಲ ಅಮೆರಿಕದಲ್ಲಿದ್ದರು. ಇಂಗ್ಲೆಂಡಿನೊಂದಿಗೆ ವ್ಯಾಪಾರವಹಿವಾಟು ಹೊಂದಿದ್ದರು. ಬಿರ್ಲಾ ಅವರನ್ನು ಇಂಡಿಯಾದ ನಂಬರ್ ೧ ಕೈಗಾರಿಕೋದ್ಯಮಿ ಎಂದು ಭಾವಿಸಲಾಗಿತ್ತು. ಅವರ ಬಗ್ಗೆ ನನಗೆ ತುಂಬ ಆಸಕ್ತಿ ಇದ್ದುದೇಕೆಂದರೆ ಸರ್ಕಾರದ ಉನ್ನತ ನಾಯಕರೊಂದಿಗೆ ಅವರಿಗೆ ನಿಕಟ ಸಂಬಂಧವಿತ್ತು. ಅದರಲ್ಲಿಯೂ ಗಾಂಧಿಯವರೊಂದಿಗೆ ಅವರ ಸಂಬಂಧ ವಿಶೇಷ ತೆರನಾದದ್ದು. ಗಾಂಧೀ ವಿಚಾರಗಳಿಂದ ಹೊಮ್ಮಿದ Trusteeship ಎಂಬ ಪರಿಕಲ್ಪನೆಯ ಬಗ್ಗೆ ಬಿರ್ಲಾ ದೃಷ್ಟಿ ಏನು ಎಂಬುದನ್ನು ತಿಳಿಯುವುದು ನನ್ನ ಉದ್ದೇಶವಾಗಿತ್ತು. ಗಾಂಧಿಯವರ ಸೆಕ್ರೆಟರಿಯಾಗಿದ್ದ ಪ್ಯಾರೇಲಾಲ್ ಈ ಟ್ರಸ್ಟೀಶಿಪ್‌ನ್ನು ನನಗೆ ಹೀಗೆ ವಿವರಿಸಿದ್ದರು: ಸಂಪತ್ತು ಮತ್ತು ಆಸ್ತಿಯನ್ನು ಹಾಗೇ ಲಿಕ್ವಿಡೇಟ್ ಮಾಡುವುದಕ್ಕೆ ಬದಲಾಗಿ ಅವುಗಳ ಧರ್ಮದರ್ಶಿಗಳಾಗಿ ರೂಪುಗೊಳ್ಳಲು ಬಂಡವಾಳಗಾರರು ಮತ್ತು ಸಂಪತ್ತಿನ ಮಾಲೀಕರಿಗೆ ನೀಡುವ ಅವಕಾಶವೇ ಟ್ರಸ್ಟೀಶಿಪ್. ಸಂಪತ್ತಿರುವುದು ಸ್ವಾರ್ಥಪರ ಉದ್ದೇಶಗಳಿಗೆ ಬಳಸುವುದಕ್ಕಾಗಿ ಅಲ್ಲ. ಅದು ಇಡೀ ಸಮಾಜದ ಒಳಿತಿಗಾಗಿ ಇರುವಂಥದ್ದು. ಸಂಪತ್ತಿನ ಮಾಲೀಕನಿಗೆ ಇದರಲ್ಲಿ ಕಮಿಶನ್ ಪಡೆಯುವ

ಹಕ್ಕಿದೆ. ಮತ್ತು ಕಮಿಶನ್ ಮೊತ್ತ ಎಷ್ಟಿರಬೇಕು ಎಂಬುದನ್ನು ಜನರೇ ನಿರ್ಧರಿಸಬೇಕು. ಇದು ಗಾಂಧಿ ವಿಚಾರ.

ಬಿರ್ಲಾ ಅವರ ದತ್ತಿಗಳ ಬಗ್ಗೆ ಪ್ಯಾರೆಲಾಲ್ ಹೇಳಿದ್ದರು, ಅದೊಂದು ಸುದೀರ್ಘ ಪಟ್ಟಿ. ಬಿರ್ಲಾ ಕಾರ್ಮಿಕರನ್ನು ಹೇಗೆಂದರೆ ಹಾಗೆ ಹೀನಾಯವಾಗಿ ನಡೆಸಿಕೊಳ್ಳಲು ಬರುವುದಿಲ್ಲ. ಗಾಂಧೀಜಿಯ ಮುಂದೆ ಅದನ್ನು ಸಮರ್ಥಿಸಿಕೊಳ್ಳಲಾಗುವುದಿಲ್ಲ ಎಂದು ಪ್ಯಾರೇಲಾಲ್ ಹೇಳಿದರು.

ನಾನು ಮಾರನೇ ದಿನ ಗೊತ್ತುಪಡಿಸಿದ ಸಮಯಕ್ಕೆ ಸರಿಯಾಗಿ ಬಿರ್ಲಾ ಗೃಹಕ್ಕೆ ಹೋದಾಗ ವಿವಿಧ ಶೈಲಿಗಳಲ್ಲಿ ಸಜ್ಜಿತವಾಗಿದ್ದ ಕೋಣೆಗಳ ಮೂಲಕ ನನ್ನನ್ನು ಒಳಗೆ ಕರೆದುಕೊಂಡು ಹೋಗಲಾಯಿತು. ಕೆಲವು ಕೋಣೆಗಳು ಪಾಶ್ಚಾತ್ಯ, ಆಧುನಿಕ ಶೈಲಿಯಲ್ಲಿ ಸಿಂಗಾರಗೊಂಡಿದ್ದರೆ ಕೆಲವು ಭಾರತೀಯ ಶೈಲಿಯಲ್ಲಿದ್ದವು. ಅಲ್ಲಿ ಯಾವುದೇ ಪೀಠೋಪಕರಣಗಳಿರಲಿಲ್ಲ. ಬದಲಿಗೆ ಸಾಂಪ್ರದಾಯಿಕವಾದ ಹಾಸುಗಳು, ಒರಗು ದಿಂಬುಗಳು ಇದ್ದವು. ಇಂತಹ ಒಂದು ಕೋಣೆಯಲ್ಲಿಯೇ ನಾನು ಹೋದವಾರ ಇನ್ನೊಬ್ಬ 'Star guest'ನ ಫೋಟೋ ತೆಗೆದಿದ್ದೆ. ಈ ಅತಿಥಿ ವಲ್ಲಭಭಾಯಿ ಪಟೇಲ್, ಬಿರ್ಲಾರ ನಿಕಟಮಿತ್ರ, ದೆಹಲಿಗೆ ಬಂದಾಗ ಬಹುತೇಕ ಸಂದರ್ಭಗಳಲ್ಲಿ ಪಟೇಲರು ಬಿರ್ಲಾ ಅವರಲ್ಲಿಯೇ ಇಳಿದುಕೊಳ್ಳುತ್ತಿದ್ದರು.

ನಾನೀಗ ಭವ್ಯವಾದ ಗಾಜುಗಳಿಂದರೇ ಸಿದ್ಧಗೊಂಡಂತಿದ್ದ ಒಂದು ದೊಡ್ಡ ಡ್ರಾಯಿಂಗ್ ರೂಂನಲ್ಲಿದ್ದೆ. ಅದರ ಭವ್ಯತೆ ಲಂಡನ್, ಲುಕ್ಸಂಬರ್ಗ್ ಮೊದಲಾದ ಯಾವುದೇ ಅಂತರ ರಾಷ್ಟ್ರೀಯ ಮಟ್ಟಕ್ಕೆ ಅದು ಸರಿಸಾಟಿ ಎನ್ನುವಂತಿತ್ತು. ನನ್ನನ್ನು ನೋಡಿದ ತಕ್ಷಣ ಸೋಫದಿಂದ ಎದ್ದು ಬಂದು ನನ್ನನ್ನು ಸ್ವಾಗತಿಸಿದರು ಬಿರ್ಲಾ. ಹಿಮಬಿಳಿಯ ಸ್ವಚ್ಛ ಖಾದಿಯ ಅಚ್ಚುಕಟ್ಟಾದ ಉಡುಪು. ಈತ ಟ್ರಸ್ಟಿಗಳ ಡೀನ್, ಯಂತ್ರಗಳಿಂದ ಬಟ್ಟೆ ತಯಾರಿಸುವ ಈ ಬಹುದೊಡ್ಡ ಉದ್ಯಮಿ ಖಾದಿ ಧರಿಸಿದ್ದು ಕುತೂಹಲಕರವಾಗಿತ್ತು. ಗಾಂಧೀ ಅನುಯಾಯಿಗಳಿಗೆಲ್ಲ ಇದೇ ಯೂನಿಫಾರಂ. ಆದರೆ ಈ ಸಡಿಲವಾದ ಇಳಿಬಿದ್ದ ಉದ್ದನೆಯ ಅಂಗಿ ಮತ್ತು ಧೋತಿ ಮಾದರಿಯ ಉಡುಪೂ ಕೂಡ ಜಗತ್ತಿನ ಯಾವುದೇ ಭಾಗದ ಉದ್ಯಮಿಗಳ ವ್ಯಕ್ತಿತ್ವದಲ್ಲಿ ಕಂಡುಬರುವ ಎಚ್ಚರದ, ವ್ಯವಾಹಾರಿಕವಾದ ಹಾಗೂ ಯಾರನ್ನು ಹಚ್ಚಿಕೊಳ್ಳದ ಅವರ ಸ್ವಭಾವವನ್ನು ಮರೆಸಲಾರದು. ೫೫ ವರ್ಷ ವಯಸ್ಸಾಗಿದ್ದ ಬಿರ್ಲಾ ವಯಸ್ಸಿಗಿಂತ ಚಿಕ್ಕವರಾಗಿ ಕಂಡರು. ಅವರ ನಡವಳಿಕೆಯಲ್ಲಿ ಸೌಹಾರ್ದತೆ ಇತ್ತು. ಯಾವುದೇ ತೋರಿಕೆಗಳಿರಲಿಲ್ಲ. ಈತ ನೇರಮಾತಿನ ಮನುಷ್ಯ ಎಂದು ನನಗೆ ಗೊತ್ತಿತ್ತು. ಹೀಗಾಗಿ ನಾನು ಬೇರೆ ಸುತ್ತು ಬಳಸಿಲ್ಲದೆ, ಟ್ರಸ್ಟಿಶಿಪ್ ಕುರಿತ ವಿಷಯವನ್ನೆ ನೇರವಾಗಿ ಪ್ರಸ್ತಾಪಿಸಿದೆ.

ಅವರ ಉತ್ತರ ನಾನು ನಿರೀಕ್ಷಿಸಿದಷ್ಟೆ ನೆಟ್ಟನೇರವಾಗಿತ್ತು. "ಗಾಂಧೀಜಿಯವರ ತತ್ವಾನುಷ್ಠಾನ ಸುಲಭವಲ್ಲ. ಅದಕ್ಕೆ ತುಂಬ ದೃಢವಾದ ಸಂಕಲ್ಪ ಬೇಕಾಗುತ್ತದೆ." ಈ ಉತ್ತರದಲ್ಲಿ ಅವರು ಏನು ಹೇಳಿದ್ದರು ಮತ್ತು ಏನನ್ನು ಹೇಳದೆ ಬಿಟ್ಟಿದ್ದರು ಎಂಬುವೆರನಡನ್ನೂ ನಾನು ಗಮನಿಸಿದೆ. ಅವರು ಏನು ಹೇಳಲಿಲ್ಲವೋ ಅದನ್ನು ಅವರದೇ ಗಿರಣಿಗಳ ಕಾರ್ಮಿಕರು ಹೇಳಿದ್ದರು. ಈ

ಒಂದು ಸಂಕ್ಷಿಪ್ತ ವಾಕ್ಯದ ಮೂಲಕ ಈ ಯೋಜನೆಯನ್ನು ಅನುಷ್ಠಾನಕ್ಕೆ ತರುವಲ್ಲಿ ಮಾನವನ ಮಿತಿಗಳೇನು ಎಂಬುದನ್ನು ಬಿರ್ಲಾ ಸೂಚಿಸಿದ್ದಾರೆ ಎಂದು ನನಗನ್ನಿಸಿತು. ಬಿರ್ಲಾ ಮಾತು ಮುಂದುವರೆಸಿದರು: "ಟ್ರಸ್ಟಿಶಿಪ್‌ನಂತಹ ವಿಚಾರದ ಬಗ್ಗೆ ಯಾರಾದರೂ ಒಪ್ಪಿಕೊಳ್ಳಲೇಬೇಕು. ಅದರ ಬಗ್ಗೆ ಭಿನ್ನಾಭಿಪ್ರಾಯಕ್ಕೆ ಅವಕಾಶವೇ ಇಲ್ಲರ. ಆತ ಶ್ರೀಮಂತ ವ್ಯಾಪಾರೋದ್ಯಮಿಯಾಗಿರಲಿ, ರಾಜಕಾರಣಿಯಾಗಿರಲಿ ಅಥವಾ ಡಾಕ್ಟರಾಗಿರಲಿ..... ಇದು ನಮ್ಮ ಹಿಂದೂ ತತ್ವಸಿದ್ಧಾಂತಕ್ಕೆ ಸಂಪೂರ್ಣ ಅನುಗುಣವಾಗಿಯೇ ಇದೆ. ನಾವು ಇಲ್ಲಿ ಬದುಕಬೇಕಾದ್ದು ಮಾನವರ ಸೇವೆಗಾಗಿ. ಒಬ್ಬ ವ್ಯಕ್ತಿ ಎಷ್ಟರಮಟ್ಟಿಗೆ ಧರ್ಮದರ್ಶಿಯಾಗಿರಬಲ್ಲ ಎಂಬುದು ಆತನ ಆತ್ಮಬಲವನ್ನು ಅವಲಂಬಿಸಿದೆ."

ಗಾಂಧಿಯವರ ವಿಚಾರ ನಿಮ್ಮ ಮೇಲೆ ಎಷ್ಟು ಪ್ರಭಾವ ಬೀರಿದೆ ಎಂದು ಕೇಳಿದೆ. ಬಿರ್ಲಾ ಹೇಳಿದರು - "ನನ್ನ ಮೇಲೆ ಅದರ ಪ್ರಭಾವ ಅಸಾಧಾರಣ. ಒಬ್ಬ ವ್ಯಾಪಾರೋದ್ಯಮಿಯಾಗಿ ನನ್ನ ಜವಾಬ್ದಾರಿಗಳೇನು ಎಂಬುದನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ನನ್ನ ಬದುಕು ಸೇವೆಗೆ ಮೀಸಲಾಗಿದೆಯೇ ಹೊರತು ಸಂಪತ್ತನ್ನು ಸಂಚಯಿಸುವುದಕ್ಕಲ್ಲ...." ಈ ಸಾಲನ್ನು ತಟಕ್ಕನೆ ನಿಲ್ಲಿಸಿದ ಅವರು ಇದು ಇನ್ನು ಸಾಕು ಎಂಬಂತೆ "ಈ ವಿಷಯ ತೀರ ವೈಯಕ್ತಿಕ ಮಟ್ಟಕ್ಕೆ ತಲುಪುತ್ತಿದೆ ಅನ್ನಿಸುತ್ತೆ." ಎಂದರು.

ಹೀಗಾಗಿ ನಾನು 'ಸುರಕ್ಷಿತ ಪ್ರಶ್ನಾವಲಯ' ಪ್ರವೇಶಿಸಿದೆ. ಬಿರ್ಲಾ ಅವರು ಎಷ್ಟು ದೇವಸ್ಥಾನಗಳನ್ನು ಕಟ್ಟಿಸಿದ್ದಾರೆ ಎಂದು ಕೇಳಿದೆ. ಅದಕ್ಕೆ ಅವರು "ಇದು ಮುಖ್ಯವಾಗಿ ತಮ್ಮ ಅಣ್ಣನ ಆಸಕ್ತಿಯಿಂದ ನಡೆಯುತ್ತಿರುವ ಕೆಲಸ. ಆತ ತುಂಬ ಧರ್ಮಭೀರು. ನಿಜವಾಗಿ ಹೇಳುವುದಾದರೆ ನಾವು ದೇವಸ್ಥಾನಗಳನ್ನು ಕಟ್ಟಿಸುತ್ತೇವೆ. ಆದರೆ ಅದರಲ್ಲಿ ನಂಬಿಕೆ ಇಲ್ಲ" ಎಂದರು ಈ ವಿಷಯದಲ್ಲಿ ಬಿರ್ಲಾ ಕುಟುಂಬದ ಧೋರಣೆಗೂ, ಬಿರ್ಲಾ ಕಾರ್ಮಿಕರ ಧೋರಣೆಗೂ ಇದ್ದ ಆಶ್ಚರ್ಯಕರ ಸಾಮ್ಯದಿಂದ ನಾನು ಚಕಿತಳಾದೆ. ಈ ಇಬ್ಬರಿಗೂ ದೇವಸ್ಥಾನಗಳಲ್ಲಿ ನಂಬಿಕೆ ಇರಲಿಲ್ಲ. "ನಾವು ದೇವಸ್ಥಾನಗಳನ್ನು ಕಟ್ಟಿಸುವುದು ಜನರಲ್ಲಿ ಧಾರ್ಮಿಕ ಭಾವನೆಯನ್ನು ಹರಡುವುದಕ್ಕಾಗಿ" ಎಂದರು ಬಿರ್ಲಾ.

ನಾನು, ಮಹಾತ್ಮರಿಗೆ ನಿಕಟವಾಗಿದ್ದ ಯಾರನ್ನು ಭೇಟಿಯಾದರೂ ಗಾಂಧಿಯನ್ನು ನೋಡಿದ ಕೂಡಲೇ ಅವರ ಮೇಲೆ ಯಾವ ರೀತಿಯ ಪ್ರಭಾವವಾಯಿತು ಎಂಬುದನ್ನು ಮರೆಯದೆ ಕೇಳುತ್ತಿದ್ದೆ. ಯಾಕೆಂದರೆ ತೀರಾ ವಿಭಿನ್ನ ಕ್ಷೇತ್ರಗಳ ಜನರನ್ನು ಸೂಜಿಗಲ್ಲಿನಂತೆ ಸೆಳೆದುಕೊಂಡಿದ್ದೇ ಗಾಂಧಿ ವ್ಯಕ್ತಿತ್ವದ ತುಂಬ ಮುಖ್ಯವಾದ ವೈಶಿಷ್ಟ್ಯ. ಗಾಂಧಿಯವರೊಂದಿಗೆ ಪ್ರಥಮ ಭೇಟಿಯ ಬಗ್ಗೆ ಹೇಳಿ ಎಂದು ಬಿರ್ಲಾ ಅವರನ್ನು ಕೇಳಿದೆ. ಬಿರ್ಲಾ ಹೇಳಿದರು : "ಅದು ನನಗೆ ತುಂಬ ಚೆನ್ನಾಗಿ ನೆನಪಿದೆ. ನಾನು ಗಾಂಧಿಯವರನ್ನು ಮೊದಲು ನೋಡಿದ್ದು ೧೯೧೫ರ ಡಿಸೆಂಬರ್‌ನಲ್ಲಿ. ಆಗ ನಾನು ಯುವಕ. ಗಾಂಧೀ ಆಗಷ್ಟೇ ದಕ್ಷಿಣ ಆಫ್ರಿಕಾದಿಂದ ಹಿಂದಿರುಗಿದ್ದರು. ಆಫ್ರಿಕಾದಲ್ಲಿ ಹೊಟ್ಟೆ ತುಂಬ ಊಟ ಮಾಡುವುದಕ್ಕೂ ಸಾಲದಷ್ಟು ಕಡಿಮೆ ಕೂಲಿಗೆ ದುಡಿಯುತ್ತಿದ್ದ, ಅಲ್ಲಿನ ಮಾಲಿಕರಿಂದ ಹೊಡೆತವನ್ನೂ ನಾನಾ ರೀತಿಯ

ಅಪಮಾನಗಳ್ನೂ ಅನುಭವಿಸುತ್ತಿದ್ದ, ಬಿಳಿಯರ ಜನಾಂಗೀಯ ಹಮ್ಮಿಗೆ ತುತ್ತಾಗಿದ್ದ ಭಾರತೀಯ ಸೋದರರ ಸೇವೆಗಾಗಿ ಗಾಂಧಿಯವರು ಕೈತುಂಬ ಹಣ ತರುತ್ತಿದ್ದ ತಮ್ಮ ಲಾ ಪ್ರಾಕ್ಟೀಸನ್ನು ಬಿಟ್ಟುಕೊಟ್ಟಿದ್ದರು. ಕಲ್ಕತ್ತಾದಲ್ಲಿ ಭಾಷಣ ಮಾಡುವಾಗ ಗಾಂಧಿಯವರು ಈ ವಿಷಯಗಳನ್ನು ಪ್ರಸ್ತಾಪಿಸಿದರು. ಇಲ್ಲದಿದ್ದರೆ ಅವರು ಅಷ್ಟೊಂದು ದೊಡ್ಡ ವ್ಯಕ್ತಿ ಎಂದು ನನಗೆ ಹೇಗೆ ಗೊತ್ತಾಗುತ್ತಿತ್ತು? ಗಾಂಧಿಯವರ ಗೌರವಾರ್ಥ ನಾವು ಒಂದು ದೊಡ್ಡ ಸತ್ಕಾರ ಕೂಟ ಏರ್ಪಡಿಸಿದೆವು. ಅದರ ಹಿಂದಿನ ಪ್ರೇರಣೆ ನಾನೇ!"

ಇಷ್ಟೊಂದು ಶ್ರೀಮಂತ ಕುಟುಂಬದಿಂದ ಬಂದಿರುವ ಹಾಗೂ ಅದಾಗಲೇ ಉದ್ಯಮ ರಂಗದಲ್ಲಿ ಯಶಸ್ಸಿನ ಹಾದಿಯಲ್ಲಿದ್ದ ನಿಮಗೆ ಗಾಂಧಿ ಹೇಗೆ ಕಾಣಿಸಿದರು ಎಂದು ಕೇಳಿದೆ. ಬಿರ್ಲಾ ಹೇಳಿದರು "ಮೊದಲ ಬಾರಿ ನೋಡಿದಾಗ ತುಂಬ ವಿಲಕ್ಷಣ ವ್ಯಕ್ತಿ ಅನ್ನಿಸಿತು. ಅವರ ಉಡುಪು ಮತ್ತು ಮಾತಿನ ಶೈಲಿ ವಿಚಿತ್ರವಾಗಿತ್ತು. ನನಗೆ ಒಂದು ರೀತಿ ಗಲಿಬಿಲಿಯಾಯಿತು. ಆದರೆ ಕ್ರಮೇಣ ಅವರ ಬಗ್ಗೆ ನನಗೆ ಅರ್ಥವಾಗುತ್ತ ಬಂತು. ಅವರು ಸಂಪೂರ್ಣ ಪ್ರಾಮಾಣಿಕತೆಯ, ನೇರ ನಡವಳಿಕೆಯ ವ್ಯಕ್ತಿ ಎಂಬುದನ್ನು ಅರ್ಥಮಾಡಿಕೊಂಡೆ. ರಾಜಕೀಯದ ಬಗ್ಗೆ ಅವರು ಹೊಸದೊಂದೇ ಕಲ್ಪನೆಯನ್ನು ಕೊಟ್ಟರು. ಅವರು ಒಬ್ಬ ಸಂತನೂ ಹೌದು ರಾಜಕಾರಣಿಯೂ ಹೌದು ಅನ್ನಿಸಿತು. ಅವರ ವಿಲಕ್ಷಣ ವ್ಯಕ್ತಿತ್ವಕ್ಕೆ ನಾವು ಹೊಂದಿಕೊಂಡೆವು. ಇಡೀ ಭಾರತವೇ ಅವರ ವಿಲಕ್ಷಣ ಶೈಲಿಯನ್ನು ಅನುಸರಿಸಲು ಪ್ರಾರಂಭಿಸಿತು ಎಂದು ನನಗನ್ನಿಸುತ್ತದೆ. ಇದಾಗಿ ೩೨ ವರ್ಷಗಳಾದವು. ಆಗಿನಿಂದ ನಾನು ಅವರನ್ನು ಅನುಸರಿಸುತ್ತಿದ್ದೇನೆ. ನನ್ನಿಂದ ಅವರಿಗೆ ಯಾವ ಸೇವೆ ಸಾಧ್ಯವೋ ಅದನ್ನು ನೀಡುತ್ತಿದ್ದೇನೆ."

ನಂತರ ನಾವು ಆರ್.ಎಸ್.ಎಸ್. ನ ಫೆನೆಟಿಕ್ ಹಾಗೂ ಫ್ಯಾಸಿಸ್ಟ್ ಮನೋಭಾವದ ಬಗ್ಗೆ ಮಾತಾಡಿದೆವು. ಹೀಗೆ ಮಾತಾಡುವಾಗ ಮುಂದೆ ಇನ್ನು ಕೆಲವೇ ದಿನಗಳಲ್ಲಿ ಇದೇ ಬಿರ್ಲಾ ಅವರ ತೋಟದ ಹಾದಿಯಲ್ಲಿ ಗಾಂಧಿಯವರು ಆರ್.ಎಸ್.ಎಸ್.ನವರ ಗುಂಡಿಗೆ ಬಲಿಯಾಗುತ್ತಾರೆ ಎಂದು ನಾನಾಗಲೀ ಬಿರ್ಲಾ ಅವರಾಗಲೀ ಊಹಿಸಿರಲಿಲ್ಲ. ಆರ್.ಎಸ್.ಎಸ್. ಕುರಿತು ಬಿರ್ಲಾ ಹೇಳಿದರು "ಈ ಸಂಘಟನೆಯನ್ನು ಅಷ್ಟು ಗಂಭೀರವಾಗಿ ನಾನು ಪರಿಗಣಿಸುವುದಿಲ್ಲ. ಅದಕ್ಕೆ ಯಾವ ರಾಜಕೀಯ ಪ್ರಭಾವವೂ ಇಲ್ಲ. ದ್ವೇಷದ ಹೊರತಾಗಿ ಅದರಲ್ಲಿ ಯಾವ ತತ್ವವೂ ಇಲ್ಲ. ದೇಶ ಒಂದು ನೆಮ್ಮದಿಯ ಸ್ಥಿತಿಗೆ ಬಂದ ಮೇಲೆ ಯಾರಲ್ಲಿಯೂ ಇಂತಹ ದ್ವೇಷ ಉಳಿಯುವುದಿಲ್ಲ. ದ್ವೇಷದ ಮೇಲೇ ಯಾರೂ ಬದುಕುವುದು ಸಾಧ್ಯವಿಲ್ಲ." ಹಿಂದೂ ಮಹಾಸಭಾ ಬಗ್ಗೆ ಹೇಳುತ್ತ - "ಆರ್.ಎಸ್.ಎಸ್.ನಂತೆಯೇ ಮಹಾಸಭಾ ಕೂಡ ತಾನಾಗಿಯೇ ಅಳಿದುಹೋಗುತ್ತದೆ. ಭವಿಷ್ಯದ ರಾಜಕೀಯ ಪಕ್ಷಗಳು ಆರ್ಥಿಕ ನೀತಿಯನ್ನು ಆಧರಿಸಿರಬೇಕು." ಸದ್ಯ, ಮಹಾಸಭಾದ ಕುರಿತ ನನ್ನ ಪ್ರಶ್ನೆಗಳನ್ನು ಅವರು ತೀರ ವೈಯಕ್ತಿಕ ಎಂದು ಹಾರಿಸಲಿಲ್ಲವಲ್ಲ ಎಂದು ನನಗೆ ಸಮಾಧಾನವಾಯಿತು.

ಬಿರ್ಲಾ ಮನೆಯಲ್ಲಿ ಎರಡು ಪಕ್ಷಗಳಿದ್ದವು. ಈ ಕುಟುಂಬದ ಕಿರಿಯ ಸೋದರ ಗಾಂಧಿಯನ್ನು ಬೆಂಬಲಿಸಿದ್ದ. ಹಿರಿಯ ಸೋದರ ಹಿಂದೂ ಮಹಾಸಭಾಗೆ ಬಹಳ ನಿಕಟವಾಗಿದ್ದರು. ಆ

ನಿಕಟತೆ ಯಾವ ಮಟ್ಟದ್ದು ಎಂಬ ಗುಟ್ಟು ಎಂದಿಗೂ ಬಹಿರಂಗವಾಗಲಿಲ್ಲ. ಸಂಪ್ರದಾಯ ನಿಷ್ಠರಾದ ಬಿರ್ಲಾ ಅವರ ಅಣ್ಣನವರು ಬೆಳಕಿಗೆ ಬಾರದೆ ತಮ್ಮಷ್ಟಕ್ಕೇ ಉಳಿದ ವ್ಯಕ್ತಿಯಾಗಿದ್ದರು. ಪ್ರಾಚೀನ ಹಿಂದೂ ಕಾನೂನಿನ ಪ್ರಕಾರ ಇವರಿಬ್ಬರೂ ಕುಟುಂಬದ ಆಸ್ತಿಗೆ ಜಂಟಿ ಪಾಲುದಾರರಾದ್ದರಿಂದ, ಅಹಿಂಸಾತತ್ವ ಹಾಗೂ ಧಾರ್ಮಿಕ ಸಹಿಷ್ಣುತೆಯ ಮೇಲೆ ಗಾಂಧಿ ಹಾಗೂ ಕಾಂಗ್ರೆಸ್ಸಿಗೆ ಬೆಂಬಲ ನೀಡುತ್ತಿದ್ದ ಮನೆಯೇ ಸಹಿಷ್ಣುತೆಯೊಂದನ್ನು ಬಿಟ್ಟು ಬೇರೇನನ್ನೂ ಮಾಡಬಲ್ಲ ಹಾಗೂ ಬಹಳಷ್ಟು ಹಿಂಸಾತ್ಮಕ ಘಟನೆಗಳಿಗೆ ಕಾರಣವಾದ ಧರ್ಮಾಂಧ ಹಿಂದೂ ಮಹಾಸಭಾವನ್ನು ಪ್ರೋತ್ಸಾಹಿಸುತ್ತಿದ್ದ ಮನೆಯೂ ಆಗಿತ್ತು.

ಸ್ವಾತಂತ್ರ್ಯಾನಂತರ ಸರ್ಕಾರದ ಯೋಜನೆಗಳಲ್ಲಿ ರಾಷ್ಟ್ರೀಕರಣಕ್ಕೆ ಸಂಬಂಧಿಸಿದ ವಿಷಯ ಜ್ವಲಂತವಾಗಿತ್ತು. ಈ ಬಗ್ಗೆ ಬಿರ್ಲಾ ಅಭಿಪ್ರಾಯವನ್ನು ಕೇಳಿದೆ. "ಜನಕ್ಕೆ ಅದು ಬೇಕೆಂದರೆ ಇರಲಿ" ಎಂದು ಹೇಳುತ್ತಾ ತಕ್ಷಣವೇ ಅವರು "ಅದನ್ನು ಜವಳಿ ಉದ್ಯಮಕ್ಕೆ ಅನ್ವಯಿಸಬಾರದು" ಎಂದು ಸೇರಿಸಿದರು. "ಜನ ಇದರ ಪರಿಣಾಮ ಏನು ಎಂದು ಗೊತ್ತಿಲ್ಲದೇ ಮಾತಾಡುತ್ತಿದ್ದಾರೆ. ರಾಷ್ಟ್ರೀಕರಣ ಒಂದು ಘೋಷಣೆ ಮಾತ್ರ, ರಾಷ್ಟ್ರೀಕರಣ ನೀತಿಯ ವಿಫಲತೆಗೆ ಲೇಬರ್ ಪಕ್ಷದ ಇಂಗ್ಲೆಂಡ್ ಸರ್ಕಾರವೇ ಉದಾಹರಣೆ. ಈ ನೀತಿ ಅನುಸರಿಸದ ಅಮೆರಿಕಾಕ್ಕೆ ಬಹಳ ಅನುಕೂಲವಾಗಿದೆ" ಎಂದರು. ವಾಸ್ತವವಾಗಿ ಬಿರ್ಲಾ ಅಮೆರಿಕಾ ದೇಶವನ್ನು ಬಹಳ ಮೆಚ್ಚಿಕೊಂಡಿದ್ದರು. ಆ ದೇಶದೊಂದಿಗೆ ಬ್ಯುಸಿನೆಸ್ ಮಾಡುವ ಬಗ್ಗೆ ಅವರಿಗೆ ಬಹಳ ನಿರೀಕ್ಷೆಗಳಿದ್ದವು. ಆದರೆ ಡಾಲರುಗಳನ್ನು ಪಡೆಯುವುದೇ ತೊಂದರೆಯಾಗಿತ್ತು. ರಾಷ್ಟ್ರೀಕರಣದ ಮಾತಿಲ್ಲದಿದ್ದರೆ ವಿದೇಶೀ ಬಂಡವಾಳವನ್ನು ಬಹಳ ಸುಲಭವಾಗಿ ಭಾರತಕ್ಕೆ ಆಕರ್ಷಿಸಬಹುದಿತ್ತು ಎಂದು ಅವರು ಭಾವಿಸಿದ್ದರು. ರಾಷ್ಟ್ರೀಕರಣದ ಅಗತ್ಯವಿಲ್ಲ. ಆದರೆ ನಮ್ಮಂತಹ ಬ್ಯುಸಿನೆಸ್ ನವರಿಗೆ ಸಾಮಾನ್ಯ ಮನುಷ್ಯನಲ್ಲಿ ಪೂರ್ಣ ವಿಶ್ವಾಸವಿದೆ. ಒಂದಲ್ಲ ಒಂದು ದಿನ ಜನರಿಗೂ ಅರ್ಥವಾಗುತ್ತದೆ. ಇದು ಒಳ್ಳೆಯದಲ್ಲ ಎಂದು.

ಬಿರ್ಲಾ ಮಾಲೀಕತ್ವದಲ್ಲಿ ಪ್ರಕಟವಾಗುತ್ತಿದ್ದ ಹದಿನಾರು ವೃತ್ತಪತ್ರಿಕೆಗಳ ಸಂಪಾದಕೀಯದ ಪ್ರಕಾರ ಸಾಮಾನ್ಯ ಮನುಷ್ಯನಿಗೆ ಬೆಲೆ ನಿಯಂತ್ರಣವೂ ಬೇಕಾಗಿರಲಿಲ್ಲ. ಬೆಲೆ ನಿಯಂತ್ರಣದ ಬಗ್ಗೆ ಸ್ವತಃ ಬಿರ್ಲಾ ಅವರ ಅಭಿಪ್ರಾಯ ಹೀಗಿತ್ತು: "ನಾನು ಎಂದೂ ಈ ನಿಯಂತ್ರಣಗಳ ಪರ ಅಲ್ಲ. ನಾನು ಯೋಚಿಸುವುದೇ ಬೇರೆ ರೀತಿ. ಕ್ಯಾಪಿಟಲಿಸಂನ ಒಂದು ಮುಖ್ಯ ಅಂಶವೆಂದರೆ ಅಲ್ಲಿ ಮುಕ್ತ ಸ್ಪರ್ಧೆಗೆ ಅವಕಾಶವಿದೆ. ಸರ್ಕಾರ ಇತ್ತೀಚೆಗೆ ಸಕ್ಕರೆಯ ಮೇಲಿನ ನಿಯಂತ್ರಣ ತೆಗೆದಿರುವುದರಿಂದ ಸಕ್ಕರೆ ಬೆಲೆ ಈಗಾಗಲೇ ಇಳಿದಿದೆ." ಆದರೆ ಅವರು ಮಾತಿನಲ್ಲಿ ಸತ್ಯವನ್ನು ತಿರುಚಿದ್ದರು. ಸಕ್ಕರೆ ನಿಯಂತ್ರಣದ ವಿವಾದ ಎಷ್ಟು ಬಿಸಿ ಏರಿತ್ತೆಂದರೆ ಗಾಂಧೀಜಿಯವರು ಕೂಡ ಈ ಬಗ್ಗೆ ಪಕ್ಷವಹಿಸಿ ಮಾತಾಡಬೇಕಾಯಿತು. ನಿಯಂತ್ರಣ ತೆಗೆದ ಮೇಲೆ ಸಕ್ಕರೆಯ ಬೆಲೆ ನಿಜಕ್ಕೂ ಇಳಿದಂತೇ ಆಗಿತ್ತು. ಏಕೆಂದರೆ ಕಾಳಸಂತೆಯಲ್ಲಿ ಕೊಳ್ಳುತ್ತಿದ್ದ ಬೆಲೆಗಿಂತ ಅದು ಕಡಿಮೆಯಾಗಿತ್ತು. ಆದರೆ ಕಾನೂನುಬದ್ಧ ನಿಯಂತ್ರಣ ಬೆಲೆಯಲ್ಲಿ ಕೊಳ್ಳುವವರಿಗೆ ಅದರ ಬೆಲೆ. ೧೨ ಆಣೆಯಿಂದ ಒಂದು ರೂಪಾಯಿಗೆ ಹೆಚ್ಚಾಗಿತ್ತು ಮತ್ತು ಸೇರಿಗೆ ಎಂಟಾಣೆಯಾಗಿತ್ತು.

ಹೀಗಾಗಿ ಸಾಮಾನ್ಯ ಜನ ಹೆಚ್ಚು ಬೆಲೆ ತೆರುವಂತಾಗಿತ್ತು. ನಿಯಂತ್ರಣ ತೆಗೆದ ಮೇಲಂತೂ ಅದರ ಬೆಲೆ ಎರಡು ಪಟ್ಟು ಹೆಚ್ಚಾಯಿತು. ಗಾಂಧಿಯವರು ಇತ್ತೀಚಿನ ಪ್ರಾರ್ಥನಾ ಸಭೆಗಳಲ್ಲಿ ಬೆಲೆಗಳ ಮೇಲೆ ಸರ್ಕಾರದ ನಿಯಂತ್ರಣವನ್ನು ತೆಗೆಯಬೇಕು ಎಂದು ಪ್ರತಿಪಾದಿಸಿದ್ದರು. ಜನಸಾಮಾನ್ಯರಿಗೆ ಅನುಕೂಲವಾಗುವಂತಹ ಮಾತನ್ನೇ ಹೇಳಿದ್ದೇನೆ ಎಂದು ಅವರು ನಂಬಿದ್ದರು. ಗಾಂಧಿಯವರು ತಮ್ಮ ಸ್ನೇಹಿತರು ಹಾಗೂ ಅತಿಥೇಯರ ಪರವಾಗಿ ನಿಜವನ್ನು ತಿರುಗಿಸುತ್ತಾರೆ ಎಂದು ಊಹಿಸುವುದಕ್ಕೂ ಸಾಧ್ಯವಿರಲಿಲ್ಲ. ಗಾಂಧಿಯವರ ನಿಲುವನ್ನು ನೋಡಿ ಬಹಳ ಮಂದಿಗೆ ಆಶ್ಚರ್ಯವಾಗಿತ್ತು. ಈ ಬಗ್ಗೆ ಬಿರ್ಲಾ ಏನು ಹೇಳುತ್ತಾರೆ ಎಂದು ಕುತೂಹಲಗೊಂಡಿದ್ದೆ. ಈ ವಿಷಯದ ಬಗ್ಗೆ ನಿಮಗೂ ಗಾಂಧಿಯವರಿಗೂ ಒಮ್ಮತವಿದೆಯೇ ಎಂದು ಕೇಳಿದೆ. ಬಿರ್ಲಾ ಹೇಳಿದರು. "ಇಲ್ಲವೇ ಇಲ್ಲ. ಗಾಂಧೀಜಿಗೆ ಅವರದೇ ಆದ ಅಭಿಪ್ರಾಯಗಳಿವೆ. ಒಮ್ಮೊಮ್ಮೆ ನನ್ನ ಹಾಗೂ ಅವರ ಅಭಿಪ್ರಾಯಗಳು ಕಾಕತಾಳೀಯವಾಗಿ ಒಂದೇ ಆಗಿರಬಹುದಷ್ಟೆ."

ಬಿರ್ಲಾ ಮತ್ತು ಗಾಂಧಿಯವರ ಅಭಿಪ್ರಾಯಗಳಲ್ಲಿ ಹೊಂದಿಕೆಯಾಗದ ಒಂದು ಕ್ಷೇತ್ರ ಬಹಳ ಮುಖ್ಯವಾದದ್ದು. ಆ ವಿಷಯದಲ್ಲಿ ಅವರ ನಾಟಕೀಯ ಭಿನ್ನಾಭಿಪ್ರಾಯ ಎಲ್ಲರ ಟೀಕೆಗೂ ಗುರಿಯಾಗಿತ್ತು. ಬಿರ್ಲಾ, ಯಂತ್ರದಿಂದ ಬಟ್ಟೆ ತಯಾರಿಸುವ ಉದ್ಯಮಿಯಾಗಿ ಈ ದೇಶದಲ್ಲಿ ಅಗ್ರಗಣ್ಯರಾಗಿದ್ದರು. ಆದರೆ ಯಂತ್ರದಿಂದ ತಯಾರಿಸಿದ ಬಟ್ಟೆಯ ಬಗ್ಗೆ ಗಾಂಧಿಯವರ ವಿರೋಧ ಐತಿಹಾಸಿಕವಾದದ್ದು. ಅವರ ದೃಷ್ಟಿಯಲ್ಲಿ ಚರಕಾ ಕೇವಲ ನೂಲು ತೆಗೆಯುವ ಸಾಧನವಾಗಿರಲಿಲ್ಲ. ಅದು ಒಂದು ಸಂಕೇತವಾಗಿತ್ತು. ಯಂತ್ರಕ್ಕೆ ಪ್ರತಿಯಾಗಿ ಅದು ಗುಡಿಕೈಗಾರಿಕೆಯನ್ನು ಪ್ರತಿನಿಧಿಸುವ ಚಿಹ್ನೆಯಾಗಿತ್ತು. ಅನಂತರ ಬಿರ್ಲಾರ ಒಂದು ಮಾತು ನನ್ನನ್ನು ವಿಸ್ಮಯಗೊಳಿಸಿತು. "ಅತಿ ಉನ್ನತ ಮಟ್ಟದ ಜೀವನಶೈಲಿಯಲ್ಲಿ ತಮಗೆ ನಂಬಿಕೆಯಿಲ್ಲ ಎಂಬುದು ಗಾಂಧೀ ಸಿದ್ಧಾಂತ". ಈ ಮಾತಿನ ಬಗ್ಗೆ ಬಿರ್ಲಾ ಹೇಳಿದ್ದು ಸರಿ ಎಂದು ಆಮೇಲೆ ನನಗೆ ಗೊತ್ತಾಯಿತು. ಜನಸಾಮಾನ್ಯರ ಮಟ್ಟ ಬಹಳ ಮೇಲೇರುವುದನ್ನು ಗಾಂಧಿ ಬಯಸುತ್ತಿರಲಿಲ್ಲ. ಜೀವನಮಟ್ಟ ಬಹಳ ಏರಿದಾಗ ಪಾಪ ಮತ್ತು ಲೋಲುಪತೆ ಹೆಚ್ಚುತ್ತದೆ ಎಂದು ಅವರು ಭಾವಿಸಿದರು. ಬಡತನವನ್ನು ಗಾಂಧಿ ವೈಭವೀಕರಿಸುವ ರೀತಿಯನ್ನು ಒಪ್ಪಿಕೊಳ್ಳಲು ಸ್ವತಃ ನೆಹರೂ ಕೂಡ ಸಿದ್ಧವಿರಲಿಲ್ಲ. ಈ ವಿಷಯಕ್ಕೆ ಬಂದಾಗ ಬಿರ್ಲಾ ಅವರು ನನ್ನ ಅಭಿಪ್ರಾಯವೇ ಬೇರೆ, ನಾನು ಕೈಗಾರಿಕೋದ್ಯಮಿ" ಎಂದರು.

ಈ ಸಲವಾದರೂ ಪೂರ್ಣ ಉತ್ತರ ಸಿಗಬಹುದು ಎಂಬ ನಿರೀಕ್ಷೆಯಿಂದ ಗಾಂಧಿಯವರ ಯಾವ ತತ್ವಗಳೊಂದಿಗೆ ನಿಮಗೂ ಅವರಿಗೂ ಸಮ್ಮತವಿದೆ ಎಂದು ಕೇಳಿದೆ. ಬಿರ್ಲಾ ಹೇಳಿದರು "ಸತ್ಯ, ಪ್ರಾಮಾಣಿಕತೆ, ನೇರ ನಡವಳಿಕೆ ಹಾಗೂ ಅತ್ಯುಚ್ಚ ನಡತೆಯಲ್ಲಿ ನನಗೆ ನಂಬಿಕೆ ಇದೆ." ಉದ್ಯಾನದ ಕೃತಕ ಕೊಳದ ಮೇಲೆ ಹಂತಹಂತವಾಗಿ ಬೀಳುತ್ತಿದ್ದ ಜಲಧಾರೆಯನ್ನು, ಎತ್ತರೆತ್ತರವಾಗಿ ಬೆಳೆಸಿದ್ದ ಮರಗಳ ಮೇಲಿನ ನೀಲಿ ಆಕಾಶವನ್ನೂ ತಮ್ಮ ಸೌಧದ ಗಾಜಿನ ಕಿಟಕಿಯ ಮೂಲಕ ನೋಡುತ್ತ ಬಿರ್ಲಾ ಹೇಳಿದರು "ನಾನು ಸರಳ ಜೀವನಶೈಲಿಯನ್ನು ಇಷ್ಟಪಡುತ್ತೇನೆ. ಸೇವಾ ಜೀವನದಲ್ಲಿ ನನಗೆ ನಂಬಿಕೆ ಇದೆ." ಕೆಲವು ಕ್ಷಣ ನಮ್ಮಿಬ್ಬರ ನಡುವೆ

ಮೌನ ನೆಲೆಸಿತ್ತು. "ನೀವು ನಿಮ್ಮ ಮಿಲ್ಲುಗಳಲ್ಲಿ ಇತರರಿಗಿಂತ ಹೆಚ್ಚಿನ ಸಮಾಜ ಕಲ್ಯಾಣ ಸೇವೆಗಳನ್ನು ಮಾಡುತ್ತೀರಾ ಅಥವಾ ಇತರರಿಗಿಂತ ಹೆಚ್ಚು ಕೂಲಿ ಕೊಡುತ್ತೀರಾ?" ಎಂದು ಪ್ರಶ್ನಿಸಿದೆ. ಬಿರ್ಲಾ ಹೇಳಿದರು "ನಾವು ಕೊಡುವ ಮಜೂರಿ ಅತ್ಯಧಿಕ ಎಂದೇ ಹೇಳಬೇಕು. ನಾವು ಮಾಡುವ ಸಮಾಜ ಕಲ್ಯಾಣ ಸೇವಾ ಕಾರ್ಯಗಳೂ ಅತ್ಯಧಿಕವಾಗಿವೆ. ಇತರ ಕಾರ್ಖಾನೆಗಳವರು ಏನು ಸೌಲಭ್ಯ ಒದಗಿಸುತ್ತಾರೋ ಅದನ್ನು ಬಿರ್ಲಾ ಮಿಲ್ಲುಗಳು ಒದಗಿಸುತ್ತವೆ. ಆಸ್ಪತ್ರೆಗಳು, ತೀರಾಸಾಮಾನ್ಯ ದರದ ಬಾಡಿಗಿಗೆ ಮನೆಗಳು, ಶುಲ್ಕರಹಿತ ಶಿಕ್ಷಣ, ಶಾಲಾಸೌಲಭ್ಯ ಇತ್ಯಾದಿ" ಈ ಮಾತುಗಳ ಹಿನ್ನೆಲೆಯಲ್ಲಿ ಬಿರ್ಲಾ ಕಾರ್ಮಿಕರ ಮಾತುಗಳು ನೆನಪಾದವು. ಶಾಲೆ, ಹಾಲು ಇತ್ಯಾದಿ ಸೌಲಭ್ಯಗಳೆಲ್ಲ ಮ್ಯಾನೇಜರುಗಳ ಹಾಗೂ ಹಾಜರಾತಿ ತೆಗೆದುಕೊಳ್ಳುವವರ ಮಕ್ಕಳ ಪಾಲಿಗೆ. ನಾನು ಇನ್ನೂ ಕೆಲವು ಪ್ರಶ್ನೆಗಳನ್ನು ಕೇಳಿದೆ. ಅವುಗಳು ಈಗ ಪ್ರಸ್ತಾಪಿಸಿದ ಕಾರ್ಮಿಕ ಕಾನೂನು ಕಾರ್ಮಿಕರ ಪರಿಹಾರಧನ, ಸಾಮಾಜಿಕ ವಿಮೆ ಮುಂತಾದವುಗಳಿಗೆ ಸಂಬಂಧಿಸಿದವುಗಳು. ವಿಮೆ ನೀಡುವ ಬಗ್ಗೆ ನನ್ನ ಅಭ್ಯಂತರವೇನೂ ಇಲ್ಲ. ಇದನ್ನು ಮಾಲೀಕರು ಕೊಡಬೇಕಾಗಿಲ್ಲ. ಬಳಕೆದಾರರೇ ಕೊಡುತ್ತಾರೆ" ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದರು. ಮುಷ್ಕರದ ಹಕ್ಕು ಇರಬೇಕು ಎನ್ನುತ್ತೀರಾ? ಎಂದೆ. "ಎಲ್ಲವೂ ಸರಿಯಿದ್ದ ಮೇಲೆ ಮುಷ್ಕರ ಯಾಕೆ ಬೇಕು?" ಅಂದರು. ನಿಮ್ಮ ತತ್ವಗಳಿಗೂ ಗಾಂಧಿಯವರ ತತ್ವಗಳಿಗೂ ಎಲ್ಲೆಲ್ಲಿ ಸಾಮ್ಯವಿದೆ? "ಯಾವ ಸಾಮ್ಯವೂ ಇಲ್ಲ. ನಾನು ಕೈಗಾರಿಕೋದ್ಯಮಿ ಮತ್ತು ಗಿರಣಿ ಮಾಲೀಕ. ಆತ ಸಂತ. ಹೀಗಿರುವಾಗ ಸಾಮ್ಯ ಎಲ್ಲಿನದು? ಆದರೆ ಅವರ ಎಲ್ಲ ಉತ್ತಮ ಅಂಶಗಳೂ ನನ್ನನ್ನು ಆಕರ್ಷಿಸಿವೆ. ನಿಮ್ಮ ಸಂಕಲ್ಪ ಒಳ್ಳೆಯದಿದ್ದರೆ ಒಳ್ಳೆಯ ವ್ಯಕ್ತಿಗಳ ಪ್ರಭಾವ ನಿಮ್ಮ ಮೇಲೆ ಆಗಿಯೇ ಆಗುತ್ತದೆ."

ನಿಮ್ಮ ಮಿಲ್ಲುಗಳ ಕಾರ್ಮಿಕರ ಸಮಾಜ ಕಲ್ಯಾಣದ ಬಗ್ಗೆ ಗಾಂಧಿಯವರು ನಿಮಗೇನಾದರೂ ತಿಳುವಳಿಕೆ, ಸಲಹೆ ಕೊಡುತ್ತಾರಾ ಎಂದು ಪ್ರಶ್ನಿಸಿದೆ. ನನ್ನ ಮಿಲ್ಲುಗಳಲ್ಲಿ ನಾನು ಏನು ಮಾಡಬೇಕು, ಏನು ಮಾಡಬಾರದು ಎಂಬ ಬಗ್ಗೆ ಅವರೇನೂ ಹೇಳುವುದಿಲ್ಲ ಎಂದರು. ಇರಬಹುದೇನೋ ಎಂದು ಅಂದುಕೊಳ್ಳುತ್ತಾ ನಾನು ಹೊರಟೆ. ಪ್ರತಿದಿನವೂ ಗಾಂಧಿ ನೂರಾರು ಮಂದಿಗೆ ನೂರಾರು ವಿಷಯಗಳ ಬಗ್ಗೆ ಬೋಧಿಸುತ್ತ ಇರುತ್ತಾರೆ. ಬದುಕಿನ ತೀರ ವಯಕ್ತಿಕ ವಿಚಾರಗಳಿಂದ ಹಿಡಿದು ರಾಷ್ಟ್ರೀಯ ನೀತಿಯ ಮೇಲೆ ಪರಿಣಾಮ ಬೀರುವಂಥ ವಿಷಯ ಗಳವರೆಗೂ ಅವರು ಸಲಹೆಗಳನ್ನು ಕೊಡುತ್ತಲೇ ಇರುತ್ತಾರೆ. ಗಿರಣಿಗಳಲ್ಲಿ ತಮ್ಮ ಕಾರ್ಮಿಕರನ್ನು ಹೇಗೆ ನೋಡಿಕೊಳ್ಳಬೇಕು ಎಂಬ ಬಗ್ಗೆ ಅವರು ಬಿರ್ಲಾ ಅವರಿಗೇಕೆ ತಿಳಿಹೇಳಬಾರದು? ಕಾರ್ಖಾನೆಗಳ ಕಾರ್ಮಿಕರ ದುಃಸ್ಥಿತಿ ಗಾಂಧಿಯವರಿಗೆ ತಿಳಿಯದ ವಿಷಯವೇನಲ್ಲ. ಅದನ್ನು ಅವರು ಅರಿತಿದ್ದರು. ಆದರೆ ಅದನ್ನು ಕಾರ್ಯರೂಪಕ್ಕೆ ತರುವಂಥ ಸ್ಥಾನದಲ್ಲಿದ್ದವರು ಬಿರ್ಲಾ. ಸಹಸ್ರಾರು ಕಾರ್ಮಿಕರ ಬದುಕಿನ ಸ್ಥಿತಿಗತಿಗಳನ್ನು ನಿರ್ಣಯಿಸುವ ಶಕ್ತಿ ಅವರಿಗಿತ್ತು.

ಸುಮಾರು ಕಾಲುಶತಮಾನದವರೆಗೆ ಗಾಂಧಿ ಬಿರ್ಲಾ ಗೃಹದಲ್ಲಿಯೇ ತಂಗುತ್ತಿದ್ದರು. ಇದೇ ಸೂರಿನ ಕೆಳಗೆ, ಗಾಂಧಿಯವರ ನಿಷ್ಠಾವಂತ ಅನುಯಾಯಿ ಎಂದು ಹೇಳಿಕೊಳ್ಳುವ

ಈ ಕೈಗಾರಿಕೋದ್ಯಮಿಯೂ ಇದ್ದರು. ಟ್ರಸ್ಟೀಶಿಪ್‌ನ ಪರಿಕಲ್ಪನೆಯನ್ನು ಅನುಷ್ಠಾನಕ್ಕೆ ತರುವುದಕ್ಕೆ ಇದಕ್ಕಿಂತ ಒಳ್ಳೆಯ ಅವಕಾಶ ಇರಲು ಸಾಧ್ಯವೆ? ಯಾವ ಕೈಗಾರಿಕೋದ್ಯಮಿಗೂ ಸಿಗದಂಥ ಗಾಂಧೀಜಿ ಸಾನಿಧ್ಯ ದೀರ್ಘಕಾಲದವರೆಗೆ ಬಿರ್ಲಾರಿಗೆ ಸಿಕ್ಕಿತ್ತು. ಆದರು ಬಿರ್ಲಾ ಇತರರೂ ಕೈಗಾರಿಕೆಗಳಿಗಿಂತ ಭಿನ್ನವಾದ ಒಂದೇ ಒಂದು ಅಂಶವನ್ನೂ ಅನುಷ್ಠಾಕ್ಕೆ ತರಲಿಲ್ಲ. ಅಲ್ಪಸ್ವಲ್ಪ ಪೆನ್ಷನ್ ಯೋಜನೆ ಅಥವಾ ಅಸ್ಪೃಶ್ಯ ಕಾರ್ಮಿಕ ಗೂಡುಗಳಲ್ಲಿ ಕಿಂಚಿತ್ ಬದಲಾವಣೆ..... ಯಾವುದನ್ನೂ ಅವರು ಮಾಡಿರಲಿಲ್ಲ. ಪ್ರತಿಸ್ಪರ್ಧಿ ಕೈಗಾರಿಕೋದ್ಯಮಿಗಳ ಕಾರ್ಮಿಕರ ಸ್ಥಿತಿಗಳಿಗಿಂತ ಬಿರ್ಲಾ ಕಾರ್ಮಿಕರ ಸ್ಥಿತಿಗತಿಗಳು ಯಾವ ರೀತಿಯಲ್ಲೂ ಭಿನ್ನವಾಗಿರಲಿಲ್ಲ. ಆದರೆ ಅವರ ದೃಷ್ಟಿಯಲ್ಲಿ ಅದೇ ಅತ್ಯುತ್ತಮ ಸೌಲಭ್ಯವಾಗಿತ್ತು.

Trusteeshipಗೆ ದೃಢಸಂಕಲ್ಪ ಬೇಕಾಗುತ್ತದೆ ಎಂಬ ಮಾತನ್ನು ಹೇಳುವ ಮೂಲಕ ಬಿರ್ಲಾ ಮೂಲಸತ್ಯವನ್ನೇ ಹೇಳಿದ್ದರು. Trusteeship ಯೋಜನೆಯ ದೌರ್ಬಲ್ಯವನ್ನು ಅವರೇ ತೋರಿಸಿಕೊಟ್ಟಿದ್ದರು.

ವ್ಯಕ್ತಿ ನಿಜವಾಗಿ ಎಷ್ಟರಮಟ್ಟಿಗೆ ಧರ್ಮದರ್ಶಿಯಾಗುತ್ತಾನೆ ಎನ್ನುವುದು ಆತನ ಆತ್ಮಬಲವನ್ನು ಅವಲಂಬಿಸಿದೆ ಎಂದಿದ್ದರು ಅವರು. ಗಾಂಧಿ ಬಗೆಗೆ ಅಷ್ಟೆಲ್ಲ ಪ್ರೀತಿ ಇಟ್ಟಿದ್ದ ಬಿರ್ಲಾ ಅವರಿಗೇ ಧರ್ಮದರ್ಶಿಯಾಗಲು ಅಗತ್ಯವಾದಷ್ಟು ಪ್ರಮಾಣದ 'ಆಧ್ಯಾತ್ಮಿಕ ಶಕ್ತಿ'ಯನ್ನು ಧರ್ಮಬುದ್ಧಿಯನ್ನು ಮೈಗೂಡಿಸಿಕೊಳ್ಳಲು ಆಗಲಿಲ್ಲ ಎಂದ ಮೇಲೆ ಗಾಂಧೀವಲಯದ ಹೊರಗಿದ್ದ ಕೈಗಾರಿಕೋದ್ಯಮಿಗಳು, ಸಂಪತ್ತಿನ ಮಾಲೀಕರು, ಮಹಾರಾಜರುಗಳು, ವ್ಯಾಪಾರೋದ್ಯಮಿಗಳು ಈ ಆಧ್ಯಾತ್ಮಿಕ ಶಕ್ತಿಯನ್ನು ಬೆಳೆಸಿಕೊಳ್ಳಲು ಹೇಗೆ ತಾನೇ ಸಾಧ್ಯ?

ಸೇಠ್ ದಾಲ್ಮಿಯಾ :

ಭಾರತದ ಕೈಗಾರಿಕೋದ್ಯಮಿಗಳಲ್ಲಿ ಬಲಿಷ್ಠ ತ್ರಿಮೂರ್ತಿಗಳಾದ ಬಿರ್ಲಾ, ದಾಲ್ಮಿಯಾ, ಟಾಟಾ - ಈ ಮೂವರ ಪೈಕಿ ಬಿರ್ಲಾ ಮತ್ತು ಟಾಟಾ ಅವರು "Who is who in India"ದಲ್ಲಿ ತಮ್ಮ ಪರಿಚಯಗಳನ್ನು ಕೊಡುವಾಗ ಅತ್ಯಂತ ಸಂಕ್ಷಿಪ್ತವಾಗಿ ಹಾಗೂ ವಸ್ತುಸ್ಥಿತಿಯ ವಿವರಗಳನ್ನು ಮಾತ್ರ ಕೊಟಿಟಿದ್ದಾರೆ. ಅಮೆರಿಕಾದಲ್ಲಿರುವಂತೆ ಪ್ರಸಿದ್ಧರಾದ ವ್ಯಕ್ತಿಗಳು ತಮ್ಮ ಜೀವನ ವಿವರಗಳನ್ನು ತಾವೇ ಬರೆದುಕೊಡುತ್ತಾರೆ. ಆದರೆ ಭಾರತದಲ್ಲಿ ತಾವು ಮಾಡಿದ ಅನಾಮಿಕ ದಾನಧರ್ಮಗಳ ವಿವರಗಳನ್ನೂ ಕೂಡ ಸೇರಿಸುವುದುಂಟು. ಇದು ತಪ್ಪೆಂದು ಅವರು ಭಾವಿಸುವುದಿಲ್ಲ. ಉಚಿತವೇ ಎಂಬ ಪ್ರಶ್ನೆ ಅವರಿಗೆ ಬಂದಂತಿಲ್ಲ. ದಾಲ್ಮಿಯಾ ವಿವರಗಳಂತೂ ಆಡಂಬರಶೈಲಿಯ ಅತ್ಯುತ್ಪ್ರೇಕ್ಷೆಯ ಬರಹದಂತಿವೆ. "ಅವರು ನೀಡಿರುವ ದಾನಗಳಿಗೆ ಲೆಕ್ಕವೇ ಇಲ್ಲ. ಆದರೆ ಅವರು ಪ್ರಚಾರ ಬಯಸುವುದಿಲ್ಲವಾದ್ದರಿಂದ ಬಹಳ ಜನಕ್ಕೆ ಈ ವಿಷಯ ತಿಳಿದಿಲ್ಲ.... ಒಬ್ಬ ಶ್ರೀಮಂತನಿಗೆ ಎಂದಿಗೂ ಬಡವನ ಜೀವನ ಸೌಂದರ್ಯ ತಿಳಿಯುವುದು ಸಾಧ್ಯವಿಲ್ಲವಾದ್ದರಿಂದ ಅದನ್ನು ಅನುಭವಿಸುವುದಕ್ಕಾಗಿಯೇ ಅವರು ತಮ್ಮ ಐಹಿಕ ಸಂಪತ್ತನ್ನೆಲ್ಲ ತೊರೆದಿದ್ದಾರೆ. ಸ್ವ ಇಚ್ಛೆಯಿಂದ ಬಡತನದ ಬದುಕನ್ನು ಸ್ವೀಕರಿಸಿದ್ದಾರೆ."ಹೀಗೆ ಅವರ ಪ್ರವರ ಸಾಗುತ್ತದೆ.

ಸೇಠ್ ದಾಲ್ಮಿಯಾ ಅವರು ಭಾರತೀಯ ಉಪಖಂಡದಲ್ಲಿ ಪ್ರವೇಶಿಸದೇ ಇದ್ದಂತಹ ಕೈಗಾರಿಕಾ ಕ್ಷೇತ್ರ ಯಾವುದೂ ಇರಲಿಲ್ಲ. ಇವರ ಉದ್ಯಮಗಳು ಪಾಕಿಸ್ತಾನಕ್ಕೂ ಹಬ್ಬಿದ್ದವು. ಸಿಮೆಂಟ್, ಏರ್‌ಲೈನ್ಸ್, ರೈಲ್ವೆ, ವಿದ್ಯುತ್ ಕಂಪನಿಗಳು, ರಾಸಾಯನಿಕ ಕಾರ್ಖಾನೆಗಳು, ಪ್ಲೈವುಡ್, ಕಲ್ಲಿದ್ದಲು ಗಣಿಗಳು, ಸಕ್ಕರೆ, ಸೋಪು, ಮಾರ್ಗರಿನ್, ಟೆಕ್ಸ್‌ಟೈಲ್ಸ್ ಬ್ಯಾಂಕುಗಳು, ಇನ್‌ಶೂರೆನ್ಸ್ ಹಾಗೂ ವೃತ್ತಪತ್ರಿಕೆಗಳ ಒಂದು ದೊಡ್ಡ ಸರಣಿ. ಇದರಲ್ಲಿ ಬಾಂಬೆಯ ಪ್ರತಿಷ್ಠಿತ ದಿನ ಪತ್ರಿಕೆ The Time of India ಹಾಗೂ ಪಾಕಿಸ್ತಾನದ ಪ್ರಸಿದ್ಧ ಪತ್ರಿಕೆ The civil and Military Gazettee ಸೇರಿವೆ.

ಜನಸಾಮಾನ್ಯರಿಗೆ ದಾಲ್ಮಿಯಾ ತಮ್ಮ ಬಹುಸಂಖ್ಯಾತ ಉದ್ಯಮಗಳಿಗಿಂತ ಬಹುಸಂಖ್ಯಾತ ಪತ್ನಿಯರ ಕಾರಣದಿಂದ ಪ್ರಸಿದ್ಧರಾಗಿದ್ದರು. ಈ ಪತ್ನಿಯರ ಸಂಖ್ಯೆ ಬಗ್ಗೆ ಒಂದೊಂದು ವರದಿ ಒಂದೊಂದು ರೀತಿ ಇದೆ. ದಾಲ್ಮಿಯಾ ಬರೆದಿರುವ ಬೃಹತ್ ಆತ್ಮಕಥನಗಳೆಲ್ಲವೂ ಈ ಅಂಶದ ಬಗ್ಗೆ ಕುತೂಹಲದ ಘಟ್ಟಕ್ಕೆ ಬಂದು ನಂತರ ಅಸ್ಪಷ್ಟತೆಯಲ್ಲಿ ಕೊನೆಯಾಗುತ್ತಿದ್ದವು. "ನಾನು ಅನೇಕ ಸಲ ಮದುವೆಯಾಗಿದ್ದೇನೆ. ನಾನು ಅನೇಕ ಬಾರಿ ಪಾಪ ಮಾಡಿದ್ದೇನೆ. ಒಬ್ಬ ಸಮಾನ್ಯ ಮನುಷ್ಯನಾಗಿದ್ದರೆ ಇಷ್ಟೊಂದು ಪಾಪಗಳನ್ನು ಮಾಡಲು ಧೈರ್ಯವಿರುತ್ತಿರ ಲಿಲ್ಲವೇನೊ" ಎಂದೂ ಬರೆದಿದ್ದಾರೆ. ಇಂತಹ ಕುತೂಹಲಕಾರಿ ಅಂಶ ಗಳಿಂದಾಗಿಯೇ ನಾನು ದಾಲ್ಮಿಯ್ಯಾ ಭವನಕ್ಕೆ ಹೋದೆ. ನವದೆಹಲಿಯಲ್ಲಿ ಈ ಭವನ ಬಿರ್ಲಾ ಗೃಹಕ್ಕೆ ಸಮೀಪ ದಲ್ಲಿಯೇ ಇದೆ. ಅವರ ಹೆಂಡತಿಯೊಬ್ಬರು ನನ್ನನ್ನು ಬರಮಾಡಿ ಕೊಂಡರು. ನಿರ್ಜೀವ ಮುಖಭಾವದ ಪುಟ್ಟ ಆಕೃತಿಯ ಹೆಂಗಸು. ತನ್ನ ಪತಿಯನ್ನು ನೋಡುವುದಕ್ಕೆ ವಿದೇಶೀ ಮಹಿಳೆ ಬಂದಿದ್ದಾಳೆ ಎಂಬ ಸಂತಸವನ್ನು ತೋರಗೊಡದ ಮುಖಭಾವದಲ್ಲಿ ಆಕೆ ನನ್ನನ್ನು ಒಂದು ದೊಡ್ಡ ಡ್ರಾಯಿಂಗ್ ರೂಂಗೆ ಕರೆದೊಯ್ದಳು. ನಮ್ಮ ಪೂರ್ವಭಾವೀ ಮಾತುಕಥೆ ಆರಂಭವಾಯಿತು. "ಭಾರತದಲ್ಲಿ ನಿಮಗೆ ಯಾರು ಗೊತ್ತು" ಎಂದು ಆಕೆ ಕೇಳಿದರು. ಇದೊಂದು ನಿಗೂಢ ಪ್ರಶ್ನೆ. ಆಕೆ ಯಾವ ಉದ್ದೇಶದಿಂದ ಹಾಗೆ ಕೇಳಿದ್ದಾರೆ ಎಂದು ನನಗೆ ಗೊತ್ತಾಯಿತು. ನಾನು ಏನೋ ಉತ್ತರಿಸಿದೆ. ಅದರಿಂದ ಆಕೆಗೆ ತೃಪ್ತಿಯಾಗಲಿಲ್ಲ. ಆಕೆ ಸ್ಪಷ್ಟವಾಗೇ ಕೇಳಿದರು ಬಿರ್ಲಾಗಳು ನಿಮಗೆ ಗೊತ್ತೆ? ಓ, ಇದು ಅವರಿಗೆ ಬೇಕಾಗಿದ್ದ ವಿಷಯ. ಬಿರ್ಲಾ ಮೇಲಿನ ಅಸೂಯೆಯ ಆಧಾರದ ಮೇಲೆ ದಾಲ್ಮಿಯಾ ಉದ್ಯಮ ಜಗತ್ತು ರೂಪುಗೊಂಡಿದೆ ಎಂಬುದನ್ನು ನಾನು ಕೇಳಿದ್ದೆ. ಆದರೆ ಯುವಕರೂ ಆಕರ್ಷಕ ವ್ಯಕ್ತಿತ್ವದವರೂ ಆಗಿದ್ದ ಬಿರ್ಲಾ ಎಂದಿಗೂ ತಮ್ಮ ಮೊದಲ ಸ್ಥಾನ ಬಿಟ್ಟುಕೊಟ್ಟಿರಲಿಲ್ಲ. ಬಿರ್ಲಾ, ಗಾಂಧಿಯನ್ನು ತಮ್ಮ ಆಶ್ರಯದಲ್ಲಿಟ್ಟುಕೊಂಡರು. ದಾಲ್ಮಿಯಾ ಜಿನ್ನಾರಿಗೆ ಒತ್ತಾಸೆಯಾಗಿ ನಿಂತರು. ಬಿರ್ಲಾ, ಕಾಂಗ್ರೆಸ್ ಪಕ್ಷಕ್ಕೆ ಹಣ ಒದಗಿಸತೊಡಗಿದರು. ದಾಲ್ಮಿಯಾ ಮುಸ್ಲಿಂಲೀಗ್‌ಗೆ ಹಣ ಒದಗಿಸಿದರು. ಆದರೆ ದಾಲ್ಮಿಯಾ ಸಂಪ್ರದಾಯನಿಷ್ಠ ಹಿಂದೂ ಕೂಡ ಆಗಿದ್ದರಿಂದ ಹಿಂದೂ ಮಹಾಸಭೆಗೂ ತಮ್ಮ ಔದಾರ್ಯದ ಸ್ವಲ್ಪ ಭಾಗವನ್ನು ಹರಿಸಿದರು. ಸ್ವಾತಂತ್ರ್ಯ ಬಂದ ನಂತರ ಬಿರ್ಲಾ ಭಾರತದ ನಂಬರ್ ೧ ಉದ್ಯಮಿಯಾದರು. ಹೀಗಾಗಿ ದಾಲ್ಮಿಯಾ ಪಾಕಿಸ್ತಾನದ ಉದ್ಯಮ ಗಾರುಡಿಗನಾಗಲು ನಿರ್ಧರಿಸಿದರು. ಆದರೆ ಹಿಂದೂ ಮುಸ್ಲಿಂ ರಕ್ತಪಾತದ ಘರ್ಷಣೆಯಿಂದಾಗಿ

ದಾಲ್ಮಿಯಾ ಹಿಂದೂಗಳ ಸಹಾನುಭೂತಿಯನ್ನು ಕಳೆದುಕೊಂಡರು. ದಾಲ್ಮಿಯಾ ಜೈನ್ ಹಣಕಾಸು ಜಾಲಕ್ಕೂ ಅದರ ಪರಿಣಾಮ ತಟ್ಟಿತು. ಪಾಕಿಸ್ತಾನದಲ್ಲಿ ಹೂಡಿಕೆ ಮಾಡಿದ್ದು ಇವರಿಗೆ ತಿರುಗುಬಾಣವಾಯಿತು. ಗಾಂಧಿ ಅನುಯಾಯಿಯಾಗುವುದಕ್ಕೆ ಕಾಲ ಮಿಂಚಿತ್ತು. ಈಗ ಹೊಸದೊಂದು ದಾರಿಯನ್ನು ಹುಡುಕಿಕೊಳ್ಳಬೇಕಿತ್ತು.

ಕಾಂಗ್ರೆಸ್ಸಿನ ಉಗ್ರ ಹಿಂದೂವಾದಿಗಳು ಗೋರಕ್ಷಣೆಯ ಶಾಸನಕ್ಕಾಗಿ ಒತ್ತಾಯಪಡಿಸಿದಾಗ ಅಲ್ಲಿ ದಾಲ್ಮಿಯ ಅವಕಾಶ ಕಂಡುಕೊಂಡರು. ಕಾಂಗ್ರೆಸ್ ಒಂದು ಮಿಶ್ರಸಂಸ್ಥೆಯಾಗಿತ್ತು. ಅಲ್ಲಿದ್ದ ಮುಸ್ಲಿಂ ಸದಸ್ಯರಿಗೆ ಹಸು ಪವಿತ್ರ ಪ್ರಾಣಿಯಲ್ಲ. ಕೆಲವು ಆಧುನಿಕ ಹಿಂದೂಗಳು ಎಷ್ಟರಮಟ್ಟಿಗೆ ಸಂಪ್ರದಾಯದಿಂದ ದೂರವಾಗಿದ್ದರೆಂದರೆ Beef steakನ್ನು ಆಗಾಗ ಚಪ್ಪರಿಸಿ ಕೊಂಡು ತಿನ್ನುತ್ತಿದ್ದರು. ಗೋವನ್ನು ಕರುಣೆಯಿಂದ ನೋಡಬೇಕು ಎಂಬ ಬಗ್ಗೆ ಕಾಂಗ್ರೆಸ್ಸಿಗೆ ಒಟ್ಟಾರೆ ಒಲವಿತ್ತು. ಆದರೆ ಗೋರಕ್ಷಣೆಯ ವಿಷಯವನ್ನು ರಾಷ್ಟ್ರದ ಕಾನೂನಿನಲ್ಲಿ ಸ್ವೀಕರಿಸಬೇಕು ಎಂದು ಯಾರಿಗೂ ಅಷ್ಟು ತೀವ್ರವಾಗಿ ಅನ್ನಿಸುತ್ತಿರಲಿಲ್ಲ. ಇಲ್ಲಿ ಹೋರಾಟಕ್ಕೆ ಸಾಕಷ್ಟು ಅವಕಾಶವಿರುವುದನ್ನು ದಾಲ್ಮಿಯಾ ಕಂಡುಕೊಂಡರು. ಗೋವಧೆಯ ವಿರುದ್ಧ ಹೋರಾಟ ಆರಂಭಿಸಿದರೆ ಅದು ಹಿಂದೂ ಮತನಿಷ್ಠರಾದ ವೋಟುದಾರರ ಮೇಲೆ ಭಾರೀ ಪ್ರಭಾವ ಬೀರುತ್ತದೆ. ಹೀಗಾಗಿ ದಾಲ್ಮಿಯಾ ಈ ವಿಷಯವನ್ನು ಗಟ್ಟಿಯಾಗಿ ಹಿಡಿದುಕೊಂಡರು.

ದಾಲ್ಮಿಯಾ ನನ್ನನ್ನು ನೋಡಲು ಸಿದ್ಧವಾಗಿದ್ದಾರೆ ಎಂದು ತಿಳಿದುಬಂದಾಗ ನನ್ನನ್ನು ಅವರ ಭವನದ ಇನ್ನೊಂದು ಭಾಗಕ್ಕೆ ಕರೆದೊಯ್ದರು. ಶ್ರೀಮತಿ ದಾಲ್ಮಿಯಾ ಬಾಗಿಲು ತೆಗೆದು ನನ್ನನ್ನು ಒಳಗೆ ಕಳಿಸಿ ಹೋದರು.

ನಾನು ಸೇಠ್ ದಾಲ್ಮಿಯಾ ಅವರ ಸಮ್ಮುಖದಲ್ಲಿದ್ದೇನೆಂಬುದನ್ನು ಅರ್ಥಮಾಡಿಕೊಳ್ಳಲು ನನಗೆ ಸ್ವಲ್ಪ ಹೊತ್ತು ಬೇಕಾಯಿತು. ಹಾಸಿಗೆಯ ಮೇಲೆ ಮಲಗಿಕೊಂಡೇ ನನ್ನನ್ನು ಬರಮಾಡಿಕೊಂಡ ಈ ಉದ್ಯಮಿಯನ್ನು ಕಂಡು ಅತ್ಯಾಶ್ಚರ್ಯವಾಯಿತು. ಆ ಕೋಣೆ ಸರಳವಾಗಿತ್ತು. ಕಾರ್ಪೆಟ್ ಕೂಡ ಇರಲಿಲ್ಲ. ಕೋಣೆಯ ಮಧ್ಯಕ್ಕೆ ಸರಿಯಾಗಿ ಹಾಸಿಗೆ. ಸುತ್ತಮುತ್ತ ಯಾವ ಪೀಠೋಪಕರಣವೂ ಇಲ್ಲ. ಹೊರಗೆ ಹೋಗದಂತೆ ತಡೆ ಒಡ್ಡಿದರೆ ಕೈಕಾಲು ಬಡಿದುಕೊಂಡು ರಂಪ ಮಾಡುವ ಮಗುವಿನ ಶೈಲಿಯಲ್ಲಿ ಮಾತಾಡುತ್ತಿದ್ದ ದಾಲ್ಮಿಯಾ ವಿಚಿತ್ರವಾದ ದೊಡ್ಡಕಣ್ಣಿನ, ತಂತಿಯಂತೆ ಸಣಕಲು ದೇಹದ ವ್ಯಕ್ತಿ. ಆತನ ಮಾತು, ನಗು ಎಲ್ಲವೂ ಜೋರು ದನಿಯಲ್ಲಿದ್ದವು. ಆತ ಏನೋ ಮಾತಾಡುತ್ತಿದ್ದ. ಅದೇನೆಂದು ನನಗೆ ಸ್ಪಷ್ಟವಾಗಲಿಲ್ಲ. ಬಹುಶಃ ಗೋವಿನ ಬಗ್ಗೆ ಮಾತಾಡುತ್ತಿರಬಹುದು ಎಂದು ಊಹಿಸಿದೆ. ಆದರೆ ಆತ ಅದಕ್ಕಿಂತ ದೊಡ್ಡ ವಿಷಯದ ಬಗ್ಗೆ ಮಾತಾಡುತ್ತಿದ್ದಾನೆ ಎಂದು ಕ್ರಮೇಣ ಅರ್ಥವಾಯಿತು. ಆತ ಇಡೀ ಜಗತ್ತಿನ ಬಗ್ಗೆಯೇ ಮಾತಾಡುತ್ತಿದ್ದರು.

'ನಾವು ಎಲ್ಲ ಎಲ್ಲೆಗಳನ್ನೂ ಅಳಿಸಿ ಹಾಕಿ ಅಂತರರಾಷ್ಟ್ರೀಯ ವಾದವನ್ನು ಜಾರಿಗೆ ತರಬೇಕು. ರಾಷ್ಟ್ರಗಳು ಎಂದು ಕರೆಯಲ್ಪಡುವ ಈ ಅರ್ಥಹೀನ ತುಂಡುಗಳನ್ನು ನಿರ್ಮೂಲ

ಮಾಡಬೇಕು. ಎಲ್ಲ ಕಡೆಯೂ ಒಂದೇ ಭಾಷೆ ಇರಬೇಕು. ಒಂದೇ ರೀತಿಯ ಕರೆನ್ಸಿ ಇರಬೇಕು. ಶಾಶ್ವತವಾದ ಸತ್ಯವನ್ನು ಅನುಸರಿಸಬೇಕು. ಏಕೈಕ ಪರಮೋಚ್ಛ ಧರ್ಮವಿರಬೇಕು. ಒಂದೇ ಬಾವುಟ-ಅದು ಏಕತೆಯ ಬಾವುಟವಾಗಿರಬೇಕು". ಇದು ಆತನ ಏಕ ಜಗತ್ತಿನ ಸಿದ್ಧಾಂತ.

ವೆಂಡೆಲ್ ವಿಲ್ಕಿಯ "One world" ಓದಿದ್ದೀರಾ ಎಂದು ಕೇಳಿದೆ. ಅದನ್ನು ಆತ ಓದಿರಲಿಲ್ಲ. ಆತನ ಸೆಕ್ರೆಟರಿ ಓದಿದ್ದ. "ಆದರೇನು ಈ ಯೋಚನೆ ನನಗೆ ಮೊದಲೇ ಬಂದಿತ್ತು" ಎಂದು ಆತ ಉತ್ಸಾಹದಿಂದ ಹೇಳಿದ. ದಾಲ್ಮಿಯಾರ ಮುಂದಿನ ಹೇಳಿಕೆಗಳು ಅವರ ಈ 'ಏಕ ಜಗತ್ತಿ'ನ ವಾದವನ್ನು ಮತ್ತಷ್ಟು ಸ್ಪಷ್ಟಪಡಿಸಿದವು. ಜನರಿಂದ ಚುನಾಯಿತನಾದ ಒಬ್ಬ ಸರ್ವಾಧಿಕಾರಿ ಇರಬೇಕು. ಆತನಿಗೆ ಅನಿರ್ಬಂಧಿತವಾದ ಅಧಿಕಾರಗಳಿರಬೇಕು. ಮತ್ತು ಕನಿಷ್ಠ ಹತ್ತು ವರ್ಷ ಕಾಲಾವಕಾಶವನ್ನಾದರೂ ಆತನಿಗೆ ಕೊಡಬೇಕು. ಸರ್ವಾಧಿಕಾರಿಗಳಿಗೆ ಅಲ್ಪಕಾಲದ ಅಧಿಕಾರ ಕೊಡುವುದು ನನಗೆ ಸಮ್ಮತವಿಲ್ಲ". ಇಂತಹ ಉಚ್ಛ ಅಧಿಕಾರಕ್ಕೆ ಆತನ ಅಭಿಪ್ರಾಯದಲ್ಲಿ ಯಾರು ತಕ್ಕವರು ಎಂಬುದನ್ನೇನೂ ಆತ ಹೇಳಲಿಲ್ಲ. ಆದರೆ ಇಂತಹ ಉದ್ದೇಶ ಸಾಧನೆಗಾಗಿ ತಾನು ತನ್ನ ಕೈಲಾದ ಸೇವೆ ಸಲ್ಲಿಸುವುದಾಗಿಯೂ ಮತ್ತು ಈ ಮಹೋದ್ದೇಶವನ್ನು ತಾನು ಏಕಾಂಗವೀರನಾಗಿಯೇ ಸಾಧಿಸುವ ವಿಶ್ವಾಸ ಹೊಂದಿರುವುದಾಗಿಯೂ ಆತ ಹೇಳಿದ.

ಆತನ ಮಾತು ನಿರರ್ಥಕವಾಗಿದ್ದರೂ ಆತನನ್ನು ನಿರರ್ಥಕವೆಂದು ಸುಲಭವಾಗಿ ತಳ್ಳಿ ಹಾಕುವಂತಿರಲಿಲ್ಲ. ಆತ ಈಗಲೂ ಕೂಡ, ಹೊಸದಾಗಿ ಸ್ವಾತಂತ್ರ್ಯ ಗಳಿಸಿದ ಭಾರತದ ಬಹುಗಣನೀಯ ಪ್ರಮಾಣದ ಸಂಪನ್ಮೂಲ, ಹಣಕಾಸು ಹಾಗೂ ಕೈಗಾರಿಕೆಗಳನ್ನು ನಿಯಂತ್ರಿಸುತ್ತಿದ್ದ ಕೆಲವೇ ಕೆಲವರಲ್ಲಿ ಒಬ್ಬನಾಗಿದ್ದ. ಎಲ್ಲರಿಗೂ ವಸತಿ, ಅನ್ನ, ಶಿಕ್ಷಣ ಇರಬೇಕು ಎಂದು ಹೇಳಿದ. ಆದರೆ ಅದನ್ನು ಹೇಗೆ ಜಾರಿಗೆ ತರಬಹುದು ಎಂಬ ಬಗ್ಗೆ ಆತನಿಗೆ ಯಾವ ಯೋಜನೆಯೂ ಇಲ್ಲವಲ್ಲ ಎಂದು ನಾನು ಚಿಂತಿಸಿದೆ. ಈಚಿನ ದಿನಗಳಲ್ಲಿ ಆತ ತನ್ನ ಮಾಲಿಕತ್ವದ ಪತ್ರಿಕೆಗಳಿಗೆ ಬರೆಯುತ್ತಿದ್ದ ಸಂಪಾದಕೀಯಗಳಲ್ಲಿ ಗೋವನ್ನು ಆರ್ಥಿಕವಾಗಿ ಬಳಸಿಕೊಳ್ಳುವುದೇ ಹಣಕಾಸಿನ ಉಬ್ಬರಕ್ಕೆ ಪರಿಹಾರ ಎಂದು ಪ್ರತಿಪಾದಿಸುತ್ತಿದ್ದ. ಇಷ್ಟಿದ್ದೂ ಆತ ತನ್ನ ವಿಶಾಲ ಕೈಗಾರಿಕಾ ಸಾಮ್ರಾಜ್ಯದ ಹಣದುಬ್ಬರದ ಲಾಭಗಳನ್ನೆಲ್ಲ ತನ್ನ ಜೇಬಿಗೇ ಹಾಕಿಕೊಳ್ಳುತ್ತಿದ್ದ. ಸಾಮಾನ್ಯ ಜನರ ಜೀವನ ನಿರ್ವಹಣಾ ವೆಚ್ಚ ಎರಡು ಪಟ್ಟು ಮೂರು ಪಟ್ಟು ಹೆಚ್ಚಾಗುತ್ತಲೇ ನಡೆದಿತ್ತು.

ಇಷ್ಟೆಲ್ಲ ಏಕ ಪರಿಕಲ್ಪನೆಯ ಬಗ್ಗೆ ಹೇಳುವ ಈ ವ್ಯಕ್ತಿ ಅನೇಕ ಪತ್ನಿಯರನ್ನು ಹೊಂದಿರುವುದು ಸರಿಯೇ ಎಂದು ನಾನು ಕೇಳಿದೆ. ಇದಕ್ಕೆ ಆತನ ಉತ್ತರ "ತಾನು ಇದನ್ನು ಕೂಲಂಕುಷವಾಗಿ ವಿಚಾರಿಸಿದ ನಂತರ ಇದನ್ನು ವಿರೋಧಿಸುವ ನಿರ್ಧಾರಕ್ಕೆ ಬಂದಿರುವುದಾಗಿ' ತಿಳಿಸಿದ. "ನಾನು ಬಹುಪತ್ನಿತ್ವದ ಬಗ್ಗೆ ಪೂರ್ಣವಾಗಿ ಬರೆಯಬೇಕೆಂದುಕೊಂಡಿದ್ದೇನೆ ಇತರರಿಗೆ ಹೀಗೆ ಮಾಡಬೇಡಿ ಎಂದು ಎಚ್ಚರಿಕೆ ಕೊಡುವ ಸಲುವಾಗಿ. ಇದರಿಂದ ನನಗೆ ಯಾವ

ಸುಖವೂ ಇಲ್ಲ. ತೊಂದರೆಗಳೇ ಹೆಚ್ಚು. ಈ ತೊಂದರೆಗಳನ್ನು ನಾನು ಕರ್ಮಫಲ ಎಂದು ಭಾವಿಸಿದ್ದೇನೆ. ಇವೆಲ್ಲವೂ ನಮ್ಮ ಆತ್ಮಶುದ್ಧಿಗಾಗಿ ಒದಗಿದ ಕರ್ಮಫಲಗಳು...."

ಈ ಮಾತೆಲ್ಲ ಮುಗಿದ ನಂತರ ಆತನಿಂದ ಬೀಳ್ಕೊಳ್ಳುವುದಕ್ಕಾಗಿ ಎದ್ದು ನಿಂತು ಕೈಕುಲುಕಲು ಹೋದೆ. ಹಾಗೆ ನಾನು ಕೈಯನ್ನು ಮುಂದೆ ಚಾಚಿದ್ದು ಅಪರಾಧವಾಯಿತು ಎಂಬ ದನಿಯಲ್ಲಿ, ಆತ "ಇಲ್ಲ ಇಲ್ಲ, ಸ್ತ್ರೀಯರೊಂದಿಗೆ ಅದು ಸಲ್ಲದು. ಪತಿಯಾದವನು ಮಾತ್ರ ಸ್ತ್ರೀಯ ಹಸ್ತಗಳನ್ನು ಸ್ಪರ್ಶಿಸಬಹುದು" ಎನ್ನುತ ಕೈಜೋಡಿಸಿ ಮುಗಿದು 'ಹೋಗಿಬನ್ನಿ' ಎಂದ.

ಟಾಟಾ :

ಜಹಂಗೀರ್ ರತನ್‌ಜೀ ದಾದಾಬಾಯ್ ಟಾಟಾ ಅವರಿಗೂ, ಆಡಂಬರ ಶೈಲಿಯ ದಾಲ್ಮಿಯಾಗೂ ಹೋಲಿಕೆಯೇ ಇಲ್ಲ. ಏಷಿಯಾದಲ್ಲೇ ದೊಡ್ಡದಾದ ಉಕ್ಕಿನ ಉದ್ಯಮದ ಅಧ್ಯಕ್ಷರು, ಜೊತೆಗೆ ಇಂಡಿಯನ್ ಏರ್‌ಲೈನ್ಸ್‌ನ ಸ್ಥಾಪಕರು. ಆದರೆ ತೀರ ಸರಳ ನಡವಳಿಕೆಯ ಟಾಟಾರನ್ನು ನೋಡಿದಾಗ ಅದೊಂದೂ ಗೊತ್ತಾಗುವುದಿಲ್ಲ. ಅವರದು ತೆಳುದೇಹ, ಕಿರುಮೀಸೆ. ಸದಾ ಯೂರೋಪಿಯನ್ ಶೈಲಿಯ ವೇಷಭೂಷಣ. ಅವರ ತಾಯಿ ಫ್ರೆಂಚ್ ಮೂಲದವರು. ಅವರ ಪಾಶ್ಚಾತ್ಯ ಶೈಲಿಗೆ ಬಹುಶಃ ಇದೇ ಕಾರಣ. ಅವರ ನಡವಳಿಕೆಯಲ್ಲಿ ಫ್ರೆಂಚ್‌ತನ ಎಷ್ಟೋ ಸಲ ತಲೆ ಹಾಕುತ್ತದೆ. ಕೆಲವೊಮ್ಮೆ ಪ್ರಸನ್ನವಾದ, ಕೆಲವೊಮ್ಮೆ ಕಿರಿಕಿರಿ ಎನಿಸುವ ವ್ಯಕ್ತಿತ್ವ. ಜಾಗರೂಕ ಪ್ರವೃತ್ತಿ. ಕಾಮಿಕ್ ಬುಕ್ಸ್ ಅವರಿಗೆ ಬಹಳ ಪ್ರಿಯ.

Who is whoನಲ್ಲಿ ಟಾಟಾ ಅವರ ಪರಿಚಯ ಸಂಕ್ಷಿಪ್ತವಾಗಿದ್ದು ಅದರಲ್ಲಿ ಅವರ ವೈಯಕ್ತಿಕ ವಿಷಯಕ್ಕೆ ಸಂಬಂಧಿಸಿದ ಒಂದೇ ಒಂದು ಉಲ್ಲೇಖವಿದೆ. "First Pilot to qualify in India, holding a flying licence since 1929". ೧೯೩೨ರಲ್ಲಿ ಅವರು ಕೆಲವು ಅಂಚೆ ವಿಮಾನಗಳ್ನು ಹಾರಿಸಿದ್ದರು. Who is whoನಲ್ಲಿ ಅವರ ದಾನಧರ್ಮಗಳ ಬಗ್ಗೆ ಏನೂ ಹೇಳಿಕೊಂಡಿಲ್ಲ. ಆದರೆ ಆಕರ್ಷಕವಾಗಿ ಮುದ್ರಿಸಿರುವ ಅವರ Bookletಗಳಿಂದ ತಿಳಿದುಬರುವಂತೆ ಟಾಟಾ ಅವರ ಮೂರು ತಲೆಮಾರಿನವರೂ ಅತ್ಯಂತ ಉಚ್ಚಮಟ್ಟದ ಜೀವನ ನಡೆಸಿದವರು. ಸ್ಟಾಕ್ ಹೋಲ್ಡರುಗಳಿಗೆ ಆಕರ್ಷಕ ಡಿವಿಡೆಂಡುಗಳನ್ನು ಕೊಟ್ಟಿದ್ದಾರೆ. ಜೊತೆಗೆ ಮಾತೃ ಉದ್ಯಮವಾದ ಟಾಟಾಸ್ಟೀಲ್ಸ್‌ನಿಂದ ಬರುವ ಲಾಭದಲ್ಲಿ ಶೇ. ೮೫ರಷ್ಟನ್ನು ಟಾಟಾಟ್ರಸ್ಟ್‌ಗಾಗಿ ಮೀಸಲಿಡಲಾಗಿದೆ. ದಾನಧರ್ಮದ ಕಾರ್ಯಗಳೆಲ್ಲ ಅದರ ವತಿಯಿಂದಲೇ ನಡೆಯುತ್ತವೆ.

ಬಡತನ, ರೋಗರುಜಿನಗಳ ಬೇರುಗಳನ್ನು ನಿರ್ಮೂಲನ ಮಾಡುವ ಉದ್ದೇಶದಿಂದ ರೂಪಿತವಾದ ಈ ಟ್ರಸ್ಟ್ ಕ್ಯಾನ್ಸರ್ ಸಂಶೋಧನೆಗಾಗಿ ಒಂದು ಆಸ್ಪತ್ರೆಗೆ ದತ್ತಿ ನೀಡುತ್ತಿದೆ. ವೈದ್ಯಕೀಯ ಕ್ಷೇತ್ರದಲ್ಲಿ ಸಂಶೋಧನೆ ಮಾಡುವವರಿಗಾಗಿ ಸ್ಕಾಲರ್‌ಶಿಪ್‌ಗಳನ್ನು ನೀಡುತ್ತದೆ. ಟ್ರಸ್ಟಿನ ನಿಧಿಗಳಿಂದ ಟಾಟಾ ಉದ್ಯೋಗಿಗಳಿಗೆ ಆರೋಗ್ಯಸೇವೆ ಒದಗಿಸಲಾಗುತ್ತದೆ. ಬರಗಾ... ಹಾಗೂ ಪ್ರವಾಹ ಪೀಡಿತರ ಪರಿಹಾರ ನಿಧಿಗೆ ಹಣ ನೀಡುತ್ತದೆ.

Institute of Social Sciences Child Guidance Clinic, ಮೊದಲಾದವುಗಳಿಗೆ ಬೆಂಬಲ, ಬೆಂಗಳೂರಿನ Indian Institute of Science (ಇದರಲ್ಲಿ ಮೆಟಲರ್ಜಿ, ಏರೊನಾಟಿಕ್ಸ್, ಬಯೋಕೆಮಿಸ್ಟ್ರಿ ಮೊದಲಾದ ಇಲಾಖೆಗಳಿವೆ.)ಗೆ ಕೊಡುಗೆ ಬಾಂಬೆ ಸರ್ಕಾರದೊಂದಿಗೆ ಜಂಟಿಯಾಗಿ ನಡೆಸಲಾಗುತ್ತಿರುವ Tata Institute of Fundamental Research in Theoretical Physics and Cosmic Radiation ಇತ್ಯಾದಿಗಳು ಉಲ್ಲೇಖನೀಯ.

ಟಾಟಾ, ಪಾರ್ಸಿ ಮತದವರು. ಪಾರ್ಸಿ ಸಮುದಾಯ ಬಹಳ ಪ್ರಸಿದ್ಧವಾದುದು. ಜೆ.ಆರ್.ಡಿ.ಯವರ ತಾತ ಜೇಮ್‌ಶೆಡ್‌ಜಿ ನುಸುರ್ ವಾನ್ ಜಿ ಟಾಟಾರವರು ಭಾರತದ ಕೈಗಾರಿಕಾ ನಿರ್ಮಾಪಕರೆಂದು ಪ್ರಸಿದ್ಧಿ ಪಡೆದಿದ್ದಾರೆ. ಭಾರತೀಯ ಕೈಗಾರಿಕೆಗಳನ್ನು ಭಾರತೀಯರೇ ನಡೆಸುವ ಸಾಮರ್ಥ್ಯ ಬರಬೇಕಾದರೆ ಬಾರತವು ಹೆಚ್ಚಿನ ಸಂಖ್ಯೆಯಲ್ಲಿ ವಿಜ್ಞಾನಿಗಳನ್ನೂ ತಂತ್ರಜ್ಞಾನಿಗಳನ್ನೂ ತಯಾರಿಸುವುದೇ ಅತ್ಯಂತ ಸರಿಯಾದ ಮಾರ್ಗ ಎಂಬುದನ್ನು ಅವರು ಅರ್ಥಮಾಡಿಕೊಂಡರು. ದೇಶದಲ್ಲಿಯೇ ವಿಜ್ಞಾನ ಸಿಬ್ಬಂದಿಯನ್ನು ತರಬೇತುಗೊಳಿಸುವುದಕ್ಕಾಗಿ ಅವರು Indian Institute of Science ಸ್ಥಾಪಿಸಿದರು. ದೇಶೀಯ ಅರ್ಥವ್ಯವಸ್ಥೆಗೆ ಆಧಾರವಾಗಿ ಕಬ್ಬಿಣ ಮತ್ತು ಉಕ್ಕು ಪರಿಯೋಜನೆಗೆ ಹಾಗೂ ವಿದ್ಯುತ್ತನ್ನು ಅಗ್ಗಧಲ್ಲಿ ಒದಗಿಸಿ ಕಲ್ಲಿದ್ದಲ ನಿಕ್ಷೇಪಗಳನ್ನು ಸಂರಕ್ಷಿಸುವುದಕ್ಕಾಗಿ ಜಲವಿದ್ಯುತ್ ಯೋಜನೆಗಳಿಗೆ ತಳಪಾಯ ಹಾಕಿದರು. ಅವರ ಹೆಸರಿನಲ್ಲಿಯೇ ಈಗ ನಿರ್ಮಾಣವಾಗಿರುವ ಜೆಮ್‌ಶೆಡ್‌ಪುರ ಎಂಬ ಉಕ್ಕಿನ ನಗರದ ಕನಸು ನನಸಾಗುವುದಕ್ಕೆ ಮೊದಲೇ ಅವರು ತೀರಿಕೊಂಡರು. ಕಬ್ಬಿಣದ ಅಪಾರ ನಿಕ್ಷೇಪವಿರುವ ಬಿಹಾರದ ಅರಣ್ಯ ಪ್ರದೇಶದಲ್ಲಿ ಕಾಡನ್ನು ಕಡಿದು ಈ ನಗರವನ್ನು ಕಟ್ಟಲಾಗಿದೆ. ೧೯೧೪ರ ಹೊತ್ತಿಗೆ ಈ ಸ್ಥಾವರವು ವಾಣಿಜ್ಯ ಮಟ್ಟದಲ್ಲಿ ಉಕ್ಕನ್ನು ಉತ್ಪಾದಿಸುತ್ತಿತ್ತು. ಈ ಉದ್ಯಮವು ಎರಡು ಮಹಾಯುದ್ಧಗಳ ಅವಧಿಯಲ್ಲಿ ಬೃಹತ್ತಾಗಿ ಬೆಳೆಯಿತು. ಭಾರತಕ್ಕೆ ಸ್ವಾತಂತ್ರ್ಯ ಬಂದ ಕಾಲದಲ್ಲಿ ಟಾಟಾ ಉದ್ಯಮವು ಇಡೀ ಬ್ರಿಟಿಷ್ ಕಾಮನ್‌ವೆಲ್ತ್ ದೇಶಗಳಲ್ಲಿಯೇ ಅತಿ ಹೆಚ್ಚು ಪ್ರಮಾಣದ ಉಕ್ಕನ್ನು ಉತ್ಪಾದಿಸುತ್ತಿತ್ತು ಮತ್ತು ಇಡೀ ಜಗತ್ತಿನಲ್ಲಿಯೇ ಅದು ಮೂರನೆಯ ಅತಿದೊಡ್ಡ ಕಬ್ಬಿಣ ಮತ್ತು ಉಕ್ಕು ಸ್ಥಾರವಾಗಿತ್ತು.

ನಲವತ್ನಾಲ್ಕು ವರ್ಷ ವಯಸ್ಸಿನ ಜೆಆರ್‌ಡಿ ಟಾಟಾ ಅವರು ಬಹಶಃ ಜಗತ್ತಿನಲ್ಲಿಯೇ ಅತಿ ಬುದ್ಧಿವಂತ ಕೈಗಾರಿಕೋದ್ಯಮಿ. ಪಾಶ್ಚಿಮಾತ್ಯ ವಿಧಾನಗಳನ್ನು ಸರಿಯಾಗಿ ಅರಿತಿದ್ದ ಉದ್ಯಮಿಯಾಗಿದ್ದಾರೆ. ಅವರ ಆಸಕ್ತಿಯು ವಿವಿಧ ಕ್ಷೇತ್ರಗಳಿಗೆ ವ್ಯಾಪಿಸಿದೆ. ರೈಲುಗಾಡಿಗಳ ನಿರ್ಮಾಣ, ವಿಮಾನಜೋಡಣೆ, ಬಾಂಬೆಯ ಪ್ರತಿಷ್ಠಿತ ಹೋಟೆಲುಗಳ ನಿರ್ವಹಣೆ, ಬಣ್ಣಗಳು, ಸೋಪು, ಮಾರ್ಗರಿನ್, ಸಿಮೆಂಟ್, ಟೆಕ್ಸ್‌ಟೈಲ್ಸ್, ಕೈಗಾರಿಕಾ ರಾಸಾಯನಿಕಗಳು, ಜಲವಿದ್ಯುತ್, ಅಣು ಸಂಶೋಧನೆ ಇತ್ಯಾದಿ. ಅವರು ಜಾಗತಿಕ ವಾಯುಮಾನದ ಆರಂಭಕಾರರಾಗಿದ್ದಾರೆ. ಜಗತ್ತಿನ ಹೆಜ್ಜೆ ಗತಿಯೊಂದಿಗೆ ಸರಿಹೆಜ್ಜೆ ಹಾಕಿದವರು ಟಾಟಾ. ಕೇವಲ ವಾಯುಮಾನದ

ವಿಷಯದಲ್ಲಿ ಮಾತ್ರವೇ ಅಲ್ಲ, ಕಾರ್ಮಿಕಶಕ್ತಿ ಇಂದು ರಾಜಕೀಯ ಶಕ್ತಿಯಾಗಿ ಬೆಳೆಯುತ್ತಿದೆ ಎಂಬುದನ್ನು ಕೂಡ ಅವರು ಜಗತ್ತಿನ ವಿದ್ಯಮಾನಗಳಿಂದ ತಿಳಿದುಕೊಂಡವರು. ಕಾರ್ಮಿಕ ಶಕ್ತಿಯ ಅಭಿವೃದ್ಧಿಯನ್ನು ಕಂಡು ಅವರು ಆತಂಕಗೊಂಡವರೂ ಅಲ್ಲ. ತೀರಾ ನಗಣ್ಯವಾಗಿರುವ ಕಮ್ಯುನಿಸ್ಟರ ಬಗ್ಗೆ ಅವರು ಚಿಂತಿಸಲಿಲ್ಲ. ಆದರೆ ಸಮಾಜವಾದಿಗಳ ಸಂಖ್ಯೆ ಹೆಚ್ಚುತ್ತಿದ್ದರೂ ಕೈಗಾರಿಕೆಯನ್ನು ಕುರಿತು ಸಮಾಜವಾದಿಗಳ ಅರೆಬರೆ ಜ್ಞಾನದ ಬಗ್ಗೆ ಅವರು ಚಿಂತೆಗೀಡಾದವರು.

ಜೆ.ಆರ್.ಡಿ. ಟಾಟಾ ಅವರ ಬಗೆಗೆ ವಿವಿಧ ರೀತಿಯ ಅಭಿಪ್ರಾಯಗಳಿದ್ದರೂ ಅವೆಲ್ಲವುಗಳಲ್ಲಿಯೂ ಒಂದಾದರೂ ಸತ್ಯಾಂಶ ಇದ್ದೇ ಇತ್ತು.

ಟಾಟಾ ಒಬ್ಬ ಪ್ರಗತಿಪರ ಕೈಗಾರಿಕೋದ್ಯಮಿಯಾಗಿದ್ದಾರೆ. ಲಾಭವನ್ನು ಹಂಚಿಕೊಳ್ಳುವ ಬೋನಸ್ ಯೋಜನೆಯನ್ನು ಅವರು ಕೊಟ್ಟರು. ಉದ್ಯೋಗಿಗಳಿಗೆ ಸರಾಸರಿಗಿಂತ ಉತ್ತಮ ಮಟ್ಟದ ಸೌಲಭ್ಯಗಳನ್ನು ಒದಗಿಸಿದರು. ಪಾಶ್ಚಾತ್ಯ ಕಾರ್ಮಿಕ ಸಂಬಂಧಗಳ ಸ್ವರೂಪವನ್ನು ಅರಿತಿರುವ ಅವರಿಗೆ ಅನುಭವವಿಲ್ಲದ ಭಾರತೀಯ ಕಾರ್ಮಿಕ ನಾಯಕರ ದೌರ್ಬಲ್ಯಗಳ ಸ್ಪಷ್ಟ ಅರಿವಿದೆ.

ಟಾಟಾ ಅವರಲ್ಲಿ ಸಂಸ್ಥೆಯ ಕೈಯೇರಿ ಮೇಲಾಗಿರುವ ಕಾರ್ಮಿಕ ಸಂಘಟನೆ ಇತ್ತು. ಸಂಸ್ಥೆಯ ನಿಷ್ಠಾವಂತರೇ ಅದರ ಸಿಬ್ಬಂದಿ. ಸರ್ಕಾರದಿಂದ ಹೊಸದಾಗಿ ಪ್ರಾಯೋಜಿತವಾದ ಇಂಟಕ್‌ನಲ್ಲಿ ಅದು ಸೇರಿಕೊಂಡಿತು. ಇತರ ಸಂಘಟನೆಗಳು ರೂಪುಗೊಳ್ಳುವುದಕ್ಕೆ ಅವಕಾಶ ಕೊಡದಂತೆ ಅದು ಕಾರ್ಯ ನಿರ್ವಹಿಸುತ್ತಿತ್ತು. ಇದೇ ಸಂದರ್ಭದಲ್ಲಿ ತಿಳಿಸಬೇಕಾದ ಒಂದು ಮುಖ್ಯ ಅಂಶವೆಂದರೆ ಮೊದಲ ಜೆಮ್‌ಶೆಡ್‌ಜಿಯವರು ತಮ್ಮ ಕಾರ್ಮಿಕರಿಗಾಗಿ ರೂಪಿಸಿದ ವಸತಿಯೋಜನೆ ಇಂದಿಗೂ ಸಹ ಭಾರತದಲ್ಲಿಯೇ ಅತ್ಯುತ್ತಮ ಎನಿಸಿಕೊಂಡಿದೆ. ಟಾಟಾ ಉಕ್ಕು ಕೈಗಾರಿಕೆಯ ಜೆಮ್‌ಶೆಡ್‌ಪುರ ಕೇಂದ್ರವು ಅದ್ಭುತವಾಗಿ ಬೆಳೆದಿದೆ. ಇದರಲ್ಲಿ ಮೂರನೇ ಒಂದರಷ್ಟು ಕಾರ್ಮಿಕರಿಗೆ ಅಚ್ಚುಕಟ್ಟಾದ ಮನೆಗಳು ಹಾಗೂ ಮನೆಯ ಸುತ್ತ ಕೈತೋಟ ಇದೆ. ಇದಕ್ಕೆ ಅವರು ಕನಿಷ್ಠ ಬಾಡಿಗೆಯನ್ನು ಮಾತ್ರ ಕೊಡಬೇಕು. ಇನ್ನುಳಿದ ಕಾರ್ಮಿಕರು ಖಾಸಗಿ ಮಾಲಿಕರ ಬಾಡಿಗೆ ಮನೆಗಳಲ್ಲಿ ಇಕ್ಕಟ್ಟಾದ ಪರಿಸರದಲ್ಲಿ ಬದುಕುತ್ತಿದ್ದಾರೆ. ಕೆಲವೊಂದು ಕೊರತೆಗಳಿದ್ದರೂ, ಜೆಮ್‌ಶೆಡ್‌ಪುರದಲ್ಲಿ ಆಸ್ಪತ್ರೆ, ಮಕ್ಕಳಿಗೆ ಉಚಿತ ಹಾಲು, ಮಹಿಳಾ ಕಾರ್ಮಿಕರಿಗೆ ಪ್ರಸೂತಿರಜೆಯ ಸೌಲಭ್ಯ ಮುಂತಾದವುಗಳಿಂದ ಇದು ಭಾರತದಲ್ಲಿ ಅತ್ಯಂತ ಪ್ರಗತಿಪರ ಕಾರ್ಖಾನೆ ಎಂದು ನನಗನ್ನಿಸಿತು. ಅಲ್ಲಿನ ರಿಯಾಯಿತಿ ದರದ ಕ್ಯಾಂಟೀನ್ ಸೌಲಭ್ಯವಂತೂ ನನ್ನನ್ನು ಎಲ್ಲಕ್ಕಿಂತ ಹೆಚ್ಚು ಆಕರ್ಷಿಸಿತು.

ಟಾಟಾ ವರ್ಕ್‌ಶಾಪಿನಲ್ಲಿ ಮಾತಾಡಲು ಮುಕ್ತ ವಾತಾವರಣವಿತ್ತು, ಅಲ್ಲಿ ಯಾವುದೇ ಜಾತೀಯ, ಧಾರ್ಮಿಕ ಪೂರ್ವಾಗ್ರಹಗಳು ಕಂಡುಬರಲಿಲ್ಲ. ನಾನು ಅಲ್ಲಿದ್ದಾಗ ಉದ್ಯೋಗಿಗಳ ಒಂದು ವಾರಪತ್ರಿಕೆಯನ್ನು ನೋಡಿದೆ. ಅದರಲ್ಲಿ ಲೇವಾದೇವಿಗಾರರಿಂದ ಶೋಷಣೆಗೊಳಗಾದ ಅಸ್ಪೃಶ್ಯ ಕಾರ್ಮಿಕರ ಸಹಾಯಕ್ಕಾಗಿ ನಡೆಯಬೇಕಾಗಿರುವ ಚಳುವಳಿಯ ಸ್ವರೂಪ ಕುರಿತು ಒಂದು ಸುದೀರ್ಘ ಲೇಖನವಿತ್ತು.

ಜನಾಂಗೀಯ ಭೇದ ನೀತಿಯನ್ನು ಟಾಟಾ ದ್ವೇಷಿಸುತ್ತಿದ್ದರು. ಅವರು ಇತ್ತೀಚೆಗೆ ಅಮೆರಿಕೆಗೆ ಭೇಟಿ ನೀಡಿದ್ದರು. ಅಲ್ಲಿನ ದಕ್ಷಿಣ ಪ್ರದೇಶದಲ್ಲಿ ಕುಡಿಯುವ ನೀರಿನ ಕಾರಂಜಿಗಳ ಮೇಲೆ ಬಿಳಿಯರಿಗೆ, ಕರಿಯರಿಗೆ ಎಂಬ ಲೇಬಲುಗಳ್ನು ಹಚ್ಚಿ ಅವುಗಳ್ನು ಪ್ರತ್ಯೇಕಿಸಲಾಗಿತ್ತು. ಟಾಟಾ ಅವರಿಗೆ ನೀರು ಕುಡಿಯಬೇಕಿತ್ತು. ಬಿಳಿ ಮೈಬಣ್ಣದ, ಅಚ್ಚುಕಟ್ಟಾದ ಯೂರೋಪಿಯನ್ ಉಡುಪು ಧರಿಸಿದ ಟಾಟಾ ನೋಡಲು ಯೂರೋಪಿಯನ್ನರಂತೇ ಇದ್ದರು. ಆದರೂ ಅವರು ವರ್ಣೀಯರಿಗೆ ಮೀಸಲಾದ ಕಾರಂಜಿಯಲ್ಲಿಯೇ ನೀರು ಕುಡಿದದ್ದನ್ನು ಕಂಡು ಅವರೊದಿಗೆ ಇದ್ದ ಅಧಿಕಾರಿಗಳು ಚಕಿತರಾದರು!

❑

ಅಧ್ಯಾಯ ೮

ಗಾಂಧಿ, ಅಸ್ಪೃಶ್ಯರ ನಡುವೆ

ಗಾಂಧಿಯವರು ದೆಹಲಿಗೆ ಬಂದಾಗ ಒಂದು ಸಲ, ಪ್ರತಿ ಸಾರಿಯಂತೆ ಬಿರ್ಲಾ ಗೃಹದಲ್ಲಿ ತಂಗದೆ ಅಸ್ಪೃಶ್ಯರೊಂದಿಗೆ ಅವರ ಭಂಗಿ ಕಾಲೋನಿಯಲ್ಲಿ ತಂಗಲು ನಿರ್ಧರಿಸಿದರು ಅವರ ಈ ನಿರ್ಧಾರ ಸಾರ್ವಜನಿಕರ ಕುತೂಹಲವನ್ನು ಬಡಿದೆಬ್ಬಿಸಿತು. ಅವರು ಹರಿಜನರೊಂದಿಗೆ ಇರಲು ನಿರ್ಧರಿಸಿದ್ದು ಇದೇ ಮೊದಲ ಸಲವೇನಲ್ಲ. ಆದರೆ ಇದು ಯಾಕೆ ಕುತೂಹಲ ಕೆರಳಿಸಿತೆಂದರೆ ತೀರಾ ಉನ್ನತ ಮಟ್ಟದ ಮಾತುಕತೆಗಾಗಿ ಬಂದಿದ್ದ ಸಂದರ್ಭದಲ್ಲಿ ಅವರು ಈ ಸ್ಥಳದಲ್ಲಿ ತಂಗುವ ನಿರ್ಧಾರ ಮಾಡಿದ್ದರು.

೧೯೪೬ರಲ್ಲಿ ಬ್ರಿಟಿಷ್ ಕ್ಯಾಬಿನೆಟ್ ನಿಯೋಗವನ್ನು ಭೇಟಿ ಮಾಡುವುದಕ್ಕಾಗಿ ಭಾರತದ ಎಲ್ಲೆಡೆಯ ನಾಯಕರು ದೆಹಲಿಗೆ ಧಾವಿಸತೊಡಗಿದ್ದರು. ಮುಂಬರುವ ಸ್ವಾತಂತ್ರ್ಯದ ರೂಪುರೇಖೆಯನ್ನು ಸಿದ್ಧಪಡಿಸುವುದು ಇದರ ಉದ್ದೇಶವಾಗಿತ್ತು. ಬ್ರಿಟಿಷ್ ಸಚಿವರಾದ ಸರ್ ಸ್ಟಾಫರ್ಡ್ ಕ್ರಿಪ್ಸ್, ಲಾರ್ಡ್ ಪೆಥಿಕ್ ಲಾರೆನ್ಸ್, ಭಾರತದ ಸ್ಟೇಟ್ ಕಾರ್ಯದರ್ಶಿ ಹಾಗೂ ಫಸ್ಟ್ ಲಾರ್ಡ್ ಆಫ್ ದಿ ಅಡ್ಮಿರಾಲಿಟಿ ಎ.ವಿ. ಅಲೆಕ್ಸಾಂಡರ್ ಈ ನಿಯೋಗದಲ್ಲಿದ್ದರು ಗಾಂಧಿಯವರ ಆಗಮನಕ್ಕಾಗಿ ಭಂಗಿ ಕಾಲೋನಿಯಲ್ಲಿ ಏಳು ದಿನಗಳಿಂದಲೂ ಭರಾಟೆಯಿಂದ ಸಾಗಿದ್ದ ಸಿದ್ಧತೆಯ ಕ್ರಮಗಳನ್ನು ಪರಿಶೀಲಿಸುವುದಕ್ಕಾಗಿ ದೆಹಲಿಯ ಪತ್ರಕರ್ತ ಸದಸ್ಯರು ಪ್ರತಿದಿನವೂ ಭಂಗಿಕಾಲನಿಗೆ ಭೇಟಿಕೊಡುತ್ತಿದ್ದರು. ಭಂಗಿ ಕಾಲೋನಿಯ ಅರ್ಧದಷ್ಟು ಜನರನ್ನು ಬೇರೆ ಕಡೆಗೆ ಕಳಿಸಲಾಗಿತ್ತು. ಎಲ್ಲಿಗೆ ಎಂದು ಗೊತ್ತಾಗಲಿಲ್ಲ. ಬಹುಶಃ ಮೂಲಸ್ಥಿತಿಯಲ್ಲೇ ಇದ್ದ ವಸತಿ ಭಾಗಗಳ ಕಡೆ ಕಳಿಸಿರಬಹುದು. ಅವರಿಗೆ ಸೇರಿದ ಚಾಲ್‌ಗಳನ್ನು ಕಿತ್ತುಹಾಕಿ ಅವುಗಳ ಸ್ಥಳದಲ್ಲಿ ಅಚ್ಚುಕಟ್ಟಾದ ಪುಟ್ಟಪುಟ್ಟ ಗುಡಿಸಲುಗಳನ್ನು ನಿರ್ಮಿಸಲಾಗಿತ್ತು. ಈ ಗುಡಿಸಲುಗಳು ಎತ್ತರವಾಗಿದ್ದವು. ನೆಟ್ಟಗೆ ನಿಂತೇ ಅವುಗಳನ್ನು ಪ್ರವೇಶಿಸಬಹುದಾಗಿತ್ತು ಅಸ್ಪೃಶ್ಯರ ಚಾಲ್‌ಗಳಲ್ಲಿನಂತೆ ಬಗ್ಗಿಕೊಂಡು ತೆವಳಿಕೊಂಡು ಹೋಗಬೇಕಾಗಿರಲಿಲ್ಲ. ಇದಿಷ್ಟು ಬಿಟ್ಟರೆ ಈ ಹೊಸ ವಸತಿಯಲ್ಲಿ ಇನ್ನೇನೂ ಆಡಂಬರಗಳಿರಲಿಲ್ಲ. ಅಲ್ಲಿಯ ಕಿಟಕಿಗಳಿಗೆ ಹಾಕಿದ ಕುಸ್‌ಕುಸ್ ಎಂಬ ನಾರಿನ ಪರದೆಗಳು ವಿಶೇಷವಾಗಿ ನನ್ನ ಗಮನ ಸೆಳೆದವು. ಅವುಗಳಿಗೆ ನೀರನ್ನು ಸಂಪಡಿಸಿದರೆ ಒಳಪ್ರದೇಶ ತಂಪಾಗಿರುತ್ತಿತ್ತು. ಸುವಾಸಿತವಾಗಿರುತ್ತಿತ್ತು. ಗಾಂಧಿಯವರು ಬಂದು ತಂಗುವುದಕ್ಕೆ ಮೊದಲೇ ಅಲ್ಲೆಲ್ಲ ಚೆನ್ನಾಗಿ ನೀರು ಹನಿಸಿದ್ದರಿಂದ ಗಾಂಧೀಜಿಯವರು ಅಲ್ಲಿದ್ದಷ್ಟು ದಿನವೂ ಆ ಜಾಗ ತಂಪಾಗಿಯೇ ಇತ್ತು. ಅಲ್ಲಿದ್ದ ಒಂದು ಚಿಕ್ಕ ಗುಡಿಗೆ ಹೊಸದಾಗಿ ಸುಣ್ಣ ಬಳಿಸಲಾಯಿತು. ಅದರ ಸುತ್ತ ಒಂದು ವೇದಿಕೆಯ ನಿರ್ಮಾಣವಾಯಿತು. ಈ ಕೆಲಸದಲ್ಲಿ ತೊಡಗಿದ್ದ ಒಬ್ಬನನ್ನು ನಾನು ಮಾತಾಡಿಸಿದೆ. ಅ

ದೀನಾನಾಥ್ ತಿಯಾಂಗ್. ಬಿರ್ಲಾ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ. ಗಾಂಧಿಯವರಿಗೆ ಅನಾನುಕೂಲವಾಗದಂತೆ ನೋಡಿಕೊಳ್ಳಲು ನಾವು ಇಪ್ಪತ್ತು ವರ್ಷಗಳಿಂದಲೂ ಕೆಲಸ ಮಾಡುತ್ತಿದ್ದೇವೆ ಎಂದು ಹೆಮ್ಮೆಯಿಂದ ಹೇಳಿದ. ೯ನೇ ದಿನ ಎಲೆಕ್ಟ್ರಿಕ್ ಫ್ಯಾನ್, ಟೈಪ್‌ರೈಟರುಗಳು, ಟೆಲಿಫೋನುಗಳನ್ನು ಹಿಡಿದುಕೊಂಡು ಇನ್ನೊಂದು ಗುಂಪು ಬಂತು. ಇದನ್ನು ನೋಡಿ ನಮಗೆ ಅಂದರೆ ವರದಿಗಾರರಿಗೆ ನಿಜಕ್ಕೂ ಹೊಟ್ಟೆಕಿಚ್ಚಾಯಿತು. ದೆಹಲಿಯಲ್ಲಿ ವಿದ್ಯುತ್ ಫ್ಯಾನುಗಳಿಗೆ ತುಂಬ ಕೊರತೆ. ಟೈಪ್‌ರೈಟರುಗಳು ದೊರಕಿಸಿಕೊಳ್ಳುವುದೂ ತುಂಬ ಕಷ್ಟವಿತ್ತು. ಟೆಲಿಫೋನ್ ಹಾಕಿಸಬೇಕಿದ್ದರಂತೂ ನೂರಾರು ಅಡೆತಡೆಗಳಿದ್ದವು. ಹತ್ತನೇ ದಿನ ಗಾಂಧಿ ಅಲ್ಲಿಗೆ ಆಗಮಿಸಿದರು. ಹೆಚ್ಚಿನ ವಿಶೇಷವೇನೂ ಇರಲಿಲ್ಲ. ಆದರೆ ಗೇಟಿನ ಹೊರಗೆ ಕೆಲವು ಅಸ್ಪೃಶ್ಯರು ನಿಂತು ಕಪ್ಪುಬಾವುಟ ಪ್ರದರ್ಶಿಸಿದರು. ಅವರೆಲ್ಲ ಡಾ. ಅಂಬೇಡ್ಕರ್ ಅವರ ಅನುಯಾಯಿಗಳು. ಅಂಬೇಡ್ಕರ್ ಒಬ್ಬ ಅಪ್ರತಿಮ ವಕೀಲ. ಕೊಲಂಬಿಯಾ ವಿಶ್ವವಿದ್ಯಾನಿಲಯದಿಂದ ಶಿಕ್ಷಣ ಪಡೆದವರು. ಗಾಂಧಿ ಮತ್ತು ಕಾಂಗ್ರೆಸ್ಸಿನವರು ಅಸ್ಪೃಶ್ಯರಿಗೆ ಸಾಕಷ್ಟು ರಾಜಕೀಯ ಸುರಕ್ಷಣೆ ಒದಗಿಸಿಲ್ಲ ಎಂಬ ಕಾರಣಕ್ಕಾಗಿ ಅವರು ಅನೇಕ ವರ್ಷಗಳಿಂದ ಗಾಂಧಿ ವಿರೋಧೀ ಪಕ್ಷವನ್ನು ನಡೆಸುತ್ತಿದ್ದರು (ಸ್ವಾತಂತ್ರ್ಯ ಬಂದ ನಂತರ ಡಾ. ಅಂಬೇಡ್ಕರರು ಕಾನೂನು ಸಚಿವರಾದರು. ಹೊಸ ಸಂವಿಧಾನವನ್ನು ರೂಪಿಸಲು ನೆರವಾದರು. ಅದರ ಪ್ರಕಾರ ಅಸ್ಪೃಶ್ಯರಿಗೆ ಸಮಾನ ಅವಕಾಶ ಸಿಗುವಂತೆ ಮಾಡಿದರು). ವ್ಯವಸ್ಥಿತವಾಗಿ ಅಲ್ಪಪ್ರಮಾಣದಲ್ಲಿ ನಡೆದ ಈ ಕಪ್ಪುಬಾವುಟ ಪ್ರದರ್ಶನವನ್ನು ಹೊರತುಪಡಿಸಿದರೆ ಆಶ್ರಮವು ಭಂಗಿಕಾಲನಿಯಲ್ಲಿ ವ್ಯವಸ್ಥಿತವಾಗಿ ನೆಲೆಗೊಂಡು ಮುಂದುವರೆಯಿತು.

ಲೈಫ್ ಪತ್ರಿಕೆಯು ಭಾರತದ ರಾಜಕೀಯ ನೇತಾರರ ಒಂದು ಲೇಖನವಮಾಲಿಕೆ ಆರಂಭಿಸಿತ್ತು. ಅದಕ್ಕಾಗಿ ನಾನು ನೆಗೆಟಿವ್‌ಗಳನ್ನು ನ್ಯೂಯಾರ್ಕ್‌ಗೆ ತುರ್ತಾಗಿ ಕಳಿಸಬೇಕಿತ್ತು. ಮಹಾತ್ಮಾ ಅವರು ಚರಕಾದಿಂದ ನೂಲು ತೆಗೆಯುತ್ತಿರುವ ಫೋಟೋ ತೆಗೆಯಲು ನಿರ್ಧರಿಸಿ ಗಾಂಧಿಯವರ ಕಾರ್ಯದರ್ಶಿಗಳಲ್ಲಿ ಒಬ್ಬರನ್ನು ಅನುಮತಿ ಕೇಳಿದೆ. ಗಾಂಧಿಯವರ ಕಾರ್ಯದರ್ಶಿ ಪ್ಯಾರೇಲಾಲ್ ಅವರೊಂದಿಗೆ ನನ್ನ ಭೇಟಿಯಾಗಿದ್ದು ಹೀಗೆ.

"ನಿಮಗೆ ಚರಕಾದಲ್ಲಿ ನೂಲಲು ಬರುತ್ತದೆಯೇ" ಎಂದು ಪ್ಯಾರೇಲಾಲ್ ಕೇಳಿದರು.

"ನನಗೆ ನೂಲು ತೆಗೆಯಲು ಬರುವುದಿಲ್ಲ. ಗಾಂಧಿಯವರು ಚರಕಾದಿಂದ ನೂಲು ತೆಗೆಯುವ ಚಿತ್ರ ತೆಗೆಯಲು ಬಂದೆ" ಎಂದು ಹೇಳಿದೆ.

"ಚರಕಾದಲ್ಲಿ ಹೇಗೆ ನೂಲು ತೆಗೆಯುತ್ತಾರೆ ಅಂತ ನಿಮಗೆ ಗೊತ್ತೆ" ಎಂದು ಅವರು ಮತ್ತೆ ಕೇಳಿದರು. "ನನಗೆ ಗೊತ್ತಿಲ್ಲ. ಕ್ಯಾಮರಾ ಕೆಲಸ ಮಾತ್ರ ನನಗೆ ಗೊತ್ತು" ಎಂದೆ.

"ಅತ್ಯಂತ ಸೂಕ್ಷ್ಮವೂ, ಜಟಿಲವೂ ಹಾಗೂ ಅದ್ಭುತವೂ ಆದ ಸ್ಪಿನ್ನಿಂಗ್ ವ್ಹೀಲ್ ಬಗ್ಗೆ ನೀವು ಮೊದಲೇ ತಿಳಿದುಕೊಳ್ಳದೆ ಮಹಾತ್ಮಾಜಿಯವರ ಚಿತ್ರವನ್ನು ಹೇಗೆ ತೆಗೆಯಲು ಸಾಧ್ಯ? ಚರಕಾ ಮಾನವನ ಪ್ರತಿಭೆ ಸೃಷ್ಟಿಸಿದ ಅದ್ಭುತ. ಅದು ಕಷ್ಟಜೀವಿಗಳ ಪಾಲಿಗೆ ನೆರವಾಗಲು ಅವರ ಮಟ್ಟಕ್ಕೆ ಇಳಿದು ಬಂದ ಒಂದು ಯಂತ್ರ" ಎಂದು ಪ್ಯಾರೇಲಾಲ್ ಹೇಳಿದರು.

ಇದು ಗಾಂಧೀಜಿಯವರ ಪ್ರಮುಖ ಸಿದ್ಧಾಂತ, ಸೂತ್ರ. ಮನುಷ್ಯನನ್ನು ಬಿಡಿಯಾಗಿ ನೋಡಿದಾಗ ನಗಣ್ಯ; ನೀರಿನ ಒಂದು ಹನಿಯಂತೆ. ಆದರೆ ಮನುಷ್ಯರೆಲ್ಲರೂ ಒಂದಾದರೆ ಆ ಸಮೂಹವು ಸಾಗರದಂತೆ ಬಲಶಾಲಿ, ಶಕ್ತಿಶಾಲಿ. ಸಹಸ್ರಾರು ನೀರಹನಿಗಳು ಒಂದುಗೂಡಿ ಸಾಗರವಾದಾಗ ಅದರ ಮೇಲೆ ನೌಕಾದಳವೇ ಸಾಗಬಹುದು. ಮನುಷ್ಯರ ವಿಷಯದಲ್ಲೂ ಹೀಗೇ. ಅವರೆಲ್ಲ ಒಂದಾದಾಗ ಇಂತಹ ಸಾಮರ್ಥ್ಯ ಬರುತ್ತದೆ. ಚರಕಾ, ಶ್ರಮಜೀವಿಗಳ ವಿಜ್ಞಾನವನ್ನು ಸಂಕೇತಿಸುತ್ತದೆ ಅತ್ಯಂತ ಸಂಕೀರ್ಣ ಸಂಯೋಜನೆ ಇರುವ ಕಾರ್ಖಾನೆಯ ಯಂತ್ರೋಪಕರಣಗಳಿಗೂ ಸರಳವಾದ ಚರಕಾಕ್ಕೂ ಹೋಲಿಸಿನೋಡಿ. ಕೈಯಿಂದ ತಿರುಗಿಸುವ ಈ ಚರಕಾದಲ್ಲಿ ಅತ್ಯಂತ ಗರಿಷ್ಠ ಪ್ರಮಾಣದ ಸಾಮರ್ಥ್ಯವನ್ನು ಕಾಣಬಹುದು. ಪ್ಯಾರೇಲಾಲ್ ಹೇಳುತ್ತಲೇ ಇದ್ದರು:

ನಾನು ಬಂದ ಕೆಲಸದ ಬಗ್ಗೆ ಇವರು ಮಾತಾಡುತ್ತಲೇ ಇಲ್ಲವಲ್ಲ ಎಂದು ನನಗೆ ಆತಂಕವಾಗಿತ್ತು. "ನೀವು ಹೀಗೆ ಮಾತಾಡಿ ನಾನು ಫೋಟೋಗ್ರಫಿ ಬಿಟ್ಟು ಚರಕಾ ಹಿಡಿಯುವಂತೆ ಮಾಡುತ್ತೀರಿ ಅಷ್ಟೆ" ಎಂದು ನಯವಾಗಿ ನನ್ನ ಆಕ್ಷೇಪಣೆ ಸೂಚಿಸಿದೆ.

"ನನ್ನ ಉದ್ದೇಶವೂ ಅದೇ. ಕೈಯಿಂದ ತಿರುಗಿಸುವ ಈ ಚರಕಾದ ತುಂಬ ಮಹತ್ವದ ಸಾಧನೆ ಏನೆಂದರೆ ಉಕ್ಕು ಮತ್ತು ಲೋಹದ ಬಳಕೆಯೇ ಇಲ್ಲದಂತೆ ಮಾಡುವುದು. ಇಲ್ಲಿ ನೋಡಿ ಯಾವುದೇ ಬಾಲ್‌ಬೇರಿಂಗ್‌ಗಳಿಲ್ಲ. ಒಂದು ಮೊಳೆ ಕೂಡ ಇಲ್ಲ. ಇದರಲ್ಲಿ ಬಳಕೆಯಾಗಿರುವ ಸಾಮಗ್ರಿಗಳೆಲ್ಲ ಸ್ಥಳೀಯವಾಗಿ ಸಿಗುವಂಥವು. ಈ ಮಣ್ಣಿನಲ್ಲಿ ಬೆಳೆಯುವ ಹೂವುಗಳಂತೆ ಸಹಜವಾಗಿ ಈ ನೆಲದಲ್ಲೇ ಸಿಗುವಂಥವು" ಎಂದು ಪ್ಯಾರೇಲಾಲ್ ಹೇಳಿದರು.

ನನಗೆ ಸಹನೆ ಮೀರುತ್ತಿತ್ತು. ಅವರ ಮಾತನ್ನು ಮಧ್ಯದಲ್ಲೇ ತಡೆಯುತ್ತ ಹೇಳಿದೆ "ಹೌದೇನು, ನೋಡಿ ಚರಕಾ ಮತ್ತು ಫೋಟೋಗ್ರಫಿ ಎರಡೂ ಸಹ ಕರಕುಶಲ ಕೆಲಸಗಳೇ ಅಲ್ಲವೆ?"

"ಇರಬಹುದು, ಆದರೆ ಇವರೆಡರಲ್ಲಿ ಚರಕಾನೇ ಮುಖ್ಯ" ಎಂದರು ಪ್ಯಾರೇಲಾಲ್. ನನ್ನ ಪರಿಸ್ಥಿತಿ ಚರಕಾದ ನೂಲುಹುರಿಯಲ್ಲಿ ಸಿಕ್ಕಿಕೊಂಡ ಕೀಟದಂತಾಗಿತ್ತು. ಬಿಡಿಸಿಕೊಳ್ಳಲು ಪ್ರಯತ್ನ ಮಾಡಿದಷ್ಟೂ ಅವರ ಮಾತಿನ ಎಳೆಗಳಲ್ಲಿ ನಾನು ಇನ್ನಷ್ಟು ಸಿಕ್ಕಿಕೊಳ್ಳುತ್ತಿದ್ದೆ. ಅವರು ಚರಕಾ ಬಗ್ಗೆ ಹೇಳುತ್ತಲೇ ಇದ್ದರು. ಅದರ ದಾರಗಳು, ಅಡ್ಡಡ್ಡ ಕತ್ತರಿ ಪಟ್ಟಿಗಳು... ಸ್ಪ್ರಿಂಗ್ ಕ್ರಿಯೆ.... ತಿರುಗುವಾಗ ಹೇಗೆ ಒಂದಿಷ್ಟೂ ಘರ್ಷಣೆ ಇರುವುದಿಲ್ಲ... ಚಕ್ರ ಎಷ್ಟು ನೇರವಾಗಿ... ದೃಢವಾಗಿ ಇರುತ್ತದೆ. ಇತ್ಯಾದಿ. ಒಟ್ಟಿನಲ್ಲಿ ಚರಕಾ ಎಂಬ ಶಿಲುಬೆಗೆ ನನ್ನನ್ನು ಏರಿಸಿದಂತಾಗಿತ್ತು.

"ನಿಮಗೆ ಇನ್ನೊಂದು ಸೂಚನೆ ಕೊಡುತ್ತೇನೆ. ನಿಮ್ಮ ಕ್ಯಾಮರಾ ಗಾಂಧಿಯವರ ಬಾಹ್ಯ ಆಕಾರವನ್ನು ಸೆರೆಹಿಡಿದರೆ, ಚರಕಾ ಕುರಿತ ನಿಮ್ಮ ಬರಹ ಅವರ ಅಂತರಂಗವನ್ನು ಪ್ರತಿಬಿಂಬಿಸುತ್ತದೆ. ಆದ್ದರಿಂದ ನೀವು ಚರಕಾ ತತ್ವವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳುವುದು ತುಂಬ ಅಗತ್ಯ. ಮಂಗಳವಾರದ ನಂತರ ಈ ಬಗ್ಗೆ ನಿಮಗೆ ಬಿಡುವಾಗಿ ತಿಳಿಸುತ್ತೇನೆ. ಈವತು ನನಗೆ ಸಮಯವಿಲ. ಹರಿಜನ್‌ಗೆ ಎಡಿಟೋರಿಯಲ್ ಬರೆಯಬೇಕು. ಈವ

ಸಾಕಷ್ಟು ತಿಳಿಸಿದ್ದೇನೆ. ಇದನ್ನು ಸರಿಯಾಗಿ ಅರಗಿಸಿಕೊಳ್ಳಿ, ಚಿಂತಿಸಿ. ಆಮೇಲೆ ನನ್ನ ಹತ್ತಿರ ಬನ್ನಿ. ನಿಮಗೆ ನೂಲುವುದನ್ನು ಹೇಳಿಕೊಡುತ್ತೇನೆ" ಎಂದರು. "ಆದರೆ ಈ ದಿನವೇ ನನಗೆ ಕಲಿಸಿ ಮತ್ತು ಮೊದಲೇ ಗೊತ್ತುಪಡಿಸಿದಂತೆ ನಾನು ಈ ದಿನವೇ ಗಾಂಧಿ ಫೋಟೋ ತೆಗೆಯಬೇಕು" ಎಂದು ನಾನು ಪರಿಪರಿಯಾಗಿ ಈ ಸೆಕ್ರೆಟರಿಯನ್ನು ಕೇಳಿಕೊಂಡೆ. ನನ್ನ ಒತ್ತಾಯವೆಲ್ಲವೂ ಅಹಿಂಸಾತ್ಮಕವಾಗೇ ಇತ್ತು. ಆದರೂ ಏನೂ ಪ್ರಯೋಜನವಾಗಲಿಲ್ಲ.

ಚರಕಾದಿಂದ ನೂಲು ತೆಗೆಯುವ ನನ್ನ ಪಾಠ ಕುಂಟುತ್ತಾ ಸಾಗಿತ್ತು. ಚರಕಾ ಕಲಿಕೆಗೂ ಅವರವರ ಬುದ್ಧಿಶಕ್ತಿಗೂ ನೇರ ಸಂಬಂಧವಿದೆ ಎಂದು ಹೊಗಳುವಂತಹ ಅವಕಾಶ ಪ್ಯಾರೇಲಾಲ್‌ಗೆ ಸಿಗಲಿಲ್ಲ! ನಾನು ವಿಚಿತ್ರ ತಪ್ಪುಗಳನ್ನು ಮಾಡಿದೆ. ದಾರ ತುಂಡಾಗುತ್ತಿತ್ತು. ಈ ಫಜೀತಿ ಪಡುವಾಗ ಬಾಲ್‌ಬೇರಿಂಗುಗಳು, ಉಕ್ಕಿನ ಭಾಗಗಳು, ಇರುವ ಯಂತ್ರಯುಗ ನನಗೆ ಇನ್ನಷ್ಟು ಆಕರ್ಷಕವಾಗಿ ಕಾಣತೊಡಗಿತು. ಅಂತೂ ಅಂತಿಮವಾಗಿ ನಾನು ನನ್ನ ಉಪಕರಣವನ್ನೆತ್ತಿಕೊಂಡು ಗಾಂಧಿಯವರ ಗುಡಿಸಲಿಗೆ ಹೋಗಲು ಅನುಮತಿ ಸಿಕ್ಕಿತು.

ಹೋಗುವಾಗ "ನೋಡಿ ಒಂದು ಮಾತು ಗಮನಿಸಿ, ಅವರು ನಿಮ್ಮ ಕಡೆ ಯಾವ ಗಮನವನ್ನು ಕೊಡುವುದಿಲ್ಲ" ಎಂದರು ಪ್ಯಾರೇಲಾಲ್.

ನನಗೆ ಗೊತ್ತಾಯಿತು. ಅದು ಗಾಂಧಿಯವರ ಮೌನವ್ರತದ ದಿನ. ಒಳ್ಳೆಯದೇ ಆಯಿತು. ಅವರು ನನ್ನ ಕಡೆ ಗಮನ ಕೊಡದಿದ್ದರೆ ನನ್ನ ಕೆಲಸಕ್ಕೆ ಯಾವ ತಡೆಯೂ ಇರುವುದಿಲ್ಲ ಎಂದುಕೊಂಡೆ.

ನೀವು ಯಾವುದೇ flash bulb ಬಳಸಬಾರದು ಎಂದರು ಪ್ಯಾರೇಲಾಲ್. ಈ ಮಾತು ಮಾತ್ರ ನನ್ನನ್ನು ಕಂಗೆಡಿಸಿತು. ಗುಡಿಸಲಿನ ಒಳಗೆ ಬೆಳಕು ತುಂಬ ಕಡಿಮೆ ಇರುವುದು ಹೊರಗಿನಿಂದಲೇ ಗೊತ್ತಾಗುತ್ತಿತ್ತು. ಫ್ಲಾಶ್‌ನಿಂದ ಅವರ ಕಣ್ಣಿಗೆ ತೊಂದರೆಯಾಗುತ್ತೆ ಎಂದರು ಪ್ಯಾರೇಲಾಲ್. ಪ್ರಾರ್ಥನಾ ಸಭೆಗಳಲ್ಲಿ ಗಾಂಧಿಯವರು ತಾಯಂದಿರಿಗೆ ತಿಳುವಳಿಕೆ ಹೇಳುವಾಗ ನಿಮ್ಮ ಎಳೆಯ ಮಕ್ಕಳಿಗೆ ನೇರವಾಗಿ ಸೂರ್ಯವನ್ನು ತೋರಿಸಿ ಎಂದು ಹೇಳುತ್ತಿದ್ದರು. ಹೀಗೆ ಮಾಡುವುದರಿಂದ ದೃಷ್ಟಿ ಸುಧಾರಿಸುತ್ತದೆ ಎಂದು ಗಾಂಧಿಯವರ ತಿಳುವಳಿಕೆ ಇರಬೇಕು. ಇಂತಹ ಮತ್ತು ಇನ್ನಿತರ ವಾದಗಳನ್ನು ಮುಂದಿಟ್ಟು ಮೂರು ಫ್ಲಾಶ್ ಬಲ್ಬ್‌ಗಳನ್ನು ಉಪಯೋಗಿಸುವುದಕ್ಕೆ ನಾನು ಅನುಮತಿ ಪಡೆದುಕೊಂಡೆ. ಫೋಟೋಗ್ರಾಫಿಕ್ ಸಲಕರಣೆಗಳನ್ನೆಲ್ಲ ಎತ್ತಿಕೊಂಡು ಒಳಗೆ ಹೋದೆ. ಒಳಗೆ ನಾನಂದುಕೊಂಡದ್ದಕ್ಕಿಂತ ಪರಿಸ್ಥಿತಿ ಕೆಟ್ಟದಾಗಿತ್ತು. ಹೊರಗಿನ ಬೆಳಕು ಸ್ವಲ್ಪಮಟ್ಟಿಗೆ ಬರುತ್ತಿತ್ತು. ಆದರೆ ನಾನು ಎಲ್ಲಿ ಕೇಂದ್ರೀಕರಿಸಬೇಕಿತ್ತೋ ಅಲ್ಲೇ ಬೆಳಕಿರಲಿಲ್ಲ. ಗಾಂಧೀಜಿಯವರ ತಲೆಯ ನೇರಕ್ಕೆ ಮೇಲಿದ್ದ ಕಿಟಕಿಯಿಂದ ಒಂದೇ ಒಂದು ಬೆಳಕಿನ ಕಿರಣ ನನ್ನ ಲೆನ್ಸ್‌ಗೆ ಸರಿಯಾಗಿ ಬೀಳುತ್ತಿತ್ತು. ಅವರ ಕಂದು ಬಣ್ಣದ ದೇಹ ಗುಡಿಸಲಿನ ಗೋಡೆಯ ಹಿನ್ನೆಲೆಯೊಂದಿಗೆ ಲೀನವಾಗಿತ್ತು. ಯಾವುದೇ ರೀತಿಯ Shading ಅಥವಾ ಕೈಚಳಕದಿಂದಲೂ ಅದನ್ನು ಸರಿಪಡಿಸಲು ಸಾಧ್ಯವಾಗುವಂತಿರಲಿಲ್ಲ. ಅವರು ನ್ಯೂಸ್‌ಪೇಪರುಗಳ ಒಂದು ದೊಡ್ಡ ರಾಶಿಯನ್ನಿಟ್ಟುಕೊಂಡು ಪೇಪರಿನ ಮೇಲೆ

ಬಾಗಿ ಓದುತ್ತಾ ಕುಳಿತಿದ್ದರು. ಹೀಗಾಗಿ ಅವರ ಮುಖಲಕ್ಷಣಗಳೆಲ್ಲವೂ ಮರೆಯಾಗಿ ಹೋಗಿದ್ದವು. ಪ್ಯಾರೇಲಾಲ್ ಮೊದಲೇ ಹೇಳಿದಂತೆ ಗಾಂಧಿ ನನ್ನ ಕಡೆ ಯಾವ ಗಮನವನ್ನೂ ಕೊಡಲಿಲ್ಲ. ಅದಕ್ಕೆ ನಾನು ಋಣಿಯಾಗಿರಬೇಕು.

ನನ್ನ ಕ್ಯಾಮರಾದ ಭಾಗಗಳು ಸಾಮಾನ್ಯವಾಗಿ ಸರಿಯಾಗಿ ಕೆಲಸ ಮಾಡುತ್ತವೆ. ಆದರೆ ಯಾಥಾದರೂ ಬಹುಮುಖ್ಯವಾದ ಹಾಗೂ ಜಟಿಲ ವ್ಯಕ್ತಿತ್ವದ ಫೋಟೋ ತೆಗೆಯುವ ಸಂದರ್ಭದಲ್ಲೇ ವಿಚಿತ್ರವಾಗಿ ವರ್ತಿಸುತ್ತವೆ. ಕೆಲಸ ಮಾಡದೆ ಮುಷ್ಕರ ಹೂಡುತ್ತವೆ. ಈಜಿಪ್ಟಿನ ದೊರೆ ಫರೂಕ್, ಚರ್ಚಿಲ್, ಇಥಿಯೋಪಿಯಾದ ಚಕ್ರವರ್ತಿ, ಪೋಪ್... ಮೊದಲಾದವರ ಚಿತ್ರ ತೆಗೆಯುವಾಗೆಲ್ಲ ಇಂಥದೇ ಪರಿಸ್ಥಿತಿಯಾಗಿತ್ತು. ತಂಪು ವಾತಾವರಣದಿಂದ ಬಿಸಿವಾತಾರವಣಕ್ಕೆ ಬಂದರೂ ನನ್ನ ಸಲಕರಣೆಗಳ ಸ್ವಭಾವ ಸುಧಾರಿಸಲಿಲ್ಲ. ಫ್ಲಾಶ್‌ಬಲ್ಬುಗಳನ್ನು ಬಳಸುವುದಕ್ಕೆ ಮೊದಲು ಕ್ಯಾಮರಾ ಸ್ವಲ್ಪ ಹೊಂದಿಕೊಳ್ಳಲಿ ಎಂದು ಕೆಲವು Slowtime shots ತೆಗೆದೆ. ತಾನಾಗೇ ರಿಲೀಸ್ ಆಗುವ ಕಡೆ ಶಟರ್ ಚಲಿಸದೆ ಹಾಗೇ ಕಚ್ಚಿಕೊಂಡಿತ್ತು. ಅದನ್ನು ಹೇಗೋ ಸರಿಪಡಿಸಿಕೊಂಡೆ. ಆಗ ಬ್ಲೇಡ್ ಅರೆಸ್ಟರ್ ಗ್ಯಾಜೆಟ್ ಅಡ್ಡಕ್ಕೆ ನುಗ್ಗಿತು. ಫಿಲ್ಮನ್ನು ಇನ್ನೂ ಅರ್ಧ ಎಳೆದಿದ್ದಾಗ ಫಿಲ್ಮ್‌ಪ್ಯಾಕ್‌ಗಳಲ್ಲಿದ್ದ ಪೇಪರ್ ಪುಲ್‌ಗಳು ಹರಿದವು. ಟ್ರೈಪಾಡನ್ನು ನಿಲ್ಲಿಸಲು ಯತ್ನಿಸಿದಾಗ ಅದರ ಎರಡು ಕಾಲುಗಳು ಅರ್ಧದಷ್ಟು ಮಾತ್ರ ಈಚೆ ಬಂದವು. ಮೂರನೇ ಕಾಲು ಸರಿಯಾಗಿ ಉದ್ದಕ್ಕೆ ಚಾಚಿಕೊಂಡಿತು.

ಗಾಂಧೀ ಪೇಪರ್ ಕ್ಲಿಪಿಂಗ್‌ಗಳನ್ನು ಪಕ್ಕಕ್ಕಿಟ್ಟು ಚರಾಕದಲ್ಲಿ ದಾರ ತೆಗೆಯಲು ಆರಂಭಿಸಿದರು. ಮೊದಲ flash bulb ಉಪಯೋಗಿಸಿಬಿಡೋಣ ಎಂದು ನಿರ್ಧರಿಸಿದೆ. ಎರಡನೇ ಷಾಟ್ ಸರಿಯಾಗಿ ಬಂತು. ಅಂತ ಅಂದುಕೊಳ್ಳುವಷ್ಟರಲ್ಲಿ ನಾನು slideನ್ನು ಪಕ್ಕಕ್ಕೆ ಜರುಗಿಸಿರಲಿಲ್ಲ ಎಂದು ನೆನಪಾಯಿತು. ಮೂರನೇ ಷಾಟ್ ತೆಗೆಯುವ ಮೊದಲು ಎಲ್ಲವನ್ನೂ ಸರಿಯಾಗಿ ಚೆಕ್ ಮಾಡಿದೆ. ಗಾಂಧಿಯನ್ನು ಸರಿಯಾಗಿ ಗಮನಿಸಿದೆ. ಅವರ ಕಂದುಬಣ್ಣದ ಕೈ ಬಿಳಿಯ ದಾರವನ್ನು ಹಿಡಿದು ಕುಶಲತೆಯಿಂದ ಮೇಲೆತ್ತಿ ಎಳೆಯುವಾಗ ಸರಿಯಾಗಿ ಕ್ಲಿಕ್ ಮಾಡಿದೆ. ಸಧ್ಯ ಎಂದು ಎಲ್ಲವನ್ನೂ ಬಾಚಿಕೊಂಡು ಹೊರಗೋಡಿದೆ. ಯಂತ್ರ ಯುಗ ಇಷ್ಟೊಂದು ಕೈಕೊಡುತ್ತೆ ಎಂದು ನನಗೆ ಗೊತ್ತಿರಲಿಲ್ಲ! ಅಂತಿಮವಾಗಿ ನಾನು ತೆಗೆದ ಚಿತ್ರವನ್ನು ನಾನು ಕಣ್ಣಾರೆ ನೋಡುವವರೆಗೂ ನನಗೆ ಯಂತ್ರಯುಗದಲ್ಲಿ ವಿಶ್ವಾಸವೇ ಹೊರಟುಹೋಗಿತ್ತು!

ಇದಾದ ನಂತರದ ವಾರಗಳಲ್ಲಿ ನಾನೂ ಕೂಡ ಎಲ್ಲ ಬಾತ್ಮೀದಾರರಂತೆ ಆಶ್ರಮಕ್ಕೆ ಪದೇಪದೇ ಹೋಗುತ್ತಿದ್ದೆ. ಬ್ರಿಟಿಷ್ ಭಾರತೀಯ ಮಾತುಕತೆಗಳು ನಡೆಯುತ್ತಿದ್ದ ಸಂದರ್ಭದಲ್ಲಿ ಭಂಗಿಕಾಲೋನಿ ಒಂದು ರೀತಿ Summer white house ಆಗಿತ್ತು. ಸಂಪುಟ ಸಚಿವರ ಸಮಾವೇಶಗಳು ವೈಸ್‌ರೀಗಲ್ ಪ್ಯಾಲೇಸ್‌ನಲ್ಲಿ ನಡೆಯುತ್ತಿದ್ದವು. ಗಾಂಧಿಯವರು ಸರ್ಕಾರದಲ್ಲಿ ಯಾವುದೇ ಅಧಿಕಾರ ಸ್ಥಾನವನ್ನು ಹಿಡಿಯದಿದ್ದರೂ, ಹಿಡಿಯುವ ಅಪೇಕ್ಷೆ ಅವರಿಗಿಲ್ಲದಿದ್ದರೂ ಅವರೊಂದಿಗೆ ಸಮಾಲೋಚಿಸದೆ ಯಾವ ಮುಖ್ಯ ನಿರ್ಣಯವೂ ಆಗುತ್ತಿರಲಿಲ್ಲ. ಅತ್ಯಂತ ಪ್ರತಿಷ್ಠಿತ ತ್ರಿಮೂರ್ತಿಗಳಾದ ಸ್ಟಾಫರ್ಡ್‌ಕ್ರಿಪ್ಸ್, ಲಾರ್ಡ್‌ಪೆಥಿಕ್ ಲಾರೆನ್ಸ್ ಹಾಗೂ ಫಸ್ಟ್

ಲಾರ್ಡ್ ಆಫ್ ಅಡ್ಮಿರಾಲಿಟಿಯೂ ಸೇರಿದಂತೆ ಗಣ್ಯವ್ಯಕ್ತಿಗಳೆಲ್ಲರೂ ಅಸ್ಪೃಶ್ಯರ ವಸತಿ ಪ್ರದೇಶಕ್ಕೆ ಪ್ರವಾಹದಂತೆ ಬಂದು ಹೋಗುತ್ತಿದ್ದರು.

ಆದರೆ ದೆಹಲಿಯ ಬಹುಮುಖ್ಯರಾದ ಇಬ್ಬರು ಮಾತ್ರ ಈ ಸ್ಥಳಕ್ಕೆ ಬರಲಿಲ್ಲ. ಇವರಲ್ಲಿ ಒಬ್ಬರು ಮಹಮ್ಮದ್ ಆಲಿ ಜಿನ್ನಾ, ಅವಿಭಜಿತ ಭಾರತದ ಬದ್ಧ ವಿರೋಧಿ. ಅವರು ಪ್ರತ್ಯೇಕ ಪಾಕಿಸ್ತಾನವನ್ನು ರೂಪಿಸುವ ತಂತ್ರದಲ್ಲಿ ತೊಡಗಿದ್ದರು. ಅವರನ್ನು ಗಾಂಧಿಯ ಬಾಗಿಲಿಗೆ ಬರುತ್ತಾರೆಂದು ನಿರೀಕ್ಷಿಸುವಂತಿರಲಿಲ್ಲ. ಇನ್ನೊಬ್ಬರು ಹರ್ಬರ್ಟ್ ಹೂವರ್. ಅವರು ಭಾರತದಲ್ಲಿ ಬಂದೊದಗಲಿರುವ ಕ್ಷಾಮವನ್ನು ಎದುರಿಸುವುದಕ್ಕಾಗಿ ಅಮೆರಿಕಾದ ಆಹಾರಧಾನ್ಯಗಳನ್ನು ವಿತರಿಸುವುದಕ್ಕೆ ಸಂಬಂಧಿಸಿದಂತೆ ಭಾರತದ ನಾಯಕರೊಂದಿಗೆ ಸಮಾಲೋಚಿಸಲು ಬಂದಿದ್ದ ಅಮೆರಿಕಾದ ಫುಡ್ ಕಮಿಷನ್ನಿನ ಮುಖ್ಯಸ್ಥರಾಗಿದ್ದರು. ಈ ಸಮಾವೇಶ ವೈಸ್‌ರೀಗಲ್ ಭವನದಲ್ಲಿ ನಡೆಯುತ್ತಿದ್ದುದರಿಂದ ಹೂವರ್, ಗಾಂಧಿಯ ಬಳಿ ಬರಬೇಕಾಗಲಿಲ್ಲ. ಗಾಂಧಿಯವರೇ ಆ ಸಮಾವೇಶಕ್ಕೆ ಹೋಗಬೇಕಿತ್ತು.

ಜನರಿಗೆ ವಿತರಿಸಬೇಕಾದ ಆಹಾರ ವ್ಯವಸ್ಥೆಗೆ ಸಂಬಂಧಿಸಿದಂತೆ ಅಭಿಪ್ರಾಯ ತಿಳಿಸಲು ಜಿನ್ನಾ ಅವರನ್ನೂ ಸಹ ಹೂವರ್ ಭೇಟಿಗೆ ಆಮಂತ್ರಿಸಲಾಗಿತ್ತು. ಹೂವರ್‌ಗೆ ಅಂಥ ಇಚ್ಛೆ ಇದ್ದರೆ ಅವರೇ ತಮ್ಮಲ್ಲಿಗೆ ಬರಲಿ ಎಂದು ಜಿನ್ನಾ ಹೇಳಿಕಳಿಸಿದ್ದರು. ಈ ಮಾತನ್ನು ಕೇಳಿದಾಗ ಹೂವರ್‌ಗೆ ಬಹಳ ಅಚ್ಚರಿಯಾಯಿತು. ಏಕತೆ ಇಲ್ಲವೇ ವಿಭಜನೆ ಎಂಬ ವಿವಾದ ಭುಗಿಲೆದ್ದು ಎಲ್ಲೆಲ್ಲೂ ಜಿನ್ನಾ ಹೆಸರೇ ಕೇಳಿ ಬರುತ್ತಿದ್ದ ಈ ಸಂದರ್ಭದಲ್ಲಿ ಹೂವರ್ ಅವರು ಅಷ್ಟೇ ತೀಕ್ಷ್ಣವಾಗಿ "Who is Jinnah? Never heard of him" ಎಂದು ಪ್ರತಿಕ್ರಿಯಿಸಿದರು. ಈ ಪ್ರತಿಕ್ರಿಯೆ ಮುಸ್ಲಿಮೇತರ ಜನಕ್ಕೆ ತುಂಬ ಇಷ್ಟವಾಯಿತು. ಪದೇಪದೇ ಅವರ ಮಾತನ್ನು ಉಲ್ಲೇಖಿಸಿ ಸಮಾಧಾನ ಪಟ್ಟುಕೊಳ್ಳುತ್ತಿದ್ದರು.

ಗಾಂಧಿಯವರೊಂದಿಗೆ ಮಾತಾಡಬಯಸಿದ ಗಣ್ಯವ್ಯಕ್ತಿಗಳೇ ಆಗಲಿ ಸಾಮಾನ್ಯ ಜನರೇ ಆಗಲಿ ಬೆಳಗಿನ ಜಾವದಲ್ಲಿಯೇ ಗಾಂಧಿಯವರನ್ನು ಭೇಟಿ ಮಾಡಬೇಕಿತ್ತು. ಗಾಂಧಿಯವರು ಪ್ರತಿದಿನ ಸೂರ್ಯೋದಯಕ್ಕೆ ಮೊದಲೇ ಎದ್ದು ಉದ್ಯಾನದಲ್ಲಿ ಒಂದು ಮೈಲಿಯಷ್ಟು ದೂರ ನಡೆಯುತ್ತಿದ್ದರು. ತಮ್ಮನ್ನು ಸಂದರ್ಶಿಸಲು ಬಂದವರೊಂದಿಗೆ ಗಾಂಧಿ ನಡೆದುಕೊಂಡು ಹೋಗುವಾಗಲೇ ಮಾತಾಡಿ ಮುಗಿಸುತ್ತಿದ್ದರು. ಗಾಂಧಿಯವರ ವೇಗದ ನಡಿಗೆಯೊಂದಿಗೆ ಹೊಂದಿಕೊಳ್ಳಲು ವೇಗವಾಗಿ ಓಡಬೇಕಿತ್ತು. ಗಾಂಧಿಯ ಹಿಂದೆಯೇ ಓಡಿಕೊಂಡು ಬರುತ್ತಿದ್ದ ಆಪ್ತಕಾರ್ಯದರ್ಶಿಗಳಿಗೆ ಗಾಂಧಿ ನಡೆಯುತ್ತಲೇ ಸೂಚನೆಗಳನ್ನು ಕೊಡುತ್ತಿದ್ದರು. ನೆಹರೂ, ಪಟೇಲ್ ಮೊದಲಾದ ರಾಜಕೀಯ ನಾಯಕರುಗಳೊಂದಿಗೆ ಮಾತುಕತೆಯೂ ಈ ಸಮಯದಲ್ಲಿ ನಡೆಯುತ್ತಿತ್ತು. ಯಾರು ಎಷ್ಟೇ ಮುಖ್ಯವ್ಯಕ್ತಿಯಾಗಿರಲಿ, ಗಾಂಧಿ ಭೇಟಿ ಸಮಯ ನೀಡುತ್ತಿದ್ದುದು ಬೆಳಗಿನ ಐದು ಅಥವಾ ಆರು ಗಂಟೆಗೆ. ನಡಿಗೆಯೊಂದಿಗೆ ಮಾತನ್ನೂ ಮುಗಿಸಬಹುದು ಎಂಬುದು ಅವರ ಲೆಕ್ಕಾಚಾರ. "ವಾಕಿಂಗ್‌ಗೆ ಸಮಯವೇ ಆಗುವುದಿಲ್ಲ" ಎಂಬ ಮಾತನ್ನು ಯಾರು ಹೇಳಿದರೂ ಗಾಂಧಿ ಒಪ್ಪಿಕೊಳ್ಳುವುದಿಲ್ಲ. ಊಟ ಬಿಡುವುದೋ ಅಥವಾ ವಾಕಿಂಗ್

ಬಿಡುವುದೋ ಎಂಬ ಪ್ರಶ್ನೆ ಬಂದರೆ ನಾನು ಊಟ ಬಿಡುತ್ತೇನೆಯೇ ಹೊರತು ನಡಿಗೆಯನ್ನಲ್ಲ ಎನ್ನುತ್ತಾರೆ ಗಾಂಧಿ. "ದೈಹಿಕ ಆರೋಗ್ಯ ಕಾಪಾಡಿಕೊಳ್ಳುವ ಬಗ್ಗೆ ಅವರ ತಂತ್ರ ಇದು" ಎಂದು ಪ್ಯಾರೆಲಾಲ್ ಹೇಳಿದರು. ಈ ಅವಧಿಯಲ್ಲಿ ನನ್ನ physical fitness ಪರೀಕ್ಷೆ ಎದುರಾಯಿತು. ಗಾಂಧೀವಾದದ ಸಂಭ್ರಮದಲ್ಲಿ ನಾನೂ ಬೆಳಗಿನ ವಾಕ್ ಮಾಡತೊಡಗಿದೆ. ಬೆಳಿಗ್ಗೆ ನಾಲ್ಕೂವರೆಗೇ ಏಳುತ್ತಿದ್ದೆ. ಒಬ್ಬ ಟ್ಯಾಕ್ಸಿ ಡ್ರೈವರ್‌ನನ್ನು ಹಿಡಿದು ಆಶ್ರಮದವರೆಗೆ ಹೋಗುತ್ತಿದ್ದೆ. ಆರು ಗಂಟೆಗೆ ಗಾಂಧಿಯವರ ವಾಕ್ ಪ್ರಾರಂಭವಾಗುತ್ತದೆ ಎಂದು ಹೇಳಿದ್ದರು. ಆದರೆ ನಾನು ಹೋದ ದಿನ ಗಾಂಧಿ ಐದುಗಂಟೆಗೇ ಹೋಗಿರುತ್ತಿದ್ದರು. ನಾನು ಐದು ಗಂಟೆಗೆ ಬಂದಾಗ ಗಾಂಧಿ ಮತ್ತು ಅವರ ಶಿಷ್ಯರು ಇನ್ನಾವುದೋ ಹೊಸ ಜಾಗಕ್ಕೆ ಹೋಗಿದ್ದಾರೆ ವ್ಯಾಯಾಮಕ್ಕೆ ಎಂದು ತಿಳಿದುಬರುತ್ತಿತ್ತು. ಗಾಂಧಿಯವರು ಹೊರಡುವ ಸಮಯಕ್ಕೂ ನಾನು ಅಲ್ಲಿರುವ ಸಮಯಕ್ಕೂ ಒಂದು ವೇಳೆ ತಾಳೆಯಾದ ಸಂದರ್ಭದಲ್ಲಿ ಬೆಳಕು ಕಡಿಮೆ ಇರುತ್ತಿತ್ತು. ಜೊತೆಗೆ ಫ್ಲಾಶ್ ಬಲ್ಬ್ ಉಪಯೋಗಿಸಕೂಡದೆಂಬ ನಿಷೇಧದಿಂದಾಗಿ ಉತ್ತಮ ನೆಗೆಟಿವ್ ಅಸಾಧ್ಯವಾಗುತ್ತಿತ್ತು. ನಾನು ತೋಟದ ಒಂದು ತುದಿಯಲ್ಲಿ ಗಾಂಧಿ ಮತ್ತು ಅವರೊದಿಗೆ ಹೋಗುತ್ತಿದ್ದ ಆಶ್ರಮವಾಸಿಗಳನ್ನು ಗಮನಿಸುತ್ತ ಕೂರುತ್ತಿದ್ದೆ. ಅದು ಯಾವುದೋ ಮಧ್ಯಕಾಲೀನ ದೃಶ್ಯದಂತೆ ಕಾಣುತ್ತಿತ್ತು. ಶಾರ್ಟ್‌ಹ್ಯಾಂಡ್ ನೋಟ್‌ಬುಕ್ ಹಿಡಿದು ಗಾಂಧಿಯ ಹಿಂದೆ ಓಡುತ್ತಿದ್ದ ಸೆಕ್ರೆಟರಿಗಳು ಆ ದೃಶ್ಯಕ್ಕೆ ಅಭಾಸವಾಗಿ ಕಾಣುತ್ತಿದ್ದರು. ನಾನು ಒಂದು ಅದ್ಭುತ ಚಿತ್ರವನ್ನು ಹೇಗೆ ತೆಗೆಯಬೇಕು ಎಂದು ಯೋಚಿಸುತ್ತ ಕೂರುತ್ತಿದ್ದೆ.

ನಾನು ಪದೇಪದೇ ಇಲ್ಲಿ ಕಾಣಿಸಿಕೊಳ್ಳುವುದನ್ನು ಗಾಂಧಿ ಗಮನಿಸಿದ್ದರು. ನೋಡಿದ ಕೂಡಲೇ ಸ್ನೇಹಪರವಾದ ಏನಾದರೊಂದು ಮಾತು ಹೇಳುವಷ್ಟು ಅವರು ನನ್ನನ್ನು ಗಮನಿಸಿದ್ದರು. ನನ್ನನ್ನು ಅವರು ಮಾತಾಡಿಸಿದ್ದೇನೂ ಇಲ್ಲ. ಆದರೆ ನನ್ನ ಕಡೆ ನೋಡುತ್ತ ಏನನ್ನೋ ತಮಾಷೆಯಾಗಿ ಚುಟುಕಾಗಿ ಹೇಳಿದರು ಎಂದು ಗೊತ್ತಾಗುತ್ತಿತ್ತು. ಅವರು ನನಗೊಂದು ಮುದ್ದಿನ ಹೆಸರು ಕೊಟ್ಟಿದ್ದರು. ನಾನು ನನ್ನ ಫೋಟೋಗ್ರಾಫಿಕ್ ಸಲಕರಣೆಗಳೊಂದಿಗೆ ಅವರ ಮುಂದೆ ಕಾಣಿಸಿಕೊಂಡರೆ ಸಾಕು "There is the torturer again" ಎನ್ನುತ್ತಿದ್ದರು.

ಒಂದು ಬೆಳಿಗ್ಗೆ ಗಾಂಧಿ ಭಂಗಿ ಕಾಲೋನಿ ಪಕ್ಕದ ವಾಲಿಬಾಲ್ ಮೈದಾನದಲ್ಲಿ ವಾಕ್ ಹೊರಟಿದ್ದರು. ನಾನು ಎತ್ತರದ ಎರಡು ಮರಗಳ ಮಧ್ಯದ ಜಾಗಕ್ಕೆ ಎದುರಾಗಿ ಒಂದು ಪಕ್ಕ ನನ್ನ ಸಲಕರಣೆಗಳೊಂದಿಗೆ ತಳ ಊರಿದ್ದೆ. ಒಂದು ವೇಳೆ ಗಾಂಧಿಯವರು ಸೂರ್ಯನ ಬಿಸಿಲು ಬರುವಷ್ಟು ಹೊತ್ತಿನ ತನಕ ದೀರ್ಘ ವಾಕ್ ಮಾಡಿದರೆ ಬೆಳಕಿನ ಮೊದಲ ಧಾರೆ ಈ ಮರಗಳ ಮಧ್ಯೆ ತೂರಿಬರುತ್ತದೆ ಎಂದು ಅಂದಾಜು ಮಾಡಿದ್ದೆ. ಗಾಂಧಿಯವರ ಚಿತ್ರ ತೆಗೆಯಲು ಇದಕ್ಕಿಂತ ಒಳ್ಳೆಯ ಅವಕಾಶವಿರಲಾರದು. ಈದಿನ ಬೇರೆ ಯಾವ ಗಣ್ಯರೂ ಅವರೊದಿಗೆ ಇರಲಿಲ್ಲ. ಗಾಂಧಿಯ ಅಕ್ಕಪಕ್ಕ ಮತ್ತು ಹಿಂದೆ ಆಶ್ರಮವಾಸಿಗಳು ಸೈನಿಕರ ಶ್ರೇಣಿಯಲ್ಲಿರುವಂತೆ ಇದ್ದರು. ಗಾಂಧಿ ಎಂದಿನಂತೆ ಇಬ್ಬರು ಹುಡುಗಿಯರ ಭುಜಗಳ ಮೇಲೆ ಕೈಹಾಕಿಕೊಂಡಿದ್ದರು. ಅವರ ಎಡಪಕ್ಕದಲ್ಲಿ ಅಭಾ. ಬಲಕ್ಕೆ ಅವರ ಮೊಮ್ಮಗಳು ಸೀತಾ

ಗಾಂಧಿ ತಮ್ಮ ಉದ್ದನೆಯ ಕಾಲುಗಳನ್ನು ದೂರದೂರಕ್ಕೆ ದೃಢವಾಗಿ ಹಾಕುತ್ತಾ ನಡೆಯುವಾಗ ಅವರ ಐದು ಶಿಲಿಂಗುಗಳ ವಾಚು ಸೊಂಟದಿಂದ ತೂಗಾಡುತ್ತಿತ್ತು. ಅವರು ಹೀಗೇ ವಾಲಿಬಾಲ್ ಕೋರ್ಟ್‌ನಲ್ಲಿ ಹಿಂದೆ ಮುಂದೆ ಓಡಾಡುತ್ತಿದ್ದಾಗ ಪೂರ್ವದಿಕ್ಕು ಪ್ರಕಾಶಮಾನವಾಗತೊಡಗಿತ್ತು. ವಾಲಿಬಾಲ್ ಕೋರ್ಟಿನಲ್ಲಿ ಅವರು ಕೊನೆಯ ತಿರುವು ತೆಗೆದುಕೊಂಡಾಗ ಸೂರ್ಯನ ಮೊದಲ ಹೊಂಗಿರಣ ಮರಗಳ ಮಧ್ಯದಿಂದ ತೂರಿಬಂದಿತು. ಗಾಂಧಿ ನನ್ನ ಮುಂದಿನಿಂದ ನಡೆದು ಹೋಗುತ್ತ "ನಿನ್ನ ಪ್ರಯತ್ನಗಳೆಲ್ಲ ವಿಫಲವಾದವು" ಎಂದು ನಕ್ಕರು. ಆದರೆ ಅವರ ಎಣಿಕೆ ಸರಿ ಇರಲಿಲ್ಲ. ನಾನು ಬೇರೆ ಬೇರೆ focal lengthಗಳಿರುವ ಎರಡು ಕ್ಯಾಮರಾಗಳನ್ನು ನನಗೆ ಬೇಕಾಗಿದ್ದ ಕಡೆ ಮುಖಮಾಡಿ ಇಟ್ಟಿದ್ದೆ. ಅವರು ಆ ಸೂರ್ಯಕಿರಣಗಳ ಕೆಳಗೆ ಹಾದುಹೋದಾಗ ನನಗೆ ಎರಡು ಅದ್ಭುತ ನೆಗೆಟಿವ್‌ಗಳು ಸಿಕ್ಕವು. ಒಂದು ಚಿತ್ರದಲ್ಲಿ ಗಾಂಧಿ ಮತ್ತು ಅವರ ಅನುಯಾಯಿಗಳ ಸಂಪೂರ್ಣ ಶ್ರೇಣಿ ಇದ್ದಿತು. ಇನ್ನೊಂದು, ಮಹಾತ್ಮರ close up. ಅದರಲ್ಲಿ ಅವರು ಅಭಾ ಮತ್ತು ಸೀತಾ ಭುಜಗಳ ಮೇಲೆ ಕೈಹಾಕಿ ಬಾಗಿದ ಚಿತ್ರ. ಈ ಗುಂಪು ಅಸ್ಪೃಶ್ಯರ ಕಾಲೋನಿಯಲ್ಲಿ ಮರೆಯಾಯಿತು. ಎಂದಿನಂತೆ ವಾಕಿಂಗ್ ಮುಗಿದ ನಂತರ ಗಾಂಧೀಜಿಗೆ ಎರಡು ಗಂಟೆಗಳ ಕಾಲ ಮಸಾಜು ನಡೆಯುತ್ತಿತ್ತು. ಅದನ್ನು ಮಾಡುತ್ತಿದ್ದವರು ಸುಶೀಲಾ ಅಥವಾ ಆಶ್ರಮದ ಯಾರಾದರೊಬ್ಬ ಮಹಿಳೆ.

ಬೇಗ ಮಳೆಯಾಗದೆ ದೆಹಲಿ ಬಿಸಿಯೇರುತ್ತಿತ್ತು. ಭಯಾನಕ ಬಿಸಿಲಿನ ದಿನಗಳು. ಮಾನ್ಸೂನ್ ಮಳೆಗಾಗಿ ಎಲ್ಲರೂ ಕಾತರಿಸುತ್ತಿದ್ದರು. ಕ್ಯಾಬಿನೆಟ್ ಸಮಾವೇಶವನ್ನು ಆದಷ್ಟು ಬೇಗ ಮುಗಿಸಬೇಕೆಂದು ಭಗೀರಥ ಪ್ರಯತ್ನ ಮಾಡಿದರೂ ಚರ್ಚೆಗಳು ಮುಂದಕ್ಕೆಳೆದುಕೊಂಡು ಹೋದವು. ಸ್ವಾತಂತ್ರ್ಯದ ರೂಪುರೇಷೆಗಳು ಇನ್ನೂ ಅಸ್ಪಷ್ಟವಾಗೇ ಮಸುಕಾಗಿಯೇ ಉಳಿದವು. ನಗರದ ರಸ್ತೆಗಳು, ಕಟ್ಟಡಗಳಿಂದ ಬಿಸಿಲಿನ ಧಗೆ ರಾಚುತ್ತಿತ್ತು. ರಾಜಕಾರಣಿಗಳು ಮಂತ್ರಿಗಳು ಉಳಿದೆಲ್ಲ ಜೀವಂತ ಪಶುಪ್ರಾಣಿಗಳೂ ಮೇಲುಸಿರು ಬಿಡುವಂತಾಯಿತು. ಅಂತಿಮವಾಗಿ ಕ್ಯಾಬಿನೆಟ್ ಸಮಾವೇಶವನ್ನು ತಂಪಾದ ಸ್ವಚ್ಛ ಹವೆಯ ಪರ್ವತ ಪ್ರದೇಶಕ್ಕೆ ಸ್ಥಳಾಂತರಿಸಿದರು. ಇಡೀ ರಾಜಕಾರಣಿಗಳ ಸಮೂಹ ಹಿಮಾಲಯದ ತಪ್ಪಲಿನ ತಂಪು ಶಿಖರ ಪ್ರದೇಶ - ಸಿಮ್ಲಾದ ಕಡೆಗೆ ಚಲಿಸಿತು.

ಗಾಂಧಿ ಮತ್ತು ಅವರ ಆಶ್ರಮವನ್ನು ಸ್ಥಳಾಂತರಿಸುವುದು ಒಂದು ದೊಡ್ಡ ಸಂಗತಿಯೇ ಆಯಿತು. ಇದರಲ್ಲಿ ನಮ್ಮಲ್ಲಿ ಅನೇಕರು ಪಾಲುಗೊಂಡೆವು. ಗಾಂಧಿ ಸರಳ ಜೀವನದಲ್ಲಿ ನಂಬುಗೆ ಇಟ್ಟವರಾದ್ದರಿಂದ ರೈಲಿನ ಮೂರನೇ ದರ್ಜೆಯ ಬೋಗಿಯಲ್ಲೆ ಅವರ ಪ್ರಯಾಣ. ಭಾರತದಲ್ಲಿ ಮೂರನೇ ದರ್ಜೆಯಲ್ಲಿ ಪ್ರಯಾಣಿಸಬೇಕಾದರೆ ಸಾಕಷ್ಟು ಶಕ್ತಿಯೂ ಅಗತ್ಯ. ನ್ಯೂಯಾರ್ಕ್ ಮತ್ತು ಲಂಡನ್ ಸಬ್‌ವೇಗಳಲ್ಲಿ ತುಂಬ ಜನದಟ್ಟಣೆಯಿರುವ ಸ್ಟೇಷನ್ನಿನಲ್ಲಿ ಮಾತ್ರ ಈ ರೀತಿ ಇದ್ದರೆ ಭಾರತದಲ್ಲಿ ಅದು ಮಾಮೂಲು ಸ್ಥಿತಿ. ಪ್ರಯಾಣಿಕರು ರೈಲಿನ ಛಾವಣಿ, ಕಿಟಕಿಗಳಿಗೂ ಜೋತು ಬಿದ್ದಿರುತ್ತಾರೆ. ಆದ್ದರಿಂದ ಗಾಂಧಿ ಮೂರನೇ ದರ್ಜೆಯಲ್ಲಿ ಪ್ರಯಾಣಿಸಿದಾಗ ಅವರಿಗಾಗಿ ಒಂದು ಅಥವಾ ಅನೇಕ ಭೋಗಿಗಳನ್ನು ಪಡೆದುಕೊಳ್ಳಲಾಗುತ್ತಿತ್ತು.

ಮಹಾತ್ಮರು, ಅವರ ಆಶ್ರಮವಾಸಿಗಳು, ಅವರ ಮೇಕೆಗಳು ಎಲ್ಲಕ್ಕೂ ಸ್ಥಳ ಕಲ್ಪಿಸುವುದಕ್ಕಾಗಿ. ಅವರು ಹಸುವಿನ ಹಾಲನ್ನು ಕುಡಿಯುತ್ತಿರಲಿಲ್ಲ. ಹೀಗಾಗಿ ಅವರೊಂದಿಗೆ ಮೇಕೆಗಳೂ ಕೂಡ ಮೂರನೇ ದರ್ಜೆಯಲ್ಲಿ ಪ್ರಯಾಣಿಸುತ್ತಿದ್ದವು. ಸಿಮ್ಲಾ ಪ್ರಯಾಣಕ್ಕಾಗಿ ಇಡೀ ಮೂರನೇ ದರ್ಜೆಯ ಎಲ್ಲ ಬೋಗಿಗಳನ್ನೂ ಗಾಂಧಿಯವರಿಗಾಗಿ ಪಡೆದುಕೊಳ್ಳಲಾಯಿತು. ನಾವು ಕೆಲವು ಬಾತ್ಮೀದಾರರು ಹಾಗೂ ಕೆಲವು ಕಾಂಗ್ರೆಸ್ ಪಾರ್ಟಿ ಲೀಡರುಗಳು ಗಾಂಧಿಯವರ ರೈಲಿನಲ್ಲಿ ಪ್ರಯಾಣಿಸಿದೆವು.

ಆ ಕಾಲದಲ್ಲಿ ನಾನೇ ಏಕಮಾತ್ರ ಮಹಿಳಾ ಬಾತ್ಮೀದಾರಳು. ನನಗಾಗಿ ಶವಪೆಟ್ಟಿಗೆಯಂತಿದ್ದ ಒಂದು ಪುಟ್ಟ ಕಂಪಾರ್ಟ್‌ಮೆಂಟಿನ ವ್ಯವಸ್ಥೆಯಾಯಿತು. ನಮ್ಮ ಮುಂದಿನ ಭೋಗಿಯಲ್ಲಿ ನೆಹರೂ ಮತ್ತು ಕಾಂಗ್ರೆಸ್ ಪಾರ್ಟಿ ಅಧ್ಯಕ್ಷರು. ನಮ್ಮ ಹಿಂದಿನ ಬೋಗಿಯಲ್ಲಿ ಸ್ವತಃ ಗಾಂಧಿ ಹಾಗೂ ಅವರ ಮೇಕೆಗಳಿದ್ದ ವಿಷಯ ನನಗೆ ತಿಳಿದದ್ದು ಆನಂತರವೇ.

ಎಲ್ಲ ಮುಗಿಸಿಕೊಂಡು ಹತ್ತು ದಿನಗಳಾದ ನಂತರ ಹಿಂದುರಿಗದ ಮೇಲೂ ದೆಹಲಿ ಕುಲುಮೆಯಂತೇ ಇತ್ತು. ಜಿನ್ನಾ ಎಷ್ಟುಪಟ್ಟು ಹಿಡಿದು ತಮ್ಮ ಆಟ ಆಡಿದ್ದರೆಂದರೆ ಮಾತುಕತೆಗಳೆಲ್ಲವೂ ಸ್ಥಗಿತಗೊಂಡಿದ್ದವು. ದೆಹಲಿಯಲ್ಲಿ ಮಾತುಕತೆಗಳು ಮುಂದುವರೆದವು. ನೇತಾರರು ವೈಸ್‌ರಾಯ್ ಪ್ಯಾಲೇಸಿನಿಂದ ಭಂಗಿ ಕಾಲೋನಿಯವರೆಗೆ ತರಾತುರಿಯಲ್ಲಿ ಓಡಾಡಿದರು. ಬಿಸಿಲಿನ ತಾಪ ತಡೆಯುವುದಕ್ಕಾಗಿ ಗಾಂಧಿ ಒಂದು ದೊಡ್ಡ ಬಿಳಿಯ ಟರ್ಕಿ ಟವಲನ್ನು ನೀರಿನಲ್ಲಿ ನೆನೆಸಿ ತಲೆಯ ಮೇಲೆ ಸುತ್ತಿಟ್ಟುಕೊಳ್ಳುತ್ತಿದ್ದರು. ಉದ್ದನೆಯ ಕಾಲುಗಳ ಮೇಲೆ ದಪ್ಪ ತಲೆಯ ಆಕಾರ ಒಂದು ಅಣಬೆಯಂತೆ ಕಾಣುತ್ತಿತ್ತು. ಜಿನ್ನಾ ಅಚ್ಚ ಬಿಳಿಯ ಸೂಟಿನಲ್ಲಿರುತ್ತಿದ್ದರು. ಎಲ್ಲ ವೃತ್ತಪತ್ರಿಕೆಗಳು ಮತ್ತು ಎಲ್ಲ ವೇದಿಕೆಗಳಲ್ಲಿ ಕಾಂಗ್ರೆಸ್ ಹಾಗೂ ಲೀಗ್, ಮುಸ್ಲಿಂ ಮತ್ತು ಹಿಂದೂ ಆರೋಪ ಪ್ರತ್ಯಾರೋಪಗಳ ವಿಷಯವೇ ತುಂಬಿರುತ್ತಿತ್ತು. ಇದರ ನಡುವೆ ಗಾಂಧಿಯವರ ದನಿ ಮಾತ್ರವೇ ಶಾಂತವಾಗಿರುತ್ತಿತ್ತು ಮತ್ತು ದೃಢವಾಗಿರುತ್ತಿತ್ತು. ಇನ್ನಿತರ ಎಷ್ಟೋ ವಿಷಯಗಳ ಬಗ್ಗೆ ಅವರು ಚುರುಕಾಗಿ ಪ್ರತಿಕ್ರಿಯಿಸಿದರೂ ಮುಖ್ಯ ವಿಷಯದ ಮೇಲಿನ ದೃಷ್ಟಿಕೋನದಿಂದ ವಿಚಲಿತರಾಗಲಿಲ್ಲ. ಧಾರ್ಮಿಕ, ರಾಜಕೀಯ ವಿವಾದಗಳು ಭುಗಿಲೆದ್ದು ದೇಶ ಅಪಾಯದ ಕಡೆಗೆ ಸಾಗುತ್ತಿರುವ ವಿಷಯ ಅವರಿಗೆ ತಿಳಿದಿತ್ತು. ಇಷ್ಟಾಗಿಯೂ ಜಿನ್ನಾ ಎಷ್ಟು ಉಪಾಯದಿಂದ ಈ ಆಟ ಆಡಿದ್ದರೆಂದರೆ ಕೆಲವೇ ತಿಂಗಳಲ್ಲಿ ಅವರು ಪಾಕಿಸ್ತಾನವನ್ನು ಗೆದ್ದುಕೊಂಡುಬಿಟ್ಟರು.

ಗಾಂಧಿಯವರ ಪ್ರಾರ್ಥನಾಸಭೆ ಸಂಜೆಯ ತಂಪು ಹೊತ್ತಿನಲ್ಲಿ ಎಂದಿನಂತೆ ನಡೆಯುತ್ತಿತ್ತು. ಪ್ರಾರ್ಥನಾ ಸಭೆಗೆ ಭಾರೀ ಸಂಖ್ಯೆಯಲ್ಲಿ ಬರುತ್ತಿದ್ದ ಜನರಿಗಾಗಿ ಅಸ್ಪೃಶ್ಯರ ಕಾಲನಿಯ ಒಂದು ಪಕ್ಕದಲ್ಲಿ ಒಂದು ವಿಶಾಲಕಟ್ಟೆಯನ್ನು ನಿರ್ಮಿಸಲಾಯಿತು. ಬಂದ ಜನರು ಸೂರ್ಯಾಸ್ತದವರೆಗೆ ಅಲ್ಲಿ ಕುಳಿತಿರುತ್ತಿದ್ದರು. ಕೆಲವೊಂದು ಸಲ ೫೦ ಸಾವಿರದಿಂದ ಒಂದು ಲಕ್ಷದಷ್ಟು ಜನ ಬರುತ್ತಿದ್ದರು. ಗಾಂಧಿಯವರು ತಮ್ಮ ಹೃದಯಕ್ಕೆ ಹತ್ತಿರವಾದ ವಿಷಯಗಳ ಬಗ್ಗೆ ಹೇಳುವುದನ್ನು ಈ ಜನ ಕಿವಿಗೊಟ್ಟು ಕೇಳುತ್ತಿದ್ದರು. ಮುಖ್ಯ ವಿಷಯವಾಗಿದ್ದ

ಸ್ವಾತಂತ್ರ್ಯವನ್ನು ಕುರಿತು ಹೇಳುವುದೇ ಅಲ್ಲದೆ ಆರೋಗ್ಯ, ಆಹಾರಕ್ರಮ, ಎಲ್ಲ ವಯಸ್ಸಿನವರಿಗೂ ಮಡ್‌ಪ್ಯಾಕ್ ಎಷ್ಟು ಒಳ್ಳೆಯದು, ರೈತರಿಗೆ ಗೋವಿನಿಂದ ಎಷ್ಟು ಉಪಯೋಗ, ಟ್ರಾಕ್ಟರ್‌ನಿಂದ ಏನು ಉಪಯೋಗ ಎಂಬುದರ ತುಲನಾತ್ಮಕ ವಿಶ್ಲೇಷಣೆ ಇತ್ಯಾದಿ. ಟ್ರಾಕ್ಟರ್ ಮತ್ತು ದನ ಇವೆರಡೂ ನೇಗಿಲನ್ನು ಎಳೆಯುತ್ತವೆ. ಆದರೆ ಈ ಸಾಮ್ಯ ಇಲ್ಲಿಗೇ ಕೊನೆ. ಯಾಕೆಂದರೆ ಹಸು ಮಾಡುವಂಥ ಅನೇಕ ಕೆಲಸಗಳನ್ನು ಟ್ರಾಕ್ಟರು ಮಾಡಲಾಗದು. ಹಾಲು, ತುಪ್ಪ, ಸಗಣಿಗಳನ್ನು ಹಸು ಕೊಡುತ್ತದೆ. ಸಗಣಿಯನ್ನು ಕೇವಲ ಗೊಬ್ಬರವಾಗಿ ಬಳಸಿದರೆ ಸಾಲದು, ಪುರಾತನ ಕಾಲದಿಂದ ಬಂದ ಪದ್ಧತಿಯ ಪ್ರಕಾರ ಅದನ್ನು ನೆಲಕ್ಕೆ ಹೊಸ್ತಿಲಿಗೆ ಬಳಿಯಬೇಕು. ಅದರಲ್ಲಿ ಅಂಟಿಸೆಪ್ಟಿಕ್ ಗುಣಗಳಿವೆ ಎಂದು ಬೋಧಿಸುತ್ತಿದ್ದರು.

ಅವರು ಪ್ರಾರ್ಥನಾ ಸಭೆಗಳಲ್ಲಿ ಹೇಳುತ್ತಿದ್ದ ಯಂತ್ರ ವಿರೋಧಿ ವಿಚಾರಗಳಿಂದ ನಾನು ವಿಚಲಿತಗೊಳ್ಳುತ್ತಿದ್ದೆ. ಯಾಕೆಂದರೆ ಗಾಂಧಿ ಈ ಮಾತುಗಳನ್ನೆಲ್ಲ ಹೇಳುತ್ತಿದ್ದುದು ಮೈಕ್ರೊಫೋನ್ ಮೂಲಕ ಮತ್ತು ಪ್ರಾರ್ಥನಾ ಸಭೆಯ ನಂತರ ವೇದಿಕೆಯಿಂದಿಳಿದ ಗಾಂಧಿ ಸೀದಾ ಬಿರ್ಲಾ ಅವರ ಹಾಲುಬಿಳುಪಿನ ಪೆಕಾರ್ಡ್ ಕಾರಿನಲ್ಲಿ ಕುಳಿತು ಅಸ್ಪೃಶ್ಯರ ಕಾಲೊನಿಗೆ ಹೋಗುತ್ತಿದ್ದರು.

ಚುರುಕಾದ ಆತ್ಮೀಯ ಮಾತುಕತೆಗೆ ಪ್ರಸಿದ್ಧರಾಗಿದ್ದ ಶ್ರೀಮತಿ ಸರೋಜಿನಿ ನಾಯ್ಡು ಅವರು ಗಾಂಧಿಯವರನ್ನು ಕುರಿತು ಮಾಡಿದ ಈ ಟೀಕೆ ಅತ್ಯಂತ ಪ್ರಸಿದ್ಧ "ಗಾಂಧಿಯವರನ್ನು ಬಡತನದಲ್ಲಿಡಲು ಎಷ್ಟೊಂದು ಖರ್ಚಾಗುತ್ತದೆ. ಇದೇನಾದರೂ ಗಾಂಧಿಯವರಿಗೆ ಗೊತ್ತಿದ್ದರೆ" ಈ ಮಾತನ್ನೂ ಕೂಡ ಸರೋಜಿನಿ ಹೇಳಿದ್ದು ಗಾಂಧಿಯನ್ನು ಕುರಿತ ಪ್ರೀತಿಯಿಂದಲೇ!

❑

ಅಧ್ಯಾಯ ೯

ಪಾಕಿಸ್ತಾನ ಸೃಷ್ಟಿಕರ್ತ

"Garden city of untouchables"ನಲ್ಲಿ ಗಾಂಧಿಯವರ ತಾತ್ಕಾಲಿಕ ಬಿಡಾರ ಆರಂಭವಾಗಿ ಒಂದು ವರ್ಷವಾಗಿತ್ತು. ಕಾಂಗ್ರೆಸ್ ಹಾಗೂ ಬ್ರಿಟಿಷ್ ಸಂಧಾನಕಾರರ ಮುಂದೆ ಮನಬಂದಂತೆ ಆಟವಾಡಿ ಜಿನ್ನಾ ತನ್ನ ಗುರಿಯನ್ನು ಸಾಧಿಸಿಯೂ ಒಂದು ವರ್ಷವಾಗಿತ್ತು. ಈ ಸಂದರ್ಭದಲ್ಲಿ ನಾನು ಕರಾಚಿಯಲ್ಲಿ ಜಿನ್ನಾ ಅವರನ್ನು ಅರಮನೆಯಂತಹ ಅವರ ಮನೆಯಲ್ಲಿ ಭೇಟಿಮಾಡಲು ಹೊರಟೆ.

ಪಾಕಿಸ್ತಾನ ಹುಟ್ಟಿಕೊಂಡು ಒಂದು ತಿಂಗಳಾಗಿತ್ತು. ಅದರ ರಾಜಧಾನಿಯಾಗಿ ಕರಾಚಿ ತ್ವರಿತವಾಗಿ ಬೆಳೆಯುತ್ತಿತ್ತು. ಈ ನಗರದ ನದೀ ತೀರದ ಮರಳು ದಂಡೆಯಲ್ಲಿ ಸಣ್ಣಪುಟ್ಟ ಅಧಿಕಾರಿಗಳಿಗೆ ವಸತಿ ಕಲ್ಪಿಸುವುದಕ್ಕಾಗಿ ಒಂದು ಬೃಹತ್ತಾದ ಟೆಂಟ್ ಕಾಲೋನಿ ಎದ್ದಿತು. ಪಾಕಿಸ್ತಾನದ ಸರ್ಕಾರಿ ಅಧಿಕಾರಿಗಳಲ್ಲಿ ಪ್ರಮುಖನಾದವನು ಒಬ್ಬನೇ–ಒಬ್ಬ. ಆತನೇ ಮಹಮ್ಮದಾಲಿ ಜಿನ್ನಾ. ಆದರೆ ಜಿನ್ನಾ ಇಂತಹ ಟೆಂಟಿನ ಆಶ್ರಯ ಪಡೆಯುವ ಅಗತ್ಯವಿರಲಿಲ್ಲ. ಬ್ರಿಟಿಷ್ ಅಧಿಕಾರಿಗಳು ಖಾಲಿ ಮಾಡಿದ ಅಮೃತಶಿಲೆ ಮತ್ತು ಮರಳುಗಲ್ಲಿನಿಂದ ನಿರ್ಮಿಸಿದ ದೊಡ್ಡ ಸರ್ಕಾರಿ ಬಂಗಲೆ ಅವರಿಗಾಗಿ ಕಾದಿತ್ತು. **ಕ್ವೇದ್-ಈ-ಅಜಾಂ** ತಮ್ಮ ತಂಗಿ ಫಾತಿಮಾ ಅವರೊದಿಗೆ ಗೃಹಪ್ರವೇಶ ಮಾಡಿದ್ದರು. ಟೀಕಾಕಾರರು ಹೇಳುವಂತೆ ಜಿನ್ನಾ "ಮೂರು ಕಿರೀಟ" ಹಾಕಿಕೊಂಡಿದ್ದರು. ಅವರು ತಮ್ಮನ್ನು ತಾವೇ ಗೌರ್ನರ್ ಜನರಲ್ ಮಾಡಿಕೊಂಡಿದ್ದರು. ಪಾಕಿಸ್ತಾನದ ಏಕೈಕ ರಾಜಕೀಯ ಪಕ್ಷವಾದ ಮುಸ್ಲಿಂಲೀಗ್‌ನ ಅಧ್ಯಕ್ಷತೆಯನ್ನು ತಮಗೇ ಉಳಿಸಿಕೊಂಡಿದ್ದರು ಮತ್ತು ದೇಶದ ಸಂವಿಧಾನವನ್ನು ರೂಪಿಸುವ ಕಾನ್‌ಸ್ಟಿಟ್ಯುಯೆಂಟ್ ಅಸೆಂಬ್ಲಿಗೂ ಅವರೇ ಅಧ್ಯಕ್ಷರು.

"ಇದು ಇಷ್ಟು ಬೇಗ ಸಿಗುತ್ತದೆ ಎಂದು ನಾವು ನಿರೀಕ್ಷಿಸಿರಲಿಲ್ಲ. ನಮ್ಮ ಜೀವಮಾನದಲ್ಲೇ ಇದು ಕೈಗೂಡುತ್ತದೆ ಅಂತ ಅಂದುಕೊಂಡಿರಲಿಲ್ಲ" ಫಾತಿಮಾ ಹೇಳಿದರು. ಇದನ್ನು ತಮ್ಮ ಕುಟುಂಬದ ಹೆಮ್ಮೆಯ ಸಾಧನೆ ಎಂಬಂತೆ ಫಾತಿಮಾ ಹೇಳಿದರೆ ಆಕೆಯ ಸೋದರನು ಅತಿರೇಕದ ಪರಾಕಾಷ್ಠೆಯಾಗಿತ್ತು. ತಳದಲ್ಲಿ ಹುದುಗಿದಂತಿದ್ದ ಆತನ ಕಣ್ಣುಗಳು ಉನ್ಮಾದದಿಂದ ಕುಣಿಯುತ್ತಿದ್ದವು. ಮಿತಿಮೀರಿದ ಆನಂದೋದ್ರೇಕದ ಹೊಳೆ ಅವರ ನರನರಗಳಲ್ಲಿಯೂ ಹರಿಯುತ್ತಿರುವುದು ಅವರ ನಡವಳಿಕೆಗಳಿಂದ ವ್ಯಕ್ತವಾಗುತ್ತಿತ್ತು. ಜಗತ್ತಿನ ಬಹುದೊಡ್ಡ ಇಸ್ಲಾಮಿಕ್ ರಾಷ್ಟ್ರವನ್ನು ಸೃಷ್ಟಿಸಿದ ಸಾಧನೆಗಾಗಿ ನಾನು ಅವರಿಗೆ ಕೆಲವೊಂದು ಅಭಿನಂದನೆಯ ಮಾತುಗಳನ್ನು ಹೇಳಿದೆ.

"ಓ! ಇದು ಕೇವಲ ದೊಡ್ಡ ಇಸ್ಲಾಮಿಕ್ ರಾಷ್ಟ್ರ ಮಾತ್ರವಲ್ಲ. ಪಾಕಿಸ್ತಾನ ಇಡೀ ಜಗತ್ತಿನಲ್ಲಿ ಐದನೇ ಅತಿದೊಡ್ಡ ರಾಷ್ಟ್ರ!" ನಾನು ಇದನ್ನು ಸಾಧಿಸಿದೆ ಎಂಬ ಜಂಭ ಅವರ ಮಾತಿನಿಂದ ತುಳುಕುತ್ತಿತ್ತು. ಇದಕ್ಕೆ ಎಷ್ಟು ಮಾನವ ಜೀವಿಗಳ ಬಲಿಕೊಡಬೇಕಾಯಿತು ಎಂಬ ಯೋಚನೆಯೇ ಆತನ ತಲೆಯಲ್ಲಿ ಸುಳಿದಂತಿರಲಿಲ್ಲ. ಹೊಸದಾದ ಮುಸ್ಲಿಂ ಮಾತೃಭೂಮಿಯನ್ನು ಸೃಷ್ಟಿಸುವುದಕ್ಕಾಗಿ ಬಲಿಯಾದ ಮುಸ್ಲಿಮರ ಸಂಖ್ಯೆ ಇಡೀ ಎರಡನೇ ಮಹಾಯುದ್ಧದಲ್ಲಿ ಅಮೆರಿಕಾ ಕಳೆದುಕೊಂಡ ಮಾನವ ಜೀವಿಗಳ ಸಂಖ್ಯೆಗಿಂತ ಹೆಚ್ಚಾಗಿತ್ತು. ಪಾಕಿಸ್ತಾನದ ೭೦ ದಶಲಕ್ಷ ಜನರಿಗಾಗಿ ಜಿನ್ನಾ ಏನಾದರೊಂದು ರಚನಾತ್ಮಕ ಯೋಜನೆ ಹಾಕಿಕೊಂಡಿರಬಹುದೆ! ಎಂಬ ಕುತೂಹಲದಿಂದ "ನೀವು ಎಂತಹ ಸಂವಿಧಾನ ಮಾಡಬೇಕೆಂದಿದ್ದೀರಿ ಎಂಬ ಪ್ರಶ್ನೆಯನ್ನು ಅವರಿಗೆ ಕೇಳಿದೆ. ಅದರಲ್ಲೇನು ವಿಶೇಷ, ಅದು ಜನತಂತ್ರದ ಸಂವಿಧಾನವಾಗಿರುತ್ತದೆ. ಇಸ್ಲಾಂ ಒಂದು ಪ್ರಜಾಸತ್ತಾತ್ಮಕ ರಾಜ್ಯ" ಎಂದರು. ಇತ್ತೀಚಿನ ದಿನಗಳಲ್ಲಿ ಪ್ರಜಾಪ್ರಭುತ್ವ ಎಂಬ ಪದ ಬಹಳ ಸಡಿಲವಾಗಿ ಬಳಕೆಯಾಗುತ್ತಿದೆ. "ನಿಮ್ಮ ದೃಷ್ಟಿಯಲ್ಲಿ ಪ್ರಜಾಪ್ರಭುತ್ವ ಎಂದರೆ ಏನು" ಎಂದು ಕೇಳಿದೆ.

"ಜನತಂತ್ರವನ್ನು ನಾವೇನೂ ಈಗ ಹೊಸದಾಗಿ ಕಲಿಯುತ್ತಿಲ್ಲ. ಅದು ನಮ್ಮ ರಕ್ತದಲ್ಲಿ ಇದೆ. ಬಡವರಿಗಾಗಿ ನಮ್ಮಲ್ಲಿ ಯಾವಾಗಲೂ ಒಂದು ವ್ಯವಸ್ಥೆ ಇದೆ. ಜಕತ್ ಅಂದರೆ ನಾವು ಬಡವರಿಗಾಗಿ ಮಾಡಬೇಕಾದ ಸೇವೆ."

ಜನತಂತ್ರಕ್ಕೂ ದಾನಧರ್ಮಕ್ಕೂ ಗಂಟುಹಾಕುತ್ತಿರುವ ಅವರ ಮಾತು ನನ್ನಲ್ಲಿ ಗೊಂದಲ ಉಂಟುಮಾಡಿತು. ಈ ಬಗ್ಗೆ ಇನ್ನಷ್ಟು ಸ್ಪಷ್ಟವಾಗಿ ಹೇಳಿ ಎಂದೆ.

"ಹದಿಮೂರನೇ ಶತಮಾನದಿಂದಲೂ ನಮ್ಮ ಇಸ್ಲಾಮಿಕ್ ತತ್ವಗಳೆಲ್ಲ ಪ್ರಜಾಪ್ರಭುತ್ವ ಹಾಗೂ ಸಾಮಾಜಿಕ ನ್ಯಾಯವನ್ನು ಆಧರಿಸಿವೆ." ಅವರು ಹದಿಮೂರನೆ ಶತಮಾನದಿಂದ ಎಂದು ಹೇಳಿದ್ದು ಇನ್ನಷ್ಟು ನನ್ನ ತಲೆ ಕೆಡಿಸಿತು. ಪಾಕಿಸ್ತಾನದಲ್ಲಿ ಸಾಮಾಜಿಕ ನ್ಯಾಯ ಎಂಬ ಮಾತಿನೊಂದಿಗೆ ಮಧ್ಯಕಾಲೀನ ಕೆಲವು ಅವಶೇಷಗಳು ಬೆರೆತಿದ್ದವು. ಉದಾಹರಣೆಗೆ ಫ್ಯೂಡಲ್ ಭೂವ್ಯವಸ್ಥೆಯ ಅವಶೇಷಗಳು. ಈ ಬಗ್ಗೆ ಹೊಸ ಸಂವಿಧಾನ ಏನು ಮಾಡುತ್ತದೆ? ಪೈಗಂಬರ್ ಮಹಮ್ಮದರ ಕಾಲದಿಂದಲೂ ಮುಸ್ಲಿಮರ ವ್ಯವಹಾರ, ನಡವಳಿಕೆಗಳನ್ನು ನಿಯಂತ್ರಿಸುತ್ತ ಬಂದಿರುವ ಕುರಾನನ್ನು ನಿರಂಕುಶ ಅಧಿಕಾರ ಅಥವಾ ಕಟ್ಟಾ ಸಮಾಜವಾದ ಎಂಬ ಅರ್ಥ ಬರುವ ಹಾಗೆ ಉದ್ದೇಶಪೂರ್ವಕವಾಗೇ ವ್ಯಾಖ್ಯಾನಿಸಲಾಗಿದೆ. ಈ ಭೂಮಿ ದೇವರಿಗೆ ಸೇರಿದ್ದು ಎಂದು ಕುರಾನ್ ಹೇಳುತ್ತದೆ. ಈ ಬಗ್ಗೆ ಸಂವಿಧಾನದಲ್ಲಿ ಸರಿಯಾದ ಸ್ಪಷ್ಟೀಕರಣ ನೀಡುವ ಅಗತ್ಯವಿದೆ. ಪಾಕಿಸ್ತಾನದಲ್ಲಿ ಬಹಳಷ್ಟು ಕೇಳಿ ಬರುತ್ತಿರುವ "ನಿಜವಾದ ಇಸ್ಲಾಮಿಕ್ ತತ್ವಗಳನ್ನು" ಹೊಸ ರಾಷ್ಟ್ರದ ಕಾನೂನುಗಳೊಂದಿಗೆ ತಾಳೆ ಹಾಕುವ ಕೆಲಸವನ್ನಷ್ಟೆ ಲಾಯರ್ ಆಗಿರುವ ಜಿನ್ನಾ ಮಾಡಬಹುದು. ಆದರೆ ಜಿನ್ನಾ ಮಾತ್ರ ಈ ಭೂಮಿ ಪ್ರಜಾಪ್ರಭುತ್ವಕ್ಕೆ ಸಂಪೂರ್ಣ ಸಿದ್ಧವಾಗಿದೆ. ಸಂವಿಧಾನ ಪ್ರಜಾಸತ್ತಾತ್ಮಕವಾಗಿರುತ್ತದೆ ಎಂದು ಹೇಳುತ್ತಾರೆ.

ದೇಶದ ಕೈಗಾರಿಕಾ ಪ್ರಗತಿಯ ಬಗ್ಗೆ ನಿಮ್ಮ ಯೋಜನೆಗಳೇನು ಅಮೇರಿಕಾದಿಂದ ತಾಂತ್ರಿಕ

ಅಥವಾ ಹಣಕಾಸಿನ ನೆರವನ್ನು ಪಡೆದುಕೊಳ್ಳುವ ಉದ್ದೇಶವೇನಾದರೂ ಇದೆಯೇ ಎಂಬ ಪ್ರಶ್ನೆಗೆ ಜಿನ್ನಾ ಹೇಳಿದರು : ಪಾಕಿಸ್ತಾನಕ್ಕೆ ಅಮೇರಿಕಾದ ಅವಶ್ಯತೆ ಇರುವುದಕ್ಕಿಂತಲೂ ಅಮೆರಿಕಾಗೆ ಪಾಕಿಸ್ತಾನದ ಅವಶ್ಯಕತೆ ಇದೆ. ಪಾಕಿಸ್ತಾನ ಈ ಜಗತ್ತಿನ ಕೇಂದ್ರ ಬಿಂದು. ಇಡೀ ಜಗತ್ತು ಈ ತಿರುಗಣಿಯ ಸುತ್ತ ತಿರುಗಬೇಕು ಎಂದು ತಮ್ಮ ತೋರುಬೆರಳನ್ನು ವೃತ್ತಾಕಾರವಾಗಿ ಸುತ್ತಿ ಹೇಳಿದರು. ಜಗತ್ತಿನ ಭವಿಷ್ಯ ಇದರ ನೆಲೆಯನ್ನೇ ಅವಲಂಬಿಸಿದೆ ಅನ್ನುತ್ತ ನನ್ನತ್ತ ಬಾಗಿ ಒಂದು ರಾಹಸ್ಯವನ್ನು ಹೇಳುವ ದನಿಯಲ್ಲಿ "ರಷಿಯಾ ನಮಗೆ ಬಹಳ ದೂರವೇನಿಲ್ಲ" ಎಂದರು.

ಈ ಮೂಲಕ ಅವರ ಇಂಗಿತ ಅರ್ಥವಾಯಿತು. ಈ ಕಾರಣದಿಂದಲೇ ಅವರು ಅಮೆರಿಕಾದ ಸ್ನೇಹಕ್ಕಾಗಿ ಹಾತೊರೆಯುತ್ತಿಲ್ಲ. ಈ ಹೊಸ ದೇಶದ ರಸ್ತೆ ಸಂಪರ್ಕವಿಲ್ಲದ ಪರ್ವತಶ್ರೇಣಿಯ ಆಚೆ ಬೀದಿಯಲ್ಲಿ ಬೊಲ್ಶೆವಿಕ್ಕರ ರಾಜ್ಯವಿತ್ತು. ಕ್ವೇದ್-ಇ-ಅಜಾಂ, ತಮ್ಮ ದೇಶವು ಈ ಎರಡು ಸಬಲ ರಾಷ್ಟ್ರಗಳ ನಡುವಿನ ಬಫರ್‌ನಂತಿರಬೇಕು ಎಂದು ಆಲೋಚಿಸಿರಬಹುದು. ಜಗತ್ತಿನ ಇತರ ಭಾಗಗಳಲ್ಲಿ ಅಮೆರಿಕಾ ಮಿಲಿಟರಿ ಆಸಕ್ತಿ ಹೊಂದಿರುವ ವಿಷಯವನ್ನು ಅವರು ಒತ್ತಿ ಹೇಳಿದರು.

ಅಮೆರಿಕಾ ಎಚ್ಚೆತ್ತುಕೊಂಡಿದೆ. ಗ್ರೀಸ್ ಮತ್ತು ಟರ್ಕಿಗಳಿಗೆ ಬೆಂಬಲ ಒದಗಿಸುತ್ತಿರುವ ಆ ದೇಶ ಪಾಕಿಸಕ್ತಾನಕ್ಕೆ ಹಣ, ಶಸ್ತ್ರಾಸ್ತ್ರ ಒದಗಿಸಲು ಹೆಚ್ಚಿನ ಆಸಕ್ತಿ ವಹಿಸಬೇಕು. ಒಂದು ವೇಳೆ ರಷಿಯಾ ಈ ಕಡೆ ತಲೆಹಾಕಿದರೆ ಇಡೀ ಜಗತ್ತೇ ಅಲ್ಲೋಲಕಲ್ಲೋಲ... ಎಂದರು ಜಿನ್ನಾ.

ಮುಂದಿನ ಕೆಲವು ವಾರಗಳಲ್ಲಿಯೇ ಕ್ವೇದ್-ಇ-ಅಜಾಂರ ಈ ಸಿದ್ಧಾಂತ ಪಾಕಿಸ್ತಾನದಾದ್ಯಂತ ಸರ್ಕಾರಿ ಅಧಿಕಾರಿಗಳ ಮೂಲಕ ಪ್ರತಿಧ್ವನಿತವಾಗತೊಡಗಿತು. ನಮ್ಮ ಸೈನ್ಯವನ್ನು ಅಮೆರಿಕಾ ದೇಶವೇ ನಿರ್ಮಾಣಮಾಡಿಕೊಡುತ್ತದೆ. ರಷ್ಯ ಪ್ರವೇಶವನ್ನು ತಡೆಯುವುದಕ್ಕಾಗಿ ಖಂಡಿತವಾಗಿ ಅಮೆರಿಕಾ ನಮಗೆ ಸಾಲಗಳನ್ನು ಕೊಟ್ಟೇಕೊಡುತ್ತದೆ ಎಂದು ಅಧಿಕಾರಿಗಳು ಹೇಳತೊಡಗಿದ್ದರು. ರಷ್ಯ ಇತ್ತ ಕಡೆ ಬರುವ ಸೂಚನೆಗಳೇನಾದರೂ ಇವೆಯೇ ಎಂದು ಕೇಳಿದಾಗ ಮಾತ್ರ ಅವರ ಮುಖಗಳಲ್ಲಿ ಖಿನ್ನತೆ ಆವರಿಸುತ್ತಿತ್ತು. ರಷ್ಯಾ ಪಾಕಿಸ್ತಾನದತ್ತ ಆಸಕ್ತಿ ವಹಿಸುವ ಸೂಚನೆಗಳನ್ನೇನೂ ತೋರಿಸಿಲ್ಲ ಎಂದು ವ್ಯಥೆ ತುಂಬಿದ ದನಿಯಲ್ಲಿ ಹೇಳುತ್ತಿದ್ದರು. ಇಷ್ಟಾಗಿಯೂ ಅವರು ಅಮೆರಿಕಾದಿಂದ ಹಣಕಾಸು ಒದಗುತ್ತದೆ ಎಂದು ದೃಢವಾಗಿ ಹೇಳುತ್ತಿದ್ದರು. ಅವರ ಉದ್ದೇಶ ಬೋಲ್ಶೆವಿಸಂ ವಿರುದ್ಧ ಜಗತ್ತನ್ನು ಎತ್ತಿ ಕಟ್ಟುವುದೋ ಅಥವಾ ಹೊಸದಾಗಿ ರಾಜಕೀಯ ಅಸ್ತಿತ್ವ ಗಳಿಸಿದ ಪಾಕಿಸಕ್ತಾನದ ಅನಿಶ್ಚಿತ ಸ್ಥಿತಿಗೆ ಭರವಸೆ ಮೂಡಿಸುವಂತೆ ಮಾಡುವುದೋ ಗೊತ್ತಾಗುತ್ತಿರಲಿಲ್ಲ. ನನಗನ್ನಿಸುವಂತೆ ಇದು ಈ ಮುಸ್ಲಿಂ ರಾಜ್ಯದ ವಿಚಾರಗಳ ದಿವಾಳಿತನದ ದ್ಯೋತಕವಾಗಿತ್ತು. ಪುರಾತನ ಧಾರ್ಮಿಕ ಮತಾಂಧತೆಯ ಕೆಂಡದ ಮೇಲಿನ ಬೂದಿಯನ್ನೇ ಊದಿಊದಿ (~ನ್ನು ಉರಿಯಾಗಿ ಮೇಲೆಬ್ಬಿಸುವ ಸನ್ನಾಹವನ್ನೂ ಅವರು ಮಾಡುತ್ತಿದ್ದರು.

ಪಾಕಿಸ್ತಾನಕ್ಕಾಗಿ ಹೋರಾಟ ಮಾಡುತ್ತಿದ್ದ ~. ~ರ್ಭದಲ್ಲಿ ಜಿನ್ನಾ ಪದೇಪದೇ ಬಳಸಿ

ತಂತ್ರ, ವಿರೋಧಿಗಳ ವಿರುದ್ಧ ವಿರೋಧಿಗಳನ್ನು ಎತ್ತಿಕಟ್ಟುವುದು. ಈಗ ಅವರು ಇದೇ ತಂತ್ರವನ್ನು ತಮ್ಮ ವಿದೇಶಾಂಗ ನೀತಿಗೂ ಅನ್ವಯಿಸಲು ಹೊರಟಿದ್ದರು. ಎರಡು ಮಹಾರಾಷ್ಟ್ರಗಳ ನಡುವಿನ ತಿಕ್ಕಾಟದ ಜೊತೆಗೆ ಪ್ಯಾಲೆಸ್ತೀನ್ ವಿಷಯವನ್ನೂ ಅವರು ಇದೇ ರೀತಿ ಬಳಸಿಕೊಳ್ಳ ತೊಡಗಿದ್ದರು. ಪಾಕಿಸ್ತಾನದ ಆಂತರಿಕ ಸಮಸ್ಯೆಗಳೇ ಸಾಕಷ್ಟಿದ್ದವು. ಇಷ್ಟಿದ್ದೂ ಅವರು ಜ್ಯೂಗಳ ವಶದಿಂದ ಪ್ಯಾಲೆಸ್ತೀನನ್ನು ವಿಮೋಚಿಸುವುದಕ್ಕಾಗಿ ಅರಬ್ಬರಿಗೆ ನೆರವಾಗಲು ವಿಮೋಚನಾ ಸೇನೆ ಕಳಿಸುವುದಾಗಿ ಉತ್ಸಾಹದಿಂದ ಹೇಳುತ್ತಿದ್ದರು. ಆದರೆ ಈ ಮಾತಿನಲ್ಲಿ ಖಚಿತತೆ ಏನೂ ಇರಲಿಲ್ಲ. ತರಬೇತಾದ ಮಾಜೀ ಯೋಧರನ್ನು ಈ ಪವಿತ್ರ ಕೆಲಸಕ್ಕೆ ವಿನಿಯೋಗಿಸ ಬೇಕೆಂದು ಮುಸ್ಲಿಂ ಮುತ್ಸದ್ದಿಗಳು ಹೇಳಿದರು. ಸರ್ಕಾರದ ಅಧಿಕೃತ ವೃತ್ತಪತ್ರಿಕೆಯಾದ 'ಡಾನ್', ಈ ಜ್ಯೂಯಿಷ್ ರಾಜ್ಯವನ್ನು ವಿರೋಧಿಸಿ ಬರೆಯಿತು. ಮಿಲಿಟರಿ ಮತ್ತು ಧಾರ್ಮಿಕ ದೃಷ್ಟಿಯಿಂದ ಮುಸ್ಲಿಂ ದೇಶಗಳದೇ ಒಂದು ಸುಸಜ್ಜಿತ ಬಲ ಇರಬೇಕು. ಹೀಗೆ ಮಾಡಿದಾಗ ಮಾತ್ರ ಇಸ್ಲಾಮಿನ ಉದ್ಧಾರ ಎಂದು ಅದರ ಸಂಪಾದಕೀಯದಲ್ಲಿ ಬರೆಯಲಾಯಿತು.

ಯಾರಾದರೂ ಮೂವತ್ತು ನಲವತ್ತು ವರ್ಷಗಳ ಕೆಳಗೆ ಜಿನ್ನಾ ಅವರನ್ನು 'ಇಸ್ಲಾಂ ಧರ್ಮೋದ್ಧಾರಕ' ಎಂದು ಕರೆದಿದ್ದರೆ ಬೇರೆಲ್ಲರಿಗಿಂತ ಸ್ವತಃ ಜಿನ್ನಾಗೇ ಹೆಚ್ಚು ಅಚ್ಚರಿ ಯಾಗುತ್ತಿತ್ತೇನೊ? ಆ ದಿನಗಳಲ್ಲಿ ಯಾರಾದರೂ ಧರ್ಮದ ಬಗ್ಗೆ ಮಾತಾಡಿದರೆ ಜಿನ್ನಾ ಸಿನಿಕತನದ ನಗೆ ನಕ್ಕು ಸುಮ್ಮನಾಗುತ್ತಿದ್ದರು. ಧಾರ್ಮಿಕ ವಿದ್ವೇಷದ ಮಾತುಗಳನ್ನು ಅವರು ಖಂಡಿಸುತ್ತಿದ್ದರು. ಸ್ವಾತಂತ್ರ್ಯ ಚಳುವಳಿ ತೀವ್ರವಾಗಿ ಇಡೀ ದೇಶ ಪ್ರಕ್ಷುಬ್ಧ ಸ್ಥಿತಿಯಲ್ಲಿದ್ದಾಗ ಜಿನ್ನಾ ಅವರು ಹಿಂದೂಮುಸ್ಲಿಂ ಏಕತೆಯ ಪ್ರತೀಕ ಎಂಬ ಶ್ಲಾಘನೆಗೆ ಪಾತ್ರರಾಗಿದ್ದರು. ಕಾಂಗ್ರೆಸ್ಸಿನಲ್ಲಿ ಬಹು ಪ್ರಮುಖರಾಗಿದ್ದ ಶ್ರೀಮತಿ ಸರೋಜಿನಿ ನಾಯ್ಡು ಜಿನ್ನಾರ ಆತ್ಮೀಯ ಗೆಳತಿ. ಜನರನ್ನು ಒಗ್ಗೂಡಿಸುವಲ್ಲಿ ಜಿನ್ನಾ ವಹಿಸಿದ ಪಾತ್ರ ಕುರಿತು, ಹೊಗಳುವ ಪದ್ಯಗಳನ್ನು ಆಕೆ ಬರೆದಿದ್ದರು. ರಾಷ್ಟ್ರೀಯ ಹೋರಾಟದ ಬಿಕ್ಕಟ್ಟಿನ ದಿನಗಳಲ್ಲಿ ಭಾರತವನ್ನು ಉದ್ಧರಿಸಿದ ಅಮರ ನಾಯಕ ಎಂದು ಭವಿಷ್ಯದ ಹೊತ್ತಿಗೆಯಲ್ಲಿ ಈತನ ಹೆಸರು ಇರುತ್ತದೆ ಎಂಬ ಸಾಲುಗಳು ಅವರ ಪದ್ಯದಲ್ಲಿದ್ದವು. ಮುಂದೆ ಜಿನ್ನಾರ ಹೆಸರು ತೀವ್ರ ಬಿಕ್ಕಟ್ಟಿನ ಸಮಯದಲ್ಲಿ ಹೋರಾಡಿದ ಅಮರ ನಾಯಕ ಎಂದೇ ದಾಖಲಾಯಿತು. ಆದರೆ ಅದರ ಅರ್ಥ ಮಾತ್ರ ಬದಲಾಗಿತ್ತು. ಆತ ಈಗ ಏಕತೆಯ ರಾಯಭಾರಿ ಎಂಬುದಕ್ಕೆ ಬದಲಾಗಿ ವೈಷಮ್ಯವನ್ನು ಹುಟ್ಟುಹಾಕಿದ ದೂತನಾಗಿ ಪ್ರಸಿದ್ಧರಾಗಿದ್ದರು. ತಮ್ಮ ಬದುಕಿನ ಬಹುತೇಕ ವರ್ಷಗಳನ್ನು ಏಕೀಕೃತ ಭಾರತದ ಕನಸಿಗಾಗಿಯೆ ಮುಡಿಪಾಗಿಟ್ಟಿದ್ದ ಜಿನ್ನಾ ಹೀಗೆ ಬದಲಾಗಿದ್ದು ಹೇಗೆ? ಅದರ ಕಾರಣ ಖಚಿತವಾಗಿ ಯಾರಿಗೂ ಗೊತ್ತಿಲ್ಲ. ಮೂವತ್ತರ ದಶಕದ ಮಧ್ಯಭಾಗದಲ್ಲಿ ಈ ವೈಮನಸ್ಯದ ಚಿಹ್ನೆ ಮೊದಲ ಬಾರಿಗೆ ಪ್ರಕಟವಾಯಿತು. ಗಾಂಧೀಜಿಯವರ ಅಸಹಕಾರ ಚಳುವಳಿಯ ಕಾರ್ಯಕ್ರಮ ಜಿನ್ನಾರಿಗೆ ಇಷ್ಟವಾಗಲಿಲ್ಲ. ನೆಹರೂ ಪ್ರಕಾರ, ಕಾಂಗ್ರೆಸ್ಸಿನಲ್ಲಿ ತುಂಬಿಕೊಂಡಿದ್ದ ಕೊಳಕು ಉಡುಪಿನ ಸಾಮಾನ್ಯ ಜನ ಜಿನ್ನಾರಿಗೆ ಇಷ್ಟವಾಗುತ್ತಿರಲಿಲ್ಲ. ಗಾಂಧಿಯವರ ಅಯಸ್ಕಾಂತದಂತಹ ವ್ಯಕ್ತಿತ್ವದ ಪ್ರಭಾವದಿಂದ ಜನಸಾಮಾನ್ಯರು ಹೊಸ ಚೇತನ ಉತ್ಸಾಹಗಳಿಂದ ತಲೆ ಎತ್ತಿದ್ದು ಅವರಿಗೆ ಸಹಿಸಲಾಗಲಿಲ್ಲ. ಇನ್ನೂ ಕೆಲವರ ಪ್ರಕಾರ

ಗಾಂಧಿಯವರ ಕಾನೂನುಭಂಗ ಕಾರ್ಯಕ್ರಮ ಜಿನ್ನಾರ ಕಾನೂನು ಪ್ರಜ್ಞೆಗೆ ಸಮ್ಮತವಾಗಲಿಲ್ಲ. ಆದರೆ ಒಂದು ಮಾತು ಮಾತ್ರ ನಿಶ್ಚಿತ. ಅವರು ಗಾಂಧಿ, ನೆಹರೂ ಮತ್ತು ಇನ್ನಿತರ ಕಾಂಗ್ರೆಸ್ ಲೀಡರುಗಳಿಂದ ದೂರವಾಗುವುದಕ್ಕೆ ಹಿಂದೂ ಮುಸ್ಲಿಂ ಭೇದ ಭಾವನೆ ಮಾತ್ರ ಕಾರಣವಲ್ಲ ಎಂಬುದು. ಇದೇನೇ ಇದ್ದರೂ, ಜಿನ್ನಾರವರು ಸುಮಾರು ಮೂವತ್ತು ವರ್ಷಗಳಿಂದ ಹೆಸರಿದ್ದೂ ಇಲ್ಲದಂತಿದ್ದ ನಿರ್ಜೀವ ಮುಸ್ಲಿಂಲೀಗನ್ನು ೧೯೩೬ರಲ್ಲಿ ಪುನರುಜ್ಜೀವಗೊಳಿಸಿ ಅದನ್ನು ಧಾರ್ಮಿಕ ವೇದಿಕೆಯಾಗಿ ಮಾಡಿದರು. ಸಹಸ್ರಾರು ಮುಸ್ಲಿಮರ ದರಿದ್ರಾವಸ್ಥೆಗೆ ಹಿಂದೂಗಳು ಮೇಲುಗೈಯಾಗಿರುವುದೇ ಕಾರಣ ಎಂದು ಜಾತಿ ಬಾಂಧವರ ಕಿವಿಗಳಲ್ಲಿ ಊದಲಾರಂಭಿಸಿದರು. ಈ ಪ್ರಚಾರ ಆರಂಭವಾಗುವುದಕ್ಕೆ ಮೊದಲು ಹಿಂದೂ ಮುಸ್ಲಿಮರ ನಡುವೆ ಹಿಂದೆಂದೂ ಇಲ್ಲದಷ್ಟು ಒಗ್ಗಟ್ಟು ಉಂಟಾಗಿತ್ತು. ಬ್ರಿಟಿಷರು ಒಡೆದು ಆಳುವ ನೀತಿಯನ್ನು ಜಾರಿಗೆ ತಂದು ಈ ಒಗ್ಗಟ್ಟನ್ನು ಹಾಳುಗೆಡವಿದರು. ಉನ್ನತ ಸ್ಥಾನಗಳಲ್ಲಿದ್ದ ಕೆಲವು ಭಾರತೀಯರೂ ಸಹ ಹಿಂದೂ ಮುಸ್ಲಿಂ ಒಗ್ಗಟ್ಟನ್ನು ಕುರಿತು ಹೆದರುತ್ತಿದ್ದರು. ಒಗ್ಗಟ್ಟಿನಿಂದ ನಡೆಯುವ ಚಳುವಳಿಯಿಂದ ತಮ್ಮ ವಿಶೇಷ ಸ್ಥಾನಮಾನಗಳಿಗೆ ಧಕ್ಕೆಯಾಗುತ್ತದೆ ಎಂಬ ಭಯ ಅವರಲ್ಲಿತ್ತು. ಆಮೇಲೆ ಇನ್ನೊಂದು ನಿರ್ಣಾಯಕ ಕಾರಣ ಉದ್ಭವಿಸಿತು. ಕೈಗಾರಿಕಾ ಕ್ಷೇತ್ರದಲ್ಲಿ ಹಿಂದೂಗಳು ಯಾವಾಗಲೂ ಮುಸ್ಲಿಮರಿಗಿಂತ ಮುಂದೆ ಇದ್ದರು. ಕೆಲವು ಖ್ಯಾತ ಮುಸ್ಲಿಂ ಭೂಹಿಡುವಳಿದಾರರಿಗೆ ಈಗ ಕೈಗಾರಿಕಾ ಕ್ಷೇತ್ರದಲ್ಲಿ ಮಿಂಚುವ ಆಸಕ್ತಿ ಬೆಳೆಯಿತು. ಚೆನ್ನಾಗಿ ಸ್ಥಾಪಿತಗೊಂಡಿರುವ ಹಿಂದೂ ಕೈಗಾರಿಕೋದ್ಯಮಿಗಳ ಮೇಲೆ ಹಗೆಯ ಭಾವನೆ ಹೊಂದಿರುವ ಶ್ರೀಮಂತ ಮುಸ್ಲಿಮರು ತನಗೆ ಪ್ರಬಲ ಬೆಂಬಲಿಗರಾಗುತ್ತಾರೆ ಎಂದು ಜಿನ್ನಾ ಕಂಡುಕೊಂಡರು.

ಜಿನ್ನಾ ಅವರ ಹೋರಾಟದ ಉದ್ದೇಶ ದರಿದ್ರಾವಸ್ಥೆಯಲ್ಲಿದ್ದ ಮುಸ್ಲಿಮರನ್ನು ವಿಮೋಚಿಸುವುದಾಗಿತ್ತೋ ಅಥವಾ ಶ್ರೀಮಂತ ಮುಸ್ಲಿಮರಿಗೆ ಮೀಸಲು ಕ್ಷೇತ್ರಗಳನ್ನು ಗಳಿಸಿಕೊಡುವುದಾಗಿತ್ತೋ ಗೊತ್ತಾಗುವುದಿಲ್ಲ. ಆದರೆ ಪಾಕಿಸ್ತಾನದ ಮುಂದಿನ ಘಟನಾವಳಿಗಳನ್ನು ನೋಡಿದರೆ, ಜಿನ್ನಾ ತಾವು ಹೇಳಿಕೊಂಡಂತೆ ಮುಸ್ಲಿಂ ಜನಸಾಮಾನ್ಯರ ಉದ್ಧಾರಕ್ಕೆ ಹೋರಾಡುವ ಬದಲಾಗಿ ಮುಸ್ಲಿಂ ಶ್ರೀಮಂತ ವರ್ಗದ ಹಿತಾಸಕ್ತಿಗಳಿಗೆ ಹೋರಾಡಿದರು ಎಂಬುದನ್ನು ಕಂಡುಕೊಳ್ಳಬಹುದು. ಹೀಗೆ ಮಾಡುವಲ್ಲಿ ಅವರು ಯಾವುದೇ ಐಹಿಕ ಲಾಭವನ್ನು ನಿರೀಕ್ಷಿಸಿರಲಿಲ್ಲ. ವೈಯಕ್ತಿಕವಾಗಿ ಜಿನ್ನಾ ಶುದ್ಧ ಹಸ್ತದ ಮನುಷ್ಯ ಎಂದು ಪ್ರಸಿದ್ಧರಾಗಿದ್ದರು. ಈ ಕಾರಣಕ್ಕಾಗಿಯೇ ಶ್ರೀಮಂತರಂತೆಯೇ ಬಡವರೂ ಕೂಡ ಅವರನ್ನು ಆದರಿಸುತ್ತಿದ್ದರು. ಅವರು ವೈಯಕ್ತಿಕವಾಗಿ ಸಂಪತ್ತನ್ನು ಗಳಿಸಿಕೊಳ್ಳುವ ಉದ್ದೇಶವನ್ನು ಯಾವಾಗಲೂ ಹೊಂದಿರಲಿಲ್ಲ. ಈಗ ಅಧಿಕಾರ ಹಿಡಿಯುವುದೊಂದು ಅವರಿಗೆ ಮುಖ್ಯವಾಗಿತ್ತು. ಇಷ್ಟೆಲ್ಲ ಯಶಸ್ಸು, ಪ್ರಭಾವ, ಗೌರವ ಹೊಂದಿದ್ದ ವ್ಯಕ್ತಿ ಯಾಕೆ ಇದ್ದಕ್ಕಿದ್ದಂತೆ ತಮ್ಮ ಈ ಹಿಂದಿನ ರಾಜಕೀಯ ಗುರಿಗಳಿಂದ ಹಾಗೂ ಜೊತೆಗಾರರಿಂದ ಮುಖ ತಿರುವಿ ಬೇರೆದಾರಿ ಹಿಡಿದರು? ಅವರನ್ನು ಚೆನ್ನಾಗಿ ಅರಿತಿದ್ದ ಕೆಲವರ ಅಭಿಪ್ರಾಯದಲ್ಲಿ ಜಿನ್ನಾರ ಪ್ರಿಯ ಪತ್ನಿಯ ಸಾವು ಬದಲಾವಣೆಗೆ ಮುಖ್ಯ ಕಾರಣ.

ವಾಸ್ತವವಾಗಿ ಜಿನ್ನಾರಿಗೆ ಇಬ್ಬರು ಪತ್ನಿಯರು. ಅವರ ಬದುಕಿನ ಕಥೆಯಲ್ಲಿ ಮೊದಲ ಪತ್ನಿಯ ಉಲ್ಲೇಖವೇ ಬರುವುದಿಲ್ಲ. ಆಕೆ ನವವಧುವಾಗಿದ್ದಾಗಲೇ ತೀರಿಕೊಂಡಳು. ಜಿನ್ನಾ ಅವಳನ್ನು ನೋಡಲೇ ಇಲ್ಲ. ಈ ಮದುವೆಯಾದಾಗ ಜಿನ್ನಾ ಇನ್ನೂ ವಿದ್ಯಾರ್ಥಿ. ಮುಸ್ಲಿಮರ ಮಡಿವಂತ ಸಂಪ್ರದಾಯದ ಪ್ರಕಾರ ಮದುವೆಯಲ್ಲಿ ಆ ಹುಡುಗಿಯ ಪುರುಷ ಪ್ರತಿನಿಧಿಗಳು ಮಾತ್ರ ಇದ್ದರು. ಅಮೇಲೆ ಈ ನವವಿವಾಹಿತ ವಿದ್ಯಾಭ್ಯಾಸಕ್ಕಾಗಿ ಲಂಡನ್ನಿಗೆ ಹೋದ. ಆತ ಹಿಂದಿರುಗಿ ಬರುವಷ್ಟರಲ್ಲಿ ಹೆಂಡತಿ ತೀರಿಕೊಂಡಿದ್ದಳು.

ಜಿನ್ನಾರ ಎರಡನೇ ಮದುವೆ ಈ ಕಟ್ಟಾಸಂಪ್ರದಾಯದ ಮದುವೆಗೆ ತದ್ವಿರುದ್ಧವಾಗಿತ್ತು. ಜಿನ್ನಾರ ಹೊಸ ಹೆಂಡತಿ ಮುಸ್ಲಿಮಳಲ್ಲ, ಪಾರ್ಸಿ. ಈ ಮದುವೆಯನ್ನು ತಂದೆತಾಯಿಗಳು ಏರ್ಪಡಿಸಲಿಲ್ಲ. ಬದಲಿಗೆ ಇದು ಪ್ರೇಮವಿವಾಹವಾಗಿತ್ತು. ಈಕೆ ಹುಟ್ಟಿದ ದಿನವೇ ಜಿನ್ನಾ ಅವಳನ್ನು ನೋಡಿದ್ದರು. ಬಾಂಬೆಯ ಶ್ರೀಮಂತ ವ್ಯಾಪಾರಿಯಾಗಿದ್ದ ದಿನ್‌ಶಾ ಪೆಟಿಟ್ ಜಿನ್ನಾರ ಆಪ್ತಮಿತ್ರ, ಜಿನ್ನಾ ಆಗಾಗ ಈ ಮಿತ್ರನ ಮನೆಗೆ ಬರುತ್ತಿದ್ದರು. ಒಂದು ಸಲ ಎಂದಿನಂತೆ ಮಿತ್ರನ ಮನೆಗೆ ಜಿನ್ನಾ ಬಂದರು. ಆಗಷ್ಟೇ ಹುಟ್ಟಿದ್ದ ತಮ್ಮ ಮಗುವನ್ನು ಎತ್ತಿಕೊಂಡು ಬಂದ ದಿನ್ ಶಾ ಮಿತ್ರನ ಕೈಗೆ ಮಗುವನ್ನು ಕೊಟ್ಟು ಈ ಮಗುವನ್ನು ಹಿಡಿದ ಮೊದಲ ವ್ಯಕ್ತಿ ನೀನೇ ಎಂದರು. ಈ ಮಗು ೧೮ ವರ್ಷದ ಹುಡುಗಿಯಾದಾಗ ನಲವತ್ತು ವರ್ಷ ವಯಸ್ಸಾಗಿದ್ದ ಜಿನ್ನಾ ಮದುವೆಯ ಪ್ರಸ್ತಾಪ ಮಾಡಿದರು. ಅವಳೋ ಉತ್ಸಾಹ ತುಂಬಿದ ರೂಪಸಿ. ಅವಳು ಮಾಡಿದ್ದೆಲ್ಲವೂ ಸಂಪ್ರದಾಯಕ್ಕೆ ವಿರುದ್ಧವಾಗೇ ಇರುತ್ತಿತ್ತು. ಆಗ ವೃತ್ತಿಪರ ನಟಿಯರಲ್ಲದೆ ಬೇರೆ ಯಾರೂ ಕೂಡ ಮೇಕಪ್ ಮಾಡಿಕೊಳ್ಳುತ್ತಿರಲಿಲ್ಲ. ಇವಳು ಮಾತ್ರ ಸದಾ ಪೌಡರ್ ಪಫ್ ಹಿಡಿದುಕೊಂಡೇ ಇರುತ್ತಿದ್ದಳು. ಕುಲೀನ ಮುಸ್ಲಿಂ ಹೆಂಗಸರು ಮುಖಕ್ಕೆ ಪರದೆ ಹಾಕಿಕೊಂಡು ದಪ್ಪದಪ್ಪ ತುಂಬು ಉಡುಗೆಗಳಲ್ಲಿ ಸಾರ್ವಜನಿಕವಾಗಿ ಕಾಣಿಸಿಕೊಂಡರೆ ಜಿನ್ನಾ ಪತ್ನಿ ಅತ್ಯಂತ ನವಿರಾದ ತೆಳುವಾದ ಪೊರೆಯಂತಿದ್ದ ಪಾರದರ್ಶಕ ಸೀರೆಗಳನ್ನು ಉಡುತ್ತಿದ್ದಳು. ಅವಳ ನಡೆನುಡಿ ಎಲ್ಲರೂ ಆಡಿಕೊಳ್ಳುವ ವಿಷಯವಾಗಿಬಿಟ್ಟಿತ್ತು. ಜಿನ್ನಾ ಮತ್ತು ಅವರ ಕಿರಿಯ ಪತ್ನಿಯ ಮನೋಭಾವ, ಪ್ರೇಮನಿಷ್ಠೆ ಕುರಿತು ಅನೇಕ ಕಥೆಗಳಿವೆ. ಪ್ರೇಮಪತ್ರಗಳಲ್ಲಿ ಜಿನ್ನಾ M.A. ಜಿನ್ನಾ ಎಂದು ಸಹಿ ಮಾಡುತ್ತಾರೆ ಎಂದು ಆಕೆ ಗೆಳತಿಯರ ಬಳಿ ದೂರಿನಂತೆ ಹೇಳಿಕೊಂಡಿದ್ದಳು. ಪ್ರತಿದಿನ ಬೆಳಿಗ್ಗೆ ಜಿನ್ನಾ ಅವಳ ತಲೆದಿಂಬಿನ ಮೇಲೆ ನೂರು ರೂಪಾಯಿಯ ನೋಟನ್ನು ಇರಿಸುವುದು ಅವಳಿಗೆ ಪ್ರಿಯವಾದ ವಿಷಯವಾಗಿತ್ತು.

ಒಂದು ಸಲ ಜಿನ್ನಾ, ಬ್ರಿಟಿಷರ ಮಿಲಿಟರಿ ಬಜೆಟ್ಟನ್ನು ವಿರೋಧಿಸಿ ಬಹುಮುಖ್ಯವಾದ ಭಾಷಣ ಮಾಡುತ್ತಿದ್ದರು. ಅವರ ಮಾತಿನ ವೈಖರಿಯನ್ನು ಕೇಳುವುದಕ್ಕಾಗಿಯೇ ಅವರ ಅನುಯಾಯಿಗಳು ಸಭಾಂಗಣದಲ್ಲಿ ಕಿಕ್ಕಿರಿದು ತುಂಬಿದ್ದರು. ಜಿನ್ನಾ ತಮ್ಮ ಮಾತನ್ನು ಸೊಗಸಾಗಿ ಆರಂಭಿಸಿದ್ದರು. ಎಲ್ಲರ ದೃಷ್ಟಿಯೂ ಅವರ ಮೇಲೇ ಕೇಂದ್ರೀಕೃತವಾಗಿತ್ತು. ಆಗ ಶ್ರೀಮತಿ ಜಿನ್ನಾ ಪ್ರತಿಷ್ಠಿತರಿಗೆ ಮೀಸಲಾದ ಗ್ಯಾಲರಿಗೆ ಬಂದು ಮುಂದಿನ ಸಾಲಿನಲ್ಲಿ ಕೂತವಳೇ ಹ್ಯಾಂಡ್‌ಬ್ಯಾಗಿನಿಂದ ಲಿಪ್‌ಸ್ಟಿಕ್ ಹೊರಗೆಳೆದು, ಮುಂದಿದ್ದ ಕಂಬಿಯ ಮೇಲೆ ಬಾಗಿಕೊಂಡು ತುಟಿಗೆ ಲಿಪ್‌ಸ್ಟಿಕ್ ಉಜ್ಜತೊಡಗಿದಳು. ಜಿನ್ನಾ ಸ್ನೇಹಿತರೆಲ್ಲ ಜಿನ್ನಾ ಸ್ಥಿತಿಗಾಗಿ ಅಯ್ಯೋ

ಪಾಪ ಎಂದು ಮರುಗಿದರು. ಇನ್ನೊಂದು ಸಂಧರ್ಭದಲ್ಲಿ ಜಿನ್ನಾ ಅವರು ಮುಸ್ಲಿಂ ಮೌಲಾನಾಗಳ ಜೊತೆ ಏನೋ ಗಂಭೀರವಾಗಿ ಚರ್ಚಿಸುತ್ತಿದ್ದರು. ಆಗ ಎಂದಿನಂತೆ ಪಾರದರ್ಶಕ ಉಡುಪಿನಲ್ಲಿದ್ದ ಶ್ರೀಮತಿ ಜಿನ್ನಾ ಅವರ ಮಧ್ಯೆ ಬಂದು ಕೂತು ತಾನೂ ಮಾತಿನಲ್ಲಿ ಸೇರಿದಳು. ಆಗ ಆ ಗುಂಪಿನಲ್ಲಿ ಕುಳಿತಿದ್ದ ಶ್ರೀಮತಿ ನಾಯ್ಡು ಅವರು ಒಂದು ದಪ್ಪನೆಯ ವುಲನ್ ಶಾಲು ತಂದು ಅವಳ ಮೇಲೆ ಹೊದ್ದಿಸಿದರಂತೆ.

ಜಿನ್ನಾರ ವೈವಾಹಿಕ ಬದುಕಿನಲ್ಲಿ ಇದ್ದಕ್ಕಿದ್ದಂತೆ ಒಂದು ದೊಡ್ಡ ದುರಂತ ಎರಗಿತು. ಶ್ರೀಮತಿ ಜಿನ್ನಾ ಒಂದು ಮಗುವಿಗೆ ಜನ್ಮಕೊಟ್ಟು ಸ್ವಲ್ಪ ಕಾಲದಲ್ಲಿಯೇ ಜಿನ್ನಾ ಅವರನ್ನು ತೊರೆದು ಹೋದಳು. ಸಂಧಾನ ಮಾಡಿಕೊಳ್ಳಬೇಕು ಎನ್ನುವಷ್ಟರಲ್ಲಿಯೇ ಪೆರಿಟೋನೈಟಿಸ್‌ನಿಂದ ತೀರಿಕೊಂಡಳು. ಆಕೆ ತ್ಯಜಿಸಿ ಹೋದಾಗ ಉಂಟಾದ ಸಾರ್ವಜನಿಕ ಲೇವಡಿ ಹಾಗೂ ಆನಂತರ ಆಕೆಯ ಹಠಾತ್ ಸಾವಿನಿಂದ ಜಿನ್ನಾ ತೀರ ಅಂತರ್ಮುಖಿಯಾದರು. ಅವರು ಉಂಡ ಕಹಿ ಒಳಗೊಳಗೇ ಮಡುಗಟ್ಟಿಕೊಂಡಿತು. ವೈಯಕ್ತಿಕವಾಗಿಯೂ ರಾಜಕೀಯವಾಗಿಯೂ ಅವರು ತುಂಬ ಒಂಟಿಯಾದರು.

ಜಿನ್ನಾ ತಮ್ಮ ಹಿಂದಿನ ಬದುಕಿನಿಂದ ಸಂಪೂರ್ಣ ವಿಮುಖರಾಗಲು ಬಹುಶಃ ಅವರ ವೈಯಕ್ತಿಕ ನೋವೇ ಮುಖ್ಯ ಕಾರಣ ಎಂದು ನನಗನಿಸುತ್ತದೆ. ತಮ್ಮ ಸ್ಥಿತಿಗಾಗಿ ಅಯ್ಯೋಪಾಪ ಎಂದು ಮರುಗಿದ ಸ್ನೇಹಿತರಿಗೆ ಅವರು ತಮ್ಮ ಮುಖ ತೋರಿಸಲು ಬಯಸಲಿಲ್ಲ. ಪ್ರತಿಷ್ಠೆ ಹಾಗೂ ಕಹಿಯ ಭಾವನೆಯಿಂದ ಅವರು ಒಂಟಿದಾರಿ ಹಿಡಿದರು. ಒಂದು ವೇಳೆ ಅವರೂ ಕೂಡ ಎಲ್ಲ ಮುಸ್ಲಿಂ ರಾಷ್ಟ್ರೀಯವಾದಿಗಳಂತೆ ಇದ್ದಿದ್ದರೆ ಹಳೇ ಕಾಂಗ್ರೆಸ್ ಗುಂಪಿನ ಹಲವರಲ್ಲಿ ಒಬ್ಬರಾಗಿಬಿಡುತ್ತಿದ್ದರು. ಅದಕ್ಕೆ ಬದಲು ಮುಸ್ಲಿಮರ ನಾಯಕನಾದರೆ, ಮುಂದೆ ಏನೇನೊ ಆಗಬಹುದು, ಎಷ್ಟೆಷ್ಟು ಎತ್ತರಕ್ಕೆ ಏರಬಹುದು?

ಜಿನ್ನಾ ಈ ಮೊದಲು ಎಂದೂ ಅನುಸರಿಸದಿದ್ದ ಇಸ್ಲಾಮೀ ಸಂಪ್ರದಾಯವನ್ನು ಕಟ್ಟುನಿಟ್ಟಾಗಿ ಅನುಸರಿಸುವುದಕ್ಕೆ ಅವರ ಮಗಳು ಕಾರಣಳಾದಳು. ಮುಸ್ಲಿಮೇತರ ವ್ಯಕ್ತಿಯನ್ನು ಮದುವೆಯಾದ ತಂದೆಯ ಮೇಲ್ಪಂಕ್ತಿಯನ್ನು ಅನುಸರಿಸಿದ ಅವರ ಮುದ್ದಿನ ಮಗಳು ದೀನಾ ಪಾರ್ಸಿಯವ ನೊಂದಿಗೆ ಓಡಿಹೋದಳು. ಆತ ಅನಂತರ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡ. ಜಿನ್ನಾ ಅವಳನ್ನು ಮನೆಗ ಸೇರಿಸಲಿಲ್ಲ. ಈಗ ಜಿನ್ನಾರ ಜೊತೆಯಲ್ಲಿ ಏಕೈಕ ವ್ಯಕ್ತಿ ಮಾತ್ರ ಉಳಿದಿದ್ದಳು. ಆಕೆ ಫಾತಿಮಾ. ಜಿನ್ನಾ ತಂಗಿ. ಡೆಂಟಿಸ್ಟ್ ಆಗಿದ್ದ ಫಾತಿಮಾ ಅಣ್ಣನನ್ನು ನೋಡಿಕೊಳ್ಳುವುದಕ್ಕಾಗಿಯೇ ವೃತ್ತಿಯನ್ನು ತೊರೆದು ಬಂದಳು. ಆಕೆ ಅವಿವಾಹಿಯಿತೆ ಮತ್ತು ಅಣ್ಣನಂತೆಯೇ ಬಹಳ ಅಂತರ್ಮುಖಿ. ಆಕೆ ಬೇರೆ ಯಾವ ಹೆಂಗಸರನ್ನೂ ಸೇರುತ್ತಿರಲಿಲ್ಲ. ಒಂದೇ ಒಂದು ಸಲ ಮಾತ್ರ ಮಗಳು ದೀನಾ ಈ ತಡೆಯನ್ನು ಭೇದಿಸಿ ಬಂದಿದ್ದಳು. ಮುಸ್ಲಿಂ ಯುವಕನೊಬ್ಬ ಜಿನ್ನಾರ ಹತ್ಯೆಗೆ ಪ್ರಯತ್ನಿಸಿದಾಗ ಪಾರಾಗಿ ಬದುಕಿ ಉಳಿದ ಅವರನ್ನು ನೋಡಲು ಅವಳು ಬಂದಿದ್ದಳು. ಜಿನ್ನಾಗೆ ಹೆಚ್ಚಿನ ಹಾನಿಯೇನೂ ಆಗಿರಲಿಲ್ಲ. ಆದರೆ ದೀನಾಗೆ ಸ್ವಾಗತವಿರಲಿಲ್ಲ. ಇದಾದ ನಂತರ ಅವಳನ್ನು ಮತ್ತೆ ಎಂದೂ ಮ

ಬರಗೊಡಲಿಲ್ಲ. ಈ ಮಧ್ಯಂತರದ ನಂತರ ಅಣ್ಣತಂಗಿಯರು ತಮ್ಮ ಎಂದಿನ ಉತ್ಸಾಹಶೂನ್ಯ, ಯಾರನ್ನೂ ಸೇರದ ಬದುಕಿಗೆ ಮರಳಿದರು. ಆಮೇಲಿನ ಬೆಳವಣಿಗೆಗಳು ಅವರನ್ನು ಕರಾಚಿಯ ಭವ್ಯ ಬಂಗಲೆಗೆ ತಂದಿರಿಸಿದವು. ನಾನು ಈ ಅಣ್ಣತಂಗಿಯರನ್ನು ಭೇಟಿಯಾಗಿದ್ದು ಸ್ವಾತಂತ್ರ್ಯ ದಿನಾಚರಣೆಯ ನಂತರ.

ಪಾಕಿಸ್ತಾನ ಸೃಷ್ಟಿಯಾಗುವುದಕ್ಕೆ ಮೊದಲಿನಿಂದಲೂ ಫಾತಿಮಾ ಬಗ್ಗೆ ನನಗೆ ಗೊತ್ತಿತ್ತು. ಆಕೆ ತುಂಬ ಸಂಕೋಚ ಸ್ವಭಾವದ ಮಿತಭಾಷೆಯ ಹೆಣ್ಣಾಗಿದ್ದಳು. ಪಾಕಿಸ್ತಾನದ 'ಫಸ್ಟ್‌ಲೇಡಿ' ಸ್ಥಾನಕ್ಕೆ ಏರಿದ ನಂತರ ಆಕೆ ವಿಸ್ಮಯಕಾರಿಯಾಗಿ ಬದಲಾದಳು. ಸಭೆಗಳಲ್ಲಿ ಆಕೆಯ ಭಾಷಣಗಳಾಗುತ್ತಿದ್ದವು. ಶಂಕುಸ್ಥಾಪನೆಗೆ ಆಕೆಯೇ ಬರಬೇಕಿತ್ತು. ಲಿಮೋಸಿನ್ ಕಾರಿನಲ್ಲಿ ಕುಳಿತು ಪಾಕಿಸ್ತಾನೀ ಹಸಿರು ಸಮವಸ್ತ್ರದ ಬೆಂಗಾವಲಿನವರೊದಿಗೆ ಸುತ್ತುತ್ತಿದ್ದಳು. ಲಾಹೋರಿನ ಗುಲಾಬಿ ತೋಟಗಳಿಗೆ ಅವಳ ಗೌರವಾರ್ಥ ಗುಲಿಸ್ತಾನಿ-ಇ-ಫಾತಿಮಾ ಮೊದಲಾಗಿ ಹೆಸರಿಡಲಾಯಿತು. ಸಿಂದ್ ಪ್ರಾಂತದ ಸಾರ್ವಜನಿಕ ಚೌಕದಲ್ಲಿ ಬ್ರಿಟಿಷ್ ಆಳ್ವಿಕೆಯ ಕಾಲದಿಂದ ರಾರಾಜಿಸುತ್ತಿದ್ದ ಕ್ವೀನ್ ವಿಕ್ಟೋರಿಯಾಳ ಭಾರೀ ಗಾತ್ರದ ಪ್ರತಿಮೆಯನ್ನು ತೆಗೆದು ಅದರ ಸ್ಥಳದಲ್ಲಿ ತೆಳ್ಳಗಿನ ಜಿನ್ನಾ ಪ್ರತಿಮೆ ಸ್ಥಾಪಿಸಲಾಯಿತು. ಅಣ್ಣನಿಗಿಂತ ೧೫-೨೦ ವರ್ಷ ಚಿಕ್ಕವಳಾಗಿದ್ದ ಫ್ಯಾತಿಮಾ ತಲೆಗೂದಲೂ ಕೂಡ ಅಣ್ಣನಂತೆಯೇ ಸಂಪೂರ್ಣ ಬೆಳ್ಳಗಾಗಿದ್ದವು. ಅಣ್ಣನಂತೆಯೇ ತಲೆಗೂದಲ ಬಣ್ಣಕ್ಕೆ ಹೊಂದುವಂಥ ಉಡುಪನ್ನು ಧರಿಸುವ ತಂತ್ರವನ್ನು ಅವಳೂ ಅಳವಡಿಸಿಕೊಂಡಿದ್ದಳು. ಆಕೆಯ ಮುಖವೊಂದನ್ನು ಬಿಟ್ಟು ತಲೆಯ ಮೇಲಿನಿಂದ ಪಾದದವರೆಗೂ ತಿಳಿಗೆಂಪು, ಬೂದು, ಕಂದು, ಬಿಳಿಛಾಯೆಯ ಸ್ಕಾರ್ಫ್‌ಗಳು, ದುಪಟ್ಟಾ ಪದರುಗಳು ಇಳಿಬಿದ್ದಿರುತ್ತಿದ್ದವು. ಮುಖವನ್ನು ತೆರೆದು ತೋರಿಸುವ ವಿಷಯದಲ್ಲಿ ಮಾತ್ರ ಆಕೆ ಆಧುನಿಕ ಪದ್ಧತಿ ಹಿಡಿದಿದ್ದಳು.

ಪಾಕಿಸ್ತಾನದಲ್ಲಿ ಅಣ್ಣತಂಗಿ ಜಿನ್ನಾಗಳ ಬಗೆಗಿನ ಗೌರವವು ಪೂಜೆ ಆರಾಧನೆಯ ಮಟ್ಟ ತಲುಪಿತ್ತು ಎನ್ನಬಹುದು. ಪತ್ರಿಕೆಗಳೂ, ರೇಡಿಯೋಗಳೂ ಇದೇ ಭಾವನೆಯನ್ನು ಪೋಷಿಸಿಕೊಂಡು ಬಂದವು. ಇಷ್ಟಾದರೂ ಜಿನ್ನಾರ ಆಧುನಿಕ ವಿಚಾರಗಳನ್ನು ಸಂಪ್ರದಾಯನಿಷ್ಠ ಮುಸ್ಲಿಮರು ಪೂರ್ತಿಯಾಗಿ ಒಪ್ಪಿರಲಿಲ್ಲ. ಜಿನ್ನಾ, ಮೆಕ್ಕಾ ಯಾತ್ರೆಯ ಬಗ್ಗೆ ಯೋಚಿಸುವ ತೊಂದರೆಯನ್ನೂ ತೆಗೆದುಕೊಳ್ಳಲಿಲ್ಲ. ಮದ್ಯಪಾನದ ಬಗ್ಗೆ ಇಸ್ಲಾಮಿಕ್ ನಿಷೇಧವನ್ನು ಉಲ್ಲಂಘಿಸಿ ಅವರು ಯಾವಾಗಾದರೊಮ್ಮೆ ವೈನ್ ಕುಡಿಯುತ್ತಿದ್ದರು. ಸಿಗಾರುಗಳಿಗಿಂತೂ ಲೆಕ್ಕವಿಲ್ಲ. ಮುಖಕ್ಕೆ ಪರದೆ ಹಾಕದ ಅವರ ಸೋದರಿಯ ದಿಟ್ಟತನದ ಬಗೆಗೂ ಮಡಿವಂತರಿಂದ ಬಹಳ ಟೀಕೆಗಳು ಬರುತ್ತಿದ್ದವು.

ಪಾಕಿಸ್ತಾನ ಉದ್ಭವಿಸಿದ ಹೊಸದರಲ್ಲಿ ಒಂದು ಬೃಹತ್ ರ್‍ಯಾಲಿ ನಡೆಯಿತು. ಜನರಿಂದ ಗೌರವಗಳನ್ನು ಸ್ವೀಕರಿಸುತ್ತ ಈ ಅಣ್ಣತಂಗಿಯರ ಜೋಡಿ ವೇದಿಕೆಯ ಮೇಲೆ ವಿರಾಜಮಾನವಾಗಿತ್ತು. ಸ್ವಾಗತ ಭಾಷಣ ಮಾಡಿದವರು ಒಬ್ಬ ಮೌಲಾನಾ. ಆತ ಜನ ಭಾಷೆಯಾದ ಉರ್ದುವಿನಲ್ಲಿ ಮಾತಾಡಿದರು. ಪಾಶ್ಚಾತ್ಯ ಜೀವನ ಶೈಲಿಯ ಜಿನ್ನಾಗಳು

ಉರ್ದುಭಾಷೆಯ ಪಾಂಡಿತ್ಯಕ್ಕಾಗಿ ಎಂದು ಪ್ರಯತ್ನಿಸಿದವರಲ್ಲ. ಮೌಲಾನಾ ತಮ್ಮ ಭಾಷಣದಲ್ಲಿ ಮುಖಕ್ಕೆ ಪರದೆ ಹಾಕದ ಹೆಂಗಸರ ಬಗ್ಗೆ ಕಟುಟೀಕೆ ಮಾಡುತ್ತಿದ್ದಾಗ ಅದು ಅರ್ಥವಾಗದ ಅಣ್ಣತಂಗಿ ನಸುನಗುತ್ತಾ ತಲೆದೂಗುತ್ತಾ ಕೂತಿದ್ದರು.

ಪಾಕಿಸ್ತಾನ ಒಂದು ಪ್ರತ್ಯೇಕ ರಾಷ್ಟ್ರವಾಗಿ ರೂಪುಗೊಂಡು ಇನ್ನೂ ಮೂರು ತಿಂಗಳು ಪೂರ್ಣವಾಗುವುದಕ್ಕೆ ಮೊದಲೇ ಜಿನ್ನಾ ಆರೋಗ್ಯ ತೀವ್ರ ಹದಗೆಟ್ಟಿತು. ಅವರ ಅನಾರೋಗ್ಯವನ್ನು ಬಹಿರಂಗಪಡಿಸಲಿಲ್ಲ. ಯಾರಾದರೂ ಕೇಳಿದರೆ ಅವರಿಗೆ ನೆಗಡಿಯಾಗಿದೆ ಎಂಬ ಉತ್ತರ ಮಾತ್ರ ಸಿಗುತ್ತಿತ್ತು. ಆದರೆ ಅವರಿಗೆ ನಿಕಟರಾಗಿದ್ದವರಿಗೆ ಮಾತ್ರ ಅವರ ವಿಷಣ್ಣ ಮೌನ, ನಿರುತ್ಸಾಹ, ಯಾವುದೋ ಭಯವನ್ನು ಮುಚ್ಚಿಡುವಂತಿದ್ದ ಜಡತೆ, ಒಂದು ಸಣ್ಣ ನಿರ್ಧಾರವನ್ನೂ ಕೈಗೊಳ್ಳಲಾರದಂತಹ ಅಶಕ್ತತೆ, ಇದ್ದಕ್ಕಿದ್ದಂತೆ ಕೆರಳುವ ಸ್ವಭಾವಗಳು ಗೊತ್ತಾಗಿದ್ದವು. ನಾನು ಲೈಫ್ ಪತ್ರಿಕೆಯ ಮುಖಪುಟಕ್ಕಾಗಿ ಜಿನ್ನಾ ಅವರ ಇತ್ತೀಚಿನ ಚಿತ್ರ ತೆಗೆಯಲು ಬಹಳಷ್ಟು ಸಮಯ ಅವರ ಸರ್ಕಾರೀ ಸೌಧದಲ್ಲಿ ಸುತ್ತಾಡುತ್ತಿದ್ದರಿಂದ ನನಗೆ ಈ ವಿಷಯಗಳೆಲ್ಲ ಗೊತ್ತಾಗುತ್ತಿದ್ದವು.

ಆದರೂ ಕ್ವೇದ್-ಇ-ಆಜಂನನ್ನು ಜನ ಈಗಲು ತಮ್ಮ ಉದ್ಧಾರಕನೆಂದೇ ಆರಾಧಿಸುತ್ತಿದ್ದರು. ತಾನು ಮಾಡಿದ ಹೊಸ ಸೃಷ್ಟಿಯಲ್ಲಿ ಎಲ್ಲವೂ ಸರಿಯಿಲ್ಲ ಎಂಬುದು ಸ್ವತಃ ಈ ಮಹಾನ್ ನಾಯಕನಿಗೇ ಗೊತ್ತಿತ್ತು. ಈತನ ರಾಷ್ಟ್ರವನ್ನು ಜನರು 'ಜಿನ್ನಾ ಕಟ್ಟಿದ ಮನೆ' ಎಂದು ಕರೆಯುತ್ತಿದ್ದರು. ಭಾರತದ ಮುಖ್ಯ ದೇಹದಿಂದ ಈ ದೇಶವನ್ನು ಪ್ರತ್ಯೇಕಿಸಿದಾಗ ವಾಸ್ತವಿಕ ಸ್ಥಿತಿಗತಿಗಳನ್ನು ಒಂದಿಷ್ಟೂ ಗಣನೆಗೆ ತೆಗೆದುಕೊಂಡಿರಲಿಲ್ಲ. ಇದೊಂದು ತೀರ ಅಸಹಜ ವಿಭಜನೆಯಾಗಿತ್ತು. ಜಗತ್ತಿನ ಶೇಕಡಾ ೭೫ರಷ್ಟು ಸೆಣಬನ್ನು ಪಾಕಿಸ್ತಾನ ಬೆಳೆಯುತ್ತಿತ್ತು. ಆದರೆ ಅದರ ಸಂಸ್ಕರಣ ಗಿರಣಿಗಳೆಲ್ಲ ಭಾರತದಲ್ಲಿದ್ದವು. ಭಾರತದ ೧/೩ರಷ್ಟು ಹತ್ತಿಯನ್ನು ಪಾಕಿಸ್ತಾನ ಬೆಳೆಯುತ್ತಿತ್ತು. ಆದರೆ ಅದರಲ್ಲಿದ್ದ ಗಿರಣಿಗಳ ಸಂಖ್ಯೆ ೧/೧೩ರಷ್ಟು ಮಾತ್ರ. ಭಾರತಕ್ಕೆ ಬೇಕಾದ ಬಹುಪಾಲು ಚರ್ಮ ಹಾಗೂ ತೊಗಲಿನ ಉತ್ಪನ್ನಗಳನ್ನು ಪಾಕಿಸ್ತಾನ ಉತ್ಪಾದಿಸಿದರೂ ಚರ್ಮ ಹದಗೊಳಿಸುವ ಕಾರ್ಯಾಗಾರಗಳೆಲ್ಲ ಭಾರತದಲ್ಲಿದ್ದವು. ಹೊಸ ರಾಷ್ಟ್ರದಲ್ಲಿ ಕಾಗದದ ಗಿರಣಿಗಳಿರಲಿಲ್ಲ. ಕೆಲವೇ ಕೆಲವು ಕಬ್ಬಿಣದ ಫೌಂಡ್ರಿಗಳಿದ್ದವು. ಸಾಕಷ್ಟು ರಸ್ತೆ ಮತ್ತು ರೈಲು ಸೌಕರ್ಯಗಳಿರಲಿಲ್ಲ. ಜೊತೆಗೆ ನಿರ್ವಸಿತರ ಪ್ರವಾಹ ಇನ್ನೂ ಹರಿದು ಬರುತ್ತಲೇ ಇತ್ತು. ಪಾಕಿಸ್ತಾನದ ಭೂಮಿ ಅತ್ಯಂತ ಫಲವತ್ತಾಗಿತ್ತು. ಆಹಾರ ಸ್ವಾವಲಂಬನೆ ಅದಕ್ಕಿದ್ದ ಬಹುದೊಡ್ಡ ಅನುಕೂಲತೆ. ಆದರೆ ಮತೀಯ ಯುದ್ಧ ಮುಗಿದು ಬಹುದಿನಗಳಾದರೂ ನಿಲ್ಲದ ನಿರ್ವಸಿತರ ಪ್ರವಾಹದಿಂದ ಈ ಅಂಶಕ್ಕೂ ಭೀತಿ ಒದಗಿತ್ತು.

ಪ್ರತ್ಯೇಕ ಇಸ್ಲಾಮಿಕ್ ರಾಷ್ಟ್ರವನ್ನು ಗಳಿಸುವ ಉಗ್ರನಿಷ್ಠೆಯಲ್ಲಿ ಜಿನ್ನಾ ಇಂತಹ ಅಸಾಧ್ಯ ತೊಂದರೆಗಳನ್ನು ಎದುರು ಹಾಕಿಕೊಂಡಿದ್ದರು. ನಿಜಕ್ಕೂ ಅವರ ಉತ್ಸಾಹಕ್ಕೆ ಬಹಳ [illegible] ಪೆಟ್ಟು ನೀಡಿದ್ದು ಕಾಶ್ಮೀರದ ಬಿಕ್ಕಟ್ಟು. ಭಾರತದ ಬಹುದೊಡ್ಡ ರಾಜಸಂಸ್ಥಾನವಾಗಿದ್ದ [illegible] ಮುಸ್ಲಿಂ ಜನಸಂಖ್ಯೆ ಶೇ. ೭೭. ಇಷ್ಟಿದ್ದೂ ಅದು ಪಾಕಿಸ್ತಾನದ ತೆಕ್ಕೆಗೆ ಬರುವ [illegible]

ಸೂಚಿಸಲಿಲ್ಲ. ಭಾರತಕ್ಕೆ ಸೇರಿಕೊಂಡ ಕಾಶ್ಮೀರ ಈ ಎರಡೂ ದೇಶಗಳ ಅಘೋಷಿತ ಯುದ್ಧಕ್ಕೆ ಕಾರಣವಾಯಿತು. ಈ ಆತಂಕದ ಕಿರಿಕಿರಿ ಬೆಳೆದಂತೆ ಕ್ವೇದ್-ಇ-ಅಜಂರ 'ನೆಗಡಿ'ಯ ತೀವ್ರತೆಯೂ ಹೆಚ್ಚುತ್ತಾ ಹೋಯಿತು. ಆತ ಇನ್ನಷ್ಟು ವಿಮುಖರಾದರು.

ಜಿನ್ನಾ ತಮ್ಮ ಸಚಿವರನ್ನು ಭೇಟಿ ಮಾಡುತ್ತಿರಲಿಲ್ಲ. ಅವರ ಅರಮನೆಯ ಸಿಬ್ಬಂದಿ ಹಾಗೂ ಸೇನಾಪತಿ ಸಹಾಯಕರುಗಳೂ ಕೂಡ ಅವರ ಬಳಿ ಹೋಗುವುದಕ್ಕೆ ಹೆದರುತ್ತಿದ್ದರು. ಇಂಥ ಸಂದರ್ಭದಲ್ಲಿ ಫಾತಿಮಾ ನನ್ನನ್ನು ಸಾಕಷ್ಟು ಒದ್ದಾಡಿಸಿ, ಪದೇಪದೇ ಭೇಟಿಯನ್ನು ಮುಂದೂಡಿದರೂ ಕೊನೆಗೂ ಫೋಟೋ ತೆಗೆಯಲು ಅನುಮತಿ ದೊರಕಿಸಿಕೊಟ್ಟರು. ೭೦ನೇ ವಯಸ್ಸಿನಲ್ಲೂ ಜಿನ್ನಾ ಸ್ಫುರದ್ರೂಪಿ ಆಗಿದ್ದರು. ಯಾವುದೇ ಸ್ಫುರದ್ರೂಪಿ ವ್ಯಕ್ತಿಗೆ ಫೋಟೋ ತೆಗೆಸಿಕೊಳ್ಳಲು ಒಳಗೇ ಆಸೆ ಇರುತ್ತೆ. ಇದರಿಂದಲೇ ಫೋಟೋಗೆ ಒಪ್ಪಿದರು ಎಂದು ನಾನು ಊಹಿಸಿದೆ.

ಆದರೆ ಜಿನ್ನಾ ಅವರ ಬದಲಾದ ಚಹರೆಯನ್ನು ಕಂಡು ನನಗೆ ಶಾಕ್ ಆಯಿತು. ತತ್ತರಿಸುವ ನಡಿಗೆ, ಭಾವಶೂನ್ಯ ಕಣ್ಣುಗಳು, ಮೂಳೆಗಳು ಎದ್ದುಕಾಣುವ, ನರದೌರ್ಬಲ್ಯದಿಂದ ಬಿಗಿಹಿಡಿದ ಕೈಗಳು. ನಾನು ಫೋಟೋಗಳನ್ನು ತೆಗೆಯುತ್ತಿದ್ದಂತೆ ಪ್ರತಿ ಶಾಟ್ ನಂತರವೂ ಸೋದರಿ ಫಾತಿಮಾ ವಾತ್ಸಲ್ಯದಿಂದ ಜಿನ್ನಾ ಬಳಿ ಹೋಗಿ ಅವರ ಬಿಗಿಹಿಡಿದಿದ್ದ ಕೈಗಳನ್ನು ಮೆದುವಾಗಿ ಬಿಡಿಸಲು ಪ್ರಯತ್ನಿಸುತ್ತಿದ್ದಳು. ಜಿನ್ನಾ ಜೀವಮಾನದ ಅಂತಿಮ ದಿನಗಳಲ್ಲಿ ತಮ್ಮ ಬದುಕಿನ ಸಾಧನೆಗಳ ಲೆಕ್ಕಾಚಾರ ಮಾಡತೊಡಗಿದ್ದರು. ಅದೇ ಅವರ ಈ ನೋವು ತುಂಬಿದ ಗೊಂದಲದ ಮುಖಭಾವಕ್ಕೆ ಕಾರಣವಿರಬಹುದು. ಉತ್ತಮ ವಿಶ್ಲೇಷಣ ಸಾಮರ್ಥ್ಯ, ಪ್ರಖರ ಪ್ರತಿಭೆ ಮತ್ತು ಯಾವುದೇ ಅಂಧಾಭಿಮಾನಗಳಿಲ್ಲದ ಜಿನ್ನಾಗೆ ತಾನು ಮಾಡಿದ ತಪ್ಪು ಅರಿವಾಗಿತ್ತು. ಡಾಕ್ಟರ್ ಫಾಸ್ಟಸ್‌ನಂತೆ ಅವರು ಮಾಡಿದ್ದ ವ್ಯಾಪಾರದಲ್ಲಿ ಅವರೇ ಸಿಕ್ಕಿ ಹಾಕಿಕೊಂಡಿದ್ದರು. ಹೊಸ ರಾಷ್ಟ್ರ ಉದಯಿಸಿದ ನಂತರ ಅಂಧಶ್ರದ್ಧೆಗಳು ಮೇಲುಗೈ ಪಡೆದಿದ್ದವು. ಮತನಿಷ್ಠ ನಾಯಕರು, ಕೆಲವು 'ಹಳೆಯ ಕುಟುಂಬ'ಗಳು ಹೇಳಿದ್ದೇ ಕೊನೆಯ ಮಾತಾಗಿತ್ತು. ಅಂಥವರು ತಮ್ಮ ಅಧಿಕಾರ ಉಳಿಸಿಕೊಳ್ಳುವುದಕ್ಕಾಗಿ ಜನರು ಮತೀಯ ಅಂಧಶ್ರದ್ಧೆಗಳ ಬಿಗಿಮುಷ್ಟಿಯಲ್ಲೇ ಇರುವಂತೆ ನೋಡಿಕೊಳ್ಳುತ್ತಿದ್ದರು.

ಇಂಥ ಅತಿರೇಕಗಳಿಗೆ ಪ್ರತಿಯಾಗಿ ದೇಶದಲ್ಲಿ ಕೆಲವು ಆರೋಗ್ಯಕರ ಶಕ್ತಿಗಳೂ ಇದ್ದವು. ಭೂಮಿ ಮತ್ತು ರೈತರ ಸಮಸ್ಯೆಗೆ ಸ್ಪಂದಿಸುವಂತಹ ಮತ್ತು ಅದರ ಸುಧಾರಣೆಗೆ ಶ್ರಮಿಸುತ್ತಿದ್ದ ಅನೇಕ ಅಧಿಕಾರಿಗಳನ್ನು ನಾನು ಭೇಟಿ ಮಾಡಿದೆ. ದೇಶದ ಅಡಿಪಾಯವನ್ನೇ ಅಲುಗಿಸುವಂಥ ವಿಪತ್ತು, ಅಪಮಾನಗಳ ನಡುವೆಯೂ ಪಾಕಿಸ್ತಾನ ನಿರೀಕ್ಷಿಸಿದ್ದಕ್ಕಿಂತ ಚೆನ್ನಾಗಿಯೇ ಮೊದಲ ವರ್ಷವನ್ನು ದಾಟಿತು. ಸಮತೂಕದ ಬಜೆಟ್, ವ್ಯಾಪಾರದ ಸಮತೋಲನ ಹಾಗೂ ಕೈಗಾರಿಕಾ ಬೆಳವಣಿಗೆಗೆ ಉತ್ತಮ ಕಾರ್ಯಕ್ರಮಗಳು ಪಾಕಿಸ್ತಾನದ ಬೆಳವಣಿಗೆಗೆ ಸಹಾಯಕವಾದವು. ಜಲವಿದ್ಯುತ್ ಶಕ್ತಿಯ ಉತ್ಪಾದನೆಗೆ ಮೊದಲ ಆದ್ಯತೆ ನೀಡಲಾಯಿತು. ಹತ್ತು ವರ್ಷಗಳೊಳಗಾಗಿ ಕಾಟನ್ ಮಿಲ್ಲುಗಳನ್ನು ಎರಡೂವರೆ ಸಹಸ್ರ ಸ್ಪಿಂಡ್ಲ್‌ಗಳಿಗೆ ವಿಸ್ತರಿಸುವ ಯೋಜನೆ ಹಾಕಲಾಯಿತು.

ಇದರ ಮೊದಲ ಐವತ್ತು ಸಾವಿರದಷ್ಟನ್ನು ಕೊಡಲು ಜಪಾನ್ ಒಪ್ಪಿಕೊಂಡಿತು. ಸಿಮೆಂಟ್ ಕಾರ್ಖಾನೆ, ಚರ್ಮ ಹದಗೊಳಿಸುವಿಕೆ, ಔಷಧ ಪದಾರ್ಥಗಳು, ರಬ್ಬರ್ ಟೈರು ಯೋಜನೆ, ಕಾಗದ ಗಿರಣಿಗಳು, ಕೃಷಿ ಸಲಕರಣೆಗಳು ಹಾಗೂ ಕಟಿಂಗ್ ಟೂಲ್‌ಗಳ ತಯಾರಿಕೆ ಇತ್ಯಾದಿ ಗಳಿಗಾಗಿ ಯೋಜನೆ ಹಾಕಲಾಯಿತು. ಅಮೆರಿಕಾದ ಪ್ರಮುಖ ಮೋಟಾರು ತಯಾರಕರೊಬ್ಬರು ಪಾಕಿಸ್ತಾನದಲ್ಲಿ ಕಾರ್ಖಾನೆ ಸ್ಥಾಪಿಸಲು ಮುಂದೆ ಬಂದರು.

ಅರ್ಥವ್ಯವಸ್ಥೆಯಲ್ಲಿ ನಿಕಟವಾದ ಸಂಬಂಧವಿರುವ ಈ ಎರಡು ಸ್ವತಂತ್ರ ರಾಷ್ಟ್ರಗಳ ನಡುವೆ ಮಾಮೂಲು ಸಹಕಾರವಿದ್ದುದೆ ಆಗಿದ್ದರೆ ಇಬ್ಬರಿಗೂ, ಮುಖ್ಯವಾಗಿ ಚಿಕ್ಕರಾಷ್ಟ್ರವಾದ ಪಾಕಿಸ್ತಾನಕ್ಕೆ ಹೆಚ್ಚಿನ ಅನೂಕೂಲವಾಗುತ್ತಿತ್ತು. ಆದರೆ ಈ ಏಕತೆ ದೂರದ ಮಾತಾಗಿತ್ತು. ಪಾಕಿಸ್ತಾನದ ಅಧಿಕಾರಿಯೊಬ್ಬರು ನನ್ನ ಮುಂದೆ ಹೇಳಿದಂತೆ ಪಾಕಿಸ್ತಾನವು ಭಾರತದೊಂದಿಗೆ ಅತ್ಯಂತ ಹೆಚ್ಚಿನ ಸ್ನೇಹಪರವಾದ ಸಹಕಾರವನ್ನು ಹೊಂದಲು ಸಿದ್ಧವಾಗಿತ್ತು. ಮತ್ತು ಈ ಬಗ್ಗೆ ಅದಕ್ಕೆ ಒಲವೂ ಇತ್ತು. ಸಂಯುಕ್ತ ಸಂಸ್ಥಾನ ಮತ್ತು ಕೆನಡಾ ನಡುವೆ ಇದ್ದಂತಹ ಸಹಕಾರ ಈ ಎರಡು ರಾಷ್ಟ್ರಗಳ ನಡುವೆ ಇದ್ದಿದ್ದರೆ? ಆದರೆ ಈ ದೇಶಗಳು ಒಂದೇ ಆಳ್ವಿಕೆಯಲ್ಲಿ ಮುಂದುವರೆಯುವುದು, ಒಂದೇ ರೀತಿಯ ಸಂವಿಧಾನ ಹೊಂದುವುದು ಸಾಧ್ಯವೇ ಇರಲಿಲ್ಲ.

ಭಾರತದಲ್ಲಿ ಹಿಂದೂ ಕೈಗಾರಿಕೋದ್ಯಮಿಗಳ ಮೇಲುಗೈನಿಂದ ಮುಕ್ತರಾದ ಅನೇಕ ಮುಸ್ಲಿಂ ಕೈಗಾರಿಕಾ ಕುಟುಂಬಗಳಿಗೆ ಪ್ರತ್ಯೇಕ ಪಾಕಿಸ್ತಾನದ ಸ್ಥಾಪನೆಯಿಂದ ತುಂಬ ನೆಮ್ಮದಿಯಾಯಟಿತು. ಇದರಲ್ಲಿ ತುಂಬ ಪ್ರತಿಷ್ಠಿತ ಕೈಗಾರಿಕಾ ಕುಟುಂಬ ಇಶ್‌ಪಹಾನಿಯವರದು. ಸುಮಾರು ಒಂದು ಶತಮಾನಕ್ಕೂ ಹೆಚ್ಚು ಕಾಲದಿಂದ ಭಾರತದಿಂದ ಮಧ್ಯಪ್ರಾಚ್ಯದವರೆಗೂ ಅವರ ವ್ಯಾಪಾರೋದ್ಯಮ ಹಬ್ಬಿತ್ತು. ಪೂರ್ವ ಪಾಕಿಸ್ತಾನದ ಬಹು ಮುಖ್ಯ ಉತ್ಪನ್ನ ಹಾಗೂ ಬಂಗಾಳದ ಬಂಗಾರದ ಎಳೆ ಎಂದು ಹೆಸರಾಗಿದ್ದ ಸೆಣಬಿನ ಕೈಗಾರಿಕೆಯೊಂದಿಗೆ ಇಶ್‌ಪಹಾನಿಯವರ ಹೆಸರು ಅವಿಭಾಜ್ಯವಾಗಿ ಸೇರಿಹೋಗಿತ್ತು. ಭಾರತದ ಉಪಖಂಡದಲ್ಲಿ ಬಹುದೊಡ್ಡ ಬ್ಯಾಂಕರುಗಳಾಗಿದ್ದ ಹಬೀಬ್ ಕುಟುಂಬ, ಮಿಲಿಟರಿ ಗುತ್ತಿಗೆದಾರರಾದ ಅಮ್ಜದ್ ಆಲಿ ಮತ್ತು ವಾಸಿರ್ ಆಲಿ ಕುಟುಂಬ ಮೊದಲಾದವರೆಲ್ಲ ಜಿನ್ನಾನ ಕಟ್ಟಾ ಬೆಂಬಲಿಗರಾಗಿದ್ದರು. ಇನ್ನೂ ಅಭಿವೃದ್ಧಿ ಹೊಂದಬೇಕಾಗಿರುವ ಪಾಕಿಸ್ತಾನದಲ್ಲಿ ಅವರಿಗೆ ಅವಕಾಶಗಳ ಗಣಿ ತೆರೆದಿತ್ತು. ಕೈಗಾರಿಕೆ ಹಾಗೂ ರಾಜಕೀಯ ದೃಷ್ಟಿಯಿಂದ ಸಿಂದ್ ಪ್ರಾಂತದಲ್ಲೆಲ್ಲ ಅಗ್ರಮಾನ್ಯರಾಗಿದ್ದವರೆಂದರೆ ಹರೂನ್ ಕುಟುಂಬ. ನವರಾಷ್ಟ್ರ ನಿರ್ಮಾಣದಲ್ಲಿ ಅವರ ಪಾತ್ರ ಬಹಳ ಮುಖ್ಯವಾಗಿತ್ತು. ಹರೂನ್ ಕುಟುಂಬಕ್ಕೆ ಹೆಚ್ಚಿನ ಪೂರ್ವಿಕ ಪರಂಪರೆಯಿಲ್ಲದಿದ್ದರೂ ದೇಶ ನಿರ್ಮಾಣಕ್ಕೆ ಅಗತ್ಯವಾದ ಉತ್ಸಾಹ, ವ್ಯಾಪಾರೀ ಚಾಕಚಕ್ಯತೆ ಹಾಗೂ ಅಪಾರ ಸಂಪತ್ತು ಅವರಲ್ಲಿತ್ತು. ದಿವಂಗತ ಅಬ್ದುಲ್ ಹರೂನ್ ಬಗ್ಗೆ ಅವರ ವಿಧವಾ ಪತ್ನಿ ಹೇಳುವಂತೆ ಜಿನ್ನಾ ಪ್ರತ್ಯೇಕ ರಾಷ್ಟ್ರಸಿದ್ಧಾಂತವನ್ನು ಕೈಗೆತ್ತಿಕೊಳ್ಳುವುದಕ್ಕೆ ಬಹಳ ಮೊದಲೇ ಹರೂನ್ ಅವರು ಪಾಕಿಸ್ತಾನಕ್ಕಾಗಿ ಕೆಲಸ ಆರಂಭಿಸಿದ್ದರು. ಇಪ್ಪತ್ತರ ದಶಕದ ಉತ್ತರಾರ್ಧದಲ್ಲಿ ಸಕ್ಕರೆ ಪ್ರಮುಖ ಕೈಗಾರಿಕೋದ್ಯಮಿಯಾಗಿ ಸ್ವಪ್ರಯತ್ನದಿಂದ ರೂಪುಗೊಂಡಿದ್ದ ಸರ್ ಅಬ್ದು

ಅವರು ಹಿಂದೂ ಮೇಲುಗೈಯಾಗಿರುವ ಕಾಂಗ್ರೆಸ್ಸಿನಿಂದ ದೂರ ಸಿಡಿದು ಮುಸ್ಲಿಂಲೀಗನ್ನು ಬಲಪಡಿಸಬೇಕು ಎಂದು ನಿರ್ಧರಿಸಿದ್ದರು. ಹರೂನ್‌ರ ನಿಕಟಮಿತ್ರರಾಗಿದ್ದ ಜಿನ್ನಾ ಕೆಲವು ವರ್ಷಗಳ ನಂತರ ಲೀಗ್‌ನ ನೇತೃತ್ವ ವಹಿಸಿಕೊಂಡರು. ಹರೂನ್ ಪ್ರತ್ಯೇಕ ಪಾಕಿಸ್ತಾನಕ್ಕಾಗಿ ವಾದಿಸುತ್ತಿದ್ದ ಕಾಲದಲ್ಲಿ ಜಿನ್ನಾ ಇನ್ನೂ ಏಕೀಕೃತ ಭಾರತದ ಪರಿಕಲ್ಪನೆಗೇ ಅಂಟಿಕೊಂಡಿದ್ದರು. ಅಂತಿಮವಾಗಿ ಜಿನ್ನಾ ಕೂಡ ಇದೇ ವಿಚಾರವನ್ನು ಅಪ್ಪಿಕೊಂಡು ಪಾಕಿಸ್ತಾನಕ್ಕಾಗಿ ಹೋರಾಟ ಆರಂಭಿಸಿದರು. ಈ ಗುರಿಯನ್ನು ತಲುಪುವುದಕ್ಕೆ ಐದು ವರ್ಷ ಮೊದಲೇ ಹರೂನ್ ನಿಧನರಾದರು. ಆಗ ಹರೂನ್ ಅವರ ಪತ್ನಿಯನ್ನು ಸಂತೈಸುತ್ತ "ನಾನು ಕೇವಲ ಸ್ನೇಹಿತನನ್ನು ಕಳೆದುಕೊಳ್ಳಲಿಲ್ಲ. ನನ್ನ ಬಲಗೈಯನ್ನೇ ಕಳೆದುಕೊಂಡಿದ್ದೇನೆ" ಎಂದು ಜಿನ್ನಾ ಹೇಳಿದ್ದರು.

ಅಬ್ದುಲ್ಲಾ ಹರೂನ್ ಹೊತ್ತಿಸಿದ ಪಂಜನ್ನು ಅವರ ಇಡೀ ಕುಟುಂಬ ನಿಷ್ಠೆಯಿಂದ ಕಾಪಾಡಿಕೊಂಡು ಬಂದಿತು. ಹೊಸ ರಾಷ್ಟ್ರದಲ್ಲಿ ಹರೂನ್ ಕುಟುಂಬದ ಪ್ರತಿಯೊಬ್ಬರೂ ಕೈಗೆ ಸಿಕ್ಕ ಎಲ್ಲ ರಾಜಕೀಯ ಹಾಗೂ ವಾಣಿಜ್ಯ ಕ್ಷೇತ್ರದ ನೇತೃತ್ವ ವಹಿಸಿದರು. ಸಕ್ಕರೆಯ ಸಿಂಡಿಕೇಟ್‌ನ ಮುಖ್ಯಸ್ಥಿಕೆ ವಹಿಸಿಕೊಂಡ ಶ್ರೀಮತಿ ಹರೂನ್, ಗಂಡ ಮಾಡುತ್ತಿದ್ದ ಲಾಭದಾಯಕವಾದ ಸೆಕೆಂಡ್ ಹ್ಯಾಂಡ್ ಉಡುಪು ತಯಾರಿಕೆ ವ್ಯವಹಾರವನ್ನೂ ಕೈಗೆತ್ತಿಕೊಂಡಳು. ಅಮೆರಿಕಾದಿಂದ ಹಳೆಯ ಬಟ್ಟೆಗಳನ್ನು ತರಿಸಿಕೊಂಡು ತಮ್ಮ ಕಾರ್ಖಾನೆಯಲ್ಲಿ ಅವುಗಳನ್ನು ಸ್ವಚ್ಛಪಡಿಸಿ, ಸರಿಪಡಿಸಿ ಮರುಮಾರಾಟ ಮಾಡುವುದು ಇಲ್ಲಿನ ವ್ಯಾಪಾರ. ಅವರ ಹಿರಿಯ ಮಗ ಯೂಸುಫ್, ಮುಸ್ಲಿಂ ಚೇಂಬರ್ ಆಫ್ ಕಾಮರ್ಸ್‌ನ ಅಧ್ಯಕ್ಷನಾದ. ಒಂದು ಅವಧಿಯವರೆಗೆ ಕರಾಚಿಯ ಮೇಯರ್ ಕೂಡ ಆಗಿದ್ದ. ಇತ್ತೀಚೆಗೆ ಸಿಂದ್ ಪ್ರಾಂತದ ಮುಖ್ಯಸ್ಥನಾದ. ಜಿನ್ನಾ ಹೊರಡಿಸುತ್ತಿದ್ದ 'ಡಾನ್' ವೃತ್ತಪತ್ರಿಕೆಯ ಪ್ರಕಾಶಕನಾದ. ಬಟ್ಟೆ ಮತ್ತು ಆಟಿಕೆಗಳ ಆಮದು, ಮುಂತಾದ ವೈವಿಧ್ಯಮಯ ತಯಾರಿಕಾ ಉದ್ಯಮ ವ್ಯವಹಾರಗಳನ್ನು ನಡೆಸಿದ. 'ಪಾಕ್‌ಏರ್' ಎಂಬ ಹೆಸರಿನ ಹೊಸ ಏರಲೈನ್ಸ್ ಆರಂಭಿಸಿದ.

ಕರಾಚಿಯಲ್ಲಿರುವ ಅವರ ಗುಲಾಬಿಬಣ್ಣದ ಭವನದ ಹೆಸರು "Sea field" ಆ ಮನೆಯಲ್ಲಿ ಎಲಿವೇಟರ್ ಇದೆ. ಗಾಜಿನ ಕಿಟಕಿ ಬಾಗಿಲುಗಳ ವರಾಂಡ, ಅತ್ಯಾಧುನಿಕ ಪೀಠೋಪಕರಣಗಳು, ಲೆಕ್ಕವಿಲ್ಲದಷ್ಟು ಸಿಟಿಂಗ್ ರೂಮುಗಳೂ, ಸ್ತ್ರೀಯರಿಗಾಗಿ ಕನ್ನಡಿ ಕೆಲಸದ ಸುಂದರವಾದ ಏಕಾಂತ ಗೃಹಗಳು. ಈ ಮನೆಯಲ್ಲಿ ಸದಾಕಾಲ ಹೆಂಗಸರ ಕಲರವವಿರುತ್ತದೆ. ಕೆಲವರು ಟೆಲಿಫೋನ್ ಸಂಭಾಷಣೆಯಲ್ಲಿ ನಿರತರಾಗಿರುತ್ತಾರೆ. ನಿರಾಶ್ರಿತರ ವಸತಿ ಸಮಿತಿಗಳನ್ನು ರಚಿಸುವುದು, ಇತ್ಯಾದಿ ಕೆಲಸ ನಡೆದಿರುತ್ತದೆ. ಭವನದ ವಿಶಾಲವಾದ ಛಾವಣಿಯ ಮೇಲೆ ಬಾವುಟ, ಲಾಠಿಗಳನ್ನು ಹಿಡಿದವರ ಕವಾಯತು ನಡೆಯುತ್ತಿರುತ್ತದೆ. ಒಂದು ಕಡೆ ಸೀರೆಗಳ ವಿನ್ಯಾಸದ ಕೆಲಸ ನಡೆದಿರುತ್ತದೆ. ಈ ಎಲ್ಲ ಚಟುವಟಿಕೆಗಳನ್ನು ನಿಯಂತ್ರಿಸುವ ಹರೂನ್ ಪತ್ನಿ ಮಾತೃಸ್ಥಾನದಲ್ಲಿದ್ದರೂ ಸಾಮ್ರಾಜ್ಞಿಯ ದರ್ಪ ಆಕೆಯಲ್ಲಿದೆ.

❑

ಜಾತಿ, ಸಂಪ್ರದಾಯ, ಕಾನೂನು

ನನಗೆ ಕೊಟ್ಟ ವಿವರಣೆಯ ಪ್ರಕಾರ ಬಹುತೇಕ ಮುಸ್ಲಿಂ ಹುಡುಗಿಯರೆಲ್ಲ ಮದುವೆಗೆ ಮುಂಚೆಯೇ, ತಾವು ಮದುವೆಯಾಗಲಿರುವ ವ್ಯಕ್ತಿಯ ಬಗ್ಗೆ ತಿಳಿದುಕೊಳ್ಳುವ ಅವಕಾಶವನ್ನು ಪಡೆದಿರುತ್ತಾರೆ. ತಮ್ಮ ಮಕ್ಕಳು ಸಂಪೂರ್ಣ ಅಪರಿಚಿತನೊಂದಿಗೆ ಮದುವೆಯಾಗುವ ಸಮಸ್ಯೆ ಬೇಡವೆಂದು ಮದುವೆಗೆ ಒಂದು ತಿಂಗಳು ಮುಂಚೆ ಅನೇಕ ಮುಸ್ಲಿಂ ಕುಟುಂಬಗಳು ಒಂದು ಭೇಟಿ ಏರ್ಪಡಿಸುತ್ತಾರೆ. ಹಿರಿಯ ಹೆಂಗಸರ ಸಮ್ಮುಖದಲ್ಲಿ ಹುಡುಗ ಹುಡುಗಿ ಪರಸ್ಪರ ನೋಡುತ್ತಾರೆ. ಹುಡುಗಿ ಆಗ ಮುಖಪರದೆ ಹಾಕಿಕೊಂಡಿರುವುದಿಲ್ಲ. ಹುಡುಗನಿಗೆ ಅವಳು ತೀರಾ ಕಳಪೆ ಅನಿಸಿದರೆ ನಿರಾಕರಿಸಬಹುದು. ಹುಡುಗಿಗೂ ಸಮಾನ ಹಕ್ಕಿರುತ್ತದೆ. ಅವಳಿಗೆ ಧೈರ್ಯವಿದ್ದರೆ ಪ್ರತಿಭಟಿಸಿ ಮಾತಾಡಬಹುದು. ಆಕೆಯ ಸಮ್ಮತಿಯಿಲ್ಲದೆ ಮದುವೆ ಮಾಡಕೂಡದು ಎಂದು ಕುರಾನಿನಲ್ಲಿ ಹೇಳಲಾಗಿದೆ. ಇಸ್ಲಾಮಿನ ತತ್ವಗಳಲ್ಲಿರುವ ಯಾವ ಅಂಶವೂ ಕೂಡ ವಧೂವರರ ಈ ಕ್ಷಿಪ್ರ ಭೇಟಿಯನ್ನು ನಿಷೇಧಿಸುವಂತಿಲ್ಲ. ಕೆಲವು ಪ್ರದೇಶಗಳಲ್ಲಿ, ಉದಾಹರಣೆಗೆ ಹೈದ್ರಾಬಾದಿನ ಶ್ರೀಮಂತ ಮುಸ್ಲಿಂ ಕುಟುಂಬಗಳಲ್ಲಿರುವಂತೆ ಧರ್ಮಕ್ಕಿಂತ ಸಂಪ್ರದಾಯವೇ ಪ್ರಬಲವಾಗಿದ್ದು ಇಲ್ಲಿ ಈ ರೀತಿಯ 'ಪರೀಕ್ಷೆ'ಗೆ ಅವಕಾಶವಿರುವುದಿಲ್ಲ. ಒಂದು ವೇಳೆ ನಿಶ್ಚಿತರಾದ ಹುಡುಗಹುಡುಗಿ ಸಂಬಂಧಿಕರಾಗಿದ್ದು ಹುಡುಗಿಯನ್ನು ಪರದೆಯೊಳಗಿಡುವವರೆಗೆ ಒಟ್ಟಿಗೇ ಆಡಿಕೊಂಡಿರುವಂಥವರಾಗಿದ್ದರೆ ನವವಧೂವರರು ತಮ್ಮ ಮುಖಗಳನ್ನು ಮೊದಲ ಬಾರಿಗೆ ನೋಡುವುದು ವಿವಾಹದ ದಿನದಂದೇ. ಹೈದ್ರಾಬಾದಿನಲ್ಲಿ ಇಂತಹ ಒಂದು ನಾಟಕೀಯ ಕ್ಷಣ 'ಜಲ್ವಾ' (ಹೆಣ್ಣು ನೋಡುವುದು)ವನ್ನು ನೋಡುವ ಅವಕಾಶ ಸಿಕ್ಕಿತು. ಜಲ್ವಾದಲ್ಲಿ ಮೊದಲ ಬಾರಿಗೆ ವಧೂವರರು ಪರಸ್ಪರರನ್ನು ನೋಡುತ್ತಾರೆ. ನಾನು ವಧುವಿನ ಶಾಲಾ ಗೆಳತಿಯರ ಜೊತೆಗಿದ್ದೆ. ನಾವೆಲ್ಲರೂ 'ಪರದೆ' ಹಾಕಿದ್ದ ಲಿಮೋಸಿನ್ ಕಾರಿನಲ್ಲಿ ಮದುವೆ ಮನೆಗೆ ಹೋದೆವು. ಹಳದಿಯ ಸಿಲ್ಕ್‌ಕರ್ಟನ್‌ಗಳ ಹಿಂದೆ ಇನ್ನೊಬ್ಬರಿಗೆ ಕಾಣದಂತೆ ಕುಳಿತು ನಾವು ಒಬ್ಬೊಬ್ಬರಾಗಿ ಬರುತ್ತಿದ್ದ ಪುರುಷ ಅತಿಥಿಗಳನ್ನು ನೋಡಬಹುದಾಗಿತ್ತು. ಅದು ಸಂಪ್ರದಾಯಬದ್ಧವಾದ ಮದುವೆ. ಗಂಡಸರನ್ನು ತುಂಬಿಕೊಂಡು ಬಂದ ಕಾರುಗಳು ಸೀದಾ ಮುಂಬಾಗಿಲಿಗೇ ಬಂದು ನಿಂತು ಒಳಗಿದ್ದವರನ್ನು ಇಳಿಸುತ್ತಿದ್ದವು. ಆದರೆ ಪರದೆ ಇರುವ ಕಾರುಗಳು ತೋಟದ ಹಿಂಭಾಗಕ್ಕೆ ಹೋಗಿ ಪರದೆ ಇರುವ ಗೇಟಿನ ಬಳಿ ಮಹಿಳೆಯರನ್ನು ಇಳಿಸುತ್ತಿದ್ದವು.

ಒಳಗೆ ಅತ್ಯಂತ ಸುಂದರವಾಗಿ ಅಲಂಕರಿಸಿಕೊಂಡ ಮಹಿಳೆಯರು ನೆಲದ ಮೇಲೆ ಕುಳಿತಿದ್ದರು. ಎಲ್ಲರೂ ಅತ್ಯುತ್ಸಾಹದಿಂದ ಪರಸ್ಪರ ಮಾತಾಡುತ್ತಿದ್ದರು. ಸ್ನೇಹಿತರು [illegible]

ಮೇಲೊಬ್ಬರು ಬಿದ್ದು ಮಾತಾಡುತ್ತಿದ್ದರು. ಉದ್ದುದ್ದ ಇಳಿದುಬಿದ್ದ ಅವರ ದಾವಣಿಗಳು, ದುಪ್ಪಟಗಳು, ತೆಳುವಾದ ಪೊರೆಯಂಥ ಸೆರಗುಗಳು ಇತ್ಯಾದಿ ನೋಡುವಾಗ ನನಗೆ ದೊಡ್ಡ ದೊಡ್ಡ Sea anemoneಗಳಿರುವ ಕೋಣೆಯನ್ನು ಪ್ರವೇಶಿದಂತೆ ಅನ್ನಿಸಿತು. ಅವರು ಧರಿಸಿದ್ದ ಆಭರಣಗಳು ನಾನು ಊಹಿಸುವುದಕ್ಕೂ ಆಗದಷ್ಟು ಅದ್ಭುತವಾಗಿದ್ದವು. ಹಲವಾರು ಎಳೆಗಳ ಮುತ್ತಿನ ಸರಗಳು ಸೀರೆಯ ಇಡೀ ಮುಂಭಾಗವನ್ನು ಮುಚ್ಚುವಂತಿದ್ದವು. ಮಣಿಕಟ್ಟಿನಿಂದ ಮುಂಗೈ ತುಂಬ ಬಳೆಗಳು, ಕಿವಿಯಿಂದ ತೂಗುತಿದ್ದ ಐದಾರು ಇಂಚು ಉದ್ದದ ಲೋಲಾಕುಗಳು. ಹಣೆಯ ಮೇಲೆ ತಲೆಬೊಟ್ಟು. ವಧುವಿನ ತಾಯಿ ಇಳಿದು ಬಂದು ನನ್ನನ್ನು ಕೋಣೆಗೆ ಕರೆದುಕೊಂಡು ಹೋದಳು. ಹೊಳೆಯುವ ಕೆಂಪು ಹೊದಿಕೆಯ ಹಾಸಿಗೆ, ಕೆಂಪು ಚಿನ್ನದ ಪಟ್ಟೆಗಳ ಸೀರೆಗಳು, ಅವುಗಳ ಮಧ್ಯೆ ಕುಳಿತಿದ್ದ ವಧುವಿನ ಮುಖದ ಪರದೆಯನ್ನು ಎತ್ತಿ ಆಕೆ ತೋರಿಸಿದಳು. ಆ ಪರದೆಯ ಕೆಳಗಿದ್ದುದು ಪುಟ್ಟ ಹುಡುಗಿಯ ಸುಂದರವಾದ ಮುಖ. ಅವಳ ವಯಸ್ಸು ೧೪ ದಾಟಿರಲಾರದು. ಅವಳ ಮೈತುಂಬ ಮುತ್ತಿನ ಆಭರಣಗಳು. ಹುಡುಗಿ ಕಣ್ಣು ಮುಚ್ಚಿಕೊಂಡೇ ಇದ್ದಳು. "ಏನು ತೊಂದರೆ ಹುಷಾರಿಲ್ಲವೇನು" ಎಂದು ನಾನು ಕೇಳಿದೆ. "ಇಲ್ಲ, ಇದೆಲ್ಲ ನಡೆಯುವಾಗ ಅವಳು ಕಣ್ಣು ಮುಚ್ಚಿಕೊಂಡೇ ಇರಬೇಕು" ಎಂದಳು ವಧುವಿನ ತಾಯಿ. ನನಗೆ ಆಶ್ಚರ್ಯವಾಯಿತು. ಆಕೆ ಹೇಳಿದಳು- ಇವೆಲ್ಲ ಕೆಲವು ದಿನ ಮಾತ್ರ, ನಮ್ಮ ಕಾಲದಲ್ಲಿ ಮದುವೆಗೆ ವಾರಗಟ್ಟಲೆ ಮುಂಚಿನಿಂದಲೇ ಹೀಗಿರಬೇಕಿತ್ತು. ಈಗ ಹಾಗಿಲ್ಲ. ನಾವು ಸ್ವಲ್ಪ ಆಧುನಿಕ ಜನ. ನಮ್ಮ ಮಗಳು ಸ್ಕೂಲಿಗೆ ಹೋಗುತ್ತಿದ್ದಳು. ಇದೆಲ್ಲ ಪ್ರಾರಂಭವಾಗುವುದಕ್ಕೆ ಮೊದಲು ಅವಳ ಪರೀಕ್ಷೆಗಳು ಮುಗಿಯಲಿ ಎಂದು ನಾವು ಸುಮ್ಮನಿದ್ದೆವು. ಎನ್ನುತ್ತಾ ಆಕೆ ಹುಡುಗಿಯ ಮುಖದ ಮೇಲೆ ಪುನಃ ಪರದೆ ಹಾಕಿದಳು.

ನಾವು ಕೆಳಗಿಳಿದು ಬಂದೆವು. ಅಲ್ಲಿ ಹೆಂಗಸರೆಲ್ಲ ತುಂಬ ಕಾತರದಿಂದ ಕಾಯುತ್ತಿದ್ದರು. ಕಾಯಲಾರದೆ ಚಡಪಡಿಸುತ್ತಿದ್ದರು. ವರಬರುತ್ತಿದ್ದ. ಅವನು ಬಂದಾಗ ಯಾವ ಹೆಂಗಸರ ಮೇಲೂ ಮುಖ ಪರದೆ ಇರಲಿಲ್ಲ. ಬಹುಶಃ ವರನಿಗೆ ತನ್ನ ಬದುಕಿನಲ್ಲಿ ನೂರಾರು ಹೆಂಗಸರ ಮುಖಗಳನ್ನು ಒಟ್ಟಿಗೇ ನೋಡುವ ಏಕೈಕ ಅವಕಾಶ ಇದು. ಅವನು ಈ ದಿನ ಏನುಬೇಕಾದರೂ ಮಾಡಬಹುದು ಎಂದು ನನ್ನ ಪಕ್ಕದಲ್ಲಿದ್ದ ಹುಡುಗಿ ಹೇಳಿದಳು. ಹೈದ್ರಾಬಾದ್ ಕಡೆ ಒಂದು ಮಾತಿದೆ. ಅವನು ಮದುವೆಯ ರಾತ್ರಿ ಏಳು ಕೊಲೆಗಳನ್ನು ಬೇಕಿದ್ದರು ಮಾಡಬಹುದು. ಮರುಕ್ಷಣದಲ್ಲಿ ವರ ಒಳಗೆ ಬಂದಿದ್ದ. ಸುಂದರವಾದ ಮುಖ. ಸುಂದರವಾದ ಮೀಸೆ. ಆದರೆ ಎಲ್ಲಕ್ಕಿಂತ ಹೆಚ್ಚಾಗಿ ಅವನ ವಿಶಿಷ್ಟ ಉಡುಪು ನನ್ನ ಗಮನ ಸೆಳೆಯಿತು. ತಲೆಯಿಂದ ಪಾದದವರೆಗೆ ಬಿಗಿಯಾಗಿ ಹೆಣೆದಂತಿದ್ದ ಯುದ್ಧ ಕವಚದ ರೀತಿಯ ಉಡುಪು. ತನ್ನನ್ನು ಹೀಗೆಲ್ಲ ಪೆದ್ದುಪೆದ್ದಾಗಿ ಅಲಂಕರಿಸಿದ್ದಾರೆ ಅಂತ ಅಂದುಕೊಳ್ಳುತ್ತಿರಬಹುದು ಎಂದು ನನ್ನ ಪಕ್ಕದಲ್ಲಿ ಕುಳಿತಿದ್ದ ಹುಡುಗಿ ಕಿವಿಯಲ್ಲಿ ಹೇಳಿದಳು. ನನ್ನನ್ನು ಹೀಗೆ ಪೆದ್ದುಪೆದ್ದಾಗಿ ಅಲಂಕರಿಸುವುದಕ್ಕೆ ನಾನು ಬಿಡುವುದಿಲ್ಲ ಎಂದು ನನ್ನ ಅಣ್ಣಂದಿರಿಗೆ ಹೇಳಿಬಿಟ್ಟಿದ್ದೇನೆ ಎಂದಳು ಅವಳು. ತನ್ನನ್ನು ನೋಡುತ್ತಿದ್ದ ಹೆಂಗಸರ ಕಡೆಗೆ ಅವನು ಪೆಚ್ಚಾಗಿ ನಗುತ್ತ ಕೋಣೆಯ ಮಧ್ಯದಲ್ಲಿದ್ದ ಮಂಚದ ಹಾಸಿಗೆಯ ಮೇಲೆ ಕುಳಿತ. ಇದೂ ಕೂಡ ಹೊಳೆಯುವ ಕೆಂಪು

ಹಾಸಿಗೆ. ಭಾರೀ ಜರತಾರಿಯಲ್ಲಿ ಕೋಳಿಯಂತೆ ಕುಪ್ಪಳಿಸುತ್ತಾ ಬಂದ ವರನ ಚಿಕ್ಕಮ್ಮ ವರನ ಪಕ್ಕದಲ್ಲಿ ಧೊಪ್ಪೆಂದು ಕುಳಿತಳು. ವಜ್ರಖಚಿತವಾದ ಬೀಸಣಿಗೆಯಿಂದ ವರನ ಮುಖಕ್ಕೆ ಗಾಳಿ ಬೀಸುತ್ತಾ "ಬೇಗ ಹುಡುಗಿಯನ್ನು ಕರೆದುಕೊಂಡು ಬನ್ನಿ" ಎಂದು ಕೂಗಿದಳು. ಆದರೂ ವಧು ಬರುವ ಹೊತ್ತಿಗೆ ಸಾಕಷ್ಟು ಕಾಯಬೇಕಾಯಿತು. ಹುಡುಗಿಯನ್ನು ಕರೆತರುತ್ತಿದ್ದವರು ತಮ್ಮ ಒಡವೆ ವಸ್ತ್ರಗಳ ಭಾರದಲ್ಲಿ ತತ್ತರಿಸುತ್ತಿದ್ದರು. ಈಗ ಇನ್ನಷ್ಟು ಚಿನ್ನ, ಕೆಂಪು ಪರದೆಗಳು, ಹೂವಿನ ಹಾರಗಳಲ್ಲಿ ಹುಡುಗಿ ಮುಳುಗಿ ಹೋಗಿದ್ದಳು. ಅವಳನ್ನು ಒಂದು ವಸ್ತುವೇನೋ ಎಂಬಂತೆ ತಂದು ವರನ ಪಕ್ಕದಲ್ಲಿ ಪ್ರತಿಷ್ಠಾಪಿಸಿದರು. ವಧೂವರರಿಂದ ಸಕ್ಕರೆಯ ಆಟ ಆಡಿಸಲಾಯಿತು. ಒಂದು ತಟ್ಟೆಯಲ್ಲಿ ಸಕ್ಕರೆಯ ಅಚ್ಚುಗಳಿದ್ದವು. ವಧು ಅದರತ್ತ ನೋಡದೆಯೇ ಒಂದು ಅಚ್ಚನ್ನು ತೆಗೆದುಕೊಂಡಳು. ಹುಡುಗ ಅವಳ ಬೆರಳುಗಳ ನಡುವಿನಿಂದ ಅದನ್ನು ಕಚ್ಚಿಕೊಳ್ಳಲು ಪ್ರಯತ್ನಿಸುತ್ತಿದ್ದ. ಅವನು ಪ್ರತಿಸಲ ಪ್ರಯತ್ನಿಸುವಾಗಲೂ ಅವಳ ಬಂಧುಗಳು ಅವಳ ಕೈಯನ್ನು ಹಿಂದಕ್ಕೆಳೆದುಕೊಳ್ಳುತ್ತಿದ್ದರು. ಹಾಗಾದಾಗ ಹುಡುಗಿಯರು ಸಂತೋಷದಿಂದ ಕೂಗುತ್ತಿದ್ದರು. ಈ ಆಟದಲ್ಲಿ ಸಾಕಷ್ಟು ಸಕ್ಕರೆ ನೆಲದ ಮೇಲೆ ಚೆಲ್ಲಾಡಿತು. ಕೋಣೆಯಲ್ಲಿದ್ದ ಹೆಂಗಸರೆಲ್ಲ ನಕ್ಕೂನಕ್ಕೂ ಸುಸ್ತಾಗಿದ್ದರು. ಕೊನೆಗೊಮ್ಮೆ ವಧುವಿನ ಬೆರಳ ಸಂದಿಯಿಂದ ಸಕ್ಕರೆ ಅಚ್ಚನ್ನು ತಿನ್ನುವಲ್ಲಿ ವರ ಯಶಸ್ವಿಯಾದ. ಆಗ ಇಡೀ ಕೋಣೆಯಲ್ಲಿ ಸಮಾಧಾನದ ನಿಟ್ಟುಸಿರು ತುಂಬಿತು. ಇದು ಶುಭಸೂಚನೆಯಾಗಿತ್ತು. ಹುಡುಗನಿಗೆ ಸಿಹಿ ಸಿಕ್ಕಿತು.

ಈಗ ಜಲ್ವಾ ಕಾರ್ಯಕ್ರಮ. ಸುಂದರವಾದ ಕೆತ್ತನೆಯ ಕನ್ನಡಿಯನ್ನು ತರಲಾಯಿತು. ಸಾಕಷ್ಟು ಸವೆದುಹೋಗಿದ್ದ ಆ ಕನ್ನಡಿಯನ್ನು ಬಹುಶಃ ತಲೆತಲಾಂತರಗಳಿಂದಲೂ ಈ ಶುಭ ಸಮಾರಂಭಕ್ಕೆ ಬಳಸುತ್ತಿರಬಹುದು. ಅದನ್ನು ವಧೂವರರ ನಡುವೆ ಇಟ್ಟರು. ಎರಡೂ ಕಡೆಯ ಕುಟುಂಬಗಳವರು ಕೈಯಲ್ಲಿ ಹಾರಗಳನ್ನು ಹಿಡಿದು ಆಚೀಚೆ ನಿಂತರು. ಹುಡುಗಿಯ ಮುಖಪರದೆಯನ್ನು ತೆಗೆಯಲಿಲ್ಲ. ಆದರೂ ಕೆಂಪುಬಣ್ಣದ ಜರತಾರಿ, ಬಂಗಾರದಲ್ಲಿ ಮುಳುಗಿದ್ದ ಹುಡುಗಿಯ ಮುಖವನ್ನು ಅವನು ಕನ್ನಡಿಯಲ್ಲಿ ನೋಡಲು ಸಾಧ್ಯವಾಗಿರಬಹುದು. ನಾನು ನನ್ನ ಪಕ್ಕದಲ್ಲಿದ್ದ ಭಾರತೀಯ ಸ್ನೇಹಿತೆಯನ್ನು ಕೇಳಿದೆ. "ಇವರು ಒಟ್ಟಿಗೆ ಮಲಗುವುದು ಯಾವಾಗ?" ಅದಕ್ಕೆ ಅವಳು "ಇನ್ನೂ ಮೂರು ದಿನ ಶಾಸ್ತ್ರ ಸಂಪ್ರದಾಯಗಳೆಲ್ಲ ಮುಗಿದ ಮೇಲೆ" ಎಂದಳು. ಅಲ್ಲಿಯವರೆಗೆ ನಾನು ಕಾಯುವಂತಿರಲಿಲ್ಲ. ಮಾರನೇ ದಿನ ಬೆಳಿಗ್ಗೆಯೇ ನಾನು ವಿಮಾನ ಹತ್ತಬೇಕಿತ್ತು. ಆದರೆ ಅಲ್ಲಿನವರಿಂದ ತಿಳಿದುಬಂದಂತೆ 'ಆ ದಿನ' ವರನೊಂದಿಗೆ ವಧುವಿನ ಮಹಿಳಾ ಸಂಬಂಧಿಕರು ತಾವೂ ಕೂಡ ಬೆಡ್‌ರೂಂಗೆ ಹೋಗಿ ಎರಡು ಗಂಟೆ ಕಾಲ ಅವನೊಂದಿಗಿದ್ದು ನಗೆಚಾಟಿಕೆಗಳನ್ನು ಮಾಡುತ್ತಾರೆ. ತಾನು ಮದುವೆಯಾದ ಅಪರಿಚಿತ ಹೆಣ್ಣಿನ ವಿಷಯದಲ್ಲಿ ಅವನಿಗಿರುವ ಬಿಗುವನ್ನು ಕಳೆಯುತ್ತಾರೆ.

ಹಿಂದೂಗಳೇ ಇರಲಿ ಮುಸ್ಲಿಮರೇ ಇರಲಿ, ಇವರಲ್ಲಿ ವಿವಾಹಗಳನ್ನು ಏರ್ಪಡಿಸುವುದು ತುಂಬ ಕಷ್ಟದ ಹಾಗೂ ಜಟಿಲವಾದ ಕೆಲಸ. ಹಿಂದೂಗಳಿಗೆ ಜ್ಯೋತಿಷ್ಯದ ಕಟ್ಟುಪಾಡು ಜೊತೆಗೆ ಜಾತಿಯ ಕಟ್ಟುಪಾಡೂ ಇರುತ್ತದೆ. ಇದು ಹಿಂದುಗಳದೇ ಆದ ಸಮಸ್ಯೆ. ಇಸ್ಲಾಮಿನ

ಜಾತಿಭೇದಗಳ ಪ್ರಶ್ನೆ ಬರುವುದಿಲ್ಲ. ಭಾರತದಲ್ಲಿ ಹೊಸ ಸಂವಿಧಾನ ರೂಪುಗೊಳ್ಳುವವರೆಗೂ ಬೇರೆ ಬೇರೆ ಜಾತಿಗಳ ನಡುವೆ ವಿವಾಹವು ಕಾನೂನುಬಾಹಿರವಾಗಿತ್ತು. ಆದರೆ ಸ್ವತಂತ್ರ ಭಾರತದಲ್ಲಿ ರೂಪುಗೊಂಡಿರುವ ಹೊಸ ಕಾನೂನುಗಳ ಅಡಿಯಲ್ಲಿ ಜಾತಿಯ ಭೇದಗಳು ಸ್ವಲ್ಪಮಟ್ಟಿಗೆ ಅಳಿಸಿಹೋಗುತ್ತಿವೆ. ಈಗ, ಒಂದು ವೇಳೆ ಮಗಳಿಗೆ ಇಷ್ಟವಿಲ್ಲದಂತಹ ವರನನ್ನು ತಂದೆಯಾದವನು ಒಂದೇ ಜಾತಿಗೆ ಸೇರಿದವನು ಎಂಬ ಆಯ್ಕೆ ಮಾಡಿದ್ದು, ಆ ವರ ಅವಳಿಗೆ ಇಷ್ಟವಿಲ್ಲದಿದ್ದರೆ ಅದನ್ನು ನಿರಾಕರಿಸುವ ಹಾಗೂ ತನಗೆ ಬೇಕಾದಂತಹ ವರನನ್ನು ಆಯ್ಕೆಮಾಡಿಕೊಳ್ಳುವ ಹಕ್ಕು ಅವಳಿಗಿರುವುದನ್ನು ನ್ಯಾಯಾಲಯಗಳು ಎತ್ತಿಹಿಡಿಯುತ್ತವೆ. ಸಂಪ್ರದಾಯಗಳು ಎಷ್ಟೇ ಆಗಲಿ ಕಾನೂನಿಗಿಂತ ಹಿಂದುಳಿದಿರುತ್ತವೆ. ಈಗ ತನಗೆ ಬೇಕಾದವರನ್ನೇ ಆಯ್ಕೆ ಮಾಡಿಕೊಳ್ಳುವ ಹಕ್ಕನ್ನು ಕಾನೂನು ಕೊಟ್ಟಿರುವುದರಿಂದ ಮಹಿಳೆಯ ಸ್ಥಾನಮಾನಗಳಲ್ಲಿ ಅನೇಕ ಬದಲಾವಣೆಗಳಾಗಿವೆ. ಹೆಂಡತಿಯಾದವಳು ಗಂಡನಿಂದ ಐದು ಮಾರುಗಳಷ್ಟು ದೂರದಲ್ಲಿ ನಡೆದು ಬರುವ ದೃಶ್ಯ ಈಗ ಅಷ್ಟಾಗಿ ಕಾಣುತ್ತಿಲ್ಲ. ಗಂಡನಿಗೆ ಸಂಪೂರ್ಣ ಅಧೀನವಾಗಿರುವ ಹೆಂಡತಿಯರು ಈಗ ಅಪರೂಪವಾಗುತ್ತಿದ್ದಾರೆ. ಹೆಂಡತಿಯನ್ನು ಗಂಡನ ಆಸ್ತಿ ಎಂದು ಭಾವಿಸುವ ಕಾಲ ದೂರವಾಗಿದೆ. ಪ್ರಾಚೀನ ಹಿಂದೂ ಪದ್ಧತಿಯ ಪ್ರಕಾರ ಗಂಡನ ಅನುಮತಿ ಇಲ್ಲದೆ ಹೆಂಡತಿ ಹೊರಗೆ ಕಾಲಿಡುವಂತಿರಲಿಲ್ಲ. ನಗುವುದಿದ್ದರೆ ಸೆರಗನ್ನು ಬಾಯಿಗೆ ಮುಚ್ಚಿಕೊಂಡು ನಗಬೇಕು. ಅವರು ಪರರಪುರುಷರೊಂದಿಗೆ ಮಾತಾಡ ಕೂಡದು. ಆದರೆ ಸಂತ, ಋಷಿ ಅಥವಾ ವೃದ್ಧರೊಂದಿಗೆ ಮಾತಾಡಬಹುದು. ತುಂಬ ಅಪೂರ್ವವಾದ್ದನ್ನು ಅವಳು ಇಟ್ಟುಕೊಳ್ಳುವಂತಿಲ್ಲ. ಕಣ್ಣಿಗೆ ಕಪ್ಪು ಹಚ್ಚುವಂತಿಲ್ಲ. ಕನ್ನಡಿಯಲ್ಲಿ ಮುಖ ನೋಡಿಕೊಳ್ಳುವಂತಿಲ್ಲ. ಈ ಪ್ರಾಚೀನ ಮನೋಭಾವದ ತುಣುಕುಗಳು ಈಗಲೂ ಹಿಂದೂ ಹೆಂಗಸರಲ್ಲಿ ಉಳಿದಿವೆ. ಈಗಲೂ ಆಕೆ ಅತ್ಯಂತ ಸಂಕೋಚ, ನಾಚಿಕೆ ಹಾಗೂ ಮೆದು ಪ್ರವೃತ್ತಿಯವಳು. ಆದರೆ ಗಂಡ ಮೃತನಾದರೆ ಹೆಂಡತಿ ಸತಿ ಹೋಗುವ ಪದ್ಧತಿ ಈಗ ಉಳಿದಿಲ್ಲ. ಕಾನೂನು, ಸತಿಪದ್ಧತಿಯನ್ನು ನಿಷೇಧಿಸಿದೆ. ಕಳೆದ ಶತಮಾನದಲ್ಲಿ ಒಂದೇ ಒಂದು ಸತಿ ಪ್ರಕರಣ ನಡೆದಿಲ್ಲ. ಆದರೆ ಅವಳ ಮರುಮದುವೆಯ ವಿಷಯ ಮಾತ್ರ ಈಗಲೂ ಸಹ ಸಾಧ್ಯವಾಗಿಲ್ಲ. ಸಂಪ್ರದಾಯನಿಷ್ಠ ಹಿಂದೂ ಧರ್ಮದಲ್ಲಿ ವಿಧವೆಯರನ್ನು ನೋಡುವುದಕ್ಕೂ ಗಂಡನಿರುವ ಹೆಣ್ಣನ್ನು ನೋಡವುದಕ್ಕೂ ಯಾಕಷ್ಟು ವ್ಯತ್ಯಾಸದ ಮನೋಭಾವ ಇದೆ ಎಂದು ನನಗೆ ಅರ್ಥವೇ ಆಗಲಿಲ್ಲ. ಈ ಬಗ್ಗೆ ಒಬ್ಬ ಸ್ವಾಮಿಯವರನ್ನು ಪ್ರಶ್ನಿಸಿದೆ. ಅವರು ಹೇಳಿದರು "ವಿವಾಹವೆಂದರೆ ಎರಡು ಆತ್ಮಗಳ ಮಿಲನ. ಉತ್ತಮ ಸಂತಾನವನ್ನು ಪಡೆಯುವುದೇ ಸ್ತ್ರೀಯ ಪರಮೋಚ್ಛ ಸಾಧನೆ." ನನಗೆ ಈ ವಿಷಯ ತಿಳಿಸಿದ ಗೋಸ್ವಾಮಿ ಗಣೇಶ್‌ದತ್ ಅವರು ದೇಶದ ಭವಿಷ್ಯದ ಏಳಿಗೆಯ ಪರಿಶುದ್ಧತೆಯ ಬಗ್ಗೆ ಬಹಳ ಆಸಕ್ತಿ ವಹಿಸಿದಂತಿತ್ತು. ಆತ ತುಂಬ ಓದಿಕೊಂಡಿದ್ದ ಲಕ್ಷಣವಾಗಿದ್ದ ವ್ಯಕ್ತಿ. ಬಿರ್ಲಾ ದೇವಸ್ಥಾನದಲ್ಲಿ ಮುಖ್ಯಪೂಜಾರಿಯಾಗಿದ್ದರು. ಈ ಆಧುನಿಕ ಜಗತ್ತಿನಲ್ಲಿ ಹೆಂಗಸರು ಸಂಪಾದನೆಗಾಗಿ ಹೊರಗೆ ಎಲ್ಲೆಲ್ಲೋ ಹೋಗಿ ದುಡಿಯುವುದು ಸ್ವಲ್ಪವೂ ಸರಿಯಲ್ಲ ಎಂಬುದು ಅವರ ಭಾವನೆಯಾಗಿತ್ತು. "ಹೆಂಗಸರು ಮನೆಯಲ್ಲಿ ಇದ್ದು ಮಜ್ಜಿಗೆ ಕಡೆಯುವ ಕೆಲಸ ಮಾಡಿಕೊಂಡಿದ್ದಾಗ ಆರೋಗ್ಯ,

ನೆಮ್ಮದಿ ಸಮೃದ್ಧಿಗಳು ಇದ್ದವು. ವಿಧವೆಯನ್ನು ಎಲ್ಲರೂ ಗೌರವದಿಂದ ನೋಡುತ್ತಾರೆ. ಆಕೆಯ ಪತಿನಿಷ್ಠೆ ಎಂಥದ್ದೆಂದರೆ ಆಕೆ ಮರುಮದುವೆ ಮಾಡಿಕೊಳ್ಳುವ ಯೋಚನೆಯನ್ನೂ ಮಾಡುವುದಿಲ್ಲ. ಅವಳನ್ನು ನಾವು ಜಗನ್ಮಾತೆ ಎಂದು ಕರೆಯುತ್ತೇವೆ" ಎಂದು ಅವರು ಹೇಳಿದರು.

ಮರುಮದುವೆ ಬಯಸುವಂಥವರೂ ಇರುತ್ತಾರೆ ಎಂಬ ಮಾತನ್ನು ಸಂಪೂರ್ಣವಾಗಿ ಅಲ್ಲಗಳೆದರು. ಆದರೆ ಸ್ವತಃ ಬಿರ್ಲಾ ಅವರ ವೃತ್ತಪತ್ರಿಕೆಗಳಲ್ಲೆ ವಿಧವಾವಿವಾಹಕ್ಕಾಗಿ ವಿಧವೆಯರೇ ನೀಡಿದ್ದ ವೈವಾಹಿಕ ಜಾಹಿರಾತುಗಳೂ ಪ್ರಕಟವಾಗುತ್ತಿದ್ದವು. "ಸುಂದರವಾದ, ಸುಶಿಕ್ಷಿತಳಾದ, ಸಂತಾನವಿಲ್ಲದ ವಿಧವೆಗೆ ಸೂಕ್ತನಾದ ವರ ಬೇಕಾಗಿದ್ದಾನೆ" "ಎಲೆಕ್ಟ್ರಿಕಲ್ ಇಂಜಿನಿಯರ್‌ಗೆ ಒಳ್ಳೆಯ ಸ್ವಭಾವದ, ಮಕ್ಕಳಿಲ್ಲದ, ಹಾಗೂ ಭೂಮಿ ಆಸ್ತಿ ಇರುವ ವಿಧವೆ ಬೇಕಾಗಿದ್ದಾಳೆ. ಜಾತಿ ಯಾವುದಿದ್ದರೂ ಪರವಾಗಿಲ್ಲ ಜಾತಕ ನೋಡುವ ಅಗತ್ಯವಿಲ್ಲ." "ಮಕ್ಕಳಿಲ್ಲದ ವಿಧುರನಿಗೆ ಕನ್ಯಾವಿಧವೆ ಬೇಕಾಗಿದ್ದಾಳೆ. ಮದುವೆ ಶೀಘ್ರವಾಗಿ ಆಗಬೇಕಾಗಿದೆ. ಫೋಟೋ ಕಳಿಸಬಹುದು." ಭಾರತದಲ್ಲಿ ಕನ್ಯಾ ವಿಧವೆಯರೆಂದರೆ ನಿಶ್ಚಿತಾರ್ಥವಾದ ನಂತರ ಗಂಡನು ತೀರಿಕೊಂಡಿರುವಂಥ ಬಾಲವಧುಗಳು. ಇಲ್ಲಿ ಪರಸ್ಪರ ಒಪ್ಪಂದದ ಮಾತು ಪೂರ್ವಭಾವೀ ಸಮಾರಂಭ ಇತ್ಯಾದಿಗಳೆಲ್ಲ ನಡೆದಿರುತ್ತವೆ. ಹೆಣ್ಣು ಸೂಕ್ತ ವಯಸ್ಸಿಗೆ ಬರಲಿ ಎಂದು ಕಾಯುತ್ತಿರುತ್ತಾರಷ್ಟೆ.

ಮಹಿಳೆಯರ ವಿಮೋಚನೆಗಾಗಿ ಹೋರಾಡಿದ ಗಾಂಧಿಯವರು ಈ ರೀತಿಯ ವೈರುಧ್ಯ ಜೋಡಿಯ ಮದುವೆಗಳ ಅನಿಷ್ಠ ಪದ್ಧತಿಯ ವಿರುದ್ಧ ಪ್ರಚಾರ ಮಾಡಿದರು. ಇಂತಹ ಅನಿಷ್ಠ ಪದ್ಧತಿಯನ್ನು ಹೋಗಲಾಡಿಸಬೇಕಾದರೆ ಅದನ್ನು ವಿರೋಧಿಸುವ ಬಲವನ್ನು ನಮ್ಮ ಅಂತಃಸತ್ವದಿಂದಲೇ ರೂಢಿಸಿಕೊಳ್ಳಬೇಕು. ತಾವು ಸೂಕ್ತವಾದ ವಯಸ್ಸಿಗೆ ಬರುವ ತನಕ ಮದುವೆಯಾಗುವುದಿಲ್ಲ ಎಂದು ಹೇಳುವ ಮತ್ತು ತಮಗೆ ಇಷ್ಟವಾಗದ ವರನನ್ನು ತಿರಸ್ಕರಿಸುವ ಧೈರ್ಯವನ್ನು ಹುಡುಗಿಯರು ಬೆಳೆಸಿಕೊಳ್ಳಬೇಕು ಎಂದು ಗಾಂಧಿ ಹೇಳಿದರು.

ಬಾಲವಿವಾಹದ ವಿರುದ್ಧ ಹೋರಾಡುವ ಕೆಲಸವನ್ನು ಶ್ರೀಮತಿ ನಾಯ್ಡು ವಹಿಸಿಕೊಂಡವರು. "ವಿಧವರೆಯರ ಬಾಳಿನಲ್ಲಿ ಸಂತೋಷ ತನ್ನಿ" ಎಂದು ಅವರು ಪ್ರಚಾರ ಮಾಡಿದರು. ಹೊಸ ಸಂವಿಧಾನದ ಪ್ರಕಾರ ಮದುವೆಗೆ ಮೊದಲು ಹುಡುಗಿಗೆ ೧೪ ವರ್ಷ ಹುಡುಗನಿಗೆ ೧೮ ವರ್ಷ ಆಗಿರಬೇಕು ಎಂದಿತ್ತು. ಅಖಿಲ ಭಾರತ ಮಹಿಳಾ ಸಮಾವೇಶವು ವಿವಾಹವಾಗುವ ಹುಡುಗ ಹುಡುಗಿಯರ ವಯಸ್ಸನ್ನು ಕ್ರಮವಾಗಿ ೧೬ ಮತ್ತು ೨೧ ವರ್ಷಕ್ಕೆ ಏರಿಸಬೇಕು ಎಂದು ಪ್ರಚಾರಮಾಡಿತು. ಅರವತ್ತು ವರ್ಷದ ಮುದುಕನು ಹದಿಹರಯದ ಹುಡುಗಿಯ ರೊಂದಿಗೆ ಮದುವೆಯಾಗುವ ಏರ್ಪಾಡನ್ನು ಮಾಡಿದಾಗ ಆತನ ಮನೆಯ ಮುಂದೆ ಮಹಿಳಾ ಸಂಘದವರು ಬ್ಯಾನರ್ ಹಿಡಿದು ಪ್ರತಿಭಟನೆ ಮಾಡುತ್ತಿದ್ದರು. ಭಾರತದಲ್ಲಿ ಮಹಿಳೆಯರಿಗಿಂತ ಪುರುಷರ ಸಂಖ್ಯೆ ಜಾಸ್ತಿ. ಹೀಗಾಗಿ ತಮ್ಮದೇ ಉಪಜಾತಿಯಲ್ಲಿ ಅವರಿಗೆ ಹೆಣ್ಣು ಸಿಗುವುದು ಕಷ್ಟವಾಗಬಹುದಿತ್ತು. ಇಂತಹ ಮದುವೆಗಳಿಗೆ ಇದು ಕಾರಣವಾಗಿರಬಹುದು. [illegible] ಪರಿಸ್ಥಿತಿ ತ್ವರಿತವಾಗಿ ಬದಲಾಗುತ್ತಿದೆ.

ಹೊಸ ಮತ್ತು ಉದಾರವಾದ ಕಾನೂನುಗಳ ಪ್ರಕಾರ ಹಿಂದೂಧರ್ಮದಲ್ಲಿ ನಿಷಿದ್ಧವಾಗಿದ್ದ ವಿವಾಹವಿಚ್ಛೇದನಕ್ಕೆ ಈಗ ಅನುಮತಿ ಇದೆ. ಕ್ರೌರ್ಯ, ಬುದ್ಧಿವಿಕಲ್ಪತೆ, ಬಿಟ್ಟುಹೋಗುವುದು, ಇನ್ನೊಂದು ಧರ್ಮಕ್ಕೆ ಮತಾಂತರ, ಉಪಪತ್ನಿಯನ್ನು ಹೊಂದಿರುವುದು ಮುಂತಾದ ಕಾರಣಗಳ ಆಧಾರದ ಮೇಲೆ ವಿಚ್ಛೇದನ ಪಡೆಯಬಹುದು. ಎಲ್ಲೊ ಕೆಲವು ಕಡೆಗಳಲ್ಲಿ ಮಾತ್ರ ಏಕಪತ್ನಿತ್ವದ ಶಾಸನ ಜಾರಿಯಲ್ಲಿತ್ತು. ಅದು ಈಗ ರಾಷ್ಟ್ರೀಯ ಕಾನೂನು ಆಗಿದೆ. ಬಹುಪತ್ನಿತ್ವಕ್ಕೆ ಹಿಂದೂ ಕಾನೂನಿನಲ್ಲಿ ಅವಕಾಶವಿದ್ದರೂ ಅದು ಸಾರ್ವತ್ರಿಕವೇನೂ ಆಗಿಲ್ಲ. ಏಕಪತ್ನಿತ್ವವನ್ನು ಕಾನೂನಿನ ವಿಷಯವಾಗಿ ರೂಪಿಸುವಲ್ಲಿ ಬರೋಡ, ಬಾಂಬೆಗಳು ದಾರಿತೋರಿಸಿದವು. ಹಿಂದೆ ಮಹಿಳೆಯ ಆಸ್ತಿ ಹಕ್ಕಿಗೂ ಮದುವೆಗೂ ನಿಕಟವಾದ ಸಂಬಂಧವಿತ್ತು. ಹಿಂದೂ ಕಾನೂನಿನ ಪ್ರಕಾರ ಹೆಣ್ಣಿಗೆ ಆಸ್ತಿಯಲ್ಲಿ ಹಕ್ಕಿಲ್ಲ. ಅವಳ ಸೋದರರಿಗೆ ಅದು ಸಿಗುತ್ತಿತ್ತು. ಅವಳ ಪಾಲಿನದನ್ನು ಅವಳಿಗೆ ವರದಕ್ಷಿಣೆಯ ರೂಪದಲ್ಲಿ ಕೊಡುತ್ತಿದ್ದರು. ಆಗ ಅದು ಅವಳ ಗಂಡನ ಇಲ್ಲವೇ ಅವನ ಬಂಧುಗಳ ಪಾಲಾಗುತ್ತಿತ್ತು. ಹೊಸ ಕಾನೂನಿನ ಪ್ರಕಾರ ಮಗಳಿಗೆ ಟ್ರಸ್ಟ್ ರೂಪದಲ್ಲಿ ಆಸ್ತಿ ಸಿಗುತ್ತದೆ. ಅವರು ಮದುವೆಯಾಗಲಿ ಬಿಡಲಿ ೧೮ನೇ ವಯಸ್ಸಿಗೆ ಬಂದಾಗ ಅದು ಅವರ ಪಾಲಿಗೆ ಸಿಗುತ್ತದೆ.

ಜನನ ನಿಯಂತ್ರಣದ ವಿಷಯಕ್ಕೆ ಭಾರತದಲ್ಲಿ ಅನೇಕ ಅಡಚಣೆಗಳಿವೆ. ಆದರೂ ಅಮೆರಿಕಾಕ್ಕೆ ಹೋಲಿಸಿದರೆ ಇಲ್ಲಿ ಅಂತಹ ಪ್ರತಿರೋಧವಿಲ್ಲ ಎನ್ನಬಹುದು. ಜನನ ನಿಯಂತ್ರಣ ಮಾಹಿತಿಯನ್ನು ಪ್ರಚಾರ ಮಾಡುವುದಕ್ಕೆ ಸಂಬಂಧಿಸಿದಂತೆ ಇಲ್ಲಿನ ವೈದ್ಯರು ಯಾವುದೇ ರೀತಿಯ ಕಾನೂನು ನಿರ್ಬಂಧಗಳನ್ನು ಹೊಂದಿಲ್ಲ. ಬಡತನ ಮತ್ತು ಅಜ್ಞಾನ, ಸರಿಯಾದ ಶಿಕ್ಷಣ ಸಾಧನಗಳ ಅಲಭ್ಯತೆ-ಇವು ಜನನ ನಿಯಂತ್ರಣ ಕಾರ್ಯಕ್ರಮಕ್ಕೆ ಗಂಭೀರ ಅಡಚಣೆಗಳನ್ನು ಉಂಟುಮಾಡಿವೆ. ಜನನ ನಿಯಂತ್ರಣವೇ ಭಾರತದ ಸಕಲ ತೊಂದರೆಗಳಿಗೂ ಮದ್ದು ಎಂದು ಪಾಶ್ಚಾತ್ಯ ಓದುಗರು ಭಾವಿಸಿರಬಹುದು. ಆದರೆ ಭಾರತದ ಸಮಸ್ಯೆಗೆ ಅತಿಯಾದ ಜನಸಂಖ್ಯೆಯೇ ಮೂಲ ಎಂದು ಹೇಳಲು ಬರುವುದಿಲ್ಲ. ವಾಸ್ತವವಾಗಿ ಕಳೆದ ಐವತ್ತು ವರ್ಷಗಳಲ್ಲಿ ಜನಸಂಖ್ಯೆ ದ್ವಿಗುಣಗೊಂಡಿರುವ ಇಂಗ್ಲೆಂಡ್ ಮತ್ತು ಹಾಲೆಂಡ್‌ಗಳಿಗೆ ಹೋಲಿಸಿದರೆ ಭಾರತದ ಜನಸಂಖ್ಯಾ ಏರಿಕೆ ಮಂದಗತಿಯಲ್ಲಿದೆ. ನೆದರ್‌ಲ್ಯಾಂಡ್ಸ್‌ನಲ್ಲಿ ಪ್ರತಿ ಚದರ ಮೈಲಿಯಲ್ಲಿರುವ ಜನಸಂಖ್ಯಾ ಸಾಂದ್ರತೆ ಭಾರತಕ್ಕಿಂತ ಮೂರುಪಟ್ಟು ಹೆಚ್ಚಿನದು. ಯುನೈಟೆಡ್ ಕಿಂಗ್‌ಡಮ್‌ನಲ್ಲಿ ಅದು ಎರಡು ಪಟ್ಟು ಹೆಚ್ಚಾಗಿದೆ. ಈ ಎರಡು ಯೂರೋಪಿಯನ್ ದೇಶಗಳು ಅವುಗಳ ವಿಸ್ತೃತ ಸಾಮ್ರಾಜ್ಯಗಳಿಂದಾಗಿ ಈ ಜನಸಂಖ್ಯಾ ಏರಿಕೆಯನ್ನು ತಾಳಿಕೊಳ್ಳಲು ಸಾಧ್ಯವಾಗಿದೆ. ಈ ದೇಶಗಳ ವಸಾಹತು ನೀತಿ ಭಾರತದ ಜನಸಂಖ್ಯಾ ಸಮಸ್ಯೆಯ ಮೇಲೆ ನೇರವಾದ ಹಾಗೂ ವಿನಾಶಕಾರಿಯಾದ ಪರಿಣಾಮ ಬೀರಿದೆ. ಬ್ರಿಟಿಷ್ ಆಳ್ವಿಕೆಯ ಅವಧಿಯಲ್ಲಿ ಭಾರತದ ಕೈಗಾರಿಕಾ ಬೆಳವಣಿಗೆ ಅಸಹಜ ತಡೆಯನ್ನು ಎದುರಿಸಬೇಕಾಯಿತು. ಕೈಕಸುಬುದಾರರು ಪುನಃ ಹಳ್ಳಿಗಳಿಗೆ ಹಿಂದಿರುಗಿದರು. ಅವರಿಗೆ ಲಭ್ಯವಿದ್ದ ಏಕೈಕ ಉದ್ಯೋಗವೆಂದರೆ ಕೃಷಿ. ಸ್ವಾತಂತ್ರ್ಯ ಬಂದ ನಂತರ ಭಾರತವು ಕೈಗಾರಿಕಾ ಕ್ಷೇತ್ರದಲ್ಲಿ ತ್ವರಿತ ಬೆಳವಣಿಗೆ ಸಾಧಿಸುವ ಉದ್ದೇಶ ಹೊಂದಿದೆ. ಹಳ್ಳಿಗಳಿಗೆ ವಾಪಸಾಗಿರುವ ಜನರನ್ನು ಕೈಗಾರಿಕೆಗಳ ಕಡೆ ಆಕರ್ಷಿಸಿದಾಗ

ಕೃಷಿಭೂಮಿಯ ಮೇಲೆ ಉಂಟಾಗಿರುವ ಅತಿಯಾದ ಒತ್ತಡವನ್ನು ತಪ್ಪಿಸಬಹುದು ಮತ್ತು ನೀರಾವರಿ ಯೋಜನೆಗಳು ಹಾಗೂ ವೈಜ್ಞಾನಿಕ ಕೃಷಿಯಿಂದ ಭೂಮಿಯ ಇಳುವರಿಯನ್ನು ಹೆಚ್ಚಿಸಲು ಸಾಧ್ಯ.

ಇಷ್ಟಿದ್ದೂ ಜನಸಂಖ್ಯಾ ಏರಿಕೆಯಿಂದಾಗುತ್ತಿರುವ ತೊಂದರೆಗಳನ್ನು ಕಡೆಗಣಿಸುವಂತಿಲ್ಲ. ಭಾರತದಲ್ಲಿ ಪ್ರಜ್ಞಾವಂತರಿಗೆ ಈ ಸಮಸ್ಯೆಯ ಅರಿವಿದೆ. ಅಖಿಲ ಭಾರತ ಮಹಿಳಾ ಸಮಾವೇಶವು "ತನ್ನ ಕುಟುಂಬದ ಗಾತ್ರವನ್ನು ನಿರ್ಧರಿಸುವುದು ಮಹಿಳೆಯ ಹಕ್ಕಾಗಬೇಕು. ವಿವಾಹಿತ ಹೆಂಗಸರಿಗೆ ಈ ದಿಸೆಯಲ್ಲಿ ಸರಿಯಾದ ತಿಳುವಳಿಕೆಯನ್ನು ಒದಗಿಸುವುದು ಸರ್ಕಾರದ ಕರ್ತವ್ಯ" ಎಂಬ ದಿಟ್ಟ ಹೇಳಿಕೆಯನ್ನು ನೀಡಿತು. ಬಾಂಬೆ ಮುನಿಸಿಪಾಲಿಟಿಯಲ್ಲಿ ಕುಟುಂಬ ಯೋಜನಾ ಕ್ಲಿನಿಕ್ಕುಗಳನ್ನು ಸ್ಥಾಪಿಸಲಾಗುತ್ತಿದೆ. ಮಾರ್ಗರೆಟ್ ಸ್ಯಾಂಗರ್ ಅವರು ೧೯೩೬ರಲ್ಲಿ ಭಾರತಕ್ಕೆ ಬಂದಾಗ ಮುಖ್ಯ ನಗರಗಳಿಗೆಲ್ಲ ಭೇಟಿ ನೀಡಿ ಭಾಷಣ ಮಾಡುತ್ತಿದ್ದರು. ಆ ಬಾಷಣಗಳಿಗೆ ಸಹಸ್ರಾರು ಮಂದಿ ಸೇರುತ್ತಿದ್ದರು. ದೇಶದ ಅನೇಕ ಭಾಗಗಳಲ್ಲಿ ಖಾಸಗಿ ಕ್ಲಿನಿಕ್ಕುಗಳು ಆರಂಭವಾದವು. ಹಿಂದೂ ಧರ್ಮದಲ್ಲಿ ಗರ್ಭನಿರೋಧಕಗಳ ಬಳಕೆಯ ಬಗ್ಗೆ ಸ್ಪಷ್ಟ ನಿಷೇಧವಿಲ್ಲವಾದರೂ ಆತ್ಮಸಂಯಮದ ಮೂಲಕ ಜನನ ನಿಯಂತ್ರಣ ಸಾಧಿಸಬೇಕು ಎಂಬುದು ಬಹುತೇಕ ಧಾರ್ಮಿಕ ಮುಖಂಡರ ಅಭಿಪ್ರಾಯ. ಗಾಂಧಿಯವರ ಅಭಿಪ್ರಾಯವೂ ಇದೇ ಆಗಿತ್ತು. ಗಾಂಧಿಯವರು ಜನರ ಮೇಲೆ ಅಪಾರ ಪ್ರಭಾವ ಬೀರುವ ಸಾಮರ್ಥ್ಯ ಉಳ್ಳವರು ಎಂಬುದನ್ನು ಶ್ರೀಮತಿ ಸ್ಯಾಂಗರ್ ಅರಿತಿದ್ದರು. ಜನರಿಗೆ ಅನುಷ್ಠಾನಕ್ಕೆ ತರಲು ಸಾಧ್ಯವಾಗುವಂತಹ ತಿಳುವಳಿಕೆಯನ್ನು ಬೋಧಿಸಿ ಪದೇಪದೇ ಮಕ್ಕಳನ್ನು ಹೆರುವ ಸಮಸ್ಯೆಯ ನಿವಾರಣೆಗೆ ಸಹಾಯವಾಗುವಂತೆ ಏನಾದರೂ ಹೇಳಿ ಎಂದು ಗಾಂಧಿಯವರಿಗೆ ಅವರು ಮನವಿ ಮಾಡಿಕೊಂಡರು. ಪುರುಷನು ಸಂತತಿಗಾಗಿ ಮಾತ್ರವೇ ಹೆಂಡತ್ತಿಯನ್ನು ಸೇರಬೇಕು. ಆ ಕಾರಣವನ್ನು ಬಿಟ್ಟು ಆತ ಹೆಂಡತಿಯನ್ನು ಬಯಸಿದರೆ ಅದು ಕಾಮವೇ ಹೊರತು ಪ್ರೀತಿಯಲ್ಲ. ಪ್ರತಿಯೊಬ್ಬ ಗಂಡ ಹೆಂಡತಿಯೂ ಯಾವ ಉದ್ದೇಶಕ್ಕಾಗಿ ತಾವು ಒಟ್ಟಿಗೆ ಇರಬೇಕೋ ಅದೊಂದು ಕಾರಣಕ್ಕಾಗಿ ಮಾತ್ರವೇ ತಾವು ಒಂದೇ ಹಾಸಿಗೆಯಲ್ಲಿ ಮಲಗಬೇಕು ಎಂಬುದನ್ನು ಸ್ವತಃ ತಾವೇ ನಿರ್ಧರಿಸಿಕೊಳ್ಳಬೇಕು ಎಂದು ಗಾಂಧಿಯವರು ಶ್ರೀಮತಿ ಸ್ಯಾಂಗರ್‌ಗೆ ಹೇಳಿದರು.

"ಹಾಗಾದರೆ ಲೈಂಗಿಕ ಸಂಭೋಗ ಗಂಡಹೆಂಡಿರ ಜೀವಮಾನದಲ್ಲಿ ಮೂರು ಅಥವಾ ನಾಲ್ಕು ಬಾರಿ ಮಾತ್ರ ನಡೆಯಬೇಕೆಂದು ನಿಮ್ಮ ಅಭಿಪ್ರಾಯವೇ" ಎಂದು ಸ್ಯಾಂಗರ್ ಅವರು ಗಾಂಧಿಯನ್ನು ಕೇಳಿದರು. ಗಾಂಧೀ ವಿಚಲಿತರಾಗಲಿಲ್ಲ. "ತನಗೆ ಎಷ್ಟು ಮಕ್ಕಳು ಬೇಕು ಎಂಬುದನ್ನು ನಿರ್ಧರಿಸುವ ಸವಲತ್ತು ಹೆಣ್ಣಿಗೆ ಇರಬೇಕು. ಆದರೆ ಗರ್ಭ ನಿರೋಧಕಗಳ ಬಳಕೆ ಹೆಣ್ತನಕ್ಕೆ ಅವಮಾನ" ಎಂದರು ಗಾಂಧಿ. ಕಾಮವನ್ನು ಜಯಿಸುವುದು ಸುಲಭವಲ್ಲ. ಅದು ಕತ್ತಿಯ ಅಲುಗಿನ ಮೇಲೆ ನಡೆದಂತೆ. ಸ್ವತಃ ತಾವು ಮಾಡಿದ ಪ್ರಯೋಗಗಳ... ಗಾಂಧಿ ವಿವರಿಸಿದರು. "ಹಣ್ಣು ಮತ್ತು ಕಾಳುಗಳನ್ನೊಳಗೊಂಡ ಆಹಾರ ಕ್ರಮ ಹ... ಕಾಮನೆಗಳನ್ನು ಹತ್ತಿಕ್ಕುವುದಕ್ಕ ತುಂಬ ಸಹಾಯಕ. ಹಾಲು ಕಾಮಭಾವನೆಗಳನ್ನು ಉತ್ತೇಜ...

ವೈದ್ಯರ ಸಲಹೆಯ ಮೇರೆಗೆ ನಾನು ಹಾಲು ಕುಡಿಯುತ್ತಿದ್ದಾಗ ಕಾಮೋದ್ರೇಕಗಳನ್ನು ಹತ್ತಿಕ್ಕುವುದಕ್ಕೆ ತುಂಬ ಪ್ರಯಾಸ ಪಡಬೇಕಾಯಿತು. ನಾಲಗೆ ರುಚಿಯ ಹತೋಟಿಗೂ ಸಂಯಮದ ನಡವಳಿಕೆಗೂ ನೇರ ಸಂಬಂಧವಿದೆ" ಎಂದು ಗಾಂಧಿ ಹೇಳಿದರು. ಗಾಂಧಿಯವರು ಈ ಕಟ್ಟುಪಾಡುಗಳನ್ನು ತಮ್ಮ ಮೇಲೆ ವಿಧಿಸಿಕೊಂಡಿದ್ದರ ಜೊತೆಗೆ ಆಶ್ರಮದ ಎಲ್ಲ ಸದಸ್ಯರ ಮೇಲೂ ವಿಧಿಸಿದ್ದರು. ಜನನ ನಿಯಂತ್ರಣಕ್ಕೆ ಜನರಿಂದ ಒಂದು ರೀತಿಯ ವಿರೋಧವಿದ್ದರೂ ಭಾರತದ ಅನೇಕ ಸ್ಥಳಗಳಲ್ಲಿ ಇದನ್ನು ಸದ್ದಿಲ್ಲದೆ ಪರಿಣಾಮಕಾರಿಯಾಗಿ ಜಾರಿಗೆ ತರಲಾಗಿತ್ತು. ಟಾಟಾ ಸ್ಟೀಲ್ ವರ್ಕ್ಸ್‌ನ ಔಷಧಾಲಯಗಳಲ್ಲಿ ತಾಯಂದಿರಿಗೆ ಈ ಬಗ್ಗೆ ಅಗತ್ಯವಾದ ತಿಳುವಳಿಕೆಯನ್ನು ಸಾಧನಗಳನ್ನು ನೀಡಬೇಕೆಂದು ದಾದಿಯರಿಗೆ ಹಾಗೂ ವೈದ್ಯರಿಗೆ ನಿರ್ದೇಶನ ನೀಡಲಾಗಿತ್ತು. ಟಾಟಾ ಸ್ಥಾವರಗಳವರು ಪ್ರಸೂತಿ ವಾರ್ಡುಗಳ ವ್ಯವಸ್ಥೆ ಮಾಡಿದ್ದರು. ಶಿಶುಪಾಲನೆಯ ಬಗ್ಗೆ ದಾದಿಯರು ಮನೆಮನೆಗೆ ಹೋಗಿ ತಾಯಂದಿರಿಗೆ ತಿಳುವಳಿಕೆ, ಸಹಾಯ ನೀಡುವ ವ್ಯವಸ್ಥೆ ಇತ್ತು. ಗರ್ಭವತಿಯರಿಗಾಗಿ ವಾರಕ್ಕೊಂದು ತರಗತಿಯೂ ನಡೆಯುತ್ತಿತ್ತು.

ಭಾರತದಲ್ಲಿ ನರ್ಸುಗಳ ಕೊರತೆ ಎದ್ದು ಕಾಣುತ್ತದೆ. ಇದುವರೆಗೆ ಜನರು ನರ್ಸಿಂಗ್ ವೃತ್ತಿಯನ್ನು ಕೀಳಾಗಿ ಕಾಣುತ್ತಿದ್ದರು. ಆದರೆ ಈಗ ಸಾರ್ವಜನಿಕ ಅಭಿಪ್ರಾಯ ಬದಲಾಗಿದೆ. ನರ್ಸುಗಳು ಮತ್ತು ವೈದ್ಯರ ಅವಶ್ಯಕತೆ ಪೂರೈಸಲು ಸರ್ಕಾರ ಹತ್ತು ವರ್ಷಗಳ ಯೋಜನೆ ರೂಪಿಸಿದೆ. ಕ್ಷಯ, ಕಾಲರಾ, ಮಲೇರಿಯಾ ನಿಯಂತ್ರಣಕ್ಕಾಗಿ ಸರ್ಕಾರ ಕ್ರಮ ಕೈಗೊಳ್ಳುತ್ತಿದೆ. ಸುಮಾರು ಇನ್ನೂರು ವರ್ಷಗಳ ವಿದೇಶೀ ಆಡಳಿತದಲ್ಲಿ ಸಂಪೂರ್ಣ ಕಡೆಗಣಿಸಲಾಗಿದ್ದ ರೈತ ವರ್ಗದವರಿಗೂ ಈಗ ಆರೋಗ್ಯ ಸೇವೆಗಳು ತಲುಪುತ್ತಿವೆ. ಇದಕ್ಕೆ ಪೂರ್ವಭಾವಿ ಕ್ರಮವಾಗಿ ವೈದ್ಯರು, ನರ್ಸುಗಳು ಹಾಗೂ ಸ್ಟೆರಿಲೈಜೇಶನ್ ಸೌಲಭ್ಯಗಳುಳ್ಳ ವೈದ್ಯಕೀಯ ವ್ಯಾನುಗಳು ಹಳ್ಳಿಹಳ್ಳಿಗೂ ಹೋಗಿ ಗ್ರಾಮೀಣ ಜನರಿಗೆ ಸೇವೆ ಒದಗಿಸುತ್ತಿವೆ. ಮೆಡಿಕಲ್ ವ್ಯಾನ್ ಬಂದಿರುವ ವಿಷಯವನ್ನು ತಮಟೆ ಬಾರಿಸಿ ಸಾರುತ್ತಾರೆ. ವಿವಿಧ ಗ್ರಾಮ, ಊರುಗಳಲ್ಲಿ ಪ್ರಸೂತಿ ಗೃಹಗಳು ತಲೆ ಎತ್ತುತ್ತಿವೆ.

ಮೈಸೂರು ರಾಜ್ಯದ ಒಂದು ಚಿಕ್ಕ ಊರಾದ ಚಿತ್ರದುರ್ಗ ಎಂಬಲ್ಲಿಗೆ ನಾನು ಹೋದೆ. ಅಲ್ಲಿ ರಾಜ್ಯದ ಪ್ರಜಾಪಕ್ಷದಿಂದ ಸ್ಥಾಪಿತವಾದ ಪ್ರಸೂತಿ ಗೃಹಕ್ಕೆ ಭೇಟಿ ನೀಡಿದೆ. ಅದನ್ನು ಬಳ್ಳಾರಿ ಸಿದ್ದಮ್ಮ ಎಂಬ ಹೆಸರಿನ ಹಿರಿಯ ಮಹಿಳೆ ನೋಡಿಕೊಳ್ಳುತ್ತಿದ್ದರು.

ಬಳ್ಳಾರಿ ಸಿದ್ದಮ್ಮನವರ ಪುಟ್ಟ ಆಸ್ಪತ್ರೆ ಇಂತಹ ಗ್ರಾಮೀಣ ಪ್ರದೇಶದಲ್ಲಿ ಇದ್ದು ಜನರಿಗೆ ಅಮೂಲ್ಯ ಸೇವೆ ಒದಗಿಸುತ್ತಿತ್ತು. ಯಾಕೆಂದರೆ ಗ್ರಾಮೀಣ ಪ್ರದೇಶಗಳಲ್ಲಿ ಮಗುವನ್ನು ಹೆರುವ ಹೆಂಗಸಿನ ಕಷ್ಟಗಳೇ ಒಂದು ವಿಧ. ಆಕೆ ಯಾರೂ ಉಪಯೋಗಿಸದಂತಹ ಒಂದು ಪ್ರತ್ಯೇಕ ಕೋಣೆಯಲ್ಲಿ ವಾಸಿಸಬೇಕಾಗುತ್ತದೆ. ಮಗುವನ್ನು ಹೆತ್ತಾಗ ಮತ್ತು ಮಾಸಿಕ ಚಕ್ರದ ಸಮಯದಲ್ಲಿ ಹೆಣ್ಣನ್ನು ಇಲ್ಲಿ ಅಶುದ್ಧ ಎಂದು ಭಾವಿಸುತ್ತಾರೆ. ಆಕೆ ಇತರ ಕೋಣೆಗಳಿಗೆ ಹೋಗುವಂತಿಲ್ಲ. ಮಗುವಿನ ಜನನಕ್ಕೆ ಸಂಬಂಧಿಸಿದ ಅನೇಕ ಪುರಾತನ ಪದ್ಧತಿಗಳನ್ನು ನಿವಾರಿಸುವುದಕ್ಕೆ

ಬಳ್ಳಾರಿ ಸಿದ್ದಮ್ಮನವರ ಶುಶ್ರೂಶಾಲಯ ನೆರವಾಗಿದೆ. ಈ ಶುಶ್ರೂಶಾಲಯಕ್ಕೆ ಭೇಟಿ ನೀಡಿದ ನಂತರ ನನ್ನ ಸ್ನಾನ ಮತ್ತು ಊಟಕ್ಕಾಗಿ ಬಳ್ಳಾರಿ ಸಿದ್ದಮ್ಮನವರ ಮನೆಗೆ ಕರೆದುಕೊಂಡು ಹೋದರು. ಇಲ್ಲಿ ಇನ್ನೊಂದು ರೀತಿಯ ಪುರಾತನ ಭಾರತೀಯ ಪದ್ಧತಿಗಳ ಗೊಂದಲದಲ್ಲಿ ನಾನು ಸಿಕ್ಕಿಕೊಂಡೆ.

ಬಳ್ಳಾರಿ ಸಿದ್ದಮ್ಮನವರ ಮನೆಯ ಬಾತ್‌ರೂಮೂ ಸಹ ಇಲ್ಲಿನ ಯಾವುದೇ ಮಧ್ಯಮವರ್ಗದವರ ಅಥವಾ ನಗರವಾಸಿಗಳ ಮನೆಗಳಲ್ಲಿರುವಂಥದ್ದೇ ಆಗಿತ್ತು ಅನ್ನಿಸುತ್ತದೆ. ಈ ಬಾತ್‌ರೂಮಿನೊಳಗೆ ನನ್ನ ಪಾಡಿಗೆ ನನ್ನನ್ನು ಬಿಟ್ಟುಬಿಟ್ಟರು. ಅಲ್ಲಿ ಯಾವುದು ಏನು ಎಂದು ತಿಳಿಯದೆ ನಾನು ತಬ್ಬಿಬ್ಬಾದೆ. ಗೋಡೆಯ ಬದಿಯಲ್ಲಿ ಒಂದು ದೊಡ್ಡ ಕಾಂಕ್ರೀಟು ತೊಟ್ಟಿ ಇತ್ತು. ತುಂಬಾ ನೀರು ತುಂಬಿದ್ದ ಅದು ನಮ್ಮ ಬಾತ್‌ಟಬ್ಬನ್ನು ಹೆಚ್ಚೂ ಕಡಿಮೆ ಹೋಲುತ್ತಿತ್ತು. ಆದರೆ ಅದರ ತಳಕಾಣುತ್ತಿರಲಿಲ್ಲವಾದ್ದರಿಂದ ಅದರಲ್ಲಿ ಇಳಿಯುವುದಕ್ಕೆ ನಾನು ಹಿಂಜರಿದೆ. ಎಲ್ಲ ಹೊತ್ತಿಗೂ ಬೇಕಾದ ನೀರನ್ನು ಸಂಗ್ರಹಿಸುವುದಕ್ಕಾಗಿ ಅದನ್ನು ಬಳಸುತ್ತಾರೆ ಎಂದು ಆಮೇಲೆ ಗೊತ್ತಾಯಿತು. ನೆಲದ ಮೇಲೆ ಚೆನ್ನಾಗಿ ಹೊಳೆಯುತ್ತಿದ್ದ ಹಿತ್ತಾಳೆಯ ದೊಡ್ಡದೊಡ್ಡ ಪಾತ್ರೆಗಳಲ್ಲಿ ನೀರು ತುಂಬಿತ್ತು. ಕೆಲವು ಪಾತ್ರೆಗಳು ಅತ್ತಿತ್ತ ಜರುಗಿಸಲೂ ಆಗದಷ್ಟು ಭಾರವಾಗಿದ್ದವು. ಇಡೀ ನೆಲದ ಒಂದು ಕಡೆ ಇಳಿಜಾರಾಗುತ್ತಾ ಅದರ ತುದಿಯಲ್ಲಿ ನೀರು ನಿಲ್ಲುವಂಥ ಒಂದು ಗುಂಡಿ ಇತ್ತು. ಮಧ್ಯಭಾಗದಲ್ಲಿ ಎರಡು ಮೆಟ್ಟಿಲುಗಳಿದ್ದು ಅವು ಯಾತಕ್ಕೆ ಅಂತ ಗೊತ್ತಾಗಲಿಲ್ಲ. ಇಂತಹ ಪರಿಸರದಲ್ಲಿ ನಾನು ಮೊದಲಸಲ ಸ್ನಾನ ಮಾಡುವ ಸಂದರ್ಭ ಬಂದಾಗ ನನಗೆ ಇನ್ನೇನು ಮಾಡಲೂ ತೋಚಲಿಲ್ಲ. ಒಂದು ದೊಡ್ಡ ಹಿತ್ತಾಳೆ ಪಾತ್ರೆಯಲ್ಲಿ ನನ್ನ ಹ್ಯಾಂಡ್ ಕರ್ಚೀಫ್ ಅದ್ದಿ ತಲೆಯಿಂದ ಕಾಲಿನವರೆಗೂ ಉಜ್ಜಿಕೊಂಡೆ. ಆದರೆ ಅದು ನನಗೆ ಸಮಾಧಾನವಾಗಲಿಲ್ಲ. ಅಂತೂ ಕ್ರಮೇಣ ಸ್ನಾನ ಮಾಡುವ ಭಾರತೀಯ ವಿಧಾನದಲ್ಲಿ ನಾನು ಪರಿಣತಿ ಗಳಿಸಿದೆ. ಅಲ್ಲಿದ್ದ ಪಾತ್ರೆಗಳಲ್ಲಿ ಅತ್ಯಂತ ಚಿಕ್ಕದಾದ ಪಾತ್ರೆ ಯಾವುದೋ ಅದನ್ನು ತೆಗೆದುಕೊಂಡು ಅದರಲ್ಲಿ ನೀರು ತುಂಬಿಕೊಂಡು ವಿಗ್ರಹದಂತೆ ನಿಂತು ತಲೆಯ ಮೇಲಿಂದ ಫೌಂಟನ್ನಿಂತೆ ನನ್ನ ಮೇಲೆ ಸುರಿದುಕೊಳ್ಳಬೇಕು ಎಂಬುದನ್ನು ಕಲಿತೆ. ಬಾತ್‌ಟಬ್ಬಿನಲ್ಲಿ ಕುಳಿತು ಸ್ನಾನಮಾಡುವುದನ್ನು ಭಾರತೀಯರು ಕೊಳಕು, ಅನಾಗರಿಕತನ ಎಂಬು ಭಾವಿಸುತ್ತಾರೆ. ಅವರ ಪ್ರಕಾರ ಬಾತ್‌ಟಬ್ಬಿನ ನೀರಿನಲ್ಲಿ ಕುಳಿತುಕೊಂಡು ನೀರನ್ನು ಹಾಕಿಕೊಂಡಾಗ ಆ ನೀರಿನ ಕೊಳೆ ಇನ್ನಷ್ಟು ಹೆಚ್ಚಾಗುತ್ತಾ ಹೋಗುತ್ತದೆ.

ಬಳ್ಳಾರಿ ಸಿದ್ದಮ್ಮನವರ ಮನೆಯಲ್ಲಿ ರಾತ್ರಿ ಊಟ ಮಾಡಿದೆ. ಅದು ಅಪ್ಪಟ ದಕ್ಷಿಣ ಭಾರತೀಯ ಊಟ. ಒಂದಕ್ಕಿಂತ ಒಂದು ಖಾರವಾದ ಸಾರುಗಳು, ಪಲ್ಯಗಳು. ತಟ್ಟೆಯ ಮಧ್ಯೆ ಒಂದು ಸಣ್ಣಗುಡ್ಡದಂತೆ ಹಾಕಿದ ಅನ್ನ ಸುತ್ತ ಖಾರದ ಆವರಣ. ನಾನು ಅನ್ನದ ರಾಶಿಯನ್ನು ಮಾತ್ರ ತಿನ್ನುತ್ತಿದ್ದಂತೆ ನನ್ನ ಆತಿಥೇಯಳು ಮತ್ತಷ್ಟು ಮತ್ತಷ್ಟು ಹಾಕಿ ಪೇರಿಸುತ್ತಿದ್ದಳು. ಅದಾಗುವಷ್ಟರಲ್ಲೇ ಹೆಣ್ಣಾಳುಗಳು ಬಂದು ಬೇಳೆಯ ಸಾರೂ ಪಲ್ಯ. ... ಬಡಿಸುತ್ತಿದ್ದರು. ಇದೆಲ್ಲ ಒಂದು ರಿಲೇ ಓಟದಂತೆ ನಡೆದಿತ್ತು. ಕೆಲವು ಸ್ಥಳಗಳಲ್ಲಿ ಬದಲು ಯಾವುದೋ ಧಾನ್ಯದ ಹಿಟ್ಟಿನಿಂದ ಮಾಡಿದ ಪದಾರ್ಥ ಇರುತ್ತದೆ. ಸಾರಿನ

ವಾಸನೆ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನ. ಆದರೆ ಅದರ ಪರಿಣಾಮ ಮಾತ್ರ ಎಲ್ಲ ಕಡೆಯೂ ಒಂದೇ. ಹೊಟ್ಟೆಯಲ್ಲಿ ಉರಿಯ ಜ್ವಾಲೆಗಳು ಎದ್ದು ಸುಡುತ್ತ ಇನ್ನೇನು ಇನ್ನೊಂದು ತುತ್ತು ಆಹಾರವನ್ನೂ ಬಾಯಿರುಚಿ ನೋಡುವುದಾಗಲೀ, ನುಂಗುವುದಾಗಲೀ ಸಾಧ್ಯವಿಲ್ಲ ಎಂದಾಗುವ ಹೊತ್ತಿಗೆ ನಿಮ್ಮ ತಟ್ಟೆಯಲ್ಲಿ ಉಳಿದಿರುವ ಅನ್ನದ ರಾಶಿಯ ಮೇಲೆ ಒಂದು ಬಟ್ಟಲು ಮಜ್ಜಿಗೆ ಅಥವಾ ಮೊಸರನ್ನು ಸುರಿಯುತ್ತಾರೆ. ಅದನ್ನು ನೀವು ಕಬಳಿಸುವ ಹೊತ್ತಿಗೆ ಮ್ಯಾಜಿಕ್ಕಿನಂತೆ ನಿಮ್ಮ ಹೊಟ್ಟೆ ತಣ್ಣಗಾಗಿರುತ್ತದೆ.

ಒಂದಾದ ಮೇಲೆ ಒಂದರಂತೆ ಬಡಿಸಲಾಗುವ ಈ ವಿವಿಧ ಪರಿಮಳಗಳ ಆಹಾರಕ್ರಮ ನನಗೆ ಅಭ್ಯಾಸವಾಯಿತು. ಆದರೂ ಬೆಳಗಿನ ತಿಂಡಿಗೆ ಕೊಡುತ್ತಿದ್ದ ಕೆಲವೊಂದು 'ಸುಡುವ ಮಿಶ್ರಣ'ಗಳು ನನಗೆ ಅಭ್ಯಾಸವಾಗಲೇ ಇಲ್ಲ. ನಾನು ಎಷ್ಟು ಮೊಂಡು ಹಿಡಿದು ಪ್ರಯತ್ನಿಸಿದರೂ ಕರಗತವಾಗದ ಒಂದು ಅಂಶವೆಂದರೆ ನೆಲದ ಮೇಲೆ ಕುಳಿತು ಬೆರಳುಗಳಿಂದ ಊಟ ಮಾಡುವುದು. ತಟ್ಟೆಯಲ್ಲಿ ನೀರುನೀರಾಗಿದ್ದ ಸಾರಿನಲ್ಲಿ ತೇಲುತ್ತಿದ್ದ ಅನ್ನದ ಕಾಳುಗಳನ್ನು ಕೈಬೆರಳುಗಳಿಂದ ಚಮತ್ಕಾರಿಕವಾಗಿ ತೆಗೆದುಕೊಳ್ಳುವುದು ಮಗುವಾಗಿದ್ದಾಗಿನಿಂದಲೇ ಕಲಿತುಕೊಳ್ಳಬೇಕಾದ ಕಲೆ ಎಂದು ನಾನು ನಿರ್ಧರಿಸಿದೆ. ಕೊನೆಗೂ ನಾನು ಇಲ್ಲಿನವರಂತೆ ಬೆರಳುಗಳಿಂದ ಊಟಮಾಡುವುದನ್ನು ಬಿಟ್ಟುಕೊಟ್ಟೆ. ಎಲ್ಲಿಗೆ ಹೋದರೂ ನನ್ನ ಹ್ಯಾಂಡ್‌ಬ್ಯಾಗ್‌ನಲ್ಲಿ ಒಂದು ಸ್ಪೂನ್ ಮತ್ತು ಫೋರ್ಕ್ ಇಟ್ಟುಕೊಂಡೆ ಹೋಗುವುದನ್ನು ಅಭ್ಯಾಸ ಮಾಡಿಕೊಂಡೆ. ಊಟದ ಸಮಯಕ್ಕೆ ಅವುಗಳನ್ನು ಬ್ಯಾಗಿನಿಂದ ಈಚೆ ತೆಗೆಯುತ್ತಿದ್ದೆ. ನಾನು ಸ್ಪೂನು ಫೋರ್ಕುಗಳಿಂದ ತಿನ್ನುವುದನ್ನು ಅತಿಥೇಯ ಜನರು ತುಂಬ ಆಶ್ಚರ್ಯದಿಂದ ನೋಡುತ್ತ ಕೂರುತ್ತಿದ್ದರು.

ಚಕ್ಕಮಕ್ಕಳೆ ಹಾಕಿಕೊಂಡು ಕೂರುವುದು ನೋಡುವುದಕ್ಕೆ ತುಂಬ ಸಲೀಸು, ಸುಲಭ ಅನ್ನಿಸುತ್ತದೆ. ಆದರೆ ಹಾಗೆ ಕೂತುಕೊಂಡ ಸ್ವಲ್ಪ ಹೊತ್ತಿಗೆಲ್ಲ ಕಾಲುನೋಯ ತೊಡಗುತ್ತದೆ. ಈ ಕಲೆಯಲ್ಲಿಯೂ ಸಹ ಪಶ್ಚಿಮವನ್ನು ಪೂರ್ವ ಮೀರಿಸಿದೆ ಎಂದು ನಿಮಗೆ ಗೊತ್ತಾಗುತ್ತದೆ. ಭಾರತದ ಬಹುತೇಕ ಮನೆಗಳಲ್ಲಿ ಮತ್ತು ಸಾಕಷ್ಟು ಅನೂಕೂಲವಂತರಾದ ಮನೆಗಳಲ್ಲಿಯೂ ಪೀಠೋಪಕರಣಗಳ ಸಂಖ್ಯೆ ತುಂಬ ಕಡಿಮೆ. ನೆಲದ ಮೇಲೆ ದಪ್ಪನೆಯ ಒಂದು ಹಾಸಿನಂಥದ್ದು ಬಿಟ್ಟರೆ ಇನ್ನೇನೂ ಇರುವುದಿಲ್ಲ. ಆದರೆ ಸೌಜನ್ಯಪೂರಿತ ವ್ಯಕ್ತಿತ್ವದ ನನ್ನ ಅತಿಥೇಯರು ಊಟ ಮಾಡುವಾಗ ನನಗೆ ಅನುಕೂಲವಾಗುವಂತೆ ಏನೋ ಒಂದು ಎತ್ತರದ ವ್ಯವಸ್ಥೆ ಮಾಡುತ್ತಿದ್ದರು. ಶಾಲೆಯಲ್ಲಿ ಚಿಕ್ಕಮಕ್ಕಳ ಮಧ್ಯೆ ಎತ್ತರದಲ್ಲಿ ಕುಳಿತ ಟೀಚರ್‌ನಂತೆ ನಾನು ಅವರ ಮಧ್ಯೆ ಕುಳಿತಿರುತ್ತಿದ್ದೆ. ಈ ಜನ ಮಾತ್ರ ಆರಾಮಾಗಿ ಚಕ್ಕಮಕ್ಕಳ ಹಾಕಿಕೊಂಡು ನೆಲದ ಮೇಲೆ ಕೂರುತ್ತಿದ್ದರು. ಅವರ ಸಣಕಲು ಕೈಗಳು ಚಪ್ಪಟೆಯಾದ ತಟ್ಟೆಗಳ ಮೇಲೆ ಹರಿದಾಡುವುದು ಚಿಕ್ಕಮಕ್ಕಳು ಬೆರಳಿನಿಂದ ಚಿತ್ರಕಲೆ ಮಾಡುವಂತೆ ತೋರುತ್ತಿತ್ತು.

ಒಂದು ಸಲ ಬಾಂಬೆಯ ಮಲಬಾರ್ ಹಿಲ್‌ನ ಅಪಾರ್ಟ್‌ಮೆಂಟಿನಲ್ಲಿ ನಾನು ಭಾರತಿಯ ವ್ಯಾಪಾರೋದ್ಯಮಿಯವರೊಂದಿಗೆ ಕುಳಿತು ಊಟ ಮಾಡುತ್ತಿದ್ದೆ. ಆತ ತಾನು ಭೇಟಿ ನೀಡಿದ

ಬೆವೆರ್ಲೆ ಹಿಲ್ಸ್ ಹಾಗೂ ನ್ಯೂಯಾರ್ಕಿನಲ್ಲಿ ನೋಡಿದ ಮನೆಗಳ ರೀತಿಯಲ್ಲಿ ತನ್ನ ಮನೆಯನ್ನು ಸಜ್ಜುಗೊಳಿಸಿದ್ದ. ಅವರ ಮನೆಯಲ್ಲಿ ಪೀಠೋಪಕರಣಗಳನ್ನು ಇಟ್ಟಿದ್ದ ರೀತಿಯಂತೂ ಹಾಲಿವುಡ್ ಸೆಟ್‌ನಂತೆ ಇತ್ತು. ನಾವು ಟೇಬಲಿನ ಸುತ್ತ ಕುಳಿತು ಸಮುದ್ರ ತೀರವನ್ನು ನೋಡುತ್ತಾ ಊಟ ಮಾಡುತ್ತಿದ್ದೆವು. ಆಹಾರದ ಸ್ವಲ್ಪ ಭಾಗ ಭಾರತೀಯ, ಸ್ವಲ್ಪ ಭಾಗ ಯೂರೋಪಿಯನ್. ಅತ್ಯಂತ ಸುಂದರವಾಗಿದ್ದ ಹಾಗೂ ಫ್ಯಾಶನಬಲ್ ಆಗಿದ್ದ ಆತನ ಹೆಂಡತಿ ಊಟದ ಮಧ್ಯದಲ್ಲಿ ಫೋರ್ಕನ್ನು ತೆಗೆದಿದ್ದ ನನಗೆ "ಕೈಯಲ್ಲಿ ಊಟ ಮಾಡಿದರೆ ನೀವೇನು ಅಂದುಕೊಳ್ಳುವುದಿಲ್ಲ ತಾನೆ ನನಗೆ ಹಾಗೆ ಊಟ ಮಾಡಿದರೇ ರುಚಿ" ಎಂದು ನನ್ನತ್ತ ತಿರುಗಿ ಹೇಳಿದಳು.

ಭಾರತದಲ್ಲಿ ಚಟ್ನಿಯಿಂದ ಮಜ್ಜಿಗೆಯವರೆಗೆ ಎಲ್ಲ ರೀತಿಯ ಪದಾರ್ಥಗಳನ್ನೂ ದುಂಡನೆಯ ಹಿತ್ತಾಳೆ ಅಥವಾ ಬೆಳ್ಳಿಯ ತಟ್ಟೆಯಲ್ಲಿ ಅಥವಾ ಎಲೆಗಳ ಮೇಲೆ ಬಡಿಸಿಕೊಂಡು ಊಟ ಮಾಡುತ್ತಾರೆ. ಶ್ರೀಮಂತರು ಹಾಗೂ ಬಡವರೂ ಕೂಡ ಬಳಸುವ ಊಟದ ಎಲೆಗಳು ನಿಜಕ್ಕೂ ಕಲಾತ್ಮಕ ಮತ್ತು ತೊಳೆಯುವ ತಾಪತ್ರಯವಿಲ್ಲ. ಬಿಡುವಿನ ವೇಳೆಯಲ್ಲಿ ದಪ್ಪವಾದ ಎಲೆಗಳನ್ನು ದುಂಡಗೆ ಜೋಡಿಸಿ ಕಡ್ಡಿಗಳನ್ನು ಸಿಕ್ಕಿಸಿ ಇಡೀ ಒಂದು ವರ್ಷಕ್ಕಾಗುವಷ್ಟು ಎಲೆ ಸಿದ್ಧಪಡಿಸಿಕೊಳ್ಳುತ್ತಾರೆ. ಊಟದ ನಂತರ ಎಲೆಗಳನ್ನು ಹೊರಗೆ ಎಸೆದುಬಿಡುತ್ತಾರೆ. ಯಾರಿಗೂ ತಟ್ಟೆಗಳನ್ನು ತೊಳೆಯುವ ಕೆಲಸವೇ ಇರುವುದಿಲ್ಲ. ಅದು ತುಂಬ ಚೆಂದ ಅನ್ನಿಸಿತು ನನಗೆ. ನಾನು ಭಾರತದಲ್ಲಿ ಎಲ್ಲಿ ಹೋದರೂ ಜನ ತಮ್ಮೊಂದಿಗೆ ಊಟ ತಿಂಡಿಗೆ ಕರೆಯುತ್ತಿದ್ದರು. ಇಲ್ಲಿ ಜಾತಿಯ ಅಡೆತಡೆಗಳು ನಿವಾರಣೆಯಾಗುತ್ತಿದ್ದುದಕ್ಕೆ ಇದೇ ಸಾಕ್ಷಿ. ಜಾತಿಯ ನಿಷಿದ್ಧಗಳಲ್ಲಿ ಅತ್ಯಂತ ಬಲವಾದ ನಿಷಿದ್ಧವೆಂದರೆ ಇತರ ಜಾತಿಯವರೊಂದಿಗೆ ಊಟ ಮಾಡುವುದು ಅಸ್ಪೃಶ್ಯರು ಮೇಲುಜಾತಿಯವರ ಆಹಾರವನ್ನು ಮುಟ್ಟುವುದಾಗಲೀ, ಪಾತ್ರೆಗಳನ್ನು ಸ್ಪರ್ಶಿಸುವು ದಾಗಲೀ ಕಲ್ಪಿಸಿಕೊಳ್ಳುವುದಕ್ಕೂ ಸಾಧ್ಯವಾಗದಂಥ ವಿಷಯ. ನನ್ನನ್ನು ಯಾವುದೇ ಜಾತಿಯ ನಿರ್ಬಂಧಗಳಿಗೆ ಒಳಪಡದ ಜಾತಿರಹಿತ ವ್ಯಕ್ತಿಯೆಂದು ಭಾವಿಸಿದ್ದರು. ಆದರೂ ತೀರಾ ಮಡಿವಂತರಾದವರು ನನ್ನನ್ನು ಸೇರಿಸುತ್ತಿರಲಿಲ್ಲ.

ಒಂದೇ ಕುಟುಂಬದಲ್ಲಿ ಎರಡು ಸಾವಿರ ವರ್ಷಗಳ ಹಿಂದಿನ ಸಂಪ್ರದಾಯ ಹಾಗೂ ಇಪ್ಪತ್ತನೇ ಶತಮಾನದ ಆಧುನಿಕತೆಗಳೆರಡೂ ಕಾಣುತ್ತಿದ್ದವು. ನಾನು ಚಿಕ್ಕವಯಸ್ಸಿನ ಕೆಲವು ಭಾರತೀಯ ಸ್ನೇಹಿತರೊಂದಿಗೆ ಬ್ರಾಹ್ಮಣರ ಮನೆಗಳಲ್ಲಿ ಊಟ ಮಾಡಿದ್ದೇನೆ. ನನ್ನ ಸ್ನೇಹಿತರ ಅಜ್ಜ ಅದೇ ಸ್ಥಳದ ಒಂದು ಕಡೆ ನೆಲದ ಮೇಲೆ ಒಬ್ಬರೇ ಕುಳಿತು ಪ್ರತ್ಯೇಕವಾಗಿ ಊಟ ಮಾಡುತ್ತಿದ್ದರು. ಅವರ ಪಕ್ಕದಲ್ಲಿ ಅವರಿಗೆ ಅಡುಗೆ ಮಾಡುವುದಕ್ಕೆಂದೇ ಪ್ರತ್ಯೇಕವಾದ ಒಲೆ ಇರುತ್ತಿತ್ತು. ಅವರಿಗೇ ಪ್ರತ್ಯೇಕವಾಗಿ ಅವರಿಗೇ ಮೀಸಲಾದ ಪಾತ್ರೆಗಳಲ್ಲಿ ಅಡುಗೆ ಮಾಡುತ್ತಿದ್ದರು. ನನ್ನ ಸ್ನೇಹಿತರ ತಾತನಂತೆ ಇಷ್ಟೊಂದು ನಿಷ್ಠೆಯಿಂದ ಸಂಪ್ರದಾಯವನ್ನು ಆಚರಿಸುವ ಬ್ರಾಹ್ಮಣರು ಇನ್ನು ಮುಂದೆ ತೀರ ವಿರಳವಾಗಬಹುದು. ಆದರೆ ದಕ್ಷಿಣ ಭಾರತದ ಗ್ರಾಮೀಣ ಪ್ರದೇಶಗಳಲ್ಲಿ ಜಾತಿಯ ಕಟ್ಟುಪಾಡುಗಳು ಇನ್ನೂ ಬಲವಾಗಿವೆ. ಅಲ್ಲಿ ಮಡಿವಂತ ಬ್ರಾಹ್ಮ... ಪರಿಪೂರ್ಣ ಮಾದರಿಗಳನ್ನು ಈಗಲೂ ಕಾಣಬಹುದು. ಅವರ ಆಹಾರ ಸೇವನೆಯ ... ದಲ್ಲಿ ಎಷ್ಟೊಂದು ನಿರ್ಬಂಧಗಳಿವೆ ಎಂದರೆ ಬೇರೆ ಇನ್ನೇನಕ್ಕಾದರೂ ಅವರಿಗೆ ಸಮ...

ಇರುವುದಿಲ್ಲವೇನೊ? ಅವರು ಸ್ನಾನ ಮಾಡಿ, ಒಗೆದ ಬಟ್ಟೆಯನ್ನು ಹಾಕಿಕೊಂಡ ನಂತರವೇ ಊಟ ಮಾಡುತ್ತಾರೆ. ಒಗೆದ ಬಟ್ಟೆಯನ್ನು ಒಣಗಿಸುವ ಸ್ಥಳದಲ್ಲಿ ಯಾವುದೇ ರೀತಿಯ ಸಂಪ್ರದಾಯ ಮಲಿನತೆ ಆಗಿರಬಾರದು. ಅಂದರೆ ಕತ್ತೆ, ನಾಯಿ, ಹಂದಿ ಅಥವಾ ಮಾಸಿಕ ಚಕ್ರದಲ್ಲಿರುವ ಮಹಿಳೆ ಅವುಗಳನ್ನು ಮುಟ್ಟಬಾರದು. ಆತ ತನ್ನ ಉಪಜಾತಿಯವರೊಂದಿಗಲ್ಲದೆ ಬೇರೆ ಯಾರೊಂದಿಗೂ ಊಟ ಮಾಡುವಂತಿಲ್ಲ. ಊಟ ಮಾಡುವಾಗ ಪುಸ್ತಕ ಓದಬಾರದು. ಯಾಕೆಂದರೆ ಮುದ್ರಣಕ್ಕೆ ಬಳಸುವ ಮಸಿ ಮಡಿಗೆ ದೂರ. ಆತ ಆಕಸ್ಮಾತ್ತಾಗಿ ಮಣ್ಣಿನ ಮಡಕೆಯನ್ನೋ ಚರ್ಮದ ವಸ್ತುವನ್ನೊ ಊಟಕ್ಕೆ ಮೊದಲು ಮುಟ್ಟಿದರೆ ಅಥವಾ ಘನ ಆಹಾರವನ್ನು ತಿನ್ನುವ ವಯಸ್ಸಿಗೆ ಬಂದಿರುವ ಮಗುವನ್ನೋ, ನಾಯಿಯನ್ನೋ ಆತ ತಾಗಿಸಿಕೊಂಡರೆ ಅಥವಾ ಊಟ ಮಾಡಿದ ಬ್ರಾಹ್ಮಣ ತಗುಲಿಸಿದರೂ ಊಟವನ್ನು ಬಿಟ್ಟುಬಿಡಬೇಕು. ನೀರಿನ ಶುದ್ಧತೆ ಕಾಪಾಡಿಕೊಳ್ಳುವ ವಿಧಾನವಂತೂ ಇದಕ್ಕಿಂತ ಪ್ರಯಾಸಕರ ಹಾಗೂ ಅನ್ಯಾಯದ್ದು. ಭಾರತದಲ್ಲಿ ಅಸ್ಪೃಶ್ಯರಿಗೇ ಪ್ರತ್ಯೇಕವಾದ ಬಾವಿಗಳಿರುತ್ತವೆ. ಈ ಬಾವಿಗಳು ಸುಸ್ಥಿತಿಯರಲ್ಲಿರುವುದಿಲ್ಲ. ಬೇಸಿಗೆಯಲ್ಲಿ ಒಣಗಿರುತ್ತವೆ. ಇಂತಹ ಅಸಮಾನತೆಗಳೆಲ್ಲ ಬೇಗ ಬದಲಾಗಬೇಕಿದೆ. ಹೊಸ ಸಂವಿಧಾನದ ಪ್ರಕಾರ ಸರ್ಕಾರದಿಂದ ಸಾರ್ವಜನಿಕರ ಅನುಕೂಲಕ್ಕಾಗಿ ನಿರ್ಮಿಸಿರುವ ಬಾವಿ ಮತ್ತು ಕೆರೆಗಳಿಗೆ ಅಸ್ಪೃಶ್ಯರು ಹೋಗದಂತೆ ತಡೆಯುವುದು ಕಾನೂನಿನ ದೃಷ್ಟಿಯಲ್ಲಿ ಅಪರಾಧ. ಆದರೆ ಈ ಕಾನೂನುಗಳು ದೈನಂದಿನ ಬದುಕಿನಲ್ಲಿ ಜಾರಿಗೆ ಬರುವಂತಾಗಲು ಹಿಂದುಳಿದ ಪ್ರದೇಶಗಳ ಜನರಿಗೆ ಹೆಚ್ಚಿನ ತಿಳುವಳಿಕೆ ಮೂಡಿಸುವಂತಹ್ದ ಪ್ರಯತ್ನಗಳು ನಡೆಯಬೇಕಾದ್ದು ಬಹಳ ಅಗತ್ಯ. ಯಾಕೆಂದರೆ ಜಾತಿಯ ಪಾರಮ್ಯವನ್ನು ಕುರಿತ ಬ್ರಾಹ್ಮಣರ ತತ್ವಸಿದ್ಧಾಂತಗಳು ಇಲ್ಲಿ ಶತಶತಮಾನಗಳಿಂದ ಬೇರೂರಿಬಿಟ್ಟಿವೆ.

ಪ್ರಾಚೀನ ಹಿಂದೂ ಧರ್ಮವು ಬ್ರಾಹ್ಮಣ ಪಾರಮ್ಯತೆಯನ್ನು ವಿಶೇಷವಾಗಿ ಬೆಳೆಸಿಕೊಂಡು ಬಂದಿದೆ. ಮತ್ತು ಈ ಸ್ಥಾನವನ್ನು ಉಳಿಸಿಕೊಳ್ಳುವುದಕ್ಕಾಗಿ ಸಾಕಷ್ಟು ರಕ್ಷಣೆಗಳನ್ನು ನಿರ್ಮಿಸಲಾಗಿದೆ. ಪೂಜಾರಿಗಳೂ ಮತ್ತು ಶಿಕ್ಷಕರೂ ಆಗಿದ್ದ ಬ್ರಾಹ್ಮಣರು ಅಕ್ಷರ ವಿದ್ಯೆಯ ಮೇಲೆ ಏಕಸ್ವಾಮ್ಯವನ್ನು ಸ್ತಾಪಿಸಿಕೊಂಡರು. ಹುಟ್ಟು, ವಿವಾಹ, ಸಾವು ಮೊದಲಾದ ಮೂಲಭೂತ ಆಚರಣೆಗಳಿಗೆ ಅವರ ಧಾರ್ಮಿಕ ಮಧ್ಯಸ್ಥಿಕೆಯೇ ಬೇಕಾಗಿತ್ತು. ಬಹುಶಃ ಕ್ರಿಶ್ಚಿಯನ್ ಯುಗದ ಆರಂಭದಲ್ಲಿ ರಚಿತವಾಗಿದ್ದರೂ ಅದಕ್ಕೆ ಹಿಂದಿನ ವಿಷಯಗಳನ್ನು ಒಳಗೊಳ್ಳುವ ಮನುಸಂಹಿತೆಯ ಪ್ರಕಾರ ಬ್ರಾಹ್ಮಣನು ಎಂಥ ಅಪರಾಧ ಮಾಡಿದರೂ ಅವನಿಗೆ ಸಾವಿನ ಶಿಕ್ಷೆ ಕೊಡಬಾರದು ಮತ್ತು ದಾಸ ಅಥವಾ ಗುಲಾಮನಾಗಿ ಮಾಡಕೂಡದು. ಒಂದು ವೇಳೆ ಸಾಲ ಮಾಡಿದರೆ ಅವನು ಅದನ್ನು ತನ್ನ ಯೋಗ್ಯತಾನುಸಾರ ಸ್ವಲ್ಪಸ್ವಲ್ಪವಾಗಿ ತೀರಿಸುವ ಅವಕಾಶವಿತ್ತು. ಆದರೆ ಕೆಳಜಾತಿಯ ಮನುಷ್ಯನಿಗೆ ಈ ಸೌಲಭ್ಯವಿರಲಿಲ್ಲ. ಅವನು ಶ್ರಮದ ದುಡಿಮೆ ಮಾಡಿಯಾದರೂ ಸಾಲ ತೀರಿಸಬೇಕಿತ್ತು. ಹಸಿದಿರುವ ಬ್ರಾಹ್ಮಣ ಯಾರೋ ಅಪರಿಚಿತರ ಭೂಮಿಯಿಂದ ತನಗೆ ಬೇಕಾದ ಆಹಾರವನ್ನು ಪಡೆದುಕೊಳ್ಳಬಹುದು. ಆದರೂ ಅವನನ್ನು ಕಳ್ಳ ಎನ್ನುತ್ತಿರಲಿಲ್ಲ. ಆದರೆ ಕೆಳಜಾತಿಯವನೊಬ್ಬ ಬ್ರಾಹ್ಮಣನಿಗೆ ಸೇರಿದ ಹೂವು, ಹಣ್ಣು, ಕಟ್ಟಿಗೆ ಅಥವಾ ಹುಲ್ಲನ್ನು ಕದ್ದರೆ ನ್ಯಾಯಾಧಿಕಾರಿಯು ಅವನು ಕೈಯನ್ನು ಕತ್ತರಿಸುವ ಶಿಕ್ಷೆ ವಿಧಿಸುತ್ತಿದ್ದ.

ಕೆಳಜಾತಿಯವನೊಬ್ಬ ಬ್ರಾಹ್ಮಣನು ಮಾತಾಡುವಾಗ ಮಧ್ಯೆ ಮಾತಾಡಿದರೆ, ರಸ್ತೆಯಲ್ಲಿ ಅವನಿಗೆ ಸಮಾನವಾಗಿ ಓಡಾಡಿದರೆ ಅವನಲ್ಲಿದ್ದ ಎಲ್ಲವನ್ನೂ ಕಿತ್ತುಕೊಳ್ಳುವಷ್ಟು ದಂಡ ವಿಧಿಸಬಹುದಿತ್ತು. ಅವನು ಬ್ರಾಹ್ಮಣನನ್ನು ಕಾಲಿಂದ ಒದ್ದರೆ ಕಾಲನ್ನು ಕತ್ತರಿಸುತ್ತಿದ್ದರು. ವ್ಯಭಿಚಾರ ಮಾಡಿದ ಇತರ ಜಾತಿಯವರಿಗೆ ಮರಣದಂಡನೆಯಾಗುತ್ತಿತ್ತು. ಬ್ರಾಹ್ಮಣನಿಗೆ ಆತನ ತಲೆಯ ಕೂದಲನ್ನು ಮಾತ್ರ ಸಾಂಕೇತಿಕವಾಗಿ ತೆಗೆಯುತ್ತಿದ್ದರು.

ಕಾನೂನಿನ ದೃಷ್ಟಿಯಿಂದ ಈ ಇಂಥ ಕಣ್ಣುಕುಕ್ಕುವಂತಹ ಅಸಮಾನತೆಗಳು ಇಲ್ಲ. ಆದರೂ ಬ್ರಾಹ್ಮಣರಿಗೇ ವಿಶಿಷ್ಟವಾದ ಕೆಲವೊಂದು ಸೌಲಭ್ಯಗಳು ಈಗಲೂ ಇವೆ. ಹಿಂದೂ ಮಹಾಸಭಾ ಮತ್ತು ಆರ್.ಎಸ್.ಎಸ್.ಗಳು ಜಾತಿಯ ಪರಿಶುದ್ಧತೆಯ ವಾದವನ್ನು ಯಾಕೆ ವೈಭವೀಕರಿಸುತ್ತಿವೆ ಮತ್ತು ಎರಡು ಸಾವಿರ ವರ್ಷಗಳ ಹಿಂದಿನ ಶುದ್ಧ ಹಿಂದೂಧರ್ಮದ ಪುನರ್ ಸ್ಥಾಪನೆಯಾಗಬೇಕು ಎಂದು ಯಾಕೆ ವಾದಿಸುತ್ತಿವೆ ಎಂಬುದು ಇಂತಹ ಪುರಾತನ ನಿಯಮ ನಿರ್ಬಂಧಗಳಿಂದ ಸ್ಪಷ್ಟವಾಗುತ್ತದೆ. ಆಗ ಶ್ರೇಷ್ಠವಾದುದೆಲ್ಲವೂ ಮೇಲುಜಾತಿಯವರಿಗೆ ಸಿಗುತ್ತಿತ್ತು.

ವೇದಗಳ ಪ್ರಕಾರ ಬ್ರಾಹ್ಮಣರ ಪಾರಮ್ಯತೆ ಸೃಷ್ಟಿಯ ಆದಿಯಿಂದಲೇ ಇದೆ. ಜ್ಞಾನಿಗಳಾದ ಬ್ರಾಹ್ಮಣರು ಬ್ರಹ್ಮನ ಬಾಯಿಂದ; ಆಳುವವರೂ ವೀರರೂ ಆದ ಕ್ಷತ್ರಿಯರು ಬ್ರಹ್ಮನ ತೋಳು ಗಳಿಂದ; ವ್ಯಾಪಾರಿಗಳೂ ವರ್ತಕರೂ ಆದ ವೈಶ್ಯರು ಬ್ರಹ್ಮನ ತೊಡೆಯಿಂದ; ಶ್ರಮಜೀವಿಗಳೂ ಕುಶಲಕರ್ಮಿಗಳೂ ಆದ ಮತ್ತು ಉಚ್ಛವರ್ಗದವರ ಸೇವೆಗೆಂದೇ ಮೀಸಲಾದ ಶೂದ್ರರು ಬ್ರಹ್ಮನ ಪಾದದಿಂದ ಉಗಮಿಸಿದರು ಎಂದು ಕತೆಯಿದೆ. ಅತ್ಯಂತ ಕೆಳಗಿನ ಸ್ಥಾನ ಅಸ್ಪೃಶ್ಯರಿಗೆ. ಅವರಿಗೆ ಯಾವುದೇ ಜಾತೀಯ ಸ್ಥಾನಮಾನ ಇಲ್ಲ. ಅವರು ಜಾತಿಯಲ್ಲಿ ಹುಟ್ಟಬೇಕಾದರೆ ಇನ್ನೊಂದು ಜನ್ಮವೆತ್ತಿ ಬರಬೇಕು. ಕರ್ಮ ಸಿದ್ಧಾಂತದಂತೆ ಅವರು ಈ ಜನ್ಮದಲ್ಲಿ ಉತ್ತಮ ಆದರ್ಶ ಜೀವನ ನಡೆಸಿದರೆ ಮುಂದಿನ ಜನ್ಮದಲ್ಲಿ ಉತ್ತಮ ಜಾತಿಯಲ್ಲಿ ಮರುಹುಟ್ಟು ಪಡೆಯಬಹುದು. ಯಾಕೆ ಕೆಲವು ಜನರಿಗೆ ಎಲ್ಲ ಸಂಪತ್ತು ಭೋಗಭಾಗ್ಯಗಳೂ ದೊರೆಯುತ್ತವೆ. ಕೆಲವರು ಮಾತ್ರವೇ ಯಾಕೆ ಬೆವರುಸುರಿಸಿ ಕಠಿಣ ದುಡಿಮೆಯಲ್ಲಿ, ದರಿದ್ರಾವಸ್ಥೆಯಲ್ಲಿ ಬದುಕಬೇಕಾಗುತ್ತದೆ ಎಂಬುದನ್ನು ಹಿಂದೂ ಧರ್ಮದ ಕರ್ಮ ಸಿದ್ಧಾಂತ ಈ ರೀತಿಯಾಗಿ ವಿವರಿಸುತ್ತದೆ.

ಜಾತಿ ಪದ್ಧತಿಯ ಹುಟ್ಟಿಗೆ ಸಂಬಂಧಿಸಿದಂತೆ ಇಷ್ಟೊಂದು ಊಹಾತ್ಮಕವಲ್ಲದ ಇನ್ನೊಂದು ವಿವರಣೆಯಿದೆ. ಇದು ಸುಮಾರು ಕ್ರಿ.ಪೂ. ಎರಡು ಸಾವಿರದಲ್ಲಿ ಭಾರತವನ್ನು ಪ್ರವೇಶಿಸಿದ ಅತಿಕ್ರಮಣಕಾರರಿಗೆ ಸಂಬಂಧಿಸಿದ್ದು. ಭಾರತಕ್ಕೆ ಧಾಳಿಯಿಟ್ಟ ಆರ್ಯರು ಸ್ಥಳೀಯ ದ್ರಾವಿಡರನ್ನು ತಮ್ಮ ಅಧೀನಕ್ಕೆ ಒಳಪಡಿಸಿಕೊಂಡರು. ಮೂಲನಿವಾಸಿಗಳ ಬಣ್ಣ ಕಪ್ಪು- ಈಗಿನ ಅಸ್ಪೃಶ್ಯರಂತೆ. ಆರ್ಯರು ಬೆಳ್ಳಗಿದ್ದರು- ಈಗಿನ ಬ್ರಾಹ್ಮಣರು ಉತ್ತಮ ಕುಲದವರಂತೆ. ಆಕ್ರಮಣಕಾರರು ಮೂರು ಉಚ್ಚಕುಲಗಳು ಹುಟ್ಟಿಕೊಂಡವು. ಸೋತ ಜನರನ್ನು ಕೆಳಜಾತಿಗೆ ಸೇರಿಸ[illegible] ಅಥವಾ ಅವರ್ಣೀಯರು ಎಂದು ಕರೆಯಲಾಯಿತು. ಗೆದ್ದವರು ಮತ್ತು ಸೋತವರ [illegible]

ವಿವಾಹ ಸಂಬಂಧವನ್ನು ತಪ್ಪಿಸುವುದಕ್ಕೆ ಅಸ್ಪೃಶ್ಯತೆಯ ವಿಧಾನವನ್ನು ಜಾರಿಗೆ ತರಲಾಯಿತು ಇದು ಊಹೆಗೂ ನಿಲುಕದ ಅತಿರೇಕ. ಎಲ್ಲ ಕೀಳುಕೆಲಸಗಳನ್ನೂ ಅಸ್ಪೃಶ್ಯರು ಮಾಡಬೇಕಾಯಿತು. ಅವರನ್ನು ಅಶುಚಿ, ಅಶುದ್ಧ ಎಂದು ಪರಿಗಣಿಸಲಾಯಿತು.

ಕಾಲಕ್ರಮೇಣ ಅನಿವಾರ್ಯವಾಗಿಯೇ ಪರಸ್ಪರ ಮಿಶ್ರಣ ನಡೆದುಹೋಯಿತು. ಇದರಿಂದ ಹೊಸ ಉಪವಿಭಾಗಗಳು ಹುಟ್ಟಿಕೊಂಡವು. ಆದರೆ ಈ ವಿಭಾಗೀಕರಣ ಮುಖ್ಯವಾಗಿ ಪರಂಪರಾಗತ ವೃತ್ತಿಯನ್ನು ಆಧರಿಸಿ ರೂಪುಗೊಂಡಿತು. ಪ್ರತಿಯೊಂದು ಉಪಜಾತಿ ಕೈಗೊಳ್ಳುವ ವೃತ್ತಿಯೂ ತಂದೆಯಿಂದ ಮಗನಿಗೆ ಪರಂಪರಾಗತವಾಗಿ ಬರುತ್ತಿತ್ತು. ಇಂದಿಗೂ ಕೂಡ ವೃತ್ತಿ ಸ್ವರೂಪವನ್ನು ಆಧರಿಸಿಯೇ ಜಾತಿಯನ್ನು ಹೇಳಲಾಗುತ್ತದೆ. ಹೊಸ ಸಂವಿಧಾನದ ಸಮಾನತೆಯ ಹಕ್ಕು ಎಂಬುದರ ಪ್ರಕಾರ ಜಾತಿಯನ್ನು ಆಧರಿಸಿ ಮಾಡುವ ಈ ಭೇದಬಾವ ಕೊನೆಯಾಗುತ್ತ ಬಂದಿದೆ. ಭಾರತದ ನಲವತ್ತು ದಶಲಕ್ಷ ಅಸ್ಪೃಶ್ಯರಿಗೆ ಸಮಾನ ಪೌರತ್ವ ಸಿಕ್ಕಿದೆ. ಅಸ್ಪೃಶ್ಯತೆಯನ್ನು ರದ್ದುಪಡಿಸಲಾಗಿದ್ದು ಯಾವುದೇ ರೀತಿಯಲ್ಲಿ ಅದನ್ನು ಆಚರಿಸುವುದು ನಿಷಿದ್ಧವಾಗಿದೆ. ಸ್ವತಂತ್ರ ಭಾರತಕ್ಕೆ ಕೈಗಾರಿಕೆಗಳು ಪ್ರವೇಶಿಸಿದ ಮೇಲೆ ಅವು ಕಾನೂನಿಗಿಂತ ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡಿದವು. ಯಾಕೆಂದರೆ ಯಂತ್ರ ನಿಮ್ಮ ಹುಟ್ಟಿನ ಮೂಲವನ್ನು ಕೇಳುವುದಿಲ್ಲ. ಅಸ್ಪೃಶ್ಯ ಮುಟ್ಟಿದರೆ ಅದಕ್ಕೆ ಮೈಲಿಗೆಯಾಗುವುದಿಲ್ಲ. ಯಂತ್ರಕ್ಕೆ ಯಾವುದೇ ಪೂರ್ವಾಗ್ರಹಗಳಿಲ್ಲ!

❑

ಸುಣ್ಣದ ಗುಂಡಿಯಲ್ಲಿ ಮಕ್ಕಳು

ಚರ್ಮ ಹದ ಮಾಡುತ್ತಿದ್ದ ಆ ಕತ್ತಲಿನ ಸ್ಥಳಕ್ಕೆ ನನ್ನ ಕಣ್ಣು ಸರಿಯಾಗಿ ಹೊಂದಿಕೊಳ್ಳುವವರೆಗೆ ಅಲ್ಲಿದ್ದ ಮಕ್ಕಳೆಲ್ಲ ಏನೋ ಕುಣಿತ ಮಾಡುತ್ತಿದ್ದಾರೆ ಎಂದೇ ತಿಳಿದಿದ್ದೆ. ಆದರೆ ಆ ಮಕ್ಕಳು ಆಸಿಡ್ ತುಂಬಿದ ಗುಣಿಗಳಲ್ಲಿ ಕಾಲಿನ ಕೆಳಗೆ ಪ್ರಾಣಿಯ ಚರ್ಮಗಳನ್ನು ಹಾಕಿಕೊಂಡು ಅವು ಸುಣ್ಣದ ನೀರಿನಲ್ಲಿ ಮುಳುಗುವಂತೆ ಮೇಲಿಂದ ಹಾರಿಹಾರಿ ತುಳಿಯುತ್ತಿದ್ದರು. ಒಂದು ಕಾಲನ್ನೆತ್ತಿ ಇನ್ನೊಂದು ಕಾಲನ್ನು ಕೆಳಗೆ ಹಾಕುವಾಗ ಏರಿಳಿಯುತ್ತಿದ್ದ ಅವರ ಕಂದುಬಣ್ಣದ ದೇಹಗಳ ಮೇಲೆ ಬೆವರಿನ ಹನಿಗಳು ಮಿನುಗುತ್ತಿದ್ದವು.

ಇವರೆಲ್ಲ ಅಸ್ಪೃಶ್ಯರು. ಹಸುವಿನ ಚರ್ಮ ಹದ ಮಾಡುವ ಕೆಲಸವನ್ನು ಇವರನ್ನು ಬಿಟ್ಟು ಬೇರೆ ಯಾರೂ ಮಾಡುವುದಿಲ್ಲ ಎಂದು ಅಯ್ಯಂಗಾರ್ ಹೇಳಿದರು. ಆತ ತಿರುಚನಾಪಳ್ಳಿ ಯಲ್ಲಿ ಇನ್‌ಶೂರೆನ್ಸ್ ಸೇಲ್ಸ್‌ಮ್ಯಾನ್. ಬಾಲಕಾರ್ಮಿಕರನ್ನು ಕುರಿತ ವಿಷಯಗಳ ಬಗ್ಗೆ ಆತನಿಗೆ ಅಪಾರ ಆಸಕ್ತಿ ಇತ್ತು. ತನ್ನ ಬಿಡುವಿನ ವೇಳೆಯನ್ನು ಆತ ತಿರುಚಿ ಟ್ಯಾನರಿ ವರ್ಕರ್ಸ್ ಯೂನಿಯನ್ನಿಗಾಗಿ ಮೀಸಲಿಟ್ಟಿದ್ದರು.

ಆ ದಿನ ಬೆಳಿಗ್ಗೆಯಷ್ಟೇ ನಾನು ತಿರುಚಿನಾಪಲ್ಲಿಯ ಸುಪ್ರಸಿದ್ಧವಾದ ದೇವಸ್ತಾನಕ್ಕೆ ಹೋಗಿದ್ದೆ. ಅದರ ಶಿಖರಕ್ಕೇರುವ ಮೆಟ್ಟಿಲುಗಳ ಮೇಲೆ ಬ್ರಾಹ್ಮಣರ ದೊಡ್ಡ ಸಮುದಾಯವೇ ಇತ್ತು. ಅವರ ಹಣೆಯ ಮೇಲೆ ವಿವಿಧ ಪವಿತ್ರ ಚಿಹ್ನೆಗಳು, ತುಟಿಗಳಲ್ಲಿ ಮಂತ್ರ, ನಾನು ಜಾತಿಯಿಲ್ಲದ ವಿದೇಶೀಯಳಾದ್ದರಿಂದ ನನಗೆ ಈ ದೇವಾಲಯದ ಒಳಗೆ ಬರಲು ಅವಕಾಶ ಕೊಟ್ಟರು. ತಿರುಚಿನಾಪಲ್ಲಿಯ ಯಾವುದೇ ಅಸ್ಪೃಶ್ಯನಿಗೂ ಎಂದೂ ಸಿಗದಂಥ ಅವಕಾಶ ನನಗೆ ಸಿಕ್ಕಿತ್ತು. ದೇವರ ವಿಗ್ರಹಗಳ ಅತ್ಯಂತ ಸಮೀಪದವರೆಗೆ ನನ್ನನ್ನು ಬಿಟ್ಟಿದ್ದರು. ಈ ದೇವಸ್ಥಾನದ ಕೆಳಗಿನ ಮೆಟ್ಟಿಲವರೆಗೆ ಬರುವ ಅವಕಾಶ ಕೂಡ ಅಸ್ಪೃಶ್ಯರಿಗಿರಲಿಲ್ಲ. ಅಷ್ಟೇಕೆ ದೇವಸ್ಥಾನಕ್ಕೆ ಬರುವ ಬ್ರಾಹ್ಮಣರ ಮನೆಗಳಿರುವ ದಾರಿಯಲ್ಲಿ ಕಾಲಿಡುವುದಕ್ಕೂ ಅವರಿಗೆ ಅವಕಾಶವಿರಲಿಲ್ಲ.

ಇದೇ ರೀತಿ ಅಸ್ಪೃಶ್ಯರಿಗೇ ಮೀಸಲಾದಂಥ ಸ್ಥಳಗಳಿದ್ದವು. ಅಲ್ಲಿಗೆ ಬ್ರಾಹ್ಮಣರು ಹೋಗುವು ದನ್ನು ಕಲ್ಪಿಸಿಕೊಳ್ಳಲೂ ಸಾಧ್ಯವಿರಲಿಲ್ಲ. ಹೀಗಿದ್ದಾಗ, ಹಸುವಿನ ಚರ್ಮ ಹದಮಾಡುವಂಥ ಸ್ಥಳಗಳಿಗೆ ಅವರು ಬರುವುದು ದೂರದ ಮಾತೇ ಸರಿ. ಆದರೆ ಅಯ್ಯಂಗಾರ್ ಕಮ್ಯು... ಆತ ಜಾತೀಯ ವ್ಯತ್ಯಾಸಗಳನ್ನು ವಿರೋಧಿಸುತ್ತಿದ್ದರು. ಇಂಥ ಬ್ರಾಹ್ಮಣರು ಮಾತ್ರ ... ಬರುವುದು ಸಾಧ್ಯವಿತ್ತು. ಆತ ಹೇಳಿದ "ಬೇಗ ಫೋಟೋ ತೆಗೆಯಿರಿ, ನಿಮ್ಮ ಹತ್ತಿರ ಕ್ಯಾ... ನೋಡಿದರೆ ಮಾಲೀಕ ಹೊರಗಟ್ಟುತ್ತಾನೆ. ಯಾಕೆಂದರೆ ಇಲ್ಲಿ ಕೆಲಸ ಮಾಡುತ್ತಿರುವ ...

ಹುಡುಗರು ೧೨ರ ವಯಸ್ಸಿಗೂ ಕೆಳಗಿನವರು." ಆದರೆ ಬೇಗ ಫೋಟೋ ತೆಗೆಯುವುದು ಸುಲಭವಾಗಿರಲಿಲ್ಲ. ಅಲ್ಲಿನ ಸೆಖೆಗೆ ಬೆವರು ಕಣ್ಣಿಗೇ ತೊಟ್ಟಿಕ್ಕುತ್ತಿತ್ತು. ಆಸಿಡ್ ಗುಂಡಿಗಳಿಂದ ಏಳುತ್ತಿದ್ದ ಬಿಸಿಯ ಆವಿಗೆ ಕಣ್ಣುರಿಯಿಂದ ನೀರು ಬರುತ್ತಿತ್ತು. ಎಲ್ಲೊ ಛಾವಣಿಯ ಬಿರುಕಿನಿಂದ ತೂರಿ ಬರುತ್ತಿದ್ದ ಒಂದಿಷ್ಟು ಬೆಳಕು, ಕತ್ತಲೆಯ ಗವಿಯಂತಿದ್ದ ಆ ಸ್ಥಳವನ್ನು ಬೆಳಗಿಸುವುದು ಸಾಧ್ಯವಿರಲಿಲ್ಲ. ನೀರು ತೊಟ್ಟಿಕ್ಕುತ್ತಿದ್ದ ಚರ್ಮಗಳ ರಾಶಿಯನ್ನು ಹೊತ್ತಿದ್ದ ಹೆಂಗಸರು ಆ ಬೆಳಕಿನ ಮುಂದೆ ಹಾದು ಹೋದಾಗಷ್ಟೆ ಕಾಣಿಸಿ ಅನಂತರ ಉಗ್ರಾಣ ಕೋಣೆಯ ಕತ್ತಲಲ್ಲಿ ಕರಗಿಹೋದರು. ಈ ಹೆಂಗಸರು ಗುಂಡಿಗಳಲ್ಲಿ ಹದಗೊಂಡ ಚರ್ಮಗಳ ರಾಶಿರಾಶಿಯನ್ನು ಮೇಲೆತ್ತಿ ಇರಿಸಿಕೊಳ್ಳುವಾಗ ಅದು ಹುಡುಗರ ಮೈಗೆ ತಾಗಿ ಅವರ ಮೈಮೇಲೆ ಆಸಿಡ್ ನೀರು ಬೀಳುತ್ತಿತ್ತು. ಹಾಗಾದಾಗ ಆ ಹುಡುಗರು ಮನಸ್ಸಿಲ್ಲದ ಮನಸ್ಸಿನಿಂದ ಗುಂಡಿಗಳಿಂದ ಮೇಲೆದ್ದು ಬಂದು ನಲ್ಲಿಯ ನೀರಿನಲ್ಲಿ ತೊಳೆದುಕೊಂಡು ಪುನಃ ಗುಂಡಿಗಳಿಗೆ ಇಳಿಯುತ್ತಿದ್ದರು. ಈ ಗುಣಿಗಳಲ್ಲಿ ೨೦ ನಿಮಿಷಕ್ಕಿಂತ ಹೆಚ್ಚು ಇದ್ದರೆ ರಕ್ತ ಒಸರುತ್ತದೆ. ಕೈಕಾಲಿನ ಚರ್ಮ ಸುಲಿದು ಬರುತ್ತದೆ ಎಂದರು ಅಯ್ಯಂಗಾರ್. ನಾನು ಈ ಮಧ್ಯೆ ಕೆಲವು ಫೋಟೋ ತೆಗೆದೆ. ಕ್ಯಾಮೆರಾ ಫ್ಲಾಶ್ ಆದಾಗ ಭಾರತದ ಬೇರೆ ಕಡೆ ಜನ ಮುತ್ತಿಕೊಳ್ಳುತ್ತಿದ್ದಂತೆ ಇಲ್ಲಿನವರು ಮಾಡಲಿಲ್ಲ. ನನ್ನ ಕ್ಯಾಮರಾ ಈ ಜನರ ಕುತೂಹಲ ಕೆರಳಿಸಲಿಲ್ಲ. ಅವರು ಕೆಲಸ ಬಿಟ್ಟು ಕಣ್ಣೆತ್ತಿಯೂ ನೋಡಲಿಲ್ಲ. ಇದಕ್ಕೆ ಕಾರಣವಿತ್ತು - ಅವರು ದಿನಕ್ಕೆ ಇಂತಿಷ್ಟು ಎಂದು ತಮಗೆ ಗೊತ್ತುಪಡಿಸಿದ್ದ ಚರ್ಮಗಳನ್ನು ಮುಗಿಸದಿದ್ದರೆ ಅವರಿಗೆ ಯಾವ ಹಣವೂ ಸಿಗುತ್ತಿರಲಿಲ್ಲ. ಅಲ್ಲಿ ಕೆಲಸ ಮಾಡುತ್ತಿದ್ದ ಹೆಂಗಸರ ಗುಂಪನ್ನು ನೋಡಿದೆ. ಅವರ ಮುಖಗಳು ಆಯಾಸದಿಂದ ಬಳಲಿದ್ದವು. ವಾಸ್ತವವಾಗಿ ತಮ್ಮ ವಯಸ್ಸಿಗಿಂತ ಹೆಚ್ಚು ವಯಸ್ಸಾದವರಂತೆ ಅವರು ಕಾಣುತ್ತಿದ್ದರು. ಆ ಗುಂಪಿನಿಂದ ಒಬ್ಬ ಹೆಂಗಸನ್ನು ಅಯ್ಯಂಗಾರ್ ಕರೆದರು. ಮಾಸಲು ನೀಲಿ ಸೀರೆಯ ಹೆಂಗಸು. ಅದರ ಮೇಲೆ ಆಸಿಡ್ ಕಲೆಗಳಿದ್ದವು. ಅವಳು ಕಪ್ಪಗೆ ಹೊಗೆಯಾಡುತ್ತಿದ್ದ ಚರ್ಮಗಳನ್ನು ಎಳೆದುಕೊಂಡು ಹೋಗುತ್ತಿದ್ದಳು. ಅವಳು ಗರ್ಭಿಣಿ. ಅವಳ ಕುಟುಂಬವೆಲ್ಲ ಇಲ್ಲೆ ಕೆಲಸ ಮಾಡುತ್ತಿತ್ತು. ಸಾಮಾನ್ಯವಾಗಿ ಅವರೆಲ್ಲ, ಅಂದರೆ ತಂದೆತಾಯಿ ಮಕ್ಕಳು ಇಡೀ ಕುಟುಂಬ ಇಲ್ಲಿ ಕೆಲಸ ಮಾಡುತ್ತದೆ. ಅವರು ಎಡಬಿಡದೆ ದುಡಿದರೆ ಮಾತ್ರ ಓವರ್‌ಟೈಂ ಹಣವನ್ನು ಗಳಿಸಬಹುದು ಎಂದರು ಅಯ್ಯಂಗಾರ್.

ಇಲ್ಲಿನ ಮೂಲ ಅಳತೆ, ನೂರು ಚರ್ಮಗಳನ್ನು ಹದಮಾಡುವುದು. ಅದನ್ನು ಮುಗಿಸಿದರೆ ಮಾತ್ರ ಹಣ. ಇನ್ನು ಓವರ್‌ಟೈಂ ಪ್ರಕಾರ ಕೆಲಸ ಮಾಡಿ ನೂರಾ ಎಂಬತ್ತು ಚರ್ಮ ಮುಗಿಸಿದರು ಅನ್ನಿ. ಆಗ ಅವರಿಗೆ ನೂರು ಚರ್ಮಗಳಿಗೆ ಮಾತ್ರ ಹಣ ಸಿಗುತ್ತದೆ. ಒಂದು ವೇಳೆ ಇನ್ನೂರನ್ನೂ ಪೂರ್ಣಗೊಳಿಸಿದರೂ ಎರಡನೇ ನೂರಕ್ಕೆ ೧/೨ರಷ್ಟು ಮಾತ್ರವೇ ಹಣ. ಪೂರ್ಣ ಹಣಕ್ಕಾಗಿ ಅವರು ನಿಗದಿಸಿದಷ್ಟು ಸಂಖ್ಯೆಯನ್ನು ಮುಗಿಸಲೇಬೇಕು. ಅದಕ್ಕೇ ಅವರು ಸ್ವಲ್ಪವೂ ಸಮಯ ವ್ಯರ್ಥಮಾಡುವಂತಿಲ್ಲ. ಬೇಗ ಮುಗಿಸಬೇಕು ಎಂಬ ಕಾರಣದಿಂದ ಸುರಕ್ಷಾ ಮುಂಜಾಗ್ರತೆಗಳನ್ನು ಅವರು ಕಡೆಗಣಿಸುತ್ತಾರೆ. ವಾಸ್ತವವಾಗಿ ಪ್ರತಿ ೧೫ ನಿಮಿಷಕ್ಕೊಂದು ಸಲ ಅವರು ಗುಂಡಿಯಿಂದ ಈಚೆ ಬಂದು ನ್ಯೂಟ್ರಲೈಜಿಂಗ್ ಬಾರ್ಕ್‌ಸಲ್ಯೂಶನ್ನಿನಲ್ಲಿ

ತೊಳೆದುಕೊಳ್ಳಬೇಕು. ಗುಣಿಯಲ್ಲಿ ಹಾಗೇ ಬಹಳ ಹೊತ್ತು ಇದ್ದರೆ ಅಂಗೈ ಅಂಗಾಲುಗಳ ಚರ್ಮ ಸುಟ್ಟು ಹೋಗುತ್ತದೆ. ಸೊಂಟದವರೆಗೆ ಬೆತ್ತಲೆ ಇರುವ ಮಕ್ಕಳ ಸೂಕ್ಷ್ಮವಾದ ಅಂಗಾಂಗಳ ಮೇಲೆ ತೀಕ್ಷ್ಣವಾದ ಸುಣ್ಣದ ನೀರು ತೀವ್ರ ಹಾನಿಮಾಡುತ್ತದೆ.

ತಿರುಚಿ ಟ್ಯಾನರಿ ವರ್ಕರ್ಸ್ ಸಂಘವು ಇವರಿಗೆಲ್ಲ ರಬ್ಬರ್ ಏಪ್ರನ್, ಗ್ಲೋವ್ಸ್ ಹಾಗೂ ಸರಳ ಸುರಕ್ಷಣಾ ಸಾಧನಗಳನ್ನು ಕೊಡಬೇಕೆಂದು ಹೋರಾಟ ಮಾಡುತ್ತಿತ್ತು. ಆದರೆ ಈ ದಿಸೆಯಲ್ಲಿ ಒಂದೊಂದು ಹೆಜ್ಜೆ ಮುಂದೆ ಹೋಗುವುದೂ ಬಹಳ ಕಷ್ಟವಿತ್ತು. ಮೊದಲನೆಯದಾಗಿ ಈ ಜನರನ್ನು ಮನುಷ್ಯರಂತೆಯೇ ಭಾವಿಸುವುದಿಲ್ಲ. ನಿಗದಿತ ಸಂಖ್ಯೆಯನ್ನು ಮುಗಿಸದಿದ್ದರೆ ಕಾರ್ಮಿಕರಿಗೆ ಹಣವೇ ಇಲ್ಲ. ಆದರೆ ಕನಿಷ್ಠ ಸಂಖ್ಯೆಯ ಚರ್ಮಗಳನ್ನು ಒದಗಿಸದಿದ್ದರೆ ಕನಿಷ್ಠ ವೇತನವನ್ನು ನೀಡಬೇಕು ಎಂಬ ಬಾಧ್ಯತೆ ಮಾಲಿಕರಿಗಿರಲಿಲ್ಲ. ಒಂದು ವೇಳೆ ಸಾಕಷ್ಟು ಚರ್ಮ ಸಿಗದಿದ್ದರೆ ಅಥವಾ ಮಾರುಕಟ್ಟೆಯ ಸ್ಥಿತ್ಯಂತರಗಳಿಂದಾಗಿ ಅವನು ಚರ್ಮಗಳ ಖರೀದಿ ಮಾಡುತ್ತಿರಲಿಲ್ಲ ಅಥವಾ ಖರೀದಿಸುವುದಕ್ಕೆ ವಿಳಂಬ ಮಾಡುತ್ತಿದ್ದ. ಆಗ ತಾನು ಒದಗಿಸಿದಷ್ಟು ಚರ್ಮಕ್ಕೆ ಮಾತ್ರ ಕೂಲಿ ಕೊಡುತ್ತಿದ್ದ ಅಥವಾ ಕೆಲಸವನ್ನೇ ನಿಲ್ಲಿಸಿಬಿಡುತ್ತಿದ್ದ. ಇಂಥ ಕೊರತೆಯ ಸಮಯದಲ್ಲಿ ಅವನ ಅನುಮತಿ ಇಲ್ಲದೆ ಅವನ ಕಾರ್ಮಿಕರು ಬೇರೆ ಕಾರ್ಖಾನೆಗೆ ಹೋಗುವಂತಿರಲಿಲ್ಲ. ಯಾಕೆಂದರೆ ಅವರು ಮನೆ, ಆಹಾರ ಪದಾರ್ಥಗಳು ಮುಂತಾದುವುಕ್ಕಾಗಿ ಯಾವಾಗಲೂ ಇವನ ಸಾಲದ ಋಣದಲ್ಲೇ ಇರುತ್ತಿದ್ದರು. ಅವರಲ್ಲಿ ಬಹುತೇಕ ಎಲ್ಲರೂ ಅವನಿಗೆ ೫೦-೬೦ ರೂಪಾಯಿಗಳಷ್ಟು ಸಾಲದ ಬಾಕಿ ಉಳಿಸಿಕೊಂಡವರೇ ಆಗಿದ್ದರು. ಇದು ಅವರ ಜೀವನಪರ್ಯಂತ ಮುಂದುವರೆಯುತ್ತದೆ. ಕೆಲವು ಉದಾರ ಮನೋಭಾವದ ಮಾಲೀಕರು ಮಾತ್ರ ತಮ್ಮಲ್ಲಿ ಕೆಲಸವಿಲ್ಲದಾಗ ಕಾರ್ಮಿಕರನ್ನು ಬೇರೆ ಕಾರ್ಖಾನೆಗಳಿಗೆ ಕಳಿಸಿ ನಂತರ ತಮ್ಮಲ್ಲಿ ಕೆಲಸ ಆರಂಭವಾದಾಗ ವಾಪಸ್ಸು ಕರೆಸಿಕೊಳ್ಳುತ್ತಾರೆ ಎಂದು ಅಯ್ಯಂಗಾರ್ ವಿವರಿಸಿದರು.

ನಾನು ಭೇಟಿ ನೀಡಿದ ಟ್ಯಾನರಿಯ ಮಾಲಿಕ ಇಂತಹ ಉದಾರಿಯಲ್ಲ ಎಂದು ಗೊತ್ತಾಯಿತು. ಅಷ್ಟರಲ್ಲಿ ಆತ ಬಂದೇಬಿಟ್ಟ. ದುಂಡುದುಂಡಾಗಿ ಕೊಬ್ಬಿದ್ದ ಅಚ್ಚ ಬಿಳಿ ಉಡುಗೆಯಲ್ಲಿದ್ದ ಅವನು ಕೆಂಪು ತುರ್ಕಿ ಟೋಪಿ ಹಾಕಿಕೊಂಡಿದ್ದ. ಬರುತ್ತಿರುವಾಗಲೇ ಕೂಗಾಡಿಕೊಂಡೇ ಬಂದ. ಹಿಂದೂಗಳ ಈ ಭಾಗದಲ್ಲಿ ಮುಸ್ಲಿಂ ವ್ಯಕ್ತಿಯನ್ನು ಕಂಡು ನನಗೆ ಆಶ್ಚರ್ಯವಾಯಿತು. ಆದರೆ ಭಾರತದ ವಿಭಜನೆಯ ನಂತರವೂ ಮುಸ್ಲಿಮರು ಮಾತ್ರವೇ ತೊಗಲಿನ ವ್ಯವಹಾರದಲ್ಲಿ ಮುಂದುವರೆದಿದ್ದರು. ಹಸುವಿನ ಚರ್ಮಗಳನ್ನು ಹದಗೊಳಿಸುವ ಕೆಲಸವನ್ನು ಹಿಂದೂಗಳು ಮಾಡದಿದ್ದುದು ಇದಕ್ಕೆ ಕಾರಣ. ನಾನು ಸ್ವಲ್ಪ ಹೊತ್ತು ಅಲ್ಲೆ ಇದ್ದು ಈ ಮಾಲಿಕನಿಗೆ ಕೆಲವು ಪ್ರಶ್ನೆಗಳನ್ನು ಕೇಳಬೇಕು ಎಂದುಕೊಂಡಿದ್ದೆ. ಆದರೆ ಜಾಸ್ತಿ ಹೊತ್ತಿದ್ದರೆ ಅಯ್ಯಂಗಾರ್‌ಗೆ ಕಷ್ಟವಾಗುತ್ತಿತ್ತು. ಅವನು ಈ ಟ್ಯಾನರಿ ಕಾರ್ಮಿಕ ಸಂಘದ ಚಟುವಟಿಕೆಗಳಿಂದಾಗಿ ಆಗಲೇ ಸಾಕಷ್ಟು ವೈರ ಕಟ್ಟಿಕೊಂಡಿದ್ದ. ಮಾಲೀಕ ಪ್ರತಿತಿಂಗಳು ತನಗೆ ೧೨% ಲಾಭ ಮಾತ್ರ ಇದೆ ಎಂದು ಲೆಕ್ಕ ಕೊಡುತ್ತಾನೆ. ಆದರೆ ತಮ್ಮದೇ ಹೂಡಿಕೆ

ಮಾಡಿ ವರ್ಷಕ್ಕೆ ೧೪೪% ಮಾತ್ರ ಲಾಭವಿರುವ ವ್ಯವಹಾರಗಳ ಸಂಖ್ಯೆ ತೀರ ಕಡಿಮೆ. ಅದರಲ್ಲಿಯೂ ಟ್ಯಾನರಿಗಳನ್ನು ಇಷ್ಟು ಕಡಿಮೆ ಲಾಭಕ್ಕೆ ನಡೆಸುತ್ತಾರೆಂದರೆ ನಂಬಲು ಸಾಧ್ಯವಿಲ್ಲ. ಯಾಕೆಂದರೆ ಲೆದರ್‌ನಲ್ಲಿ ಬಹಳ ಲಾಭವಿದೆ. ಯುದ್ಧದ ವರ್ಷಗಳಲ್ಲಿ ಈ ಕೈಗಾರಿಕೆಗಳು ಬಹಳ ಲಾಭ ಮಾಡಿದವು. ಆದಾಯ ತೆರಿಗೆ ಅಂಕಿಅಂಶಗಳ ಪ್ರಕಾರ ನಾವು ಈಗ ನೋಡಿದಂಥ ಸುಮಾರು ೩೦೦ ಕಾರ್ಮಿಕರನ್ನು ಹೊಂದಿರುವ ಟ್ಯಾನರಿ ಕಳೆದ ವರ್ಷ ಒಂದು ಲಕ್ಷ ಎಂಬತ್ತು ಸಾವಿರ ರೂಪಾಯಿ ಆದಾಯ ಗಳಿಸಿತ್ತು. ಆದರೆ ಈ ಜನ ಯಾವ ಲೆಕ್ಕವನ್ನು ಬರಹದಲ್ಲಿಡುವುದಿಲ್ಲ. ತೆರಿಗೆ ತಪ್ಪಿಸುವುದು ಅವರ ಉದ್ದೇಶ. ಒಟ್ಟಿನಲ್ಲಿ ಅವರ ನಿಜವಾದ ಲಾಭ ಎಷ್ಟು ಎಂಬುದರ ಲೆಕ್ಕ ಸಿಗುವುದಿಲ್ಲ. ಮಕ್ಕಳನ್ನು ಮಾಲೀಕನೇ ನೇರವಾಗಿ ನೇಮಿಸಿ ಕೊಂಡಿದ್ದಾನೆ. ಅವರಿಗೆ ತಿಂಗಳಿಗೆ ಆರೋ ಏಳೋ ರೂಪಾಯಿ ಕೂಲಿ ಕೊಡುತ್ತಾನೆ. ಆದರೆ ಓವರ್‌ಟೈಂ ಹಣ ಗಳಿಸುವ ಉದ್ದೇಶದಿಂದ ತಂದೆ ತಾಯಿಗಳು ತಮ್ಮೊಂದಿಗೆ ಮಕ್ಕಳನ್ನು ಕರೆತಂದು ಅವರೊಂದಿಗೆ ಕೆಲಸ ಮಾಡಿದಾಗ ಆ ಮಕ್ಕಳಿಗೆ ಪ್ರತ್ಯೇಕವಾಗಿ ಏನೂ ಸಿಗುವುದಿಲ್ಲ. ಮದ್ರಾಸಿನ ಈ ಭಾಗದಲ್ಲೆಲ್ಲ ಟ್ಯಾನರಿ ಮಾಲೀಕರಿಂದ ಮಕ್ಕಳಿಗಾಗಿ ಬಹಳ ಬೇಡಿಕೆ ಇರುತ್ತಿತ್ತು. ಯಾಕೆಂದರೆ ಚರ್ಮವನ್ನು ತುಳಿಯುವುದು ಯಾರು ಬೇಕಾದರೂ ಮಾಡಬಹುದಾದ ಸರಳವಾದ ಕೆಲಸವಾಗಿತ್ತು ಮತ್ತು ಇದಕ್ಕೆ ಕೊಡಬೇಕಾಗಿದ್ದ ಕೂಲಿಯೂ ಕಡಿಮೆ.

ಮಕ್ಕಳನ್ನು ಅಪಾಯಕಾರಿಯಾದ ಕೆಲಸದಲ್ಲಿ ತೊಡಗಿಸುವುದು ಕಾನೂನಿಗೆ ವಿರುದ್ಧ ಎಂದು ಹೊಸ ಕಾನೂನು ತಿಳಿಸುತ್ತದೆ. ಆದರೆ ಇದುವರೆಗೂ ಟ್ಯಾನರಿಗಳನ್ನು 'ಅಪಾಯಕಾರಿ' ವೃತ್ತಿಯ ಗುಂಪಿಗೆ ಸೇರಿಸಿಲ್ಲ. ಹಿಂದಿನ ಕಾರ್ಖಾನೆಗಳ ಕಾಯಿದೆಯೂ ಸಹ ೧೨ ವರ್ಷಕ್ಕೆ ಕಡಿಮೆ ಇರುವ ಮಕ್ಕಳನ್ನು ನೇಮಿಸಿಕೊಳ್ಳುವುದು ಕಾನೂನುಬಾಹಿರ ಎಂದು ತಿಳಿಸುತ್ತದೆ. ೧೨ ರಿಂದ ೧೮ರ ನಡುವಿನ ವಯಸ್ಸಿನವರನ್ನು ಪ್ರಾಯದವರು ಎಂದು ವರ್ಗೀಕರಿಸಲಾಗುತ್ತಿತ್ತು. ಮತ್ತು ಅವರಿಗೆ ಪಾರ್ಟ್‌ಟೈಂ ಕೆಲಸ ಮಾತ್ರ ಕೊಡಬೇಕು ಎಂದಿದೆ. ಪಾರ್ಟ್‌ಟೈಂ ಎಂದರೆ ಆಸಿಡ್ ಗುಂಡಿಗಳಲ್ಲಿ ಆರು ಗಂಟೆ ಕಾಲ ಕೆಲಸ. ವಯಸ್ಕರು ಇಂತಹ ಗುಂಡಿಗಳಲ್ಲಿ ೯ ರಿಂದ ೧೨ ಗಂಟೆಗಳವರೆಗೆ ಕೆಲಸ ಮಾಡಬೇಕು. ಕಾರ್ಖಾನೆ ಕಾಯಿದೆ ಪ್ರಕಾರ ಪ್ರತಿ ಎರಡು ವಾರಗಳಿಗೊಮ್ಮೆ ಒಂದು ದಿನ ರಜೆ ಕೊಡಬೇಕು. ಆದರೆ ಈ ಸೌಲಭ್ಯ ಯಾರಿಗೂ ಸಿಕ್ಕಿರಲಿಲ್ಲ.

ಇನ್‌ಸ್ಪೆಕ್ಟರು ತಿಂಗಳಿಗೆ ಒಂದು ಸಲ ಬರುತ್ತಾನೆ. ಆತ ಕಾರ್ಮಿಕರ ಕಷ್ಟ ಸುಖ ವಿಚಾರಿಸುವು ದಿಲ್ಲ. ಬಾಸ್ ಜೊತೆ ಕುಳಿತು ಟೀ ಕುಡಿಯುತ್ತಾನೆ. ಒಂದು ವೇಳೆ ಆತ ಕಾರ್ಖಾನೆಯ ಒಳಗೆ ಹೋದರೆ ಚಿಕ್ಕಮಕ್ಕಳನ್ನೆಲ್ಲ ಹಿಂದಿನ ಬಾಗಿಲಿನಿಂದ ಹೊರಗೆ ಕಳಿಸಿಬಿಡುತ್ತಾರೆ. ಪ್ರಶ್ನೆ ಕೇಳಿದರೆ ಸ್ವಲ್ಪ ದೊಡ್ಡ ವಯಸ್ಸಿನ ಹುಡುಗರಿಗೆ ಸುಳ್ಳು ಹೆಸರು ನೀಡಿ ಸರಿಪಡಿಸಲಾಗುತ್ತದೆ. ಸರ್ಕಾರದ ಕಾರ್ಮಿಕ ಇಲಾಖೆಯಿಂದ ಇಂಥ ಕಾರ್ಖಾನೆಗಳನ್ನು ನಿಯಂತ್ರಣ ಮಾಡುವ

ವಿಚಾರ ತುಂಬ ಚೆನ್ನಾಗಿದೆ. ಆದರೆ ಒಬ್ಬ ಇನ್‌ಸ್ಪೆಕ್ಟರಿಗೆ ಸರ್ಕಾರದಿಂದ ತಿಂಗಳಿಗೆ ೭೫ ರೂ. ಸಂಬಳ ಸಿಕ್ಕರೆ ಟ್ಯಾನರಿಯವರಿಂದ ಅವರಿಗೆ ನೂರು ರೂಪಾಯಿ ಸಿಗುತ್ತದೆ.

ಚರ್ಮ ಹದ ಕೈಗಾರಿಕೆಯ ಸ್ವರೂಪದ ಕಾರಣದಿಂದಲೇ ಅದಕ್ಕೆ ಕೆಲವೊಂದು ವಿನಾಯಿತಿಗಳು ಸುಲಭವಾಗಿ ಸಿಕ್ಕಿಬಿಡುತ್ತವೆ. ಅಮೆರಿಕಾದಲ್ಲಿ ಉಕ್ಕುಕಾರ್ಖಾನೆಯ ಆರಂಭದ ದಿನಗಳಲ್ಲಿ ಕರಗಿದ ಲೋಹದ ಕೆಲಸ ಮಾಡಬೇಕಾಗಿದ್ದ ಕಾರ್ಮಿಕರು ದಿನಕ್ಕೆ ಎಂಟು ಗಂಟೆಗಳ ಕೆಲಸ ಮಾತ್ರ ಇರಬೇಕು ಎಂದು ಹೇಳಿದಾಗ ಇದೇ ರೀತಿಯ ವಾದ ಮುಂದಿಟ್ಟರು ಎಂಬ ವಿಷಯವನ್ನು ನಾನು ಕೇಳಿದ್ದೆ. ಇಂತಹ ವಿನಾಯಿತಿಗಳಿಂದಾಗಿ ೧೫ ದಿನಗಳಿಗೆ ಒಮ್ಮೆ ರಜೆ ಕೊಡುವ ನಿಯಮವನ್ನು ಜಾರಿಗೆ ತರುವುದೂ ಕಷ್ಟವಾಗಿತ್ತು. ಆದರೆ ಕಾರ್ಮಿಕ ಸಂಘಟನೆಯು ಮಕ್ಕಳಿಗೆ ವಾರಕ್ಕೆ ಒಂದು ದಿನ ರಜೆ ಕೊಡಬೇಕು ಎಂಬ ವಿಷಯದ ಬಗ್ಗೆ ಹೋರಾಟ ನಡೆಸಿತ್ತು.

ಬಹುತೇಕ ಎಲ್ಲ ಭಾರತೀಯರೂ ಯಾವಾಗಲೂ ಕೇಳಿಯೇ ಕೇಳುವಂತೆ ಅಯ್ಯಂಗಾರ್ ಕೂಡ ನೀಗ್ರೋಗಳು ಮತ್ತು ಜಿಮ್‌ಕ್ರೋಯಿಸಂ ಬಗ್ಗೆ ಕೇಳಿದರು. ನಾನು ಯಾವಾಗಿನಂತೆಯೇ "ನಮ್ಮ ಪ್ರಜಾಪ್ರಭುತ್ವ ನಿಜಕ್ಕೂ ಈ ಭೇದ ನೀತಿಯನ್ನು ವಿರೋಧಿಸುತ್ತದೆ" ಎಂದು ವಿವರಿಸಲು ಯತ್ನಿಸಿದಾಗ ಅಯ್ಯಂಗಾರ್ ತಲೆ ಆಡಿಸಿ "ಇಲ್ಲ. ನೀಗ್ರೋಗಳು ನಿಮ್ಮಲ್ಲಿ ನಮ್ಮ ಅಸ್ಪೃಶ್ಯರಿದ್ದಂತೆ" ಎಂದರು.

ಈ ಜಾತಿಭೇದ ಸಮಸ್ಯೆಯ ಬಗ್ಗೆ ನಿಮಗೇಕೆ ಇಷ್ಟೊಂದು ಆಸಕ್ತಿ ಎಂದು ಅಯ್ಯಂಗಾರ್‌ಗೆ ಕೇಳಿದೆ. ಯಾಕೆಂದರೆ ಈ ಜಾತಿಯ ಬದಲಿಗೆ ಏನಾದರೊಂದು ರಚನಾತ್ಮಕವಾದುದನ್ನು ನಿರ್ಮಿಸಬೇಕು. ಮುಸ್ಲಿಂಲೀಗ್, ಹಿಂದೂ, ಹರಿಜನ ಇತ್ಯಾದಿ ಕೃತಕ ಭೇದಭಾವಗಳನ್ನು ತೊಡೆದು ಹೊಸದೊಂದು ಪ್ರಜಾಸತ್ತಾತ್ಮಕ ವ್ಯವಸ್ಥೆ ತರುವುದು ಮುಖ್ಯ ಎಂದರು. ನೀವು ಕಮ್ಯುನಿಸ್ಟ್ ಆಗಿದ್ದೇಕೆ ಎಂದು ಅವರನ್ನು ಕೇಳಿದಾಗ ಭಾರತದಲ್ಲಿ ಕಮ್ಯುನಿಸ್ಟ್ ಪಕ್ಷ ದಮನಕ್ಕೊಳಗಾದವರ ಪರವಾಗಿ ಹೋರಾಡುತ್ತದೆ. ಅದಕ್ಕೇ ಎಂದರು. ಭಾರತದಲ್ಲಿ ಕಮ್ಯುನಿಸ್ಟ್ ಪಕ್ಷವು ಕೆಲವು ತುಂಬ ಬುದ್ಧಿವಂತ, ಸುಸಂಸ್ಕೃತ ನಿಷ್ಠಾವಂತ ಯುವಕರನ್ನು ಆಕರ್ಷಿಸಿದ್ದರಲ್ಲಿ ಆಶ್ಚರ್ಯವೇನಿಲ್ಲ. ಇಲ್ಲಿ ಈ ಪಕ್ಷದ ಗಾತ್ರ ದೊಡ್ಡದಿಲ್ಲ. ಈ ಯುವಕರು ಮಾಸ್ಕೋ ತಾಳಕ್ಕೆ ಕುಣಿಯುವುದಿಲ್ಲ. ಬದಲಾಗಿ, ಈ ದೇಶದಲ್ಲಿನ ದಮನಕ್ಕೊಳಗಾದ ಜನರ ಸ್ಥಿತಿಗತಿಗಳೇ ಅವರನ್ನು ಈ ಪಕ್ಷದ ವತಿಯಿಂದ ಹೋರಾಡುವಂತೆ ಒತ್ತಾಯಿಸಿವೆ ಅನ್ನಿಸದಿರದು. ಇತರ ರಾಜಕೀಯ ಪಕ್ಷಗಳನ್ನು ಧೂಳೀಪಟ ಮಾಡಿ, ಮೂಲ ವಿಷಯಗಳನ್ನೇ ಮರೆತು ಬೇರೆ ಕಡೆ ಗಮನ ಕೇಂದ್ರೀಕರಿಸುವಂತೆ ಮಾಡುವವರ ಪ್ರಭಾವಕ್ಕೆ ಇವರು ಒಳಗಾಗಲಿಲ್ಲ.

ಗಾಂಧಿ, ನೆಹರೂ ಒಳ್ಳೆಯವರಿರಬಹುದು. ಆದರೆ ಭಾರತದ ಬಹುತೇಕ ನಾಯಕತ್ವ ಇಂದು ಬಂಡವಾಳಶಾಹಿಗಳ ಹಾಗೂ ಶ್ರೀಮಂತರ ಪರವಾಗಿದೆ ಎಂದು ಅಯ್ಯಂಗಾರ್ ಹೇಳಿದರು.

ಅಯ್ಯಂಗಾರ್ ತಾವು ಕಮ್ಯುನಿಸ್ಟ್ ಆಗಿದ್ದು ಹೇಗೆ ಎಂದು ವಿವರಿಸಿದರು. ಕಾಲೇಜಿನಲ್ಲಿದ್ದಾಗ ಅವರಿಗೆ ಮೊದಲಬಾರಿಗೆ ಕಮ್ಯುನಿಸ್ಟ್ ಸಾಹಿತ್ಯದ ಪರಿಚಯವಾಯಿತು. ಹಿಂದೂಧರ್ಮದ ಪಂಡಿತರ ಕೇಂದ್ರಸ್ಥಾನ ಎಂದು ಪ್ರಸಿದ್ಧವಾದ ಬನಾರಸ್ ವಿಶ್ವವಿದ್ಯಾಲಯದಲ್ಲಿ ಅವರು ಓದಿದರು. ಆ ಸಮಯದಲ್ಲಿ ಕಮ್ಯುನಿಸ್ಟ್ ಪಕ್ಷ ಕಾನೂನುಬಾಹಿರ ಪಕ್ಷವಾಗಿತ್ತು. ಅವರ ಕೆಲವು ಸ್ನೇಹಿತರು, ತಮ್ಮ ಕೋಣೆಗಳನ್ನು ಶೋಧಿಸುವರೆಂದು ಗೊತ್ತಾದಾಗ ನಿಷೇಧಿಸಲ್ಪಟ್ಟ ಪುಸ್ತಕಗಳನ್ನು ತಂದು ಅಯ್ಯಂಗಾರ್ ಕೋಣೆಯಲ್ಲಿಟ್ಟರು. ಕೋಣೆಯಲ್ಲಿ ಬಚ್ಚಿಟ್ಟ ಈ ಪುಸ್ತಕಗಳ ಬಗ್ಗೆ ಅಯ್ಯಂಗಾರ್‌ಗೆ ಕುತೂಹಲ ಹುಟ್ಟಿತು. ಸೋವಿಯತ್ ಯೂನಿಯನ್ ಬಗ್ಗೆ, ಮಾರ್ಕ್ಸ್ ಬಗ್ಗೆ ಹಲವು ಪುಸ್ತಕ ಓದಿದರು. ಕಾಲೇಜಿನಿಂದ ಹೊರಬರುವ ವೇಳೆಗೆ, ದುಡಿಯುವ ಜನರಿಗಾಗಿ, ರೈತರಿಗಾಗಿ, ಬಡಜನರ ಪರವಾಗಿ ಹೋರಾಡಬೇಕು ಎಂಬ ಹಂಬಲ ಆತನಲ್ಲಿ ತುಂಬಿಕೊಂಡಿತ್ತು. ಒಂದು ಸಲ ಅವರು ಫೌಂಡ್ರಿಕಾರ್ಮಿಕರ ಮುಷ್ಕರದ ನಾಯಕತ್ವ ವಹಿಸಿದಾಗ ಅವರನ್ನು ಬಂಧಿಸಿ ಜೈಲಿಗೆ ಹಾಕಲಾಯಿತು. ಜೈಲಿನಲ್ಲಿ ಅವರಿಗೆ ಇನ್ನೂ ದೊಡ್ಡದೊಡ್ಡ ಕಾಮ್ರೇಡುಗಳ ಪರಿಚಯವಾಯಿತು. ೧೯೪೨ರಲ್ಲಿ ಕಮ್ಯುನಿಸಂ ಅಕ್ರಮವಲ್ಲ ಎಂದು ನಿರ್ಣಯಿಸಿದಾಗ ಇವರೆಲ್ಲರ ಬಿಡುಗಡೆಯಾಯಿತು. ದೇಶವನ್ನು ಸುತ್ತಿ ಪರಿಚಯ ಮಾಡಿಕೊಳ್ಳುವ ಹಂಬಲದಿಂದ ಆತ ಭಾರತದ ವಿವಿಧ ಭಾಗಗಳಲ್ಲಿ ಸುತ್ತಾಡಿದರು. ಈ ದೇಶದ ಮತ್ತು ಇಲ್ಲಿನ ಕಾರ್ಮಿಕರ ಸ್ಥಿಗತಿಗಳನ್ನು ತಿಳಿಯುತ್ತ ಬಂದಂತೆ ಸ್ವಾತಂತ್ರ್ಯವನ್ನು ಕುರಿತ ಅವರ ಕಲ್ಪನೆಯೇ ಬದಲಾಯಿತು. ನಾವು ಎಷ್ಟೊಂದು ಕಾಲದಿಂದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ್ದೇವೆ. ಆದರೆ ಎಲ್ಲಿ ಕಾರ್ಮಿಕರ ಶೋಷಣೆ ಇರುವುದಿಲ್ಲವೋ ಅದು ನಿಜವಾದ ಸ್ವಾತಂತ್ರ್ಯ. ಅದಕ್ಕಾಗಿ ನಾನು ಹೋರಾಡಬೇಕು. ದುಡಿಯಬೇಕು ಎಂದು ನಿರ್ಧರಿಸಿಕೊಂಡರು.

ಅಯ್ಯಂಗಾರ್ ತಮ್ಮ ಬಗ್ಗೆ ಇಷ್ಟು ಹೇಳಿ ಮುಗಿಸುವ ಹೊತ್ತಿಗೆ ಕೆಂಪು ಬ್ಯಾನರ್ ಹಿಡಿದ ಯುವಕರ ಒಂದು ಸಣ್ಣ ಮೆರವಣಿಗೆ ನಮಗೆ ಎದುರಾಯಿತು. ಆ ಬ್ಯಾನರಿನ ಒಂದು ಮೂಲೆಯಲ್ಲಿ ಸುತ್ತಿಗೆ ಮತ್ತು ಕುಡುಗೋಲು ಚಿಹ್ನೆ. ಇನ್ನೊಂದು ಕಡೆ ಬಿಳಿಯ ಬಟ್ಟೆಯಲ್ಲಿ ತಮಿಳು ಅಕ್ಷರಗಳ ಬರಹ. "ಇವರು ತಿರುಚಿ ಟ್ಯಾನರಿ ಕಾರ್ಮಿಕ ಸಂಘದ ಪ್ರತಿನಿಧಿಗಳು" ಎಂದು ಅಯ್ಯಂಗಾರ್ ಹೇಳುವಾಗ ಇವರೆಲ್ಲ ತಮ್ಮ ಸ್ವಂತ ಮಕ್ಕಳು ಎಂಬಷ್ಟು ಹೆಮ್ಮೆ ಅವರ ದನಿಯಲ್ಲಿತ್ತು. ಮುಂದಿನ ಹಳ್ಳಿಯಲ್ಲಿ ದೊಡ್ಡ ಆಲದ ಮರದ ಕೆಳಗೆ ಇಂದು ರಾತ್ರಿ ಸಂಘದ ಸಭೆ ಇದೆ. ಅದಕ್ಕಾಗಿ ಅವರು ಟ್ಯಾನರಿಗಳಲ್ಲಿ ದುಡಿಯುವ ಮಕ್ಕಳನ್ನು ಕರೆಯುತ್ತಿದ್ದಾರೆ ಎಂದು ಗೊತ್ತಾಯಿತು.

ಬಹುಮಂದಿ ಮಕ್ಕಳೇ ಇದ್ದ ಆ ವಿಶೇಷ ಯೂನಿಯನ್ ಸಭೆಯ ಫೋಟೋಗಳನ್ನು ಆ ರಾತ್ರಿ ನಾನು ತೆಗೆದೆ. ಹುಡುಗರೆಲ್ಲ ತಮ್ಮ ಕೆಲಸವನ್ನು ಮುಗಿಸಿಕೊಂಡು ಸಂಜೆಗತ್ತಲು ಕವಿಯುತ್ತಿರುವಾಗ ಸಭೆಗೆ ಬರತೊಡಗಿದರು. ಆಲದ ಮರದ ಕೆಳಗೆ ಸದ್ದು ಮಾಡದೆ ಕುಳಿತರು. ಸಾಕಷ್ಟು ಕತ್ತಲಾಗುತ್ತಾ ಬಂದಂತೆ ಲೆದರ್ ಕಾರ್ಮಿಕರ ಪ್ರವಾಹವೇ ಹರಿದು ಬಂದಿತು. ಆಲದ ಮರದ ವ್ಯಾಪ್ತಿಯಿಂದ ಆಚೆಗೂ ಬಹುದೂರದವರೆಗೆ ಅಸಂಖ್ಯಾತ ಜನ. ಅವರೆಲ್ಲ ಅಸ್ಪೃಶ್ಯರು. ಇದರಲ್ಲಿ ಮಕ್ಕಳ ಸಂಖ್ಯೆಯೇ ಅಧಿಕ. ಇಷ್ಟು ಗಂಭೀರ ಮುಖಮುದ್ರೆಯ

ಮಕ್ಕಳನ್ನು ನಾನು ಅದುವರೆಗೆ ನೋಡಿರಲಿಲ್ಲ. ಲಾಟೀನು ದೀಪದ ಬೆಳಕು ಮುಂದಿನ ಸಾಲಿನಲ್ಲಿ ಕುಳಿತ ಮಕ್ಕಳ ಮುಖದ ಮೇಲೆ ಬಿದ್ದಿತ್ತು. ಆ ಬೆಳಕಿನಲ್ಲಿ ಅವುಗಳ ನಿರುತ್ಸಾಹ ತುಂಬಿದ ಕಣ್ಣುಗಳು ಕಂಡವು. ವಯಸ್ಸಿಗೆ ಮೀರಿದ ಪ್ರಬುದ್ಧತೆ ಆ ಮಕ್ಕಳಲ್ಲಿತ್ತು. ಯೂನಿಯನ್ ಬೇಡಿಕೆಗಳ ಪಟ್ಟಿಯಿದ್ದ ಕೆಂಪು ಬ್ಯಾನರ್, ದೀಪದ ಬೆಳಕಿನಲ್ಲಿ ಎದ್ದು ಕಾಣುತ್ತಿತ್ತು. ಅಲ್ಲಿ ಮುಖ್ಯವಾಗಿ ನಾಲ್ಕು ಬೇಡಿಕೆಗಳಿದ್ದವು. ೧. ವಾರಕ್ಕೊಂದು ದಿನ ರಜೆ. ೨. ಕನಿಷ್ಠ ಕೂಲಿಯನ್ನು ಹೆಚ್ಚಿಸುವುದು. ೩. ಓವರ್ ಟೈಂ ಕೆಲಸಕ್ಕೆ, ತಕ್ಕ ಹೆಚ್ಚುವರಿ ಹಣ ಸಂದಾಯ. ೪. ಸರ್ಕಾರದ 'ಜೀವನ ವೆಚ್ಚ ಸೂಚಿ (Cost of living Index)ಗೆ ಅನುಗುಣವಾಗಿ ತುಟ್ಟಿಭತ್ತೆ ಕೊಡುವುದು. ಇವು ತಕ್ಷಣದ ಬೇಡಿಕೆಗಳು. ಪೂರೈಸುವ ಸಾಧ್ಯತೆ ಕಡಿಮೆಯಿದ್ದ ಇನ್ನಿತರ ಬೇಡಿಕೆಗಳೆಂದರೆ ಕಾರ್ಖಾನೆಯಿಂದ ಪರಿಹಾರಧನ, ರಬ್ಬರ್‌ಗ್ಲೋವ್ಸ್, ಏಪ್ರನ್ ಇತ್ಯಾದಿ. ಇನ್ನೂ ಕೆಲವು ದೂರದ ಆಶೋತ್ತರಗಳ ಬಗ್ಗೆಯೂ ಚರ್ಚಿಸಲಾಯಿತು. ಖಾಯಿಲೆಗೆ ವಿಮೆ, ಉದ್ಯೋಗ ಭದ್ರತೆ ಇತ್ಯಾದಿ. ಯೂನಿಯನ್ನಿನ ಮುಖಂಡ ದೊರೈರಾಜ್. ಒಂದೊಂದು ಅಂಶವನ್ನು ಒತ್ತಿ ಹೇಳುವಾಗ ಸಿಂಹಕೇಸರದಂತಹ ತನ್ನ ದಟ್ಟ ತಲೆಗೂದಲು ಹಿಂದಕ್ಕೆ ಚಕ್ಕೆಂದು ಚಿಮ್ಮುವಂತೆ ತಲೆ ಅಲುಗಿಸುತ್ತಿದ್ದ. ನಾನು ಫೋಟೋ ತೆಗೆಯುವಾಗ ಮೂವರು ಹುಡುಗರು ತಮ್ಮ ಕೈ ಎಷ್ಟು ಎತ್ತರಕ್ಕೆ ನಿಲುಕುವುದೋ ಅಷ್ಟರವರೆಗೆ ರಿಫ್ಲೆಕ್ಟರುಗಳನ್ನು ಎತ್ತಿಹಿಡಿದು ಸಹಾಯ ಮಾಡಿದರು.

ದೊರೈರಾಜ್ ನನ್ನ ಬಳಿಬಂದು, "ಜನರು ಅಮೆರಿಕನ್ ಮಹಿಳೆಯ ಭಾಷಣ ಕೇಳಬೇಕೆಂದು ಬಯಸುತ್ತಿದ್ದಾರೆ, ಮಾತಾಡಿ. ನಾನು ಅನುವಾದ ಮಾಡುತ್ತೇನೆ" ಎಂದು ವಿನಂತಿಸಿಕೊಳ್ಳುವ ದನಿಯಲ್ಲಿ ಕೇಳಿದ. ಅಯ್ಯಂಗಾರ್ ಕೂಡ "ಹೌದು, ಮಾತಾಡಿ ಬಿಳಿಯ ಮಹಿಳೆ ತಮ್ಮ ಬಗ್ಗೆ ಏನು ಹೇಳುತ್ತಾರೆ ಎಂದು ಅವರು ಕೇಳಬೇಕಂತೆ" ಎಂದರು. ಇಷ್ಟೊಂದು ಭಾರವಾದ ಬದುಕು ನಡೆಸಿರುವ, ಮಾನವ ಜೀವಿಗಳ ಮಟ್ಟ ತಲುಪುವುದಕ್ಕೇ ಬಹುದೊಡ್ಡ ಅಡಚಣೆಯನ್ನು ನಿವಾರಿಸಿಕೊಳ್ಳಬೇಕಾಗಿರುವ ಈ ನತದೃಷ್ಟ ಜನರ ಮುಂದೆ ನಾನು ಏನು ಮಾತಾಡುವುದು? ಈ ಅಸ್ಪೃಶ್ಯರ ಮುಂದೆ ಮಾತಾಡಲು ಲ್ಯಾಂಪ್ ಬೆಳಕಿನಲ್ಲಿ ನಿಂತಾಗ ನನ್ನ ಬದುಕಿನಲ್ಲಿ ಯಾವ ಜನರ ಗುಂಪಿನ ನಡುವೆಯೂ ಇಂತಹ ಅನರ್ಹತೆಯ ಸಂಕೋಚ ನನ್ನನ್ನು ಕಾಡಿರಲಿಲ್ಲ ಅನ್ನಿಸಿತು.

ಮಕ್ಕಳು ಕಣ್ಣು ಅಗಲಿಸಿಕೊಂಡು ನನ್ನನ್ನೇ ನೋಡುತ್ತಿದ್ದರು. ಅವರ ಭಯಂಕರ ಸ್ಥಿತಿಯನ್ನು ಪರಿಣಾಮಕಾರಿಯಾಗಿ ಹೇಳುವ ಸರಳ ವಿಧಾನ ಯಾವುದು ಎಂದು ನಾನು ಸ್ವಲ್ಪ ಹೊತ್ತು ತಡಕಾಡಿದೆ. ಅಮೆರಿಕಾ ಮತ್ತು ಇಂಡಿಯಾ ಈ ಎರಡೂ ದೇಶಗಳ ನಡುವೆ ಇರುವ ಬಹುದೊಡ್ಡ ಸಾಮ್ಯತೆಯನ್ನು ವಿವರಿಸುವುದರೊಂದಿಗೆ ನಾನು ಮಾತು ಆರಂಭಿಸಿದೆ. ನಮ್ಮ ಎರಡೂ ದೇಶಗಳು ಸ್ವಾತಂತ್ರ್ಯಕ್ಕಾಗಿ ಹಂಬಲಿಸಿದ್ದವು. ಅದಕ್ಕಾಗಿ ಹೋರಾಡಿದವು ಮತ್ತು ಅದನ್ನು ಸಾಧಿಸಿದವು. ಇದು ನಮ್ಮ ನಡುವಿನ ಬಹುದೊಡ್ಡ ಸಮಾನತೆ ಎಂದೆ. ಸ್ವಾತಂತ್ರ್ಯ ಎಂಬ ಶಬ್ದ ಕಿವಿಗೆ ಬಿದ್ದರೆ ಸಾಕು ಭಾರತೀಯರ ಮೇಲೆ ಏನೋ ಮ್ಯಾಜಿಕ್ಕಿನ ಪರಿಣಾಮವಾಗಿ ಬಿಡುತ್ತದೆ. ದೊರೈರಾಜ್ ನನ್ನ ಮಾತನ್ನು ಅನುವಾದಿಸಿ ಹೇಳುತ್ತಿದ್ದಂತೆ ಜನ ಹರ್ಷ[illegible]

ಕೂಗಿದರು. ತಮಿಳು ನುಡಿಗಟ್ಟಿನಲ್ಲಿ ಆ ಮಾತು ಇನ್ನಷ್ಟು ಪರಿಣಾಮಕಾರಿಯಾಗಿ ಮೂಡಿರಬೇಕು. ಜನ ಸಂತೋಷದಿಂದ ಚಪ್ಪಾಳೆ ತಟ್ಟಿದರು. ಮಾತು ಮುಗಿಸಿದ ನಂತರ ನಾನು ಅಯ್ಯಂಗಾರ್ ಬಳಿ, "ಶಿಕ್ಷಣದ ಅಗತ್ಯತೆ ಬಗ್ಗೆ ನಾನು ಹೇಳಿದ್ದು ತುಂಬ ಅಸಂಬದ್ಧವಾಯಿತೇನೋ ಅನ್ನಿಸುತ್ತದೆ. ಇಂತಹ ಪರಿಸ್ಥಿತಿಯಲ್ಲಿರುವ ಅವರಿಗೆ ಅದು ಅರ್ಥವಾಗುತ್ತದೆಯೇ" ಎಂದೆ. "ಇಲ್ಲ ನೀವು ಸರಿಯಾಗೇ ಹೇಳಿದ್ದೀರಿ. ಮಕ್ಕಳ ತಂದೆತಾಯಿಗಳಿಗೆ ಅದು ಅರ್ಥವಾಗುತ್ತದೆ. ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸಬೇಕು ಎಂದು ಅವರಿಗೆಲ್ಲ ತುಂಬ ಹಂಬಲವಿದೆ" ಎಂದು ಅಯ್ಯಂಗಾರ್ ಹೇಳಿದರು.

ನಾನೂ ಅಯ್ಯಂಗಾರ್ ನಕ್ಷತ್ರಗಳು ಮಿನುಗುತ್ತಿದ್ದ ವಿಶಾಲವಾದ ಆಕಾಶದ ಕೆಳಗೆ ನಡೆಯುತ್ತ ಹೋದೆವು. ಆ ಮಕ್ಕಳೂ ಕತ್ತಲಲ್ಲಿ ನಡೆದುಕೊಂಡು ಹೋದರು. ನಾಯಿಯ ಗೂಡುಗಳಿಗಿಂತಲೂ ಚಿಕ್ಕದಾದ ಗಾಳಿಯಾಡದ ತಮ್ಮ ಮುರುಕು ಜೋಪಡಿಗಳಿಗೆ. ಅದೇ ಅವರ ಮನೆ. ಅಲ್ಲಿ ನೆಲದ ಮೇಲೆ ಕೆಲವೇ ಗಂಟೆಗಳ ನಿದ್ದೆ, ಬೆಳಿಗ್ಗೆ ಪುನಃ ಸುಣ್ಣದ ಗುಣಿಗಳಿಗೆ ಇಳಿಯುವವರೆಗೆ.

❑

ಅಧ್ಯಾಯ ೧೨

ದಕ್ಷಿಣ ಭಾರತದಲ್ಲಿ ಬರಗಾಲ

ಮೈಸೂರಿನ ರೈತ ಸಣ್ಣಲಿಂಗಪ್ಪ ಹೇಳಿದ "ನಮ್ಮನ್ನು ಗುಂಡಿಟ್ಟು ಕೊಲ್ಲಿ. ಇಲ್ಲದಿದ್ದರೆ ವಿಷ ಕೊಡಿ. ನಮಗೆ ಸಂತೋಷ. ನನ್ನ ಮಕ್ಕಳಿಗೂ ನನ್ನ ಕಣ್ಣಮುಂದೇ ವಿಷ ಕೊಟ್ಟರೆ ನಿಶ್ಚಿಂತೆಯಿಂದ ಸಾಯುತ್ತೇನೆ". ಆತ ತನ್ನ ವಿಶಿಷ್ಟ ಕನ್ನಡದಲ್ಲಿ ಹೇಳಿದ ಮಾತುಗಳನ್ನು ಸ್ಕೂಲ್‌ಮಾಸ್ಟರ್ ಶಂಕರ್ ನನಗೆ ಅನುವಾದಿಸಿ ಹೇಳಿದ. ಭಾಷಾಂತರಿಸಲು ಶಂಕರ್ ತುಂಬಾ ಪ್ರಯಾಸಪಡುತ್ತಿದ್ದ. ಆತನ ಭಾಷೆಯಲ್ಲಿ ರೈತರ ದುಃಖ ಭಾವಾತಿರೇಕದ ನಾಟಕದಂತೆ ಅನ್ನಿಸಿದರೂ ವಾಸ್ತವವಾಗಿಯೂ ರೈತರ ಸಂಕಷ್ಟಗಳು ಅಷ್ಟೇ ದಾರುಣವಾಗಿದ್ದವು. ಬರಗಾಲಕ್ಕೆ ಸಿಕ್ಕಿ ಈ ಹಳ್ಳಿ ಪ್ರದೇಶಗಳು ಬಳಲಿ ಬೆಂಡಾಗಿದ್ದವು. ಕಲ್ಲಹಳ್ಳಿ ಎಂಬ ಸಣ್ಣಹಳ್ಳಿಯಲ್ಲಿ ಸಣ್ಣ ಲಿಂಗಪ್ಪನೇ ಶ್ರೀಮಂತ ರೈತ. ತಮ್ಮ ಭೂಮಿ, ಆಸ್ತಿಪಾಸ್ತಿಗಳನ್ನು ಬಿಟ್ಟು ಹೋಗಲಾರದ ಶ್ರೀಮಂತರು ಮತ್ತು ಓಡಾಡುವುದಕ್ಕೂ ತ್ರಾಣವಿಲ್ಲದಷ್ಟು ನಿಶ್ಶಕ್ತರಾಗಿದ್ದ ಬಡವರನ್ನು ಬಿಟ್ಟರೆ ಬಹುತೇಕ ಮಂದಿ ಊರನ್ನು ತೊರೆದು ಹೋಗಿದ್ದರು. ಬರಗಾಲಕ್ಕೆ ಹೆದರಿದ ಜನ ತಮಗೆ ಎಲ್ಲಿ ಕೆಲಸ ಮತ್ತು ಆಹಾರ ಸಿಗುತ್ತದೋ ಅಂತಹ "ಸಮೃದ್ಧ ನಾಡನ್ನು" ಹುಡುಕಿಕೊಂಡು ಹೋಗಿದ್ದರು. ಕಲ್ಲಹಳ್ಳಿ ಯಾವುದೇ ಮೂಲೆಯಲ್ಲಿದಂತಹ ಹಳ್ಳಿ.

ಈ ಜನ ಹುಡುಕಿಕೊಂಡು ಹೊರಟ್ಟಿದ್ದ ಸ್ಥಳ ಸಿಗಬೇಕಾದರೆ ಅವರೆಲ್ಲ ಸಾಕಷ್ಟು ದೂರ ನಡೆಯಬೇಕಿತ್ತು. ಮಳೆ ಬರುವುದು ತಡವಾಗಿದ್ದರಿಂದ ಇಡೀ ಪ್ರದೇಶ ತೊಂದರೆಯಲ್ಲಿ ಸಿಕ್ಕಿ ಹಾಕಿಕೊಂಡಿತ್ತು. ಕಲ್ಲಹಳ್ಳಿಯ ಪರಿಸ್ಥಿತಿ ಇನ್ನೂ ತೀವ್ರವಾಗಿತ್ತು. ನೀರಾವರಿ ಸೌಕರ್ಯ ಕಲ್ಪಿಸಿ ರೈತರಿಗೆ ಸಹಾಯ ದೊರಕಿಸುವ ಯಾವ ಪ್ರಯತ್ನವೂ ಇಲ್ಲಿ ನಡೆದಿರಲಿಲ್ಲ. ಶತಮಾನಗಳ ಹಿಂದೆ ಮೊಘಲ್ ಅರಸರು ಅಚ್ಚುಕಟ್ಟಾಗಿ ಆಳವಾದ ಬಾವಿಗಳನ್ನು ನಿರ್ಮಿಸಿದ್ದರು. ವಸಾಹತುಶಾಹಿ ಆಳ್ವಿಕೆಯಲ್ಲಿ ಈ ಬಾವಿಗಳು ದುರಸ್ತಿ ಕಾಣದೆ ಉಪಯೋಗಕ್ಕೆ ಬಾರದಾಗಿದ್ದವು. ಅಲ್ಲದೆ ಈ ಬಾವಿಗಳಿಗೂ ಹಳ್ಳಿಗಳಿಗೂ ಬಹಳ ದೂರವಿತ್ತು.

ಬರಗಾಲದ ಸಮಯದಲ್ಲಿ ಮೊದಲು ಹಳ್ಳಿ ಬಿಟ್ಟು ಹೊರಡುವ ಜನರೆಂದರೆ ಯುವಕರು. ಅವರೆಲ್ಲ ಒಬ್ಬೊಬ್ಬರಾಗಿ ಊರುಬಿಟ್ಟು ಹೋಗುತ್ತಿದ್ದಂತೆ ಕುಟುಂಬಗಳು ಛಿದ್ರವಾಗಿದ್ದವು. ಕಳೆದ ವರ್ಷದ ಸುಗ್ಗಿಯಲ್ಲಿ ಸಂಗ್ರಹಿಸಿದ ಧಾನ್ಯ ಮುಗಿದ ನಂತರ ಮತ್ತು ಇನ್ನು [illegible] ಸಿಗುವುದು ಸಾಧ್ಯವೇ ಇಲ್ಲ ಎಂಬಷ್ಟು ಸಾಲಸೋಲದ ನಂತರ ಇದ್ದುಬದ್ದುದನ್ನೆಲ್ಲ [illegible] ಮಾರಿದ ಜನರೂ ಕೂಡ ಒಬ್ಬೊಬ್ಬರಾಗಿ ಊರು ಬಿಡತೊಡಗಿದರು. ಹೀಗೆ ಅವರ [illegible] ಹೆಚ್ಚುತ್ತಲೇ ಇತ್ತು. ಚಿತ್ರದುರ್ಗದಿಂದ ಕಲ್ಲಹಳ್ಳಿಗೆ ಹೋಗುವ ಮಾರ್ಗದಲ್ಲಿ ನಾವು [illegible]

ಅನೇಕ ಗುಂಪುಗಳನ್ನು ನೋಡಿದೆವು. ನಗರದಲ್ಲಿರುವ ಪರಿಹಾರ ಕೇಂದ್ರಗಳಿಗೆ ಹೋಗುವುದು ಅವರ ಗುರಿ. ದಾರಿಯಲ್ಲಿ ಕಂಡವರೆದುರು ಆ ಜನ ಕೈಚಾಚುತ್ತಿದ್ದರು. ಇವರೆಲ್ಲ ರೈತರೇ ಹೊರತು ಭಿಕ್ಷಾಟನೆಯವರಲ್ಲ. ಆದರೆ ಮಾನ್‌ಸೂನ್ ಕಣ್ಣಾಮುಚ್ಚಾಲೆಯಲ್ಲಿ ಅವರ ಬದುಕು ಇಂಥ ದುರವಸ್ಥೆಗಿಳಿದಿತ್ತು.

ಸಣ್ಣಲಿಂಗಪ್ಪನ ಮುಂದಿದ್ದ ಪರಿಸ್ಥಿತಿ ಇನ್ನೂ ಕಠಿಣ. ಆತ ಊರನ್ನು ಬಿಟ್ಟು ಹೋಗುವ ಬಗ್ಗೆ ಇನ್ನೂ ನಿರ್ಧಾರ ಮಾಡಿರಲಿಲ್ಲ. ಆತನಿಗೆ ೩೫ ಎಕರೆಯಷ್ಟು ಕಪ್ಪುಮಣ್ಣಿನ ಭೂಮಿಯಿತ್ತು. ಅದರಲ್ಲಿ ಹತ್ತಿ, ಗೋಧಿ, ರಾಗಿ ಬೆಳೆಯುತ್ತಿದ್ದ. ಬೆಳೆದಿದ್ದನ್ನು ಮಾರಿ ಒಂದಿಷ್ಟು ಲಾಭವನ್ನೂ ಗಳಿಸುತ್ತಿದ್ದ. ಜನರಿಗೆ ಕೂಲಿಕೊಟ್ಟು ಹೊಲದ ಕೆಲಸ ಮಾಡಿಸುತ್ತಿದ್ದ. ಇಂಥ ಸಣ್ಣಲಿಂಗಪ್ಪ ಈಗ ತನ್ನ ಮನೆಯಲ್ಲಿ ಚಿಂತಾಕ್ರಾಂತನಾಗಿ ನಿಂತಿದ್ದ. ಸೊರಗಿ ಕೃಶವಾಗಿದ್ದ ಅವನ ಮಂದಿಯೆಲ್ಲ ನೆಲದ ಮೇಲೆ ಸುಮ್ಮನೆ ಕೂತಿದ್ದರು. ಶತಮಾನಗಳ ಕಾಲದಿಂದ ಪೂರ್ವಿಕರು ನೆಲೆಸಿದ್ದ ಆ ಮನೆಯನ್ನು ಬಿಟ್ಟು ಹೋಗುವುದು ಅವರಿಗೆ ಸುಲಭದ ಮಾತಲ್ಲ. ಹಜಾರದ ಮೂರು ಗೋಡೆಗಳ ಬದಿಗೆ ಒಂದರ ಮೇಲೊಂದರಂತೆ ಪೇರಿಸಿಟ್ಟಿದ್ದ ಮಡಕೆಗಳ ಸಾಲು. ನೆಲದಿಂದ ಛಾವಣಿಯವರೆಗೆ ದೊಡ್ಡ ಕಪ್ಪು ಮಣಿಗಳನ್ನು ಪೋಣಿಸಿದಂತಿತ್ತು. ಇನ್ನೊಂದು ಗೋಡೆಗೆ ಸೇರಿದಂತೆಯೇ ಇದ್ದ ದೊಡ್ಡದೊಡ್ಡ ಹೂಜಿಯಾಕಾರದ ರಚನೆಗಳು. ಒಬ್ಬ ಮನುಷ್ಯ ಅದರಲ್ಲಿ ಸಲೀಸಾಗಿ ನಿಂತುಕೊಳ್ಳಬಹುದಾದಷ್ಟು ಎತ್ತರವಾಗಿದ್ದವು. ನೀವು ಬೇಕಿದ್ದರೆ ಎಲ್ಲ ಹುಡುಕಿ. ಒಂದೇ ಒಂದು ಕಾಳಿಲ್ಲ. ನಾವು ಹಣಕೊಟ್ಟು ಧಾನ್ಯ ಕೊಳ್ಳಲು ಸಿದ್ಧ. ಆದರೂ ಅದು ಸಿಗುವುದಿಲ್ಲ. ರಾಜರ ಆಳ್ವಿಕೆಯಲ್ಲಿರುವ ಪ್ರದೇಶಗಳಲ್ಲಿ ಕಾಳಸಂತೆ ಹೆಚ್ಚಾಗಿರುವ ಬಗ್ಗೆ ಆತ ಕೋಪದಿಂದ ಹೇಳುತ್ತಿದ್ದ. ರೈತರಿಗೆ ಅವರ ರೇಶನ್‌ಕಾರ್ಡುಗಳ ಪ್ರಕಾರ ಮಾರಾಟಮಾಡಬೇಕು ಎಂದು ಕಳಿಸಲಾಗಿದ್ದ ಪಡಿತರಗಳು ಕಾಳಸಂತೆಕೋರರ ಉಗ್ರಾಣಮಳಿಗೆಗಳನ್ನು ಸೇರಿದ್ದವು. ನಡೆಯುವುದಕ್ಕೂ ಆಗದಷ್ಟು ನಿತ್ರಾಣನಾಗಿದ್ದ ರೈತ ಕಾರ್ಡು ಹಿಡಿದು ಮೈಲುಗಟ್ಟಲೆ ನಡೆದು ಸಮೀಪದ ರೇಶನ್ ಶಾಪಿಗೆ ಹೋಗುತ್ತಿದ್ದ. ಅಲ್ಲಿ ಅವನಿಗೆ ಸಿಗುತ್ತಿದ್ದು ತಿನ್ನಲು ಯೋಗ್ಯವಲ್ಲದ ಹುಳುಬಿದ್ದ ಧಾನ್ಯ. ಸಣ್ಣಲಿಂಗಪ್ಪ ಮತ್ತವನ ಸೋದರರು ಕುಟುಂಬದ ಜನರ ಆಹಾರಕ್ಕಾಗಿ ಎಲ್ಲೆಲ್ಲೊ ಅಲೆದಾಡಿ ಹುಣಿಸೇ ಬೀಜಗಳನ್ನು ಸಂಗ್ರಹಿಸಿ ತರುತ್ತಿದ್ದರು. ಇದು ದಿನನಿತ್ಯದ ಅವರ ಕೆಲಸವಾಗಿಬಿಟ್ಟಿತ್ತು. "ಹುಣಿಸೆ ಬೀಜ ಒಳ್ಳೆಯದಲ್ಲ. ಅದನ್ನು ತಿನ್ನುವುದು ಕಷ್ಟ" ಎಂದು ಹೇಳುವಾಗ ಸಾಮಾನ್ಯವಾಗಿ ಎಲ್ಲ ಭಾರತೀಯರಂತೆಯು ಸಣ್ಣಲಿಂಗಪ್ಪ ದುಃಖಾವೇಶಕ್ಕೊಳಗಾಗಿದ್ದ. "ನನ್ನ ಮಕ್ಕಳ ಸಂಕಟ ನೋಡಲಾರೆ. ನಮಗೆ ವಿಷ ಕೊಟ್ಟುಬಿಡಿ" ಎಂದು ಕಣ್ಣೀರು ಹಾಕಿದ. ಸಣ್ಣಲಿಂಗಪ್ಪ ಮಾತಾಡುತ್ತಿರುವುದನ್ನು ಅವನ ಮಕ್ಕಳು ಬತ್ತಿಹೋದ ಮುಖಗಳಲ್ಲಿ ದೊಡ್ಡದಾಗಿ ಕಾಣುತ್ತಿದ್ದ ಕಣ್ಣುಗಳನ್ನು ಇನ್ನಷ್ಟು ಅಗಲಿಸಿಕೊಂಡು ನೋಡುತ್ತಿದ್ದವು. ಸಣ್ಣಲಿಂಗಪ್ಪನ ಹೆಂಡತಿ ನೀರಿನಲ್ಲಿ ನೆನೆಸಿ ಮೆತ್ತಗೆ ಮಾಡಿಕೊಟ್ಟಿದ್ದ ಹುಣಿಸೆ ಬೀಜಗಳನ್ನು ಪುಟ್ಟ ಹೆಣ್ಣುಮಕ್ಕಳು ಅಗಿಯುತ್ತಿದ್ದವು. ಐದು ತಿಂಗಳ ಮಗು ತಾಯಿಯ ಬೆರಳಿನಿಂದ ಬಿಳಿಯ ಅಂಟಿನಂಥ ಪದಾರ್ಥವನ್ನು ಚೀಪುತ್ತಿತ್ತು. ಹಾಲೂಡದಷ್ಟು ಬಡಕಲಾಗಿದ್ದ ತಾಯಿಯ ಎದೆಹಾಲಿಗೆ ಬದಲಾಗಿ ಇದು ಎಂದು ಅರ್ಥಮಾಡಿಕೊಂಡೆ. ಮಗು ಚೀಪುತ್ತಿದ್ದ ಪದಾರ್ಥ

ರಾಗಿಯ ಹಿಟ್ಟನ್ನು ಬೇಯಿಸಿ ಮಾಡಲಾದ ಗಂಜಿ. ವಾಸ್ತವವಾಗಿ ರಾಗಿ ದೊಡ್ಡವರಿಗೂ ಕೂಡ ಅರಗಿಸಿಕೊಳ್ಳಲು ಕಷ್ಟಸಾಧ್ಯವಾದ ಧಾನ್ಯ. ಆದರೆ ಈಗ ಇರುವ ಸ್ವಲ್ಪ ರಾಗಿಯನ್ನೇ ಮಗುವಿಗಾಗಿ ಕಾಪಾಡಿಕೊಳ್ಳಬೇಕಾಗಿದ್ದ ಸ್ಥಿತಿ ಬಂದಿತ್ತು.

ಸರಿಯಾದ ರೀತಿಯಲ್ಲಿ ಸ್ವಲ್ಪ ವೈಜ್ಞಾನಿಕ ವಿಧಾನ ಅನುಸರಿಸಿದ್ದೇ ಆಗಿದ್ದರೆ ಈ ಹಳ್ಳಿಯ ಜನರ ಬದುಕಿನಲ್ಲಿ ಗಮನಾರ್ಹ ಬದಲಾವಣೆ ತರಬಹುದಿತ್ತು. ಅಂತಹ ಸಾಮಾನ್ಯ ಸಂಗತಿಗಳು ಸಣ್ಣಲಿಂಗಪ್ಪನಂಥವರಿಗೂ ಗೊತ್ತಿದ್ದವು. ಭಾರತದಲ್ಲಿ ಪ್ರತಿವರ್ಷ ಬೀಳುವ ಮಳೆಯಲ್ಲಿ ಶೇ. ೩೫ರಷ್ಟು ಮಳೆ ವ್ಯರ್ಥವಾಗಿ ಪುನಃ ಸಮುದ್ರಕ್ಕೇ ಸೇರಿ ಹೋಗುತ್ತದೆ ಎಂಬ ಅಂಕಿಅಂಶ ಸಣ್ಣಲಿಂಗಪ್ಪನಿಗೆ ಗೊತ್ತಿರಲಿಕ್ಕಿಲ್ಲ. ಆದರೆ ಕಳೆದ ವರ್ಷ ಬಿದ್ದ ಮಳೆ ನೀರನ್ನು ಹೇಗೋ ಹಿಡಿದಿಟ್ಟುಕೊಂಡಿದ್ದರೆ ಈ ವರ್ಷದ ಕತೆ ಬೇರೆಯಾಗಬಹುದಿತ್ತು ಎಂಬುದು ಅವನಿಗೆ ತಿಳಿದಿತ್ತು. ಕಳೆದ ವರ್ಷ ಮಳೆ ತೀರ ಜಾಸ್ತಿ ಬಿದ್ದಿದ್ದರೂ ಅದು ಸಮಯಕ್ಕೆ ಸರಿಯಾಗಿ ಬೀಳದ ಕಾರಣದಿಂದ ಈ ವರ್ಷದ ಕಷ್ಟನಷ್ಟಗಳು ಇನ್ನಷ್ಟು ಹೆಚ್ಚಾದವು ಎಂಬುದೂ ಆತನಿಗೆ ಗೊತ್ತಿತ್ತು. ಮಧ್ಯಭಾರತ ಹಾಗೂ ದಕ್ಷಿಣ ಭಾರತದ ಎಲ್ಲ ಹಳ್ಳಿಗಳಂತೆ ಕಲ್ಲಹಳ್ಳಿಯೂ ಕೂಡ ಸಾಗುವಳಿಗೆ ಕೆರೆನೀರನ್ನೇ ಅವಲಂಬಿಸಿತ್ತು. ಕೆರೆ ಎಂದರೆ ಮಣ್ಣಿನ ತಡೆಗೋಡೆ ಕಟ್ಟಿ ನಿರ್ಮಿಸಿರುವ ಜಲಾಶಯ. ಇಂತಹ ಜಲಾಶಯಗಳನ್ನು ಭಾರತೀಯರು ತಲೆತಲಾಂತರದಿಂದಲೂ ನಿರ್ಮಿಸಿಕೊಂಡು ಬರುತ್ತಿದ್ದಾರೆ. ಕಳೆದ ಮಳೆಗಾಲದಲ್ಲಿ ಇದ್ದಕ್ಕಿದ್ದಂತೆ ಬಿದ್ದ ಭಾರೀ ಮಳೆಯ ಪರಿಣಾಮವಾಗಿ ಕೆರೆಯ ಕಟ್ಟೆ ಒಡೆದು ಎಲ್ಲ ನೀರು ಕೊಚ್ಚಿಹೋಗಿತ್ತು. ಕಲ್ಲಹಳ್ಳಿಯ ಪಾಲಿಗೆ ವರದಾನವಾಗಬಹುದಾಗಿದ್ದ ಸಮೃದ್ಧ ಮಳೆ ದುರಂತ ತಂದಿತ್ತು. ಮಣ್ಣಿನ ತಡೆಗೋಡೆಗೆ ಬದಲು ಕಾಂಕ್ರೀಟ್ ತಡೆಗೋಡೆ ಇದ್ದಿದ್ದರೆ, ಅಲ್ಲಲ್ಲಿ ಕೈಯಿಂದಲೇ ಅಗೆದು ನಿರ್ಮಿಸಿದ ಮಧ್ಯಕಾಲೀನ ಇಂತಹ ಕೆರೆಗಳಿಗೆ ಬದಲು ಸಮಗ್ರವಾದ ನೀರಾವರಿ ಯೋಜನೆ ಇದ್ದಿದ್ದರೆ ಭಾರತದ ಚಿತ್ರ ಬೇರೆಯೇ ಆಗಬಹುದಿತ್ತು.

ಮನೆಯ ಮುಂದಿನ ಅಂಗಳದಲ್ಲಿ ಬಿಡಿಸಿದ್ದ ರಂಗೋಲಿ ದಾಟಿಕೊಂಡು ನಾವು ಮುಂದೆ ಹೋದೆವು. ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇ. ೯೦ರಷ್ಟಿರುವ ರೈತಾಪಿ ಜನರಿಗಾಗಿ ಏನೂ ಮಾಡಿಲ್ಲವಲ್ಲ ಎಂದು ವ್ಯಥೆಯಿಂದ ಹೇಳಿದ ಶಂಕರ್. ಈಗ ಸ್ವಾತಂತ್ರ್ಯ ಬಂದಿದೆ (ಸ್ವಾತಂತ್ರ್ಯ ಎಂಬ ಪದ ಉಚ್ಚರಿಸುವಾಗಲೇ ಅದು ಅವನಿಗೆ ಪ್ರಿಯವಾದ ಪದ ಎಂಬ ದನಿಯಿದ್ದುದನ್ನು ಗಮನಿಸಿದೆ). ಇನ್ನು ಮೇಲಾದರೂ ನಾವು ರೈತರ ಬಗ್ಗೆ ಹೆಚ್ಚಿನ ಗಮನಕೊಡುವುದು ಅಗತ್ಯ. ಹೀಗೆ ಮಾತಾಡುತ್ತಾ ನಾವು ದೊಡ್ಡದೊಡ್ಡ ಕಲ್ಲುಗಳ ಅಡ್ಡಗೋಡೆಯನ್ನು ಬಳಸಿಕೊಂಡು ಮುಂದೆ ಹೋದಾಗ ಅಲ್ಲಿ ಒಂದಿಷ್ಟು ಗುಡಿಸಲುಗಳು ಕಂಡವು. ಈ ಭೇದಭಾವವನ್ನು ನಾವು ಕೊನೆಗೊಳಿಸಬೇಕು ಎಂದು ಕೆರಳಿದ ದನಿಯಲ್ಲಿ ಹೇಳಿದ ಶಂಕರ್. ಇಲ್ಲಿ ನಮ್ಮ ಮುಂದೆ ಕಾಣುತ್ತಿರುವುದು ಈ ಗ್ರಾಮದ ಅಸ್ಪೃಶ್ಯ ಜನರಿರುವ ಭಾಗ ಎಂದು ಹೇಳಿದ ಶಂಕರ್. ಅಸ್ಪೃಶ್ಯರವು ಹುಲ್ಲಿನ ಚಾಪೆ ಹೊದಿಸಿದ ತಗ್ಗುಮಾಡಿನ ಗುಡಿಸಲುಗಳು. ಅದರೊಳಕ್ಕೆ ಹೋಗುವವರು ಮೊಣಕಾಲು ಬಗ್ಗಿಸಿ ಒಳಗೆ ತೂರಿಕೊಂಡು ಹೋಗಬೇಕಾಗಿತ್ತು. ಈ ಪುಟ್ಟ ಗೂಡುಗಳೊಳಗೆ ಅವರು ಬಗ್ಗಿಕೊಂಡೇ ಓಡಾಡಬೇಕಾಗಿತ್ತು.

"ನೋಡಿ, ಅವರು ಎಷ್ಟು ಸುರಕ್ಷಿತವಾಗಿ ಅಸ್ಪೃಶ್ಯರನ್ನು ದೂರ ಇಟ್ಟಿದ್ದಾರೆ" ಎಂದ ಶಂಕರ್. ಅಸ್ಪೃಶ್ಯ ಜನರ ಸ್ಥಿತಿ ಇನ್ನೂ ದಾರುಣವಾಗಿತ್ತು. ಒಂದು ಚಿಕ್ಕಮಗು ಖಾಲಿಪಾತ್ರೆ ಹಿಡಿದು ಹಸಿವಿನಿಂದ ಅಳುತ್ತಿದ್ದನ್ನು ಬಿಟ್ಟರೆ ಉಳಿದ ಯಾರಿಗೂ ದನಿ ಎತ್ತುವ ಮನಸ್ಸಾಗಲಿ, ಶಕ್ತಿಯಾಗಲೀ ಇದ್ದಂತಿರಲಿಲ್ಲ. ಅಲ್ಲಿನ ಜನ ಎಲ್ಲವನ್ನೂ ಪರಿತ್ಯಾಗ ಮಾಡಿದವರಂತೆ ನಿತ್ರಾಣವಾಗಿ ಮಾತಿಲ್ಲದೆ ನಿಂತಿದ್ದರು, ಕೂತಿದ್ದರು. ಅವರನ್ನು ನೋಡುವಾಗ ಮೂವತ್ತರ ದಶಕದ ಮಧ್ಯಭಾಗದಲ್ಲಿ ಅಮೆರಿಕಾದ ಮಹಕ್ಷಾಮ ಕಾಲದಲ್ಲಿ ಬಡಕಲು ದನಗಳು ತಮ್ಮ ಕೊನೆಗಾಲಕ್ಕಾಗಿ ಕಾಯುತ್ತಾ ಸುಮ್ಮನೆ ನಿಂತಿರುವ ದೃಶ್ಯದ ನೆನಪಾಯಿತು. ಈ ಜನರೂ ಸಹ ಆ ದನಗಳಷ್ಟೇ ಅಸಹಾಯಕರಾಗಿ, ಪ್ರತಿಭಟನಾರಹಿತರಾಗಿ ತಮ್ಮ ಕೊನೆಯನ್ನು ಕಾಯುತ್ತಾ ಕೂತಿದ್ದರು. ಒಬ್ಬ ಮುದುಕ, ಗುಡಿಸಲಿನ ಹೊರಗೆ ಒಂದು ಅಗಲ ಎಲೆಗಳ ಸಸ್ಯವನ್ನು ನಿಶ್ಶಕ್ತವಾದ ಕೈಗಳಿಂದ ನಿಧಾನವಾಗಿ ಕುಟುತ್ತ ಕೂತಿದ್ದ. 'ಅವರು ಆ ಗಿಡವನ್ನು ತಿನ್ನುತ್ತಾರೆ. ಇನ್ನು ಮುಂದೆ ಅದೂ ಸಿಗುವುದಿಲ್ಲ" ಎಂದ ಶಂಕರ್.

ಕಲ್ಲಹಳ್ಳಿಯಂತಹ ಸುಮಾರು ಏಳುಲಕ್ಷ ಹಳ್ಳಿಗಳಲ್ಲಿ ಮುನ್ನೂರುದಶಲಕ್ಷ ಜನ ಇದ್ದಾರೆ. ಬಹುತೇಕ ಹಳ್ಳಿಗಳೆಲ್ಲ ರಸ್ತೆಗಳಿಂದ ಮೈಲುಗಟ್ಟಲೆ ದೂರದಲ್ಲಿರುತ್ತವೆ. ಭಾರತದಲ್ಲಿ ಮುಖ್ಯರಸ್ತೆಗಳನ್ನು ನಿರ್ಮಿಸುವಾಗ ಮಿಲಿಟರಿ ಜನರಲ್‌ಗಳೊಂದಿಗೆ ಸಮಾಲೋಚಿಸಲಾಯಿತೇ ಹೊರತು ಕೃಷಿಕರೊಂದಿಗಲ್ಲ. ಈ ರಸ್ತೆಗಳು ಬಂದರು ನಾಡುಗಳಿಗೂ ದೊಡ್ಡದೊಡ್ಡ ಪಟ್ಟಣಗಳಿಗೂ ಸಂಪರ್ಕ ಕಲ್ಪಿಸುತ್ತವೆ. ಬಯಲು ನಾಡಿನಲ್ಲಿ ರೈಲು ಜಂಕ್ಷನ್‌ಗಳಿಗೆ ಹಾಗೂ ಪರ್ವತ ಪ್ರದೇಶಗಳಲ್ಲಿ ರಜಾ ದಿನಗಳ ತಂಗುದಾಣಗಳಿಗೆ ಸಂಪರ್ಕ ಕಲ್ಪಿಸುತ್ತವೆ. ಆದರೆ ಅವು ಎಷ್ಟರಮಟ್ಟಿಗೆ ರೈತರ ಅಗತ್ಯತೆಗಳನ್ನು ಕಡೆಗಣಿಸಿವೆ ಎಂದರೆ ದೇಶದ ರೈತರು ದೇಶಕ್ಕೆ ಅನ್ನ ಕೊಡುತ್ತಾರೆ ಎಂಬ ಅಂಶವನ್ನು ಅವರು ಒಂದು ಕ್ಷಣವೂ ಯೋಚಿಸಿರಲಿಕ್ಕಿಲ್ಲ.

ಭಾರತದಲ್ಲಿ ರೈತನನ್ನು ಎಲ್ಲ ಕಾಲದಲ್ಲಿಯೂ ಹೀಗೆ ಕಡೆಗಣಿಸಿರಲಿಲ್ಲ. ಮಧ್ಯಯುಗದ ಮೊಘಲ್ ಚಕ್ರವರ್ತಿಗಳ ಕಾಲದಲ್ಲಿ ರೈತ, ಸಮಾಜದ ಅವಿಭಾಜ್ಯ ಅಂಗವಾಗಿದ್ದ. ಫ್ಯೂಡಲ್ ವ್ಯವಸ್ಥೆಯಲ್ಲಿ ಅನೇಕ ರೀತಿಯ ದೌರ್ಜನ್ಯಗಳಿದ್ದರೂ ರೈತನಿಗೆ ತಕ್ಕ ಮನ್ನಣೆಯೂ ಇತ್ತು. ಅವನಿಗೆ ನ್ಯಾಯ ಒದಗಿಸಬೇಕೆಂಬ ಕಾಳಜಿ ಇತ್ತು. ಬೆಳೆಯ ಭಾಗವನ್ನು ವಸೂಲು ಮಾಡಿಕೊಳ್ಳುವಾಗ ಅವರೊಂದಿಗೆ ಹುಷಾರಾಗಿ ವರ್ತಿಸಬೇಕು, ನ್ಯಾಯಸಮ್ಮತವಾಗಿ ನಡೆದುಕೊಳ್ಳಬೇಕು ಎಂದು ರೆವಿನ್ಯೂ ಅಧಿಕಾರಿಗಳಿಗೆ ಸೂಚನೆ ಇರುತ್ತಿತ್ತು. ರೈತನಿಂದ ನ್ಯಾಯವಾದ್ದಕ್ಕಿಂತ ಹೆಚ್ಚಿನ ವಸೂಲಿ ಮಾಡಿದರೆ ಅದು ರೈತನಿಗೆ ಮಾತ್ರವಲ್ಲ ರಾಜ್ಯಕ್ಕೂ ಅನ್ಯಾಯ ಎಂಬ ಸೂಚನೆಯನ್ನು ವಸೂಲಿಗಾರರಿಗೆ ಕೊಡುತ್ತಿದ್ದರು. ಆದರೆ ಸುಮಾರು ೧೫೦ ವರ್ಷಗಳ ಹಿಂದೆ ಬ್ರಿಟಿಷರು ಭಾರತಕ್ಕೆ ಕಾಲಿಟ್ಟ ನಂತರ ಕಂದಾಯ ವಸೂಲಿಗಾರರು ಅಥವಾ ಜಮೀನುದಾರರಿಗೆ ನಿರಂಕುಶ ಅಧಿಕಾರ ಪ್ರಾಪ್ತವಾಯಿತು. ಭಾರತವನ್ನು ವ್ಯಾಪಿಸಿಕೊಂಡ ಬ್ರಿಟಿಷ್ ವ್ಯಾಪಾರಿಗಳಿಗೆ ಬೆಳೆ ಬೆಳೆಯುವ ರೈತ ಮುಖ್ಯವಾಗಿರಲಿಲ್ಲ. ಈ ಬೆಳೆಯ ಬಹುಪಾಲನ್ನು ತೆರಿಗೆಯಾಗಿ ವಸೂಲಿ ಮಾಡಿಕೊಡುವ ಜಮೀನ್ದಾರ ಮುಖ್ಯವಾಗಿದ್ದ. ಬೆಳೆಗಳು ಸರಿಯಾದ ಆದಾಯ ಮೂಲವಲ್ಲ ಎಂದು ಈಸ್ಟ್ ಇಂಡಿಯಾ ಕಂಪನಿ ಕಂಡುಕೊಂಡಿತು. ಯಾವಾಗಲೂ

ಸ್ಥಳದಿಂದ ಸ್ಥಳಕ್ಕೆ ಸಂಚರಿಸುವ ವರ್ತಕರಿಗೆ ಸುಗ್ಗಿಯ ಕಾಲದ ವ್ಯತ್ಯಯಗಳನ್ನು ಅಂದಾಜು ಮಾಡುವುದು ಕಷ್ಟವಾಗುತ್ತಿತ್ತು. ಇದರ ವಿಧಿವಿಧಾನಗಳು, ಆಳುವವರಿಗೆ ಅರ್ಥವಾಗುತ್ತಿರಲಿಲ್ಲ. ಈಸ್ಟ್ ಇಂಡಿಯಾ ಕಂಪನಿಯು ಅಧಿಕಾರಿಗಳಿಗೆ ನಿಶ್ಚಿತ ನಗದುರೂಪದ ವರಮಾನ ಹೆಚ್ಚು ಕಾರ್ಯಯೋಗ್ಯವಾದುದಾಗಿತ್ತು. ಈ ವಿಷಯದಲ್ಲಿ ಅವರು ರೈತರೊಂದಿಗೆ ಸಮಾಲೋಚಿಸುವ ಗೋಜಿಗೆ ಹೋಗಲಿಲ್ಲ. ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ನಗದುರೂಪದಲ್ಲಿ ಕಾಣಿಕೆ ಸಲ್ಲಿಸುವ ಪದ್ಧತಿ ಸ್ಥಿರಗೊಂಡಾಗ ಜಮೀನ್ದಾರರು ಈ ವ್ಯವಸ್ಥೆಯ ಅವಿಭಾಜ್ಯ ಅಂಗ ಎಂಬಂತೆ ಸ್ಥಿರವಾಗಿ ನೆಲೆಗೊಂಡರು. ಕೆಲವು ಜಮೀನುದಾರರು ಮೊದಲೇ ಫ್ಯೂಡಲ್ ದೊರೆಗಳಾಗಿದ್ದವರೇ. ಇನ್ನೂ ಕೆಲವರು ಕೇವಲ ತೆರಿಗೆಯನ್ನು ಮಾತ್ರ ವಸೂಲಿ ಮಾಡುತ್ತಿದ್ದು ಈ ಸೇವೆಗೆ ಪ್ರತಿಯಾಗಿ ಅವರಿಗೆ ಜಮೀನನ್ನು ಕೊಡಲಾಗುತ್ತಿತ್ತು. ಒಟ್ಟಿನಲ್ಲಿ ಅವರ ಮೂಲವೇನೆ. ಇರಲಿ ೧೭೯೩ರ ಖಾಯಂ ಭೂ ಒಪ್ಪಂದದ ಅನ್ವಯ ಜಮೀನುದಾರರು ಮತ್ತು ಅವರ ಸಂತತಿಯವರು ಒಂದು ಖಾಯಂ ಭೂಮಾಲೀಕ ವರ್ಗವಾಗಿ ರೂಪುಗೊಂಡರು. ಕಡಲಾಚೆಯಿಂದ ತಮ್ಮನ್ನು ನಿಯಂತ್ರಿಸುವ ಹೊಸ ಅಧಿಕಾರಕ್ಕೆ ತೆರಿಗೆಯ ಎಷ್ಟು ಪಾಲನ್ನು ಒಪ್ಪಿಸಬೇಕು ಎಂಬುದು ನಿರ್ಧಾರವಾಗುವವರೆಗೆ ತಮ್ಮ ಕಂದಾಯದ ಪಾಲನ್ನು ತಾವೆ ನಿರ್ಧರಿಸಿಕೊಳ್ಳುವ ಅಧಿಕಾರ ಅವರಿಗೆ ಇತ್ತು.

ಫ್ಯೂಡಲ್ ಮಾಲೀಕ ವ್ಯವಸ್ಥೆ ಖಾಯಂ ಆಗಿ ನೆಲೆಗೊಂಡುದಕ್ಕೆ ಸಮಾನಾಂತರವಾಗಿ ಭಾರತೀಯ ಕೈಗಾರಿಕಾ ವ್ಯವಸ್ಥೆ ಬೆಳೆಯಲಿಲ್ಲ. ಅದನ್ನು ಉದ್ದೇಶಪೂರ್ವಕವಾಗೇ ಹತ್ತಿಕ್ಕಲಾಯಿತು. ಇಲ್ಲಿನ ಜವಳಿ ಉತ್ಪಾದನೆ, ಕಬ್ಬಿಣದ ಕೆಲಸ, ಕರಕುಶಲ ಕಲೆ, ಕೈಕಸುಬುಗಳೆಲ್ಲ ಈ ವ್ಯವಸ್ಥೆಯಲ್ಲಿ ನಶಿಸಿಹೋದವು. ಕಸುಬುದಾರಿಕೆಯ ಜನ ಹಳ್ಳಿಗಳಿಗೆ ಹೋದಾಗ ಕೃಷಿಭೂಮಿಯ ಮೇಲಿನ ಒತ್ತಡ ಹೆಚ್ಚಿತು. ರೈತ ಜನ ಇನ್ನಷ್ಟು ಬಡವರಾದರು. ಪಾಶ್ಚಾತ್ಯ ಜಾಗತ್ತಿನಲ್ಲಿ ಕೈಗಾರಿಕಾ ಕ್ರಾಂತಿಯಿಂದ ಪ್ರಗತಿಯಾದಾಗ ಅದರ ಜೊತೆಜೊತೆಗೇ ಕೃಷಿ ಕ್ಷೇತ್ರದಲ್ಲೂ ಸುಧಾರಣೆಗಳಾದವು. ಮಾನವನ ಹಕ್ಕುಗಳು ಹೆಚ್ಚಾದವು. ಆದರೆ ಭಾರತದಲ್ಲಿ ರೈತನನ್ನು ಸಂಪೂರ್ಣ ಕಡೆಗಣಿಸಲಾಯಿತು. ಅವನು ಅರಗಿನಲ್ಲಿ ಸೇರಿಕೊಂಡ ಕೀಟದಂತೆ ಮಧ್ಯಯುಗದ ಅವಸ್ಥೆಯಲ್ಲಿಯೇ ಉಳಿದುಹೋದ. ಅವನ ಸಲಕರಣೆಗಳಲ್ಲಿ ಯಾವುದೇ ಸುಧಾರಣೆಯಾಗಲಿಲ್ಲ. ಅವನು ಪ್ರಗತಿ ಹೊಂದುವುದಕ್ಕೆ ಅಗತ್ಯವಾದ ವಿದ್ಯಾಭ್ಯಾಸವೂ ಅವನಿಗೆ ದೊರೆಯಲಿಲ್ಲ.

ಬಹಳ ಕಾಲದ ನಂತರ ಸ್ವಾತಂತ್ರ್ಯ ಬಂದ ಮೇಲೂ ಈ ದೇಶದ ಕೋಟ್ಯಾಂತರ ಜನರ ಪಾಲಿಗೆ ಸ್ವಾತಂತ್ರ್ಯದಿಂದ ಯಾವ ಸಹಾಯವೂ ಆಗಿಲ್ಲ. ಅಷ್ಟೇ ಅಲ್ಲ ಜಮೀನ್ದಾರಿ ವ್ಯವಸ್ಥೆಯ ಅಡಿಯಲ್ಲಿ ಅವರ ಸ್ಥಿತಿ ಇನ್ನಷ್ಟು ಅಧೋಗತಿಗಿಳಿದಿದೆ. ಸ್ವಯಮಾಡಳಿತಕ್ಕಾಗಿ ಕಾಂಗ್ರೆಸ್ ಪಕ್ಷ ಸುಧೀರ್ಘ ಹೋರಾಟ ನಡೆಸಿದ ಕಾಲದ ಉದ್ದಕ್ಕೂ ಇಂಥ ಅವಸ್ಥೆಯನ್ನು ಕೊನೆಗಾಣಿಸುವುದೇ ತನ್ನ ಮುಖ್ಯಗುರಿ ಎಂದು ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿಕೊಳ್ಳುತ್ತಿ ಹೊಸ ಸರ್ಕಾರ ಬಂದ ನಂತರ ಕೃಷಿಗೂ ವಿಜ್ಞಾನಕ್ಕೂ ಸಂಬಂಧ ಕಲ್ಪಿಸುವ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಹಳೆಯ ವ್ಯವಸ್ಥೆಯಲ್ಲಿ ಸುಧಾರಣೆಗಳನ್ನು ತರು ಯೋಜನೆಗಳನ್ನು ಹಾಕಿಕೊಂಡಿದೆ. ಬಿಹಾರ್, ಮದ್ರಾಸ್ ಮತ್ತು ಸಂಯುಕ್ತ ಪ್ರಾಂತಗ

ಜಮೀನ್ದಾರಿ ರದ್ದತಿ ಕಾನೂನನ್ನು ಜಾರಿಗೆ ತರುವಲ್ಲಿ ಮೇಲ್ಪಂಕ್ತಿ ಹಾಕಿಕೊಟ್ಟಿವೆ. ಆದರೆ ಈ ವಿಷಯದಲ್ಲಿ ನಿಧಾನವಾಗಿ ಮುನ್ನಡೆಯುವ ನೀತಿಯನ್ನು ಅನುಸರಿಸಬೇಕೆಂದು ಸರ್ಕಾರ ಸೂಚಿಸುತ್ತಿದೆ. ಜಮೀನುದಾರರಿಗೆ ಅವರ ಭೂಮಿಗೆ ಪ್ರತಿಯಾಗಿ ಪರಿಹಾರ ಕೊಡಬೇಕಿದೆ. ಆದರೆ ಇದಕ್ಕೆ ಅವರು ಹಾಕಿಕೊಂಡಿರುವ ಅಳತೆಗೋಲನ್ನು ಅನುಸರಿಸಿದ್ದೇ ಆದರೆ ವೆಚ್ಚವು ವಿಪರೀತವಾಗಿಬಿಡುತ್ತದೆ. ಸರ್ಕಾರದಲ್ಲಿರುವ ಸಂಪ್ರದಾಯಶರಣ ಮನೋಭಾದವರು ಬೇಕೆಂತಲೇ ಭಾರೀ ದರ ನಿಗದಿಸುತ್ತಿದ್ದಾರೆ. ಅವರು ವಾಸ್ತವವಾಗಿ ಈಗಿರುವ ವ್ಯವಸ್ಥೆಯಲ್ಲಿ ಯಾವುದೇ ಬದಲಾವಣೆಯಾಗದಂತೆ ನೋಡಿಕೊಳ್ಳುತ್ತಿದ್ದಾರೆ ಎಂದು ಕೆಲವು ಯುವ ನಾಯಕರು ಟೀಕಿಸುತ್ತಿದ್ದಾರೆ. ಜಮೀನುದಾರರಿಗೆ ಅಧಿಕ ಪರಿಹಾರವನ್ನು ಕೊಡುವುದಕ್ಕಿಂತ ರೈತರ ಋಣದಾಯಿಕತ್ವವನ್ನು ನಿವಾರಿಸುವುದು ಅದಕ್ಕೂ ಮೊದಲೇ ಆಗಬೇಕಾದ ಕೆಲಸ. ಇದರಿಂದ ಭಾರತದಲ್ಲಿ ಇನ್ನೂ ಹೆಚ್ಚಿನ ಸಮೃದ್ಧಿಯನ್ನು ಸಾಧಿಸಬಹುದು ಎಂದು ಬಹುತೇಕ ಭಾರತೀಯರ ಅಭಿಪ್ರಾಯ.

ಇದೇ ಸಂದರ್ಭದಲ್ಲಿ ಭಾರತದಲ್ಲಿ ೨/೩ರಷ್ಟು ಜನ ಭೂರಹಿತರಿದ್ದಾರೆ. ಸಂಪೂರ್ಣ ಜೀತದಲ್ಲಿಯೇ ಅವರ ಬದುಕು ಸಾಗುತ್ತದೆ. ಆದರೆ ದೇಶದ ಅನೇಕ ಭಾಗಗಳಲ್ಲಿ ಜಮೀನ್ದಾರರ ಜೀವನಮಟ್ಟ ಮಾತ್ರ ಶತಮಾನಗಳ ಹಿಂದೆ ಹೇಗೆ ಇತ್ತೋ ಹಾಗೇ ಮುಂದುವರೆದಿದೆ. ಜಮೀನುದಾರರು ಕೊಯ್ಲಿನಲ್ಲಿ ಅರ್ಧದಷ್ಟನ್ನು ಪಡೆದುಕೊಳ್ಳುತ್ತಾರೆ. ಕೊಯ್ಲಿನ ಕಾಲದಲ್ಲಿ ಕೆಲವೇ ಹೊಂದಾಣಿಕೆಗಳನ್ನು ಮಾಡಿದರೆ ಅವರ ಪಾಲು ೮೫%ಗೆ ಏರುತ್ತದೆ. ಅವರು ರೈತರಿಗೆ ಕೃಷಿಸಾಧನಗಳನ್ನು ಒದಗಿಸುವುದಿಲ್ಲ. ರೈತನ ಗುಡಿಸಲನ್ನು ನಿರ್ಮಿಸಿಕೊಡುವುದಿಲ್ಲ. ಬೀಳುಬಿದ್ದ ಭೂಮಿಯನ್ನು ಕೃಷಿಯೋಗ್ಯವಾಗಿ ಮಾಡಲು ಯಾವ ಪ್ರಯತ್ನವನ್ನೂ ಮಾಡುವುದಿಲ್ಲ. ಬಾವಿಯ ನಿರ್ಮಾಣ ಮಾಡುವುದಿಲ್ಲ. ಅಥವಾ ಹಾಳಾದ ಬಾವಿಯನ್ನು ಸರಿಪಡಿಸುವುದೂ ಇಲ್ಲ. ಆದರೆ ಯಾವುದೋ ಒಂದು ಕ್ಷುಲ್ಲಕ ಬಾಕಿ ಸಾಲದ ಲೆಕ್ಕ ತೋರಿಸಿ, ಹೇಗೋ ಎಲ್ಲವನ್ನು ಸರಿತೂಗಿಸಿಕೊಂಡು ಸಾಗುವಳಿ ಮಾಡುತ್ತಿದ್ದ ರೈತನನ್ನು ಒಕ್ಕಲೆಬ್ಬಿಸುತ್ತಾರೆ. ಬೆಳೆಗಾಗಲೀ, ಕಂದಾಯಕ್ಕಾಗಲೀ ರಸೀತಿ ನೀಡುವ ಪದ್ಧತಿಯನ್ನು ಜಮೀನುದಾರರು ಇಟ್ಟುಕೊಂಡಿರುವುದಿಲ್ಲ. ಇತ್ತ ರೈತನಿಗೆ ಓದು ಬರಹವೂ ಬರುವುದಿಲ್ಲ. ಹೀಗಾಗಿ ಜಮೀನ್ದಾರನು ತನಗೆ ಬೇಡವೆನಿಸಿದಾಗ ರೈತನನ್ನು ನಿವಾರಿಸುವುದು ಸುಲಭ. ಹೀಗೆ ಜಮೀನ್ದಾರರ ಆಬಾಧಿತ ಹಕ್ಕುಗಳು ಲೆಕ್ಕವಿಲ್ಲದಷ್ಟು ಇವೆ. ಅವನ ಅನ್ವೇಷಣ ಪ್ರವೃತ್ತಿಗೆ ತಕ್ಕಂತೆ ಅವು ಹೆಚ್ಚಾಗುತ್ತವೆ. ರೈತನಿಂದ ಆತ ಹಾಲುಮೊಸರು ಮಜ್ಜಿಗೆ ತೆಗೆದುಕೊಳ್ಳುತ್ತಾನೆ. ಸ್ವಂತ ಉಳುಮೆಗೆ ಗೇಣಿದಾರನ ಎತ್ತುಗಳನ್ನು ತೆಗೆದುಕೊಳ್ಳಬಹುದು. ಆದರೆ ಅವನು ಮಾತ್ರ ರೈತನಿಗೆ ಏನನ್ನೂ ಬಿಟ್ಟಿಯಾಗಿ ಒದಗಿಸುವುದಿಲ್ಲ. ಖರ್ಚು ಮಾಡಿದನ್ನು ಗಳಿಸಲು ಅನುಕೂಲವಾಗುವಂತೆ ರೈತನಿಗೆ ಬೀಜಗಳನ್ನು ಒದಗಿಸುವುದಿಲ್ಲ. ಬೀಜಕ್ಕಾಗಿ ರೈತ ಜಮೀನ್ದಾರನಿಗಿಂತ ಕ್ರೂರನಾದ ಲೇವಾದೇವಿಗಾರನ ಕಪಿಮುಷ್ಠಿಯಲ್ಲಿ ಸಿಕ್ಕಿಕೊಳ್ಳುತ್ತಾನೆ. ಅವನು ಹಾಕುವ ಬಡ್ಡಿಯ ದರಗಳಿಗೆ ಮಿತಿಯೇ ಇರುವುದಿಲ್ಲ. ರೈತರನ್ನು ಅನಕ್ಷರಸ್ಥ ಸ್ಥಿತಿಯಲ್ಲೇ ಇರಿಸುವುದಕ್ಕೆ ಜಮೀನ್ದಾರ ಮತ್ತು ಲೇವಾದೇವಿಗಾರ ಇಬ್ಬರೂ ಒಬ್ಬರಿಗಿಂತ ಒಬ್ಬರು ಮಿಗಿಲಾದ ಪೂರಕಪಾತ್ರ ವಹಿಸುತ್ತಾರೆ. ಬಹುದೊಡ್ಡ ಜಮೀನ್ದಾರರು ಹೇಗಿರುತ್ತಾರೆ ಎಂದು ನಾನು ಮೊತ್ತಮೊದಲು ನೋಡಿದ್ದು ಹೈದ್ರಾಬಾದಿನಲ್ಲಿ.

ನಾನು ಭೇಟಿ ಮಾಡಿದ ಜಮೀನ್ದಾರನ ಕೊಬ್ಬಿದ ಮುಖದಲ್ಲಿ ಕಣ್ಣುಗಳು ಎಲ್ಲೋ ಆಳದಲ್ಲಿ ಹುದುಗಿದ್ದವು. ವಿಧವಿಧದ ರತ್ನವಜ್ರದ ಉಂಗುರಗಳು ಅವನ ದಪ್ಪಗಿನ ದುಂಡನೆಯ ಬೆರಳ ಚರ್ಮದ ಪದರಗಳಲ್ಲಿ ಮುಳುಗಿ ಹೋಗಿದ್ದವು. ಆತನ ಕುಟುಂಬ ಹೈದ್ರಾಬಾದಿಗೆ ಬಂದು ನೆಲೆಸಿದ ಬಹಳ ಹಳೆಯ ಕುಟುಂಬವಾಗಿತ್ತು. ದೆಹಲಿಯ ಮುಘಲ್ ಚಕ್ರವರ್ತಿ ೧೭೫೦ರಲ್ಲಿ ಅಸಫ್‌ಜಾ ಎಂಬ ಗೌರ್ನರನನ್ನು ಹೈದ್ರಾಬಾದಿಗೆ ಕಳಿಸಿದಾಗ ಆತನ ಜೊತೆಯಲ್ಲಿ ಇವನ ಪೂರ್ವಿಕರು ಬಂದಿದ್ದರೆ. ಈ ಪೂರ್ವಿಕರು ಹಿಂದಿನ ನಿಜಾಮನಿಗೆ ಸೇವೆ ಸಲ್ಲಿಸಿದ್ದಕ್ಕೆ ಪ್ರತಿಯಾಗಿ ಭಾರೀ ಭೂಮಿಯ ಕಾಣಿಕೆಯನ್ನು ಪಡೆದಿದ್ದರು. ಈ ಜಮೀನ್ದಾರನಿಗೆ 'ಪೈಗಾ' ಎಂಬ ಬಿರುದಿತ್ತು. ಹೈದ್ರಾಬಾದ್ ಪ್ರಾಂತದ ಸ್ಥಿತಿ ವಿಚಿತ್ರ. ಅಲ್ಲಿನ ಜನಸಂಖ್ಯೆಯಲ್ಲಿ ಐದನೇ ನಾಲ್ಕು ಭಾಗದಷ್ಟು ಜನ ಹಿಂದೂಗಳು. ಆದರೆ ಅವರನ್ನು ಆಳುತ್ತಿದ್ದವನು ಮಾತ್ರ ಮುಸ್ಲಿಂ ನಿಜಾಮ. ಇಲ್ಲಿದ್ದ ಕೆಲವೇ ಹಿಂದೂ ಜಮೀನ್ದಾರರಲ್ಲಿ ನಾನು ಭೇಟಿ ಮಾಡಿದವನೂ ಒಬ್ಬ. ಈತ ಚೆನ್ನಾಗಿ ಮಾತಾಡುತ್ತಿದ್ದ. ಆಧುನಿಕ ಪ್ರಪಂಚದಲ್ಲಿ ಜಮೀನುದಾರರಿಗೆ ಎದುರಾಗಿರುವ ಸಮಸ್ಯೆಗಳ ಬಗ್ಗೆ ಹೇಳಿದ. ಅವನ ಮಾತಿನಲ್ಲಿದ್ದ ಪ್ರಾಮಾಣಿಕತೆ ನನಗೆ ಅಚ್ಚರಿ ತಂದಿತು. ಇಲ್ಲಿ ಎಲ್ಲ ಜಮೀನ್ದಾರರೂ ಖಾಸಗಿಯಾಗಿ ಒಂದು ಪೊಲೀಸ್ ಪಡೆ ಇಟ್ಟುಕೊಂಡಿರುತ್ತಾರೆ. ಈ ಜಮೀನ್ದಾರನೂ ಅಷ್ಟೆ. ಈ ಪೊಲೀಸ್ ಪಡೆಯಲ್ಲಿ ಸೂಪರಿಂಟೆಂಡೆಂಟ್, ಇನ್‌ಸ್ಪೆಕ್ಟರ್ ಹಂತದವರೂ ಇದ್ದರು. ಈತನದೇ ಒಂದು ನ್ಯಾಯಾಂಗ ವ್ಯವಸ್ಥೆ ಇತ್ತು. ಮತ್ತು ಖಾಸಗಿ ಜೈಲುಗಳೂ ಇದ್ದವು. ಈ ವ್ಯವಸ್ಥೆ ಬಲವಾಗಿ ಬೇರೂರಿತ್ತು. ಆದರೆ ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರ ಇದರ ತಳಪಾಯ ಕಂಪಿಸತೊಡಗಿತ್ತು. ಈಗಾಗಲೇ ಇವನಿಗೆ ಇವನ ಖಾಸಗಿ ಪೊಲೀಸರಿಂದಲೇ ತೊಂದರೆ ಆರಂಭವಾಗಿತ್ತು.

"ನೋಡಿ, ಈವತ್ತೇ ನಮ್ಮ ಖಾಸಗಿ ಪೊಲೀಸರು ಮುಷ್ಕರ ಹೂಡಿದ್ದಾರೆ. ಅವರಿಗೆ ಇನ್ನಷ್ಟು ತುಟ್ಟಿಭತ್ಯೆ ಕೊಡಬೇಕಂತೆ. ಬೆಲೆಗಳು ಏರುತ್ತಿರುವ ಆಧಾರದ ಮೇಲೆ ತುಟ್ಟಿಭತ್ಯೆಗೆ ಬೇಡಿಕೆ ವ್ಯಕ್ತಪಡಿಸಿದ್ದಾರೆ" ಎಂದ ಆತ. ಪೊಲೀಸರ ತುಟ್ಟಿಭತ್ಯೆ ಹೆಚ್ಚಿಸುವುದು ಜಮೀನ್ದಾನಿಗೆ ಭಾರೀ ಹೊರೆಯಾಗುತ್ತದೆ. ನಗರದಲ್ಲಿರುವ ಆತನ ಒಂಬತ್ತು ಭವನಗಳ ಕಾವಲಿಗಾಗಿ ೭೦ ಮಂದಿ ಖಾಸಗಿ ಪೊಲೀಸರಿದ್ದರು. ಆತನ ಜಮೀನುಗಳನ್ನು ರಕ್ಷಿಸಲು ಇದ್ದ ಪೊಲೀಸರ ಸಂಖ್ಯೆ ೪೫೦೦. ಇಷ್ಟಾಗಿಯೂ ಅವನು ಅವರ ತುಟ್ಟಿಭತ್ಯೆ ಹೆಚ್ಚಿಸಲು ನಿರ್ಧರಿಸಿದ. ನಾನು ಅವರನ್ನು ಯಾವಾಗಲೂ ಖುಷಿಯಾಗಿರುವಂತೆ ನೋಡಿಕೊಳ್ಳಬೇಕು. ನಮ್ಮ ಸುರಕ್ಷಣೆ ಅವರನ್ನು ಅವಲಂಬಿಸಿದೆ ಎಂದ. ಆತನ ವೈಭವೋಪೇತವಾದ ಮನೆಯಲ್ಲಿ ಚಹಾಕ್ಕೆ ಆಮಂತ್ರಿಸಿದ್ದ ನನಗೆ ದೊಡ್ಡದೊಡ್ಡ ತಟ್ಟೆಗಳಲ್ಲಿ ಸಿಹಿ ತಿಂಡಿಗಳನ್ನು ತುಂಬಿ ತಂದಿಟ್ಟರು. ಅವುಗಳ್ನು ರುಚಿ ನೋಡಿ ನಾವು ಹೊರಟೆವು. ಬಹುಶಃ ಅವರು ತಂದಿಟ್ಟ ತಿನಿಸು ಇಡೀ ಒಂದು ಹಳ್ಳಿಯ ಜನರ ಸಮೃದ್ಧ ಭೋಜನಕ್ಕೆ ಸಾಕಾಗುವಷ್ಟಿತ್ತು. ಬೆಟ್ಟದ ಮೇಲಿದ್ದ ಮನೆಯ ಮುಂದೆ ಕುಳಿತು ಮುಸ್ಸಂಜೆಯಲ್ಲಿ ನಗರವನ್ನು ನೋಡುತ್ತಿದ್ದೆ. ವಿದ್ಯುದ್ದೀಪ ಹೊತ್ತಿಕೊಂಡಾಗ ಇಡೀ ಹೈದ್ರಾಬಾದ್ ನಗರ ಕಿನ್ನರ ಲೋಕವಾಗಿ ಪರಿವರ್ತನೆಯಾ ದೊಡ್ಡದೊಡ್ಡ ರಾಜಸಂಸ್ಥಾನಗಳ ರಾಜಧಾನಿಗಳನ್ನು ತನ್ನ ಮಾಂತ್ರಿಕ ಸ್ಪರ್ಶದಿಂದ ಅದ್ಭುತವಾ

ಕಂಗೊಳಿಸುವಂತೆ ಮಾಡುವ ಈ ವಿದ್ಯುತ್ ಹಳ್ಳಿಗಳನ್ನು ಮುಟ್ಟುವಷ್ಟರಲ್ಲಿ ಇದ್ದಕ್ಕಿದ್ದಂತೆ ಎಲ್ಲಿಯೋ ಮಾಯವಾಗಿಬಿಡುತ್ತದೆ. ನಗರದ ಮಧ್ಯೆ ನೂರಾ ಎಂಬತ್ತು ಅಡಿ ಎತ್ತರದ ಚಾರ್‌ಮಿನಾರ್. ಈ ಜಗತ್ತಿನ ವೈಭವ ಐಶ್ವರ್ಯಗಳನ್ನು ನೋಡನೋಡುತ್ತಲೇ ಅದರ ನಶ್ವರತೆಯನ್ನು ಜನ ಕಂಡುಕೊಳ್ಳಬೇಕು ಎಂಬ ದೃಷ್ಟಿಯಿಂದ ೧೬ನೇ ಶತಮಾನದ ಸುಲ್ತಾನನೊಬ್ಬ ಅದನ್ನು ಕಟ್ಟಿಸಿದನಂತೆ.

ಜಮೀನುದಾರ ನನಗೆ ಅತ್ಯಂತ ಅಪರೂಪದ ಉತ್ಕೃಷ್ಟವಾದ ಮದ್ಯವನ್ನು ನೀಡಿದ. ಹೀಗೆ ನೀಡುವಾಗಲೇ ಅವನಲ್ಲಿ ಒಂದು ರೀತಿಯ ಪ್ರತಿಷ್ಠೆ ಇಣುಕುತ್ತಿತ್ತು. ಮೊಗಲಾಯ್ ಎಂಬ ಹೆಸರಿನ ಈ ಮದ್ಯವನ್ನು ಭಟ್ಟಿ ಇಳಿಸುವ ಸೂತ್ರ ಅತ್ಯಂತ ಪ್ರಾಚೀನ ಹಾಗೂ ರಹಸ್ಯವಾದುದು ಎಂದು ಆತ ಹೇಳಿದ. ಈ ರೆಸಿಪಿ ಮೊಘಲ್ ಚಕ್ರವರ್ತಿಯಿಂದಲೇ ನಮಗೆ ನೇರವಾಗಿ ಬಂದಿದ್ದು. ಇದು ಬೆರೆ ಯಾರಿಗೂ ಲಭ್ಯವಿಲ್ಲ. ಇದನ್ನು ಮಲ್ಲಿಗೆ, ಗುಲಾಬಿ, ಬೆಲ್ಲ ಮೊದಲಾದವುಗಳನ್ನು ಭಟ್ಟಿ ಇಳಿಸಿ ತಯಾರಿಸುತ್ತೇವೆ. ಬೇರೆ ಯಾರಾದರೂ ಇದರ ಸೂತ್ರವನ್ನು ಕಂಡುಕೊಂಡರೆ ಕಾನೂನನ್ನು ಪ್ರಯೋಗಿಸಿ ಅದನ್ನು ತಡೆಯುತ್ತೇವೆ ಎಂದು ವಿವರಿಸಿದ. ಈ ಉತ್ಕೃಷ್ಟ ಪಾನೀಯದ ಗುಟುಕನ್ನು ನಾವು ಹೀರಿದೆವು. ಇದು ವೋಡ್ಕಾದಷ್ಟೇ ಪಾರದರ್ಶಕವಾಗಿತ್ತು. ತೀಕ್ಷ್ಣವಾಗಿತ್ತು. ಆದರೆ ಇದಕ್ಕೆ ಅಸಹಜವೆನ್ನಿಸುವಂತಹ ಮಲ್ಲಿಗೆಯ ಪರಿಮಳವಿತ್ತು.

ನಿಮ್ಮ ಜಮೀನು ಎಷ್ಟು ಎಕರೆ ಇದೆ ಎಂದು ನಾನು ಕೇಳಿದೆ. ನನ್ನ ಪ್ರಶ್ನೆಯಿಂದ ಅವನು ದಂಗಾದ. ಇಲ್ಲಿ ಎಕರೆಗಳ ಪ್ರಶ್ನೆಯಿಲ್ಲ. ಅದು ಎಷ್ಟೋ ಹಳ್ಳಿಗಳಷ್ಟು ಎಂದ. ಎಷ್ಟು ಹಳ್ಳಿ ಎಂದೆ. ಬಹುಶಃ ಈ ಮೊದಲು ಯಾರೂ ಆತನಿಗೆ ಈ ಪ್ರಶ್ನೆ ಕೇಳಿರಲಾರರು. ಅವನಿಗೆ ತಕ್ಷಣ ಅದರ ಸಂಖ್ಯೆಯನ್ನು ಹೇಳಲಾಗಲಿಲ್ಲ. ಮನಸ್ಸಿನಲ್ಲೇ ಸ್ವಲ್ಪ ಹೊತ್ತು ಲೆಕ್ಕಾಚಾರ ಮಾಡಿದ ಮೇಲೆ ಅವನು ತನ್ನ ಜಾಗೀರಿನ ಗಾತ್ರವನ್ನು ಅಂದಾಜು ಮಾಡಿ ಐನೂರು ಹಳ್ಳಿಗಳು ಎಂದ. ಇವೆಲ್ಲ ಒಂದೇಕಡೆ ಸೇರಿಕೊಂಡ ಹಾಗೆ ಇಲ್ಲ ಎಂಬುದು ಅವನಿಗೆ ಚಿಂತೆಯಾಗಿತ್ತು. ಈ ಹಳ್ಳಿಗಳು ಬೇರೆಬೇರೆ ಕಡೆ ಹರಡಿಕೊಂಡಿದ್ದರಿಂದ ಅವುಗಳ ನಿರ್ವಹಣೆಗೆ ಹೆಚ್ಚು ವೆಚ್ಚವಾಗುತ್ತಿತ್ತು. ಅದರಲ್ಲಿಯೂ ಮುಖ್ಯವಾಗಿ ಖಾಸಗಿ ಪೊಲೀಸ್ ದಳದ ನಿರ್ವಹಣೆಯ ವೆಚ್ಚ ದಿನೇದಿನೇ ಏರುತ್ತಿತ್ತು. ಇಲ್ಲಿ ಕೇವಲ ಅವರ ತುಟ್ಟಿಭತ್ಯೆಯ ವೆಚ್ಚ ಮಾತ್ರ ಏರಿರಲಿಲ್ಲ. ಮೊದಲಿನ ಸರಳ ಸಾಧನಗಳಿಗೆ ಬದಲಾಗಿ ಈಗ ಬಳಸುತ್ತಿದ್ದ ಆಧುನಿಕ ಶಸ್ತ್ರಾಸ್ತ್ರಗಳ ವೆಚ್ಚ ತುಂಬಾ ಹೆಚ್ಚಾಗಿತ್ತು. ಇವೆಲ್ಲವನ್ನೂ ನಾವು ಒತ್ತಟ್ಟಿಗೆ ತಂದು ಆಧುನಿಕಗೊಳಿಸಲೇಬೇಕಾಗಿದೆ ಎಂದ. ನಿಜಾಮ ಈ ಕಾರ್ಯವನ್ನು ಆಗಲೇ ಆರಂಭಿಸಿದ್ದ. ಕೆಲವು ವರ್ಷಗಳ ಹಿಂದೆಯೇ ಆತ, ಆಳುವ ಕುಟುಂಬದ ಎಲ್ಲರೂ ತಮ್ಮ ಪೈಗಾಗಳನ್ನು ಒತ್ತಟ್ಟಿಗೆ ತಂದುಕೊಳ್ಳಬೇಕು ಎಂದು ಆದೇಶ ಹೊರಡಿಸಿದ್ದ. ನಿಜಾಂ ಮತ್ತು ಆತನ ಬಂಧುಗಳು ಈ ಪುನರ್‌ವ್ಯವಸ್ಥೆಯ ವ್ಯವಹಾರವನ್ನು ಪೂರ್ಣಗೊಳಿಸಿದ ನಂತರ ಮುಂದಿನ ಸರದಿ ಜಾಗೀರುದಾರರು ಹಾಗೂ ಜಮೀನುದಾರರದು. ಅವರು ತಮ್ಮ ಭೂಮಿಯನ್ನು ವಿನಿಮಯ ಮಾಡಿಕೊಳ್ಳಬೇಕಾಗಿತ್ತು. ಅಗತ್ಯವಿರುವ ಕಡೆ ಜಮೀನನ್ನು ಕೊಂಡುಕೊಳ್ಳಬೇಕಾಗಿತ್ತು. ಆಗ ಮಾತ್ರ ರೈತವರ್ಗದ

ಜನರಲ್ಲಿ ದಿನೇದಿನೇ ಹೆಚ್ಚುತ್ತಿರುವ ದಂಗೆಕೋರತನವನ್ನು ನಿಭಾಯಿಸಲಾಗುವಂತೆ ಪೊಲೀಸ್ ಬಲವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಸಾಧ್ಯವಿತ್ತು. ನಾನು ಆ ದಿನ ಬೆಳಿಗ್ಗೆಯಷ್ಟೆ ಈ ವ್ಯವಹಾರಕ್ಕೆ ಸಾಕ್ಷಿಯಾದ ಒಂದು ದೃಶ್ಯವನ್ನು ನೋಡಿದ್ದೆ. ನಾನು ಇಲ್ಲಿನ ಪ್ರಧಾನಮಂತ್ರಿಗಳ ಕಛೇರಿಯಿಂದ ಹೊರಬರುತ್ತಿದ್ದೆ. ಯಾವುದೋ ಮನವಿಯನ್ನು ಸಲ್ಲಿಸಲು ಬಂದಿದ್ದ ಒಂದು ರೈತರ ಗುಂಪು ಅಲ್ಲಿ ಹತಾಶವಾಗಿ ನಿಂತಿತ್ತು. ಈ ಜನ ಮನವಿ ಸಲ್ಲಿಸಬೇಕೆಂದು ಅನೇಕ ವಾರಗಳಿಂದ ಬರುತ್ತಲೇ ಇದ್ದರು. ಅವರಿಗೆ ಅವಕಾಶ ಸಿಕ್ಕಿರಲಿಲ್ಲ. ಅನೇಕ ಸಲ ಲಂಚ ಕೊಟ್ಟರೂ ಪ್ರಯೋಜನವಾಗಿರಲಿಲ್ಲ. ತಾವು ಯಾರಿಗೆ ಮನವಿ ಸಲ್ಲಿಸಬೇಕು. ಆ ಕಛೇರಿ ಎಲ್ಲಿದೆ ಎಂಬುದು ಅವರಿಗೆ ತಿಳಿದಿದ್ದೂ ಕೂಡ ಅನೇಕ ಸಲ ಲಂಚ ಕೊಟ್ಟ ನಂತರವೆ.

ಈ ರೈತರುಗಳಿದ್ದ ಜಮೀನನ್ನು ಒಬ್ಬ ಹೊಸ ಜಮೀನುದಾರ ಕೊಂಡುಕೊಂಡಿದ್ದ. ಆಗ ಅವನು ತಲೆತಾಂತರದಿಂದ ಅಲ್ಲಿಯೇ ನೆಲೆಸಿದ್ದ ಈ ರೈತರನ್ನೆಲ್ಲ ಇಡಿಯಾಗಿ ಉಚ್ಛಾಟಿಸಿದ್ದ. ಈ ರೈತರು, ಬೆಳೆದ ಬೆಳೆಯ ಇಂತಿಷ್ಟು ಪಾಲನ್ನು ಜಮೀನುದಾರನಿಗೆ ಒಪ್ಪಿಸುವ ಆಧಾರದ ಮೇಲೆ ಅಲ್ಲಿ ಉಳುಮೆ ಮಾಡಿಕೊಂಡಿದ್ದರು. ಇದಲ್ಲದೆ ತಮಗೆ ಬೇಕಾದಷ್ಟು ಆಹಾರವನ್ನು ಬೆಳೆದುಕೊಳ್ಳುವುದಕ್ಕಾಗಿ ಪಡೆದುಕೊಂಡಿದ್ದ ಅಂಗೈ ಅಗಲದಷ್ಟು ಜಮೀನಿಗೆ ಸ್ವಲ್ಪ ಬಾಡಿಗೆಯನ್ನೂ ಸಹ ಕೊಡುತ್ತಿದ್ದರು. ಹೊಸ ಜಮೀನುದಾರ ಮಾಡಿದ ಮೊದಲ ಕೆಲಸವೇನೆಂದರೆ ಈ ಬಾಡಿಗೆಯನ್ನು ಮೂರರಷ್ಟು ಹೆಚ್ಚಿಸಿದ್ದು. ರೈತರಿಗೆ ಅದನ್ನು ಕೊಡುವುದು ಅಸಾಧ್ಯವಾದಾಗ ಇಡೀ ಹಳ್ಳಿಯನ್ನು ಸ್ವಾಧೀನಪಡಿಸಿಕೊಂಡು ಅವರನ್ನು ಓಡಿಸಿದ. ಹೀಗೆ ಓಡಿಸಿದ ಸಂದರ್ಭದಲ್ಲಿ, ಈ ರೈತರು ಶ್ರಮಪಟ್ಟು ಬೆಳೆದಿದ್ದ ಬೆಳೆ ಆಗಷ್ಟೆ ಕೊಯ್ಲಿಗೆ ಸಿದ್ಧವಾಗಿತ್ತು. ಇಡೀ ಫಸಲು ತನಗೇ ಸೇರುತ್ತದೆ ಎಂದು ಜಮೀನ್ದಾರ ಹೇಳಿದ. ಫಸಲನ್ನು ಕೇಳಿದ ರೈತರನ್ನು ಒಂದಿಷ್ಟೂ ಕರುಣೆ ಇಲ್ಲದೆ ಹೊಡೆಸಿದ್ದ. ಅವರ ಹೆಂಡಿರು ಮಕ್ಕಳನ್ನು ಬಿಡದೆ ಎಲ್ಲರನ್ನೂ ಹೊಡೆಸಿದ್ದ. ಈ ಜನ ತಮ್ಮ ಎಳೆಯ ಮಕ್ಕಳನ್ನು ಕಾಪಾಡಿಕೊಳ್ಳುವುದಕ್ಕಾಗಿ ಪಕ್ಕದ ಹಳ್ಳಿಯಲ್ಲಿ ಬಿಟ್ಟು ಬಂದಿದ್ದರು. ಇವರನ್ನು ಓಡಿಸಲು ಜಮೀನುದಾರ ಇನ್ನೊಂದು ಸುಲಭ ಉಪಾಯ ಮಾಡಿದ. ದನಕರುಗಳಿಗೆ ನೀರು ಉಣಿಸುವುದಕ್ಕೆಂದಿದ್ದ ಬಾವಿಯನ್ನು ಮುಚ್ಚಿಸಿಬಿಟ್ಟ, ಹಾಗೇ ಇದ್ದರೆ ತಮ್ಮ ದನಕರುಗಳು ನೀರಿಲ್ಲದೆ ಸಾಯುತ್ತವೆ ಎಂದು ರೈತರು, ಅವುಗಳನ್ನು ಪಕ್ಕದ ಹಳ್ಳಿಗೆ ಹೊಡೆದುಕೊಂಡು ಹೋಗಲೇಬೇಕಾಯಿತು.

ಭಾರತದ ರಾಜ್ಯಗಳಲ್ಲಿ ಅತಿಥಿಗಳನ್ನು ಉತ್ತಮವಾಗಿ ಸತ್ಕರಿಸಿ ತಮ್ಮ ಕೆಲವು ಚಟುವಟಿಕೆಗಳನ್ನು ಮಾತ್ರ ತೋರಿಸಿ ಉಳಿದವನ್ನು ಮರೆಮಾಚಿಬಿಡುತ್ತಾರೆ. ಆದ್ದರಿಂದ ಮೇಲೆ ಹೇಳಿದ ರೀತಿಯ ಕಥೆಗಳು ಗಮನಕ್ಕೇ ಬರುವುದಿಲ್ಲ. ಆದರೆ ನಾನು ಬರೆದ ಈ ವಿವರಗಳನ್ನೆಲ್ಲ ನನಗೆ ಆತಿಥ್ಯ ನೀಡಿದ ಜಮೀನ್ದಾರ ಓದಿ 'ನೋಡಿ, ಐನೂರು ಹಳ್ಳಿಗಳಿರುವ ನನ್ನ ವಿಷ[illegible] ತೆಗೆದುಕೊಳ್ಳಿ. ಕಾಲ ಬದಲಾಗಿದೆ. ಜನ ಈಗಾಗಲೇ ಜಮೀನು ಕೊಡುವಂತೆ ಕೇ[illegible] ಭಾರತ ಈಗ ಸ್ವತಂತ್ರವಾಗಿದೆ. ಈ ಜನರಲ್ಲಿ ಕೆಲವರಿಗೆ ನಾನು ಜಮೀನು. ಕೊಡ[illegible] ಈ ಮಾತುಗಳನ್ನು ಹೇಳುತ್ತ ಜಮೀನುದಾರ ಚಪ್ಪಲಿ ಬಿಟ್ಟು ನೆಲದ ಮೇಲೆ ತಣ್ಣಗೆ ಕುಳಿತುಕೊ[illegible]

"ನಿಮಗೆ ಗೊತ್ತೇ ಇದೆ. ಜನ ವಿದ್ಯಾಭ್ಯಾಸ ಬೇಕು ಅನ್ನುತ್ತಾರೆ. ವಿದ್ಯೆ ಸಿಕ್ಕಮೇಲೆ ಕೆಲವೊಂದು ಸುಧಾರಣೆಗಳನ್ನು ಕೇಳುತ್ತಾರೆ. ಅವರು ಸುಧಾರಣೆ ಕೇಳಿದರೆ ನಮಗೆ ತೊಂದರೆ ಬಂತು ಎಂದರ್ಥ. ಸ್ವಲ್ಪ ಶಿಕ್ಷಣವಿದ್ದ ಜನ ಹಕ್ಕುಗಳಿಗೆ ಒತ್ತಾಯ ಮಾಡುತ್ತಾರೆ. ಅವರಿಗೆ ಹಕ್ಕುಗಳನ್ನು ಕೊಟ್ಟರೆ ಈಗ ನಮಗೆ ಇರುವಂಥ ಅಧಿಕಾರಗಳು ಇರುವುದಿಲ್ಲ" ಎಂದ.

"ಯಾವ ಹಕ್ಕುಗಳನ್ನು ಕೊಟ್ಟರೆ?" ಎಂದು ನಾನು ಕೇಳಿದೆ. "ಅವರೆಲ್ಲ ಜಮೀನುದಾರರನ್ನು ಬಿಟ್ಟು ಹಳ್ಳಿಗಳಲ್ಲಿ, ಪಟ್ಟಣಗಳಲ್ಲಿ ಸೇರಿಕೊಳ್ಳಬೇಕೆಂದಿದ್ದಾರೆ. ಈಗಾಗಲೇ ಅದಕ್ಕೆ ಒತ್ತಾಯ ಹೆಚ್ಚಾಗುತ್ತಿದೆ. ಅವರಿಗೆಲ್ಲ ಅದೇ ಬೇಕಾಗಿರುವುದು. ಜನರಿಗೆ ಹಕ್ಕುಗಳನ್ನು ಕೊಟ್ಟಾಗ ನಮ್ಮ ಪ್ರಾಮುಖ್ಯತೆ ತಪ್ಪಿಹೋಗುತ್ತದೆ. ಜನಕ್ಕೆ ಶಿಕ್ಷಣ ಸಿಕ್ಕಮೇಲೆ ಯಾವುದೂ ಮೊದಲಿನ ಹಾಗೆ ಇರಲು ಸಾಧ್ಯವಿಲ್ಲ" ಎಂದು ನಿರಾಶೆಯಿಂದ ಹೇಳಿದ. ಈ ಪ್ರಗತಿಯ ಬಗ್ಗೆ ಆತ ವ್ಯಥೆಗೊಂಡಿದ್ದ. ಈ ಮಾತುಗಳು ಪ್ರಸ್ತುತ ಬದಲಾಗುತ್ತಿರುವ ಸ್ಥಿತಿಯನ್ನು ಎಷ್ಟು ಸ್ಪಷ್ಟವಾಗಿ ತಿಳಿಸಿದವೆಂದರೆ ಈ ಮಾತು ಜಮೀನ್ದಾರನ ಬಾಯಿಂದ ಬಂದಿಲ್ಲ. ಅವನ ವ್ಯಾಪ್ತಿಯಲ್ಲಿದ್ದ ಹಳ್ಳಿಗಳ ಸಾವಿರಾರು ಜೀತಗಾರ ರೈತರ ಬಾಯಿಂದ ಬಂದಿದೆ ಎನ್ನಿಸಿತು.

❑

ರಾಜ ಮಹಾರಾಜರು ಮತ್ತು ಅವರ ಪ್ರಜೆಗಳು

ಸ್ವಾತಂತ್ರ್ಯ ಬಂದ ಕೂಡಲೇ ಭಾರತದಾದ್ಯಂತ ಎದ್ದ ಪ್ರಜಾಪ್ರಭುತ್ವದ ಅಲೆ ಎಲ್ಲವನ್ನೂ ವ್ಯಾಪಿಸುತ್ತಾ ಪ್ರಾಚೀನ ಫ್ಯೂಡಲಿಸಂನ ಬುನಾದಿಯನ್ನು ಕೊಚ್ಚಿ ಹಾಕುತ್ತದೆ ಎಂಬ ಭಯ ಹೈದ್ರಾಬಾದಿನ ಜಮೀನ್ದಾರನನ್ನು ಚಿಂತೆಗೀಡು ಮಾಡಿತ್ತು. ಆದರೆ ಅವನಿಗಿಂತ, ಅವನನ್ನು ಆಳುತ್ತಿದ್ದ ನಿಜಾಮ ಹೆಚ್ಚು ಚಿಂತೆಗೀಡಾಗಿದ್ದ. ಯಾಕೆಂದರೆ ಜಮೀನ್ದಾರನಿಗಿಂತ ನಿಜಾಮ ಹೆಚ್ಚು ಕಳೆದುಕೊಳ್ಳಬೇಕಾಗಿತ್ತು.

ನಿಜಾಮ ಭಾರತದ ಅತಿ ದೊಡ್ಡ ಭೂಮಾಲೀಕನಾಗಿದ್ದ. ಹೈದ್ರಾಬಾದ್ ಮತ್ತು ಬೇರಾರ್ ರಾಜ್ಯಗಳ ಹದಿನೈದನೇ ಒಂದು ಭಾಗದಷ್ಟು ಪ್ರದೇಶ ಆತನ ವಶದಲ್ಲಿತ್ತು. ಇಟಲಿಗೆ ಹೋಲಿಸಬಹುದಾದಷ್ಟು ವ್ಯಾಪ್ತಿಯ ಈ ಪ್ರದೇಶ ಒಂದು ನೂರು ಸಾವಿರ ಚದರ ಮೈಲಿಗಳನ್ನೂ ಮೀರಿತ್ತು. ಹೈದ್ರಾಬಾದ್ ರಾಜ್ಯದ ಒಟ್ಟು ಆದಾಯದ ಶೇ ೧೫ರಷ್ಟು ಭಾಗ ಆತನ ಕೈ ಸೇರುತ್ತಿತ್ತು. ಇದರ ಜೊತೆ, ತನಗೆ ಹಾಗೂ ತನ್ನ ಇಬ್ಬರು ಗಂಡುಮಕ್ಕಳಿಗಾಗಿ ಸಾರ್ವಜನಿಕ ಬೊಕ್ಕಸದಿಂದ ಹೆಚ್ಚುವರಿ ಹಣವೂ ದೊರೆಯುತ್ತಿತ್ತು. ಈ ಮೊತ್ತವೇ ಹಲವು ಮಿಲಿಯನ್‌ಗಳಷ್ಟಿತ್ತು. ಭಾರತದ ಇತರ ರಾಜರುಗಳಿಗಿಂತ ಅಧಿಕ ಬಿರುದನ್ನು ಹಾಕಿಕೊಳ್ಳುವ ಹೆಚ್ಚುಗಾರಿಕೆಯೂ ಈತನದಾಗಿತ್ತು. ಬೇರೆಯ ರಾಜರನ್ನು H.H. (ಹಿಸ್ ಹೈನೆಸ್) ಎಂದರೆ ಈತ H.E.H. ಅಂದರೆ, ಹಿಸ್ ಎಕ್ಸಾಲ್ಟೆಡ್ ಹೈನೆಸ್ ಆಗಿದ್ದ. ವಯಸ್ಸು ಮೀರಿದನಂತರವೂ ಈತ ಅನೇಕರನ್ನು ಮದುವೆಯಾಗಿದ್ದ ಕಾರಣ ಬಹಳಷ್ಟು ಭಾರತೀಯರು ಈತನನ್ನು H.E.H. ಅಂದರೆ, ಹಿಸ್ ಎಕ್ಸಾಸ್ಟೆಡ್ ಹೈನೆಸ್ ಎಂದು ಉಲ್ಲೇಖಿಸುತ್ತಿದ್ದರು.

ನಿಜಾಮನೆಂದರೆ ಭಾರತದ ಕುಬೇರ. ಈತನಲ್ಲಿ ಎಷ್ಟೊಂದು ವಿಧದ ರತ್ನಗಳಿವೆಯೆಂದರೆ ಅವುಗಳನ್ನು ವರ್ಗೀಕರಿಸುವುದು ಅಸಾಧ್ಯ, ಈತನಲ್ಲಿದ್ದ ಮುತ್ತುಗಳು ಎಣಿಕೆಗೆ ಮೀರಿದ್ದವು ಮತ್ತು ಬಂಗಾರಕ್ಕೆ ನೆಲಮಾಳಿಗೆಯ ಕೋಣೆಗಳು ಸಾಕಾಗುತ್ತಿರಲಿಲ್ಲ. ಹೈದ್ರಾಬಾದಿಗೆ ನಾನು ಭೇಟಿ ನೀಡಿದ ಸಮಯದಲ್ಲಿ ಈತನ ಬಗ್ಗೆ ಪ್ರಚಲಿತವಿದ್ದ ಒಂದು ದಂತಕಥೆ ಹೀಗಿತ್ತು. ೧೯೧೪ರಲ್ಲಿ ಈತ ಎರಡು ಲಾರಿಗಳ ಭರ್ತಿ ಬಂಗಾರದ ಗಟ್ಟಿಗಳನ್ನು ಖರೀದಿಸಿ ತಂದನಂತೆ. ಆದರೆ ಇವುಗಳನ್ನಿಡಲು ಅರಮನೆಯಲ್ಲಿ ಸ್ಥಳವೇ ಇರಲಿಲ್ಲವಂತೆ. ಹೀಗಾಗಿ ಚಿನ್ನದ ಗಟ್ಟಿಗಳನ್ನು ಹೊತ್ತ ಎರಡೂ ಲಾರಿಗಳು ಅರಮನೆಯ ಅಂಗಳದಲ್ಲಿ ಅರ್ಧ ಹೂತ ಸ್ಥಿತಿಯಲ್ಲಿ ಹಾ ನಿಂತಿವೆಯಂತೆ. ಜನ ಈತನ ಐಶ್ವರ್ಯದ ಬಗ್ಗೆ ಇನ್ನೂ ಒಂದು ಕಥೆ ಹೇಳುತ್ತಿದ್ದರು. ಕೆಲವು ವರ್ಷಗಳ ಹಿಂದೆ ರತ್ನ ಪರಿಣತರು, ತಲತಲಾಂತರದಿಂದ ಕತ್ತಲ ಕೋಣೆಯಲ್ಲಿ

ಉಳಿದು ಹೋಗಿರುವ ಮುತ್ತುಗಳಿಗೆ ಗಾಳಿಯಾಡುವಂತೆ ಮಾಡಬೇಕು. ಇಲ್ಲದಿದ್ದರೆ ಅವು ಹಾಳಾಗುತ್ತವೆ ಎಂದು ಹೇಳಿದರು. ಆಗ ನಿಜಾಮನು ಸೂಕ್ತ ಕಾವಲಿನಲ್ಲಿ ಮುತ್ತುಗಳನ್ನು ಅರಮನೆಯ ಮಾಳಿಗೆಯ ಮೇಲೆ, ಪಕ್ಕದ ಕಟ್ಟಡಗಳು ಹಾಗೂ ತನ್ನ ಬಂಧುಗಳ ಮನೆ ಮಾಳಿಗೆಗಳ ಮೇಲೆಲ್ಲ ಹರಡಿಸಿದನಂತೆ. ಆದರೂ ಜಾಗ ಸಾಲದೆ ಬಂದ ಕಾರಣ ಎಲ್ಲ ಮುತ್ತುಗಳನ್ನೂ ಗಾಳಿಗೆ ಹರಡುವ ಪ್ರಯತ್ನ ಕೈಬಿಡಬೇಕಾಯಿತಂತೆ.

ಭಾರತದ ಇತರ ರಾಜ ಮಹಾರಾಜರುಗಳ ಬಳಿಯೂ ಇಷ್ಟೇ ಪ್ರಮಾಣದ ಮುತ್ತುರತ್ನಗಳ ಸಂಗ್ರಹ ಹಾಗೂ ಎಣಿಸಲಾರದಷ್ಟು ಸಂಪತ್ತು ಇರುವುದು ನಿಜ. ಈ ಎಲ್ಲರಿಗೂ ಮತ್ತು ನಿಜಾಮನಿಗೂ ಇದ್ದ ಮತ್ತೊಂದು ಸಮಾನ ಸಂಗತಿ ಏನೆಂದರೆ, ಇವರೆಲ್ಲರೂ ತಮ್ಮ ಪ್ರಜೆಗಳ ಮೇಲೆ ಪರಮಾಧಿಕಾರ ಹೊಂದಿದ್ದರು. ಪ್ರತಿಯೊಬ್ಬರೂ ಫ್ಯೂಡಲ್ ಸರ್ವಾಧಿಕಾರಿಯಂತೆ ನಡೆದುಕೊಳ್ಳುತ್ತಿದ್ದರು. ಇವರಿಗೆ ತಮ್ಮ ಪ್ರಜೆಗಳ ಹುಟ್ಟು ಸಾವಿನ ವೈಯಕ್ತಿಕ ವಿಷಯವೊಂದನ್ನು ಹೊರತುಪಡಿಸಿ ಇನ್ನೆಲ್ಲ ಅಧಿಕಾರಗಳೂ ಇದ್ದವು. ಕೆಲವರು ಈ ಅಧಿಕಾರವನ್ನೂ ಹೊಂದಾಣಿಸಿಕೊಂಡಿದ್ದರು. ತಾವು ಸಾಕ್ಷಾತ್ ಸೂರ್ಯ, ಚಂದ್ರ ವಂಶಜರಾದ ಕಾರಣ ತಮಗೆ ಸಹಜವಾಗಿಯೇ ಈ ಅಧಿಕಾರ ಪ್ರಾಪ್ತವಾಗಿದೆ ಎಂಬುದು ಅವರ ಹೇಳಿಕೆಯಾಗಿರುತ್ತಿತ್ತು.

ಬ್ರಿಟಿಷರು ಭಾರತವನ್ನು ಬಿಟ್ಟು ಹೋಗುವ ಸಂದರ್ಭದಲ್ಲಿದ್ದ ರಾಜ ಮಹಾರಾಜರ ಸಂಖ್ಯೆ ಸೋಜಿಗವೆನಿಸುವಷ್ಟು ಹೆಚ್ಚಾಗಿತ್ತು. ಸುಮಾರು ೫೦೦ ರಾಜರು ಮಹಾರಾಜರು, ನವಾಬರು ಇದ್ದರು. ಕೆಲವರ ಅಧಿಕಾರ ಹೈದ್ರಾಬಾದ್‌ನಷ್ಟು ವಿಸ್ತಾರ ಪ್ರದೇಶಕ್ಕೆ ವ್ಯಾಪಿಸಿದ್ದರೆ ಇನ್ನೂ ಕೆಲವರದು ಒಂದು ದೊಡ್ಡ ಹೊಲದಷ್ಟು ಮಾತ್ರ. ಸರಿಯಾಗಿ ಹೇಳುವುದಾದರೆ ರಾಜನು ಹಿಂದೂವಾಗಿರುತ್ತಿದ್ದ ಮತ್ತು ಭಾರತದಲ್ಲಿ ಇವರ ಸಂಖ್ಯೆಯೇ ಹೆಚ್ಚಾಗಿತ್ತು. ಆದರೆ ಅಲ್ಲಲ್ಲಿ ಸಾಕಷ್ಟು ಮುಸ್ಲಿಂ ರಾಜರೂ ಹರಡಿಕೊಂಡಿದ್ದರು. ಅವರನ್ನು ನವಾಬರೆಂದು ಕರೆಯುತ್ತಿದ್ದರು. ನವಾಬರಲ್ಲಿ ಅತಿ ಉನ್ನತ ನವಾಬನೇ ನಿಜಾಮ.

ಅವಳಿ ರಾಷ್ಟ್ರಗಳ ಉದಯದ ನಂತರ ತಾವು ಯಾವ ಅಧಿಪತ್ಯದ ಕೆಳಗೆ ಹೋಗಬೇಕು ಎಂಬುದನ್ನು ನಿಶ್ಚಯಿಸುವ ಆಯ್ಕೆಯನ್ನು ರಾಜರುಗಳಿಗೇ ಬಿಡಲಾಯಿತು. ಅವರ ಸರಹದ್ದು ಪ್ರದೇಶ ಅವರು ಆಯ್ಕೆ ಮಾಡಿಕೊಳ್ಳುವ ದೇಶಕ್ಕೆ ಹೊಂದಿಕೊಂಡಿರಬೇಕು ಎಂಬ ಷರತ್ತನ್ನು ಮಾತ್ರ ಅವರಿಗೆ ವಿಧಿಸಲಾಯಿತು. ಆದರೆ ಅನೇಕ ರಾಜ್ಯಗಳ ಗಡಿರೇಖೆಗಳು ಎರಡೂ ರೇಖೆಗಳಿಗೆ ಹೊಂದಿಕೊಂಡಂತಿದ್ದವು. ಅಂತಹ ಸಂದರ್ಭದಲ್ಲಿ ತಮ್ಮ ಧರ್ಮಕ್ಕನುಗುಣವಾಗಿ ತಾವು ಸೇರಬೇಕಾದ ಅಧಿಪತ್ಯದ ಬಗ್ಗೆ ನಿಶ್ಚಯಿಸಿದರು. ಹೀಗೆ ಮಾಡುವಾಗ ರಾಜನಿಗೆ ತನ್ನ ಧರ್ಮ ಮುಖ್ಯವಾಯಿತೇ ಹೊರತು ಪ್ರಜೆಗಳದ್ದಲ್ಲ. ಅನೇಕ ಸಣ್ಣ ಪುಟ್ಟ ರಾಜ್ಯಗಳು ವಿಲೀನಗೊಂಡು ದೊಡ್ಡ ರಾಜ್ಯದ ವ್ಯಾಪ್ತಿ ಪಡೆದವು. ಮತ್ತು ಹೊಸ ಗುಂಪುಗಳು ರೂಪಿತವಾದವು. ಸಂಬಂಧಪಟ್ಟ ಅನೇಕ ರಾಜರುಗಳು ಸೇರಿ ಒಂದು ಸಮಿತಿಯಂತೆ ಮಾಡಿಕೊಂಡು ಆಯಾ ಪ್ರದೇಶವನ್ನು ಆಳುವ ವ್ಯವಸ್ಥೆ ಮಾಡಿಕೊಂಡರು. ಆದರೆ ಪಟೇಲರ ಪ್ರಬಲ ಒತ್ತಡಕ್ಕೆ ಮಣಿದು ಬಹುತೇಕ ರಾಜ್ಯಗಳು ಭಾರತದೊಂದಿಗೆ ವಿಲೀನಗೊಳ್ಳುವಂತಾಯಿತು.

"ರಾಜ್ಯಗಳ ಪ್ರಜಾಪ್ರಭುತ್ವೀಕರಣ"ವನ್ನು ಸಾಧಿಸುತ್ತಿರುವ "ರಕ್ತರಹಿತ ಕ್ರಾಂತಿ"ಯ ಬಗ್ಗೆ ಎಲ್ಲೆಲ್ಲೂ ಹರುಷ ಸಂಭ್ರಮಗಳು ವ್ಯಕ್ತವಾದವು. ಈ ಸಂಭ್ರಮದಲ್ಲಿ ರಾಜರು ಉಳಿಸಿಕೊಳ್ಳಬಹುದಾದ ಹಳೆಯ ಸವಲತ್ತುಗಳ ವ್ಯಾಪ್ತಿಯನ್ನು ಕುರಿತಂತೆ ಅಷ್ಟಾಗಿ ಜನರ ಗಮನ ಹೋಗಲಿಲ್ಲ. ಯಾವುದೇ ಸಿವಿಲ್ ಅಥವಾ ಕ್ರಿಮಿನಲ್ ನಡಾವಳಿಗಳನ್ನು ತಮ್ಮ ವಿರುದ್ಧ ಜರುಗಿಸದಂತೆ ಹಿಂದಿನಿಂದಲೂ ಇದ್ದ ಸವಲತ್ತು ಹಾಗೇ ಉಳಿಯುತ್ತದೆ ಎಂಬ ಖಾತರಿಯನ್ನು ಅವರಿಗೆ ನೀಡಲಾಯಿತು. ಹೀಗಾಗಿ ರಾಜರುಗಳಿಂದ ಅಥವಾ ಅವರ ಅಧಿಕಾರದ ಮೇರೆಗೆ ಹಿಂದೆ ಮಾಡಲಾದ ಅಥವಾ ಮಾಡದೇ ಬಿಟ್ಟಿದ್ದ ಯಾವುದೇ ಲೋಪದೋಷಗಳನ್ನು ಕುರಿತಂತೆ ಅವರ ಪ್ರಜೆಗಳಾಗಲೀ, ನ್ಯಾಯಾಲಯವಾಗಲೀ ಯಾವುದೇ ಕ್ರಮ ಜರುಗಿಸುವಂತಿರಲಿಲ್ಲ.

ಈ ಮಹಾರಾಜರುಗಳಲ್ಲಿ ಅತ್ಯಂತ ಆಡಂಬರದ ವ್ಯಕ್ತಿ ಅಳ್ವಾರ್ ಮಹಾರಾಜನೇ ಇರಬೇಕು. ಆತನ ಅತಿರೇಕಗಳು ಎಷ್ಟು ನಾಚಿಕೆಗೇಡಿನವಾಗಿದ್ದವೆಂದರೆ ಬ್ರಿಟಿಷರಿಂದಲೇ ಪದಚ್ಯುತಗೊಂಡ ಅಪರೂಪದ ಅಗೌರವಕ್ಕೆ ಆತ ಪಾತ್ರನಾಗಿದ್ದ. ಈ ಮುದಿ ಖದೀಮನ ಕಥೆಗಳನ್ನು ಬಾಯಲ್ಲಿ ಹೇಳುವುದಕ್ಕೂ ಅಸಹ್ಯ ಎನ್ನುತ್ತಾ ನನ್ನ ಫೋಟೊಗ್ರಾಫರ್ ಮಿತ್ರ ಒಂದು ಮಾಮೂಲಿ ಕಥೆಯನ್ನು ಹೇಳಿದ್ದ. (ಆದರೆ ಈತನಷ್ಟು ಸಂಕೋಚ ಪಡದ ಇನ್ನೊಬ್ಬ ಮಿತ್ರ ಸುನಿಲನ ಮಾತುಗಳಿಂದ ಈ ರಾಜನ ಕಥೆಗಳ ಬಗ್ಗೆ ನನಗೆ ಸುಳಿವು ಸಿಕ್ಕಿತ್ತು. ನಮ್ಮ ಮಹಾರಾಜರು ಚಿಕ್ಕ ಹುಡುಗರಿಂದ ಹಿಡಿದು ಆನೆಗಳ ವರೆಗೆ ಯಾರನ್ನೂ ಬಿಟ್ಟಿಲ್ಲ ಎಂದು ಆದಷ್ಟೂ ಸಭ್ಯ ಮಾತುಗಳಲ್ಲಿ ಸುನಿಲ್ ತನ್ನ ರಾಜನ ವ್ಯಕ್ತಿತ್ವ ಬಣ್ಣಿಸಿದ್ದ. ಇದೇನೇ ಇರಲಿ, ಬಾಯಲ್ಲಿ ಹೇಳಲು ಅಸಹ್ಯವೆನಿಸದಂಥ ಒಂದು ಕಥೆಯನ್ನು ಸುನಿಲ ನಿರೂಪಿಸಿದ. ಅದು ಒಬ್ಬ ಮಹಾರಾಣಿಯ ನಿಗೂಢ ಸಾವಿಗೆ ಸಂಬಂಧಿಸಿತ್ತು.

ಹುಡುಗನಾಗಿದ್ದಾಗ ಸುನಿಲ್ ಬೇಸಿಗೆ ರಜೆಯಲ್ಲಿ ಅಳ್ವಾರ್‌ಗೆ ಹೋಗಿ ಚಿಕ್ಕಪ್ಪಂದಿರ ಮನೆಯಲ್ಲಿರುತ್ತಿದ್ದ. ಈ ಇಬ್ಬರು ಚಿಕ್ಕಪ್ಪಂದಿರಲ್ಲಿ ಒಬ್ಬರು, ರಾಜ್ಯದ ಭೂಗರ್ಭ ವಿಜ್ಞಾನಿ. ಇನ್ನೊಬ್ಬರು ರಾಜ್ಯ ವಿದ್ಯುತ್ ಇಂಜಿನಿಯರ್ ಆಗಿದ್ದರು. 'ನೋಡಿ, ಇದು ರಾಜ್ಯದ ಸ್ವಜನ ಪಕ್ಷಪಾತಕ್ಕೆ ಉದಾಹರಣೆ. ಕುಟುಂಬದಲ್ಲಿ ಒಬ್ಬರು ಮಹಾರಾಜರಿಂದ ಕೆಲಸ ಗಿಟ್ಟಿಸಿದರೆ ಸಾಕು ಆತ ಇಡೀ ಕುಟುಂಬವನ್ನೇ ಒಳಸೇರಿಸಿಬಿಡುತ್ತಿದ್ದ...... ನನ್ನ ಚಿಕ್ಕಪ್ಪಂದಿರಿಗೆ ಅರ್ಹತೆ ಇರಲಿಲ್ಲವೆಂದಲ್ಲ.... ಆದರೆ ಆಗ ನಡೆಯುತ್ತಿದ್ದುದೇ ಹಾಗೆ' ಎಂದ ಸುನಿಲ್. ಹೀಗೇ ಒಂದು ರಜೆಯಲ್ಲಿ ಆತ ಚಿಕ್ಕಪ್ಪಂದಿರ ಮನೆಗೆ ಹೋಗಿದ್ದಾಗ ಇತ್ತೀಚಿನ ಹೊಸ ಮಹಾರಾಣಿಗಾಗಿ ಅರಮನೆ ಕಟ್ಟಿಸುವ ಕೆಲಸದಲ್ಲಿ ಚಿಕ್ಕಪ್ಪಂದಿರು ತೊಡಗಿದ್ದರು. ಅದು ಬೆಟ್ಟದ ಮೇಲಿದ್ದ ಒಂದು ಪುಟ್ಟ ಸುಂದರ ಅರಮನೆಯಾಗಿತ್ತು. ವಿದ್ಯುತ್ ಇಂಜಿನೀಯರ್ ಆಗಿದ್ದ ಚಿಕ್ಕಪ್ಪ, ಕಾರಂಜಿಗಳಿಗೆ ಬಣ್ಣ-ಬಣ್ಣದ ಹೊನಲು ಬೆಳಕಿನ ವಿದ್ಯುದ್ದೀಪಗಳ ವ್ಯವಸ್ಥೆಯಲ್ಲಿ ನಿರತರಾಗಿದ್ದರು. ಭೂಗರ್ಭ ವಿಜ್ಞಾನಿ ಚಿಕ್ಕಪ್ಪ ಅಲಂಕಾರಿಕ ಬಣ್ಣ-ಬಣ್ಣದ ಕಲ್ಲುಗಳ ಜೋಡಣೆಯ [illegible] ನೋಡುತ್ತಿದ್ದರು. ಮಹಾರಾಣಿ ಅರಮನೆಯನ್ನು ತ್ಯಜಿಸಿ ಹೋಗುವುದಕ್ಕೆ ಅಥವಾ [illegible] ಆಕೆಯನ್ನು ಹೊರಹಾಕುವುದಕ್ಕೂ ಮೊದಲು ಈ ರತ್ನದಂಥ ಅರಮನೆಯಲ್ಲಿ [illegible]

ವಾಸಮಾಡಿದ್ದು ತೀರ ಕಡಿಮೆ. ಮಹಾರಾಜರ ಕುಖ್ಯಾತ ಚಟುವಟಿಕೆಗಳ ಪಟ್ಟಿಯಲ್ಲಿ ಕೊಲೆಯೂ ಸೇರಿತು ಎಂದು ಈ ಹಿಸ್ ಹೈನೆಸ್ ಕುರಿತು ಕೆಲವರು ಬಹಿರಂಗವಾಗೇ ಆಡಿಕೊಳ್ಳುತ್ತಿದ್ದರು. ಆದರೆ ಅಧಿಕೃತ ಪ್ರಕಟಣೆಯಲ್ಲಿ ಅದಕ್ಕೆ ಕೊಟ್ಟ ಹೆಸರು 'ಆತ್ಮಹತ್ಯೆ'.

ಇದೇನೇ ಇರಲಿ, ರಾಜನಿಗೆ ಈ ಅರಮನೆಯ ನೋಟವನ್ನು ಸಹಿಸುವುದು ಅಸಾಧ್ಯ ವಾಯಿತು. ಹೀಗಾಗಿ ಅದನ್ನು ಡೈನಮೈಟ್ ಇಡಿಸಿ, ನೆಲಸಮ ಮಾಡಿಸಿದ. ಆನಂತರದಿಂದ ನಗರದ ಮುಖ್ಯ ರಸ್ತೆಯ ಕೊನೆಯಲ್ಲಿದ್ದ ಬೆಟ್ಟದ ತುದಿ ಬೋಳಾಗಿ ಕಾಣಿಸುತ್ತಿತ್ತು. ಜನ ಆ ಬಗ್ಗೆಯೇ ಸದಾ ಮಾತಾಡಿಕೊಳ್ಳುತ್ತಿದ್ದರು. ಇದನ್ನು ತಾಳಿಕೊಳ್ಳುವುದು ರಾಜನಿಗೆ ಸಾಧ್ಯವಿರಲಿಲ್ಲ. ಈ ಬೋಳುಬೆಟ್ಟ ಕಣ್ಣೆದುರು ಇರಬಾರದೆನ್ನಿಸತೊಡಗಿತು. ಹೀಗಾಗಿ ಆ ಬೆಟ್ಟವನ್ನೇ ಸ್ಫೋಟಿಸಿ ನೆಲಸಮ ಮಾಡಿಸಿದ. ನಾನು ಬೇಸಿಗೆ ರಜೆಯಲ್ಲಿ ಅಲ್ಲಿದ್ದಷ್ಟು ದಿನವೂ ಡೈನಮೈಟ್‌ಗಳನ್ನಿಟ್ಟು ಸ್ಫೋಟಿಸುವ ಕೆಲಸ ನೋಡುವುದೇ ಆಯಿತು. ಪ್ರತಿ ರಾತ್ರಿ, ಬೆಟ್ಟವನ್ನು ಸ್ಫೋಟಿಸುವ ಸದ್ದು ನನ್ನ ಚಿಕ್ಕಪ್ಪಂದಿರ ಮನೆಗೆ ಕೇಳುತ್ತಿತ್ತು. ನನ್ನ ರಜೆ ಮುಗಿಯುವ ಹೊತ್ತಿಗೆ ಬೆಟ್ಟ ನೆಲಸಮವಾಗಿತ್ತು ಎಂದು ಸುನಿಲ್ ಕಥೆ ಮುಗಿಸಿದ.

ಮತ್ತೊಂದು ಬೇಸಿಗೆಯಲ್ಲಿ, ಯಥಾ ಪ್ರಕಾರ ಸುನಿಲ್ ಚಿಕ್ಕಪ್ಪಂದಿರ ಮನೆಗೆ ಬಂದಾಗ, ಬೆಟ್ಟ ನೆಲಸಮವಾಗಿದ್ದ ಜಾಗದಲ್ಲಿ ಜೇನುಗೂಡಿನಂಥ ಚಟುವಟಿಕೆ ನಡೆದಿತ್ತು. ಅಲ್ಲಿ ಹೊಸದೊಂದು ಅರಮನೆಯ ನಿರ್ಮಾಣಕ್ಕೆ ರಾಜ ಆಜ್ಞೆ ಮಾಡಿದ್ದ. ಅದು ಎತ್ತರಕ್ಕೆ ಹೊಳೆಯುತ್ತಿದ್ದ ಕಟ್ಟಡ. ಫಳಫಳನೆ ಹೊಳೆವ ಕಲ್ಲುಗಳ ಹೊದಿಕೆ ಹಾಗೂ ಭಾರೀ ವಿದ್ಯುತ್ ಸಲಕರಣೆಗಳನ್ನು ಅಳವಡಿಸಿದ ಆಧುನಿಕ ರೀತಿಯ ಅರಮನೆ. ಒಟ್ಟಿನಲ್ಲಿ ಈ ಅರಮನೆಯೂ ನನ್ನ ಇಬ್ಬರೂ ಚಿಕ್ಕಪ್ಪಂದಿರಿಗೆ ಬಿಡುವು ಸಿಗದಷ್ಟು ಕೆಲಸ ಒದಗಿಸಿತ್ತು. ಭೂಗರ್ಭ ವಿಜ್ಞಾನಿ ಚಿಕ್ಕಪ್ಪ ಅರಮನೆಯ ಪ್ರತಿಯೊಂದು ಕೋಣೆಗೂ ಅಳ್ವಾರಿನಲ್ಲಿ ಸಿಗುವ ಸ್ಥಳೀಯ ಕಲ್ಲು ಚಪ್ಪಡಿಗಳ ಹಾಸನ್ನು ಮಾಡಿಸಬೇಕಿತ್ತು. ಒಂದು ಕೋಣೆಯದಕ್ಕಿಂತ ಇನ್ನೊಂದು ಕೋಣೆಯ ಕಲ್ಲಿನ ಬಣ್ಣ ಸಂಪೂರ್ಣ ಬೇರೆಯೇ ಆಗಿರಬೇಕಿತ್ತು. ಅದಕ್ಕಾಗಿ ಕಲ್ಲುಗಳ ಹುಡುಕಾಟ ನಡೆಸಿದ್ದರು. ವಾಸ್ತವವಾಗಿ ಅವರು ಕಲ್ಲಿದ್ದಲ ಗಣಿಗಾರಿಕೆ ಅಭಿವೃದ್ಧಿಯ ಕೆಲಸ ನೋಡಿ ಕೊಳ್ಳಬೇಕಿತ್ತು. ಆದರೆ ಈಗ ಅದನ್ನು ಅರ್ಧಕ್ಕೆ ಬಿಟ್ಟು ಬಣ್ಣದ ಕಲ್ಲುಗಳನ್ನು ಹುಡುಕುತ್ತಾ ತಿಂಗಳಾನುಗಟ್ಟಲೆ ಅಲೆಯುತ್ತಿದ್ದರು. ಅರಮನೆಯ ನೆಲಕ್ಕೆ ಕಲ್ಲುಗಳ ಶೋಧನೆ ಅವರ ಪೂರ್ಣ ಕೆಲಸವಾಗಿಬಿಟ್ಟಿತು.

ಇನ್ನೊಬ್ಬ ಚಿಕ್ಕಪ್ಪನ ಪರಿಸ್ಥಿತಿಯೂ ಇದಕ್ಕಿಂತ ಭಿನ್ನವಾಗಿರಲಿಲ್ಲ. ಅರಮನೆಯ ದೀಪದ ಸ್ವಿಚ್ಚುಗಳ ಅಳವಡಿಕೆ, ಲ್ಯಾಂಪ್ ಶೇಡುಗಳ ಹೊಂದಾಣಿಕೆಯಾಗುವ ತನಕ ಅವರ ಜಲವಿದ್ಯುತ್ ಯೋಜನೆಗಳು ಸ್ಥಗಿತವಾಗಿದ್ದವು. ಮಹಾರಾಜರ ಅರಮನೆಗೆ ಮಾಮೂಲಿ ವಿದ್ಯುತ್ ಫಿಟಿಂಗ್‌ಗಳನ್ನು ಹಾಕುವಂತಿರಲಿಲ್ಲ. ಅದಕ್ಕಾಗಿ ಭಾರತದ ವಿವಿಧ ಪಟ್ಟಣಗಳಿಗೆ ಹೋಗಿ ಹುಡುಕಬೇಕಿತ್ತು. ಮಹಾರಾಜರ ನಿರ್ದಿಷ್ಟ ಸೂಚನೆಗೆ ತಕ್ಕಂಥ ಫಿಟಿಂಗ್‌ಗಳಿಗಾಗಿ ಅಮೇರಿಕೆಗೂ ಜನರನ್ನು ಕಳಿಸಬೇಕಿತ್ತು. ಎಲ್ಲವನ್ನೂ ಡಜನ್‌ಗಟ್ಟಲೆ, ನೂರುಗಟ್ಟಲೆ ಪ್ರಮಾಣದಲ್ಲಿ ತರಿಸಬೇಕಿತ್ತು.

ನಾವೆಲ್ಲಾ ಆಗ ಚಿಕ್ಕ ಹುಡುಗರು, ಈ ನಿರ್ಮಾಣ ಕಾರ್ಯ ನಡೆಯುವಾಗ ನಮ್ಮ ಅಲೆದಾಟವೆಲ್ಲ ಅರಮನೆಯ ಸುತ್ತಮುತ್ತಲಲ್ಲಿಯೇ. ಬಾತ್‌ರೂಮ್‌ಗಳು ಝುಗಝುಗಿಸುತ್ತಿದ್ದವು. ಒಂದು ಬಾತ್‌ರೂಮಿನಲ್ಲಿ ಭಾರೀ ಸ್ನಾನದ ಟಬ್ ಇತ್ತು. ನೀರಿನಲ್ಲಿ ಕಿರು ಅಲೆಗಳನ್ನು ಏಳಿಸುವ, ನೊರೆಯನ್ನು ಉಕ್ಕಿಸುವಂಥ ವಿವಿಧ ಸಲಕರಣೆಗಳನ್ನು ಅದಕ್ಕೆ ಅಳವಡಿಸಲಾಗಿತ್ತು. ನಮಗೆ ಕುತೂಹಲ. ನಾನು ಟಬ್‌ನಲ್ಲಿ ಕುಳಿತು ಒಂದು ಸ್ವಿಚ್ ಒತ್ತಿದೆ. ನದಿಯಲ್ಲಿರುವಂತೆಯೇ ಕಿರು ಅಲೆಗಳು ಏಳತೊಡಗಿದವು. ಇನ್ನೊಂದು ಸ್ವಿಚ್ ಒತ್ತಿದರೆ ಎಲ್ಲ ಕಡೆಯಿಂದ ನೀರಿನ ಧಾರೆಗಳು ಕಾರಂಜಿಯಂತೆ ಚಿಮ್ಮಿ ಬಂದು ಕಚಕುಳಿಯಿಡುತ್ತಿದ್ದವು. ಯಾವ ಸ್ವಿಚ್ ಒತ್ತಿದರೆ ಏನಾಗುತ್ತೋ ಗೊತ್ತಾಗುತ್ತಿರಲಿಲ್ಲ. ಒಟ್ಟಿನಲ್ಲಿ ತಬ್ಬಿಬ್ಬು ಮಾಡುವಂಥ ವ್ಯವಸ್ಥೆ. "ನೋಡಿ ಇದೆಲ್ಲವೂ ರಾಜ್ಯದ ವಿದ್ಯುತ್ ಇಂಜಿನಿಯರ್ ಮಾಡಬೇಕಾಗಿದ್ದ ಕೆಲಸ" ಎಂದು ಹೇಳಿದ ಸುನಿಲ್.

ಹೀಗೆ ವಿದ್ಯುದೀಕೃತ ಸ್ನಾನದ ಟಬ್ ಹಾಗೂ ನವಿಲುಗಳು ನಲಿದಾಡುವಂಥ ಉದ್ಯಾನವನ ಎಲ್ಲ ಸಿದ್ಧವಾದ ಮೇಲೆ, ಮಹಾರಾಜ ಹಳೆಯ ಅರಮನೆಯನ್ನು ಬಿಟ್ಟು ಹೊಸ ಅರಮನೆಗೆ ಹೊರಡಲು ಸಿದ್ಧನಾದ. ಅದಕ್ಕಾಗಿ 'ಗೃಹಪ್ರವೇಶ' ಸಮಾರಂಭವಾಗಬೇಕಿತ್ತು. ರಾಜ - ಪುರೋಹಿತರು ಧಾರ್ಮಿಕ ವಿಧಿಗಳನ್ನು ವಿದ್ಯುಕ್ತವಾಗಿ ನೆರವೇರಿಸಿದರು. ಕೆಲವೊಂದು ಆಹುತಿಗಳೂ ನಡೆದವು. ಮಹಾರಾಜರು ಪ್ರಾರ್ಥನೆಗಳನ್ನು ಸಲ್ಲಿಸಿದ್ದೂ ಮುಗಿಯಿತು.

ಸೂಕ್ತ ಪರಿವಾರ, ವೈಭವೋಪೇತ ಸಂಭ್ರಮಗಳಿಂದ ಮಹಾರಾಜರು ಮುಂಬಾಗಿಲಿನತ್ತ ನಡೆಯತೊಡಗಿದರು. ಅವರ ಪಾದ ಹೊಸ್ತಿಲನ್ನು ಸ್ಪರ್ಶಿಸಿತ್ತು. ಅವರು ಅದನ್ನು ದಾಟಿ ಒಳಗೆ ಅಡಿಯಿಡುವ ಹೊತ್ತಿಗೆ ಸರಿಯಾಗಿ ಬಾಗಿಲ ಮೇಲು ಚೌಕಟ್ಟಿನಿಂದ ಅಲಂಕಾರಿಕ ಪ್ಲಾಸ್ಟರ್ ಚೂರೊಂದು ಕಳಚಿ ಅವರ ತಲೆಯ ಮೇಲೆ ಬಿತ್ತು. ಅದು 'ರಾಜಶಿರ'ವನ್ನು ಘಾಸಿಗೊಳಿಸುವಷ್ಟು ದೊಡ್ಡ ಚೂರೇನೂ ಆಗಿರಲಿಲ್ಲ. ಆದರೆ ಮೂಢನಂಬಿಕೆಗಳ ಈ ಮನುಷ್ಯ ಇದನ್ನು ಅಪಶಕುನವೆಂದು ಪರಿಗಣಿಸಲು ಇಷ್ಟೇ ಸಾಕಾಯಿತು.

ಚಿಕ್ಕ ಹುಡುಗರಿಗೆ ನೀಡಿದ ರೋಮಾಂಚನದ ಸಂತೋಷವನ್ನು ಮಹಾರಾಜರಿಗೆ ನೀಡುವ ಅವಕಾಶ ಬಾತ್‌ಟಬ್‌ಗೆ ಲಭಿಸಲೇ ಇಲ್ಲ. ಸುನಿಲ್ ನೆನಪಲ್ಲಿ ಉಳಿದಂತಹ ಚಿಮ್ಮುಧಾರೆಗಳಿಗೆ ಮಹಾರಾಜರ ನೀಳಕಾಯಕ್ಕೆ ಕಚಗುಳಿಯಿಡುವ ಅವಕಾಶ ಸಿಗಲೇ ಇಲ್ಲ. ಅಲಂಕಾರಿಕ ವಿದ್ಯುತ್ ದೀಪಗಳ ಸ್ವಿಚ್ಚುಗಳಿಗೆ ಮಹಾರಾಜರ ಕಂಪಿಸುವ ಬೆರಳುಗಳ ಸ್ಪರ್ಶ ಆಗಲೇ ಇಲ್ಲ. ಮತ್ತೆ ತೆಗೆಯಲಾಗದಂತೆ ಅರಮನೆಯ ಬಾಗಿಲುಗಳನ್ನು ಸೀಲ್ ಮಾಡಲಾಯಿತು. ಹೊಸ ಅರಮನೆಯಲ್ಲಿ ಮಹಾರಾಜ ಎಂದೂ ನೆಲೆಸಲಿಲ್ಲ.

ಇಂಥ ಪ್ರದರ್ಶನ ಆಡಂಬರಗಳ ತಂದೆಯ ಪದಚ್ಯುತಿಯ ನಂತರ ಗದ್ದುಗೆ[illegible] ಏರಿದ ಅಳ್ವಾರಿನ ಯುವ ಮಹಾರಾಜನ ದೃಷ್ಟಿ ಬೇರೆಯೇ ಥರದ್ದಾಗಿತ್ತು. ಮಹಾ[illegible] ಪ್ರಜೆಗಳ ಧರ್ಮದರ್ಶಿ ಇದ್ದಂತೆ ಎಂಬುದನ್ನು ಆತ ಎಂದೂ ಮರೆಯಲಿಲ್ಲ. [illegible]

ಗಂಭೀರ ಹಾಗೂ ಧರ್ಮಭೀರು ಸ್ವಭಾವದ ಈ ಯುವಕನ ಹಾಗೆ ಬಹುಶಃ ಯಾರೂ ಕೂಡ ಇಷ್ಟು ಚೆನ್ನಾಗಿ ಟ್ರಸ್ಟೀಶಿಪ್ ತತ್ವವನ್ನು ಎತ್ತಿ ಹಿಡಿದಿರಲಿಕ್ಕಿಲ್ಲ. ಹಿರಿಯ ಮಹಾರಾಜನ ವೈಯಕ್ತಿಕ ರಂಗುರಂಗಿನ ಬದುಕಿಗೆ ಪ್ರತಿಯಾಗಿ ಈತನ ಖಾಸಗಿ ಜೀವನ ಕುರಿತಂತೆ ಯಾವೊಂದು ಪುಕಾರೂ ಇರಲಿಲ್ಲ. ಜನ ಈತನನ್ನು ಧರ್ಮನಿಷ್ಠ ವಿರಕ್ತ ಎಂದು ಪರಿಗಣಿಸುವಷ್ಟರ ಮಟ್ಟಿಗೆ ಈತನ ಬದುಕು ಊಹಾಪೋಹಗಳಿಂದ ಮುಕ್ತವಾಗಿತ್ತು.

ಸದಾಕಾಲ ವೇದಾಧ್ಯಯನದಲ್ಲಿ ನಿರತನಾಗಿರುತ್ತಿದ್ದ ಈತ ಯಾವಾಗಾದರೊಮ್ಮೆ ಸಾರ್ವಜನಿಕವಾದ ಹೇಳಿಕೆಗಳನ್ನು ಕೊಡುವುದಕ್ಕಾಗಿ ಇಲ್ಲವೇ ಯಾವುದಾದರೂ ನಿಯೋಗ ಗಳನ್ನು ಭೇಟಿಮಾಡಲು ಮಾತ್ರ ತನ್ನ ಅಧ್ಯಯನ ಬಿಟ್ಟು ಈಚೆ ಕಾಣಿಸಿಕೊಳ್ಳುತ್ತಿದ್ದ. ಪ್ರಜಾಮಂಡಳಿಯ ಸ್ಥಳೀಯ ಸದಸ್ಯರೊಂದಿಗೆ ಆತನ ಭೇಟಿ ಮುಗಿದ ಸನಿಹದಲ್ಲಿಯೇ ನಾನು ಅಳ್ವಾರ್ ರಾಜ್ಯಕ್ಕೆ ಭೇಟಿ ನೀಡುವ ಸಂದರ್ಭ ಒದಗಿತ್ತು. ರಾಜನು ಭರವಸೆ ನೀಡಿದ್ದ ಆಶ್ವಾಸನೆಗಳನ್ನು ಇದುವರೆಗೆ ಜಾರಿಗೆ ತರದಿರುವ ಬಗ್ಗೆ ಆತನಿಗೆ ನೆನಪಿಸುವುದು ಪ್ರಜಾ ಮಂಡಳಿಯವರ ಭೇಟಿಯ ಉದ್ದೇಶವಾಗಿತ್ತು. ಇದಕ್ಕೆ ಮಹಾರಾಜ ನೀಡಿದ ಉತ್ತರ ಧರ್ಮಶಾಸ್ತ್ರದ ತೀರ್ಮಾನ ನುಡಿಯಂತೆ ಇತ್ತು. ಆತ ಹೇಳಿದ್ದೇನೆಂದರೆ "ನಾವು ಸೂರ್ಯದೇವನ ವಂಶಜರು. ಪ್ರಜೆಗಳೇ ನಮ್ಮ ಮಕ್ಕಳು. ಇದು ತಂದೆ ಮಗನ ಸಂಬಂಧದಂತೆ. ಧರ್ಮಗ್ರಂಥಗಳಲ್ಲಿ ಸುಧಾರಣೆಗಳ ವಿಷಯ ಹೇಳಿಲ್ಲ. ತಂದೆ ಮಗನ ನಡುವೆ ಸುಧಾರಣೆಗಳ ಪ್ರಶ್ನೆ ಏಳುವುದಿಲ್ಲ".

ಆದರೆ ಈ ತಂದೆ ಮಗನ ಸಂಬಂಧದ ಫಲಿತಾಂಶವೇನು ಎಂಬುದು ಕೆಲವು ಕಾಲೇಜು ವಿದ್ಯಾರ್ಥಿಗಳೊಡನೆ ಮಾತನಾಡಿದಾಗ ಅರಿವಾಯಿತು. ಈ ಹುಡುಗರು 'ಕುರ್ಚಿಗಳಿಂದ ಮುರಿದಿದ್ದವು ಇಳಿಯಿರಿ' 'ಸಿಂಹಾಸನಗಳನ್ನು ಖಾಲಿಮಾಡಿ' ಎಂಬ ಬ್ಯಾನರ್‌ಗಳನ್ನು ಹಿಡಿದು ಮುಖ್ಯರಸ್ತೆಗಳಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿದ ಪ್ರಯುಕ್ತ ಲಾಠಿಚಾರ್ಜ್ ನಡೆಸಲಾಗಿತ್ತು. ಅನೇಕ ಹುಡುಗರು ಹೊಡೆತ ತಿಂದಿದ್ದರು. ಕೆಲವರ ಬೆರಳುಗಳು ಮುಂದಿದ್ದವು. ಅನೇಕರನ್ನು ಜೈಲಿಗೆ ಹಾಕಲಾಗಿತ್ತು.

"ಸಿಂಹಾಸನವನ್ನು ಖಾಲಿಮಾಡಿ" ಎಂಬುದು "ಬೇಜವಾಬ್ದಾರಿಯುತ ಸಚಿವರನ್ನು ಒದ್ದೋಡಿಸಿ, ಸರ್ಕಾರದಲ್ಲಿರಬೇಕಾದ ನಮ್ಮ ಪ್ರತಿನಿಧಿಗಳನ್ನು ನಾವೇ ಆಯ್ಕೆ ಮಾಡಿಕೊಳ್ಳುತ್ತೇವೆ" ಎಂದು ತಿಳಿಸುವ ಭಾರತೀಯ ಶೈಲಿ. ಈ ಪ್ರತಿಭಟನಾ ಮೆರವಣಿಗೆ ನಡೆಸುವ ಮೂಲಕ ಪ್ರತಿಭಟನಾ ಮೆರವಣಿಗೆಗಳನ್ನು, ಸಭೆಗಳನ್ನು ಅಥವಾ ೫ ಜನಕ್ಕಿಂತ ಹೆಚ್ಚು ಜನ ಗುಂಪು ಗೂಡುವುದನ್ನು ನಿಷೇಧಿಸುವ ಸಂವಿಧಾನದ ೧೪೪ನೇ ಅನುಚ್ಛೇದವನ್ನು ಈ ಹುಡುಗರು ಉಲ್ಲಂಘಿಸಿದಂತಾಗಿತ್ತು.

ಚಿಕ್ಕ ಚಿಕ್ಕ ಶಾಲಾ ಹುಡುಗರೂ ಈ ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ಮತ್ತು ಧರ್ಮದರ್ಶಿಯ ನಂಬಿಕೆಯ ವೀರಭಟರು ಚಿಕ್ಕ ಶಾಲಾ ಮಕ್ಕಳಿಗೆ ನೀಡಿದ ಶಿಕ್ಷೆಯಲ್ಲಿ ಏನೂ ವ್ಯತ್ಯಾಸವಿರಲಿಲ್ಲ. ಅವರು ಈ ಹುಡುಗರನ್ನು ಎರಡು ಮಿಲಿಟರಿ ಲಾರಿಗಳಲ್ಲಿ ತುಂಬಿದರು.

ಸುಮಾರು ೪೦ ಮಂದಿ ಸಶಸ್ತ್ರ ಸೈನಿಕರ ಬೆಂಗಾವಲಿನಲ್ಲಿ ಹೊರಟ ಈ ಲಾರಿಗಳು ಮಕ್ಕಳನ್ನು ದೂರದ ಕಾಡಿನಲ್ಲಿ ಬಿಟ್ಟು ಹಿಂದಿರುಗಿದವು.

ಅಳ್ವಾರಿನಲ್ಲಿ ಬಹು ವಿಶೇಷ ರೀತಿಯ ಕಾಡುಗಳಿವೆ. ಹುಲಿಬೇಟೆಗೆ ಈ ರಾಜ್ಯ ಹೆಸರಾದ ತಾಣ ಮತ್ತು ಭಾರತದಲ್ಲಿ ಈ ಅರಣ್ಯಗಳನ್ನು ಬಿಟ್ಟರೆ ಇನ್ನೆಲ್ಲಿಯೂ ಸಿಂಹಗಳು ಕಾಣಬರುವುದಿಲ್ಲ. ಲಾರಿಗಳು ಹುಡುಗರನ್ನು ಈ ಅರಣ್ಯದಲ್ಲಿ ಬಿಟ್ಟುಬಂದವು. ಸೈನಿಕರು ಬಂದೂಕಿನ ಗುರಿ ಹಿಡಿದು ಹೆದರಿಸಿ ಹುಡುಗರನ್ನು ಅಲ್ಲಿ ಇಳಿಸಿದ್ದರು. ಆದರೆ ಈ ಹುಡುಗರು ಹೆದರದೆ ಅನೇಕ ರೀತಿಯ ಸಾಹಸಗಳನ್ನು ಮಾಡಿದ್ದ ಸಂಗತಿಯನ್ನು ಇದೇ ಲಾರಿಗಳ ಡ್ರೈವರ್‌ಗಳಲ್ಲಿ ಒಬ್ಬ ನನಗೆ ತಿಳಿಸಿದ. ಅಲ್ಲಿ ಒಟ್ಟು ೫೨ ಹುಡುಗರಿದ್ದರು. ಅವರೆಲ್ಲರೂ "ನಾವು ನಿಮ್ಮ ಬಂದೂಕುಗಳಿಗೆ ಹೆದರುವುದಿಲ್ಲ" ಎಂದು ಕೂಗಿದ್ದರು. ಎತ್ತರಕ್ಕಿದ್ದ ಒಬ್ಬ ಹುಡುಗನ ವಶಕ್ಕೆ ಒಂದು ಕೊಡದಷ್ಟು ಕುಡಿಯುವ ನೀರನ್ನು ಮಾತ್ರ ಕೊಡಲಾಗಿತ್ತು. ಆಮೇಲೆ ಆ ಗುಂಪಿನ ಜಯಂತಿಪ್ರಸಾದ್ ಎಂಬ ೧೨ ವರ್ಷದ ಒಬ್ಬ ಚಿಕ್ಕ ಹುಡುಗನನ್ನು ನಾನು ಮಾತಾಡಿಸಿದ್ದೆ. ದೊಡ್ಡ ಕಣ್ಣುಗಳ ತುಂಬುಗಲ್ಲದ ಹುಡುಗ. ಅವನಲ್ಲಿ ವಯಸ್ಸಿಗೆ ಮೀರಿದ ಗಾಂಭೀರ್ಯವಿತ್ತು. "ನಮ್ಮನ್ನು ಬಂಧಿಸಿ ಎಂದು ಹೇಳಿ ನಾವೇ ಮುಂದೆ ಬಂದೆವು. ನೀವು ಕೊಡುವ ನೀರೂ ನಮಗೆ ಬೇಕಿಲ್ಲ ಎಂದು ಹೇಳಿದೆವು" ಎಂದು ತಿಳಿಸಿದ. ಇದು ಪ್ರತಿಭಟನಾ ನಿರಾಕರಣದ ಪಕ್ಕಾ ಭಾರತೀಯ ರೀತಿ. ಈ ಹುಡುಗರ ತಂದೆ ತಾಯಿಗಳೂ ಸಹ ಪ್ರಜಾರಾಜ್ಯದ ಬೇಡಿಕೆಗಾಗಿ ಸಶಸ್ತ್ರ ಪೊಲೀಸರ ಆಜ್ಞೆಗಳನ್ನು ತಿರಸ್ಕರಿಸಿದವರಾಗಿದ್ದರು.

ಹೀಗೆ ಹುಡುಗರನ್ನು ಬಿಟ್ಟು ಬಂದ ಮಿಲಿಟರಿ ಲಾರಿಯ ಚಾಲಕನು ಮತ್ತೊಬ್ಬ ಲಾರಿ ಚಾಲಕನಿಗೆ ಈ ಸಂಗತಿ ತಿಳಿಸಿದ್ದ. ಅವನು ಊರಿನವರಿಗೆಲ್ಲ ಸುದ್ದಿ ಮುಟ್ಟಿಸಿದ್ದ. ಕೆರಳಿದ ಜನ ತಾವೇ ಅರಣ್ಯಕ್ಕೆ ಹೋಗಿ ಹುಡುಗರನ್ನು ರಕ್ಷಿಸಿ ಕರೆತಂದಿದ್ದರು.

ಇಂಥ ಸಂಗತಿಗಳನ್ನು ನೋಡಿದಾಗ, ಪ್ರಜಾಮಂಡಳಿಗಳು ರಾಜರ ಆಡಳಿತದ ಭಾರತದಲ್ಲಿ ಯಾಕೆ ಬಲವಾಗಿ ಬೆಳೆಯುತ್ತಿವೆ ಎಂಬುದನ್ನು ಸುಲಭವಾಗಿ ಅರ್ಥಮಾಡಿಕೊಳ್ಳಬಹುದು. ದಮನಕ್ಕೊಳಗಾದ ವಿವಿಧ ವೃತ್ತಿಗಳ ಹಾಗೂ ವಿವಿಧ ಪ್ರದೇಶಗಳ ಜನರು ಜವಾಬ್ದಾರಿಯುತ ಸರಕಾರಕ್ಕಾಗಿ ನಡೆಯುತ್ತಿರುವ ಚಳವಳಿಗಳಲ್ಲಿ ಉತ್ಸಾಹದಿಂದ ಭಾಗಿಯಾಗಿದ್ದರು. ಭಾರತದ ಸ್ವಾತಂತ್ರ್ಯಕ್ಕಾಗಿ ನಡೆದ ಸುದೀರ್ಘ ಚಳವಳಿಯಲ್ಲಿ ಜನತೆಯ ಚಳವಳಿಗೆ ನೆಹರೂ ಸಮರ್ಥ ಕ್ರಿಯಾಶೀಲ ನಾಯಕತ್ವ ಒದಗಿಸಿದ್ದರು. ಲಿಂಕನ್ ಹೇಳಿದ ಮಾತುಗಳಿಗೇ ನೆಹರೂ ಧ್ವನಿ ನೀಡಿದ್ದರು. ಅದು ಭಾರತದಾದ್ಯಂತ ಮಾರ್ದನಿಸುತ್ತಿತ್ತು. "ಭಾರತವು ಅರ್ಧ ಗುಲಾಮಗಿರಿ ಯಲ್ಲಿದ್ದು ಅರ್ಧ ಸ್ವತಂತ್ರವಾಗಿರಲು ಸಾಧ್ಯವಿಲ್ಲ".

ಅಳ್ವಾರ್ ಒಂದು ಚಿಕ್ಕ ರಾಜ್ಯವಾಗಿದ್ದರೂ ಸಹ ಬದಲಾವಣೆಗಾಗಿ ಹಾತೊರೆಯುತ್ತಿತ್ತು. ಎಲ್ಲೆಲ್ಲೂ ಪ್ರತಿಭಟನೆಗಳು ನಡೆಯುತ್ತಿದ್ದವು. ಪ್ರಜಾಪ್ರಭುತ್ವವನ್ನು ಹತ್ತಿಕ್ಕುವಂತಹ ಪ್ರಯ[illegible] ವಿರುದ್ಧ ಹೋರಾಟ ನಡೆಸುವಾಗ ಜನತೆ ಎದುರಿಸಬೇಕಾದ ಯಾವುದೇ ಅ[illegible] ಹಿಂದೂ ಮುಸ್ಲಿಮರಿಬ್ಬರೂ ಸಮಾನವಾಗೇ ಸಿದ್ಧವಾಗಿದ್ದರು. ಬೃಹತ್ ಕಾಶ್ಮೀರದಿಂದ [illegible]

ಚಿಕ್ಕ ಭರತ್‌ಪುರದವರೆಗೆ ಎಲ್ಲೆಲ್ಲಿಯೂ ದೈವಾಂಶಸಂಭೂತರ ಆಳ್ವಿಕೆಯಲ್ಲಿ ತಮ್ಮ ಶಕ್ತಿಗೂ ಮೀರಿ ಬವಣೆಗಳನ್ನು ಅನುಭವಿಸಿದ್ದಂತಹ ರೈತರು, ಕೈಕಸುಬುದಾರರು, ವರ್ತಕ ವರ್ಗದವರು ಈಗ ಜಾಗೃತಗೊಂಡಿದ್ದರು.

ಆದರೆ ಮಹಾರಾಜರ ದೈವಿಕ ಹಕ್ಕು ಅಷ್ಟು ಸುಲಭವಾಗಿ ನಾಶವಾಗುವುದಿಲ್ಲ. ಬಲವಾದ ಹೋರಾಟವಿಲ್ಲದೆ ಇಂತಹ ಅಸಾಧಾರಣ ಸುಯೋಗವನ್ನಾಗಲೀ, ಅಧಿಕಾರವನ್ನಾಗಲೀ ನಿರ್ಮೂಲನ ಮಾಡಲು ಸಾಧ್ಯವಿಲ್ಲ. ಪ್ರಜೆಗಳ ಕೈಗೆ ಅಧಿಕಾರ ಸಿಕ್ಕರೆ ತಮ್ಮ ರಾಜಯೋಗ್ಯ ಸವಲತ್ತುಗಳೆಲ್ಲ ಮೇಲೇಳುತ್ತಿರುವ ಪ್ರಜಾಪ್ರಭುತ್ವದ ಅಲೆಯಲ್ಲಿ ದುಡುಮ್ಮನೆ ಮುಳುಗಿ ಹೋಗಿಬಿಡುತ್ತವೆ ಎಂಬುದು ರಾಜರುಗಳಿಗೆ, ನವಾಬರಿಗೆ ಬಹಳ ಚೆನ್ನಾಗಿ ಗೊತ್ತಿತ್ತು.

ಆಗ ಧರ್ಮಯುದ್ಧಗಳ ರೂಪದಲ್ಲಿ ವಿಧಿಯೇ ಅವರ ನೆರವಿಗೆ ಬಂತು. ಸ್ವಾತಂತ್ರ್ಯ ದಿನದಂದು ಅಷ್ಟೊಂದು ಶಕ್ತಿಯುತವಾಗಿ, ಪೂರ್ಣ ಆಶಾಯುತವಾಗಿ ನಡೆಯುತ್ತಿದ್ದ ಆಳ್ವಾರ್ ಚಳವಳಿಯ ಬೆನ್ನೆಲುಬು ಕೇವಲ ಆರು ತಿಂಗಳೊಳಗಾಗಿ ಮುರಿದು ಬಿತ್ತು. ತಮ್ಮ ಪಕ್ಕದ ಬೀದಿಯಲ್ಲೇ ಅತ್ಯಂತ ಬರ್ಬರವಾದ ಧಾರ್ಮಿಕಯುದ್ಧದ ರಕ್ತಪಾತವಾಗುವ ಭೀತಿ ಜನಗಳಲ್ಲಿರುವಾಗ, ಅವರೆಲ್ಲ ಒಂದುಗೂಡಿ ತಮ್ಮ ನಾಗರೀಕ ಹಕ್ಕುಗಳಿಗಾಗಿ ಹೋರಾಡುವುದು ಬಹಳ ಕಷ್ಟ. ಹೀಗೆ ಪ್ರಜಾಮಂಡಳಿಯ ಹೋರಾಟ ದುರ್ಬಲಗೊಳ್ಳುತ್ತಿದ್ದಂತೆ ಮೂಲಭೂತವಾದೀ ಆಗಿದ್ದ ರಾಷ್ಟ್ರೀಯ ಸೇವಕ ಸಂಘದ ಕೈ ಬಲವಾಗುತ್ತ ಹೋಯಿತು.

ರಾಜ್ಯದ ಪ್ರಜೊಪಕ್ಷಗಳಿಗೆ ದೊರೆಯದಿದ್ದಂಥ ಪ್ರಾಯೋಜಕತ್ವದ ಸೌಲಭ್ಯ ಆರ್.ಎಸ್.ಎಸ್.ನ ಮತಭ್ರಾಂತ ಯುವಕರಿಗೆ ಸುಲಭವಾಗಿ ದೊರಕಿತ್ತು. ಮಹಾರಾಜರ ಅರಮನೆಯಲ್ಲಿ ಅವರ ಬಹಿರಂಗ ಸಭೆಗಳು ಹಾಗೂ ಅನೇಕ ರಹಸ್ಯ ಸಮಾವೇಶಗಳು ನಡೆಯುತ್ತಿದ್ದುದು ನಿಸ್ಸಂದೇಹ. ಪ್ರಜಾಪ್ರಭುತ್ವಕ್ಕಾಗಿ ಹೋರಾಡುತ್ತಿದ್ದ ಜನರ ವಿರುದ್ಧ ಬಹಳ ಅನುಕೂಲಕಾರಿಯಾಗಿದ್ದ ೧೪೪ನೇ ಅನುಚ್ಛೇದ ಅಥವಾ ಇದರಷ್ಟೇ ಕುಪ್ರಸಿದ್ಧವಾಗಿದ್ದ ಸಾರ್ವಜನಿಕ ಸುರಕ್ಷಣಾ ಕಾಯಿದೆಗಳನ್ನು ಸುಲಭವಾಗಿ ಚಲಾಯಿಸಬಹುದಿತ್ತು. ಆದರೆ, ತೀರಾ ಧರ್ಮನಿಷ್ಠನಾದ ಹಿಂದೂ ಮಹಾರಾಜನ ಆಳ್ವಿಕೆಯಲ್ಲಿ ಹಿಂದೂ ಪಾರಮ್ಯತೆಯ ಗತಪುರಾತನ ವೈಭವವನ್ನು ಪುನರುಜ್ಜೀವಗೊಳಿಸಲು ಯತ್ನಿಸುತ್ತಿದ್ದಂಥ ಸಂಘಟನೆಯ ವಿರುದ್ಧ ಅದನ್ನು ಚಲಾಯಿಸುವುದು ಅಷ್ಟು ಸುಲಭವಾಗಿರಲಿಲ್ಲ.

ಇದರ ಮುಂದಿನ ಹಂತವೆಂದರೆ, ಜನರ ಬಡತನ ಸಂಕಷ್ಟಗಳಿಗೆ ಮಹಾರಾಜರು ಮತ್ತು ಅವರ ಭ್ರಷ್ಟ ಮಂತ್ರಿಗಳು ಕಾರಣವಲ್ಲ, ಮುಸ್ಲಿಮರೇ ಕಾರಣ ಎಂಬ ಭಾವನೆಯನ್ನು ಬಿತ್ತುವುದು. ಅಷ್ಟು ಮಾಡಿದರೆ ಸಾಕು ಮುಂದಿನ ಇತಿಹಾಸ ತನ್ನ ಜಾಡು ಹಿಡಿಯುತ್ತದೆ. ಅದು ಆಗಿದ್ದೂ ಹೀಗೆಯೇ. ಕೆಲವು ರಾಜ್ಯಗಳಲ್ಲಿ ಮತಾಂಧತೆಯ ಕ್ರೌರ್ಯ ಮುಗಿಲು ಮುಟ್ಟಿತು.

ರಾಜರ ಆಳ್ವಿಕೆಯಲ್ಲಿದ್ದ ಕೆಲವು ಸಂಸ್ಥಾನಗಳು ಮಾತ್ರ ಆಶ್ಚರ್ಯಕರ ರೀತಿಯಲ್ಲಿ ಧಾರ್ಮಿಕ ರಕ್ತಪಾತತನದಿಂದ ಮುಕ್ತವಾಗಿದ್ದವು. ಆದರೆ ಬಹುತೇಕ ಸಂದರ್ಭಗಳಲ್ಲಿ ಅದು ಕೆಲವರ

ಹಿತಾಸಕ್ತಿಗೆ ಮಾತ್ರ ಅನುಕೂಲವಾಗಿರುವಂಥ ಒಂದು ವಿಚಿತ್ರ ಪರಿಸ್ಥಿತಿಯನ್ನು ಕಾಣಬಹುದಿತ್ತು. ಆಳುವ ಮಹಾರಾಜನ ಧರ್ಮಕ್ಕೆ ಸೇರಿರದ ಯಾವ ಪ್ರಜೆಯನ್ನೂ ಆ ರಾಜ್ಯದ ಧಾರ್ಮಿಕ ಗಲಭೆಗಳು ತಟ್ಟದೆ ಇರಲಿಲ್ಲ. ಹಿಂದೂ ಮುಸ್ಲಿಂ ಎಂಬ ಎರಡು ಬಹುಸಂಖ್ಯಾತ ಧರ್ಮಗಳಲ್ಲಿ ಜನ ಯಾವುದಕ್ಕೆ ಸೇರಿದ್ದರೂ ಈ ತತ್ವ ಸಮಾನವಾಗಿ ಅನ್ವಯಿಸುತ್ತಿತ್ತು. ಮುಸ್ಲಿಂ ನವಾಬನ ಆಳ್ವಿಕೆ ಹೊಂದಿದ್ದ ಬಹಾವಲ್‌ಪುರದಲ್ಲಿ ಹಿಂದೂಗಳನ್ನು ಎಷ್ಟು ಕ್ರೂರವಾಗಿ ಹೊಡೆದೋಡಿಸಲಾಯಿತೆಂದರೆ ಗಾಂಧೀಜಿಯವರು ಶಾಂತಿಪಾಲನೆಗಾಗಿ ಅಲ್ಲಿಗೆ ತಮ್ಮ ಅನುಯಾಯಿಗಳ ನಿಯೋಗವನ್ನು ಕಳುಹಿಸಬೇಕಾಯಿತು. ಪಾಕಿಸ್ತಾನ ಗಡಿರೇಖೆಯ ಭಾಗಗಳಲ್ಲಿದ್ದ ಸಿಕ್ ರಾಜ್ಯಗಳಲ್ಲಿ ಮುಸ್ಲಿಮರ ಉಚ್ಚಾಟನೆ ಪರಮಾವಧಿ ಮುಟ್ಟಿತು. ಸರಿಯಾಗಿ ಹೇಳುವುದಾದರೆ ಇಂತಹ ಕೆಲವೊಂದು ರಾಜ್ಯಗಳಲ್ಲಿ ಧಾರ್ಮಿಕ ಅಲ್ಪಸಂಖ್ಯಾತರು ಅಲ್ಪಸಂಖ್ಯಾತರಾಗಿರಲೇ ಇಲ್ಲ. ಅತಿ ದೊಡ್ಡ ಸಿಖ್ ರಾಜ್ಯವಾಗಿದ್ದ ಪಾಟಿಯಾಲಾದಲ್ಲಿ ಜನಸಂಖ್ಯೆಯ ಅರ್ಧದಷ್ಟು ಜನ ಮುಸ್ಲಿಮರೇ ಆಗಿದ್ದರು. ಕಪುರ್ತಲದಲ್ಲಿ ಶೇ. ೬೫ರಷ್ಟು ಮುಸ್ಲಿಮರಿದ್ದರು.

'ಧಾರ್ಮಿಕ ಸಮಸ್ಯೆ'ಯನ್ನು ಅತ್ಯಂತ ಕುಶಲಗಾರಿಕೆಯಿಂದ ಪರಿಹರಿಸಿದ ದಾಖಲೆ ಕಪುರ್ತಲ ರಾಜನದು. ನಯಗಾರಿಕೆಗೆ ಹೆಸರಾದ ಈ ಮಹಾರಾಜ ಸೌಹಾರ್ದಯುತವಾಗೇ ಪರಿಸ್ಥಿತಿಯನ್ನು ನಿಭಾಯಿಸಿದ್ದ. ೭೫ರ ವಯಸ್ಸಿನ ಕಪುರ್ತಲದ ದೊರೆ ತನ್ನ 'ರಾಷ್ಟ್ರಾತೀತ' ಅಭಿರುಚಿಯಿಂದಾಗಿ ಭಾರತದ ಇತರ ಮಹಾರಾಜರುಗಳಿಗಿಂತ ವಿಭಿನ್ನ. ಆತನ ಹೆಂಡತಿಯರು ಬೇರೆ ಬೇರೆ ದೇಶಗಳ ಸುಂದರಿಯರು. ಸ್ಪ್ಯಾನಿಶ್, ಸರ್ಕೇಶಿಯನ್, ಜಾರ್ಜಿಯನ್, ಫ್ರೆಂಚ್ ಹಾಗೂ ಭಾರತ ಹೀಗೆ ಒಂದೊಂದು ರಾಷ್ಟ್ರದಿಂದ ಒಬ್ಬೊಬ್ಬರು. ಆದರೂ ಸಾಂಸ್ಕೃತಿಕವಾದ ಇತರ ಎಲ್ಲ ವಿಚಾರಗಳಲ್ಲೂ ಆತನ ಆದ್ಯತೆ ಇದ್ದುದು ಫ್ರಾನ್ಸ್‌ಗೆ. ಆತನ-ಆಸ್ಥಾನಿಕರು ಭಾಷಾ ತಜ್ಞರಾಗಿದ್ದು ತಮ್ಮ ರಾಜನ ಸುಸಂಸ್ಕೃತ ಕಿವಿಗೆ ಫ್ರೆಂಚ್ ಭಾಷೆ ಮಾತ್ರ ಕೇಳಿಸುವಂತೆ ನೋಡಿಕೊಳ್ಳಬೇಕಿತ್ತು. ಆತ ತನ್ನ ಡೈರಿ ಬರೆಯುತ್ತಿದ್ದುದು ಫ್ರೆಂಚ್ ಭಾಷೆಯಲ್ಲಿ. ಆತನ ಅರಮನೆ ವಾರ್ಸೈಲಿಸ್ ಅರಮನೆಯ ಯಥಾವತ್ ಅನುಕರಣೆಯಾಗಿತ್ತು. ಆಯಾ ಕಾಲಕ್ಕೆ ಒದಗಿಬಂದ ಕ್ಲಿಷ್ಟ ಪರಿಸ್ಥಿತಿಗಳನ್ನು ಆತ ಸಭ್ಯ ರೀತಿಯಲ್ಲಿ ಪರಿಹರಿಸುತ್ತಾನೆಂದು ನಿರೀಕ್ಷಿಸುವುದು ಸಹಜವೇ ಆಗಿತ್ತು.

ಇಸ್ಲಾಂ ಅನುಯಾಯಿಗಳಾಗಿದ್ದ ತನ್ನ ರಾಜ್ಯದ ಮೂರನೇ ಎರಡು ಭಾಗದಷ್ಟು ಜನಗಳಿಗೆ ಆತ, ಅನಿಶ್ಚಿತ ಪರಿಸ್ಥಿತಿಗಳಿಂದಾಗಿ ತಾನು ಅವರ ಸುರಕ್ಷಣೆಯ ಬಗ್ಗೆ ಖಾತರಿ ನೀಡಲಾರೆ ಅದಕ್ಕಾಗಿ ವಿಷಾದಿಸುತ್ತೇನೆ ಎಂದು ಪ್ರಕಟಿಸಿದ. ಆದರೆ ರಾಜನು ಪ್ರಜೆಗಳ ಧರ್ಮದರ್ಶಿ ಎಂಬುದನ್ನ ನಿಮಿಷಕ್ಕೂ ಮರೆಯದ ಆತ ತನ್ನ ಪಡೆಗಳವರೇ ಜನರನ್ನು ಸುರಕ್ಷಿತವಾಗಿ ಗಡಿ ಮುಟ್ಟಿಸುವ ಕೆಲಸ ಮಾಡುತ್ತಾರೆ ಎಂದ. ಇದನ್ನು ಅವನ ಸೈನಿಕರು ಮಾಡಿದ್ದರು. ಈ ನಿರಾಶ್ರಿತರು ಗಡಿಯನ್ನು ದಾಟಿದ್ದೇ ತಡ, ಅವರ ಮೇಲೆ ಘಾತುಕರ ದಂಡು ಎರಗಿತು. ಈಗಷ್ಟೇ ಅವರಿಗೆ ಬೆಂಗಾವಲು ನೀಡಿದ ಸೈನಿಕರೂ ಸೇರಿದಂತೆ ಅವರನ್ನು ಹೊಡೆದು, ದೋಚಿ ಲೂಟಿಮಾಡಿದರು. ಇದರಲ್ಲಿ ಎಷ್ಟೋ ಮಂದಿ ಸತ್ತರು. ಹೀಗಾಗಿ ಈ ದೊರೆಯ ಧರ್ಮದರ್ಶಿತ್ವ ರಾಜ್ಯದ ಗಡಿ ರೇಖೆಯವರೆಗೆ ಮಾತ್ರ ಇತ್ತು ಎಂಬುದು ಸ್ಪಷ್ಟ. ಈ

ಮೂರನೇ ಎರಡರಷ್ಟು ಭಾಗದ ಜನರಿಗೆ ಸೇರಿದ್ದ ಭೂಮಿಯನ್ನು ರಾಜ್ಯದ ಉಳಿದ ಪ್ರಜೆಗಳಿಗೆ ಹಂಚಿದ್ದರಿಂದ ರೈತವರ್ಗದವರ ಕೃತಜ್ಞತೆ ನಿಷ್ಠೆಗಳನ್ನು ಪಡೆಯುವುದು ಕಷ್ಟವಾಗಲಿಲ್ಲ. ಹೀಗಾಗಿ ಜವಾಬ್ದಾರಿ ಸರ್ಕಾರ ಬೇಕು ಎಂಬ ಕಿರಿಕಿರಿಯ ಬೇಡಿಕೆ ಸ್ವಲ್ಪಕಾಲದ ವರೆಗಾದರೂ ಇಲ್ಲಿನ ಜನರಿಂದ ಬರದೇ ಇದ್ದುದು ಸಹಜವೇ ಆಗಿತ್ತು.

ನಿರಂಕುಶಾಧಿಕಾರದ ಬೇರೆ ಬೇರೆ ರಾಜರ ಕೆಳಗೆ ಬೇಕಾಬಿಟ್ಟಿಯಾಗಿ ಕಲಸುಮೇಲೋಗರ ದಂತೆ ಇದ್ದ ರಾಜ್ಯಗಳು ನವಭಾರತದ ಒಗ್ಗಟ್ಟಿಗೆ ಬೆದರಿಕೆ ಉಂಟು ಮಾಡುವಂಥವಾಗಿದ್ದವು. ಇಂತಹ ಗೊಂದಲದ ಮಧ್ಯೆ ಪಟೇಲರು ಸಣ್ಣಪುಟ್ಟ ರಾಜ್ಯಗಳನ್ನು ಪಕ್ಕದ ಪ್ರಾಂತ್ಯಗಳೊಂದಿಗೆ ವಿಲೀನಗೊಳಿಸುವ ಅಥವಾ ಅವುಗಳನ್ನು ಪಕ್ಕದ ರಾಜ್ಯಗಳೊಂದಿಗೆ ಸೇರಿಸುವ ಭಗೀರಥ ಪ್ರಯತ್ನ ಕೈಗೊಂಡರು. ಹೀಗೆ ವಿಲೀನಗೊಂಡ ಪ್ರದೇಶಗಳ ರಾಜರು ಒಂದು ಅಧ್ಯಕ್ಷೀಯ ಮಂಡಳಿ (Presidencies) ಮಾಡಿಕೊಂಡು ಈ ಪ್ರದೇಶದ ಚೇರ್‌ಮನ್‌ಗಳಾಗಿಯೋ, ರಾಜ ಪ್ರಮುಖರಾಗಿಯೋ ಸರದಿಯನುಸಾರ ಕಾರ್ಯನಿರ್ವಹಿಸುವಂತೆ ವ್ಯವಸ್ಥೆ ಮಾಡಲಾಯಿತು.

ಪಟೇಲರು ವಿಲಿನೀಕರಣದ ದಸ್ತವೇಜಿಗೆ ರಾಜರಿಂದ ಸಹಿ ಮಾಡಿಸಿಕೊಂಡರು. ಈ ಒಪ್ಪಂದಗಳ ಪ್ರಕಾರ ರಾಜರು ರಕ್ಷಣೆ, ಸಂಪರ್ಕ ಹಾಗೂ ವಿದೇಶಾಂಗ ವ್ಯವಹಾರ ಇಲಾಖೆಗಳ ತಮ್ಮ ಅಧಿಕಾರವನ್ನು ಭಾರತ ಸರ್ಕಾರಕ್ಕೆ ಬಿಟ್ಟುಕೊಡಬೇಕಾಯಿತು. ಪಟೇಲರು ರಾಜರನ್ನು ಕರೆಸಿಕೊಂಡಾಗ ಅವರೆಲ್ಲ ದಂಡುದಂಡಾಗಿ ಬಂದ ದೃಶ್ಯ ನಾಟಕೀಯವಾಗಿತ್ತು. ರಾಜ್ಯಗಳ ಮಂತ್ರಿಯಾಗಿ ಪಟೇಲರು, ಚುಕ್ಕಿಗೆರೆಯ ಮೇಲೆ ಸಹಿ ಹಾಕುವುದಕ್ಕಾಗಿ ಅವರಿಗೆಲ್ಲ ಕೇವಲ ೫ ನಿಮಿಷಗಳ ಕಾಲಾವಕಾಶ ನೀಡಿದರು. ವಾರ್ತಾ ಸಚಿವರೂ ಆಗಿದ್ದ ಪಟೇಲರು ರಾಜರ "ದೇಶಭಕ್ತಿ ಹಾಗೂ ಸ್ವಪ್ರೇರಿತ ತ್ಯಾಗ"ಕ್ಕೆ ಸೂಕ್ತ ಪ್ರಚಾರವನ್ನೂ ನೀಡಿದರು.

ಪೂರ್ವ ಪಂಜಾಬಿನ ರಾಜ್ಯಗಳನ್ನು ಒಂದುಗೂಡಿಸಿ ತನ್ನ ರಾಜ್ಯದಲ್ಲಿದ್ದ ಶೇ. ೪೮ರಷ್ಟು ಮುಸ್ಲಿಮರನ್ನು ಬೇರೆ ಯಾರೂ ಮಾಡದಷ್ಟು ಕ್ಷಿಪ್ರ ಅವಧಿಯೊಳಗಾಗಿ ರಾಜ್ಯದಿಂದ ಹೊರ ಹೋಗುವಂತೆ ಮಾಡಿದ್ದ ಹಾಗೂ ಮುಂದೆ ಪ್ರಬಲ ವ್ಯಕ್ತಿಯಾಗಿ ಬೆಳೆಯಬಹುದು ಎಂದು ಬಹಳಷ್ಟು ಭಾರತೀಯರು ಆತಂಕ ಪಡುತ್ತಿದ್ದ ಪಾಟಿಯಾಲಾದ ಮಹಾರಾಜನನ್ನು ಹೊಸ ಸಿಖ್ ಒಕ್ಕೂಟದ ರಾಜಪ್ರಮುಖನನ್ನಾಗಿ ಮಾಡಿದಾಗ ರಾಜರ ಆಡಳಿತ ವಿರೋಧಿಗಳಿಗೆ ಸಹಜವಾಗಿಯೇ ಅಸಮಾಧಾನವಾಗಿತ್ತು. ವಿಲಿನೀಕರಣದಲ್ಲಿ ಅನುಸರಿಸಲಾಗುತ್ತಿದ್ದ ಸಾಮಾನ್ಯ ನೀತಿಯ ಪ್ರಕಾರ ಆತನಿಗೆ ಸರದಿಯ ಪ್ರಕಾರ ನಿರ್ವಹಿಸುವಂತೆ ಈ ಕಾರ್ಯಭಾರವನ್ನು ಒಪ್ಪಿಸಿದ್ದು ಮಾತ್ರವೇ ಅಲ್ಲ ಆತನ 'ಸ್ವಪ್ರೇರಿತ' ತ್ಯಾಗಕ್ಕೆ ಮನ್ನಣೆಯಾಗಿ ಜೀವನ ಪರ್ಯಂತ ರಾಜಪ್ರಮುಖನಾಗಿರುವ ಅವಕಾಶವನ್ನು ನೀಡಲಾಯಿತು. ಆತನಿಗೆ ಮಿಲಿಯನ್ ಗಟ್ಟಲೆ ಪಿಂಚಣಿಯನ್ನೂ ಅನುಗ್ರಹಿಸಲಾಯಿತು. ಇದೂ ಕೂಡ ಇಂತಹ ಎಲ್ಲ ರಾಜಾದಾಯಗಳಂತೆ ವರಮಾನ ತೆರಿಗೆಯಿಂದ ಮುಕ್ತವಾಗಿತ್ತು. ರಾಜ ಪ್ರಮುಖರ ಕೈಯಲ್ಲಿರುವ ಸರ್ಕಾರಗಳು ಹೆಚ್ಚು ಆಧುನಿಕವೂ, ಸುವ್ಯವಸ್ಥಿತವೂ, ದಕ್ಷವೂ ಆಗಿರುತ್ತವೆ ಎಂಬ ಬಗ್ಗೆ ಜನರಿಗೆ ಅಪಾರವಾದ

ಆಶ್ವಾಸನೆಗಳನ್ನು ನೀಡಲಾಯಿತು. ಆದರೆ ಎರಡು ಪೊಲೀಸ್ ಬಲಗಳ ಕೂಡಿಕೆಯಿಂದ ಹೆಚ್ಚಿದ 'ದಕ್ಷತೆಯು' ಅಪರಾಧಗಳನ್ನು ಹತ್ತಿಕ್ಕುವುದಕ್ಕೆ ಬದಲಾಗಿ ನಾಗರಿಕರ ಸ್ವಾತಂತ್ರ್ಯ ದಮನಕ್ಕೆ ಬಳಕೆಯಾಗುವ ಸಾಧ್ಯತೆಯೇ ಹೆಚ್ಚು ಎಂಬ ಭಯ ನಾಗರಿಕರನ್ನು ಕಾಡುತ್ತಿತ್ತು.

ಚಿಕ್ಕಪುಟ್ಟ ಸಂಸ್ಥಾನಗಳ ವಿಲಿನೀಕರಣದಿಂದಾಗಿ ಭಾರತದ ರಾಜ ಸಂಸ್ಥಾನಗಳ ಸಂಖ್ಯೆ ಮೊದಲಿದ್ದ ೫೬೨ರಿಂದ ಒಂದೆರಡು ಡಜ಼ನ್‌ಗಳಷ್ಟಕ್ಕೆ ಇಳಿಯಿತು. ರಾಜರನ್ನು ಭಾರತದ ಪ್ರಾಂತ್ಯಗಳೊಂದಿಗೆ ವಿಲೀನಗೊಳಿಸುವ ಸರ್ದಾರರ ಮುತ್ಸದ್ದಿತನವನ್ನು ಶ್ಲಾಘಿಸುವುದರ ಜೊತೆ ಜೊತೆಗೇ ಪಟೇಲರ ಕೆಲವೊಂದು ಸಾರ್ವಜನಿಕ ಹೇಳಿಕೆಗಳಲ್ಲಿ ಪ್ರಜಾಪ್ರಭುತ್ವ ಬಹೂದೂರ ತನ್ನ ಕೈ ಚಾಚದಂತೆ ನೋಡಿಕೊಳ್ಳುವ ಸೂಚನೆಯೂ ಇರಬಹುದೇ ಎಂಬ ಅನುಮಾನವನ್ನೂ ಅನೇಕರು ವ್ಯಕ್ತಪಡಿಸುತ್ತಿದ್ದರು. ಜವಾಬ್ದಾರಿ ಸರ್ಕಾರಕ್ಕಾಗಿ ಯಾವುದೇ ಚಳವಳಿಗಳನ್ನು ನಡೆಸಬಾರದು. ಹೀಗೆ ಮಾಡುವುದರಿಂದ ಶಾಂತಿಯುತ ಅಧಿಕಾರ ಹಸ್ತಾಂತರಕ್ಕೆ ತೊಂದರೆಯೇ ಹೆಚ್ಚು ಎಂದು ವೃತ್ತಪತ್ರಿಕೆಗಳಲ್ಲಿ, ಸರ್ದಾರರು ಮನವಿ ಮಾಡಿಕೊಳ್ಳುತ್ತಿದ್ದರು. ರಾಜರ ಘನತೆ ಹಾಗೂ ಅಂತಸ್ತನ್ನು ಕಾಪಾಡುವ ಬಗ್ಗೆ ತೀವ್ರವಾದ ಬದ್ಧತೆಯಿರಬೇಕು ಎಂದು ಅವರು ಸಂಸ್ಥಾನಗಳ ಪ್ರಜೆಗಳಿಗೆ ತಿಳಿಸುತ್ತಿದ್ದರು. "ರಾಜರು ವಂಶಪಾರಂಪರ್ಯವಾಗಿ ಹಾಗೂ ಚಾರಿತ್ರಿಕವಾಗಿ ಪ್ರಜೆಗಳ ಮೇಲೆ ಕೆಲವೊಂದು ಅಧಿಕಾರಗಳನ್ನು ಪಡೆದಿದ್ದಾರೆ. ಅದನ್ನು ಗೌರವಿಸಬೇಕಾದ್ದು ಪ್ರಜೆಗಳ ಕರ್ತವ್ಯ" ಎಂದೂ ತಮ್ಮ ಭಾಷಣವೊಂದರಲ್ಲಿ ಹೇಳಿದ್ದರು. ಇನ್ನೊಂದು ಭಾಷಣದಲ್ಲಿ "ನಿಮ್ಮ ಮುಂದೆ ಈಗ ಉದಯಿಸುತ್ತಿರುವ ಬೆಳಗಿನ ಸೌಂದರ್ಯವನ್ನು ಯಾವುದೇ ಕಹಿ, ದ್ವೇಷ ಭಾವನೆ ಹಾಳು ಮಾಡದಿರಲಿ" ಎಂಬ ಭಾವನಾತ್ಮಕ ಕರೆಯನ್ನು ನೀಡಿದರು.

ಆದರೆ ಹೈದ್ರಾಬಾದ್ ಸಂಸ್ಥಾನದ ಸಾವಿರಾರು ಲಕ್ಷಾಂತರ ರೈತರು ಆಕರ್ಷಕ ನುಡಿಗಟ್ಟುಗಳಲ್ಲಿ ಹೇಳಿದ ಈ 'ಬೆಳಗಿನ ಸೌಂದರ್ಯ'ಕ್ಕಾಗಿ ಕಾಯಲು ಸಿದ್ಧವಿರಲಿಲ್ಲ. ತಾವೇ ಉತ್ತುಬಿತ್ತು ಶ್ರಮಿಸಿದರೂ ಎಂದಿಗೂ ತಮ್ಮದಾಗದಂತಹ ಹೊಲಗಳ ಮೇಲಿನ ಸೂರ್ಯೋದಯ ವನ್ನು ತಲೆ ತಲೆಮಾರುಗಳಿಂದಲೂ ಅಸಹಾಯಕರಾಗಿ ನೋಡಿದ ನಂತರ ಅವರ ದೃಷ್ಟಿಯಲ್ಲಿ ಸ್ವಾತಂತ್ರ್ಯ ಎಂಬ ಪದಕ್ಕೆ ಇದ್ದ ಅರ್ಥ ಒಂದೇ ಒಂದು. ಅದೇನೆಂದರೆ 'ತಾವು ಬೆವರು ಸುರಿಸಿ ದುಡಿದ ನೆಲ ತಮ್ಮದಾಗಬೇಕು'.

ವಿಸ್ತಾರವಾದ ಭೂಪ್ರದೇಶದ ಮೇಲಿನ ನಿಮ್ಮ ಸ್ವಾಮಿತ್ವಕ್ಕೆ ಯಾವುದೇ ಧಕ್ಕೆಯಾಗದು ಎಂಬ ಖಾತರಿ ನೀಡುತ್ತ ಪಟೇಲರು ರಾಜರೊಂದಿಗೆ ಒಪ್ಪಂದಗಳನ್ನು ಮಾಡಿಕೊಳ್ಳುತ್ತಿರುವಾಗ ಮತ್ತು ಜಮೀನುದಾರರಿಗೆ ಪರಿಹಾರ ನೀಡುವ ಕ್ರಮಗಳ ಕರಡು ರೂಪುಗೊಳ್ಳುತ್ತಾ, ಪರಿಷ್ಕಾರ ಗೊಳ್ಳುತ್ತಾ, ಚರ್ಚೆಗೊಳಪಡುತ್ತಾ, ಮುಂದೂಡಲ್ಪಡುತ್ತ ಇದ್ದಾಗ, ಹೈದ್ರಾಬಾದಿನ ಫಲವತ್ತಾದ ಪೂರ್ವಭಾಗಕ್ಕೆ ಸೇರಿದ ರೈತರು ತೆಲುಗು ಮಾತಾಡುವ ಪ್ರದೇಶದ ಸಮಸ್ಯೆಯನ್ನು ತಾವೇ ಕೈಗೆತ್ತಿಕೊಂಡು ಭೂಮಿಯನ್ನು ವಶಪಡಿಸಿಕೊಂಡರು. ಈ ಚಳವಳಿ ಹಳ್ಳಿಯಿಂದ ಹಳ್ಳಿಗೆ ಹಬ್ಬಿತು. ಸಾಂಪ್ರದಾಯಿಕ ಅಂದಾಜಿನ ಪ್ರಕಾರ ಈ ಚಳವಳಿ ನಡೆದಿದ್ದು ೫೦೦ ಹಳ್ಳಿಗಳಲ್ಲಿ. ಆದರೆ ವಾಸ್ತವವಾಗಿ ೨೫೦೦ ಹಳ್ಳಿಗಳಲ್ಲಿ ಎಂದು ಇತರರು ಹೇಳಿದರು. ನಿಜವಾದ

ಎಷ್ಟೆಂದು ಯಾರಿಗೂ ಗೊತ್ತಿಲ್ಲ. ಯಾಕೆಂದರೆ ವೃತ್ತಪತ್ರಿಕೆಗಳು ವಾರ್ತಾ ಮಂತ್ರಿ ಪಟೇಲರ ಅಧೀನದಲ್ಲಿದ್ದುದರಿಂದ ತೆಲಂಗಾಣ ಚಳವಳಿ ಕುರಿತಂತೆ ಒಂದೇ ಒಂದು ಶಬ್ದ ಕೂಡ ವೃತ್ತಪತ್ರಿಕೆಗಳಲ್ಲಿ ಪ್ರಕಟವಾಗಲಿಲ್ಲ ಅಥವಾ ಪಟೇಲರೇ ರಾಜ್ಯಗಳ ಸಚಿವರೂ ಆದ ಕಾರಣ, ಈ ಖಾತೆಯ ಯಾವ ಪ್ರಕಟಣೆಯಲ್ಲೂ ಅದರ ದನಿ ಕೇಳಲಿಲ್ಲ.

ರೈತರು ಹೀಗೆ ವಶಪಡಿಸಿಕೊಂಡ ಬಹುತೇಕ ಭೂಮಿಯು (Absentee Ownership) ಗೈರುಹಾಜರೀ ಭೂಮಾಲೀಕರದ್ದಾಗಿತ್ತು. ಆ ದೊಡ್ಡ ದೊಡ್ಡ ಜಮೀನುದಾರರ ಸಶಸ್ತ್ರ ಗೂಂಡಾಗಳ ಹಾಗೂ ಉಗ್ರಗಾಮೀ ರಜಾಕಾರರ ಭಾರೀ ಕಾವಲು ಅದಕ್ಕಿತ್ತು. ರಜಾಕಾರರೆಂದರೆ ನಿಜಾಮ ಹೇಳಿದಂತೆ ಕೇಳುತ್ತಿದ್ದ ಮತಾಂಧ ಮುಸ್ಲಿಮರು. ರಜಾಕಾರರು ಹಳ್ಳಿಗಳ ಮೇಲೆಲ್ಲ ಧಾಳಿ ನಡೆಸಿದರು. ರೈತರ ಗುಡಿಸಲುಗಳನ್ನು ಸುಟ್ಟು ಹಾಕಿದರು. ಅವರ ದವಸಧಾನ್ಯ ಜಾನುವಾರು ಹಾಗೂ ಎಷ್ಟೋ ವೇಳೆ ರೈತರ ಹೆಂಡತಿಯರು ಮತ್ತು ಹೆಣ್ಣುಮಕ್ಕಳನ್ನೂ ಹೊತ್ತೊಯ್ದರು. ರೈತರೂ ಇದಕ್ಕೆ ಪ್ರತಿಯಾಗಿ ಹೋರಾಟ ಮಾಡಿದರು. ಎರಡೂ ಕಡೆ ಸಾಕಷ್ಟು ರಕ್ತಪಾತ, ಹಿಂಸಾಚಾರ ನಡೆದವು. ಈ 'ಅವ್ಯವಸ್ಥೆ'ಯನ್ನು ಹತ್ತಿಕ್ಕಲು ರಜಾಕಾರರಿಗೆ ನೆರವಾಗುವುದಕ್ಕಾಗಿ ನಿಜಾಮನು ಮಿಲಿಟರಿ ಹಾಗೂ ಅರಬ್‌ಕೂಲಿ ಸಿಪಾಯಿಗಳನ್ನು ಕಳುಹಿಸಿದ. ಆದರೂ ದಂಗೆ ನಿಲ್ಲದೆ ಇತರೆಡೆಗಳಿಗೆ ಹಬ್ಬಿತು. ಸುಮಾರು ಐದರಿಂದ ಹತ್ತು ಸಾವಿರ ಚದರ ಮೈಲಿಗಳು ಎಂದು ಅಂದಾಜು ಮಾಡಲಾದ ಪ್ರದೇಶದಲ್ಲಿ ಒಂದು ರೈತ ಸರ್ಕಾರ ಸ್ಥಾಪಿತವಾಯಿತು. ಗ್ರಾಮ ಸಮಿತಿಗಳನ್ನು ಚುನಾಯಿಸಲಾಯಿತು. ಧಾನ್ಯಗಳ ಸಂಗ್ರಹ ಬೀಜವಿತರಣೆ ಹಾಗೂ ಭೂಮಿಯ ಹಂಚಿಕೆಗಾಗಿ ಸಮುದಾಯ ಕೃಷಿ (collective) ವ್ಯವಸ್ಥೆ ಮಾಡಲಾಯಿತು. ಉಳದೆ ಬಿಟ್ಟಿದ್ದ ಹೊಲಗಳನ್ನು (ಭಾರತದಲ್ಲಿ ಸಾಮಾನ್ಯವಾಗಿ ಗೈರುಹಾಜರೀ ಒಡೆತನದ ಇಂಥ ವಿಸ್ತಾರವಾದ ಭೂಮಿ ಹಾಗೇ ಬೀಳು ಬಿದ್ದಿರುವುದು ಸಾಮಾನ್ಯ) ಭೂರಹಿತ ದುಡಿಮೆಗಾರರಿಗೆ ವಿತರಿಸಲಾಯಿತು. ಚಿಕ್ಕ ಪುಟ್ಟ ಹಿಡುವಳಿದಾರರಿಗೆ ಅದು ಖುಷ್ಕಿ ಭೂಮಿಯೋ ತರಿ ಭೂಮಿಯೋ ಎಂಬುದನ್ನು ಆಧರಿಸಿ ೫೫ ರಿಂದ ೧೦೦ ಎಕರೆಗಳವರೆಗೆ ಇಟ್ಟುಕೊಳ್ಳಲು ಅನುಮತಿ ನೀಡಲಾಯಿತು. ಈ ಮಿತಿಯನ್ನು ದಾಟಿ ಉಳಿದ ಭೂಮಿಯನ್ನೆಲ್ಲ ರೈತರಿಗೆ ಕೊಡಲಾಯಿತು. ರೈತರನ್ನು ಭಯಪಡಿಸಲು ಖಾಸಗಿ ಪೊಲೀಸರನ್ನು ಕಳಿಸಿದ್ದಂಥ ಜಮೀನ್ದಾರರ ಎಲ್ಲ ಜಮೀನುಗಳನ್ನೂ ವಶಪಡಿಸಿಕೊಳ್ಳಲಾಯಿತು. ಎಲ್ಲ ಹಳೆಯ ಸಾಲಗಳನ್ನೂ "ರದ್ದು ಮಾಡಲಾಗಿದೆ" ಎಂದು ಗ್ರಾಮ ಸಮಿತಿಗಳು ಅಪ್ಪಣೆ ಹೊರಡಿಸಿದವು. ಈ ಮೊದಲು ವ್ಯಾಪಾರದಾರರು ವಿಧಿಸುತ್ತಿದ್ದ ಬೇಕಾಬಿಟ್ಟಿ ಹಾಗೂ ಅತಿಯಾದ ಬಡ್ಡಿಗಳಿಗೆ ಬದಲಾಗಿ ವಾರ್ಷಿಕ ೬% ಬಡ್ಡಿಯನ್ನು ವಿಧಿಸಲಾಯಿತು.

ಈ ಚಳುವಳಿಯು ಪೂರ್ತಿಯಾಗಿ ಅಲ್ಲದಿದ್ದರೂ ಬಹುತೇಕವಾಗಿ ಕಮ್ಯುನಿಸ್ಟ್ ಚಳುವಳಿಯಾಗಿತ್ತು. ಕೆಲವು ಸೋಶಿಯಲಿಸ್ಟರೂ ಇದರಲ್ಲಿ ಭಾಗವಹಿಸಿದ್ದರು. ಇದರ ಕೆಲವು ಭಾಗದ ಮುಂದಾಳತ್ವವನ್ನು ಸ್ಥಳೀಯ ರಾಜ್ಯ ಪ್ರಜಾ ಕಾಂಗ್ರೆಸ್ ವಹಿಸಿಕೊಂಡಿತ್ತು. ನೆಹರೂ ಅವರೇ ಈ ಸಂಘಟನೆಯ ಮೊದಲ ರಾಷ್ಟ್ರೀಯ ಅಧ್ಯಕ್ಷರಾಗಿದ್ದರು. ಮತ್ತು ಈ ಪಕ್ಷವು

ರಾಜರ ಆಳ್ವಿಕೆಯಿದ್ದ ವಿವಿಧ ಸಂಸ್ಥಾನಗಳಲ್ಲಿ ಪ್ರಜಾಸರ್ಕಾರಕ್ಕಾಗಿ ಹೋರಾಟ ನಡೆಸಿತ್ತು. ಇದು ಕಮ್ಯುನಿಸ್ಟರ ಚಳುವಳಿ ಎಂದು ಆಡಳಿತದಲ್ಲಿದ್ದವರು ಪ್ರಲಾಪಿಸುತ್ತಿದ್ದರು. ಆದರೆ ಎಲ್ಲೆಡೆಯೂ ಸಹ ಜನರ ಸಹಾನುಭೂತಿಯಿದ್ದುದು ದಟ್ಟ ದಾರಿದ್ರ್ಯ ಹಾಗೂ ಶೋಷಣೆಯಲ್ಲಿ ಬೇಯುತ್ತಿದ್ದ ರೈತರ ಪರವಾಗಿ. ಎಷ್ಟು ತುರ್ತಾಗಿ ಭೂಸುಧಾರಣೆಯಾಗಬೇಕಿದೆ ಎಂಬುದರ ಸೂಚನೆಯಾಗಿ ಈ ಚಳುವಳಿಯನ್ನು ಪರಿಗಣಿಸಬೇಕೇ ಹೊರತು ರಾಜಕೀಯ ಬಂಡಾಯ ಎಂದಲ್ಲ ಎಂಬ ದೃಷ್ಟಿ ಎಲ್ಲ ಕಡೆ ವ್ಯಕ್ತವಾಗುತ್ತಿತ್ತು.

ಒಬ್ಬ ಸ್ವತಂತ್ರ ರಾಜನಾಗಿ ತನ್ನ ವಿಸ್ತಾರವಾದ ಹೈದ್ರಾಬಾದ್ ರಾಜ್ಯವನ್ನು ಆಳಬೇಕೆಂದು ಕನಸು ಕಾಣುತ್ತಿದ್ದ ನಿಜಾಮನು ಕರಾರಿನ ಮೇಲೆ ಭಾರತೀಯ ಸೇನೆಗೆ ಶರಣಾಗತನಾದಾಗ, ಭೂಸುಧಾರಣಾ ಕ್ರಮದಲ್ಲಿ ಅಷ್ಟೇನೂ ಪ್ರಗತಿ ಸಾಧಿಸಿರದಿದ್ದ ಭಾರತ ಸರ್ಕಾರ ಕೂಡಲೇ ಚಳುವಳಿಗಾರರ ಮೇಲೆ ಕ್ರಮ ಕೈಗೊಳ್ಳಲು ಮುಂದಾಯಿತು. ಹೈದ್ರಾಬಾದಿನ ಕಮ್ಯುನಿಸ್ಟರ ಮೇಲೆ ತೀವ್ರ ಕ್ರಮ ಜರುಗಿಸಿ ಸುಮಾರು ೨೦೦೦ ಕಮ್ಯುನಿಸ್ಟರನ್ನು ಬಂಧಿಸಿದರೂ ಸಹ, ಭೂ ಮಾಲೀಕರಿಗೆ ಭೂಮಿಯನ್ನು ಹಿಂದಿರುಗಿಸುವುದು ಸುಲಭದ ಮಾತಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿತು. ನನ್ನೊಂದಿಗೆ ಮಾತಾಡಿದ ಸರ್ಕಾರದ ವಕ್ತಾರರೊಬ್ಬರು 'ರೈತರು ಭೂಮಿಯನ್ನು ಭೂಮಾಲೀಕರಿಗೆ ಹಿಂದಿರುಗಿಸುವಂತೆ ಮಾಡುವುದು ಬಹಳ ಕಷ್ಟ' ಎಂದು ವ್ಯಕ್ತಪಡಿಸಿದರು.

ರೈತರು ದಂಗೆಯೆದ್ದುದರ ಒಂದು ಫಲಶ್ರುತಿಯಾಗಿ ವಯಸ್ಕ ಮತದಾನದ ಆಧಾರದ ಮೇಲೆ ಹೈದ್ರಾಬಾದಿನಲ್ಲಿ ಮತದಾರರ ಪಟ್ಟಿಯನ್ನು ಸಿದ್ಧಪಡಿಸುವ ಕೆಲಸ ಭರದಿಂದ ಆರಂಭವಾಯಿತು. ಇದರಿಂದ ಅಸೆಂಬ್ಲಿ ಚುನಾವಣೆ ನಡೆದು ಅದರಿಂದ ರೂಪುಗೊಳ್ಳುವ ಸಂವಿಧಾನದ ಮೂಲಕ ಸುಧಾರಣೆಗಳನ್ನು ಕೈಗೊಳ್ಳಲು ಅವಕಾಶ ಸಿಕ್ಕಂತಾಯಿತು. ಇದರಲ್ಲಿ ಕೆಲವೊಂದು ವಿಳಂಬಗಳು ಅನಿವಾರ್ಯವಾಗಿದ್ದವು. ಮುಖ್ಯವಾಗಿ "ಪ್ರಮುಖವಾದ ಎಲ್ಲ ನಿರ್ಧಾರಗಳನ್ನೂ ನಿಜಾಮನ ಅನುಮೋದನೆಯ ಮೇರೆಗೆ ಕೈಗೊಳ್ಳಲಾಗುವುದು" ಎಂಬ ಆಶ್ವಾಸನೆಯನ್ನು ನಿಜಾಮನಿಗೆ ನೀಡಿದ್ದುದು ಇದಕ್ಕೆ ಕಾರಣವಾಗಿತ್ತು. ಆದರೆ ಈ ಮಧ್ಯೆ ತನ್ನ ೭೦೦೦ ಚದರ ಮೈಲಿಗಳ ಖಾಸಗಿ ಭೂಪ್ರದೇಶವನ್ನು ಹೈದ್ರಾಬಾದ್ ರಾಜ್ಯಕ್ಕೆ ಒಪ್ಪಿಸುವಂತೆ ಹಿಸ್ ಎಕ್ಸಾಲ್ಟೆಡ್ ಹೈನೆಸ್‌ನ್ನು ಪ್ರೇರೇಪಿಸುವ ಒಂದು ಒಳ್ಳೆಯ ಕ್ರಮವನ್ನು ಸರ್ಕಾರ ಕೈಗೊಂಡಿತು. ಅದೇ ರೀತಿ ಆತನ ಆಸ್ಥಾನ ಶ್ರೀಮಂತರ ವಿಸ್ತಾರವಾದ ಭೂಪ್ರದೇಶವೂ ಸಹ ಕ್ರಮೇಣ ಸರ್ಕಾರದ ನಿಯಂತ್ರಣಕ್ಕೆ ಬರಬೇಕಾಯಿತು. ಈ ಭೂಮಿಯಲ್ಲಿ ದುಡಿಯುತ್ತಿದ್ದ ರೈತರನ್ನು ಉಚ್ಚಾಟಿಸದಂತೆ ಸರ್ಕಾರವು ನೋಡಿಕೊಳ್ಳುವ ಭರವಸೆ ನೀಡಿತು. ಹೀಗಾಗಿ ಇನ್ನು ಮುಂದೆ ಸರ್ಕಾರವೇ ಭೂಮಾಲೀಕನಾಗಿರುತ್ತದೆ. ಜಮೀನ್ದಾರನಲ್ಲ ಎಂದಾಯಿತು. ಈ ಪೂರ್ವನಿದರ್ಶನದ ಪ್ರಕಾರ ಉಳಿದ ರಾಜರೂ ಸಹ ತಮ್ಮ ವಶದಲ್ಲಿರುವ ನಿಖರವಾದ ಭೂಮಿಯ ಪಟ್ಟಿಯನ್ನು ಸಲ್ಲಿಸಬೇಕಾಯಿತು. ಇದುವರೆಗೆ ಇದು ಯಾರಿಗೂ ತಿ[illegible] ಅತಿರಹಸ್ಯದ ವಿಷಯವಾಗಿತ್ತು. ಸರ್ಕಾರವು ತಿಳಿಸಿದಂತೆ ಇಂತಹ ಅತಿ [illegible]

ಭೂಪ್ರದೇಶಗಳನ್ನೂ ಸರ್ಕಾರದ ಉಪಯೋಗಕ್ಕೆ ಬಳಸಿಕೊಳ್ಳುವುದು ಈ ಕ್ರಮದ ಉದ್ದೇಶವಾಗಿತ್ತು.

ಆದರೇನು, ನಿಜಾಮನಾಗಲಿ, ಆತನ ಆಸ್ಥಾನ ಶ್ರೀಮಂತರಾಗಲೀ, ಅಥವಾ ಮುಂದ ಉಚ್ಚಾಟಿಸಲ್ಪಡಲಿರುವ ಯಾವುದೇ ರಾಜರುಗಳಾಗಲೀ ಪರಿಹಾರ ಧನವಿಲ್ಲದೆ ಇದಕ್ಕೆ ಒಪ್ಪ ಬೇಕಾದ್ದೇನೂ ಇರಲಿಲ್ಲ. ನಿಜಾಮನಿಗೆ ಮೂರು ಮುಕ್ಕಾಲು ಮಿಲಿಯನ್ ಪೌಂಡುಗಳ ಇಡಿಗಂಟು ಸಂದಾಯದ ಜೊತೆಗೆ ಆತನ ಅರಮನೆಗಳು, ಬಂಗಾರ, ಬಿಲಿಯನ್ ಡಾಲರ್ ಗಳಿಗೂ ಅಧಿಕ ಮೌಲ್ಯದ ರತ್ನಾಭರಣಗಳು, ಬ್ಯಾಂಕ್ ಚೆಕ್ಕುಗಳನ್ನು ಹಾಗೇ ಇಟ್ಟುಕೊಳ್ಳುವ ಅವಕಾಶ ನೀಡಲಾಯಿತು. ಮತ್ತು ಆತನಿಗೆ ನೀಡುತ್ತಿದ್ದ ೩,೭೦,೦೦೦ ಪೌಂಡುಗಳ ಆದಾಯ ತೆರಿಗೆ ಮುಕ್ತ ರಾಜಧನದ ಮೊತ್ತವನ್ನು ಸಹ ದ್ವಿಗುಣಗೊಳಿಸಲಾಯಿತು.

ಹೀಗೆ ನಿಜಾಮನ ಅಧಿಕಾರವನ್ನು ಇಳಿಸಿದರೂ ಸಹ ಹೆಚ್ಚಿನ ಪ್ರಜೆಗಳಿಗೆ ಸಂತೋಷ ವಾಗಲಿಲ್ಲ. ಇಡೀ ರಾಜಾಳ್ವಿಕೆಯ ವಿರುದ್ಧ ಇಷ್ಟು ದೀರ್ಘಕಾಲ ಹೋರಾಟ ನಡೆಸಿಯೂ ಪಿಂಚಣಿ ಕೊಟ್ಟು ರಾಜನನ್ನು ಇಟ್ಟುಕೊಳ್ಳುವುದು–ಅದು ಮೂರು ಮುಕ್ಕಾಲು ಮಿಲಿಯನ್ ಪೌಂಡುಗಳಷ್ಟು ಕಡಿಮೆ ಎಂದರೂ ಒಂದು ಅನಗತ್ಯ ವೈಭೋಗವಲ್ಲವೇ ಎಂಬುದು ಅವರ ಅನಿಸಿಕೆಯಾಗಿತ್ತು.

❑

ಅಧ್ಯಾಯ ೧೪

ಹಿಮಾಲಯದಲ್ಲಿ ಪ್ರಜಾರಾಜ್ಯ

ಭಾರತದ ಉತ್ತರದಗಡಿಯಲ್ಲಿ ಸದಾಕಾಲ ಹಿಮದಿಂದ ಆವೃತವಾದ ಹಿಮಾಲಯದ ತಪ್ಪಲಲ್ಲಿ ಇರುವ ರಾಜ್ಯ ಕಾಶ್ಮೀರ. ಪ್ರಜಾರಾಜ್ಯ ಸ್ಥಾಪನೆಗಾಗಿ ಇಲ್ಲಿ ನಡೆದ ಹೋರಾಟಗಳು ಇಡೀ ಭಾರತಕ್ಕೇ ಬೆಳಕು ತೋರಿದವು. ಈ ಪ್ರದೇಶದ ಭೌಗೋಳಿಕ ಸ್ಥಿತಿಗತಿಗಳಿಂದಾಗಿಯೇ ಇಲ್ಲಿನ ಜನ ಸಾಹಸ ಪ್ರವೃತ್ತಿಯನ್ನು, ಕಷ್ಟಸಹಿಷ್ಣುತೆಯನ್ನೂ ಬೆಳೆಸಿಕೊಂಡಿದ್ದಾರೆ. ಜನರ ಹಕ್ಕುಗಳಿಗಾಗಿ ನಡೆಸಿದ ಹೋರಾಟದಲ್ಲಿಯೂ ಅವರ ಈ ಗುಣಗಳು ವ್ಯಕ್ತವಾದವು. ಇವರ ಹೋರಾಟದ ಕೊನೆಯ ಹಂತದಲ್ಲಿ ಅಲ್ಲಿನ ಮಹಾರಾಜ ದೇಶ ಬಿಟ್ಟು ಓಡಿಹೋಗಿದ್ದರಿಂದ ಇವರಿಗೆ ಗುರಿ ತಲುಪುವುದು ಸುಲಭವಾಯಿತು.

೧೯೪೭ರ ಅಕ್ಟೋಬರ್ ಆರಂಭದಲ್ಲಿ ಮತಾಂಧ ಮುಸ್ಲಿಂ ಬುಡಕಟ್ಟು ಜನರು ಗುಂಪು ಗುಂಪಾಗಿ ಪಾಕಿಸ್ತಾನದಿಂದ ಬಂದು ಕಾಶ್ಮೀರದ ಜನರ ಕೊಲೆ ಲೂಟಿ ನಡೆಸಿದರು. ಹಳ್ಳಿಗಳನ್ನು ಸುಟ್ಟು ಹಾಕಿದರು. ಇದ್ದಕ್ಕಿದ್ದಂತೆ ನಡೆದ ಈ ಧಾಳಿಯಿಂದ ಕಾಶ್ಮೀರಕ್ಕೆ ದಿಕ್ಕು ತೋಚಲಿಲ್ಲ. ಆದರೂ ಜನರು ಧಾಳಿಕೋರರನ್ನು ಶ್ರೀನಗರದ ಹೊರಭಾಗದವರೆಗೂ ಅಟ್ಟಿಕೊಂಡು ಹೋದರು. ತನ್ನ ರಾಜಧಾನಿಯನ್ನು, ಪ್ರಜೆಗಳನ್ನು ರಕ್ಷಿಸಬೇಕೆಂಬ ಕಿಂಚಿತ್ ಕರ್ತವ್ಯ ಪ್ರಜ್ಞೆಯೂ ಇಲ್ಲದ ಮಹಾರಾಜ ತನ್ನ ಬಂಧುಗಳು ಹಾಗೂ ಒಡವೆ ವಸ್ತುಗಳೊಂದಿಗೆ ಬೆಳಗಿನ ಜಾವ ನಾಲ್ಕು ಗಂಟೆಗೇ ಅರಮನೆಯನ್ನು ಬಿಟ್ಟು ಪಲಾಯನ ಮಾಡಿದ. ೪೮ ಮಿಲಿಟರಿ ಲಾರಿಗಳು ಅವನನ್ನು ಹಿಂಬಾಲಿಸಿದವು. ಅರಮನೆಯ ರತ್ನಗಂಬಳಿಗಳು, ಅಗ್ಗಿಷ್ಟಿಕೆಯಿಂದ ಕಿತ್ತ ಜೇಡ್ ಮತ್ತು ಅಮೃತಶಿಲೆಯ ಚಪ್ಪಡಿಗಳು, ರಾಜ್ಯದ ದೇವಾಲಯಗಳ ದೇವತೆಗಳ ಕೊರಳುಗಳಲ್ಲಿದ್ದ ಅಮೂಲ್ಯ ರತ್ನಾಭರಣಗಳು ಈ ಲಾರಿಗಳಲ್ಲಿ ತುಂಬಿದ್ದವು. ಇವೆಲ್ಲವುಗಳೊಂದಿಗೆ ಮಹಾರಾಜ ಜಮ್ಮುವಿನಲ್ಲಿದ್ದ ಬೇಸಿಗೆ ಅರಮನೆ ಸೇರಿಕೊಂಡ. ಜನರ ಮೇಲೆ ಇದಕ್ಕಿಂತ ತೀವ್ರ ಪರಿಣಾಮ ಬೀರಿದ್ದೇನೆಂದರೆ ಆತ ಇಡೀ ರಾಜ್ಯದ ಪೆಟ್ರೋಲ್ ಸರಬರಾಜನ್ನು ತನ್ನೊಂದಿಗೆ ತೆಗೆದುಕೊಂಡು ಹೋಗಿದ್ದ. ಎಲ್ಲ ಮಿಲಿಟರಿ ಸಾರಿಗೆ ಮತ್ತು ಪೆಟ್ರೋಲ್ ಸರಬರಾಜು ತಪ್ಪಿಹೋಗಿದ್ದರಿಂದ ಜನ ಕೆರಳಿದರು. ಆದರೂ ಅವರು ತಾವು ಯಾರ ವಿರುದ್ಧ ಅಷ್ಟು ದೀರ್ಘಕಾಲದ ಹೋರಾಟ ನಡೆಸಿದ್ದರೋ ಯಾರ ಕೈಕೆಳಗೆ ಅಪಾರ ಕಷ್ಟನಷ್ಟ ಅನುಭವಿಸಿದ್ದರೋ ಅಂತಹ ಮಹಾರಾಜ ತಾನಾಗಿಯೇ ಜಾಗ ಖಾಲಿ ಮಾಡಿದ್ದು ಅವರಿಗೆ ತುಂಬ ಸಂತಸ ಉಂಟುಮಾಡಿತು. ಇದಾದ ಕೇವಲ ೪೮ ಗಂಟೆಗಳಲ್ಲಿ National Conference ಎಂದು ಹೆಸರಾಗಿದ್ದ ಜನತೆಯ ಪಕ್ಷ ಹೊಸ ಸರ್ಕಾರವನ್ನು ಸ್ಥಾಪಿಸಿತು. ಆಹಾರ ಸಂಗ್ರಹಣೆಯ ಉಸ್ತುವಾರಿಯನ್ನು ಅದು ವಹಿಸಿಕೊಂಡಿತು. ಧಾಳಿಕೋರರ ವಿರುದ್ಧ ಹೋರಾಡುವುದಕ್ಕಾಗಿ ಜನರ ಸೋ...

ಪಡೆಗಳನ್ನು ವ್ಯವಸ್ಥೆ ಮಾಡಿತು. ಮತ್ತು ಹೊಸ ಸಂವಿಧಾನವನ್ನು ರಚಿಸುವ ಕೆಲಸವನ್ನು ಆರಂಭಿಸಿತು. ಭಾರತ ಸ್ವಾತಂತ್ರ್ಯ ಗಳಿಸಿ ಇನ್ನೂ ಹತ್ತು ವಾರಗಳು ಮಾತ್ರ ಮುಗಿದ್ದ ಹಂತದಲ್ಲಿ ಈ ತ್ವರಿತ ಘಟನಾವಳಿಗಳು ಸಂಭವಿಸಿದ್ದವು. ಯುದ್ಧದಿಂದ ಜರ್ಝರಿತವಾದ ಮತ್ತು ಮತಾಂಧ ಆಕ್ರಮಣಕಾರರ ಭಯೋತ್ಪಾದನೆಗೆ ತುತ್ತಾಗಿದ್ದ ಕಾಶ್ಮೀರ, ಸ್ವಾತಂತ್ರ್ಯ ಗಳಿಸಿದ ಭಾರತದ ಉಪಖಂಡದಲ್ಲಿ ತನ್ನದೇ ಆದ ಸಂವಿಧಾನ ಯೋಜನೆಯನ್ನು ಲಿಖಿತ ರೂಪಕ್ಕೆ ತಂದ ಮೊದಲ ಸ್ಥಳವಾಗಿತ್ತು. ಪೀಪಲ್ಸ್ ಪಾರ್ಟಿಯ ಸದಸ್ಯರು ಜಗತ್ತಿನಾದ್ಯಂತದ ಸಂವಿಧಾನ ಗಳನ್ನು ಗಾಢವಾಗಿ ಅಭ್ಯಾಸ ಮಾಡಿದ್ದರು. ಅವರ ಯೋಜನೆಯ ಪ್ರಕಾರ, ಗಂಡುಹೆಣ್ಣು ಎಂಬ ಭೇದವಿಲ್ಲದೆ ಎಲ್ಲ ವಯಸ್ಕ ಪ್ರಜೆಗಳಿಗೂ ಮತದಾನದ ಹಕ್ಕು ಕೊಡಲಾಯಿತು. ಅಲ್ಪಸಂಖ್ಯಾತರಿಗೆ ಸಮಾನತೆ ಹಾಗೂ ಜನರು ತಮಗಿಷ್ಟವಾದ ಧರ್ಮವನ್ನು ಅನುಸರಿಸುವ ಸ್ವಾತಂತ್ರ್ಯವನ್ನು ಅದು ಕೊಟ್ಟಿತು. ಅನೇಕ ರೀತಿಯ ಶಿಕ್ಷೆಗಳನ್ನು ಜೈಲುವಾಸಗಳನ್ನು ಅನುಭವಿಸಿ, ಬಹುತೇಕ ಸಂದರ್ಭಗಳಲ್ಲಿ ಭೂಗತವಾಗಿಯೇ ಕೆಲಸ ಮಾಡುತ್ತ ಬಂದ ಜನರನ್ನು ಒತ್ತಟ್ಟಿಗೆ ತರುವಲ್ಲಿ ಪೀಪಲ್ಸ್ ಪಾರ್ಟಿ ಬಹು ಸಮರ್ಥವಾಗಿ ಕೆಲಸ ಮಾಡಿತು. ಈ ಜನರೆಲ್ಲ ದಮನಕಾರಿ ಆಡಳಿತವನ್ನು ಎದುರಿಸುವುದಕ್ಕಾಗಿ ಒಟ್ಟುಗೂಡಿದವರಾದ್ದರಿಂದ ಅವರ ಹೋರಾಟ ಪ್ರಜಾತಾಂತ್ರಿಕ ಸ್ವರೂಪವನ್ನು ಪಡೆದುಕೊಳ್ಳಲು ಕಾರಣವಾಯಿತು. ಈ ರೀತಿಯ ಹೋರಾಟಕ್ಕೆ ಅವರ ನಾಯಕ ಶೇಖ್ ಅಬ್ದುಲ್ಲಾ ಕೂಡ ಅಷ್ಟೇ ಕಾರಣರಾಗಿದ್ದರು. ಶೇಖ್ ನಿಜಕ್ಕೂ ಒಬ್ಬ ಇತಿಹಾಸ ಪುರುಷ. ಆತ, ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರ ಉಗಮಿಸಿದ ಮೊದಲ ಜನಪ್ರಿಯ ಮುಖ್ಯಮಂತ್ರಿ.

ನಾನು ಕಾಶ್ಮೀರಕ್ಕೆ ಬಂದಾಗ ಶೇಖ್ ಅಬ್ದುಲ್ಲಾ ರಾಜಧಾನಿಯಲ್ಲಿರಲಿಲ್ಲ. ಅನಂತರ ನಾನು ಅವರನ್ನು ಭೇಟಿ ಮಾಡಿದಾಗ ಇಷ್ಟು ನೇರ ಸ್ವಭಾವದ, ಅನುಭವದಿಂದ ಪರಿಪಕ್ವನಾದ, ತುಂಬ ವಾಸ್ತವ ದೃಷ್ಟಿಕೋನದ ಮತ್ತು ತೀರ ಸರಳ ನಡೆನುಡಿಯ ಈ ಯುವಕನ ಬಗ್ಗೆ ಯಾಕೆ ಪವಾಡ ಕಥೆಗಳು ಹುಟ್ಟಿಕೊಂಡವು ಎಂದು ಆಶ್ಚರ್ಯವಾಯಿತು.

ನಾನು ೧೯೪೭ರ ಕ್ರಿಸ್‌ಮಸ್ ಆರಂಭಕ್ಕೆ ಸ್ವಲ್ಪ ಮೊದಲು ಕಾಶ್ಮೀರಕ್ಕೆ ಬಂದೆ. ಇಲ್ಲಿ ಬಿರುಸಿನ ಗೆರಿಲ್ಲಾ ಯುದ್ಧ ಹೊರನೋಟಕ್ಕೆ ಗೋಚರವಾಗುತ್ತಿರಲಿಲ್ಲ. ಕಾಶ್ಮೀರವನ್ನು ನೋಡಿದ ವರಿಗೆ ಅದರ ಸೌಂದರ್ಯದ ಮೋಡಿ ಬಗ್ಗೆ ಗೊತ್ತೇ ಇರುತ್ತದೆ. ಇದು ಬೇರೆಯೇ ಪ್ರಪಂಚ. ಇಲ್ಲಿ ನೀರು ನೆಲಕ್ಕೆ ವ್ಯತ್ಯಾಸವೇ ಗೊತ್ತಾಗುವುದಿಲ್ಲ. ಕಾಶ್ಮೀರದ ಸರೋವರಗಳ ದಂಡೆಯಿಂದ ಪರ್ವತಶ್ರೇಣಿಗಳು ಮೇಲೇಳುತ್ತವೆ. ಅವುಗಳ ಸ್ಫಟಿಕ ಸದೃಶಪರ್ವತಗಳು ಸರೋವರದ ನೀರಿನಲ್ಲಿ ಬಹು ಆಳದವರೆಗೆ ಪ್ರತಿಫಲಿಸುತ್ತಿರುವೆ. ಹಿಮಚ್ಛಾದಿತವಾದ ಅವುಗಳ ಶಿಖರಗಳು ಭೂಮಿಯೊಡನೆ ಸಂಬಂಧವೇ ಇಲ್ಲದಂತೆ ಅತ್ಯುನ್ನತವಾಗಿ ತಲೆ ಎತ್ತಿರುತ್ತವೆ. ಪರ್ವತ ಶಿಖರಗಳು, ನೀರು, ಹಿಮ, ಆಕಾಶ ಯಾವುದು ಎಲ್ಲಿ ಎಂಬುದೇ ಗೊತ್ತಾಗದ ಒಂದು ಅದ್ಭುತ ಗೊಂದಲ ಹೃದಯ ಮನಸ್ಸು ಕಣ್ಣುಗಳನ್ನು ತುಂಬುತ್ತದೆ.

ಅನೇಕ ರೀತಿಯ ನಿಗೂಢತೆಗಳು, ದಂತಕಥೆಗಳು, ಸಮೃದ್ಧ ಜಾನಪದ ಅಸಾಧಾರಣ

ಸೌಂದರ್ಯವೆಲ್ಲ ಮೇಳವಿಸಿರುವ ಕಾಶ್ಮೀರವು ಮಹಾರಾಜ ಹರಿಸಿಂಗರ ಆಸ್ತಿಯಾಗಿತ್ತು. ಈ ಹಕ್ಕು ಅವರಿಗೆ ದೈವದತ್ತವಾಗಿ ಸಿಕ್ಕಿತ್ತು ಎನ್ನವುದಕ್ಕಿಂತ ಅದನ್ನು ಅವರು ಖರೀದಿಸಿದ್ದರು ಎಂದರೆ ಸರಿ. ಒಂದು ಶತಮಾನದ ಹಿಂದೆ ಅವರ ಮುತ್ತಜ್ಜ ಜಮ್ಮುವಿನ ಪಕ್ಕದ ರಾಜ್ಯದ ರಾಜನಾಗಿದ್ದವನು ಬ್ರಿಟಿಷರಿಗೆ ಕಾಲಮಿಲಿಯನ್ ಡಾಲರ್‌ಗಳನ್ನು ಹಾಗೂ ಮಾಮೂಲಿನಂತೆ ಮಿಲಿಟರಿ ಬಲವನ್ನು ಒಪ್ಪಿಸಿ ಕಾಶ್ಮೀರವನ್ನು ಕೊಂಡುಕೊಂಡಿದ್ದ. ಇದರಿಂದಾಗಿ ಈಗಿನ ಮಹಾರಾಜನಿಗೆ ಗಿಲ್ಗಿಟ್, ಪೂಂಚ್ ಹಾಗೂ ಇನ್ನಿತರ ಕೆಲವು ಊಳಿಗಮಾನ್ಯ ಪ್ರದೇಶಗಳೂ ಸೇರಿದಂತೆ ಜಮ್ಮು ಮತ್ತು ಕಾಶ್ಮೀರಗಳೆರಡರ ನಾಲ್ಕು ದಶಲಕ್ಷ ಜನರ ಮೇಲೆ ಒಡೆತನ ಲಭಿಸಿತ್ತು. ಸ್ವತಃ ಹಿಂದೂ ಆಗಿದ್ದ ಹರಿಸಿಂಗ್ ಐದನೇ ನಾಲ್ಕು ಭಾಗದಷ್ಟು ಮುಸ್ಲಿಮರಿರುವ ಹಾಗೂ ಐದನೇ ಒಂದು ಭಾಗದಷ್ಟು ಹಿಂದೂಗಳಿರುವ ರಾಜ್ಯಕ್ಕೆ ರಾಜನಾಗಿದ್ದ.

ಕಾಶ್ಮೀರಿ ಹಿಂದೂಗಳು ವಿಶಿಷ್ಟ ರೀತಿಯವರು. ಬ್ರಾಹ್ಮಣರಲ್ಲಿ ಇವರು ವಿಶಿಷ್ಟ ಬ್ರಾಹ್ಮಣರು. ಕಾಶ್ಮೀರಿ ಪಂಡಿತರನ್ನು ಬ್ರಾಹ್ಮಣರಲ್ಲಿ ಅತಿಶ್ರೇಷ್ಠ ಪಂಗಡದವರೆಂದು ಪರಿಗಣಿಸಲಾಗುತ್ತದೆ. ಕಾಶ್ಮೀರಿ ಪಂಡಿತರಲ್ಲಿ ಅತ್ಯಂತ ಪ್ರಸಿದ್ಧರಾದವರು ಪಂಡಿತ್ ನೆಹರೂ. ನೆಹರೂ ಕುಟುಂಬ ಹಲವು ತಲೆಮಾರುಗಳ ಹಿಂದೆಯೇ ಕಾಶ್ಮೀರವನ್ನು ಬಿಟ್ಟು ಬಂದಿತ್ತಾದರೂ ಫ್ಯೂಡಲಿಂಸನ ಅಡಿಯಲ್ಲಿ ಕಾಶ್ಮೀರಿ ಜನರು ಪಡುತ್ತಿರುವ ಬವಣೆಗಳ ಬಗ್ಗೆ ನೆಹರೂ ಅವರಿಗೆ ತುಂಬ ಕಾಳಜಿ ಇತ್ತು.

ಶೇಖ್ ಅಬ್ದುಲ್ಲಾ ಕೆಮಿಸ್ಟ್ರಿಯಲ್ಲಿ ಸ್ನಾತಕೋತ್ತರ ಪದವಿ ಪಡೆದು ತಮ್ಮ ರಾಜ್ಯಕ್ಕೆ ಹಿಂದಿರುಗಿದ ತಕ್ಷಣವೇ ಹೋರಾಟ ಕಾರ್ಯವನ್ನು ಆರಂಭಿಸಿದ್ದರು. ಅವರು ಓದಿದ್ದು ಅಲಿಘಡ್‌ನಲ್ಲಿ. ಅಲಿಘಡ್‌ನ ವಿದ್ಯಾರ್ಥಿಗಳು ರಾಷ್ಟ್ರೀಯ ಹೋರಾಟದ ಜಾಗೃತಿಯನ್ನು ಬೆಳೆಸಿಕೊಂಡಂಥವರು. ಶೇಖಅಬ್ದುಲ್ಲಾ ಅವರೇ ಹೇಳುವಂತೆ 'ತಮ್ಮ ಹೊಸ ಜೀವನ ರೂಪುಗೊಂಡಿದ್ದು' ಅಲಿಘಡ್‌ನಲ್ಲಿ. ವಿಶ್ವವಿದ್ಯಾಲಯದ ಮುಕ್ತ ಉದಾರ ವಾತಾವರಣಕ್ಕೂ, ತಮ್ಮ ರಾಜ್ಯದಲ್ಲಿರುವ ಭಯಭೀತಿ ತುಂಬಿದ ವಾತಾವರಣಕ್ಕೂ ಇರುವ ವ್ಯತ್ಯಾಸವನ್ನು ಶೇಖ್ ತಕ್ಷಣ ಕಂಡುಕೊಂಡರು. ಜನರ ಮೇಲೆ ನಡೆಯುತ್ತಿದ್ದ ಅನ್ಯಾಯಗಳ ವಿರುದ್ಧ ಅವರು ಬಹಿರಂಗವಾಗಿ ಮಾತಾಡತೊಡಗಿದರು. ಆಗ ಅತ್ಯಂತ ಕರಾಳ ರಾಜಕೀಯ ವ್ಯಕ್ತಿ ಮತ್ತು ಅಪಾಯಕಾರಿ ವ್ಯಕ್ತಿ ಎಂದು ಆರೋಪಿಸಿ ೧೯೩೧ರಲ್ಲಿ ಹರಿಪರ್ಬತ್ ಎಂಬಲ್ಲಿನ ದುರ್ಗಮವಾದ ಕೋಟೆಯಲ್ಲಿ ಶೇಖ್ ಅಬ್ದುಲ್ಲಾರನ್ನು ಬಂಧನದಲ್ಲಿಡಲಾಯಿತು. ಮುಂದೆ ಹೀಗೆ ಇನ್ನೂ ಎಂಟು ಸಲ ಅವರು ಜೈಲುಶಿಕ್ಷೆ ಅನುಭವಿಸಿದರು. ಆದರೂ ಮೊದಲ ಬಂಧನದ ವಿಷಯಕ್ಕೆ ಒಂದು ಪವಾಡದ ಕಥೆ ಅಂಟಿಕೊಂಡು ಅದು ಬೇರೆಲ್ಲ ಬಂಧನಗಳಿಗಿಂತ ಪ್ರಸಿದ್ಧವಾಯಿತು. ಆತನನ್ನು ಗುಂಡಿಕ್ಕಿ ಕೊಲ್ಲುವುದು ಖಂಡಿತ ಎಂದು ಜನರಿಗೆ ತಿಳಿದಿತ್ತು. ಅದರಿಂದ ಅವರು ನಗರದಾದ್ಯಂತ ಮುಷ್ಕರ ಹೂಡಿದರು. ಎಲ್ಲ ಅಂಗಡಿಗಳೂ ಮುಚ್ಚಿದವು. ೧೮ ದಿನಗಳ ಕಾಲ ಯಾವ ವ್ಯಾಪಾರವಹಿವಾಟು ಇಲ್ಲದೆ ನಗರದ ಚಟುವಟಿಕೆಗಳು ಸ್ಥಗಿತಗೊಂಡವು. ಅನಂತರ ಅಬ್ದುಲ್ಲಾರನ್ನು ಜೈಲಿನಿಂದ ಹೊರಗೆ ಬಿಡಲಾಯಿತು. ಒಟ್ಟಿನಲ್ಲಿ ಜನರ ಒತ್ತಡದಿಂದಲೇ ಅವರ ಬಿಡುಗಡೆ ಸಾಧ್ಯವಾಯಿತು. ಆದರೆ ಜನರು ಮಾತ್ರ ದೇವರ ಮಹಿಮೆಯಿಂದ

ಬಿಡುಗಡೆಯಾಯಿತು ಎಂದರು. ಜನ ಹೇಳುವ ಕತೆಯ ಪ್ರಕಾರ ಬಂಧನದ ೧೮ನೇ ದಿನ ಸ್ವತಃ ಮಹಾರಾಜರು ಕೋಟೆಯ ಬಳಿ ಹೋದರು. ದೊಡ್ಡ ಬೆಂಕಿ ಹಾಕಿ ಅದರಲ್ಲಿ ಎಣ್ಣೆಯನ್ನು ಚೆನ್ನಾಗಿ ಕಾಯಿಸಿ ಎಂದು ಅಪ್ಪಣೆ ಮಾಡಿದರು. ಎಣ್ಣೆ ಕುದಿಯುತ್ತಿದ್ದಾಗ ಶೇಖ್ ಅಬ್ದುಲ್ಲಾನನ್ನು ಎತ್ತಿ ಆ ಕುದಿಯುವ ಎಣ್ಣೆಯೊಳಗೆ ಹಾಕಬೇಕೆಂದು ಹೇಳಿದರು. ಆದರೆ ಶೇಖ್‌ರು ಯಾರೂ ನನ್ನನ್ನು ಬಲವಂತದಿಂದ ನೂಕುವುದು ಬೇಡ ಎನ್ನುತ್ತಾ ತಣ್ಣಗಿನ ಮೊಸರನ್ನೋ ಬೆಣ್ಣೆಯನ್ನೋ ಕೈಯಲ್ಲಿ ಹಿಡಿಯುವಂತೆ ಕುದಿಯುವ ಎಣ್ಣೆ ಹಿಡಿದು ಸುತ್ತ ಚೆಲ್ಲಿದಾಗ ಕಾವಲುಗಾರರೆಲ್ಲ ಹಿಂದೆ ಸರಿದರು. ಈ ದೈವಿಕ ಘಟನೆಯನ್ನು ನೋಡಿ ಮಹಾರಾಜರು ಅವರನ್ನು ಬಿಡುಗಡೆ ಮಾಡಿದರು. ಬೇರೆ ಯಾರೂ ಮಹಾರಾಜರ ವಿರುದ್ಧ ಸೆಟೆದು ನಿಲ್ಲದಿರುವಾಗ ಈ ವ್ಯಕ್ತಿ ಹಾಗೆ ದಿಟ್ಟತನದಿಂದ ನಿಂತದ್ದು ನೋಡಿ ಜನ ಈತನನ್ನು ದೇವತಾ ಪುರುಷ ಎಂದು ಭಾವಿಸಿದರು. ಅದಾದ ಮೇಲೆ ಅವರು ಯಾವ ಹಳ್ಳಿಗೆ ಹೋಗಲಿ ಅಲ್ಲಿನ ಗಂಡಸರು, ಹೆಂಗಸರು, ಮಕ್ಕಳು ಅವರ ಸುತ್ತ ಗುಂಪು ಸೇರುತ್ತಿದ್ದರು. ಪವಿತ್ರ ವಸ್ತುವಿನಂತೆ ಪೂಜಿಸುವುದಕ್ಕಾಗಿ ಅವರ ತಲೆಯ ಕೂದಲನ್ನು ಕಿತ್ತಿಟ್ಟುಕೊಳ್ಳುತ್ತಿದ್ದರು. ಅವರಿಗೆ ಕಾಶ್ಮೀರದ ಸಿಂಹ (ಶೇರ್-ಇ-ಕಾಶ್ಮೀರಿ) ಎಂಬ ಹೊಸ ಹೆಸರು ಕೊಟ್ಟರು. ಇನ್ನು ಕೆಲವು ಜನರಂತು ಮರಗಳ ಎಲೆಗಳ ಮೇಲೆಲ್ಲಾ ಶೇರ್-ಇ-ಕಾಶ್ಮೀರಿ ಎಂಬ ಹೆಸರು ಬರೆದಿದೆ ಎಂದು ಹೇಳತೊಡಗಿದರು. ನಾನು ಈ ಘಟನೆಯಾದ ೧೭ ವರ್ಷಗಳ ನಂತರ ಕಾಶ್ಮೀರಕ್ಕೆ ಭೇಟಿಕೊಟ್ಟಿದ್ದೆ. ತಾನು ಚಿಕ್ಕವನಿದ್ದಾಗ ಈ ಎಲೆಗಳನ್ನು ನೋಡಿದ್ದೆ ಎಂದು ತಿಳಿಸಿದ ವ್ಯಕ್ತಿಯೊಬ್ಬ ಎಲೆ ತಿನ್ನುವ ಹುಳುಗಳು ಆ ರೀತಿಯ ಗುರುತು ಮಾಡಿದ್ದವು ಎಂದು ಹೇಳಿದ.

ಕಾಶ್ಮೀರದ ವಿವಾದವನ್ನು ಕುರಿತು ವಿಶ್ವಸಂಸ್ಥೆಯಲ್ಲಿ ಭಾರತದ ನಿಲುವನ್ನು ಪ್ರತಿಪಾದಿಸುವುದಕ್ಕಾಗಿ ಶೇರ್-ಇ-ಕಾಶ್ಮೀರಿಯನ್ನೇ ಅಮೆರಿಕಕ್ಕೆ ಕಳುಹಿಸಲು ನೇಮಿಸಲಾಯಿತು. ಅವರು ಸಂಯುಕ್ತ ಸಂಸ್ಥಾನಕ್ಕೆ ಹೋಗಲು ವಿಮಾನ ಹತ್ತುವ ಸ್ವಲ್ಪ ಮುಂಚೆ ನಾನು ಅವರನ್ನು ಭೇಟಿ ಮಾಡಿದೆ. ಅವರನ್ನು ಮುಖಾಮುಖಿಯಾಗಿ ಭೇಟಿ ಮಾಡಿದಾಗ ನನ್ನ ಮೇಲೆ ಹೆಚ್ಚು ಪ್ರಭಾವ ಬೀರಿದ ಅಂಶವೆಂದರೆ ಅವರ ಲವಲವಿಕೆಯ ವ್ಯಕ್ತಿತ್ವ, ಯಾವುದೇ ಆಡಂಬರಗಳಿಲ್ಲದ ಸರಳ ನಡವಳಿಕೆ. ಇಷ್ಟವಾಗುವಂತಹ ಒರಟುತನ. ಹುಬ್ಬುಗಳು ದಟ್ಟ, ದೊಡ್ಡ ಕಣ್ಣು, ಒಬ್ಬ ಹೋರಾಟಗಾರನಲ್ಲಿರುವಂಥ ಬಿಗಿದ ಉಬ್ಬಿದ ದವಡೆಗಳು, ಸರಾಸರಿ ಭಾರತೀಯರಿಗಿಂತ ಬಹಳ ಎತ್ತರ. ಮೊಳಕಾಲಿನಿಂದ ಕೆಳಗಿನವರೆಗೂ ಇಳಿಬಿದ್ದ ಕಸೂತಿ ಮಾಡಿದ ಬಿಳಿಕೋಟು. ವೇಗವಾದ ದೃಢ ಹೆಜ್ಜೆಗಳ ನಡಿಗೆ.

ಶೇಖ್ ಅಬ್ದುಲ್ಲಾರ ತಂದೆ ಶಾಲುಗಳನ್ನು ತಯಾರಿಸುತ್ತಿದ್ದರು. ಸಾಧಾರಣ ಸ್ಥಿತಿಯ ಕುಟುಂಬ. ನ್ಯಾಯಬದ್ಧವಾದ ಕೂಲಿಗಿಂತ ಕಡಿಮೆ ಕೂಲಿಗೆ ಸೂಜಿಹಿಡಿದು ಸೂಕ್ಷ್ಮವಾಗಿ ಕಸೂತಿ ಹಾಕುತ್ತಾ ಶ್ರಮಿಸುವ ಜನ. ಸದಾ ಖಾಯಿಲೆಯಿಂದ ನರಳುವ ಅಲ್ಲಿನ ಜನರ ಆಯುಷ್ಯವೇ ಕಮ್ಮಿ. ಇವರ ಹಸ್ತಕುಶಲತೆಯಿಂದ ತಯಾರಾದ ಕಾಶ್ಮೀರಿ ಶಾಲುಗಳು ಅತ್ಯಂತ ಪ್ರಸಿದ್ಧ. ಯಾವುದೇ ಕ್ಷಣದಲ್ಲಿ ಇವರ ಕೆಲಸಕ್ಕೆ ಧಕ್ಕೆ ತರಬಹುದಾದ 'ದೈವಿಕ ಹಕ್ಕನ್ನು' ಅಲ್ಲಿನ ಮಹಾರಾಜ ಹೊಂದಿದ್ದ. ನಮ್ಮ ಬಡತನಕ್ಕೆಲ್ಲ ಹಿಂದೂಗಳೇ ಕಾರಣ. ಹಿಂದೂ

ವರ್ಗದವರೇ ನಮ್ಮನ್ನು ತುಳಿಯುತ್ತಿರುವುದು ಎಂದು ಮುಸ್ಲಿಮರು ದೂರುತ್ತಿದ್ದರು. ಯಾಕೆಂದರೆ ಮಹಾರಾಜ ಈ ಹಿಂದೂ ಸಮುದಾಯಕ್ಕೆ ಸೇರಿದವರು. ಹಿಂದೂಗಳಿಂದ ನಮಗೆ ಇಂಥ ದರಿದ್ರಾವಸ್ಥೆ ಎಂದು ಹೇಳುವುದು ಸರಿಯಲ್ಲ ಎಂಬ ಅಂಶ ಒಂದು ಘಟನೆಯಿಂದ ನನಗೆ ಮನವರಿಕೆಯಾಯಿತು ಎಂದು ಶೇಖ್ ಅಬ್ದುಲ್ಲಾ ಈ ಘಟನೆಯನ್ನು ವಿವರಿಸಿದರು. ಅವರು ಒಂದು ಸಲ ಸೇಬು ಹಣ್ಣಿನ ತೋಟದ ಸಮೀಪ ಹಾದುಹೋಗುತ್ತಿದ್ದರಂತೆ. ಅದರ ಮಾಲೀಕ ಮುಸ್ಲಿಂ. ಆತ ಹಣ್ಣುಗಳನ್ನು ಆಯಲು ಕೆಲವರು ಹಿಂದೂಗಳನ್ನು ನೇಮಿಸಿಕೊಂಡಿದ್ದ. ಮರವನ್ನು ಹತ್ತಿ ಅದರ ತುದಿಯಲ್ಲಿದ್ದ ಹಣ್ಣುಗಳನ್ನು ಕೀಳುವಂತೆ ಒಬ್ಬನಿಗೆ ಹೇಳಿದ. ಆ ಮರ ದುರ್ಬಲವಾಗಿತ್ತು. ಮರ ಹತ್ತಿದವನು ಹಣ್ಣು ತುಂಬಿದ ರೆಂಬೆ ಮುರಿದು ಅದರ ಸಮೇತ ಕೆಳಗುರುಳಿದ. ಅವನ ಒಂದು ಪಕ್ಕೆಲುಬು ಮುರಿಯಿತು. ಮರದ ರೆಂಬೆ ಮುರಿದಿದ್ದಕ್ಕಾಗಿ ಮಾಲೀಕ ಅವನಿಗೆ ಬಾಯಿಗೆ ಬಂದಂತೆ ಬೈದುದಲ್ಲದೆ ವಾಕಿಂಗ್ ಸ್ಟಿಕ್‌ನಿಂದ ಚೆನ್ನಾಗಿ ಬಾರಿಸಿದ. ಅಬ್ದುಲ್ಲ, ಗಾಯಗೊಂಡ ವ್ಯಕ್ತಿಯನ್ನು ಕರೆದುಕೊಂಡು ಅವನ ಮನೆಗೆ ಬಂದ. ಆ ಮನೆಯ ಒಂದು ಮೂಲೆಯಲ್ಲಿ ಹಿಂದು ದೇವತೆಗಳ ಕೆಲವು ವಿಗ್ರಹಗಳು, ಕಲ್ಲುಗಳು, ಹೂವುಗಳು ಇದ್ದುದನ್ನು ಬಿಟ್ಟರೆ ಈ ಮನೆಗೂ ಕಸೂತಿ ಕೆಲಸ ಮಾಡುವ ಮುಸ್ಲಿಮರ ಮನೆಗೂ ಯಾವುದೇ ವ್ಯತ್ಯಾಸವಿರಲಿಲ್ಲ. ಈ ಘಟನೆಯ ನಂತರ ಅಬ್ದುಲ್ಲ ಅವರು ಕಲ್ಲುಗಣಿಕಾರ್ಮಿಕರ ಗುಡಿಸಲುಗಳಿಗೂ ಹೋಗತೊಡಗಿದರು. ಸಾಮಾನ್ಯವಾಗಿ ಕಲ್ಲು ಒಡೆಯುವ ಕೆಲಸ ಮಾಡುವವರೆಲ್ಲ ಕೆಳ ಜಾತಿಯ ಹಿಂದೂಗಳು. ಇಲ್ಲೂ ಕೂಡ ಅವರ ಬದುಕಿನ ಸ್ಥಿತಿಗತಿಗೂ ಇತರ ಹಿಂದೂ-ಮುಸ್ಲಿಂ ಕಾರ್ಮಿಕರ ಸ್ಥಿತಿಗತಿಗೂ ಯಾವ ವ್ಯತ್ಯಾಸವೂ ಇರಲಿಲ್ಲ. ಆದ್ದರಿಂದ ಈ ವ್ಯವಸ್ಥೆಯಲ್ಲಿಯೇ ಏನೋ ದೋಷವಿದೆ. ಅದೃಷ್ಟವಂತರಾದ ಹಿಡಿಯಷ್ಟು ಮಂದಿ ಈ ಸಹಸ್ರಾರು ಜನರನ್ನು ತಮ್ಮ ಚರಾಸ್ತಿಯಂತೆ ನಿಯಂತ್ರಿಸುತ್ತಿದ್ದಾರೆ ಎಂಬುದನ್ನು ಅಬ್ದುಲ್ಲಾ ಗಮನಿಸಿದರು. ಅವರ ವಿಚಾರಗಳು ಬೆಳೆದಂತೆ, ಸ್ವಯಮಾಡಳಿತ ಪಡೆದುಕೊಂಡಾಗ ಮಾತ್ರ ನಮಗೆ ನ್ಯಾಯ ಸಿಗಲು ಸಾಧ್ಯ, ಅದಕ್ಕಾಗಿ ಜನ ತಮ್ಮ ಧಾರ್ಮಿಕ ಭೇದಗಳನ್ನು ಮರೆತು ಒಟ್ಟಾಗಿ ಹೋರಾಡಬೇಕು ಎಂದು ಅರ್ಥಮಾಡಿಕೊಂಡರು.

ಅಬ್ದುಲ್ಲಾ ಅವರ ವ್ಯಕ್ತಿತ್ವ ಕುರಿತ ಇಂತಹ ಇನ್ನೆಷ್ಟೋ ಘಟನೆಗಳನ್ನು ನನಗೆ ಮೌಲಾನಾ ಮೊಹಮದ್ ಸಹೀದ್ ಹೇಳಿದರು. ಆತ ನ್ಯಾಶನಲ್ ಕಾನ್‌ಫರೆನ್ಸ್‌ನ ಜನರಲ್ ಸೆಕ್ರೆಟರಿ. ಶೇಖ್ ಅಬ್ದುಲ್ಲಾ ವಿಜ್ಞಾನ ಪದವೀಧರರು ಎಂಬುದು ಆತನಿಗೆ ಬಹುಮುಖ್ಯವಾಗಿತ್ತು. ಒಬ್ಬ ಮೌಲಾನಾ ಇಂತಹ ಅಂಶಕ್ಕೆ ಒತ್ತು ನೀಡಿದ್ದು ವಿಶೇಷವಾಗಿ ನನ್ನ ಗಮನ ಸೆಳೆಯಿತು. ಶೇಖ್ ಸಾಹೇಬರು ಕುರಾನಿನಿಂದಲೂ ವಿಷಯ ಉಲ್ಲೇಖಿಸುತ್ತಾರೆ ಮತ್ತು ಜನರಿಗೆ ಅರ್ಥವಾಗುವಂತೆ ಅದನ್ನು ವೈಜ್ಞಾನಿಕವಾಗಿ ವಿವರಿಸುತ್ತಾರೆ ಎಂದು ಅವರು ಮೆಚ್ಚುಗೆಯಿಂದ ಹೇಳಿದರು.

ಗೃಹರಕ್ಷಕದಳದ ಕೆಲವು ಕಾರ್ಯಕರ್ತರ ಒಂದು ಗುಂಪು ಮೌಲಾನಾ ಅವರ ಚಿಕ್ಕ ಆಫೀಸು ಕೋಣೆಯೊಳಕ್ಕೆ ಬಂದಿತು. ಅಲ್ಲಿ ಚಳಿ ಕಾಯಿಸಿಕೊಳ್ಳುತ್ತಾ ಅಬ್ದುಲ್ಲಾರ ಬಗ್ಗೆ ಅವರು ಇನ್ನಷ್ಟು ವಿಷಯಗಳನ್ನು ಹೇಳಿದರು. ಅವರೆಲ್ಲರ ಮೇಲೂ ಬಹಳ ಪ್ರಭಾವ ಬೀ...

ಶೇಖ್ ಅವರ ಒಂದು ಸಾಹಸಕೃತ್ಯದ ಬಗ್ಗೆ ಹೇಳಿದರು. ಶೇಖ್ ಆಗಷ್ಟೇ ಕಾಲೇಜು ಶಿಕ್ಷಣ ಮುಗಿಸಿಕೊಂಡು ಬಂದಿದ್ದರಂತೆ. ಶ್ರೀನಗರದ ಬೀದಿಗಳಲ್ಲಿ ಒಂದು ಮತೀಯ ಗಲಭೆ ನಡೆದಿತ್ತು. ಅದು ಅಷ್ಟೇನೂ ದೊಡ್ಡ ಪ್ರಮಾಣದ್ದಲ್ಲ. ಜನ ಕಲ್ಲೆಸೆತದಲ್ಲಿ ತೊಡಗಿದ್ದರು. ತಮ್ಮ ಜಿಲ್ಲೆಯ ಗಡಿಯೊಳಗೆ ಯಾವ ಹಿಂದುವೂ ಬರಕೂಡದು. ಬಂದರೆ ಬಡಿದುಹಾಕುವುದಾಗಿ ಮುಸ್ಲಿಮರು ಬೆದರಿಕೆ ಒಡ್ಡಿದರು. ಹಿಂದೂಗಳ ಸ್ಥಿತಿ ಶೋಚನೀಯವಾಗಿತ್ತು. ಏಕೆಂದರೆ ಶ್ರೀನಗರದಲ್ಲಿ ಒಬ್ಬ ಹಿಂದೂವಿಗೆ ಪ್ರತಿಯಾಗಿ ಒಂಬತ್ತು ಮಂದಿ ಮುಸ್ಲಿಮರಿದ್ದರು. ಏಳು ಸೇತುವೆಗಳ ನಗರ ಎಂದು ಕರೆಸಿಕೊಳ್ಳುವ ಶ್ರೀನಗರದ ಜಲಮಾರ್ಗಗಳಲ್ಲಿ ಎಡಬಿಡದ ದೋಣಿ ಸಂಚಾರ ವಿರುತ್ತದೆ. ಎರಡನೇ ಸೇತುವೆ ಬಳಿ ಇರುವ ಮನೆಯೊಂದರಲ್ಲಿ ಒಬ್ಬ ಹಿಂದೂ ಹುಡುಗಿ ಸತ್ತು ಬಿದ್ದಿದ್ದಳು. ಸತ್ತ ೨೪ ಗಂಟೆಯೊಳಗಾಗಿ ದೇಹವನ್ನು ಬೆಂಕಿಯಲ್ಲಿ ಸುಡುವುದು ಹಿಂದೂಗಳ ಸಂಪ್ರದಾಯ. ಆದರೆ ಎರಡು ದಿನಗಳಿಂದ ಅವಳ ದೇಹ ಅಲ್ಲಿಯೇ ಬಿದ್ದಿತ್ತು. ಮುಸ್ಲಿಮರ ಹೆದರಿಕೆಯಿಂದಾಗಿ ಹಿಂದೂಗಳು ಅಲ್ಲಿಗೆ ಹೋಗಲು ಹಿಂದೇಟು ಹಾಕುತ್ತಿದ್ದರು. ವಿಷಯ ತಿಳಿದ ಕೂಡಲೇ ಶೇಖ್ ಅಬ್ದುಲ್ಲಾ ಆ ಮನೆಯನ್ನು ಪ್ರವೇಶಿಸಿ ಅವಳ ದೇಹವನ್ನು ದೋಣಿಯಲ್ಲಿ ತಂದರು. ಪೊಲೀಸರಿಗಾಗಲೀ ಸರ್ಕಾರದ ಅಧಿಕಾರಿಗಳಿಗಾಗಲೀ ಇಲ್ಲದಂಥ ಧೈರ್ಯ ಅವರಲ್ಲಿತ್ತು. ಕಾಲೇಜು ವಿದ್ಯಾರ್ಥಿಗಳಂತೆ ಕಪ್ಪು ಜಾಕೆಟ್, ಕೆಂಪು ಟೋಪಿ ಹಾಕಿಕೊಂಡಿದ್ದ ಶೇಖ್ ನದಿಯಲ್ಲಿ ದೋಣಿ ನಡೆಸಿಕೊಂಡು ಹೋದರು. ಮರದ ಹಲಗೆಯ ಮೇಲೆ ಬಿಳಿಯ ಬಟ್ಟೆಯಲ್ಲಿ ಸುತ್ತಿದ ಆ ಹುಡುಗಿಯ ದೇಹವಿತ್ತು. ಈ ದೋಣಿ ಹೋದ ದಿಕ್ಕಿನಲ್ಲೇ ಜನರೂ ದಂಡೆಯ ಮೇಲಿನಿಂದ ಅವರನ್ನೇ ಹಿಂಬಾಲಿಸುತ್ತಾ ಶೇಖ್ ಅವರನ್ನು 'ಕವೋಗ್' ಎಂದು ಬೈಯುತ್ತಿದ್ದರು. ಕಾಶ್ಮೀರದಲ್ಲಿ ಹೆಣಗಳನ್ನು ಸುಡುವ ಕೆಳಜಾತಿಯ ವ್ಯಕ್ತಿಗೆ ಬಳಸುವ ಕಾಶ್ಮೀರಿ ಪದ ಅದು.

ಮಾನವ ಸಂಬಂಧಗಳು ಮತಭೇದಗಳನ್ನು ಮೀರಿರಬೇಕು ಎಂಬ ತಮ್ಮ ನಂಬಿಕೆಯನ್ನು ಶೇಖ್ ಅಬ್ದುಲ್ಲಾ ಅವರು ಈ ಕ್ರಿಯೆಯ ಮೂಲಕ ತುಂಬಾ ಚೆನ್ನಾಗಿ ವ್ಯಕ್ತಪಡಿಸಿದ್ದರು. ಇದಾದ ನಂತರ ಅವರು ಜನರ ಹಕ್ಕುಗಳನ್ನು ಕುರಿತು ಹಾಗೂ ಭಾರೀ ತೆರಿಗೆಗಳ ವಿರುದ್ಧ ಪ್ರಚಾರ ಆರಂಭಿಸಿದರು. ಚುನಾಯಿತ ಪ್ರತಿನಿಧಿಗಳಿಗಾಗಿ ಅವರು ಹೊಸದೊಂದು ಕಾರ್ಯಕ್ರಮವನ್ನು ಘೋಷಿಸಿದರು. ವಾಕ್‌ಸ್ವಾತಂತ್ರ್ಯ ಪ್ರಜಾಸತ್ತಾತ್ಮಕ ಹಕ್ಕುಗಳು ಮೊದಲಾದವುಗಳನ್ನು ಲಿಖಿತ ರೂಪದ ಸಂಪವಿಧಾನದಲ್ಲಿ ತರುವುದು ಅಗತ್ಯ, ಆಗ ಯಾರೂ ಅವುಗಳನ್ನು ಸಲೀಸಾಗಿ ನಿರಾಕರಿಸಲು ಬರುವುದಿಲ್ಲ ಎಂದು ಹೇಳಿದರು. ಅವರ ನೇತೃತ್ವದಲ್ಲಿ ಹಿಂದೂ, ಮುಸ್ಲಿಂ, ಸಿಖ್ಖರು ಒಟ್ಟಾಗಿ ಕೆಲಸ ಮಾಡಿದರು. ಇದು ಜನರ ಪಾಲಿಗೆ ಆಶಾಕಿರಣವಾಗಿತ್ತು.

ಶೇಖ್ ಅವರು ಪೀಪಲ್ಸ್‌ಪಾರ್ಟಿಯಂತಹ ಒಂದು ಪಕ್ಷವನ್ನು ಸಮರ್ಥವಾಗಿ ಕಟ್ಟುವಲ್ಲಿ ಅವರೊಂದಿಗೆ ಕೆಲಸ ಮಾಡಿದ ಮೌಲಾನಾ ಅವರಂಥವರ ಪಾತ್ರವೂ ಬಹಳ ಮಹತ್ವದ್ದಾಗಿತ್ತು. ಜನರ ಕೈಗೆ ಅಧಿಕಾರ ಬರುವ ಹೊತ್ತಿಗೆ ಇವರುಗಳೆಲ್ಲ ಸಂಘಟನಾ ಚಾತುರ್ಯವನ್ನು ಸಾಕಷ್ಟು ಮೈಗೂಡಿಸಿಕೊಂಡಿದ್ದರು. ಯುದ್ಧದ ವರ್ಷಗಳಲ್ಲಿ ಬ್ರಿಟಿಷರ ಮಿಲಿಟರಿ ಅಗತ್ಯತೆಗಳಿಗೇ

ಹೆಚ್ಚಿನ ಆದ್ಯತೆ ನೀಡಲಾಗಿದ್ದರಿಂದ ಆಹಾರ ಪದಾರ್ಥಗಳ ಸರಬರಾಜು ವಿತರಣೆ ಸಾಕಷ್ಟು ಅಸ್ತವ್ಯಸ್ತಗೊಂಡಿತ್ತು. ಬಂಗಾಳವು ತೀವ್ರ ಕ್ಷಾಮವನ್ನು ಎದುರಿಸಬೇಕಾಗಿ ಬಂದದ್ದು ಇಂಥದೇ ಕಾರಣಕ್ಕಾಗಿ. ಕಾಶ್ಮೀರದಲ್ಲಿ ಆಹಾರ ವಿತರಣೆಯ ವಿಷಯವನ್ನು ಜನರ ಆಹಾರ ಸಮಿತಿಗಳು ನಿರ್ವಹಿಸಿದವು. ಆದರೆ ಜನತೆಯ ಆಡಳಿತವು ತನ್ನ ನಿಜವಾದ ಸಂಘಟನಾ ಕೌಶಲ್ಯವನ್ನು ಪಡೆದುಕೊಂಡಿದ್ದು ಭೂಗತ ಕಾರ್ಯಾಚರಣೆಯ ಅವಧಿಯಲ್ಲಿ.

ಬಹು ದೀರ್ಘಕಾಲ ಭೂಗತ ಹೋರಾಟವನ್ನು ನಡೆಸಿಕೊಂಡು ಬಂದ ಕೆಲವ್ಯಕ್ತಿಗಳು ಬಂಧನವನ್ನು ತಪ್ಪಿಸಿಕೊಳ್ಳುವ ಹಾಗೂ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಮಾರುವೇಷದಲ್ಲಿ ಸ್ಥಳಾಂತರಿಸುವ ತಂತ್ರಗಳಲ್ಲಿ ಪಳಗಿದ್ದರು. ಇಂಥವರ ಬಗ್ಗೆ ಅನೇಕ ಕಥೆಗಳು ಪ್ರಚಲಿತವಾಗಿವೆ. ಅದರಲ್ಲಿಯೂ ಬುಲ್ ಬುಲಿ-ಕಾಶ್ಮೀರಿ ಎಂಬ ಅಡ್ಡಹೆಸರಿನಿಂದ ಕರೆಯಲಾಗುತ್ತಿದ್ದ ಗುಲಾಮ್ ಮೊಹಿಯುದ್ದೀನ್ ಅವರ ಬಗೆಗೆ ಹೆಚ್ಚು ಕಥೆಗಳು ಪ್ರಚಲಿತವಾಗಿದ್ದವು.

ಶೇಖ್ ಅಬ್ದುಲ್ಲಾ ಅವರ ಕೊನೆಯ ಹಾಗೂ ಎಂಟನೆಯ ಬಂಧನದ ಹೊತ್ತಿಗೆ ಸ್ವಾತಂತ್ರ್ಯವು ಭಾರತದ ಹೊಸ್ತಿಲಿನ ಬಳಿಗೆ ಬಂದಿತ್ತು. ಮಹಾರಾಜರ ಸರ್ಕಾರ ಪ್ರಜಾತಂತ್ರದ ನಾಯಕರುಗಳನ್ನೆಲ್ಲ ಬಂಧನದಲ್ಲಿಟ್ಟಿತ್ತು. ಶೇಖ್ ಅಬ್ದುಲ್ಲಾರನ್ನು ಬಂಧಿಸಿದಾಗ All India State People's Conferenceನ ಅಧ್ಯಕ್ಷರಾಗಿಯೇ ಉಳಿದಿದ್ದ ನೆಹರು ಅಬ್ದುಲ್ಲಾಗೆ ಸ್ವತಃ ತಾವೇ ಜಾಮೀನು ಕೊಡಲು ಬಂದರು. ಮಹಾರಾಜರ ಪೊಲೀಸರು ನೆಹರು ತಮ್ಮ ಸ್ನೇಹಿತನ ರಕ್ಷಣೆಗೆ ಬರದಂತೆ ಅವರು ಕಾಶ್ಮೀರವನ್ನು ಪ್ರವೇಶಿಸುವುದರ ಮೇಲೆಯೇ-ನಿಷೇಧ ಹೇರಿದರು.

ಶೇಖ್ ಅಬ್ದುಲ್ಲಾ ಅವರು ಜೈಲಿನಲ್ಲಿದ್ದಾಗಲೂ ಭಾರತ ಮತ್ತು ಕಾಶ್ಮೀರಕ್ಕೆ ಸ್ವಾತಂತ್ರ್ಯ ಬರುವವರೆಗೂ ಜೈಲುಗೋಡೆಗಳ ಹೊರಗೇ ಇದ್ದುಕೊಂಡು ಪ್ರಜಾಸತ್ತಾತ್ಮಕ ಹೋರಾಟವನ್ನು ಜೀವಂತವಾಗಿಡುವಂತಹ ಸಂಘಟನೆ ಇರಬೇಕೆಂದು ಸದಾ ಯೋಚಿಸುತ್ತಿದ್ದರು. ಬುಲ್‌ಬುಲಿ ಕಾಶ್ಮೀರಿ ಗುಲಾಂ ಮೊಹಿಉದ್ದೀನ್ (ಕಾಶ್ಮೀರದ ನೈಟಿಂಗೇಲ್)ಯವರು ಶೇಖ್ ಅಬ್ದುಲ್ಲಾ ನೀಡುತ್ತಿದ್ದ ಸೂಚನೆಗಳನ್ನು ರಹಸ್ಯವಾಗಿ ರವಾನಿಸುವ ಅದ್ಭುತ ಪ್ರತಿಭೆ ಹೊಂದಿದ್ದರು. ಸರ್ಕಾರವು ಸಭೆಗಳನ್ನು ನಿಷೇಧಿಸಿದಾಗ, ಜನರ ಮೇಲೆ ಗುಪ್ತದಳದ ನಿಗಾ ತೀವ್ರಗೊಂಡಾಗ ಜನ ಪರಸ್ಪರ ಮಾತಾಡುವಂತೆಯೇ ಇರಲಿಲ್ಲ. ಆಗ, ಬುಲ್‌ಬುಲಿ ಕಾಶ್ಮೀರಿ, ಹಣ್ಣು ಮಾರಾಟ ಮಾಡುವವರಂತೆ ದೊಡ್ಡದೊಡ್ಡ ಹಣ್ಣಿನ ಬುಟ್ಟಿಗಳನ್ನು ತಂದು ಸಾರ್ವಜನಿಕ ಚೌಕದಲ್ಲಿ ಇಟ್ಟುಕೊಂಡು ಕೂರುತ್ತಿದ್ದರು. ಹಣ್ಣು ಮಾರುವ ನೆವದಲ್ಲಿ ಗುಪ್ತ ಸಂದೇಶಗಳನ್ನು ರವಾನಿಸುತ್ತಿದ್ದರು. ಒಂದು ಸಲ, ಅವರು ಪ್ರವೇಶ ಮಾಡಿದ್ದ ಮನೆಯನ್ನು ಪೊಲೀಸರು ಸುತ್ತುವರೆದಾಗ ಅವರು ಎರಡನೇ ಮಹಡಿಯ ಕಿಟಕಿಯಿಂದ ಕೆಳಗಿದ್ದ ಧಾನ್ಯದ ಕಣಜಕ್ಕೆ ಧುಮುಕಿ ಅಲ್ಲಿಯೇ ೫ ಗಂಟೆಗಳ ಕಾಲ ಅವಿತುಕೊಂಡಿದ್ದರು. ಇತ್ತ ನೂರಾರು ಜನ ರಸ್ತೆಗಳಲ್ಲಿ ನಿಂತು ಅವರು ಸುರಕ್ಷಿವಾಗಿ ಪಾರಾಗಲಿ ಎಂದು ಪ್ರಾರ್ಥಿಸುತ್ತಿದ್ದರು.

ತಮ್ಮ ಗಂಡಂದಿರು ಜೈಲುಗಳಲ್ಲಿದ್ದಾಗ ಕಾಶ್ಮೀರದ ಹೆಂಗಸರು ತಮ್ಮನ್ನು ಜನರಿಂದ ಪ್ರತ್ಯೇಕಗೊಳಿಸುವ ಪ್ರಾಚೀನ ಸಂಪ್ರದಾಯಗಳನ್ನು ತೊರೆದು ಹೊಸ ಜವಾಬ್ದಾರಿಗಳನ್ನು

ವಹಿಸಿಕೊಂಡರು. ಕಾಶ್ಮೀರ ಸಿಂಹದ ಸಂದೇಶಗಳು ಜೈಲಿನಿಂದ ಹೊರಗೆ ಗುಪ್ತವಾಗಿ ಹೊರಡುತ್ತಿದ್ದಂತೆ ಈ ಹೆಂಗಸರು ಆ ಸಂದೇಶವನ್ನು ತೆಳುವಾದ ಹಾಳೆಗಳಲ್ಲಿ ಪ್ರತಿಮಾಡಿ ಪ್ರಸಾರ ಮಾಡುತ್ತಿದ್ದರು. "ನಾವು ನಮ್ಮ ಧ್ಯೇಯ ಸಾಧಿಸಬೇಕು. ಇಲ್ಲದಿದ್ದರೆ ಪ್ರಾಣ ತ್ಯಜಿಸಬೇಕು. ಮಹಾರಾಜ ಹರಿಸಿಂಗ್‌ಗೆ ನಮ್ಮನ್ನು ಆಳುವ ಯಾವುದೇ ನೈತಿಕ ಹಕ್ಕು ಇಲ್ಲ. ಅವರು ಅದನ್ನು ತಮ್ಮ ಕಾನೂನಾತ್ಮಕ ಹಕ್ಕು ಎಂದೇನಾದರೂ ಹೇಳಿದರೆ ಅದನ್ನು ನಾವು ಪ್ರಶ್ನಿಸಲೇಬೇಕು. ಭಾರತದಿಂದ ಬ್ರಿಟಿಷ್ ಸಾಮ್ರಾಜ್ಯಶಾಹಿ ಕಾಲ್ತೆಗೆದ ನಂತರ ಆಳ್ವಿಕೆಯ ಹಕ್ಕು ಸಹಜವಾಗಿಯೇ ಜನರಿಗೆ ಸೇರಿದ್ದು. ಇಂಥ ಸಂದರ್ಭದಲ್ಲಿ ಮಹಾರಾಜರು ಮತ್ತು ಜನತೆಯ ಸಂಬಂಧ ಬೇರೆಯೇ ರೀತಿಯಲ್ಲಿ ರೂಪುಗೊಳ್ಳಬೇಕು. ಇದನ್ನು ಅವರು ಅರ್ಥಮಾಡಿಕೊಳ್ಳಲಿ. ಇಲ್ಲದಿದ್ದರೆ ಜನರೊಂದಿಗೆ ಕೊನೆಯ ತನಕ ಹೋರಾಡಲಿ" ಎಂದು ಶೇಖ್ ತಿಳಿಸುತ್ತಿದ್ದರು.

ಸ್ವಾತಂತ್ರ್ಯದ ದಿನ ಬಂತು. ಅದರ ಜತೆ ವಿಭಜನೆ ಕೂಡಾ. ಕಾಶ್ಮೀರ ಭಾರತಕ್ಕೆ ಸೇರಬೇಕೋ, ಪಾಕಿಸ್ತಾನಕ್ಕೆ ಸೇರಬೇಕೋ ಎಂಬ ಪ್ರಶ್ನೆಯೂ ಆಗಲೇ ನಿರ್ಧಾರವಾಗಬೇಕಿತ್ತು. ಆಗ ಶೇಖ್ ಅಬ್ದುಲ್ಲಾ ಅವರು ಜೈಲಿನಿಂದಲೇ ಘೋಷಿಸಿದರು. "ಮೊದಲು ಜವಾಬ್ದಾರಿ ಸರ್ಕಾರ. ಅನಂತರವೆ ಸೇರ್ಪಡೆಯ ಪ್ರಶ್ನೆ".

ಕಾಶ್ಮೀರದಲ್ಲಿ ಮುಸ್ಲಿಮರ ಸಂಖ್ಯೆ ಹೆಚ್ಚಾಗಿದೆ ಎಂಬುದೇ ಅದು ಪಾಕಿಸ್ತಾನಕ್ಕೆ ಸೇರುವುದಕ್ಕೆ ಆಧಾರವಾಗಬಾರದು. ತಾವು ಯಾವ ಕಡೆ ಸೇರಬೇಕು ಎಂಬುದನ್ನು ನಿರ್ಧರಿಸುವುದಕ್ಕೆ ಜನರಿಗೇ ಅವಕಾಶ ಕೊಡಬೇಕು. ಆರ್ಥಿಕವಾಗಿ ಕಾಶ್ಮೀರವು ಪಾಕಿಸ್ತಾನಕ್ಕೆ ಹೆಚ್ಚು ನಿಕಟವಾಗಿ ಹೆಣೆದುಕೊಂಡಿದೆ ಮತ್ತು ಮುಖ್ಯ ಹೆದ್ದಾರಿಗಳೆಲ್ಲ ಅದನ್ನು ಪಾಕಿಸ್ತಾನಕ್ಕೆ ಸಂಪರ್ಕಿಸುತ್ತವೆ. ಆದರೆ ಕಾಶ್ಮೀರ ಮತ್ತು ಜಮ್ಮು, ಭಾರತದ ಗಡಿಯಂಚಿಗೇ ಇವೆ. ಇದರಿಂದ ಭಾರತದೊಂದಿಗೂ ಅವುಗಳಿಗೆ ನಿಕಟ ಸಂಬಂಧವಿದೆ. ಇದಲ್ಲದೆ ಕಾಶ್ಮೀರವು ಜವಾಬ್ದಾರಿ ಸರ್ಕಾರಕ್ಕಾಗಿ ಹೋರಾಟ ನಡೆಸಿದಾಗ ನೆಹರೂ ಮತ್ತು ಇತರ ನಾಯಕರು ಕಾಶ್ಮೀರದ ಬಗ್ಗೆ ಸಹಾನುಭೂತಿ ಸಹಾಯ ನೀಡಿದ್ದರು. ಸಂದರ್ಭ ಯಾವುದೇ ಇರಲಿ, ಧರ್ಮವನ್ನು ನಿರ್ಧಾರಕ ಅಂಶವಾಗಿ ಪರಿಗಣಿಸಬಾರದು. ಭಾರತ ಮತ್ತು ಪಾಕಿಸ್ತಾನ ಧಾರ್ಮಿಕ ಘರ್ಷಣೆಯಿಂದ ಹರಿದು ಛಿದ್ರವಾದವು. ಎಲ್ಲ ಧರ್ಮಗಳ ಒಗ್ಗೂಡಿಕೆಯ ಆಧಾರದ ಮೇಲೆ ಸ್ವಯಮಾಡಳಿತ ಸಾಧಿಸಬೇಕು ಎಂದು ತಮ್ಮ ಯೋಜನೆ ರೂಪಿಸಿರುವ ಕಾಶ್ಮೀರಿಗಳನ್ನು, ಈ ಯಾವುದಾದರೊಂದು ದೇಶಕ್ಕೆ ಸೇರಿಸಬೇಕು ಎಂದಾಗ ಅದು ಜನತೆಯ ಮೇಲೆ ತೀವ್ರ ಪರಿಣಾಮ ಬೀರುತ್ತದೆ. ಸ್ವಾತಂತ್ರ್ಯ ಬಂದು ಒಂದು ತಿಂಗಳಾಗಿತ್ತು. ಬಗೆಹರಿಯದ ಪ್ರಶ್ನೆಗಳು ಇನ್ನೂ ತೀವ್ರವಾಗುತ್ತ ಹೋದವು. ಶೇಖ್ ಅಬ್ದುಲ್ಲಾ ಇನ್ನೂ ಜೈಲಿನಲ್ಲೇ ಇದ್ದರು.

ಆಗ ಶ್ರೀನಗರದ ಹೆಂಗಸರು ಕಾರ್ಯಪ್ರವೃತ್ತರಾದರು. ಅವರು ಜೈಲಿಗೆ ಮೆರವಣಿಗೆ ಹೋದರು. ಕಾಶ್ಮೀರದ ಸಿಂಹವನ್ನು ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿದರು. ಅಲ್ಲಿನ ಕಾವಲುಗಾರರು ಅವರನ್ನು ಬೆದರಿಸಿದಾಗ ಅವರು ಅಲ್ಲೆ ರಸ್ತೆಯ ಮೇಲೆ ಅಡ್ಡಡ್ಡ ಮಲಗಿದರು. ಗೇಟಿಗೆ ಅಡ್ಡವಾಗಿ ಮಲಗಿದ್ದ ಅವರು ಮೂರು ದಿನವಾದರೂ ಅಲ್ಲಿಂದ ಕದಲಲಿಲ್ಲ. ಕೊನೆಯಲ್ಲಿ

ವಿಜಯ ಅವರದಾಯಿತು. ಕಾಶ್ಮೀರದ ಸಿಂಹವನ್ನು ಹೊರಗೆ ಬಿಟ್ಟರು. ಶೇಖ್ ಮಾಡಿದ ಮೊದಲ ಕೆಲಸವೆಂದರೆ ಒಂದು ಸಾರ್ವಜನಿಕ ಸಭೆಯನ್ನು ಕರೆದಿದ್ದು. ಈ ಸಭೆಯಲ್ಲಿ ಭಾಗವಹಿಸುವುದಕ್ಕಾಗಿ ಒಂದು ಲಕ್ಷ ಕಾಶ್ಮೀರಿಗಳು ಶ್ರೀನಗರಕ್ಕೆ ಬಂದರು. ರಾಷ್ಟ್ರೀಯ ಬಿಕ್ಕಟ್ಟಿನ ಈ ಸಂದರ್ಭದಲ್ಲಿ ಕಾಶ್ಮೀರವು ಬೆಳಕು ತೋರಿಸಬೇಕು. ನಮ್ಮ ಸುತ್ತಮುತ್ತ ಎಲ್ಲೆಲ್ಲೂ ಸೋದರರು ಸೋದರರನ್ನು ಕೊಲ್ಲುವ ದುರಂತವನ್ನು ನೋಡುತ್ತಿದ್ದೇವೆ. ಈ ಸಂದರ್ಭದಲ್ಲಿ ಕಾಶ್ಮೀರ ಮುಂದೆ ಬಂದು ಹಿಂದೂ ಮುಸ್ಲಿಂ ಐಕ್ಯತೆಯನ್ನು ಎತ್ತಿ ಹಿಡಿಯಬೇಕು. ಕಾಶ್ಮೀರದಲ್ಲಿ ನಮಗೆ ಜನತೆಯ ಸರ್ಕಾರ ಬೇಕು. ಜನ ಯಾವ ಧರ್ಮ, ಮತಕ್ಕೆ ಸೇರಿದವರು ಎಂಬುದನ್ನು ಗಮನಿಸದೆ ಎಲ್ಲರಿಗೂ ಸಮಾನ ಹಕ್ಕುಗಳು ಹಾಗೂ ಸಮಾನ ಅವಕಾಶಗಳನ್ನು ಕೊಡುವಂಥ ಸರ್ಕಾರ ನಮಗೆ ಬೇಕು. ಕಾಶ್ಮೀರದ ಸರ್ಕಾರ ಯಾವುದೇ ಒಂದು ಕೋಮಿನ ಸರ್ಕಾರವಾಗಿರುವುದಿಲ್ಲ. ಅದು ಹಿಂದೂ, ಸಿಖ್, ಮುಸ್ಲಿಮರು ಎಲ್ಲ ಸೇರಿದ ಒಂದು ಅವಿಭಕ್ತ ಸರ್ಕಾರವಾಗಿರುತ್ತದೆ ಎಂದು ಶೇಖ್ ಹೇಳಿದರು. ಇದಾದನಂತರ ಶೇಖ್, All Jammu and Kashmiri Nations State People's Conferenceನ, ಪ್ರತಿನಿಧಿಗಳನ್ನು ಈ ಸೇರ್ಪಡೆಯ ಬಗ್ಗೆ ಚರ್ಚಿಸುವುದಕ್ಕಾಗಿ ಪಾಕಿಸ್ತಾನಕ್ಕೆ ಕಳಿಸಿದರು. ಆದರೆ ಜಿನ್ನಾ ಈ ಪ್ರತಿನಿಧಿಗಳಿಗೆ ಭೇಟಿ ಕೊಡಲಿಲ್ಲ. ಇದು ಅವರು ಮಾಡಿದ ಬಹುದೊಡ್ಡ ಪ್ರಮಾದ ಎಂದು ಅನೇಕರು ಹೇಳಿದ್ದಾರೆ. ಅವರು ಒಂದು ವೇಳೆ ಇಲ್ಲಿನ ಜನತೆಯ ಸರ್ಕಾರಕ್ಕೆ ಮಾನ್ಯತೆ ನೀಡಲು ಒಪ್ಪಿಕೊಂಡಿದ್ದರೆ ಮೂರು ದಶಲಕ್ಷ ಮುಸ್ಲಿಮರಿರುವ ಕಾಶ್ಮೀರವನ್ನು ಅವರು ಪಡೆದುಕೊಳ್ಳಬಹುದಿತ್ತು. ಆದರೆ ಹಿಂದೂಗಳು, ಸಿಖ್ಖರು ಮತ್ತು ಮುಸ್ಲಿಮರಿರುವ ಈ ಅವಿಭಕ್ತ ಸರ್ಕಾರದ ಕಲ್ಪನೆಯೇ ಜಿನ್ನಾ ಅವರಿಗೆ ಹಿಡಿಸದಿದ್ದರೆ ಆಶ್ಚರ್ಯವೇನಿಲ್ಲ. Poeples Party ಬಗ್ಗೆ ಮಹಾರಾಜ ಹರಿಸಿಂಗ್ ಅವರಿಗೆ ಇದ್ದ ದೃಷ್ಟಿಕೋನ ಜಿನ್ನಾ ದೃಷ್ಟಿಕೋನ ಎರಡೂ ಒಂದೇ. ಇಷ್ಟಾದರೂ ಆರ್ಥಿಕ ಕಾರಣಗಳಿಗಾಗಿ ಅದಕ್ಕಿಂತ ಮುಖ್ಯವಾಗಿ ಪ್ರತಿಷ್ಠೆಯ ದೃಷ್ಟಿಯಿಂದ ಪಾಕಿಸ್ತಾನಕ್ಕೆ ಕಾಶ್ಮೀರ ತುರ್ತಾಗಿ ಬೇಕಾಗಿತ್ತು. ಮುಸ್ಲಿಮರಿಗೆ ಆಶ್ರಯ ನೀಡುವ ದೃಷ್ಟಿಯಿಂದಲೇ ಪಾಕಿಸ್ತಾನ ಸೃಷ್ಟಿಯಾಗಿದ್ದಾಗ ಬಹುಸಂಖ್ಯಾತ ಮುಸ್ಲಿಮರಿರುವ ರಾಜ್ಯವನ್ನು ಬಿಟ್ಟುಕೊಡುವುದು ಭಾರೀ ಹೊಡೆತವೇ ಸರಿ. ಭಾರತ ಏನೋ ಆಳವಾದ ಒಳಸಂಚು ನಡೆಸುತ್ತಿದೆ ಎಂದು ಪಾಕಿಸ್ತಾನ ನಂಬಿಬಿಟ್ಟಿತ್ತು. ಬಹು ಉದ್ದದ ಗಡಿರೇಖೆ ಇರುವ ಕಾಶ್ಮೀರ ಭಾರತಕ್ಕೆ ಸೇರಿಹೋದರೆ ಪಾಕಿಸ್ತಾನದ ಬಹುಹೆಚ್ಚಿನ ಗಡಿಯನ್ನು ಭಾರತವೇ ಸುತ್ತುವರೆದು ಬಿಡುವ ಅಪಾಯವಿದೆ ಎಂದು ಅದು ಭಾವಿಸಿತ್ತು.

ಖೈಬರ್‌ಪಾಸ್ ಅಫ್ಘಾನಿಸ್ತಾನದೊಳಕ್ಕೆ ತೂರಿಕೊಳ್ಳುವಂತೆ ಇರುವ ವಾಯುವ್ಯ ಗಡಿಪ್ರಾಂತದ ಮೇಲ್ಭಾಗದಲ್ಲಿ ಮುಸ್ಲಿಮರ ಒಲವನ್ನು ಗಳಿಸುವುದು ಪಾಕಿಸ್ತಾನಕ್ಕೆ ಕಷ್ಟವಾಗಲಿಲ್ಲ. ವಾಯುವ್ಯ ಗಡಿಪ್ರಾಂತವು ಗುಡ್ಡಗಾಡಿನ ಪಠಾಣ್ ಬುಡಕಟ್ಟು ಜನರ ತವರುನೆಲೆಯಾಗಿತ್ತು. ಈ ಬುಡಕಟ್ಟು ಜನ ಹೆಂಡತಿಗಿಂತ ಹೆಚ್ಚಾಗಿ ಬಂದೂಕನ್ನು ಪ್ರೀತಿಸುವಂಥವರು. ಚಾಕುವಿನಿಂದಲೇ ಕೆಲಸ ವಾಗುವಂತಿದ್ದಾಗ ಬುಲೆಟ್ಟನ್ನು ವ್ಯರ್ಥಮಾಡುವ ಗೋಜಿಗೆ ಹೋಗದವರು. ಬೇರೆಯವರ ಮೇಲೆ ಧಾಳಿ ಮಾಡಿ ಹೆಂಗಸರನ್ನು ಅಪಹರಿಸಿಕೊಂಡು ಬರುವುದು ಮೊದಲಾದ ಕೆಲವು

ಅಭ್ಯಾಸಗಳು ಅವರಲ್ಲಿ ಭದ್ರವಾಗಿ ತಳಊರಿದ್ದವು. ಆದರೆ ಬ್ರಿಟಿಷರು ಹಣಕೊಟ್ಟು ಅವರನ್ನು 'ಒಳ್ಳೆಯವರಾಗಿ'ರುವಂತೆ ನೋಡಿಕೊಂಡಿದ್ದರು. ಈ ಬುಡಕಟ್ಟು ಜನರ ನಿಷ್ಠೆ ವಿಧಿವತ್ತಾಗಿ ಪಾಕಿಸ್ತಾನದ ಕಡೆ ವರ್ಗಾವಣೆಯಾಗುತ್ತಿದ್ದ ಕಾಲದಲ್ಲಿ ನಾನು ವಾಯುವ್ಯ ಪ್ರಾಂತದಲ್ಲಿ ಸಂಚರಿಸುತ್ತಿದ್ದೆ. ಪೆನ್ನು ಹಿಡಿಯಲೂ ಗೊತ್ತಿರದಿದ್ದ ಭಯಂಕರ ವ್ಯಕ್ತಿತ್ವದ ಪಠಾಣ ಮುಖ್ಯಸ್ಥರು ವಿಲೀನದ ದಸ್ತಾವೇಜು ಪತ್ರಗಳಿಗೆ ತಮ್ಮ ಮುದ್ರೆ ಉಂಗುರದ ಮೊಹರು ಹಾಕಿಕೊಡುತ್ತಿದ್ದರು. ಇದು ಒಂದು ವರ್ಣರಂಜಿತ ಸಮಾರಂಭವಾಗಿ ಎಲ್ಲೆಲ್ಲೂ ನಡೆಯುತ್ತಿತ್ತು. ಅಂಥ ಅನೇಕ ಫೋಟೋಗಳನ್ನು ನಾನು ತೆಗೆದೆ.

ಒಂದು ಕಡೆ ಗುಡ್ಡಗಾಡಿನ ಜನರು ಇಂಕ್‌ಪ್ಯಾಡಿಗೆ ತಮ್ಮ ಉಂಗುರಗಳನ್ನು ಒತ್ತಿ ತಮ್ಮನ್ನು ಪಾಕಿಸ್ತಾನಕ್ಕೆ ಒತ್ತೆ ಇಟ್ಟುಕೊಳ್ಳುವ ಮುದ್ರೆಗಳನ್ನು ಮೂಡಿಸುತ್ತಿದ್ದಾಗ, ಇತ್ತ ಕಾಶ್ಮೀರದ ಜನತಾ ಸರ್ಕಾರವು ಈ ಸೇರ್ಪಡೆಯ ಕರಾರುಗಳ ಬಗ್ಗೆ ಪಾಕಿಸ್ತಾನದೊಂದಿಗೆ ಚರ್ಚೆ ನಡೆಸಲು ಇನ್ನೊಂದು ಪ್ರಯತ್ನ ನಡೆಸಿತ್ತು. ಮುಸ್ಲಿಂಲೀಗ್ ಹೈಕಮಾಂಡ್ ಜೊತೆ ಮಾತುಕಥೆ ನಡೆಸುವುದಕ್ಕಾಗಿ ಶೇಖ್ ಅಬ್ದುಲ್ಲಾ ಎರಡನೇ ನಿಯೋಗವನ್ನು ಕಳಿಸಿದ್ದರು. ಇನ್ನೂ ಈ ಮಾತುಕತೆಗಳು ಆರಂಭವಾಗಿರಲಿಲ್ಲ. ಅಷ್ಟರಲ್ಲಿಯೇ ಬುಡಕಟ್ಟು ಜನರು ಇಸ್ಲಾಂ ಹೆಸರಿನಲ್ಲಿ ಕಾಶ್ಮೀರದ ಮೇಲೆ ಧಾಳಿ ನಡೆಸಿ ಹೆಂಗಸರೂ ಸೇರಿದಂತೆ ಏನೇನು ಸಾಧ್ಯವೋ ಎಲ್ಲವನ್ನೂ ಲೂಟಿಮಾಡಿಕೊಂಡು ಬಂದಿದ್ದರು. ಅವರು ಹಚ್ಚಿದ ಬೆಂಕಿಯಲ್ಲಿ ಹಳ್ಳಿಗಳು ಉರಿಯುತ್ತಿದ್ದವು. ಅವರು ಹೆಚ್ಚಿನ ಪ್ರಯಾಸವಿಲ್ಲದೆ ಶ್ರೀನಗರದ ಬಾಗಿಲವರೆಗೆ ಬಂದುಬಿಟ್ಟಿದ್ದರು. ಮಹಾರಾಜ ಪಲಾಯನ ಮಾಡಿದಾಗ ಶೇಖ್ ಅಬ್ದುಲ್ಲಾ ತುರ್ತು ಸರ್ಕಾರದ ಮುಖ್ಯಸ್ತಿಕೆ ವಹಿಸಿಕೊಂಡರು. ಮಿಲಿಟರಿ ನೆರವಿಗಾಗಿ ಭಾರತಕ್ಕೆ ಒಂದು ತುರ್ತುಕೋರಿಕೆ ಕಳಿಸಲಾಯಿತು. ಭಾರತದೊಂದಿಗೆ ಸೇರ್ಪಡೆಯ ದಸ್ತಾವೇಜಿಗೆ ಮಹಾರಾಜ ಸಹಿಹಾಕಿದ. ಅದನ್ನು ಶೇಖ್ ಅಬ್ದುಲ್ಲಾ ಅನುಮೋದಿಸಿದರು. ಕಾಶ್ಮೀರದಲ್ಲಿ ಭೀಕರಯುದ್ಧ ಆರಂಭವಾಯಿತು.

ಭಾರತದಿಂದ ಸೈನಿಕರನ್ನು, ಶಸ್ತ್ರಾಸ್ತ್ರಗಳನ್ನು ತುಂಬಿಕೊಂಡ ವಿಮಾನಗಳು ಕಾಶ್ಮೀರದ ರಕ್ಷಣೆಗೆ ಬರುವವರೆಗೆ ಜನತೆಯ ಸ್ವಯಂ ಸೇವಕ ಸೈನ್ಯ ಬರೀ ಕಟ್ಟಿಗೆ ಕೋಲು ದೊಣ್ಣೆ ಹಿಡಿದು, ಎಷ್ಟೋ ಸಲ ಬರೀ ಕೈಗಳಿಂದ ಹೋರಾಡುತ್ತ ತಮ್ಮ ರಾಜಧಾನಿಯನ್ನು ರಕ್ಷಿಸಿಕೊಂಡರು. ತಮ್ಮ ಗುಲಾಮತನದ ದಿನಗಳಲ್ಲಿ ಎಂದೂ ಶಸ್ತ್ರಾಸ್ತ್ರಗಳನ್ನು ಬಳಸಿರದ ಕಾಶ್ಮೀರಿಗಳು ತರಬೇತಿ ದಳಗಳನ್ನು ಸಂಘಟಿಸಿದರು. ಹೆಂಗಸರೂ ಕೂಡ ಅವುಗಳಲ್ಲಿ ಸೇರಿಕೊಂಡರು. ತುರ್ತು ಪರಿಸ್ಥಿತಿಯಲ್ಲಿ ಹೊಸ ಜೀವನಕ್ರಮ ಉದಯಿಸಿತು. ಬುಡಕಟ್ಟು ಧಾಳಿಕೋರರನ್ನು ರಾಜಧಾನಿ ಯಿಂದ ಸಾಕಷ್ಟು ದೂರ ಅಟ್ಟಿದ ನಂತರ ಸಾಕ್ಷರತಾ ತರಗತಿಗಳನ್ನು ಆರಂಭಿಸಲಾಯಿತು. ರೈಫಲ್ ಹಿಡಿಯುವ ಅಭ್ಯಾಸದ ಜೊತೆಗ ಗಣಿತ, ಅಕ್ಷರಾಭ್ಯಾಸಗಳನ್ನು ಮಾಡಿಸಲಾಯಿತು. ಕಾಶ್ಮೀರದ ಹೆಂಗಸರು ರೈಫಲ್ ಹಿಡಿಯುವಂತಾದಾಗ ಅವರ ಬುರ್ಖಾ ಪದ್ಧತಿ ಅಳಿದು ಹೋಯಿತು. ಈಗ ರೈತರು ಶ್ರೀಮಂತ ಭೂಮಾಲೀಕರ ಜೀತದಾಳುಗಳಾಗಿರಲಿಲ್ಲ. ಹಳ್ಳಿಗರು ತಮ್ಮದೇ ಸ್ಥಳೀಯ ಅಧಿಕಾರಿಗಳನ್ನು ಚುನಾಯಿಸಿಕೊಂಡರು. ಭೂಸುಧಾರಣೆಯ ಯೋಜನೆ

ಆರಂಭವಾಯಿತು. ಎಲ್ಲೋ ಇರುತ್ತಿದ್ದ ಭೂಮಾಲೀಕರು ಬೀಳುಬಿಟ್ಟಿದ್ದ ಬಂಜರು ಭೂಮಿಯನ್ನು ಈಗ ಭೂರಹಿತರಿಗೆ ಮತ್ತು ತೀರ ಕಡಿಮೆ ಭೂಮಿಯನ್ನು ಹೊಂದಿದ್ದ ರೈತರಿಗೆ ವಿತರಿಸಲಾಯಿತು. ಹೆಚ್ಚು ಆಹಾರ ಬೆಳೆಯುವಂತೆ ಉತ್ತೇಜಿಸಲು ಪ್ರಚಾರ ಮಾಡುವುದಕ್ಕಾಗಿ ಶೇಖ್ ಅಬ್ದುಲ್ಲಾ ರಾಜ್ಯದಾದ್ಯಂತ ಪ್ರವಾಸ ಮಾಡಿ ರೈತರನ್ನುದ್ದೇಶಿಸಿ ಭಾಷಣ ಮಾಡಿದರು. ಕೆಲವೊಂದು ಸಂದರ್ಭಗಳಲ್ಲಿ ಸ್ವತಃ ಉಳುಮೆ ಮಾಡಿ ಅವರಿಗೆಲ್ಲ ಆದರ್ಶವಾದರು. ಶೇಖ್ ಮತ್ತು ಅವರ ಸಂಪುಟ ತಮ್ಮ ಸಂಬಳವನ್ನು ತಿಂಗಳಿಗೆ ೭೫ ಪೌಂಡುಗಳಿಗೆ ಸೀಮಿತಗೊಳಿಸಿಕೊಂಡಿತು. ಮಹಾರಾಜರನ್ನು ಸಿಂಹಾಸದಿಂದ ಕೆಳಗಿಳಿಸಲಿಲ್ಲ. ಆದರೆ ಈ ಮೊದಲು ಅವರು ಹೊಂದಿದ್ದ ಅನೇಕ ಅಧಿಕಾರಗಳನ್ನು ಕಸಿದುಕೊಳ್ಳಲಾಯಿತು. ಅವರಿಗೆ ದೊರೆಯುತ್ತಿದ್ದ ೩೦೦೦ ಪೌಂಡುಗಳ (ತಿಂಗಳಿಗೆ) ರಾಜಧನವನ್ನು ಅದರ ಹತ್ತನೇ ಒಂದು ಭಾಗಕ್ಕೆ ಇಳಿಸಲಾಯಿತು.

ಆದರೂ ಜನರೆಲ್ಲರ ತಿರಸ್ಕಾರಕ್ಕೆ ಪಾತ್ರರಾಗಿದ್ದ ಮಹಾರಾಜರು ಹಾಗೇ ಉಳಿದದ್ದು ಶೇಖ್ ಅಬ್ದುಲ್ಲಾ ಅವರಿಗೆ ಸಾಕಷ್ಟು ಮುಜುಗರದ ಪರಿಸ್ಥಿತಿಯನ್ನು ತಂದೊಡ್ಡಿತು. ಪಾಕಿಸ್ತಾನದ ಪರವಾದ ಮುಸ್ಲಿಂ ವೋಟುಗಳನ್ನು ಭಾರತದ ಕಡೆಗೆ ಸೆಳೆಯಲು ಅವರು ಮಾಡುತ್ತಿದ್ದ ಪ್ರಯತ್ನಗಳಿಗೆ ಮಹಾರಾಜರ ಅಸ್ತಿತ್ವ ಒಂದು ದೊಡ್ಡ ಅಡ್ಡಿಯಾಯಿತು. ಮಹಾರಾಜರು ತಮ್ಮ ಅಧಿಕಾರವನ್ನು ತಮ್ಮ ಮಗನಿಗೆ ಬಿಟ್ಟುಕೊಟ್ಟು ಹೋಗುವಂತೆ ಮಾಡುವುದೇನೂ ಕಷ್ಟವಿರಲಿಲ್ಲ. ಜನಪ್ರಿಯತೆ ಕಳೆದುಕೊಂಡ ಮಹಾರಾಜರುಗಳ ವಿಷಯದಲ್ಲಿ ಸಾಮಾನ್ಯವಾಗಿ ಇಂಥದೇ ವಿಧಾನ ಅನುಸರಿಸಲಾಗುತ್ತಿತ್ತು. ಆದರೆ ಮಹಾರಾಜರ ಅಧಿಕಾರ ಸ್ಥಾನ ಹಾಗೇ ಮುಂದುವರೆದರೆ ಜನತೆಯ ಸರ್ಕಾರದ ಪ್ರತಿಷ್ಠೆಗೆ ಕುಂದು. ಪ್ರಜಾತಾಂತ್ರಿಕ ಸರ್ಕಾರಕ್ಕೆ ಅಷ್ಟೆಲ್ಲ ಉತ್ಸಾಹದಿಂದ ಹೋರಾಡಿದ ಜನರ ಕನಸಿಗೆ ಧಕ್ಕೆಯಾಗುತ್ತಿತ್ತು.

"ಫ್ಯೂಡಲ್ ಆಳ್ವಿಕೆಯಿಂದ ಸ್ವಾತಂತ್ರ್ಯ ಪಡೆದ ಘೋಷಣೆಯನ್ನು ಹೊರಡಿಸುವಾಗ ಸಂವಿಧಾನದ ನಿರ್ಮಾಪಕರು" ನಮ್ಮನ್ನು ಹಾಗೂ ನಮ್ಮ ಮಕ್ಕಳನ್ನು ಶೋಷಣೆ, ಬಡತನ, ಅಪಮಾನ ಮತ್ತು ಅಂಧಶ್ರದ್ಧೆಗಳಿಂದ, ಮಧ್ಯಕಾಲೀನ ಅಂಧಕಾರ ಹಾಗೂ ಅಜ್ಞಾನಗಳ ಪಾತಾಳಕೂಪದಿಂದ ಮೇಲೆತ್ತಿ ಸ್ವಾತಂತ್ರ್ಯ, ವಿಜ್ಞಾನ ಹಾಗೂ ಪ್ರಾಮಾಣಿಕ ದುಡಿಮೆಯ ಆಳ್ವಿಕೆ ಇರುವಂಥ, ಸೂರ್ಯನ ಬೆಳಕು ತುಂಬಿದ ಸಮೃದ್ಧ ನಾಡಿನ ಕಡೆಗೆ ಒಯ್ಯುವುದು. ನಮ್ಮ ದೇಶವನ್ನು ಏಷಿಯಾದ ಹಿಮಾವೃತ ಎದೆಯ ಮೇಲೆ ಹೊಳೆಯುವ ರತ್ನದಂತೆ ಮಾಡುವುದು" ಇದು ನಮ್ಮ ಗುರಿ ಎಂದು ವಿವರಿಸಿದರು.

❑

ಅಧ್ಯಾಯ ೧೫

ಕಾಶ್ಮೀರಕ್ಕಾಗಿ ಹೋರಾಟ

ಕಾಶ್ಮೀರದ ರಾಜಧಾನಿಯಲ್ಲಿದ್ದ ಪೀಪಲ್ಸ್ ಪಾರ್ಟಿ ಸರ್ಕಾರವು "ಎಲ್ಲ ಪ್ರಜೆಗಳಿಗೂ ಆತ್ಮಸಾಕ್ಷಿಗೆ ಅನುಗುಣವಾಗಿ ನಡೆದುಕೊಳ್ಳುವ ಸ್ವಾತಂತ್ರ್ಯವನ್ನೂ, ಆರಾಧನೆಯ ಸ್ವಾತಂತ್ರ್ಯವನ್ನೂ ಸಂವಿಧಾನ ಖಾತರಿ ಪಡಿಸುತ್ತದೆ" ಮೊದಲಾದ ವಾಕ್ಯಗಳನ್ನು ಸೇರಿಸಿ ಸಂವಿಧಾನವನ್ನು ಪೂರ್ಣಗೊಳಿಸುವ ಕೆಲಸದಲ್ಲಿ ತೊಡಗಿದ್ದಾಗ ಇತ್ತ ಪಾಕಿಸ್ತಾನದಲ್ಲಿ "ಇಸ್ಲಾಂ ಅಪಾಯದಲ್ಲಿದೆ" ಎಂಬ ಒಂದು ಸಾವಿರ ವರ್ಷದ ಹಿಂದಿನ ಕೂಗು ಮತ್ತೆ ಮೊಳಗಿತ್ತು. ವಾಸ್ತವವಾಗಿ ಮುಸ್ಲಿಂ ಬುಡಕಟ್ಟು ಧಾಳಿಕೋರರು ಕಾಶ್ಮೀರಕ್ಕೆ ಪ್ರವಾಹದಂತೆ ಹರಿದು ಬರತೊಡಗಿದ್ದಾಗ ಅಪಾಯದಲ್ಲಿರುವುದು ಇಸ್ಲಾಂ ಅಲ್ಲ, ಕ್ರಿಶ್ಚಿಯನ್ ಧರ್ಮ ಎಂಬ ಭಾವನೆ ಮೂಡಿಸುವಂತಹ ಘಟನೆಗಳು ನಡೆಯತೊಡಗಿದ್ದವು. ಬಾರಾಮುಲ್ಲಾ ತಲುಪಿದ ಧಾಳಿಕೋರರು ಸೇಂಟ್‌ಜೋಸೆಫ್ಸ್ ಕಾನ್ವೆಂಟಿಗೆ ಮುತ್ತಿಗೆ ಹಾಕಿದರು. ಅಲ್ಲಿನ ಸಂನ್ಯಾಸಿನಿಯರ ಮೇಲೆ ಬರ್ಬರ ರೀತಿಯಲ್ಲಿ ಅತ್ಯಾಚಾರ ನಡೆಸಿದರು. ಈ ಧಾಳಿ ನಡೆದಾಗ ನಾನು ಪಾಕಿಸ್ತಾನದಲ್ಲಿದ್ದೆ. ಗಲಭೆಯ ಸ್ಥಳಕ್ಕೆ ಬರುವುದು ಸುಲಭವಾಗಿರಲಿಲ್ಲ. ಪಾಕಿಸ್ತಾನದ ಅಧಿಕಾರಿಗಳು ನನ್ನನ್ನು ಕಾಶ್ಮೀರಕ್ಕೆ ಕಳಿಸಲು ಸಿದ್ಧವಿರಲಿಲ್ಲ. ಇದಕ್ಕೆ ಅವರು ಕೊಡುತ್ತಿದ್ದ ಕಾರಣಗಳು ಸಮರ್ಪಕವಾಗಿರಲಿಲ್ಲ. ಅಲ್ಲಿ ನೀವು ಫೋಟೋ ತೆಗೆಯುವಂಥದ್ದೇನೂ ಇಲ್ಲ ಎಂದು ಒಮ್ಮೆ ಹೇಳಿದರೆ, ಹೆಂಗಸರು ಅಲ್ಲಿಗೆ ಹೋಗುವುದು ಅಪಾಯ, ಬುಡಕಟ್ಟು ಜನರು ಹೆಂಗಸರನ್ನು ಅಪಹರಿಸುತ್ತಾರೆ ಎಂದು ಇನ್ನೊಮ್ಮೆ ಹೇಳುತ್ತಿದ್ದರು. ಪಾಕಿಸ್ತಾನದ ದಿಕ್ಕಿನಲ್ಲಿದ್ದ ಕೊನೆಯ ನಿಲ್ದಾಣವಾದ ಅಬೋತಾಬಾದ್‌ವರೆಗೆ ನಾನು ಹೋದೆ. ಅಲ್ಲಿ ಧಾಳಿಕೋರರಿಂದ ತಪ್ಪಿಸಿಕೊಂಡು ಬಂದ ಕ್ರೈಸ್ತ ಸಂನ್ಯಾಸಿನಿಯರು ನನಗೆ ಸಿಕ್ಕಿದರು. ಅತ್ಯಾಚಾರ, ದೌರ್ಜನ್ಯ, ಹಿಂಸಾಕೃತ್ಯಗಳ ಕಥೆಗಳನ್ನು ನಿರೂಪಿಸಿದರು. ಈ ಧಾಳಿಕೋರರು ಒಂಬತ್ತು ದಿನಗಳವರೆಗೆ ಕಾನ್ವೆಂಟಿನಲ್ಲಿ ಹಿಂಸಾತಾಂಡವ ನಡೆಸಿದ್ದರು. ಒಂದು ದಿನ ಭಾರತೀಯ ಸೇನೆಯಿಂದ ವಿಮಾನಧಾಳಿ ನಡೆದಾಗ ಭಯಭೀತರಾದ ಧಾಳಿಕೋರರು ಇನ್ನಷ್ಟು ಉದ್ರಿಕ್ತಗೊಂಡು ಅಲ್ಲಿ ಉಳಿದಿದ್ದ ಆರು ಜನ ನರ್ಸ್‌ಗಳನ್ನು ಗುಂಡಿಟ್ಟುಕೊಲ್ಲಲು ಸಾಲಾಗಿ ನಿಲ್ಲಿಸಿದರಂತೆ. ಆದರೆ ಅವರಲ್ಲಿ ಒಬ್ಬ ನರ್ಸ್‌ಳ ಬಾಯಲ್ಲಿದ್ದ ಚಿನ್ನದ ಹಲ್ಲಿನ ದೆಸೆಯಿಂದ ಎಲ್ಲರ ಪ್ರಾಣವೂ ಉಳಿದಿತ್ತು. ಅವಳ ಚಿನ್ನದ ಹಲ್ಲನ್ನು ತಾನು ಪಡೆದುಕೊಳ್ಳಬೇಕು ಎಂದು ಒಬ್ಬ ಸಂಚು ನಡೆಸಿದಾಗ ಅವರವರಲ್ಲೇ ಜಗಳ ಶುರುವಾಯಿತು. ಅಷ್ಟರಲ್ಲಿ ಅಲ್ಲಿಗೆ ಬಂದ ಅವರ ಮುಖ್ಯಸ್ಥ ಸಂನ್ಯಾಸಿನಿಯರನ್ನು ಗುಂಡಿಟ್ಟು ಕೊಲ್ಲುವುದು ನ್ಯಾಯವಲ್ಲ ಎಂದು ತಿಳಿಸಿದ. ಈ ನರ್ಸ್‌ಗಳ ಜೀವ ಉಳಿಯಿತು.

ನಾನು ಲೈಫ್ ಪತ್ರಿಕೆಗಾಗಿ ಪಾಕಿಸ್ತಾನದ ಫೋಟೋಗ್ರಾಫಿಕ್ ಸರ್ವೆ ನಡೆಸಿದಾಗ ವಿಚಿತ್ರವಾದ ಅನುಭವವಾಯಿತು. ನಾನು ಅಧಿಕಾರಿಗಳ ಬೆಂಗಾವಲಿನಲ್ಲಿ ಹೋಗುತ್ತಿದ್ದಾಗ ಅವರು ತೋರಿಸುತ್ತಿದ್ದ ಸ್ಥಳಗಳಲ್ಲಿ ನನಗೆ ಬೇಕಾದ್ದೇನೂ ಕಾಣುತ್ತಿರಲಿಲ್ಲ. ಕಾಶ್ಮೀರದ ಗಡಿಗೆ ಹೋಗುವ ಸುಂದರವಾದ ಆದರೆ ನಿರ್ಜನವಾದ ರಸ್ತೆಗಳಲ್ಲಿ ನನ್ನನ್ನು ಅವರು ಕರೆದುಕೊಂಡು ಹೋಗುತ್ತಿದ್ದರು. ಇಲ್ಲವೇ ಸುಂದರ ಪರ್ವತ ದೃಶ್ಯಾವಳಿಗಳನ್ನು ತೋರಿಸುತ್ತಿದ್ದರು. ಅಂಥವಕ್ಕೆ Picutre postcard ಮೌಲ್ಯವಿತ್ತೇ ಹೊರತು ಸುದ್ದಿಯ ಮೌಲ್ಯ ಇರುತ್ತಿರಲಿಲ್ಲ. ಆದರೆ ಅವಕಾಶ ಸಿಕ್ಕಾಗಲೆಲ್ಲ ನಾನು ಅಧಿಕಾರಿಗಳ ಬೆಂಗಾವಲಿಲ್ಲದೆ ಇನ್ನೊಂದು ರಸ್ತೆಯಲ್ಲಿ ಹೋಗಿ ಬಿಡುತ್ತಿದ್ದೆ. ಅಲ್ಲಿ ನನಗೆ ಬೇಕಾದ ವಸ್ತು ಸಾಕಷ್ಟು ಸಿಗುತ್ತಿತ್ತು. ಪಿಂಡಿಯಿಂದ ಕಾಶ್ಮೀರಕ್ಕೆ ಹೋಗುವ ಹೆದ್ದಾರಿಯಲ್ಲಿ ಜೋರಾಗಿ ಘೋಷಣೆಗಳನ್ನು ಕೂಗುತ್ತ ಹೋಗುತ್ತಿದ್ದ ಸಾವಿರಾರು ಪಠಾಣರ ಗುಂಪನ್ನು ನೋಡಿದೆ. ಅವರು ರಸ್ತೆಯಲ್ಲಿ ಒಂದು ಕಡೆ ರಟ್ಟಿನಿಂದ ಒಂದು ದೊಡ್ಡ ವಿಜಯದ ಹೆಬ್ಬಾಗಿಲನ್ನು ನಿರ್ಮಿಸಿದ್ದರು. ಅದಕ್ಕೆ ತೋರಣ, ಹೂವಿನ ಹಾರಗಳ ಅಲಂಕಾರ ಮಾಡಿದ್ದರು. ಮುಸ್ಲಿಂಲೀಗಿನ ಹಸಿರು ಬಣ್ಣದ ಬಾವುಟಗಳನ್ನು ಉತ್ಸಾಹದಿಂದ ಬೀಸುತ್ತಿದ್ದರು. ಅವರು ತಮ್ಮ ನಾಯಕನಾದ ಮಹಮಂದ್ ಬುಡಕಟ್ಟಿನ ಬಾದ್ ಶಾ ಗುಲ್‌ಗಾಗಿ ಕಾಯುತ್ತಾ ಇದ್ದರು. ಆತ ತನ್ನೊಂದಿಗೆ ಒಂದು ಸಾವಿರ ಹೋರಾಟಗಾರರನ್ನು ಟ್ರಕ್‌ಗಳು ಹಾಗೂ ಶಸ್ತ್ರಾಸ್ತ್ರಗಳನ್ನು ತರುವವನಿದ್ದ. ಪಾಕಿಸ್ತಾನದ ಅಧಿಕಾರಿಗಳು ವಿಷಯವನ್ನು ಮುಚ್ಚಿಟ್ಟಂತೆ ಇವರು ವಿಷಯವನ್ನು ಮುಚ್ಚಿಡಲಿಲ್ಲ. ನೀವು ಕಾಶ್ಮೀರಕ್ಕೆ ಹೋಗುತ್ತೀರೇನು ಎಂದು ಕೇಳಿದರೆ "ಖಂಡಿತ ಹೋಗುತ್ತೇವೆ. ನಾವೆಲ್ಲ ಮುಸ್ಲಿಮರು, ಕಾಶ್ಮೀರದಲ್ಲಿರುವ ನಮ್ಮ ಮುಸ್ಲಿಂ ಸೋದರರಿಗೆ ಸಹಾಯ ಮಾಡುವುದು ನಮ್ಮ ಕರ್ತವ್ಯ" ಎನ್ನುತ್ತಿದ್ದರು.

ಇವರು ತಮ್ಮ ಮುಸ್ಲಿಂ ಸೋದರರಿಗೆ ನೀಡುತ್ತಿದ್ದ ಸಹಾಯ ಯಾವ ರೀತಿ ಇರುತ್ತಿತ್ತೆಂದರೆ ಅಲ್ಲಿಗೆ ಹೋದ ಟ್ರಕ್‌ಗಳು ಮತ್ತು ಬಸ್ಸುಗಳು ಎರಡು ದಿನಗಳೊಳಗಾಗಿ ಲೂಟಿ ಮಾಡಿದ ವಸ್ತುಗಳನ್ನೆಲ್ಲ ಹೇರಿಕೊಂಡು ಹಿಂದಿರುಗುತ್ತಿದ್ದವು. ಮತ್ತೆ ಇನ್ನಷ್ಟು ಜನರನ್ನು ತುಂಬಿಕೊಂಡು ಇಂಥ ಸೇವೆಗಾಗಿ ಮತ್ತೆ ಕಾಶ್ಮೀರಕ್ಕೆ ಹೋಗುತ್ತಿದ್ದರು. ಹಿಂದೂ ಸಿಖ್ ಮುಸ್ಲಿಂ ಎಂಬ ಭೇದವಿಲ್ಲದೆ ಕಾಶ್ಮೀರದಲ್ಲಿದ್ದವರಿಗೆ ಇವರಿಂದ ದೊರೆಯುತ್ತಿದ್ದ ಸೇವೆಯ ವೈಖರಿ ಇದು.

ಈ ಬಸ್ಸು ಲಾರಿಗಳು ಎಲ್ಲಿಂದ ಬರುತ್ತವೆ ಎಂಬುದು ನಿಗೂಢವಾಗಿತ್ತು. ಪಿಂಡಿಯಲ್ಲಿ ಈ ಬಗ್ಗೆ ಸ್ವಲ್ಪ ಸಂಶೋಧನೆ ನಡೆಸಿದ ಮೇಲೆ ಇದರ ರಹಸ್ಯ ಗೊತ್ತಾಯಿತು. ಪ್ರತಿಯೊಂದು ಟ್ರಕ್ ಕಂಪನಿಗಳವರು ಹತ್ತೊ ಇಪ್ಪತ್ತೋ ಲಾರಿಗಳನ್ನು ಒದಗಿಸುತ್ತಿದ್ದರು. ಬಹುಶಃ ಕಾಶ್ಮೀರ ದಲ್ಲಿರುವ ಎಷ್ಟು ಮುಸ್ಲಿಮರನ್ನು ರಕ್ಷಿಸಬಹುದು ಎಂಬುದರ ಅಂದಾಜಿನ ಮೇಲೆ ಈ ಕಂಪನಿಗಳವರು ಒದಗಿಸುವ ಲಾರಿಗಳ ಸಂಖ್ಯೆ ನಿರ್ಧಾರವಾಗುತ್ತಿತ್ತು. ಅವರಿಗೆ ಶಸ್ತ್ರಾಸ್ತ್ರಗಳು ಒದಗುವ ಮೂಲ ಇದಕ್ಕಿಂತ ಹೆಚ್ಚು ನಿಗೂಢವಾಗಿತ್ತು. ಬುಡಕಟ್ಟು ಜನರು ಶಸ್ತ್ರಾಸ್ತ್ರಗಳನ್ನು ತಯಾರಿಸುತ್ತಿದ್ದರು. ಬೆಟ್ಟಗುಡ್ಡ ಪ್ರದೇಶದಲ್ಲಿ ಅಲ್ಲಲ್ಲಿ ಅವರ ಚಿಕ್ಕಚಿಕ್ಕ ಕಾರ್ಖಾನೆಗಳಿದ್ದವು. ಅಲ್ಲಿ ಇಂಗ್ಲಿಷರ ರೈಫಲ್ ಅಥವಾ ಪಿಸ್ತೂಲಿನ ಪ್ರತಿರೂಪಗಳು ತಯಾರಾಗುತ್ತಿದ್ದವು. ಅಫ್ರಿದಿ

ಬುಡಕಟ್ಟಿಗೆ ಸೇರಿದ ಇಂಥ ಒಂದು ದೊಡ್ಡ ಅಸ್ತ್ರ ಕಾರ್ಖಾನೆಯ ಫೋಟೋ ತೆಗೆದೆ. ಅದು ಕಲ್ಲಿನಿಂದ ಆವೃತವಾದ ಕೊಟ್ಟಿಗೆಯಂಥ ಕಟ್ಟಡ. ಅಲ್ಲಿ ಕೆಲಸ ಮಾಡುತ್ತಿದ್ದವರು ಐದು ಜನ. ಒಂದು ರೈಫಲ್ ತಯಾರಿಸಲು ಒಬ್ಬ ವ್ಯಕ್ತಿಗೆ ಒಂದು ತಿಂಗಳು ಬೇಕಾಗುತ್ತಿತ್ತು. ಹೀಗಾಗಿ ವಾಯುವ್ಯ ಗಡಿ ಉದ್ದಕ್ಕೂ ಇರುವ ಎಲ್ಲ ಇಂಥ ಕಾರ್ಯಾಗಾರಗಳಿಂದ ತಯಾರಾದ ಅಸ್ತ್ರಗಳನ್ನು ಲೆಕ್ಕಕ್ಕೆ ತೆಗೆದುಕೊಂಡರೂ ಕಾಶ್ಮೀರದ ಮೇಲೆ ಧಾಳಿ ಮಾಡುತ್ತಿದ್ದ ಬುಡಕಟ್ಟು ಜನರು ತರುತ್ತಿದ್ದ ಸಲಕರಣೆಗಳ ಒಂದಂಶದಷ್ಟು ಆಗುತ್ತಿರಲಿಲ್ಲ. ಧಾಳಿಕೋರರ ಬಳಿ ಇದ್ದ ಸಣ್ಣ ಫಿರಂಗಿಗಳು, ಇತರ ಭಾರೀ ಆಧುನಿಕ ಅಸ್ತ್ರಗಳು ಹಾಗೂ ಎರಡು ವಿಮಾನಗಳು ಖಂಡಿತ ಇವರ ಪುಟ್ಟ ಕಾರ್ಯಾಗಾರಗಳಲ್ಲಿ ತಯಾರಾಗಿರಲಿಲ್ಲ. ಇದರ ಒಂದು ಮೂಲವನ್ನು ಕಂಡು ಹಿಡಿಯುವುದು ಸುಲಭವಾಗಿತ್ತು. ಅದಕ್ಕೆ ಬೆಳಿಗ್ಗೆ ಸ್ವಲ್ಪ ಬೇಗ ಎದ್ದು ಹೊರಟರೆ ಸಾಕಿತ್ತು. ಗಡಿ ಪ್ರದೇಶಕ್ಕೆ ಸಮೀಪವಿದ್ದ ಪಾಕಿಸ್ತಾನದ ಊರುಗಳಲ್ಲಿ ಬೆಳಕು ಮೂಡುವುದಕ್ಕೆ ಮೊದಲೇ ಮುಸ್ಲಿಂಲೀಗ್‌ನ ಪ್ರಧಾನ ಕಛೇರಿಗಳ ಮುಂಬಾಗಿಲಿನಲ್ಲೆ ಬುಡಕಟ್ಟು ಜನಕ್ಕೆ ಶಸ್ತ್ರಾಸ್ತ್ರಗಳನ್ನು ಕೊಡಲಾಗುತ್ತಿತ್ತು. ಹೀಗಾಗಿ ಪಾಕಿಸ್ತಾನ ಸರ್ಕಾರ ನೇರವಾಗಿ ಶಸ್ತ್ರಾಸ್ತ್ರಗಳನ್ನು ಒದಗಿಸುತ್ತದೆ' ಎಂಬ ಅಪವಾದದಿಂದ ಪಾರಾಗಬಹುದಿತ್ತು. ಆದರೇನು ಪಾಕಿಸ್ತಾನವು ಏಕೈಕ ರಾಜಕೀಯ ಪಕ್ಷವಿದ್ದ ದೇಶವಾಗಿದ್ದು ಮುಸ್ಲಿಂ ಲೀಗೇ ಈ ಏಕೈಕ ಪಕ್ಷ ಎಂಬುದನ್ನು ಮರೆಯುವಂತಿರಲಿಲ್ಲ.

ಇದೇ ಹೋರಾಟ ಸಂದರ್ಭದಲ್ಲಿ 'ಅಜಾದ್ ಕಾಶ್ಮೀರ್' ಎಂಬ ಹೋರಾಟಪಡೆಯೂ ಹುಟ್ಟಿಕೊಂಡಿತ್ತು. ಅದರ ನೇತೃತ್ವ ವಹಿಸಿದವನು ಒಬ್ಬ ತರುಣ ವಕೀಲ. ಆತನ ಹೆಸರು ಸರ್ದಾರ್ ಇಬ್ರಾಹಿಂ. ಆತನ ಪಡೆಯು ಆಕ್ರಮಣಕಾರರ ಪಡೆಗಳೊಂದಿಗೇ ಮುನ್ನುಗ್ಗುತ್ತಿತ್ತು. ನಮಗೆ ಅಚಲವಿಶ್ವಾಸವಿದೆ, ಈ ವಿಶ್ವಾಸವೇ ನಮಗೆ ಜಯ ತಂದುಕೊಡುತ್ತದೆ ಎನ್ನುತ್ತಿದ್ದ ಆತ.

ಕಾಶ್ಮೀರವು ಪಾಕಿಸ್ತಾನಕ್ಕೆ ಸೇರಲು ಬೆಂಬಲಿಸುವುದು ಈ ಚಳುವಳಿಯ ಗುರಿಯಾಗಿತ್ತು. ಇದಕ್ಕೆ ಮುಂಚಿನ ದಿನಗಳಲ್ಲಿ ಆಜಾದ್ ಕಾಶ್ಮೀರ್ ಚಳುವಳಿಯ ಅನುಯಾಯಿಗಳು ಅಥವಾ ಅದರಲ್ಲಿದ್ದ ತರುಣರು ಮತ್ತು ವಿದ್ಯಾವಂತರೂ ಆಗಿದ್ದವರು ಪೀಪಲ್ಸ್ ಪಾರ್ಟಿ ಹಾಗೂ ಶೇಖ್ ಅಬ್ದುಲ್ಲಾ ಅವರೊಂದಿಗೆ ಕೆಲಸ ಮಾಡಿದ್ದಿರಬಹುದು. ಅಜಾದ್ ಕಾಶ್ಮೀರ ಚಳುವಳಿ ಹುಟ್ಟಿಕೊಂಡ ಪೂಂಚ್ ಎಂಬ ಹಳ್ಳಿಯಲ್ಲಿ ಪ್ರಜಾಸತ್ತಾತ್ಮಕ ಅಂಶಗಳಿದ್ದವು. ಶ್ರೀನಗರದಲ್ಲಿ ಸ್ಟೇಟ್ ಪೀಪಲ್ಸ್ ಪಾರ್ಟಿಯನ್ನು ರೂಪಿಸಿದ ಪ್ರಜೆಗಳ ಹಾಗೇ ಇಲ್ಲಿನ ಜನರೂ ಸಹ ಮಹಾರಾಜ ಹರಿಸಿಂಗ್‌ನ ಕೈಕೆಳಗೆ ನರಳಿದವರೇ ಆಗಿದ್ದರು. ಅಬ್ದುಲ್ಲಾರ ಅನುಯಾಯಿಗಳ ಹಾಗೇ ಇವರೂ ಕೂಡ ರಾಜರ ಆಳ್ವಿಕೆಯನ್ನು ತೀವ್ರವಾಗಿ ವಿರೋಧಿಸುತ್ತಿದ್ದರು. ಆದರೆ ಅವರ ಇಸ್ಲಾಮೀ ಪೂರ್ವಾಗ್ರಹ ಇದೆಲ್ಲವನ್ನೂ ಧೂಳೀಪಟ ಮಾಡಿತು. ಹಿಂದೂಗಳೊಂದಿಗೆ ಸಹಕರಿಸುತ್ತಿರುವ ಶೇಖ್‌ಅಬ್ದುಲ್ಲಾ ಈ ಜನಗಳ ಪಾಲಿಗೆ 'ದ್ರೋಹಿ'ಯಾದರು. ಹಿಂದೂ ಮೂಸ್ಲಿಮರ ಪರಸ್ಪರ ಸಹಿಷ್ಣುತೆಗಾಗಿ ಶೇಖ್ ಅವರು ಕರೆಕೊಟ್ಟರೆ ಅದನ್ನು ಇವರು 'ಮೊಸಳೆ

ಕಣ್ಣೀರು' ಎಂದು ವರ್ಣಿಸುತ್ತಿದ್ದರು. ಅಜಾದ್ ಕಾಶ್ಮೀರ ಸರ್ಕಾರದ ರಚನೆಯನ್ನು ಪಾಕಿಸ್ತಾನದಲ್ಲಿ ಎಷ್ಟೊಂದು ಆದರದಿಂದ ಸ್ವಾಗತಿಸಲಾಯಿತೆಂದರೆ ಅದನ್ನು ಒಂದು ಕೈಗೊಂಬೆ ಸರ್ಕಾರವಾಗಿ ರೂಪಿಸಿರಬಹುದು ಎಂಬ ಅನುಮಾನ ಬರದಿರಲು ಸಾಧ್ಯವೇ ಇರಲಿಲ್ಲ. ಪಾಕಿಸ್ತಾನದ ರಾಜಧಾನಿಯಿಂದ ಪ್ರತಿ ಬುಧವಾರ ಬೆಳಿಗ್ಗೆ ಔಷಧಿಗಳು ಹಾಗೂ ಸ್ವಯಂಸೇವಾ ಕಾರ್ಯಕರ್ತರು ಗಳನ್ನು ತುಂಬಿಕೊಂಡು ಒಂದು ರೈಲುಗಾಡಿ ಕಾಶ್ಮೀರದ ಗಡಿಗೆ ಎಬರುತ್ತಿತ್ತು. ಹೋರಾಟದ ಸಮಯದಲ್ಲಿ ಭಾರತೀಯ ಸೇನೆಯು ಕೆಲವು ಅಜಾದ್ ಕಾಶ್ಮೀರ ಸೈನಿಕರನ್ನು ಯುದ್ಧ ಖೈದಿಗಳಾಗಿ ಸೆರೆ ಹಿಡಿದುಕೊಂಡು ಬಂದಾಗ ಅವರ ಪಾಕೆಟ್ಟುಗಳಲ್ಲಿ ಪಾಕಿಸ್ತಾನ ಸೇನೆಯ ವೇತನ ಪಾವತಿ ಚೀಟಿಗಳಿದ್ದುದು ಕಂಡುಬಂದಾಗ ಎಲ್ಲ ಬಹಿರಂಗವಾಗಿತ್ತು.

ಪಂಡಿತ್ ನೆಹರೂ ಅವರು ಭಾರತದ ಪರವಾಗಿ ಪದೇಪದೇ ಪ್ರತಿಭಟನೆ ವ್ಯಕ್ತಪಡಿಸಿದರು. ಪಾಕಿಸ್ತಾನವು ಆಕ್ರಮಣಕ್ಕೆ ಸಹಾಯ ಒತ್ತಾಸೆ ನೀಡುವುದು ಸರಿಯಲ್ಲ. ಸಮವಸ್ತ್ರವಿಲ್ಲದಿದ್ದರೂ ಪಾಕಿಸ್ತಾನ ಸೈನಿಕರನ್ನು ಅಧಿಕಾರಿಗಳನ್ನು ಬಳಸುವುದು ಆಕ್ರಮಣ ಮಾಡಿದಂತೆ ಆಗುತ್ತದೆ ಎಂದು ಪ್ರತಿಭಟಿಸಿದರು. ಗಾಂಧಿಯವರೂ ಸಹ ನೆಹರೂ ಮಾತಿಗೆ ದನಿಗೂಡಿಸಿ ಧಾಳಿಕೋರರ ವಿರುದ್ಧ ಕಾಶ್ಮೀರದ ಅಸಹಾಯಕ ಜನತೆಯ ರಕ್ಷಣೆಗಾಗಿ ಕಾಶ್ಮೀರದಲ್ಲಿ ಭಾರತೀಯ ಪಡೆಗಳನ್ನು ಬಳಸಬಹುದು ಎಂದು ಒಪ್ಪಿಗೆ ನೀಡಿದಾಗ ಪಾಕಿಸ್ತಾನದ ಪತ್ರಿಕಾ ಪ್ರಪಂಚವು ಮಹಾತ್ಮರು ತಮ್ಮ ಅಹಿಂಸೆಯ ಸೋಗನ್ನು ತೆಗೆದುಬಿಟ್ಟಿದ್ದಾರೆ. ಗಾಂಧಿ ತಮಗೆ ಬೇಕೆನಿಸಿದಾಗ ಹಿಂಸೆಯನ್ನು ಉತ್ತೇಜಿಸುತ್ತಾರೆ, ಅವರು ಎಂದಿಗೂ ಮುಸ್ಲಿಮರ ಸ್ನೇಹಿತರಲ್ಲ ಎಂದು ಕೂಗಾಟ ಎಬ್ಬಿಸಿತು.

ನಾನು ಕಾಶ್ಮೀರದ ಕಣಿವೆಯಲ್ಲಿ ಯುದ್ಧದಿಂದ ಜರ್ಝರಿತವಾದ ಪ್ರದೇಶಗಳಿಗೆ ಅನಂತರ ಭೇಟಿ ನೀಡಿದ್ದಾಗ ಗೊತ್ತಾದ ಅಂಶವೇನೆಂದರೆ ಪಾಕಿಸ್ತಾನದವರು ತಮ್ಮನ್ನು ವಿಮೋಚಿಸುವುದು ಕಾಶ್ಮೀರದ ಮುಸ್ಲಿಮರಿಗೆ ಬೇಕಿರಲಿಲ್ಲ. ಜನರು ಬಾರಾಮುಲ್ಲಾ ಪ್ರದೇಶವನ್ನು ಬುಡಕಟ್ಟು ಜನರ ಕೈಯಿಂದ ಪುನಃ ವಶಪಡಿಸಿಕೊಂಡ ನಂತರ ನಾನು ಅಲ್ಲಿಗೆ ಹೋದೆ. ಜೀಲಂ ನದಿ ಹರಿಯುತ್ತಿದ್ದ ಆ ಸುಂದರವಾದ ಊರು ಯುದ್ಧದಿಂದ ಹಾಳಾಗಿತ್ತು. ಎಲ್ಲಿ ನೋಡಿದರೂ ಬೆಂಕಿಯಲ್ಲಿ ಸುಟ್ಟು ಕಪ್ಪಾದ ಅವಶೇಷಗಳ ರಾಶಿ.

ಬಾರಾಮುಲ್ಲಾದ ತರುಣ ವಯಸ್ಸಿನ ಒಬ್ಬ ಮುಸ್ಲಿಂ ವ್ಯಾಪಾರಿ ಕಾನ್ವೆಂಟಿನಲ್ಲಿ ನಡೆದ ಗಲಭೆಯಲ್ಲಿ ಅಲ್ಲಿನವರನ್ನು ರಕ್ಷಿಸಲು ಹೋಗಿ ತನ್ನ ಪ್ರಾಣವನ್ನೇ ಬಲಿಗೊಟ್ಟಿದ್ದ. ಕಾಶ್ಮೀರಿಗಳು ಆತನನ್ನು ಈಗ ಮಹಾಸಂತನೆಂದು ಭಾವಿಸಿ ಆರಾಧಿಸತೊಡಗಿದ್ದರು.

ಹೀಗೆ ಹಿಂದೂ ಮುಸ್ಲಿಂ ಏಕತೆಯನ್ನು ಪ್ರತಿಪಾದಿಸುತ್ತಾ ಹೋರಾಡಿ ಪ್ರಾಣತೆತ್ತ ಮತ್ತೊಬ್ಬ ನಾಯಕ ಮೀರ್‌ಮಖಬೂಲ್ ಶರ್ವಾನಿ. ಈತ ಶೇಖ್ ಅಬ್ದುಲ್ಲಾರ ಜೊತೆಯ ಕಾಯಕರ್ತ. ಜನ ತಮ್ಮ ಹಕ್ಕುಗಳಿಗಾಗಿ ಹೋರಾಟ ಮಾಡುವಾಗ ಧಾರ್ಮಿಕ ಏಕತೆಯನ್ನು ಕಾಪಾಡಿಕೊಳ್ಳುವುದೂ ಅಷ್ಟೇ ಅಗತ್ಯವೆಂದು ಅವರು ಪ್ರತಿಪಾದಿಸುತ್ತಿದ್ದರು. ಊರಿನ ಜನ ಶರ್ವಾನಿಯವರ ಬಗ್ಗೆ ಹೇಳುವ ಕಥೆಗಳನ್ನು ಕೇಳಿದಾಗ ಆತ ರಾಬಿನ್‌ಹುಡ್ ರೀತಿಯ ವ್ಯಕ್ತಿಯಾಗಿದ್ದಿರಬೇಕು ಅನ್ನಿಸಿತು. ಅತ್ಯಧಿಕ ತೆರಿಗೆಯನ್ನು ತೆರಲಾರದ ರೈತರ ಪರವಾಗಿ

ಅವರು ಹೋರಾಡಿದ್ದರು. ಪೊಲೀಸರು ಯಾರೋ ಒಬ್ಬ ಅಮಾಯಕನನ್ನು ಚಚ್ಚುತ್ತಿದ್ದಾಗ ಇವರು ಪೊಲೀಸರ ಮೇಲೆ ಕೈಮಾಡಿದ್ದರು. ದಬ್ಬಾಳಿಕೆಗಳ ವಿರುದ್ಧ ಪ್ರತಿಭಟಿಸಬೇಕು ಎಂದು ಜನರಿಗೆ ತಿಳುವಳಿಕೆ ಹೇಳುತ್ತಿದ್ದರು. ಬುಡಕಟ್ಟು ಆಕ್ರಮಣಕಾರರು ಕಾಶ್ಮೀರದ ಮೇಲೆ ಧಾಳಿ ನಡೆಸಿ ಅಲ್ಲಿನ ಗ್ರಾಮಾಂತರ ಪ್ರದೇಶಗಳಲ್ಲಿ ಭಯೋತ್ಪಾದನೆ ಮಾಡುತ್ತಿದ್ದಾಗ ಆ ಕಣಿವೆಯ ಪ್ರತಿಯೊಂದು ಅಂಗುಲವೂ ಚಿರಪರಿಚಿತವಾಗಿದ್ದ ಶೆರ್ವಾನಿಯವರು ಹಿನ್ನೆಲೆಯಲ್ಲಿ ಇದ್ದುಕೊಂಡು ಕೆಲಸ ಮಾಡಿದರು. ಆಕ್ರಮಣಕ್ಕೊಳಗಾದ ಗ್ರಾಮೀಣ ಜನರಿಗೆ ಧೈರ್ಯ ತುಂಬಿದರು. ನಾವು ಯಾವ ಮತಕ್ಕೇ ಸೇರಿರಲಿ ಎಲ್ಲರೂ ಒಗ್ಗಟ್ಟಾಗಿ ಹೋರಾಡಬೇಕು. ಭಾರತದ ಸೇನೆ ನೆರವಿಗೆ ಬರುತ್ತದೆ ಎಂದು ಭರವಸೆ ನೀಡುತ್ತಿದ್ದರು. ಬುಡಕಟ್ಟು ಧಾಳಿಕೋರರಿಗೆ ತಪ್ಪು ಮಾಹಿತಿ ಸಿಗುವಂತೆ ಮಾಡಿ ಮೂರು ಸಲ ಅವರು ಭಾರತೀಯ ಸೇನೆಯ ಕೈಗೆ ಸಿಕ್ಕಿ ಬೀಳುವಂತೆ ಮಾಡಿದರು. ಆದರೆ ನಾಲ್ಕನೇ ಸಲ ಅವರ ಯೋಜನೆ ವಿಫಲವಾಗಿ ಅವರೇ ಆಕ್ರಮಣಕಾರರಿಗೆ ಸೆರೆಯಾದರು. ಆಕ್ರಮಣಕಾರರು ಶೆರ್ವಾನಿಯವರನ್ನು ಬಾರಾಮುಲ್ಲಾದ ಚೌಕದ ಬಳಿ ಇದ್ದ ಒಂದು ಚಿಕ್ಕ ಸೇಬಿನ ಅಂಗಡಿಯ ಜಗುಲಿಯ ಮೇಲೆ ನಿಲ್ಲಿಸಿದರು. ಭಯದಿಂದ ನಡುಗುತ್ತಿದ್ದ ಊರಿನ ಜನರನ್ನು ರೈಫಲ್ಲುಗಳ ತುದಿಗಳಿಂದ ತಿವಿಯುತ್ತ ಅಲ್ಲಿಗೆ ಕರೆತಂದು ಶೇರ್ವಾನಿಯವರ ಎದುರು ನಿಲ್ಲಿಸಿದರು. ಜನತೆಯ ಮೇಲೆ ಶೆರ್ವಾನಿ ಬಹಳ ಪ್ರಭಾವ ಬೀರಿದ್ದ ವ್ಯಕ್ತಿ ಎಂದು ಗೊತ್ತಿದ್ದರಿಂದ ಪಾಕಿಸ್ತಾನದೊಂದಿಗೆ ಸೇರಿಕೊಳ್ಳುವುದೇ ಮುಸ್ಲಿಮರಿಗೆ ಒಳ್ಳೆಯ ಪರಿಹಾರ ಎಂದು ಸಾರ್ವಜನಿಕವಾಗಿ ಘೋಷಿಸಬೇಕೆಂದು ಶೆರ್ವಾನಿಯವರಿಗೆ ಹೇಳಿದರು. ಅದಕ್ಕೆ ಶೆರ್ವಾನಿ ನಿರಾಕರಿಸಿದಾಗ ಅವರನ್ನು ಅಂಗಡಿಯ ಕಂಬಕ್ಕೆ ಹಗ್ಗದಿಂದ ಬಿಗಿದು ಕಟ್ಟಿ ಅವರ ಕೈಗಳನ್ನು ಶಿಲುಬೆಯ ಮೇಲಿರುವ ಕ್ರಿಸ್ತನ ಕೈಗಳಂತೆ ಚಾಚಿಸಿದರು. 'ಪಾಕಿಸ್ತಾನ್ ಜಿಂದಾಬಾದ್', 'ಶೇರ್-ಇ-ಕಾಶ್ಮೀರ್ ಮುರ್ದಾಬಾದ್' ಎಂದು ಕೂಗಬೇಕೆಂದು ತಿಳಿಸಿದರು. ಅದಾದ ನಂತರ ಈ ಕಾಡು ಜನ ಮಾಡಿದ್ದು ನಿಜಕ್ಕೂ ವಿಚಿತ್ರವಾಗಿದೆ. ಅಲ್ಲಿನ ಬೆಟ್ಟದ ಮೇಲಿದ್ದ ಸೆಂಟ್ ಜೋಸೆಫ್ಸ್ ಚಾಪೆಲ್‌ನಿಂದ ಅವರಿಗೆ ಇಂಥ ವಿಚಿತ್ರ ಸ್ಫೂರ್ತಿ ಸಿಕ್ಕಿತೇನೋ. ಅವರು ಶೆರ್ವಾನಿಯ ಅಂಗೈಗಳ ಮೇಲೆ ಮೊಳೆಗಳನ್ನು ಬಡಿದರು. ಅವರ ಹಣೆಯ ಮೇಲೆ ಒಂದು ತಗಡಿನ ತುಂಡನ್ನು ಅಂಟಿಸಿ ಅದರ ಮೇಲೆ "ದ್ರೋಹಿಯಾದವನಿಗೆ ಮರಣವೇ ಶಿಕ್ಷೆ" ಎಂದು ಬರೆದರು. ಆಗ ಶೆರ್ವಾನಿಯವರು "ಹಿಂದೂ ಮುಸ್ಲಿಮರ ಏಕತೆಗೆ ಜಯವಾಗಲಿ" ಎಂದು ಜೋರಾಗಿ ಕೂಗಿದರು. ೧೪ ಜನ ಆಕ್ರಮಣಕಾರರು ಅವರ ದೇಹದ ಮೇಲೆ ಗುಂಡಿನ ಮಳೆ ಕರೆದರು. ಮಾರನೇ ದಿನ ಬಾರಾಮುಲ್ಲಾವನ್ನು ಜನ ಪುನಃ ವಶಪಡಿಸಿಕೊಂಡರು. ಶೇರ್ವಾನಿಯವರ ದೇಹವನ್ನು ಗೌರವದಿಂದ ಕೆಳಗಿಳಿಸಿದರು. ಮಸೀದಿಯ ಕಾಂಪೊಂಡಿನಲ್ಲಿ ಅವರ ಶವವನ್ನು ಹೂಳಿದರು. ನಾನು ಬಾರಾಮುಲ್ಲಾಗೆ ಹೋದಾಗ ನನ್ನನ್ನು ಆ ಮಸೀದಿಗೆ ಕರೆದುಕೊಂಡು ಹೋದರು. ಶೆರ್ವಾನಿಯವರ ತಂದೆ ಮತ್ತು ತಮ್ಮಂದಿರು ಮಿರ್ ಮಕ್ಬೂಲ್ ಶೆರ್ವಾನಿಯವರ ಫೋಟೋವನ್ನು ನನಗೆ ತೋರಿಸಿದರು. ಕಾಶ್ಮೀರದ ಜನ ತಮ್ಮ ನೆಚ್ಚಿನ ನಾಯಕನನ್ನು ಮೀರ್ ಮುಜಾಹಿದ್ ಶೆರ್ವಾನಿ ಎಂದು ಕರೆಯತೊಡಗಿದ್ದರು. ಮುಜಾಹಿದ್ ಎಂಬ ಪದಕ್ಕೆ ಹುತಾತ್ಮ ಎಂಬುದಕ್ಕಿಂತ ಹೆಚ್ಚಿನ ಅರ್ಥವಿದೆ. ನ್ಯಾಯಪರತೆಗಾಗಿ ಹೋರಾಡಿದವನು ಎಂಬ ಅರ್ಥವನ್ನು ಅದು ಧ್ವನಿಸುತ್ತದೆ.

ನಾನು ಅನಂತರ ಕಾನ್ವೆಂಟಿಗೆ ಹೋದೆ. ಅದು ನಿರ್ಜನವಾಗಿತ್ತು. ಆಕ್ರಮಣಕಾರರ ಧಾಳಿಗೆ ಸಿಕ್ಕಿ ಸಾಕಷ್ಟು ವಿರೂಪಗೊಂಡಿತ್ತು. ಎಲ್ಲೆಲ್ಲಿಯೂ ಕಲ್ಲು ಇಟ್ಟಿಗೆಯ ಚೂರುಗಳು. ಮಾರನೇ ದಿನ ಶ್ರೀನಗರದಿಂದ ವಿದ್ಯಾರ್ಥಿಗಳ ಒಂದು ಗುಂಪು ಅಲ್ಲಿಗೆ ಅದನ್ನು ಸ್ವಚ್ಛಗೊಳಿಸುವುದಕ್ಕಾಗಿಯೇ ಬರುವ ಯೋಜನೆ ಇತ್ತು. ಆ ಗುಂಪಿನಲ್ಲಿ ಹಿಂದೂ ಮುಸ್ಲಿಂ ಸಿಖ್ ವಿದ್ಯಾರ್ಥಿಗಳು ಇರುವಂತೆ ರೂಪಿಸಲಾಗಿತ್ತು. ಮತ್ತು ಅವರಿಗೆ ಬೆಂಗಾವಲಾಗಿ ಬರುತ್ತಿದ್ದ ಹೋಂಗಾರ್ಡ್ಸ್ ಪಡೆಯಲ್ಲಿಯೂ ಎಲ್ಲ ಧರ್ಮಗಳಿಗೆ ಸೇರಿದ ಹಾಗೂ ಮಹಿಳೆಯರನ್ನೂ ಒಳಗೊಂಡ ಕಾರ್ಯಕರ್ತರಿದ್ದರು. ಕ್ರಿಸ್‌ಮಸ್ ಹತ್ತಿರವಾಗುತ್ತಿದ್ದರಿಂದ ಅಷ್ಟರೊಳಗಾಗಿ ಚರ್ಚನ್ನು ಒಂದು ವ್ಯವಸ್ಥೆಗೆ ತರಬೇಕೆಂದು ಉದ್ದೇಶಿಸಲಾಗಿತ್ತು.

ಚಾಪೆಲ್‌ನ ಒಳಗೆ ನಾವು ಹೋದೆವು. ನೆಲದ ಮೇಲೆಲ್ಲಾ ಸ್ತೋತ್ರ ಪುಸ್ತಕಗಳು ಹರಿದುಬಿದ್ದಿದ್ದವು. ಪವಿತ್ರ ವಿಗ್ರಹಗಳ ಒಡೆದ ಚೂರುಗಳು ಚೆಲ್ಲಾಡಿದ್ದವು. ಅಲ್ಟರ್‌ನಲ್ಲಿಯೂ ಕೂಡ ಕಲ್ಲು ಮಣ್ಣಿನ ಚೂರುಗಳು. ನನ್ನ ಜೊತೆಗಿದ್ದ ಬೇಡಿ ಕೆಳಕ್ಕೆ ಬಾಗಿ ವಿಗ್ರಹದ ಒಂದು ಚೂರನ್ನು ಎತ್ತಿಕೊಂಡರು. ಅದು ಜೀಸಸ್‌ನ ಮುರಿದ ತಲೆಯ ಭಾಗ. ಅದರ ಒಂದು ಕಣ್ಣು ಮಾತ್ರ ಉಳಿದಿತ್ತು. "ನೋಡಿ, ಇದು ಎಷ್ಟು ಸುಂದರವಾಗಿದೆ. ಕ್ರಿಸ್ತನ ಕಣ್ಣು ಈ ಜಗತ್ತನ್ನು ಶಾಂತವಾಗಿ ನೋಡುತ್ತಿದೆ. ಎಲ್ಲ ಧರ್ಮಗಳ ಭಾರತೀಯರ ಏಕತೆಯನ್ನು ಸಾಧಿಸುವುದಕ್ಕೆ ಪ್ರಯತ್ನಿಸುತ್ತಿರುವುದರ ಸಂಕೇತವಾಗಿ ಇದನ್ನು ಕಾಶ್ಮೀರದಲ್ಲಿ ಸದಾಕಾಲ ಇರುವಂತೆ ಸಂರಕ್ಷಿಸೋಣ" ಎಂದು ಬೇಡಿ ಹೇಳಿದರು.

❑

ಅಧ್ಯಾಯ ೧೫

ಭಾರತ ಏನು ಮಾಡಬೇಕು

ಹಿಮಕವಿದ ಇಳಿಜಾರುಗಳ ಕಾಶ್ಮೀರದಿಂದ ನಾನು ಪುನಃ ರಾಜಧಾನಿ ದೆಹಲಿಗೆ ಹಿಂದಿರುಗಿದೆ. ಸ್ವಾತಂತ್ರ್ಯವು ಭಾರತದ ಬದುಕಿನಲ್ಲಿ ಯಾವ ರೀತಿಯ ಹೊಸತನ ತರಬಹುದು ಎಂಬುದರ ಸ್ಪಷ್ಟ ಕಲ್ಪನೆ ನನ್ನಲ್ಲಿ ಮೂಡಿತ್ತು. ವಿದೇಶೀ ಆಳ್ವಿಕೆಯಿಂದ ದೊರೆಯುವ ವಿಮೋಚನೆಗಿಂತ ಹೆಚ್ಚಿನ ಪರಿಣಾಮವನ್ನು ನಾನು ಹಿಮಾಲಯ ಪ್ರದೇಶದಲ್ಲಿ ಕಂಡಿದ್ದೆ. ಫ್ಯೂಡಲಿಸಂನ ಕಪಿಮುಷ್ಟಿಯಿಂದ ಬಿಡುಗಡೆ ಹೊಂದಿದ ಜನರ ಬದುಕು ಹೇಗೆ ಅರಳುತ್ತದೆ ಎಂಬುದು ಅಲ್ಲಿ ಗೋಚರಿಸಿತ್ತು.

ಭಾರತದ ಜನ ತೀರಾ ಹಿಂದುಳಿದವರು, ಧಾರ್ಮಿಕ ಮೂಢನಂಬಿಕೆಗಳ ಸಂಕೋಲೆಗಳಲ್ಲಿ ಬಂಧಿಯಾದವರು, ತಮ್ಮನ್ನು ತಾವೇ ಆಳಿಕೊಳ್ಳುವಂಥ ಪ್ರಜಾತಂತ್ರ ವ್ಯವಸ್ಥೆಗೆ ಇವರು ಅರ್ಹರಲ್ಲ ಎಂಬ ನಂಬಿಕೆಯನ್ನು ಪ್ರಜಾಸರ್ಕಾರದ ಸ್ಥಾಪನೆ ಬುಡಮೇಲು ಮಾಡಿತ್ತು. ಅಕ್ಷರಕಲಿಕೆ ತರಗತಿಗಳಿಗೆ ಬರಿಗಾಲಿನಲ್ಲಿ ಹಿಮದ ಮೇಲೆ ನಡೆದು ಹೋಗುತ್ತಿದ್ದ ಚಿಂದಿ ಉಡುಗೆಯ ಪುರುಷರು, ಗ್ರಾಮ ಹಾಗೂ ಜಿಲ್ಲಾ ಸಮಿತಿಗಳಿಗಾಗಿ ಸ್ವತಃ ರೈತರೇ ನಡೆಸಿದ ಚುನಾವಣೆಗಳು, ಎಲ್ಲರೂ ಸಮಾನರು ಎಂಬ ದಿಸೆಯಲ್ಲಿ ನಡೆಯುತ್ತಿದ್ದ ಕಾರ್ಯಕ್ರಮಗಳು.... ಇವೆಲ್ಲವೂ ಭಾರತ ಸಂಪೂರ್ಣವಾಗಿ ಸ್ವತಂತ್ರಗೊಂಡ ನಂತರ ಅಲ್ಲಿ ಮೂಡಬಹುದಾದ ಉತ್ತಮ ಬದುಕಿಗೆ ಸೂಚಕವಾಗಿದ್ದವು.

ಆದರೂ ಕಾಶ್ಮೀರವು ಇನ್ನೂ ಅನೇಕ ಹಿನ್ನಡೆಗಳನ್ನು ಕಾಣಬೇಕಾಯಿತು. ಪಾಕಿಸ್ತಾನ ಮತ್ತು ಇಂಡಿಯಾದ ವಿಭಜನೆಯೆಂದರೆ ಅಂತಿಮವಾಗಿ ಕಾಶ್ಮೀರದ ವಿಭಜನೆಯೂ ಹೌದು. ನಾನು ಈಗಷ್ಟೇ ಭೇಟಿಯಾಗಿ ಬಂದ ಭಾಗ ಭಾರತದಲ್ಲಿ ಉಳಿದರೆ ಇತರ ಭಾಗಗಳು ಪಾಕಿಸ್ತಾನಕ್ಕೆ ಸೇರಿಹೋಗುತ್ತಿದ್ದವು.

ಇದೇನೇ ಇರಲಿ ಜನತೆಯ ಸರ್ಕಾರವು ಪ್ರಜಾಪ್ರಭುತ್ವದತ್ತ ದಾಪುಗಾಲು ಇಟ್ಟಿತ್ತು. ಭಾರತದ ಅತ್ಯಂತ ದುರ್ದಮ ಸಮಸ್ಯೆಯಾಗಿದ್ದ ಭೂಸ್ವಾಮ್ಯದ ದಮನಕಾರಿ ವ್ಯವಸ್ಥೆಯನ್ನು ತಕ್ಷಣವೇ ಪರಿಹರಿಸತೊಡಗಿದ್ದು ಬಹುಮುಖ್ಯ ಸಾಧನೆ ಎನ್ನಬಹುದು. ರೈತನಿಗೆ ತಾನು ಉಳುವ ಭೂಮಿಯನ್ನು ತಾನೇ ಹೊಂದುವ ಅವಕಾಶವನ್ನು ಕಲ್ಪಿಸುವ ಹಾಗೂ ಗೈರು ಹಾಜರಿ (Absentee Ownership) ಮಾಲಿಕತ್ವವನ್ನು ನಿರ್ಮೂಲನ ಮಾಡುವ ಚಳುವಳಿಯನ್ನು ಅವರು ಆರಂಭಿಸಿದ್ದರು... ಭಾರತದ ಬಹುತೇಕ ಭಾಗಗಳಲ್ಲಿ ಈ ಆಶ್ವಾಸನೆ ಇತ್ತಾದರೂ ಅದನ್ನು ಮುಂದೂಡುತ್ತಾ ಬಂದ ನಿದರ್ಶನಗಳೇ ಹೆಚ್ಚಾಗಿದ್ದವು.

ಭೂಸುಧಾರಣೆಯನ್ನು ಕುರಿತಂತೆ ಹೀಗೆ ಎಲ್ಲೆಡೆಯೂ ಕಂಡು ಬರುತ್ತಿದ್ದ ಹಿಂಜರಿಕೆ ಯಾಕೆಂಬುದೇ ಅರ್ಥವಾಗುತ್ತಿರಲಿಲ್ಲ. ಕಾಂಗ್ರೆಸ್ ಪಕ್ಷವು ಬ್ರಿಟಿಷರಿಗೆ ಭಾರತ ಬಿಟ್ಟು ತೊಲಗಿ ಎಂದು ಒತ್ತಾಯ ಮಾಡುತ್ತಿದ್ದ ಸಂದರ್ಭದಲ್ಲಿ ಸರ್ಕಾರದ ಪಕ್ಷವು ಭೂಮಾಲೀಕರ ಹಾಗೂ ರಾಜರ ಬಗೆಗಿನ ವಿರೋಧವನ್ನು ನೇರವಾಗೇ ವ್ಯಕ್ತಪಡಿಸಿತ್ತು. ಜಮೀನ್ದಾರಿ ವ್ಯವಸ್ಥೆಯ ನಿರ್ಮೂಲನವು ಕಾಂಗ್ರೆಸ್ ಚುನಾವಣಾ ಪ್ರಣಾಳಿಕೆಯ ಬಹು ಮುಖ್ಯ ಅಂಶವಾಗಿತ್ತು. ೧೯೪೬ರಲ್ಲಿ ನಾನು ಭಾರತಕ್ಕೆ ಭೇಟಿ ನೀಡಿದ ಮೊದಲವಾರದಲ್ಲಿಯೇ ಒಂದು ಪತ್ರಿಕಾ ಗೋಷ್ಠಿಯಲ್ಲಿ ಭಾಗವಹಿಸಿದ್ದೆ. ಅಲ್ಲಿ ಪಂಡಿತ್ ನೆಹರೂ "ಸ್ವತಂತ್ರ ಭಾರತದಲ್ಲಿ ಜಮೀನ್ದಾರಿ ವ್ಯವಸ್ಥೆಗೆ ಅವಕಾಶವೇ ಇರುವುದಿಲ್ಲ" ಎಂದು ಘೋಷಣೆ ಮಾಡಿದ್ದರು. ರಾಜರುಗಳನ್ನು ಕುರಿತಂತೆ ತಮ್ಮ ನಿಲುವೇನು ಎಂಬುದನ್ನು ನೆಹರೂ ಅಖಿಲ ಭಾರತ ಪ್ರಜಾಪಕ್ಷದ ಅಧ್ಯಕ್ಷರಾಗಿದ್ದಾಗಲೇ ವ್ಯಕ್ತಪಡಿಸಿದ್ದರು. ಆ ದಿನಗಳಲ್ಲಿ ನಿರಂಕುಶಾಧಿಕಾರಿಗಳು ಎಂದು ಕರೆಯಲಾಗುತ್ತಿದ್ದ ರಾಜರನ್ನು ತೆಗೆದು ಹಾಕಿ ಅವರ ಸ್ಥಾನದಲ್ಲಿ ಜನತಂತ್ರದ ಪ್ರಜಾಸರ್ಕಾರಗಳನ್ನು ತರಬೇಕೆಂಬುದೇ ಆ ತಕ್ಷಣದ ಉದ್ದೇಶವಾಗಿತ್ತು.

ಆದರೆ ಈಗ ರಾಜರನ್ನು ವ್ಯಾಖ್ಯಾನಿಸಲು ಹೊಸ ಪದಸಮುಚ್ಚಯಗಳು ಬಳಕೆಯಾಗ ತೊಡಗಿದ್ದವು. ಅವರ "ಸ್ವಾರ್ಥತ್ಯಾಗ" "ಅಪ್ರತಿಮ ದೇಶಭಕ್ತಿ"ಗಳನ್ನು ಪತ್ರಿಕೆಗಳು ಕೊಂಡಾಡುತ್ತಿದ್ದವು. "ಹೊಸಯುಗದ ಉದಯ", "ಆಳ್ವಿಕೆದಾರರ ತ್ಯಾಗ" ಮೊದಲಾದ ಶೀರ್ಷಿಗಳ ಮೂಲಕ "ಜನತೆಗೆ ಸ್ವಇಚ್ಛಾ ಪ್ರೇರಿತ ಅಧಿಕಾರ ಹಸ್ತಾಂತರ" ಮಾಡಿದುದಕ್ಕಾಗಿ ಅವರಿಗೆ ಗೌರವ ವ್ಯಕ್ತಪಡಿಸಲಾಗುತ್ತಿತ್ತು.

ಹೀಗೆ 'ಸ್ವಪ್ರೇರಿತ ಅಧಿಕಾರ ಹಸ್ತಾಂತರ'ದ ನಂತರ ಪ್ರಾಂತಗಳ ರಾಜರು ಅಥವಾ ವಿಲೀನಗೊಂಡ ರಾಜ್ಯಗಳ ಸಮೂಹದ ಆಡಳಿತ ನಿರ್ವಹಣೆಯ ರಾಜಪ್ರಮುಖರು ಕೆಲವು ಅತಿಮುಖ್ಯವಾದ ವಿಷಯಗಳಲ್ಲಿ ಹೊಂದಿದ್ದ ಹಿಡಿತ ಅಚ್ಚರಿಗೊಳಿಸುವಂಥದ್ದು. ವೃತ್ತ ಪತ್ರಿಕೆಗಳನ್ನು ಸೂಕ್ಷ್ಮವಾಗಿ ಓದಿದಾಗ ಮಾತ್ರ ಇದು ತಿಳಿಯುತ್ತಿತ್ತು. ಉದಾಹರಣೆಗೆ ರಾಜರು ಈ ಹಿಂದೆ ಮಾಡಿದ ಅಥವಾ ಮಾಡದೆ ಹೋದ ಯಾವುದೇ ವಿಷಯದ ಬಗ್ಗೆ ಅವರ ಮೇಲೆ ಕಾನೂನು ಕ್ರಮವನ್ನಾಗಲೀ ವಿಚಾರಣೆಯನ್ನಾಗಲೀ ನಡೆಸಬಾರದು ಎಂಬ ಪರಂಪರಾಗತ ಹಕ್ಕು ಹಾಗೇ ಉಳಿದಿತ್ತು. ವಿವಿಧ ರಾಜ ಸಂಸ್ಥಾನಗಳ ವಿಲೀನೀಕರಣದಿಂದ ಒಟ್ಟುಗೂಡಿದ ಸಶಸ್ತ್ರ ಪಡೆಗಳು ರಾಜಪ್ರಮುಖರ ನಿಯಂತ್ರಣದಲ್ಲಿಯೇ ಉಳಿದಿದ್ದವು. ಪ್ರಜಾ ಸರ್ಕಾರಕ್ಕಾಗಿ ದಿನೇದಿನೇ ಬಲವಾಗುತ್ತಾ ನಡೆದಿದ್ದ ಚಳುವಳಿಗಳಿಂದ ತತ್ತರಿಸುತ್ತಿದ್ದ ಚಿಕ್ಕಪುಟ್ಟ ಸಂಸ್ಥಾನಗಳ ರಾಜರು ಸಣ್ಣ ರಾಜ್ಯಗಳ ವಿಲೀನೀಕರಣದಲ್ಲಿ ಸೇರಿಕೊಳ್ಳುವ 'ಸ್ವಪ್ರೇರಿತ ತ್ಯಾಗ'ದ ಅಡಿಯಲ್ಲಿ ಬಚಾವಾಗಿದ್ದರು.

ಹೀಗೆ ರಾಜರಿಗೆ ದೊರೆತ ಈ ಹೊಸ ಸೌಲಭ್ಯಗಳಿಗೂ ಮತ್ತು ರಾಜ್ಯಗಳ ಸಚಿವರಾಗಿದ್ದ ಸರ್ದಾರ್ ಪಟೇಲರೇ ಸಾರ್ವಜನಿಕ ವಾರ್ತಾ ಸಚಿವರೂ ಆಗಿರುವುದಕ್ಕೂ ಏನಾದರೂ ಸಂಬಂಧವಿರಬಹುದೇ ಎಂಬುದನ್ನು ಪತ್ರಿಕೆಗಳು ಹೆಚ್ಚಿನ ಚರ್ಚೆಗೆ ಒಳಪಡಿಸಿರಲಿಲ್ಲ. ಆದರೆ

ಪಟೇಲರು ಗೃಹಾಡಳಿತ ಸಚಿವರೂ ಮತ್ತು ಉಪ ಪ್ರಧಾನಮಂತ್ರಿಯೂ ಆಗಿರುವ ಬಗ್ಗೆ ಮಾತ್ರ ಹೆಚ್ಚಿನ ಚರ್ಚೆ ನಡೆದಿತ್ತು. ಪ್ರಧಾನಮಂತ್ರಿ ನೆಹರೂ ಅವರಿಗಿಂತ ಉಪಪ್ರಧಾನಿಯ ಕೈಯೇ ಬಲವಾಗುತ್ತಿದೆ ಮತ್ತು ಅನೇಕ ಸುಧಾರಣೆಗಳು ಜಾರಿಯಾಗದಿರುವುದಕ್ಕೆ ಪಟೇಲರ ಸ್ವಭಾವವೇ ಕಾರಣ ಎಂದು ಬಹಳ ಮಂದಿ ಆಡಿಕೊಳ್ಳುತ್ತಿದ್ದರು.

ಸ್ವಾತಂತ್ರ್ಯಕ್ಕಾಗಿ ನಡೆದ ಸುಮಾರು ೩೦ ವರ್ಷಗಳ ಸುದೀರ್ಘ ಹೋರಾಟದುದ್ದಕ್ಕೂ ಇವರಿಬ್ಬರೂ ಜೊತೆ ಜೊತೆಯಾಗಿಯೇ ದುಡಿದಿದ್ದರು. ನೆಹರೂ ಉದಾರವಾದಿ ಹಾಗೂ ಬಹುತೇಕವಾಗಿ ಸಮಾಜವಾದೀ ಆದರ್ಶಗಳನ್ನು ಪ್ರತಿಪಾದಿಸುತ್ತಿದ್ದರೆ ಪಟೇಲರು ದೊಡ್ಡ ವ್ಯಾಪಾರದಾರರ ಹಾಗೂ ಭಾರೀ ಮಹಾರಾಜರ ಸ್ನೇಹಿತರಾಗಿದ್ದರು. ಗಾಂಧಿಯವರ ಬಗೆಗಿನ ನಿಷ್ಠೆ ಇವರಿಬ್ಬರನ್ನು ಒತ್ತಟ್ಟಿಗೆ ತಂದಿತ್ತು. ಕ್ವಿಟ್ ಇಂಡಿಯಾ ಚಳುವಳಿಯ ಸಂದರ್ಭದಲ್ಲಿ ಇವರು ಅನೇಕಸಲ ಜೊತೆ ಜೊತೆಯಾಗಿಯೇ ಸೆರೆಮನೆ ವಾಸ ಅನುಭವಿಸಿದ್ದರು. ಸ್ವಾತಂತ್ರ್ಯ ಬಂದನಂತರ ಅಂತರರಾಷ್ಟ್ರೀಯ ವಲಯದಲ್ಲಿ ನೆಹರೂ ಅವರೇ ನಿಸ್ಸಂದೇಹವಾಗಿ ಈ ದೇಶದ ನೇತಾರರೆಂದು ಪರಿಗಣಿಸಲ್ಪಡುತ್ತಿದ್ದರೂ ಆಂತರಿಕ ವ್ಯವಹಾರಗಳಲ್ಲಿ ಮಾತ್ರ ಪಟೇಲರ ಯೋಜನೆಗಳೇ ಮೇಲುಗೈ ಪಡೆದಂತೆ ಕಾಣುತ್ತಿತ್ತು.

ಪಟೇಲ್ ನೆಹರೂ ಸಂಬಂಧ ಕುರಿತಂತೆ ಎರಡು ಸಿದ್ಧಾಂತಗಳು ಪ್ರಚಲಿತವಾಗಿದ್ದವು. ಇವರಿಬ್ಬರ ನಡುವಿನ ಭಿನ್ನಾಭಿಪ್ರಾಯಗಳು ಮೇಲೆ ಕಾಣುವಷ್ಟು ತೀವ್ರವಲ್ಲ. ಒಂದು ವೇಳೆ ಹಾಗಿದ್ದಿದ್ದರೆ ಅವರು ಇಷ್ಟು ದೀರ್ಘಕಾಲ ಒಟ್ಟಿಗೆ ಉಳಿಯುತ್ತಿರಲಿಲ್ಲ ಎಂಬುದು ಒಂದು ಸಿದ್ಧಾಂತವಾದರೆ, ತಮ್ಮ ನಾಯಕತ್ವದಲ್ಲಿರುವ ಕೊರತೆಗಳನ್ನು ಪರಸ್ಪರ ಒಬ್ಬರು ಇನ್ನೊಬ್ಬರ ಗುಣಗಳ ಮೂಲಕ ಪೂರೈಸಿಕೊಳ್ಳುವಂತಹ ಜೊತೆಗಾರಿಕೆಯಿಂದಾಗಿ ಇಬ್ಬರೂ ಒಟ್ಟಿಗೇ ಬೆಳೆದಿದ್ದಾರೆ ಎಂಬುದು ಇನ್ನೊಂದು ಸಿದ್ಧಾಂತ.

ಪಟೇಲರೊಂದಿಗೆ ಮಾತಾಡಲು ತವಕಿಸುತ್ತಿದ್ದ ನಾನು ಒಂದು ಭೇಟಿಯನ್ನು ಗೊತ್ತುಪಡಿಸಿಕೊಂಡೆ. ಬೆಳಿಗ್ಗೆ ೫ ಗಂಟೆಗೆ ಅವರ ಮನೆಗೆ ಬರುವಂತೆ ನನಗೆ ತಿಳಿಸಲಾಯಿತು. ಭಾರತದ ನಾಯಕರೊಂದಿಗೆ ಹೇಗೆ ಭೇಟಿಯನ್ನು ಗೊತ್ತು ಮಾಡಿಕೊಳ್ಳಬೇಕೆಂಬುದು ಗಾಂಧಿಯವರ ಆಶ್ರಮಕ್ಕೆ ಭೇಟಿ ಗೊತ್ತು ಪಡಿಸಿಕೊಂಡಿದ್ದ ನನಗೆ ಅಭ್ಯಾಸವಾಗಿತ್ತು. ಹೀಗಾಗಿ ಈ ಭೇಟಿಯ ಸಮಯದ ಬಗ್ಗೆ ಅಚ್ಚರಿ ಎನಿಸಲಿಲ್ಲ. ನಾನು ಸರ್ದಾರರ ಮನೆಯ ಒಳಹೋದಾಗ ಮನೆಯ ಒಂದು ಚಿಕ್ಕ ಕೋಣೆಯಿಂದ ಹೊರ ಸೂಸುತ್ತಿದ್ದ ಬೆಳಕನ್ನು ಬಿಟ್ಟು ಉಳಿದೆಲ್ಲವೂ ಕತ್ತಲಲ್ಲಿ ಮುಳುಗಿತ್ತು. ದುಂಡಗಿನ ಕಂಬಗಳ ಕೈಸಾಲೆಯ ಹತ್ತಿರ ಹೋಗುತ್ತಿದ್ದಂತೆ ಅಲ್ಲಿ ಜನ ತುಂಬಿದ್ದನ್ನು ಕಂಡೆ. ದಟ್ಟವಾದ ಬೆಳದಿಂಗಳು ಹರಡಿದ್ದ ಹುಲ್ಲು ಹಾಸನ್ನು ನೋಡುತ್ತ ಅವರು ಸದ್ದಿಲ್ಲದೆ ಕುಳಿತಿದ್ದರು.

ಇದ್ದಕ್ಕಿದ್ದಂತೆ, ತಲೆಯ ಮೇಲೆ ಕುಂಚಿಗೆ ಹಾಕಿದ್ದ ಬರಿಗಾಲಿನ ಆಕೃತಿಯೊಂದು ಮನೆಯಿಂದ ಹೊರಗೆ ಸರಸರನೆ ನಡೆದು ಹೋಯಿತು. ಅದರ ಹಿಂದೆಯೇ ಇನ್ನೊಂದು ಚಿಕ್ಕ ಆಕೃತಿ ಕಾಣಿಸಿಕೊಂಡು ಮೊದಲಿನದರ ಹಿಂದೆ ನಡೆಯಿತು. ಅನಂತರ ಇಬ್ಬರೂ ಗೇಟನಿಂದ ಹೊರಗೆ

ಹೋದರು. ಪಟೇಲರು ಹಾಗೂ ಸದಾ ಅವರೊಂದಿಗೇ ಇರುತ್ತಿದ್ದ ಮಗಳು ಮಣಿಬೆನ್ ಬೆಳಗಿನ ಕಾಲ್ನಡಿಗೆ ಆರಂಭಿಸಿದ್ದರು. ಅವರನ್ನು ನೋಡುತ್ತಿದ್ದಂತೆ ಕೈಸಾಲೆಯಲ್ಲಿದ್ದ ಜನರೆಲ್ಲ ಬುಡಕ್ಕನೆ ಎದ್ದು ಅವರನ್ನು ಹಿಂಬಾಲಿಸಿದರು. ನಾನೂ ಅವರನ್ನೇ ಹಿಂಬಾಲಿಸಿದ್ದರಿಂದ, ಸಂದರ್ಶನಕ್ಕೆ ಬಂದವರು ಒಬ್ಬರಾದ ನಂತರ ಒಬ್ಬರಂತೆ ಕ್ಷಣಕಾಲ ಪಟೇಲರೊಂದಿಗೆ ಮಾತಾಡಿ ಅನಂತರ ಮಣಿಬೆನ್ ಪಕ್ಕಕ್ಕೆ ಸೇರಿಸಿಕೊಳ್ಳುತ್ತಿದ್ದ ದೃಶ್ಯವನ್ನು ನೋಡುವ ಅವಕಾಶ ಸಿಕ್ಕಿತು.

ಈ ಮೆರವಣಿಗೆ ಲೋದಿಪಾರ್ಕ್ ಕಡೆಗೆ ತಿರುಗುತ್ತಿದ್ದಂತೆ ಮಣಿಬೆನ್ ನನ್ನನ್ನು ಮುಂದೆ ಕರೆದು ಜೊತೆಗೆ ನಡೆಯತೊಡಗಿದರು. ಆಕೆ ನಿಗೂಢ ಹೆಂಗಸು. ಹೆಚ್ಚು ಮಾತಾಡದ ಗಂಭೀರ, ಸರಳ ವ್ಯಕ್ತಿತ್ವದ ಮಣಿಬೆನ್ ಸಾಮಾನ್ಯವಾಗಿ ಸದಾ ತಂದೆಯ ಜೊತೆಯೇ ಕಾಣಿಸಿಕೊಳ್ಳುತ್ತಿದ್ದರೂ ಏನೂ ಮಾತಾಡುತ್ತಿರಲಿಲ್ಲ. ನನಗೆ ಆಕೆಯೊಂದಿಗೆ ಮಾತಾಡುವ ಅವಕಾಶ ಸಿಕ್ಕಿದ್ದಕ್ಕೆ ಖುಷಿಯಾಯಿತು. ಹೀಗೆ ಇತರ ಜನರನ್ನು ದೂರಸರಿಸುವ ಇಂತಹ ಏನೇನೋ ಕೆಲಸಗಳನ್ನು ತನ್ನ ತಂದೆಗಾಗಿ ಮಾಡಬೇಕಾಗುತ್ತದೆ ಎಂದು ಆಕೆ ಹೇಳತೊಡಗಿದರು. ಬೆಳಗಿನ ಜಾವದ ಈ ಕಾಲ್ನಡಿಗೆಯ ಸಮಯದಲ್ಲಿ ಇಪ್ಪತ್ತರಿಂದ ನಾನ್ನೂರು ಜನರವರೆಗೆ ಬರಬಹುದು. ಅವರನ್ನು ಒಬ್ಬರಾದ ನಂತರ ಒಬ್ಬರಂತೆ ಮಾತಿಗೆ ಬಿಡಬೇಕು. ಪಟೇಲರನ್ನು ಭೇಟಿಮಾಡಿದರೆ ಜನರಿಗೆ ಏನೋ ಸಮಾಧಾನ ಎಂದು ತಿಳಿಸಿದರು.

ದಟ್ಟವಾದ ಮರಗಳ ಗುಂಪಿನ ಕಪ್ಪು ನೆರಳಿನ ಮೂಲಕ ನಾವು ತಿರುವು ತಿರುವಾದ ಹಾದಿಯಲ್ಲಿ ನಡೆಯುತ್ತಿದ್ದಂತೆ ಆಕೆ ತನ್ನ ತಂದೆಯ ಬಗ್ಗೆ ಹೇಳತೊಡಗಿದರು : '೧೯೩೧ರ ನಂತರದಿಂದ ನಾನು ಅವರನ್ನು ಒಂದು ದಿನವೂ ಬಿಟ್ಟು ಹೋಗಿಲ್ಲ. ದಿನದ ೨೪ ಗಂಟೆಯೂ ಅವರ ಜೊತೆಯೇ ಇರುತ್ತೇನೆ' ಎಂದರು. ಆಕೆ, ತನ್ನ ತಂದೆ ಏಳುವುದಕ್ಕಿಂತ ಸ್ವಲ್ಪ ಮುಂಚೆಯೇ ಏಳುತ್ತಿದ್ದರೂ ಬೆಳಗಿನ ನಡಿಗೆ ಆರಂಭಿಸುವುದಕ್ಕೆ ಮೊದಲು ಸ್ವಲ್ಪ ಹೊತ್ತಿನ ತನಕ ನೂಲುತ್ತಿದ್ದರು. "ತಂದೆಯವರು ಉಡುವ ಧೋತಿ ನನ್ನ ಸೀರೆ ಎಲ್ಲವನ್ನೂ ನಾನೇ ನೇಯುತ್ತೇನೆ. ಅವರು ಅಂಗಡಿಯಿಂದ ಬಟ್ಟೆಕೊಂಡು ಎಷ್ಟೋ ವರ್ಷಗಳಾದವು. ಅವರ ಎಲ್ಲ ವಸ್ತ್ರಗಳೂ ನನ್ನ ಸ್ವಂತ ಕೈಗಳಿಂದ ನೇಯ್ದಂಥವು ಎಂದು ವಾತ್ಸಲ್ಯ ಪೂರ್ಣ ಹೆಮ್ಮೆಯಿಂದ ಹೇಳಿದರು.

ಆಕೆ ಇನ್ನೂ ಸಂಕೋಚದ ಚಿಕ್ಕ ಹುಡುಗಿಯಾಗಿದ್ದಾಗ ಗಾಂಧೀಜಿಯವರನ್ನು ಭೇಟಿ ಮಾಡಿದ ದಿನದಿಂದಲೇ ರಾಟೆ ಹಿಡಿದು ನೂಲುವ ನೇಯುವ ಕೆಲಸ ಆರಂಭವಾಗಿತ್ತು. ಗಾಂಧೀಜಿಯವರು ಸರ್ದಾರರನ್ನು ಭೇಟಿ ಮಾಡಲು ಮನೆಗೆ ಬಂದ ದಿವಸ ಈಕೆಯ ಚಿಕ್ಕಮ್ಮ ಗಾಂಧೀಜಿಯವರು ಕುಳಿತಿದ್ದ ಕೋಣೆಗೆ ಮಣಿಬೆನ್‌ಳನ್ನು ಎಳೆದುಕೊಂಡು ಬಂದು ಗಾಂಧಿ ಮುಂದೆ ನಿಲ್ಲಿಸಿದ್ದಳು. ಇನ್ನು ಮೇಲೆ ವಿದೇಶೀ ವಸ್ತ್ರಗಳನ್ನು ತೊಡಬಾರದು, ಕೈಯಿಂದ ನೇಯ್ದ ಖಾದಿಯನ್ನೇ ತೊಡಬೇಕು ಎಂದು ಗಾಂಧಿ ತನ್ನಿಂದ ಭಾಷೆ ತೆಗೆದುಕೊಂಡ ಸಂದರ್ಭವನ್ನು ಮಣಿಬೆನ್ ನೆನಪಿಸಿಕೊಂಡರು. 'ನೀವು ಹಾಗೇ ಮಾತು ಕೊಟ್ಟಿರಾ?' ಎಂದು ಕೇಳಿದೆ. "ನನ್ನ ತಂದೆ ಏನೇ ಹೇಳಿದರೂ ಅದನ್ನು ಮಾಡುತ್ತೇನೆ" ಎಂದು ನಾನು ಹೇಳಿದೆ ಎಂದರು.

ಇತರ ಅನೇಕ ಚಿಕ್ಕ ಹುಡುಗಿಯರ ಮೇಲೆ ಪ್ರಭಾವ ಬೀರಿದಂತೆ ಗಾಂಧಿಯವರು ಮಣಿಬೆನ್ ಮೇಲೂ ಆಳವಾದ ಪ್ರಭಾವ ಬೀರಿದ್ದರು. ಗಾಂಧೀ ತಿಳಿಸಿದ ಸೇವಾ ಜೀವನದತ್ತ ತಾನು ಸೆಳೆಯಲ್ಪಟ್ಟುದಕ್ಕೂ, ತಾನು ಮದುವೆಯಾಗದೆ ಉಳಿದುದಕ್ಕೂ ಸಂಬಂಧವಿದೆ ಎಂದು ಹೇಳಿದ ಮರು ಕ್ಷಣದಲ್ಲಿಯೇ ಇದರಿಂದ ನನಗೆ ಎಂದೂ ದುಃಖವಾಗಿಲ್ಲ. ನಾನಿರುವ ಸ್ಥಿತಿ ತುಂಬ ತೃಪ್ತಿ ನೀಡಿದೆ ಎಂದೂ ಹೇಳಿದರು.

ನಾವು ನಡೆಯುತ್ತಿದ್ದ ಹಾದಿಯಿಂದ, ಬೆಳದಿಂಗಳು ಹರಡಿದ್ದ ಪ್ರದೇಶಕ್ಕೆ ಬಂದಿದ್ದೆವು. ತಲೆಯ ಮೇಲೆ ಸೆರಗು ಹೊದ್ದಿದ್ದ ಆಕೆಯ ಮುಖ ಸದಾ ಏನೋ ಯೋಚನಾ ಮಗ್ನವಾದಂತೆ ಇತ್ತು. ಹುಬ್ಬುಗಳು ಹೆಣೆದುಕೊಂಡಿದ್ದವು. "ನನ್ನ ತಂದೆ ನನಗೆ ವಿಪರೀತ ಸ್ವಾತಂತ್ರ್ಯ ನೀಡಿದರು ಎಂದು ನನಗನ್ನಿಸುತ್ತದೆ ಎಂದು ಮೆಲ್ಲಗಿನ ದನಿಯಲ್ಲಿ ನುಡಿದರು.

"ನಾನು ಯಾವ ಉಡುಪು ಹಾಕಬೇಕು, ಏನು ಓದಬೇಕು ಅಥವಾ ಎಂಥವರ ಸ್ನೇಹ ಮಾಡಬೇಕು ಯಾವುದನ್ನೂ ಅವರು ಹೇಳಲಿಲ್ಲ. ಅಸಹಕಾರ ಚಳುವಳಿ ಕುರಿತಂತೆಯೂ ನನಗೆ ಎಂದೂ ಹೇಳಲಿಲ್ಲ. ನಾನೇ ಅದನ್ನು ಅನುಸರಿಸಿದೆ. ಸೆರೆಮನೆಗೆ ಹೋಗು ಎಂದಾಗಲೀ, ತಮ್ಮ ಜೊತೆ ಇರು ಎಂದಾಗಲೀ ಹೇಳಿರಲಿಲ್ಲ" ಇದು ಭಾರತೀಯ ಹುಡುಗಿಯು ಮಾತ್ರವೇ ಹೇಳಬಹುದಾದ ಮಾತಾಗಿತ್ತು.

ಸ್ವಲ್ಪ ಹೊತ್ತಾದ ನಂತರ ಮಣಿಬೆನ್, ಎಷ್ಟೋಕಾಲದಿಂದ ತಮ್ಮ ಮನಸ್ಸಿನಲ್ಲಿದ್ದ ಯೋಚನೆಗಳನ್ನು ಹೇಳಿಕೊಳ್ಳುತ್ತಿರುವ ದನಿಯಲ್ಲಿ ಭಾರತದ ಮಹಾರಾಜರ ಬಗ್ಗೆ ಹೇಳತೊಡಗಿದರು. ಆಕೆಯ ಸರಳ, ಋಜುವಾದ ನುಡಿಗಳು ಆಕೆಯ ತಂದೆಯ ಪತ್ರಿಕಾ ಹೇಳಿಕೆಗಳ ವಿಕಟಚಿತ್ರಗಳಂತೆ ಇದ್ದವು. "ಈಗ ರಾಜರಿಗೆ ಸ್ವಾತಂತ್ರ್ಯ ದೊರೆತಿದೆ. ಮೊದಲು ಅರಮನೆಯಲ್ಲಿ ಅವರ ಬದುಕು ಒಂದು ರೀತಿಯಲ್ಲಿ ಬಂಧನದ ಹಾಗೇ ಇತ್ತು. ಹೆಚ್ಚೆಂದರೆ ಅವರು ಕೇಸುಗಳಿಗೆ ಅಥವಾ ಸಿನಿಮಾಗಳಿಗೆ ಮಾತ್ರ ಹೋಗಬಹುದಿತ್ತು. ಅವರು ನಮ್ಮನ್ನು ಕಾಣಲು ತುಂಬಾ ಗುಟ್ಟಾಗಿ ಬರಬೇಕಿತ್ತು. ಗುಪ್ತ ಪೊಲೀಸರು ತಮ್ಮನ್ನು ಹಿಂಬಾಲಿಸುತ್ತಿರಬಹುದು ಎಂಬ ಭಯದಿಂದ ಸದಾ ಬೆನ್ನಹಿಂದೆಯೇ ಒಂದು ಕಣ್ಣಿಟ್ಟಿರುತ್ತಿದ್ದರು". ಮಹಾರಾಜರ ಆಡಳಿತಕ್ಕೆ ಬದಲಾಗಿ ಪ್ರಜೆಗಳ ಆಡಳಿತ ಬರಬೇಕು ಎಂದು ನೆಹರೂ ಅವರು ಎಡಬಿಡದೆ ಒತ್ತಾಯಿಸುತ್ತಿದ್ದ ಕ್ವಿಟ್ ಇಂಡಿಯಾ ಚಳುವಳಿಯ ದಿನಗಳಿಂದಲೂ ಸರ್ದಾರರು ಮತ್ತು ಮಹಾಜನರುಗಳ ನಡುವೆ ಈ ಸೌಹಾರ್ದತೆ ಇದ್ದುದು ಕುತೂಹಲಕರ ಸಂಗತಿಯಾಗಿದೆ.

ಇಷ್ಟು ಹೊತ್ತಿಗೆ ನಾವು ಇಡೀ ಪಾರ್ಕನ್ನು ಒಂದು ಸುತ್ತು ಹಾಕಿ ರಸ್ತೆಗೆ ಬಂದಿದ್ದೆವು. ನಮ್ಮ ನಡಿಗೆ ಆರಂಭವಾದಾಗ ನಿರ್ಜನವಾಗಿದ್ದ ರಸ್ತೆ ಬದಿಯ ತುಂಬಾ ಈಗ ಕಾರುಗಳು ನಿಂತಿದ್ದವು. ಸರ್ದಾರರನ್ನು ಕಂಡೊಡನೆ ಅವರೊಂದಿಗೆ ಮಾತಾಡಲು ಜನರು ಕಾರಿಂದ ಜಿಗಿದು ಧಾವಿಸಿ ಬಂದರು. ಒಬ್ಬೊಬ್ಬರನ್ನೇ ಸರ್ದಾರ್ ಬಳಿಗೆ ಕಳಿಸುವ ಮಣಿಬೆನ್ ಕೆಲಸ ಮತ್ತೆ ಆರಂಭವಾಯಿತು. ನನಗೆ ಯಾವಾಗ ಈ ಅವಕಾಶ ಸಿಗುತ್ತೋ ಎಂದು

ಅಂದುಕೊಳ್ಳುತ್ತಿರುವಷ್ಟರಲ್ಲಿ ತಂದೆಮಗಳಿಬ್ಬರೂ ನನ್ನ ಹತ್ತಿರ ಬಂದು ಬೆಳಗಿನ ಉಪಹಾರಕ್ಕೆ ಅವರ ಮನೆಗೆ ಕರೆದೊಯ್ದರು.

ನಾನು ಸಾಕಷ್ಟು ಖರ್ಜೂರಗಳನ್ನು ತಿಂದಾದ ಮೇಲೆ ಮಾರ್ಮಲೆಡ್ ಹಚ್ಚಿದ ಟೋಸ್ಟ್‌ಗಳು, ಸೇಬು, ಕಿತ್ತಳೆಗಳು, ಸಣ್ಣಗೆ ಕೊಚ್ಚಿದ ಪಿಸ್ತಾ ಬೀಜಗಳನ್ನು ಹಾಕಿ ಮಾಡಿದ ಅದ್ಭುತವಾದ ಪುಟ್ಟ ಪುಟ್ಟ ಕೇಕುಗಳೂ ನನ್ನ ಮುಂದೆ ಬಂದವು. ಮೊಟ್ಟೆಯ ಸ್ಪರ್ಶವೂ ಇಲ್ಲದ ಸಂಪೂರ್ಣ ಸಸ್ಯಾಹಾರಿ ಉಪಾಹಾರ ನನ್ನ ಮುಂದಿತ್ತು. ಪಟೇಲರ ಹಿಂದೂಯಿಸಂ ಬಗ್ಗೆ ನನಗೆ ಯಾವಾಗಲೂ ಮರೆತೇ ಹೋಗುತ್ತಿತ್ತು. ಭಾರತದ ಜಿಮ್‌ಫಾರ್ಲೆ ಎಂದು ಕರೆಯಲ್ಪಡುತ್ತಿದ್ದ ಅವರು ಯಾವಾಗಲೂ ಒಬ್ಬ ರಾಜಕಾರಣಿಯಾಗಿಯೇ ನೆನಪಾಗುತ್ತಿದ್ದರು. ಪಟೇಲರು ಆಹಾರ ಮತ್ತು ಉಡುಗೆಯ ವಿಷಯದಲ್ಲಿ ನೆಹರೂಗಿಂತ ಹೆಚ್ಚಿನ ಹಿಂದೂ ಆಗಿದ್ದರು. ಆದರೂ ಅವರು ವ್ಯಾವಹಾರಿಕ ರಾಜಕಾರಣಿ ಹಾಗೂ ಅತ್ಯುತ್ತಮ ಸಂಘಟನಾಕಾರರಾಗಿದ್ದರು. ನೆಹರೂ ತಮ್ಮ ಭಾವಾವೇಶದ ಮಾತುಗಾರಿಕೆ ಹಾಗೂ ಉದಾರ ವಿಚಾರಗಳಿಂದ ಜನರ ಮನಸ್ಸನ್ನು ಸೆರೆಹಿಡಿದರೆ ಪಟೇಲರು ಸಂಪುಟದಲ್ಲಿ ಹಾಗೂ ಪ್ರಾಂತೀಯ ಶಾಸನ ಸಭೆಗಳಲ್ಲಿ ತಮ್ಮಂತಹುದೇ ವಿಚಾರಗಳನ್ನು ಹೊಂದಿದ ಜನರನ್ನು ಸೇರಿಸಿಕೊಂಡು ಖಾಸಗಿ ಎಂದೇ ಹೇಳಬಹುದಾದ ರಾಜಕೀಯ ಪಕ್ಷವನ್ನು ತುಂಬ ವ್ಯವಸ್ಥಿತವಾಗಿ ಕಟ್ಟಿಕೊಂಡಿದ್ದರು. ಈಗ ಈ ಪ್ರಕ್ರಿಯೆಯನ್ನು ರಾಜಸಂಸ್ಥಾನಗಳಿಗೂ ವಿಸ್ತರಿಸತೊಡಗಿದ್ದರು. ಹೀಗಾಗಿಯೇ ಜನತೆಯ ಅಭಿಪ್ರಾಯ ವಿರುದ್ಧ ದಿಕ್ಕಿನಲ್ಲಿ ಗ್ಗುಂಪುಗೊಳ್ಳುತ್ತಿದ್ದರೂ ಅವರು ಜನತೆಯ ಹೆಸರಿನ ಸೋಗಿನಲ್ಲಿ ಹಳೆಯ ಫ್ಯೂಡಲ್ ವ್ಯವಸ್ಥೆಯ ಚೌಕಟ್ಟನ್ನು ಬಹುತೇಕ ಹಾಗೇ ಉಳಿಯುವಂತೆ ಮಾಡಲು ಸಾಧ್ಯವಾಗಿರಬೇಕು.

ನಾನು ಅವರ ಜೊತೆಗಿನ ನನ್ನ ಸಂದರ್ಶನವನ್ನು 'ಭಾರತ ಮತ್ತು ಗ್ರೇಟ್ ಬ್ರಿಟನ್ ನಡುವಿನ ಸಂಬಂಧ ಈಗ ಹೇಗಿದೆ' ಎಂಬ ಪ್ರಶ್ನೆಯಿಂದ ಆರಂಭಿಸಿದೆ. 'ನಾನು ಬ್ರಿಟಿಷರಿಂದ ಸ್ವಲ್ಪವೂ ಬೇರೆಯಾಗುವುದಕ್ಕೆ ಇಷ್ಟಪಡುವುದಿಲ್ಲ' ಎಂದು ಸರ್ದಾರ್ ಹೇಳಿದರು. (ಸ್ವಾತಂತ್ರ್ಯಕ್ಕೆ ಮೊದಲು ಯಾವುದಾದರೂ ನಾಯಕ ಈ ರೀತಿ Dominion ಸ್ಥಾನದಲ್ಲಿ ಉಳಿಯುವ ಮಾತಾಡಿದ್ದರೆ ರಾಜಕೀಯವಾಗಿ ಆತನ ಇತಿಶ್ರೀ ಆಗಿಬಿಡುತ್ತಿತ್ತು ಎಂದು ನಾನು ನೆನಪಿಸಿಕೊಂಡೆ) ನಾವು ಎಷ್ಟೆಲ್ಲ ಹೋರಾಟ ಮಾಡಿದರೂ ಇಂದು ಬ್ರಿಟನ್ ಜೊತೆ ನಮ್ಮ ಸಂಬಂಧ ಸೌಹಾರ್ದಯುತವಾಗೇ ಇದೆ. ಈ ಹೋರಾಟ ಅಹಿಂಸೆಯನ್ನು ಆಧರಿಸಿತ್ತಾದ ಕಾರಣ ಯಾವ ಕಹಿ ಭಾವನೆಯೂ ಉಳಿದಿಲ್ಲ. ನೆಹರೂ ೧೨ ವರ್ಷ ಸೆರೆಮನೆಯಲ್ಲಿದ್ದರು. ಇದು ಹೆಚ್ಚೂ ಕಡಿಮೆ ನಾನು ಸೆರೆಮನೆಯಲ್ಲಿದ್ದಷ್ಟು ಅವಧಿಗೆ ಸಮ. ಆದರೂ ನಾನು ಮತ್ತು ನೆಹರೂ ಇಬ್ಬರೂ ಬ್ರಿಟನ್ ಜೊತೆ 'ಸ್ನೇಹಪರವಾಗೇ ಇದ್ದೇವೆ' ಎಂದರು.

ಅಮೇರಿಕಾದ ಜೊತೆ ಹೇಗೆ? ಭಾರತವು ಅಮೇರಿಕಾದಿಂದ ಏನು ಬಯಸುತ್ತದೆ ಎಂದು ನಾನು ಕೇಳಿದೆ.

ಅಮೇರಿಕಾ ಇಂಜಿನಿಯರಿಂಗ್ ತಜ್ಞರನ್ನು ಹಾಗೂ ಬಂಡವಾಳ ಸಾಲಗಳನ್ನು ಒದಗಿಸುವ ಮೂಲಕ ಸಹಾಯ ಮಾಡಬಹುದು. ನಾವು ಬಹಳಷ್ಟು ಹಣವನ್ನು ಒಟ್ಟುಗೂಡಿಸಬೇಕಾಗಿದೆ.

ಇದಕ್ಕಾಗಿ ಅಮೇರಿಕಾದ ನೆರವನ್ನು ಕೇಳದೆ ನಮಗೆ ಬೇರೆ ದಾರಿಯೇ ಇಲ್ಲ ಎಂದರು. ಅವರು 'ಬೇರೆ ದಾರಿಯೇ ಇಲ್ಲ' ಎಂಬ ಪದ ಬಳಸಿದ್ದು ನನಗೆ ಅಚ್ಚರಿ ತರಲಿಲ್ಲ. ವಸಾಹತುಶಾಹಿಯ ದೀರ್ಘ ಅನುಭವವನ್ನು ಹೊಂದಿದ ಭಾರತ, ರಾಜಕೀಯವಾಗಿ ಯಾವುದೇ ದೇಶ ಮೇಲುಗೈ ಪಡೆಯುವುದರ ಬಗ್ಗೆ ಎಷ್ಟು ಹೆದರುತ್ತದೆ ಎಂಬುದು ನನಗೆ ಚೆನ್ನಾಗಿ ತಿಳಿದಿತ್ತು. ಕೈಗಾರಿಕೀಕರಣಕ್ಕಾಗಿ ಭಾರತಕ್ಕೆ ವಿದೇಶೀ ಬಂಡವಾಳ ಬಹಳ ಅಗತ್ಯವಾಗಿತ್ತು. ಆದರೆ ಈ ಬಂಡವಾಳವನ್ನು ಹಿಂಬಾಲಿಸಿ ಬರುವ ವಿದೇಶೀ ಮೇಲುಗೈಯಾಗುವಿಕೆ ಬಗ್ಗೆ ಅಷ್ಟೇ ಹುಷಾರಾಗಿರಬೇಕಿತ್ತು. ಪಟೇಲರು ಇದರ ಸಾರಾಂಶವನ್ನು, 'ನಿಯಂತ್ರಣವು ಬಹುತೇಕವಾಗಿ ಭಾರತದ ಕೈಯಲ್ಲಿಯೇ ಇರುವುದಾದರೆ ಹೊರಗಿನ ನೆರವಿಗೆ ಸಾಕಷ್ಟು ಅವಕಾಶವಿದೆ' ಎಂಬ ಮಾತುಗಳಲ್ಲಿ ವ್ಯಕ್ತಪಡಿಸಿದರು.

ಹೊಸದಾಗಿ ಸ್ವಾತಂತ್ರ್ಯ ಪಡೆದ ಭಾರತವು ಸಮಾಜವಾದೀ ತತ್ವದ ಕಡೆ ತಿರುಗಬಹುದು ಎಂದು ಕೆಲವು ಭಾರತೀಯ ಬಂಡವಾಳದಾರರಿಗೆ ಚಿಂತೆಯಾಗಿದೆ ಎಂಬುದನ್ನು ನಾನು ಕೇಳಿದ್ದೆ. ಕೈಗಾರಿಕೆಗಳನ್ನು ಯೋಜಿಸುವ ಹಾಗೂ ಲಾಭಗಳನ್ನು ಮಿತಗೊಳಿಸಬೇಕಾದ ಪ್ರಾಮುಖ್ಯತೆಯ ಬಗ್ಗೆ ನೆಹರೂ ಆಗಾಗ ಹೇಳುತ್ತಲೇ ಇದ್ದರು. ಆದರೆ ನಾನು ಗಮನಿಸಿದಂತೆ ಈ ಬಗ್ಗೆ ಸರ್ಕಾರ ತೀವ್ರ ಕ್ರಮಗಳನ್ನೇನೂ ಕೈಗೊಳ್ಳುವುದಿಲ್ಲ ಎಂದು ಕೆಲವು ವ್ಯಾಪಾರದಾರರಿಗೆ ವಿಶ್ವಾಸವಿದ್ದಂತಿತ್ತು. ರಾಷ್ಟ್ರೀಕರಣವು ಕೇವಲ ಒಂದು ಘೋಷಣೆ ಎಂದು ಬಿರ್ಲಾ ಹೇಳಿದ ಮಾತು ನನಗೆ ನೆನಪಾಯಿತು. ಮತ್ತು ಪಟೇಲರೂ ಸಹ ರಾಷ್ಟ್ರೀಕರಣವು ಅನೇಕ ವರ್ಷಗಳಿಂದಲೂ ಕಾಂಗ್ರೆಸ್ಸಿನ ನಿರ್ಣಯವಾಗಿದೆ ಎಂದು ಹೇಳುತ್ತಿದ್ದರೂ ತಕ್ಷಣದಲ್ಲಿ ಮಾತ್ರ ಭಾರತವು ಮಿಶ್ರ ಆರ್ಥಿಕ ನೀತಿಯನ್ನೇ ಅನುಸರಿಸಿಕೊಂಡು ಬರುತ್ತದೆ ಎಂದು ಸೂಚಿಸಿದ್ದರು.

"ಈಗಿರುವ ಬಹುತೇಕ ಕೈಗಾರಿಕೆಗಳನ್ನು (ಅದರಲ್ಲಿ ಜವಳಿ ಕೈಗಾರಿಕೆಯೂ ಒಂದು) ಖಾಸಗಿ ಉದ್ಯಮವಾಗಿಯೇ ಉಳಿಸಿಕೊಂಡು ಬರಲಾಗುವುದು. ಆದರೆ ಬ್ಯಾಂಕುಗಳು, ವಿಮೆ, ಹಡಗು ಕೈಗಾರಿಕೆ ಹಾಗೂ ಕಲ್ಲಿದ್ದಲ ಗಣಿಗಳು ರಾಷ್ಟ್ರೀಕರಣವಾಗುವ ಸಾಧ್ಯತೆ ಇದೆ" ಎಂದರು. ಶಕ್ತಿಯು ಯೋಜಿತ ಆಧಾರದ ಮೇಲೆ ನಿರ್ಮಾಣವಾಗಬೇಕು ಎಂದು ಪಟೇಲ್ ನಂಬಿದ್ದರು. ಅತಿಮುಖ್ಯವಾಗಿ ಬೇಕಾಗಿರುವುದು ಉಕ್ಕು. ಟಾಟಾ ವರ್ಕ್ಸ್ ಸಾಕಷ್ಟು ಬೃಹತ್ ಉದ್ಯಮವಾಗಿದ್ದರೂ ಭಾರತದ ಕೇವಲ ೧/೪ ನೇ ಭಾಗದಷ್ಟು ಅಗತ್ಯತೆಯನ್ನು ಮಾತ್ರ ಅವರು ಪೂರೈಸಬಲ್ಲರು. ಆದ್ದರಿಂದ ಸರ್ಕಾರವು ಅನೇಕ ಪ್ರಾಂತಗಳಲ್ಲಿ ಭಾರೀ ಉಕ್ಕು ಸ್ಥಾವರಗಳನ್ನು ಸ್ಥಾಪಿಸಬೇಕಾಗಿದೆ ಎಂದು ಅವರು ವಿವರಿಸಿದರು. ಭಾರತ ತ್ವರಿತವಾಗಿ ಕೈಗಾರಿಕೀಕರಣಗೊಳ್ಳುವುದು ಅವಶ್ಯ ಎಂದು ಅವರು ಒತ್ತಿ ಹೇಳಿದರು. ಕೈಗಾರಿಕೀಕರಣ ದೇಶದ ಅತಿಮುಖ್ಯ ಅಗತ್ಯತೆ ಎಂಬುದು ಪಟೇಲರಿಗೆ ಮನವರಿಕೆಯಾಗಿದ್ದರ ಬಗ್ಗೆ ಯಾವುದೇ ಸಂದೇಹವಿಲ್ಲ. ಬಿಡಿಕೆಲಸಗಾರನ ಸ್ಥಿತಿಗತಿಗಿಂತ ಕೈಗಾರಿಕೆಯ ಚಕ್ರಗಳು ತಿರುಗುತ್ತಿರುವಂತೆ ನೋಡಿಕೊಳ್ಳುವ ಬಗ್ಗೆ ಹೆಚ್ಚು ಗಮನ ಕೊಡಬೇಕು ಎಂಬ ಇಂಗಿತ ಅವರ ಮಾತುಗಳಲ್ಲಿ ವ್ಯಕ್ತವಾಗುತ್ತಿತ್ತು.

'ಕೈಗಾರಿಕಾ ಅಶಾಂತಿಯತ್ತ ಕರೆದೊಯ್ಯುವ ನಾಯಕರ ಮಾತುಗಳನ್ನು ಕೇಳುವುದಕ್ಕಿಂತ ಶಿಸ್ತಾಗಿ ನಡೆದುಕೊಂಡರೆ ಅವರು ಒಳ್ಳೆಯ ಫಲ ಪಡೆಯಬಹುದು' ಎಂದು ಸರ್ದಾರ್ ಹೇಳಿದರು. ಈ ಮಾತಿಗೆ ಏನೇನು ಅರ್ಥಛಾಯೆಗಳಿವೆ ಎಂಬುದು ಭಾರತವನ್ನು ಬಿಟ್ಟು ಹೋದ ಬಳಿಕ ನನಗೆ ಮನವರಿಕೆಯಾಯಿತು. ೧೯೪೯ರ ಫೆಬ್ರವರಿಯಲ್ಲಿ ಪಟೇಲರು ಮಸೂದೆಯೊಂದನ್ನು ಜಾರಿ ಮಾಡಿದರು. ಅದರ ಪ್ರಕಾರ, ವ್ಯಾಪಕವಾದ ಅಗತ್ಯ ಸೇವಾಕ್ಷೇತ್ರಗಳಲ್ಲಿ ಯಾವುದೇ ಮುಷ್ಕರ ನಡೆಸುವುದು ಕಾನೂನು ಬಾಹಿರವಾಗುತ್ತಿತ್ತು. ಮುಷ್ಕರದಲ್ಲಿ ಭಾಗವಹಿಸಿದವರಿಗೆ ದಂಡವಿಧಿಸುವ, ಬಂಧನಕ್ಕೊಳಪಡಿಸುವ ಅವಕಾಶವೂ ಈ ಮಸೂದೆ ಯಲ್ಲಿತ್ತು. ಈ ಕ್ರಮದ ಬಗ್ಗೆ ಚಿಕ್ಕದಾಗಿದ್ದರೂ ಶಕ್ತಿಯುತವಾಗಿದ್ದ ಕಮ್ಯುನಿಸ್ಟ್ ಯೂನಿಯನ್‌ಗಳು; ಇದಕ್ಕಿಂತ ದೊಡ್ಡದಾಗಿದ್ದರೂ ಅಷ್ಟೇನೂ ನಿರ್ಣಾಯಕವಲ್ಲದ ಸೋಶಿಯಲಿಸ್ಟರು ಹಾಗೂ ಸರ್ಕಾರದಿಂದಲೇ ಪ್ರಾಯೋಜಿತವಾದ INTUC ಗಳೂ ಸೇರಿದಂತೆ ವಿವಿಧ ರೂಪದ ಎಲ್ಲ ಸಂಘಟಿತ ಕಾರ್ಮಿಕ ವಲಯಗಳಿಂದ ವಿರೋಧ ವ್ಯಕ್ತವಾಯಿತು. ಅನಂತರ ಪಟೇಲರು ಹಾಗೂ ಗೃಹಸಚಿವಾಲಯವು ಸಿದ್ಧಪಡಿಸಿದ ಭಾಷಣವನ್ನು ನೆಹರೂ ಮಾಡುವ ಮೂಲಕ ಈ ಮಸೂದೆಯನ್ನು ಹಿಂತೆಗೆದುಕೊಳ್ಳಲಾಯಿತು. ಆದರೂ ಭಾರತದ ಕಾರ್ಮಿಕ ವರ್ಗದಲ್ಲಿ ಇದರ ಭೀತಿ ಸ್ಪಷ್ಟವಾಗಿ ಉಳಿದಿರುವಂತೆ ಮಾಡಲಾಗಿತ್ತು. 'ಮುಷ್ಕರ ಮಾಡುವುದರಿಂದ ಯಾರಿಗೂ ಲಾಭವಿಲ್ಲ ಇದರಿಂದ ಉತ್ಪಾದನೆ ಕುಂಠಿತವಾಗುತ್ತದೆ ಅಷ್ಟೇ' ಎಂಬ ದೂರು ಪಟೇಲರ ಅನೇಕ ಭಾಷಣಗಳಲ್ಲಿ ವ್ಯಕ್ತವಾಗುತ್ತಿತ್ತು. ಕಾರ್ಮಿಕರು ತಾಳ್ಮೆಯಿಂದಿದ್ದು ಸರ್ಕಾರದ ಮೇಲೆ ವಿಶ್ವಾಸವಿರಿಸಬೇಕು. ಕ್ರಮೇಣ ಅವರ ಬೇಡಿಕೆಗಳ ಬಗ್ಗೆ ಗಮನಹರಿಸಲಾಗುವುದು ಎಂದು ತಮ್ಮ ಭಾಷಣಗಳಲ್ಲಿ ಧ್ವನಿಸುತ್ತಿದ್ದರು.

ರಾಜ ಸಂಸ್ಥಾನಗಳೊಂದಿಗೆ ಮಾಡಿಕೊಂಡ ಒಪ್ಪಂದಗಳ ಹಿನ್ನೆಲೆಯಲ್ಲಿ ಇದೇ ತರ್ಕವೇ ಇತ್ತು ಎಂದು ನನಗೆ ತೋರುತ್ತದೆ. ರಾಷ್ಟ್ರವನ್ನು ಬಲಪಡಿಸಬೇಕು ಎಂಬುದು ಸರ್ದಾರರ ಮೊದಲ ನಿಲುವು. ಪ್ರಜಾಪ್ರಭುತ್ವಕ್ಕಾಗಿ ಹಾತೊರೆಯುತ್ತಿದ್ದ ಸಂಸ್ಥಾನದ ಜನಗಳ ಅಭೀಪ್ಸೆಗಿಂತ ಹೆಚ್ಚಾಗಿ ಸಂಸ್ಥಾನಗಳ ರಾಜರನ್ನು ಬಹುತ್ವರಿತವಾಗಿ ಹಾಗೂ ಶಾಂತಿಯುತವಾಗಿ ಭಾರತದೊಂದಿಗೆ ಸೇರಿಕೊಳ್ಳುವಂತೆ ಮಾಡಲು ಪಟೇಲರು ಆದ್ಯತೆ ನೀಡಿದರು. ಏಷಿಯಾದಲ್ಲಿ ಕಮ್ಯುನಿಸಂ ಹರಡಿ ಬಿಡಬಹುದು ಎಂಬುದೇ ಪಾಶ್ಚಿಮಾತ್ಯ ನಾಯಕರುಗಳ ಬಹುದೊಡ್ಡ ಚಿಂತೆಯಾಗಿತ್ತು. ಈ ಹಿನ್ನೆಲೆಯಲ್ಲಿ, ಸಮಾಜವಾದಿಗಳನ್ನಾಗಲೀ, ಕಮ್ಯುನಿಸ್ಟರನ್ನಾಗಲೀ ಬಲಪಡಿಸದೆ ಫ್ಯೂಡಲ್ ದೊರೆಗಳೊಂದಿಗೆ ಭೂಮಿಯ ವಿಷಯವನ್ನು ಮತ್ತು ಕೈಗಾರಿಕೋದ್ಯಮಿ ಗಳೊಂದಿಗೆ ಸಾಮೂಹಿಕ ಚೌಕಾಶಿಯ ವಿಷಯವನ್ನು ಸರ್ಕಾರ ಪರಿಹರಿಸಿಕೊಳ್ಳಲು ಹೇಗೆ ಸಾಧ್ಯ ಎಂಬ ಪ್ರಶ್ನೆ ಇಲ್ಲಿ ಅಪ್ರಸ್ತುತವಾಗಲಾರದು. ಸಮಾಜವಾದಿ ಹಾಗೂ ಕಮ್ಯುನಿಸ್ಟ್ ಗುಂಪುಗಳು ಇನ್ನೂ ತೀರಾ ಶೈಶವಾವಸ್ಥೆಯಲ್ಲಿದ್ದಾರೆ. ಮತ್ತು ಅಷ್ಟು ಪ್ರಬಲವಾಗಿಲ್ಲ ಎಂಬುದು ನಿಜವಾದರೂ ಬೆಳೆಯುತ್ತಿರುವ ಕಾರ್ಮಿಕ ಸಂಘಟನೆಗಳಲ್ಲಿ ಹಾಗೂ ರಾಜಸಂಸ್ಥಾನಗಳಲ್ಲಿ ನಡೆಯುತ್ತಿದ್ದ ಬೆಳವಣಿಗೆಗಳಲ್ಲಿ ಅವರ ಕೈ ಬಲವಾಗಿಯೇ ಇತ್ತು. ತೆಲಂಗಾಣ ಜಾಗೃತಿಯ ಹಿನ್ನೆಲೆಯಲ್ಲಿ ನಡೆದ ಕ್ಷೋಭೆಗಳು ಹಾಗೂ ಹೈದ್ರಾಬಾದ್‌ನಲ್ಲಿ ಉಳುಮೆ ಭೂಮಿಯನ್ನು

ರೈತರು ವಶಪಡಿಸಿಕೊಂಡಂಥ ಘಟನೆಗಳು ಕಮ್ಯುನಿಸ್ಟ್ ದನಿಯು ಯಾವಾಗ ಬೇಕಾದರೂ ದಂಗೆ ಏಳುವ ಮನಸ್ಥಿತಿಯಲ್ಲಿರುವ ರೈತಾಪಿ ಜನರನ್ನು ತಲುಪುತ್ತಿದೆ ಹಾಗೂ ಗ್ರಾಮೀಣ ಭಾರತದಲ್ಲಿ ಕಾಂಗ್ರೆಸ್ ಪಕ್ಷದ ಆಡಳಿತಕ್ಕೆ ಭೀತಿಯೊಡ್ಡುತ್ತಿದೆ ಎಂಬುದರ ಸ್ಪಷ್ಟ ಸೂಚನೆಗಳಾಗಿದ್ದವು.

ಭಾರತದ ಇತರ ಅನೇಕ ರಾಜ್ಯಗಳು ಮತ್ತು ಪ್ರಾಂತ್ಯಗಳಲ್ಲಿಯಂತೆ ಬಂಗಾಳ ಹಾಗೂ ಹೈದ್ರಾಬಾದ್‌ನಲ್ಲಿ ಕಮ್ಯುನಿಸ್ಟ್ ಪಕ್ಷವನ್ನು ಕಾನೂನು ಬಾಹಿರ ಎಂದು ಘೋಷಿಸಲಾಗಿತ್ತು. ಆದರೆ ಭಾರತದ ಬಹುತೇಕ ಭಾಗಗಳಲ್ಲಿ ಕಮ್ಯುನಿಸ್ಟ್ ಪಕ್ಷದ ಅನೇಕ ಸದಸ್ಯರನ್ನು ಬಂಧಿಸಿದ್ದರು ಮತ್ತು ಇನ್ನೂ ಅನೇಕರು ಭೂಗತರಾಗಿದ್ದರೂ ಅದು ತಾಂತ್ರಿಕವಾಗಿ ಇನ್ನೂ ಕಾನೂನುಬದ್ಧ ವಾಗಿಯೇ ಇತ್ತು. ಆಗಾಗ ಪೊಲೀಸರು ಕಮ್ಯುನಿಸ್ಟ್ ವೃತ್ತ ಪತ್ರಿಕೆಗಳ ಪತ್ರಿಕಾಲಯಗಳನ್ನೇ ಧ್ವಂಸಗೊಳಿಸುತ್ತಿದ್ದರು ಮತ್ತು ವರದಿಗಾರರು ಹಾಗೂ ಸಂಪಾದಕರನ್ನು ನಿರ್ದಿಷ್ಟ ಆರೋಪ ವಿಲ್ಲದೆಯೇ "ಸಾರ್ವಜನಿಕ ಹಿತರಕ್ಷಣೆಯ ದೃಷ್ಟಿಯಿಂದ" ಎಂಬ ನೆಪದಲ್ಲಿ ಬಂಧಿಸಿ ಸೆರೆಮನೆ ಯಲ್ಲಿಡುವ ಘಟನೆಗಳು ನಡೆಯುತ್ತಿದ್ದವು. ಆದರೂ ಬಾಂಬೆ ಹಾಗೂ ಇನ್ನೂ ಕೆಲವು ನಗರಗಳಲ್ಲಿ ಕಮ್ಯುನಿಸ್ಟ್ ವೃತ್ತ ಪತ್ರಿಕೆಗಳು ಪ್ರಕಟವಾಗುತ್ತಲೇ ಇವೆ.

ಬ್ರಿಟಿಷರಿಂದ ಪದೇಪದೇ ಬಂಧನಕ್ಕೊಳಗಾಗಿ ಸೆರೆಮನೆಗೆ ತಳ್ಳಲ್ಪಡುತ್ತಿದ್ದ ಕಾಂಗ್ರೆಸ್ಸಿಗರ ಕೈಗೆ ಬ್ರಿಟಿಷರು ಅಧಿಕಾರ ಸೂತ್ರಗಳನ್ನು ಕೊಟ್ಟು ಹೋದರು ಎಂಬುದನ್ನು ಸ್ವತಃ ಕಮ್ಯುನಿಸ್ಟ್ ವಿರೋಧಿಗಳಾಗಿದ್ದ ಕೆಲವು ಭಾರತೀಯರು ನೆನಪಿಸಿಕೊಳ್ಳುತ್ತ ಈಗ ಅದೇ ಕ್ರಮ ಪುನರಾವರ್ತನೆ ಯಾಗುತ್ತಿದೆಯೇ ಎಂಬ ಅಚ್ಚರಿ ವ್ಯಕ್ತಪಡಿಸುತ್ತಿದ್ದರು. ಈ ರಾಜಕೀಯ ಬಂಧನಗಳು ಕಮ್ಯುನಿಸ್ಟ್ ಪಕ್ಷಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಇಷ್ಟು ಹೆಚ್ಚಿನ ಸಂಖ್ಯೆಯಲ್ಲಲ್ಲದಿದ್ದರೂ ಸೋಶಿಯಲಿಸ್ಟರನ್ನೂ ಸಹ ಇದೇ ರೀತಿ ಸೆರೆಮನೆಗೆ ತಳ್ಳುತ್ತಿದ್ದರು. ಭಾರತ ಎದುರಿಸುತ್ತಿರುವ ಸಮಸ್ಯೆಗಳಿಗೆ ಸರ್ಕಾರದ ಟೀಕೆ ಮಾಡಿದವರನ್ನು ಬಂಧಿಸಿದರೆ ಪರಿಹಾರವಾಗುವುದಿಲ್ಲ ಎಂಬ ಅಭಿಪ್ರಾಯ ಸಾಮಾನ್ಯ ಜನರಿಂದ ಕೇಳಿಬರುತ್ತಿತ್ತು. ಸರ್ಕಾರದ ನಾಯಕರಲ್ಲಿ ಮುಕ್ತ ಚರ್ಚೆ ಹಾಗೂ ಭಿನ್ನಾಭಿಪ್ರಾಯಗಳನ್ನು ತಾಳಿಕೊಳ್ಳದ ಅಸಹನೆ ಬೆಳೆಯುತ್ತಿರುವುದು ಜನರಲ್ಲಿ ಕಳವಳವನ್ನು ಉಂಟುಮಾಡಿತ್ತು.

ಕಮ್ಯುನಿಸ್ಟರು ತಕ್ಷಣವೇ ಅಧಿಕಾರಕ್ಕೆ ಬರುವಂಥ ಯಾವ ಸಾಧ್ಯತೆಯೂ ಕಂಡು ಬರುತ್ತಿಲ್ಲ. ಅವರದು ತೀರಾ ಚಿಕ್ಕ ಗುಂಪು. ಆದರೂ ಅದೊಂದು ಸುವ್ಯವಸ್ಥಿತವಾದ ಹಾಗೂ ಶಿಸ್ತಿನ ಪಕ್ಷ. ಇದರ ಸದಸ್ಯತ್ವ ಸಂಖ್ಯೆ ಸುಮಾರು ೮೦,೦೦೦. ಭಾರತದ ನಾಲ್ಕು ನೂರು ಮಿಲಿಯನ್ ಜನಸಂಖ್ಯೆಗೆ ಹೋಲಿಸಿದಾಗ ಇದು ಸಾಗರದಲ್ಲಿ ಒಂದು ಹನಿ ಇದ್ದಂತೆ. ಇದರ ಸದಸ್ಯರೆಲ್ಲರೂ ೨೦ ರಿಂದ ೪೦ ವರ್ಷ ವಯಸ್ಸಿನೊಳಗಿನ ತರುಣರು. ಇವರಲ್ಲಿ ಹೆಚ್ಚಿನವರು ಮಧ್ಯಮ ವರ್ಗದ ಕುಟುಂಬಗಳಿಗೆ ಸೇರಿದ ವಿದ್ಯಾವಂತರು. ಬಹಳಷ್ಟು ಮಂದಿ ಬ್ರಾಹ್ಮಣರು ಅಂದರೆ ಭಾರತದ ಉಚ್ಚ ಪುರೋಹಿತ ವರ್ಗಕ್ಕೆ ಸೇರಿದವರು. ಇವರು ಎಲ್ಲ ಭದ್ರತೆಯನ್ನೂ ತೊರೆದು ರೈತರನ್ನೂ ಕಾರ್ಮಿಕರನ್ನೂ ಸಂಘಟಿಸುವುದಕ್ಕಾಗಿ ಕಣಕ್ಕೆ ಇಳಿದವರು, ಬೇರೆ ಯಾವುದೇ ರಾಜಕೀಯ ಪಕ್ಷಗಳವರಿಗಿಂತ ಧಾರ್ಮಿಕ ಹಾಗೂ ಜಾತಿಯ ಗಡಿಗಳನ್ನು ದಾಟಿ ಬಂದವರು.

ಮುಸ್ಲಿಂ, ಹಿಂದೂ, ಸಿಖ್ ಎಂಬ ಭೇದ ಎಣಿಸದೆ ಎಲ್ಲರನ್ನೂ ಒಂದೇ ಸಮನಾಗಿ ಪರಿಗಣಿಸಿದವರು. ಸ್ವತಃ ಜನರೊಂದಿಗೆ ಬೆರೆತು ಓಡಾಡಿ ಗಳಿಸಿದ ಅನುಭವವೇ ಇವರ ಶಕ್ತಿ ಸಾಮರ್ಥ್ಯಗಳ ಗುಟ್ಟು, ಆದರೆ ಕಮ್ಯುನಿಸ್ಟರನ್ನು ಇಂದಿನ ಭಾರತದ ಪ್ರಮುಖ ಶಕ್ತಿಯಾಗಿ ಗುರುತಿಸಲು ಸಾಧ್ಯವಿಲ್ಲ.

ಹೀಗೆ ಅಲ್ಪ ಸಂಖ್ಯೆಯಲ್ಲಿರುವ ಮತ್ತು ನಾನಾವಿಧದ ಕಿರುಕುಳಗಳನ್ನು ಅನುಭವಿಸುತ್ತಿರುವ ಕಮ್ಯುನಿಸ್ಟ್ ಪಕ್ಷ ಗಮನಾರ್ಹ ಸಾಧನೆಗಳನ್ನು ಮಾಡಲು ಸಾಧ್ಯವೇ ಎಂಬುದು ಅದರ ಸದಸ್ಯರನ್ನು ಮಾತ್ರ ಅವಲಂಬಿಸಿರದೆ ಎರಡು ಪ್ರಮುಖ ಪಕ್ಷಗಳನ್ನು ಮುಖ್ಯವಾಗಿ ಕಾಂಗ್ರೆಸ್ಸನ್ನು ಹಾಗೂ ಇದೇ ರೀತಿ ಪ್ರಬಲವಾಗುತ್ತಿರುವ ಸಮಾಜವಾದಿ ಪಕ್ಷದ ನಿರ್ವಹಣೆಯನ್ನೂ ಆಧರಿಸಿದೆ. ಚೀನಾದಲ್ಲಿ ಸುಧಾರಣೆಗಳನ್ನು ತರುವುದಾಗಿ ಆಶ್ವಾಸನೆ ನೀಡಿ ಕೋಮಿಂಗ್‌ಟಾಂಗ್ ಪಕ್ಷ ಅಧಿಕಾರಕ್ಕೆ ಬಂತು, ಆನಂತರ ರೈತರನ್ನು ದೂರಮಾಡಿತು. ಆಗ ಕಮ್ಯುನಿಸ್ಟರು ಅವರನ್ನು ಗೆದ್ದುಕೊಂಡರು. ಭೂಮಿಯನ್ನು ವಶಪಡಿಸಿಕೊಂಡು ರೈತರಿಗೆ ಅದರ ಮರುಹಂಚಿಕೆ ಮಾಡಿದರು. ಅದೇ ರೀತಿ ರೈತಾಪಿ ಜನರ ಸುಧಾರಣೆಗಳೇ ಭಾರತದ ರಾಜಕೀಯ ಭವಿಷ್ಯದ ಕೀಲಿಕೈ. ರೈತರಿಗೆ ಇರುವುದು ಒಂದೇ ಒಂದು ಸಮಸ್ಯೆ. ಯಾವ ನಾಯಕರು ಅವರ ಭೂ ಸಮಸ್ಯೆಗೆ ಪರಿಹಾರ ಕೊಡುತ್ತಾರೋ ಅಂಥವರನ್ನೆ ರೈತರು ಹಿಂಬಾಲಿಸುತ್ತಾರೆ.

ಸೋಶಿಯಲಿಸ್ಟರು ಅನೇಕ ವಿಷಯಗಳಲ್ಲಿ ಕಮ್ಯುನಿಸ್ಟರನ್ನು ವಿರೋಧಿಸುತ್ತಾರಾದರೂ ಅವರೂ ಸಹ ತೀವ್ರಗತಿಯಲ್ಲಿ ಭೂಸುಧಾರಣೆಯಾಗಬೇಕು ಎಂದೇ ಪ್ರತಿಪಾದಿಸುತ್ತಾರೆ. ಅವರ ಪ್ರಧಾನ ಕಾರ್ಯದರ್ಶಿ ಜಯಪ್ರಕಾಶ ನಾರಾಯಣ್ ನನ್ನೊಂದಿಗೆ ಮಾತನಾಡುತ್ತಾ ಹೀಗೆ ತಿಳಿಸಿದರು "ವಯಸ್ಕ ಮತದಾನ ಹಾಗೂ ಶಾಸನದ ಮೂಲಕ ರೈತರ ಸುಧಾರಣೆಗಳನ್ನು ತರಬೇಕು ಎಂಬುದು ನಮ್ಮ ನಂಬಿಕೆಯಾಗಿದೆಯೇ ಹೊರತು ರಷಿಯಾದಲ್ಲಿ ಆದಂತೆ ಬಲಾತ್ಕಾರದಿಂದಾಗಲೀ ಅಥವಾ ಭಾರತದಲ್ಲಿ ಕಮ್ಯುನಿಸ್ಟರು ಮುಂದೆ ಮಾಡಬಹುದಾದ ರೀತಿಯಲ್ಲಾಗಲೀ ಅಲ್ಲ". ಯಾರ ಬಳಿಯೂ ಇಪ್ಪತ್ತು ಎಕರೆಗಿಂತ ಹೆಚ್ಚಿನ ಭೂಮಿ ಇರತಕ್ಕದ್ದಲ್ಲ. ಯಾವುದೇ ವ್ಯಕ್ತಿ ನಿಜವಾಗಿ ಸುಖದಿಂದ ಬದುಕಲು ಇಷ್ಟು ಭೂಮಿ ಸಾಕು ಎಂದರು. ಇತರರಿಗೆ ಇಪ್ಪತ್ತು ಎಕರೆ ಒದಗಿಸುವುದಕ್ಕಾಗಿ ತನ್ನ ಭೂಮಿಯಲ್ಲಿ ಸ್ವಲ್ಪ ಭಾಗವನ್ನು ಬಿಟ್ಟುಕೊಡುವಂಥ ಸಣ್ಣ ಜಮೀನ್ದಾರರಿಗೆ ಪರಿಹಾರ ನೀಡಬೇಕು. ಆದರೆ ದೊಡ್ಡ ಜಮೀನ್ದಾರರಿಗೆ ನೀಡುವ ಅಗತ್ಯವಿಲ್ಲ ಎಂದು ಅವರು ಹೇಳಿದರು.

ನಲವತ್ತೈದರ ವಯಸ್ಸಿನ ಜಯಪ್ರಕಾಶ ನಾರಾಯಣ್ ಕ್ರಿಯಾಶೀಲ ವ್ಯಕ್ತಿ. ಅವರ ಜನಪ್ರಿಯತೆ ದಿನೇ ದಿನೇ ಹೆಚ್ಚುತ್ತಿದೆ. ಮುಂದೆ ಈತ ಭಾರತದ ಜನನಾಯಕನಾಗಿ ರೂಪುಗೊಳ್ಳುತ್ತಾರೆ ಎಂಬ ವಿಶ್ವಾಸ ಅನೇಕರಲ್ಲಿದೆ. ನಾಲ್ಕು ಅಮೆರಿಕನ್ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾಭ್ಯಾಸ ಮಾಡಿರುವ ಇವರು ಏಳು ವರ್ಷ ಅಮೇರಿಕಾದಲ್ಲಿ ನೆಲೆಸಿದ್ದರು. ಚಿಕಾಗೋದ ಕಬ್ಬಿಣದ ಫೌಂಡ್ರಿಗಳಲ್ಲಿ ಟಿರ್ರಾಕೊಟ್ಟಾ ಕಾರ್ಖಾನೆಯಲ್ಲಿ, ಶಸ್ತ್ರಾಸ್ತ್ರಗಳ ಪ್ಯಾಕಿಂಗ್ ಕಂಪನಿಯಲ್ಲಿ ಅವರು ದುಡಿದಿದ್ದರು.

ಅನೇಕ ವರ್ಷಗಳವರೆಗೆ ಸಮಾಜವಾದೀ ಪಕ್ಷವು ಕಾಂಗ್ರೆಸ್ಸಿನ ಭಾಗವಾಗಿಯೇ ಇತ್ತು. ತೀರಾ ಇತ್ತೀಚೆಗಷ್ಟೇ ಅದು ಕಾಂಗ್ರೆಸ್ಸಿನಿಂದ ಬೇರ್ಪಟ್ಟು ಹೊರಗೆ ಬಂತು. ಹೆಚ್ಚಿನ ಸಂಖ್ಯೆಯ ಎಡಪಂಥೀಯ ಸದಸ್ಯರೆಲ್ಲರೂ ಈ ಪಕ್ಷದೊಂದಿಗೆ ಸೇರಿದರು. ಕಾಂಗ್ರೆಸ್ ಪಕ್ಷ, ಪಟೇಲ್ ಹಾಗೂ ನೆಹರೂ ಅವರು ಕೆಲವು ವಿಧದ ರಾಷ್ಟ್ರೀಕರಣವನ್ನು ಪ್ರತಿಪಾದಿಸುತ್ತಿರುವಾಗ ಸೋಶಿಯಲಿಸ್ಟರು ಹೀಗೆ ಬೇರ್ಪಡಲು ಕಾರಣವೇನು ಎಂದು ಜಯಪ್ರಕಾಶ ನಾರಾಯಣರನ್ನು ಕೇಳಿದೆ.

ಇದಕ್ಕೆ ಅವರು ಹೇಳಿದ್ದು ಹೀಗೆ, "ನಮ್ಮ ಅರ್ಥ ವ್ಯವಸ್ಥೆಯ ಹಳೆಯ ಅಂಗಿಗೆ ತೇಪೆ ಹಾಕಿದರೆ ಸರಿಹೋಗುತ್ತದೆ ಎಂದು ಪಟೇಲರ ನಂಬಿಕೆ. ಪೂರ್ತಿ ಹೊಸ ಅಂಗಿಯನ್ನೇ ಸಿದ್ಧಪಡಿಸಬೇಕು ಎಂಬುದು ನಮ್ಮ ನಂಬಿಕೆ. ನೆಹರೂ ದೊಡ್ಡ ವ್ಯಕ್ತಿಯೇನೋ ಹೌದು. ಆದರೆ ಅವರು ಹಿಂಜರಿಯುತ್ತಾರೆ. ಅವರು ಕಾಂಗ್ರೆಸ್ ಮನಸ್ಸು ಮಾಡಲಿ ಎಂದು ಕಾಯುತ್ತಿದ್ದಾರೆ. ಸರ್ಕಾರದ ಅರ್ಥ ನೀತಿಯನ್ನು ರೂಪಿಸುತ್ತಿರುವುದು ನೆಹರೂ ಅಲ್ಲ. ಅದನ್ನು ನಿಜವಾಗಿ ರೂಪಿಸುತ್ತಿರುವುದು ಪಟೇಲರು".

ಸಾಂಪ್ರದಾಯಿಕ ವ್ಯವಸ್ಥೆಯನ್ನು ಉಳಿಸಿಕೊಂಡು ಬರುವುದರ ಪರವಾಗಿ ನೆಹರೂ ತಾಳಿದ ನಿಲುವು ಮತ್ತು ಸ್ವತಃ ತಾವೇ ಅಷ್ಟೂ ವರ್ಷಗಳಿಂದ ಪ್ರತಿಪಾದಿಸಿಕೊಂಡು ಬಂದ ಕೈಗಾರಿಕೆ ಹಾಗೂ ಕೃಷಿಯ ಸಮಾಜೀಕರಣದ ಯೋಜನೆಗಳನ್ನು ಕೈಬಿಡಲು ಒಪ್ಪಿಕೊಂಡದ್ದು ಸಮಾಜವಾದಿಗಳನ್ನು ಹತಾಶಗೊಳಿಸಿತ್ತು. ರಾಷ್ಟ್ರೀಕರಣವಾದ ಕೈಗಾರಿಕೆಗಳನ್ನು ನಿರ್ವಹಿಸಲು ಅಗತ್ಯವಾದ ತರಬೇತಿ ಪಡೆದ ಸಿಬ್ಬಂದಿಯ ಕೊರತೆ, ತಲತಲಾಂತರದಿಂದ ಎಲ್ಲೆಲ್ಲಿಯೂ ತಾಂಡವವಾಡುತ್ತಿರುವ ಅನಕ್ಷರತೆ ಹಾಗೂ ಇನ್ನೂ ಉಳಿದು ರಾಷ್ಟ್ರದ ಪ್ರಗತಿಗೆ ಕಡಿವಾಣ ಹಾಕುತ್ತಿರುವ ಹಳೆಯ ಫ್ಯೂಡಲಿಸಂನ ಅವಶೇಷಗಳು.... ಇವೇ ಮೊದಲಾದ ಅಗಾಧ ಸಮಸ್ಯೆಗಳು ದೇಶದ ಮುಂದಿರುವುದನ್ನು ಗಮನದಲ್ಲಿಟ್ಟುಕೊಂಡು ಜನರು ಈ ಅಸ್ಥಿರತೆಗಳನ್ನು ಕ್ಷಮಿಸಲು ಸಿದ್ಧರಿದ್ದರು. ನೆಹರೂ ಅವರ ಪ್ರಾಮಾಣಿಕ ಕಾಳಜಿ ಎಲ್ಲರ ಮನಸ್ಸಿಗೂ ತಟ್ಟುವಂಥದ್ದು. "ಜವಹರಲಾಲ್ ಸ್ಫಟಿಕದಂತೆ ಶುದ್ಧ. ಅವರ ಕೈಗಳಲ್ಲಿ ಈ ದೇಶ ಸುರಕ್ಷಿತ" ಎಂದು ನೆಹರೂ ಬಗ್ಗೆ ಗಾಂಧಿ ಹೇಳಿದ ಮಾತುಗಳಲ್ಲಿ ಈ ದೇಶದ ಮಿಲಿಯಾಂತರ ಜನಗಳ ಅಭಿಪ್ರಾಯವೇ ಧ್ವನಿಸಿತ್ತು.

ಭಾರತವು ವಿಶ್ವವೇದಿಕೆ ಪ್ರವೇಶಿಸುತ್ತಿರುವ ಸಂದರ್ಭದಲ್ಲಿ, "ನೆಹರೂ ಏಷಿಯಾದ ಅತಿದೊಡ್ಡ ವ್ಯಕ್ತಿ" ಎಂದು ಭಾರತೀಯರು ಹೇಳುತ್ತಿದ್ದರು. "ಏಷಿಯಾವನ್ನೂ ಬಡನೆಂಟನಂತೆ ಕಾಣುವ ಪ್ರವೃತ್ತಿಯನ್ನು ಪಾಶ್ಚಿಮಾತ್ಯ ಜಗತ್ತು ನಿಲ್ಲಿಸಬೇಕು" ಎಂಬ ನೆಹರೂ ಅವರ ನಿಲುವು ಜನತೆಯ ಹೃದಯವನ್ನು ಗೆದ್ದಿತ್ತು. ತಮ್ಮ ಪ್ರಧಾನಮಂತ್ರಿ ಪೌರ್ವಾತ್ಯ ಹಾಗೂ ಪಾಶ್ಚಾತ್ಯ ಜಗತ್ತುಗಳೆರಡರ ಮನ್ನಣೆಗೆ ಪಾತ್ರವಾಗಿರುವುದು ಇಲ್ಲಿಯ ಜನತೆಗೆ ಅತಿ ಹೆಮ್ಮೆಯ ಸಂಗತಿಯಾಗಿತ್ತು. ನೆಹರೂ ಅವರ ಐರೋಪ್ಯ ಶಿಕ್ಷಣ, ಅನೇಕ ವರ್ಷ ವಿದೇಶದಲ್ಲಿ ನೆಲೆಸಿದ ಅನುಭವ, ಇವರೆಡರ ಜೊತೆ ತನ್ನ ದೇಶವನ್ನು ಕುರಿತ ಆಳವಾದ ಅರಿವುಗಳಿಂದಾಗಿ ಇವರಿಗೆ ಒಂದು ವಿಶಿಷ್ಟವಾದ

ಅಂತರರಾಷ್ಟ್ರೀಯ ಮಟ್ಟದ ವ್ಯಕ್ತಿತ್ವ ಪ್ರಾಪ್ತವಾಗಿತ್ತು. ನೆಹರೂ ಅವರೇ ಹೇಳಿಕೊಳ್ಳುವಂತೆ ತಮ್ಮ "ಪೂರ್ವ ಹಾಗೂ ಪಶ್ಚಿಮದ ವಿಚಿತ್ರ ಮಿಶ್ರಣ" ಕುರಿತು ಅವರ ನಿಕಟ ಮಿತ್ರರು ಪ್ರಿಯವಾಗಿ ಹಾಸ್ಯ ಮಾಡುತ್ತಿದ್ದರು. ಉರ್ದು ಭಾಷೆಯ ಬಹುದೊಡ್ಡ ವಿದ್ವಾಂಸರಾಗಿದ್ದ ಮೌಲಾನಾ ಆಜಾದರು 'ನೆಹರೂ ನಿದ್ದೆಯಲ್ಲೇನಾದರೂ ಮಾತಾಡಿದರೆ ಇಂಗ್ಲಿಷಿನಲ್ಲೇ ಮಾತಾಡುತ್ತಾರೆ' ಎಂದು ಒಮ್ಮೆ ಹೇಳಿದ್ದರು.

ನವದೆಹಲಿಯಲ್ಲಿ ನೆಹರೂ ಅಪೂರ್ವ ಸಮಾವೇಶವೊಂದನ್ನು ಏರ್ಪಡಿಸಿದ್ದರು. ಇದರಲ್ಲಿ ಏಷಿಯಾ ಹಾಗೂ ಪೆಸಿಫಿಕ್ ಪ್ರದೇಶದ ಪೌರ್ವಾತ್ಯ ಶಕ್ತಿಗಳು ಯುರೋಪಿಯನ್ ಪ್ರಾಬಲ್ಯವನ್ನು ಖಂಡಿಸುವುದಕ್ಕಾಗಿ ಮೊತ್ತ ಮೊದಲ ಬಾರಿಗೆ ತಮ್ಮ ಜನಾಂಗೀಯ ಹಾಗೂ ವರ್ಣಭೇದದ ಭಿನ್ನತೆಗಳನ್ನು ಬದಿಗೊತ್ತಿ ಒಂದುಗೂಡಿದ್ದವು. ಯುರೋಪಿಯನ್ನರ ಪ್ರಾಚೀನ ಪರಂಪರೆ ಹಾಗೂ ಪರಿಕಲ್ಪನೆಯ ಭಾಷೆಯನ್ನೇ ಬಳಸಿ ಅವರಿಗೆ ಅರ್ಥ ಮಾಡಿಸುವ ಸಾಮರ್ಥ್ಯ ನೆಹರೂ ಅವರಿಗಿದ್ದುದು ಈ ಸಮಾವೇಶದಿಂದ ಸಾಬೀತಾಯಿತು. ಇಂಡೋನೇಶಿಯನ್ನರಷ್ಟೇ ತೀವ್ರವಾಗಿ ಡಚ್ಚರ ವಿರುದ್ಧ ಹೋರಾಡಿದ ನ್ಯೂಜಿಲೆಂಡ್ ಮತ್ತು ಆಸ್ಟ್ರೇಲಿಯಾ ದೇಶಗಳು ತಮ್ಮ ಹಿತಾಸಕ್ತಿಗಳೇನಿದ್ದರೂ ಸ್ವತಂತ್ರಗೊಂಡ ಏಷಿಯಾದ ಭವಿಷ್ಯವನ್ನೇ ಅವಲಂಭಿಸಿದೆ ಎಂಬುದನ್ನು ಅರ್ಥ ಮಾಡಿಕೊಂಡವು. ಭಾರತದ ವಿಮೋಚನೆಯು ವಸಾಹತುಶಾಹಿಯನ್ನು ಆಫ್ರಿಕಾ ಮತ್ತು ಏಷಿಯಾಗಳೆರಡರಲ್ಲೂ ಅದರ ಕೊನೆಯ ದಿನಗಳಿಗೆ ಮುಟ್ಟಿಸಿತು ಎಂಬ ಸಂಗತಿ ಬೇರೆಲ್ಲರಿಗಿಂತ ಪಂಡಿತ್‌ಜೀಯವರಿಗೆ ಸ್ಪಷ್ಟವಾಗಿ ಅರ್ಥವಾಗಿತ್ತು.

ಆ ಸಂದರ್ಭದಲ್ಲಿದ್ದ ರಾಜಕೀಯ ಹುಚ್ಚಾಟಗಳನ್ನೂ ಮೀರಿ ಇತಿಹಾಸದಲ್ಲಿ ನೆಹರೂ ನಿಸ್ಸಂದೇಹವಾಗಿ ಬಹುದೊಡ್ಡ ವ್ಯಕ್ತಿಯಾಗಿ ಉಳಿಯುತ್ತಾರೆ ಎಂಬುದನ್ನು ನವದೆಹಲಿಯ ಸಮ್ಮೇಳನ ಸ್ಪಷ್ಟಪಡಿಸಿತು. ಅವರು, ವಿಮೋಚಿತ ಏಷಿಯಾದ ವಕ್ತಾರರಾಗಿ ರೂಪುಗೊಂಡಿದ್ದರು. ಗಾಂಧಿಯವರದೂ ಸಹ ವ್ಯಾಪಕವಾಗಿ ಪ್ರಭಾವ ಬೀರಿದ ವ್ಯಕ್ತಿತ್ವ, ಆದರೆ ಅದು ಮೂಲತಃ ಆಸ್ತಿಕತೆಯ, ನೈತಿಕವಾದ ಪ್ರಭಾವ. ಆದರೆ ನೆಹರೂ, ಏಷಿಯಾದ ಮೇಲೆ ಯುರೋಪಿಯನ್ ಪ್ರಾಬಲ್ಯವನ್ನು ಉಚ್ಚಾಟಿಸಿದ ಶಕ್ತಿಗೆ ಪ್ರತೀಕವಾಗಿದ್ದರು. ಫ್ಯೂಡಲಿಸಂನ ಹಿಡಿತದಿಂದ ಹೊರಬಂದು ಆಧುನಿಕ ಕೈಗಾರಿಕಾ ನಾಗರೀಕತೆಯನ್ನು ಪ್ರವೇಶಿಸುತ್ತಿರುವ ಮತ್ತು ಯುರೋಪಿಯನ್ ಪ್ರಭುಗಳನ್ನೂ ಹಾಗೂ ಬೋಧಕರನ್ನೂ ಅವಲಂಬಿಸದಿರುವುದನ್ನು ಕಲಿಯುತ್ತಿರುವ ಒಂದು ಪ್ರಬುದ್ಧ ಏಷಿಯಾವನ್ನು ನೆಹರೂ ಪ್ರತಿನಿಧಿಸುತ್ತಿದ್ದರು.

ಒಂದು ಸಂಜೆ ನೆಹರೂ ಅವರನ್ನು ಭೇಟಿ ಮಾಡಿದಾಗ, "ಭಾರತವು ಪೂರ್ವ ಹಾಗೂ ಪಶ್ಚಿಮಗಳ ಸೇತುವೆಯಿದ್ದಂತೆ" ಎಂಬ ಅವರ ಕಲ್ಪನೆಯನ್ನು ವಿವರಿಸುವಂತೆ ಕೇಳಿದೆ. ನಾನು ಬಳಸಿದ ನುಡಿಗಟ್ಟನ್ನು ತಿದ್ದುತ್ತ ಅವರು ಹೇಳಿದರು "ಭಾರತವು ತನ್ನ ಪ್ರಾಚೀನ ಪರಂಪರೆ ಹಾಗೂ ಆಧುನಿಕ ಜಗತ್ತಿನ ಸೇತುವೆಯಾಗಬಲ್ಲದು. ಹೀಗೆಂದರೆ ಆಧುನಿಕ ಜಗತ್ತಿನ ಒಳ್ಳೆಯದರೆಲ್ಲದರ ಜೊತೆಗೆ ಸೇತುವೆ. ಆದರೆ ಪಶ್ಚಿಮದ ಪ್ರಭಾವದಲ್ಲಿ ನಮ್ಮ ನೆಲೆ ಕಳೆದು ಕೊಳ್ಳುವಂತಾಗುವುದನ್ನು ನಾವು ಬಯಸುವುದಿಲ್ಲ" ಎಂದರು.

ಪಾಶ್ಚಾತ್ಯ ಜಗತ್ತಿನ ಯಾವ ಅಂಶ ನಿಮ್ಮ ಮೇಲೆ ಹೆಚ್ಚು ಪ್ರಭಾವ ಬೀರಿದೆ? ಎಂದು ಕೇಳಿದೆ.

ಒಂದು, ವ್ಯಕ್ತಿ ಸ್ವಾತಂತ್ರ್ಯವನ್ನು ಕುರಿತಂತೆ ಅಲ್ಲಿರುವ ಪರಿಕಲ್ಪನೆ, ಆಧುನಿಕತೆಯ ಸಮಸ್ಯೆ ಏನೆಂದರೆ, ವ್ಯಕ್ತಿ ಸ್ವಾತಂತ್ರ್ಯವನ್ನು ಖಚಿತಪಡಿಸುವುದರ ಜೊತೆಗೇ ಒಂದು ಕೇಂದ್ರೀಕೃತ ನಿರ್ದೇಶನವನ್ನು (Central Direction) ಕಾಪಾಡಿಕೊಂಡು ಬರುವುದು ಹೇಗೆ ಎಂಬುದು. ಇದು ಆಧುನಿಕ ಸಮಾಜಕ್ಕೆ ಬಹಳ ಅಗತ್ಯವಾಗಿರುವಂಥದ್ದು. ಈ ಕೇಂದ್ರೀಕೃತ ನಿರ್ದೇಶನವು ಮಾನವ ಸ್ವಾತಂತ್ರ್ಯಕ್ಕೆ ಸ್ವಲ್ಪ ಮಿತಿ ಇರಬೇಕೆಂದು ಬಯಸುತ್ತದೆ. ವ್ಯಕ್ತಿ ಸ್ವಾತಂತ್ರ್ಯದ ಮೌಲ್ಯವನ್ನು ಗುರುತಿಸುವುದೇ ನಮ್ಮ ಪ್ರಾಚೀನ ಭಾರತೀಯ ಚಿಂತನೆಯ ಹಿನ್ನೆಲೆಯಲ್ಲಿರುವ ಅಂಶ.

ಭಾರತದ ಬೇರುಗಳು ಬಹಳ ಆಳವಾಗಿವೆ. ಭಾರತದ ಬಗ್ಗೆ ಏನೊಂದು ಹೇಳುವುದೂ ಬಹಳ ಕಷ್ಟ. ನನ್ನ ಕೃತಿಯೊಂದರಲ್ಲಿ, ಭಾರತವೆಂದರೆ ಒಂದು palimpsest ನಂತೆ ಎಂದು ಹೇಳಿದ್ದೇನೆ. (ಅಂದರೆ ಒಮ್ಮೆ ಬರೆದದ್ದನ್ನು ಅಳಿಸಿ ಪುನಃ ಅದರ ಮೇಲೆಯೇ ಬರೆಯುವ ಚರ್ಮ ಕಾಗದದಂತೆ) ನಾನಾ ರೀತಿಯ ವಿಚಾರಗಳು, ವಾದಗಳು ಹಾಗೂ ಅಪೇಕ್ಷೆಗಳು ಎಲ್ಲವೂ ಬೆರೆತು ಹೋಗಿವೆ. ದುರ್ಗುಣಗಳು, ಸದ್ಗುಣಗಳು ಬಹುಶಃ ಪ್ರಾಚೀನವಾದ ದೇಶಗಳಲ್ಲೆಲ್ಲ ಸಾಮಾನ್ಯವಾಗಿ ಹೀಗೇ ಇರುತ್ತದೆ. ಆದರೆ ಬೇರೆ ದೇಶಗಳಿಗಿಲ್ಲದ ಭಾರತೀಯ ವೈಶಿಷ್ಟ್ಯ ಏನೆಂದರೆ ಅದರ ಚೈತನ್ಯಶೀಲತೆ. ಈ ಚೈತನ್ಯಶೀಲತೆಯಿಂದ ಯಾವಾಗಲೂ ಒಳ್ಳೆಯದೇ ಆಗುತ್ತದೆ". ಒಂದು ಕ್ಷಣ ತಡೆದು ನೆಹರೂ ಮತ್ತೆ ಹೇಳಿದರು: 'ಕೆಲವು ಸಂದರ್ಭಗಳಲ್ಲಿ ಅದರಿಂದ ಕೆಟ್ಟದ್ದೂ ಆಗುವುದುಂಟು. ಉದಾಹರಣೆಗೆ ಜರ್ಮನಿಯಲ್ಲಿ ಆದಂತೆ'.

ನೆಹರೂ ಅವರ ಫ್ಯಾಸಿಸ್ಟ್ ವಿರೋಧಿ ನೀತಿ ಎಲ್ಲರಿಗೂ ತಿಳಿದದ್ದೇ. ಸ್ಪ್ಯಾನಿಶ್ ಅಂತರ್ಯುದ್ಧದ ಸಂದರ್ಭದಲ್ಲಿ ಅವರು ಬಾರ್ಸಿಲೋನಾದಲ್ಲಿರುವ ರಿಪಬ್ಲಿಕನ್ ಮುಖ್ಯ ಕಛೇರಿಗೆ ಭೇಟಿ ನೀಡಿದ್ದರು. ಆಗ ನಗರದಲ್ಲಿ ಎಲ್ಲೆಲ್ಲಿಯೂ ಬಾಂಬುಗಳ ಧಾಳಿ ನಡೆಯುತ್ತಿತ್ತು. ಅವರು ಒಮ್ಮೆ ರೋಮ್ ಮೂಲಕ ಹೋಗುವಾಗ ಮುಸೋಲಿನಿಯನ್ನು ಭೇಟಿಯಾಗುವ ಆಹ್ವಾನವನ್ನು ತಿರಸ್ಕರಿಸಿದ್ದರು. ಈ ಆಹ್ವಾನವನ್ನು ತಂದವರ ಬಳಿ ಅವರು 'ನನ್ನ ಹಾಗೂ ನಿಮ್ಮ ಸರ್ವಾಧಿಕಾರಿಯ ನಡುವೆ ಸಮಾನವಾದ ಅಂಶಗಳೇನೂ ಇಲ್ಲ' ಎಂದು ಹೇಳಿದ್ದರು.

ಸಂಯುಕ್ತ ಸಂಸ್ಥಾನ ಹಾಗೂ ಸೋವಿಯತ್ ರಿಪಬ್ಲಿಕ್‌ಗಳ ನಡುವಿನ ಘರ್ಷಣೆಯ ಬಗ್ಗೆ ನೀವೇನು ಹೇಳುತ್ತೀರಿ, ಇಲ್ಲಿ ಭಾರತ ಯಾವ ನಿಲುವು ತಾಳುತ್ತದೆ ಎಂದು ನಾನು ಕೇಳಿದೆ.

ಇದು ಬಹಳ ಸೂಕ್ಷ್ಮವಾದ ಪ್ರಶ್ನೆ, ಪ್ರತಿಯೊಂದು ದೇಶವೂ ತನ್ನ ಧೋರಣೆಯ ನೆಲೆಯಲ್ಲಿಯೇ ಯೋಚಿಸುತ್ತದೆ. ಅದು ತನ್ನದೇ ಆದ ನಿಲುವನ್ನು ಹೊಂದಲಾರದಷ್ಟು ದುರ್ಬಲವಾಗಿದ್ದರೆ ಮಾತ್ರ ಯಾವುದಾದರೊಂದು ದೇಶದ ಕಡೆ ವಾಲುತ್ತದೆ. ನಾವು ಇನ್ನೊಂದು ದೇಶದ ಬಲಾತ್ಕಾರಕ್ಕೊಳಗಾಗಿ ಅದರ ಜೊತೆ ಸೇರುವಂಥ ಉದ್ದೇಶವನ್ನೇನೂ ಹೊಂದಿಲ್ಲ.

ಒಂದು ವಿಷಯ ಮಾತ್ರ ಸ್ಪಷ್ಟ, ಭಾರತದ ವಿರುದ್ಧ ಯಾವುದೇ ದೇಶ ಆಕ್ರಮಣ ಮಾಡಲು ಯತ್ನಿಸಿದರೆ ಭಾರತ ಅದನ್ನು ಪ್ರತಿಭಟಿಸುತ್ತದೆ. ಆದರೆ ನಾವು ಯು.ಎಸ್. ಮತ್ತು ಯು.ಎಸ್.ಎಸ್.ಆರ್. ಘರ್ಷಣೆಗೆ ನೇರವಾಗಿ ಸಂಬಂಧಿಸಿಲ್ಲ ಎಂದರು.

ಮೂಲ ಕೈಗಾರಿಕೆಗಳ ಮೇಲೆ ಸರ್ಕಾರದ ನಿಯಂತ್ರಣ ಕುರಿತ ಪ್ರಶ್ನೆಗೆ ನೆಹರು ಹೇಳಿದರು. "ಕೈಗಾರಿಕೆಯ ಮೇಲಿನ ರಚನೆಗಿಂತ ಅದರ ತಳಹದಿ ರಚನೆಯನ್ನು ರಾಷ್ಟ್ರದ ಆಸರೆಯಲ್ಲಿ ಸಮರ್ಥವಾಗಿ ಕಟ್ಟಬಹುದು. ಖಾಸಗಿ ಬಂಡವಾಳವನ್ನು ಹಾಕುವ ವ್ಯಕ್ತಿ ಯಾವುದೇ ಹೊಸಕ್ಷೇತ್ರಕ್ಕೆ ಕೈ ಹಾಕುವ ಅಪಾಯಕ್ಕೆ ಸಿದ್ಧನಿರುವುದಿಲ್ಲ. ಸರ್ಕಾರವು ಮುಂದಿನ ಪೀಳಿಗೆಯ ಬಗ್ಗೆ ಯೋಚಿಸುತ್ತದೆ ಹಾಗೂ ದೇಶದ ಇಡೀ ಮೂಲ ಅಭಿವೃದ್ಧಿಯ ಬಗ್ಗೆ ಚಿಂತಿಸುತ್ತದೆ. ಮುಂದಿನ ಏಳೆಂಟು ವರ್ಷಗಳಲ್ಲಿ ಸಂಪನ್ಮೂಲಗಳ ಉತ್ಪಾದನೆ ಎಷ್ಟು ಹೆಚ್ಚಾಗಿರುತ್ತದೆಂದರೆ ಭಾರತದ ಪ್ರತಿಯೊಂದು ಹಳ್ಳಿಯೂ ವಿದ್ಯುಚ್ಛಕ್ತಿ ಪಡೆಯುತ್ತದೆ".

ಭೂಸುಧಾರಣೆಯ ವಿಷಯವನ್ನು ನಾನು ಪ್ರಸ್ತಾಪಿಸಿದೆ. ಮೊದಲು, ಭೂಮಾಲೀಕ ಶಾಹಿಯನ್ನು ನಿರ್ಮೂಲನಗೊಳಿಸಬೇಕು. ಆಗ ಎಲ್ಲ ಪ್ರಗತಿಯೂ ತಾನಾಗಿಯೇ ಆಗುತ್ತದೆ, ಭಾರತದ ರೈತ ಸಂಪ್ರದಾಯವಾದಿ, ಸಹಕಾರ ಕ್ಷೇತ್ರದಂಥವನ್ನು ಅವನು ಸುಲಭವಾಗಿ ಒಪ್ಪಿಕೊಳ್ಳುವುದಿಲ್ಲ. ನಮ್ಮ ಪ್ರಜಾತಂತ್ರ ಸರ್ಕಾರದಲ್ಲಿ ಯಾರನ್ನೂ ಹಾಗೆ ಒತ್ತಾಯಿಸಲು ಬರುವುದಿಲ್ಲ. ಆದ್ದರಿಂದ ಬೇರೆಯವರು ಅನುಸರಿಸಬಹುದು ಎಂಬ ನಿರೀಕ್ಷೆ ಇಟ್ಟುಕೊಂಡು ಸರ್ಕಾರವು ಬೃಹತ್ ಸಹಕಾರೀ ಪರಿಯೋಜನೆಗಳನ್ನು ಆರಂಭಿಸಬೇಕು. ಹೀಗೆ ನಾವು ಹೊಸ ಭೂಮಿಯನ್ನು ಉಳುಮೆಗೆ ಬಳಸುವುದರಿಂದ ಸಹಕಾರೀ ಯೋಜನೆಗಳನ್ನು ಆರಂಭಿಸುವುದು ಸರ್ಕಾರಕ್ಕೆ ಬಹಳ ಸುಲಭವಾಗುತ್ತದೆ. ಆಗಲೇ ಹೊತ್ತಾಗುತ್ತಿತ್ತು. ಆದರೆ ಅಲ್ಲಿಂದ ಹೊರಡುವ ಮೊದಲು ಪಟೇಲರೊಂದಿಗಿನ ಭಿನ್ನಾಭಿಪ್ರಾಯದ ಬಗ್ಗೆ ನೇರವಾಗಿ ಕೇಳಬೇಕು ಎಂದು ನಿರ್ಧರಿಸಿದೆ.

ಅದಕ್ಕೆ ನೆಹರೂ 'ಸಹಮತಕ್ಕಿಂತ ಭಿನ್ನಾಭಿಪ್ರಾಯಗಳ ತೂಕ ಹೆಚ್ಚೆ? ಎಂಬುದು ಇಲ್ಲಿ ಗಮನಿಸಬೇಕಾದ ಅಂಶ' ಎಂದರು. ಈ ಉತ್ತರ ಒಗಟಿನಂತಿತ್ತು. ಆದರೆ ನಾನು ಪಟ್ಟು ಬಿಡದೆ ಇಬ್ಬರಲ್ಲಿನ ಒಡಕು ತೀವ್ರವಾದರೆ ನೆಹರೂ ರಾಜೀನಾಮೆ ಕೊಡುತ್ತಾರೆಯೇ ಅಥವಾ ಪಟೇಲರ ರಾಜೀನಾಮೆಯನ್ನು ನಿರೀಕ್ಷಿಸುತ್ತಾರೆಯೇ' ಎಂದು ಕೇಳಿದೆ.

ಬಹಳ ಹೊತ್ತಿನವರೆಗೆ ನೆಹರೂ ಮಾತಾಡಲಿಲ್ಲ. ಅಂತಿಮವಾಗಿ ಅವರು ಉತ್ತರಿಸಿದರು. ಇದು ಹಾರಿಕೆಯದಾಗಿರಬಹುದು, ಸರಿ ಉತ್ತರವೇ ಇರಬಹುದು ಅಥವಾ ಭವಿಷ್ಯವು ತಮ್ಮನ್ನು ಅಥವಾ ಪಟೇಲರನ್ನು ಮೀರಿದ ಬೇರೆ ಯಾವುದೋ ಶಕ್ತಿಯ ಪ್ರಭಾವದಿಂದ ನಿರ್ಧಾರಿತ ವಾಗುತ್ತದೆ ಎಂಬ ಸೂಚನೆಯೂ ಇರಬಹುದು. 'ಭಾರತವು ತುಂಬ ಚಲನಶೀಲ ಸ್ಥಿತಿಯಲ್ಲಿದೆ. ಇದೊಂದು ಸ್ಥಿತ್ಯಂತರದ ಘಟ್ಟ, ಈ ಚೈತನ್ಯಶೀಲತೆ ಕೆಲವೊಮ್ಮೆ ತಪ್ಪಾಗಿರಬಹುದು. ಆದ್ದರಿಂದಲೇ ಭವಿಷ್ಯವನ್ನು ಅಂದಾಜು ಮಾಡುವುದು ಕಷ್ಟ ಎಂದರು.

ನಾನು ಇನ್ನು ಕೆಲವೇ ದಿನಗಳಲ್ಲಿ ಭಾರತವನ್ನು ಬಿಡುವ ಯೋಚನೆಯಲ್ಲಿದ್ದುದರಿಂದ ಅವರಿಗೆ ಅಂತಿಮ ಗುಡ್‌ಬೈ ಹೇಳಿದೆ. ಪಂಡಿತ್‌ಜೀ ನನಗೊಂದು ಪುಸ್ತಕ ಕೊಟ್ಟರು. ಅವರು ಪುಸ್ತಕದಲ್ಲಿ ಹೆಸರು ಬರೆಯುತ್ತಿರುವಾಗ 'ನಾನು ಅಮೆರಿಕೆಗೆ ಹೋದಮೇಲೆ ಉಪನ್ಯಾಸಗಳನ್ನು ನೀಡುತ್ತೇನೆ. ಶ್ರೋತೃಗಳು ಕೇಳಿದ ಪ್ರಶ್ನೆಗಳಿಗೆ ಉತ್ತರ ಕೊಡುವುದು ಇತ್ತೀಚಿನ ದಿನಗಳಲ್ಲಿ ತುಂಬ ಕಷ್ಟವಾಗುತ್ತಿದೆ. ದಿನೇ ದಿನೇ ಜಗತ್ತು ಬದಲಾಗುತ್ತಿರುವಾಗ, ಸಾಮಾನ್ಯವಾಗಿ ಎಲ್ಲರೂ ಕೇಳುವ 'ನಾವು ಏನು ಮಾಡಬೇಕು' ಎಂಬ ಪ್ರಶ್ನೆಗೆ ಉತ್ತರ ಕೊಡುವುದು ಎಷ್ಟು ಕಷ್ಟ" ಎಂದು ಹೇಳಿದೆ.

ನೆಹರೂ ಪುಸ್ತಕದಿಂದ ತಲೆ ಎತ್ತಿ "ನೋಡಿ ಇದೇ ವ್ಯತ್ಯಾಸ. ನಮ್ಮ ಹಾಗೂ ಪಾಶ್ಚಾತ್ಯ ಚಿಂತನೆಯಲ್ಲಿರುವ ವ್ಯತ್ಯಾಸವೇನೆಂದರೆ ಭಾರತೀಯನು ತಾನು ಏನು ಮಾಡಬೇಕು ಎಂದು ಕೇಳುವುದಿಲ್ಲ. ಬದಲಾಗಿ ತಾನು ಏನಾಗಬೇಕು ಎಂದು ಕೇಳುತ್ತಾನೆ" ಎಂದರು.

ಪುನಃ ಅವರು ಪುಸ್ತಕದತ್ತ ಬಾಗಿದರು. ತಮ್ಮ ಹೆಸರಿನ ಸಹಿ ಹಾಕಿ ದಿನಾಂಕ ಬರೆದು ನನ್ನ ಕೈಗೆ ಕೊಟ್ಟರು. 'ನಾವು ಏನಾಗಬೇಕು ಎಂಬ ಪ್ರಶ್ನೆಯನ್ನು ಶತಶತಮಾನಗಳಿಂದಲೂ ಕೇಳಿಕೊಳ್ಳುತ್ತಲೇ ಇದ್ದೇವೆ. ನನಗನ್ನಿಸುತ್ತದೆ, ಸ್ವತಂತ್ರವಾಗಿರುವ ನವಭಾರತದಲ್ಲಿ 'ನಾವು ಏನು ಮಾಡಬೇಕು' ಎಂಬ ಹೊಸ ಪ್ರಶ್ನೆಯನ್ನು ನಮಗೆ ನಾವೇ ಕೇಳಿಕೊಳ್ಳಬೇಕಾದ ಕಾಲ ಈಗ ಬಂದಿದೆ' ಎಂದು ಮಾತು ಮುಗಿಸಿದರು.

❑

ಅಧ್ಯಾಯ ೧೭

ಗಾಂಧೀಜಿಯವರೊಂದಿಗೆ

ಆಟೋಗ್ರಾಫ್ ಸಂಗ್ರಹಿಸುವ ಗೀಳು ನನಗಿರಲಿಲ್ಲ. ಆದರೂ ಮಹಾತ್ಮಾ ಗಾಂಧಿಯವರ ವಿಷಯಕ್ಕೆ ಬಂದಾಗ ಅದೇ ಬೇರೆ. ನನಗೆ ಗಾಂಧಿಯವರ ಹಸ್ತಾಕ್ಷರ ಬೇಕಿತ್ತು. ಅದೂ ನಾನು ಅಷ್ಟೆಲ್ಲ ಕಷ್ಟಪಟ್ಟು ತೆಗೆದಿದ್ದ ಅವರ ಫೋಟೋಗ್ರಾಫ್‌ಗಳ ಮೇಲೆಯೇ ಗಾಂಧಿಯವರ ಆಟೋಗ್ರಾಫ್ ಕೇಳುವ ಹೊತ್ತಿಗೆ ನಾನು ಭಾರತದಿಂದ ವಾಪಸ್ಸು ಹೋಗಲು ಇನ್ನು ಕೇವಲ ಒಂದೇ ಒಂದು ದಿನ ಮಾತ್ರ ಬಾಕಿ ಉಳಿದಿತ್ತು. ಗಾಂಧಿಯವರ ಮುಂದೆ ಅವರ ಫೋಟೋಗ್ರಾಫ್‌ಗಳನ್ನಿಟ್ಟು ಹಸ್ತಾಕ್ಷರ ಕೇಳಿದೆ. ಪ್ರತಿಯೊಂದಕ್ಕೂ ಐದೈದು ರೂಪಾಯಿ ಕೊಡಬೇಕಾಗುತ್ತೆ ಎಂದರು ಗಾಂಧಿ. ನಾನು ಮರುಮಾತಾಡದೆ ಪರ್ಸ್‌ನಿಂದ ಹತ್ತು ರೂಪಾಯಿಯ ನೋಟು ತೆಗೆದು ಅವರ ಚರಕಾ ಬಳಿ ಇಟ್ಟೆ. ಗಾಂಧಿಯವರು ತಮ್ಮ ಕಡ್ಡಿಯಂತಹ ಬೆರಳುಗಳಿಂದ ಹಿಂದಿ ಮತ್ತುಇಂಗ್ಲಿಷ್‌ಗಳೆರಡರಲ್ಲೂ M.K.ಗಾಂಧಿ ಎಂದು ಸಹಿ ಮಾಡಿದರು. ಮತ್ತು ಜನವರಿ ೨೯, ೧೯೪೮ ಎಂದು ದಿನಾಂಕವನ್ನು ಬರೆದರು. ಆಮೇಲೆ ಮುಖವೆತ್ತಿ ನನ್ನ ಕಡೆ ನೋಡುತ್ತಾ "Do you know what is for the ten rupees" ಎಂದರು. ಗಾಂಧಿಯವರ ಇಂಗ್ಲಿಷ್ ಅತ್ಯಂತ ಸುಂದರ. ಅವರ ಪದಸಂಪತ್ತು ವೈವಿಧ್ಯಮಯ. ಅದರಲ್ಲಿ ತಮಗೇ ವಿಶಿಷ್ಟವಾದ ಕೆಲವೊಂದು ವ್ಯತ್ಯಾಸಗಳನ್ನು ಮಾಡುತ್ತಿದ್ದರು. ಗಾಂಧಿಯವರ ಪ್ರಶ್ನೆಗೆ ನಾನು ಉತ್ತರವನ್ನು ಊಹಿಸಿ ಹೇಳಿದೆ.

"ಅದು ಹರಿಜನ ನಿಧಿಗೆ"

"ಹರಿಜನ್ ಎಂದರೆ ಏನು ಗೊತ್ತಾ" ಅಂದರು. ನನಗೆ ಗೊತ್ತು ಎಂದೆ. ಆದರೆ ನನಗೆ ಗೊತ್ತಿಲ್ಲ ಎಂದು ಹೇಳಿದ್ದರೆ? "ಇದರ ಅರ್ಥ ತಿಳಿಯಲು ಕಿಂಗ್ಸ್‌ವೇಯಂಥ ಆಧುನಿಕ ರಸ್ತೆಗೆ ಹೋದರೆ ಗೊತ್ತಾಗುವುದಿಲ್ಲ. ಕೊಳಕಿನಲ್ಲಿ ಬದುಕುವ ಹರಿಜನರ ಬಸ್ತಿಗಳಿಗೆ ಹೋಗಬೇಕು" ಅಂದರು. ದಕ್ಷಿಣ ಭಾರತದ ಸುಣ್ಣದ ಗುಂಡಿಗಳಲ್ಲಿ ನಾನು ನೋಡಿದ್ದ ಹರಿಜನರ ವಿಷಯವನ್ನು ಹೇಳಿದೆ. "ಒಂದು ಕಡೆ ಟ್ಯಾನರಿಗಳ ಮಾಲೀಕರು ಸಂಪತ್ತನ್ನು ಹೆಚ್ಚಿಸಿಕೊಳ್ಳುತ್ತಾ ಇದ್ದಾರೆ. ಆದರೆ ಅವರಿಗಾಗಿ ಕೆಲಸ ಮಾಡುವ ಅಸ್ಪೃಶ್ಯರು ಅನಾರೋಗ್ಯಕರವಾದ ದರಿದ್ರಾವಸ್ಥೆಯಲ್ಲಿ ಬದುಕುತ್ತಿದ್ದಾರೆ. ಈ ಸ್ಥಿತಿ ಸರಿಯಾಗಬೇಕಾದರೆ ಏನು ಮಾಡಬೇಕು" ಎಂದು ಕೇಳಿದೆ.

"ಹೀಗೆ ತಮ್ಮನ್ನು ಅಧೋಗತಿಗೆ ಇಳಿಸಿಕೊಂಡಿರುವ ಟ್ಯಾನರಿ ಮಾಲೀಕರು ತಮ್ಮಂತೆಯೇ ಇತರರು ಎಂದು ಭಾವಿಸುವುದನ್ನು ಕಲಿತುಕೊಳ್ಳಬೇಕು. ಮಾಲಿಕರು ತಮ್ಮನ್ನು ನೋಡಿ ಕೊಳ್ಳುವಂತೆಯೇ ಹರಿಜನ ಕಾರ್ಮಿಕರನ್ನೂ ನೋಡಿಕೊಂಡಾಗ...." ಎಂದು ಗಾಂಧಿ ಹೇಳಿದ

ಮಾತಿನಲ್ಲಿ ಅವರು ಯಾವಾಗಲೂ ಹೇಳುವ Trusteeshipನ ಅರ್ಥ ಧ್ವನಿಸಿತ್ತು. ಕೂಡಲೇ ನನ್ನನ್ನು ಹಲವಾರು ತಿಂಗಳುಗಳಿಂದ ಕಾಡಿಸುತ್ತಿದ್ದ ಪ್ರಶ್ನೆಗಳೆಲ್ಲ ಒಟ್ಟಿಗೇ ನುಗ್ಗಿದವು. ನಾನು ಅಮೆರಿಕಕ್ಕೆ ಹೋಗುವ ಮೊದಲು ಈ ಪ್ರಶ್ನೆಗಳಿಗೆ ಉತ್ತರ ಪಡೆಯಲೇಬೇಕೆಂದು ನಿರ್ಧರಿಸಿದೆ. ನಾಳೆ ಭಾರತದಲ್ಲಿ ನನ್ನ ಕೊನೆಯ ದಿನ ಎಂದು ಗಾಂಧಿಗೆ ತಿಳಿಸಿದೆ. ನಾನು ಭಾರತದ ಬಗ್ಗೆ ಒಂದು ಪುಸ್ತಕ ಬರೆಯುತ್ತಿರುವುದಾಗಿಯೂ ಅದಕ್ಕಾಗಿ ನಾನು ನನ್ನ ದೇಶಕ್ಕೆ ಹೋಗುವ ಮೊದಲು ಅವರೊಂದಿಗೆ ಕೆಲವು ಮಾತುಗಳನ್ನು ಆಡಬೇಕಿದೆ ಎಂದು ತಿಳಿಸಿದೆ. "ನೀನು ಎಷ್ಟು ದಿನದಿಂದ ಈ ಪುಸ್ತಕ ಬರೆಯುತ್ತಿದ್ದಿ" ಎಂದು ಗಾಂಧಿ ಕೇಳಿದರು. ಈಗಾಗಲೇ ಎರಡು ವರ್ಷಗಳಿಂದ ಎಂದಾಗ "ಅಮೆರಿಕನ್ ಪ್ರಜೆ, ಎರಡು ವರ್ಷದಿಂದ ಒಂದೇ ಪುಸ್ತಕ? ಬಹಳ ದೀರ್ಘವಾಯಿತು" ಎಂದು ಜೋರಾಗಿ ನಕ್ಕರು. ಅನಂತರ ಗಂಭೀರವಾಗಿ ಕೇಳಿದರು - "ಇದಕ್ಕೆ ಮೊದಲು ಒಬ್ಬ ಅಮೆರಿಕನ್ ಮಹಿಳೆ ಪುಸ್ತಕ ಬರೆಯುವುದಕ್ಕಾಗಿ ನನ್ನ ಸಂದರ್ಶನ ಮಾಡಿದ್ದಳು. ಮಿಸ್ ಮೇಯೋ. ಆಕೆ ನಿನಗೆ ಗೊತ್ತಾ" ಎಂದರು. ನನಗೆ ಗೊತ್ತಿತ್ತು. ಅಷ್ಟೇ ಅಲ್ಲ ನಾನು ಹೋದ ಕಡೆಯಲ್ಲೆಲ್ಲ ಆಕೆಯ ಭೂತ ನನ್ನನ್ನು ಕಾಡಿತ್ತು. ಆಕೆ ಬರೆದ Mother Indiaದಲ್ಲಿ ಅರ್ಧ ಸತ್ಯಗಳು ಹಾಗೂ ತಪ್ಪು ಮಾಹಿತಿಗಳು ತುಂಬಿದ್ದವು. ಇದರ ಬಗ್ಗೆ ಭಾರತದಲ್ಲಿ ಎಷ್ಟು ವಿರೋಧ ವ್ಯಕ್ತವಾಗಿತ್ತೆಂದರೆ ಏನೂ ಓದೂ ಬರಹ ಗೊತ್ತಿಲ್ಲದ ಹಳ್ಳಿಗೆ ಹೋದಾಗಲೂ ಅದರ ಅಪಕೀರ್ತಿ ನನ್ನ ಬೆನ್ನಟ್ಟಿ ಬಂದಿತ್ತು. ಸಹಜವಾಗಿಯೇ ಅಮೆರಿಕನ್ ಮಹಿಳೆ ಎಂಬ ಕಾರಣಕ್ಕಾಗಿ ನನಗೂ ಆಕೆಗೂ ಸಂಬಂಧ ಕಲ್ಪಿಸುತ್ತಿದ್ದರು. ನಾನು ಅಮೆರಿಕನ್ ಹೆಣ್ಣಾದ್ದಕ್ಕಾಗಿ ಭಾರತದಲ್ಲಿ ಅನುಭವಿಸಿದ ಏಕೈಕ ಅನಾನುಕೂಲತೆ ಇದೊಂದೆ. ಒಂದು ಸಲ ಗುಡ್ಡಗಾಡು ಜನರಿರುವ ಪ್ರದೇಶವೊಂದಕ್ಕೆ ಹೋದಾಗ ಅಲ್ಲಿನ ಮೂಲನಿವಾಸಿಗಳೆಲ್ಲ ನನ್ನನ್ನು ಸುತ್ತುವರೆದರು. ಮೇಯೋ ಬರೆದಂಥ ಪುಸ್ತಕವನ್ನು ನೀವು ಬರೆಯಲಿಕ್ಕಿಲ್ಲ ಎಂದುಕೊಂಡಿದ್ದೇವೆ ಎಂದು ಅಂದರು.

"ಆಕೆಗೆ ನನ್ನನ್ನು ಉಲ್ಲೇಖಿಸುವ ಹಕ್ಕಿದೆ. ಆದರೆ ತಪ್ಪಾಗಿ ಉಲ್ಲೇಖಿಸುವುದಕ್ಕಲ್ಲ" ಎಂದು ಗಾಂಧಿ ಹೇಳಿದರು. "ನನ್ನ ಮಾತುಗಳ್ನು ನೀನು ಸರಿಯಾಗಿ ವರದಿ ಮಾಡುತ್ತೀಯಾ ಎಂದು ನಂಬಬಹುದೆ ಎಂದು ನಮ್ರವಾಗಿ ಕೇಳಿದರು. ಖಂಡಿತವಾಗಿ ನಂಬಬಹುದು" ಎಂದು ಹೇಳಿದೆ. ನಾನು ನನ್ನದೇ ಆದ ಅಬ್ರಿವಿಯೇಶನ್‌ಗಳನ್ನು ಬಳಸಿ ಬೇಗಬೇಗ ಬರೆದುಕೊಂಡಿದ್ದ ನೋಟ್‌ಬುಕ್ಕನ್ನು ಅವರಿಗೆ ತೋರಿಸಿದೆ. "ಒಬ್ಬ ವ್ಯಕ್ತಿ ಹೇಳಿದ್ದನ್ನು ನಾನು ಫೋಟೋಗ್ರಾಫ್‌ನಷ್ಟೇ ಯಥಾವತ್ತಾಗಿ ದಾಖಲು ಮಾಡುತ್ತೇನೆ. ಅವರು ಹೇಳಿದ ಪದಗಳನ್ನು ಹಾಗೆ ಹಾಗೇ ದಾಖಲಿಸುತ್ತೇನೆ" ಎಂದೆ.

"ಪ್ರಾಮಿಸ್" ಎಂದರು ಗಾಂಧಿ. "ಪ್ರಾಮಿಸ್" ಎಂದು ನಾನು ಭರವಸೆ ನೀಡಿದೆ.

ಮಾರನೇ ದಿನ ಬಿರ್ಲಾ ಭವನದ ಕಡೆ ಹೊರಟೆ. ಭಾರತದಲ್ಲಿ ನನ್ನ ವಾಸ್ತವ್ಯದ ಕೊನೇ ದಿನ ನಾನು ಗಾಂಧಿಯವರ ಸಂದರ್ಶನ ಮಾಡುತ್ತಿದ್ದೆ. ಈ ಅಂತಿಮ ದಿನ ಇದಕ್ಕಿಂತ ಹೆಚ್ಚು ರೋಚಕವಾಗಿರಲು ಸಾಧ್ಯವಿರಲಿಲ್ಲ. ಗಾಂಧೀಜಿ ತಮ್ಮ ಇತ್ತೀಚಿನ ಉಪವಾಸದಿಂದ ನಿಧಾನವಾಗಿ

ಚೇತರಿಸಿಕೊಳ್ಳುತ್ತಿದ್ದರು. ಅವರು ಸಂದರ್ಶನ ನೀಡುವ ಸ್ಥಿತಿಯಲ್ಲಿದ್ದಾರೋ ಇಲ್ಲವೋ ಎಂಬ ಬಗ್ಗೆ ನನಗೆ ಕೊನೇ ಘಳಿಗೆಯವರೆಗೆ ಖಾತರಿ ಇರಲಿಲ್ಲ. ವಾಸ್ತವವಾಗಿ ಭಾರತದಲ್ಲಿ ಇದು ನನ್ನ "ಎರಡನೆಯ ಕೊನೇ ದಿನ"ವಾಗಿತ್ತು. ಎರಡೂವರೆ ವಾರಗಳ ಹಿಂದೆ ಅಮೆರಿಕಾಕ್ಕೆ ಹಿದಿರುಗಲು ನಾನು ವಿಮಾನಕ್ಕೆ ಬುಕ್ ಮಾಡಿಸಿದ್ದೆ. ನಾನು ಹೊರಡುವ ಹಿಂದಿನ ರಾತ್ರಿ ಗಾಂಧಿಯವರ ಉಪವಾಸದ ನಿರ್ಧಾರ ಪ್ರಕಟವಾಯಿತು. ಇಂಥ ಸಂದರ್ಭವನ್ನು ತಪ್ಪಿಸುವುದು ಸರಿಯಲ್ಲ ಎಂದು ತಕ್ಷಣವೇ ನನ್ನ ಪ್ರವಾಸವನ್ನು ರದ್ದುಪಡಿಸಿದ್ದೆ.

ಬಿರ್ಲಾ ಭವನದ ಹಿಂಭಾಗದಲ್ಲಿರುವ ತೋಟದ ಭಾಗಕ್ಕೆ ನಾನು ಬಂದಾಗ ಗಾಂಧಿಯವರು ಬಿಸಿಲು ಬೀಳುವ ಕಡೆ ಮಂಚದ ಮೇಲೆ ಕೂತಿದ್ದರು. ಇಷ್ಟು ತೀವ್ರ ಉಪವಾಸದ ನಂತರವೂ ಅವರ ಲವಲವಿಕೆಯನ್ನು ನೋಡಿ ನನಗೆ ಆಶ್ಚರ್ಯವಾಯಿತು. ನಾನು ಅವರನ್ನು ಕೇಳಬೇಕಾದ ಮೊದಲ ಪ್ರಶ್ನೆಯನ್ನು ಈ ವಿಷಯದಿಂದಲೇ ಆರಂಭಿಸುತ್ತೇನೆ ಎಂದುಕೊಂಡೆ. ಅವರು ತಮ್ಮ ಮುಂದಿದ್ದ ಚರಾಕವನ್ನು ಸರಿಯಾಗಿಟ್ಟುಕೊಂಡು ಕೂರುವ ತನಕ ನಾನು ಮಾತಾಡದೆ ಮೌನವಾಗಿ ಅವರನ್ನು ಗಮನಿಸುತ್ತ ಕುಳಿತೆ. ಅವರು ಚರಕಾದ ಪಕ್ಕದಲ್ಲಿ ಒಂದು ನೀಲಿ ಕಾಗದ ಹರಡಿಟ್ಟರು. ಅದು ಹಿಂಜಿದ ಹತ್ತಿಯನ್ನು ಇಡಲು. ಸ್ವಲ್ಪ ಹತ್ತಿಯನ್ನು ಕೈಗೆ ತೆಗೆದುಕೊಂಡು ಅದನ್ನು ನಾಲ್ಕು ಸಮಾನಾಂತರ ಎಳೆಗಳಾಗಿ ಎಳೆದರು. ತಲೆಯ ಮೇಲೆ ಒಂದು ಸ್ಟ್ರಾಹ್ಯಾಟ್ ಹಾಕಿಕೊಂಡು ಅದರ ಪಟ್ಟಿಯನ್ನು ಗಲ್ಲದ ಬಳಿ ಕಟ್ಟಿಕೊಂಡರು. ಆಗ ನಾನು ನನ್ನ ಮೊದಲ ಪ್ರಶ್ನೆ ಕೇಳಿದೆ. ಆ ಸಂದರ್ಭಕ್ಕೆ ಆ ಪ್ರಶ್ನೆ ತುಂಬ ಸಿಲ್ಲಿಯಾಯಿತೇನೋ ಅನ್ನಿಸಿತ್ತು. ಆದರೆ ಈಗ ಹಾಗನ್ನಿಸುತ್ತಿಲ್ಲ. "ನಾನು ನೂರಾ ಇಪ್ಪತ್ತೈದು ವರ್ಷ ಬದುಕುತ್ತೀನಿ ಎಂದು ನೀವು ಯಾವಾಗಲೂ ಹೇಳುತ್ತಿರುತ್ತೀರಿ. ಯಾವ ಭರವಸೆಯಿಂದ ಹಾಗೆ ಹೇಳುತ್ತೀರಿ" ಎಂದೆ. ಈ ಪ್ರಶ್ನೆಗೆ ಗಾಂಧಿಯವರು ನೀಡಿದ ಉತ್ತರಕ್ಕೆ ನಾನು ಬೆಚ್ಚಿಬಿದ್ದೆ. ಅವರು ಹೇಳಿದರು "I have lost the hope". ಯಾಕೆ ಹೀಗೆ ಎಂದು ಕೇಳಿದೆ. ಗಾಂಧಿ ಹೇಳಿದರು - "ಯಾಕೆಂದರೆ ಈ ಜಗತ್ತಿನಲ್ಲಿ ಏನೇನೋ ಭಯಂಕರವಾದುದೆಲ್ಲಾ ಆಗುತ್ತಿದೆ. ಅಂಧಕಾರ, ಹುಚ್ಚಾಟಗಳು ತುಂಬಿದ ಈ ಜಗತ್ತಿನಲ್ಲಿ ನಾನು ಬದುಕಲು ಇಷ್ಟಪಡುವುದಿಲ್ಲ. ನನಗೆ ಬದುಕುವ ಆಸೆಯಿಲ್ಲ" ಎಂದರು. "ಆದರೆ ನನ್ನ ಸೇವೆ ಅಗತ್ಯವಾದರೆ ಅಥವಾ ಆ ರೀತಿ ನನಗೆ ಅಪ್ಪಣೆಯಾದರೆ ನಾನು ನೂರಾ ಇಪ್ಪತ್ತೈದು ವರ್ಷ ಇರುತ್ತೇನೆ" ಎಂದರು. ಹೀಗೆ ಹೇಳಿ ಲಯಬದ್ಧವಾಗಿ ಚರಕಾ ಕೆಲಸ ಮುಂದುವರೆಸಿದರು.

ನಾನು ಈಗ ಟ್ರಸ್ಟೀಶಿಪ್‌ನ ಪ್ರಶ್ನೆಯನ್ನು ಕೈಗೆತ್ತಿಕೊಂಡೆ. ಭಾರತ ಈಗಷ್ಟೇ ಸ್ವಾತಂತ್ರ್ಯ ಗಳಿಸಿದ್ದು ಈ ದೇಶವನ್ನು ಹೇಗೆ ಬೇಕೋ ಹಾಗೆ ರೂಪಿಸುವ ಅವಕಾಶವಿರುವುದರಿಂದ ಈ ಸಂದರ್ಭಕ್ಕೆ ಈ ಪ್ರಶ್ನೆ ಸೂಕ್ತ ಎನ್ನಿಸಿತು. "ನಿಮ್ಮ ದೃಷ್ಟಿಯಲ್ಲಿ ಉತ್ತಮ ಟ್ರಸ್ಟಿ ಯಾರು" ಎಂದು ಕೇಳಿದೆ.

"ಯಾರು ಟ್ರಸ್ಟಿಶಿಪ್‌ನ ತತ್ವವನ್ನು ಅಕ್ಷರಶಃ ಪಾಲಿಸುತ್ತಾರೋ ಮತ್ತು ಆ ಮನೋಭಾವಕ್ಕೆ ಅನುಗುಣವಾಗಿ ನಡೆದುಕೊಳ್ಳುತ್ತಾರೋ ಅವರು" ಎಂದರು ಗಾಂಧಿ.

"ಭಾರತದ ಕೈಗಾರಿಕೋದ್ಯಮಿಗಳಲ್ಲಿ ನಿಮ್ಮ ಪ್ರಕಾರ ಯಾರು ಆ ರೀತಿ ನಡೆದು ಕೊಳ್ಳುತ್ತಿದ್ದಾರೆ" ಎಂದು ಕೇಳಿದೆ.

"ನನಗೆ ಗೊತ್ತಿರುವವರಲ್ಲಿ ಯಾರೂ ಆ ಪ್ರಕಾರ ಇಲ್ಲ ಎಂದರು. ನಿಮ್ಮ ಟ್ರಸ್ಟೀಶಿಪ್ ಆದರ್ಶಕ್ಕನುಗುಣವಾಗಿ ನಡೆದುಕೊಳ್ಳುವಂಥವರೊಬ್ಬರು ರೂಪುಗೊಳ್ಳಲು ಇನ್ನೂ ಎಷ್ಟು ಕಾಲ ಬೇಕು ಎಂಬ ಪ್ರಶ್ನೆಗೆ "ಭವಿಷ್ಯದಲ್ಲಿರುವುದು ಯಾರಿಗೆ ಗೊತ್ತು?" ಎಂದರು. ಆದರೆ ಈ ಉತ್ತರದಿಂದ ನನಗೆ ಸಮಾಧಾನವಾಗಲಿಲ್ಲ. ಈ ತತ್ವದ ಪ್ರಯೋಜನ ಪಡೆದುಕೊಳ್ಳಲು ಸಾವಿರಾರು ಜನ ದೀರ್ಘಕಾಲದಿಂದ ಕಾಯುತ್ತಿದ್ದಾರೆ. ಇಂತಹ ಒಂದು ಆದರ್ಶವನ್ನು ಸ್ಪಷ್ಟವಾಗಿ ವಿವರಿಸದೆ ಸುಂದರವಾದ ಮಾತುಗಳ ಹಿಂದೆ ತಲೆಮರೆಸಿಕೊಳ್ಳುವುದು ಸರಿಯಲ್ಲ ಎಂದು ಪ್ರತಿಭಟಿಸಿದೆ.

"ನೋಡಿ, ನಿಮ್ಮ ಸಮೀಪವರ್ತಿಗಳಲ್ಲಿ ಯಾರಾದರೊಬ್ಬರು, ನಾನು ಟ್ರಸ್ಟಿಯಾಗಬೇಕು ಎಂದು ನಿಮ್ಮ ಹತ್ತಿರ ಹೇಳಿದರೆ ನೀವು ಅವರಿಗೆ ಏನು ಹೇಳುತ್ತೀರಿ" ಎಂದು ಕೇಳಿದೆ.

ಅದಕ್ಕೆ ಗಾಂಧಿಯವರು "ಹಾಗೆ ನೋಡುವುದಾದರೆ ಹೆಚ್ಚು ದೂರ ಹೋಗುವ ಅಗತ್ಯವಿಲ್ಲ. ಈ ಭವನದ ಮಾಲೀಕರೇ ಇದ್ದಾರೆ. ಆತ ಟ್ರಸ್ಟಿಯಾಗುವ ಬಯಕೆ ಹೊಂದಿದ್ದಾರೆ. ಅವರೊಬ್ಬರೇ ಅಲ್ಲ. ನಾನು ಹೇಳಿದ ಅರ್ಥದಲ್ಲಿ ನಡೆದುಕೊಳ್ಳಲು ಅನೇಕರು ಪ್ರಯತ್ನಿಸುತ್ತಿದ್ದಾರೆ. ಅವರು ನನಗೆ ಮೋಸಮಾಡುವುದಿಲ್ಲ ಎಂದು ಆಶಿಸುತ್ತೇನೆ." ಇದ್ದಕ್ಕಿದ್ದಂತೆ ಚರಕಾ ತಿರುವುಗುವುದು ನಿಂತಿತು. ಗಾಂಧಿ ಮೌನ ತಾಳಿದರು. ಅನಂತರ ತುಂಬ ನಿಧಾನವಾಗಿ, ಬಹಳ ಕಾಲದಿಂದ ಮುಚ್ಚಿಯೇ ಇದ್ದ ಬಾಗಿಲನ್ನು ತೆಗೆಯುತ್ತಿರುವ ಹಾಗೆ ಅವರು ಹೇಳಿದರು "ಬಿರ್ಲಾ ನನಗೆ ಮೋಸ ಮಾಡುತ್ತಿದ್ದಾರೆ ಎಂದೇನಾದರೂ ಗೊತ್ತಾದ ಒಂದು ಕ್ಷಣವೂ ಅವರ ಮನೆಯಲ್ಲಿ ನಾನಿರುವುದಿಲ್ಲ. ಬಿರ್ಲಾ ಹೇಳುವುದರಲ್ಲಿ ನನಗೆ ವಿಶ್ವಾಸವಿರುವುದರಿಂದ ನಾನು ಇಲ್ಲಿದ್ದೇನೆ. ಅವರು ನನಗೆ ತುಂಬ ಸಮಯದಿಂದ ಗೊತ್ತು." ಅನ್ನುತ್ತಾ ಒಂದು ಎರಡು ಎಂದು ಲೆಕ್ಕ ಹಾಕಿ "ಮೂವತ್ತೆರಡು ವರ್ಷಗಳಿಂದ ನನ್ನ ಜೊತೆಗಿದ್ದಾರೆ. ಅವರು ವಂಚಿಸುತ್ತಾರೆ ಎಂದು ನನಗನ್ನಿಸಿಲ್ಲ" ಎಂದರು. ಬಿರ್ಲಾ ಬಗ್ಗೆ ಇಷ್ಟೆಲ್ಲಾ ಹೇಳಿದ್ದಕ್ಕಾಗಿ ಅವರು ಏನೋ ಗೊಂದಲ ಕ್ಕೊಳಗಾದಂತೆ ಕಂಡರು.

"ನಾನು ಬಿರ್ಲಾ ಅವರನ್ನು ಮಾತ್ರ ಉದ್ದೇಶಿಸಿ ಈ ಮಾತು ಹೇಳುತ್ತಿಲ್ಲ. ಒಟ್ಟು ಈ ಪರಿಕಲ್ಪನೆಯ ಬಗ್ಗೆ ಕೇಳುತ್ತಿದ್ದೇನೆ ಅಷ್ಟೆ ಎಂದು ಸ್ಪಷ್ಟಪಡಿಸುತ್ತ ಇದನ್ನು ಯಾವ ರೀತಿಯಲ್ಲಿ ಆಚರಣೆಗೆ ತರಬೇಕು? ಉದಾಹರಣೆಗೆ ಒಬ್ಬ ಕೈಗಾರಿಕೋದ್ಯಮಿ ವರ್ಷಕ್ಕೆ ಅರ್ಧ ಮಿಲಿಯನ್ ರೂಪಾಯಿ ಲಾಭ ಮಾಡುತ್ತಾನೆ. ಕಾರ್ಮಿಕರು ತಿಂಗಳಿಗೆ ಪಡೆಯುವ ವೇತನ ೨೪ ರೂಪಾಯಿಗಳಾಗಿರುತ್ತವೆ. ಆಗ ಹೇಗೆ" ಎಂದೆ?

"ಟ್ರಸ್ಟಿಯಾದವನು ಒಂದೇ ಒಂದು ಪೈಸೆಯನ್ನೂ ತನಗಾಗಿ ಮಾಡಿಕೊಳ್ಳಬಾರದು. ಗಳಿಸಿದ್ದರ ಕಮಿಷನ್ ಮೇಲೆ ಮಾತ್ರ ಅವನಿಗೆ ಹಕ್ಕು. ತಾನು ಯಾರಿಗೆ ಟ್ರಸ್ಟಿಯೋ ಅವರ ಅಂದರೆ ತನ್ನ ಪೋಷಕರು (Guards) ಇಲ್ಲ ಇಲ್ಲ ಈ ಪದವೂ ಸರಿಯಲ್ಲ ತನ್ನ

"ಕಾವಲುಗಾರರ" (Wards) ಎಂಬ ಪದ ಸರಿಹೋಗಬಹುದೇನೋ ಅವರ ಸಮ್ಮತಿಯಿಂದ ಅವನು ತನ್ನ ಕಮಿಶನ್ ತೆಗೆದುಕೊಳ್ಳಬೇಕು. ನೀನು ತಿಂಗಳಿಗೆ ಐದು ರೂಪಾಯಿಗಳಿಗಿಂತ ಹೆಚ್ಚು ತೆಗೆದುಕೊಳ್ಳಬಾರದು ಎಂದು ಕಾವಲುಗಾರರು ಹೇಳಿದರೆ ಅವನು ಅದನ್ನು ಪಾಲಿಸಬೇಕು. ಇಲ್ಲದಿದ್ದರೆ ಟ್ರಸ್ಟನ್ನು ಬಿಟ್ಟುಕೊಡಬೇಕು.

"ನೀವು ಇದನ್ನು ಬಿರ್ಲಾಗೆ ಹೇಳಿದ್ದೀರಾ? ಈ ಬಗ್ಗೆ ಅವರ ಹತ್ತಿರ ಮಾತಾಡಿದ್ದೀರಾ?"

ಗಾಂಧಿಯವರು "ಹೂಂ ಯಾಕಿಲ್ಲ" ಎಂದರು. ಈಗ ಒಳಬಾಗಿಲು ಮುಚ್ಚಿಕೊಳ್ಳುತ್ತಿದೆ ಅನ್ನಿಸಿತು. "ಯಾಕಿಲ್ಲ" ಎಂದು ಅವರು ಮತ್ತೊಮ್ಮೆ ಹೇಳಿದಾಗ ಬಾಗಿಲು ಇನ್ನು ತೆರೆಯ ಲಾರದಂತೆ ಮುಚ್ಚಿಕೊಂಡಿದೆ ಎಂದು ಅರ್ಥಮಾಡಿಕೊಂಡೆ. ಈ ಮೂವತ್ತೆರಡು ವರ್ಷಗಳಲ್ಲಿ ಗಾಂಧಿಯವರು ಎಂದಾದರೊಂದು ದಿನ ಕೆಲವೇ ಮೈಲುಗಳಷ್ಟು ದೂರ ಹೋಗಿ ನೋಡಿಕೊಂಡು ಬಂದಿದ್ದರೆ ತಾವು ಟ್ರಸ್ಟಿಯಲ್ಲಿಟ್ಟಿದ್ದ ನಂಬಿಕೆಗೆ ಅನುಗುಣವಾಗಿ ಟ್ರಸ್ಟ್ ನಡೆಯುತ್ತಿದೆಯೇ ಇಲ್ಲವೇ ಎಂಬುದನ್ನು ಸ್ವತಃ ಕಂಡುಕೊಳ್ಳಬಹುದಾಗಿತ್ತು. ಅಥವಾ ಇದಕ್ಕಿಂತ ಮುಖ್ಯವಾಗಿ ಟ್ರಸ್ಟಿಶಿಪ್ ತತ್ವದಲ್ಲಿ ತಾವಿಟ್ಟಿರುವ ವಿಶ್ವಾಸ ಸರಿ ಇದೆಯೇ ಇಲ್ಲವೇ ಎಂದು ಕಂಡುಕೊಳ್ಳಬಹುದಿತ್ತು. ಆದರೆ ಅವರು ಹಾಗೆ ಮಾಡಲಿಲ್ಲ. ಅಥವಾ ಒಂದು ವೇಳೆ ನೋಡಿದ್ದರೂ ತಾವು ಏನು ನೋಡಿದರೋ ಅದನ್ನು ತಾವು ನಂಬಿಕೊಂಡ ತತ್ವಕ್ಕೆ ಹೋಲಿಸಿ ನೋಡಲು ಹೋಗುತ್ತಿರಲಿಲ್ಲ. ಈ ರೀತಿಯ ಧೋರಣೆಯನ್ನು ನನ್ನ ಭಾರತೀಯ ಸ್ನೇಹಿತರು ಕುರುಡುಗಣ್ಣು ಎಂದು ಕರೆಯುತ್ತಿದ್ದರು. ಇದು ಗಾಂಧಿಯವರಿಗೆ ಮಾತ್ರ ವಿಶಿಷ್ಟವಾದ ಲಕ್ಷಣವಲ್ಲ. ಉಚ್ಚ ಆದರ್ಶಗಳನ್ನು ಹೇಳುವ ಭಾರತದ ಇನ್ನೂ ಅನೇಕ ನಾಯಕರುಗಳ ಸ್ವಭಾವದಲ್ಲಿಯೂ ಈ ಅಂಶ ಕಾಣುತ್ತಿತ್ತು. ಇದು ಪಾಶ್ಚಿಮಾತ್ಯ ಜಗತ್ತಿನಲ್ಲಿಯೂ ತೀರ ಗೊತ್ತಿರದ ಅಂಶವೇನಾಗಿರಲಿಲ್ಲ. ಆದರೆ ಗಾಂಧಿಯಂತಹ ತೀರ ಸರಳವಾದ, ನಾಯಕನಲ್ಲಿ ಮತ್ತು ಸತ್ಯವನ್ನು ಅಷ್ಟೊಂದು ಪ್ರೀತಿಸುವ ವ್ಯಕ್ತಿಯಲ್ಲಿ ಕಂಡುಬಂದಿದ್ದು ಸ್ವಲ್ಪ ವಿಸ್ಮಯಗೊಳಿಸುವ ಸಂಗತಿಯಾಗಿತ್ತು. ಗಾಂಧೀಜಿಯವರ ಅನೇಕ ವಿಚಾರಗಳಲ್ಲಿ ವಿರೋಧಾಭಾಸಗಳಿದ್ದರೂ ಸತ್ಯವನ್ನು ಕುರಿತ ಅವರ ನಿಷ್ಠೆ ಮಾತ್ರ ತುಂಬ ನಿಜವಾದುದಾಗಿತ್ತು.

ಗಾಂಧಿಯವರಿಗೆ ಪ್ರಿಯವಾದ ಹರಿಜನರು ಮತ್ತು ಇತರ ಕಾರ್ಮಿಕ ಜನರು ದರಿದ್ರಾವಸ್ಥೆ ಯಲ್ಲಿ ಜೀವಿಸುತ್ತಿದ್ದರೂ ಅವರ ಸ್ಥಿತಿಗತಿಗಳನ್ನು ಸರಿಪಡಿಸುವ ಕ್ರಮ ಕೈಗೊಳ್ಳುವಂತೆ ಗಾಂಧಿಯವರಿಗೆ ಪ್ರಚೋದನೆಯಾಗಲಿಲ್ಲ. ಹೀಗಾದುದಕ್ಕೆ ಅವರಲ್ಲಿ ಆಳವಾಗಿ ಬೇರೂರಿದ ಮತ್ತು ಸ್ವಭಾವತಃ ಅವರಲ್ಲಿ ರೂಪುಗೊಂಡಿದ್ದ ದೃಷ್ಟಿಕೋನವೇ ಕಾರಣ. ಗಾಂಧಿಯವರು ಕೇವಲ ಬಿರ್ಲಾ ಅಥವಾ ಬಿರ್ಲಾಗಳು, ದಾಲ್ಮಿಯಾಗಳು, ಮಹಾರಾಜರುಗಳನ್ನು ಹಾಗೂ ಸಂಪತ್ತಿನ ಮಾಲೀಕರನ್ನು ಮಾತ್ರ ರಕ್ಷಿಸಹೊರಟಿರಲಿಲ್ಲ. ಹಳೆಯ ವ್ಯವಸ್ಥೆಯನ್ನು ಸರಳವಾದ ಯಂತ್ರಪೂರ್ವ ಯುಗವನ್ನು ಹಾಗೇ ಕಾಪಾಡಿಕೊಳ್ಳುವುದು ಅವರ ಗುರಿಯಾಗಿತ್ತು. ಇದು ಬದಲಾಗುವುದು ಅವರಿಗೆ ಬೇಕಿರಲಿಲ್ಲ.

ಈ ಸಮಾಜವನ್ನು ಪುನರ್ರಚಿಸುವುದು ಗಾಂಧಿಯವರ ಗುರಿಯಾಗಿರಲಿಲ್ಲ. ಪ್ರತಿಯೊಂದು

ಮಾನವ ಹೃದಯವನ್ನೂ ಪರಿವರ್ತಿಸುವುದು ಅವರ ಗುರಿಯಾಗಿತ್ತು. ಪ್ರತಿಯೊಬ್ಬ ಮನುಷ್ಯನ ಅಂತರಂಗದಲ್ಲಿಯ ಒಳ್ಳೆಯತನ ಈಚೆ ಬರುವಂತೆ ಮಾಡುವುದು ಅವರ ಉದ್ದೇಶವಾಗಿತ್ತು. "ಬಡವನಾಗಿರುವ ಮನುಷ್ಯ ಬಡವನಾಗೇ ಇರಬೇಕು. ಅವನಿಗೆ ಸಂಪತ್ತು ದೊರತರೆ ಆಸೆ ಹೆಚ್ಚುತ್ತದೆ. ಐಶ್ವರ್ಯವು ಮೃಗಳ್ಳತನಕ್ಕೆ ಪಾಪಕೃತ್ಯಗಳಿಗೆ ಎಡೆ ಮಾಡಿಕೊಡಬಹುದು. ವ್ಯಕ್ತಿಯು ನೂರಾರು ಮಂದಿಯ ಭವಿಷ್ಯವನ್ನು ನಿರ್ಧರಿಸುವಂತಹ ಶ್ರೀಮಂತಿಕೆ, ಅಧಿಕಾರವನ್ನು ಹೊಂದಿದ್ದರೆ ಆತನ ಹೃದಯ ಪರಿವರ್ತನೆ ಮಾಡುವುದೂ ಅಷ್ಟೇ ಮುಖ್ಯ. ಆದರೆ ಮಹಾರಾಜನಲ್ಲೇ ಆಗಲೀ, ಕೈಗಾರಿಕೋದ್ಯಮಿಯಲ್ಲೆ ಆಗಲಿ ಈ ಬದಲಾವಣೆ ಅಂತಃಪರಿವರ್ತನೆಯಿಂದ ಸಾಧ್ಯವಾಗಬೇಕೇ ಹೊರತು ಬಲತ್ಕಾರದಿಂದಲ್ಲ" ಎಂದರು ಗಾಂಧೀ.

"ಈ ವ್ಯಕ್ತಿಗಳಲ್ಲಿ ಯಾರಿಗಾದರೂ ನಾನು, ನೀವು ನಿಮ್ಮಲ್ಲಿರುವುದನ್ನೆಲ್ಲ ಕೊಟ್ಟುಬಿಡಬೇಕು ಎಂದು ಹೇಳಿದ್ದೇ ಆದರೆ ಅಲ್ಲಿಗೆ ನನ್ನ ಸೇವೆಯ ಉದ್ದೇಶವೇ ಕೊನೆಗೊಂಡಂತೆ" ಎಂದು ಗಾಂಧಿ ಹೇಳಿದರು.

"ಹಾಗೇಕೆ?" ಎಂದು ನಾನು ಕೇಳಿದೆ.

"ನಾಳೆ ಯಾರಾದರೊಬ್ಬರು ನನ್ನನ್ನು ಕುರಿತು ಆತ ಮೂಲತಃ ಒಬ್ಬ ಸವಾರ್ಧಿಕಾರಿ, ಹಿಟ್ಲರ್ ಎಂಬುದು ನಮಗೆ ಗೊತ್ತೇ ಇರಲಿಲ್ಲ" ಎಂದು ಹೇಳಿದರೆ ಇನ್ನೇನು?

ನನಗೆ ಇದು ಅರ್ಥವಾಗಲಿಲ್ಲ. ಇಂತಹ ಸಂತನಾದ, ಋಜುಮಾರ್ಗದಲ್ಲಿ ನಡೆಯುತ್ತಿರುವ, ಹಾಗು ತಾನು ಬಹುಕಾಲದಿಂದ ನಂಬಿಕೊಂಡು ಬಂದ ವಿಚಾರವನ್ನು ಜಾರಿಗೆ ತರಲು ಶ್ರಮಿಸುತ್ತಿರುವ ಗಾಂಧಿಯವರ ವಿಧಾನಕ್ಕೆ ಸರ್ವಾಧಿಕಾರತ್ವ ಎಂಬ ಪದ ಪ್ರಯೋಗಿಸಬಹುದೆ? ಕೈಗಾರಿಕೋದ್ಯಮಿಗಳನ್ನು ಹಾಗೂ ಫ್ಯೂಡಲ್ ಮಹಾರಾಜರನ್ನು ಟ್ರಸ್ಟೀಶಿಪ್‌ನ ದಾರಿಯಲ್ಲಿ ಕರೆದೊಯ್ಯುವುದು ಹಿಟ್ಲರ್ ಶಾಹಿಯಾಗುವುದೆ? ಟ್ರಾಕ್ಟರ್‌ಗಿಂತ ನೇಗಿಲಿಗೆ ಹೆಚ್ಚು ಗೌರವ ಇರುವ, ಯಂತ್ರ ಸ್ಪರ್ಶವಿರುವ ವಸ್ತುಗಳಿಗಿಂತ ಮಾನವನ ಹಸ್ತಗಳಿಂದ ತಯಾರಾದ ವಸ್ತುಗಳಿಗೆ ಹೆಚ್ಚಿನ ಮೌಲ್ಯವಿರುವ ಮಧ್ಯಕಾಲೀನ ಯುಗ ಗಾಂಧಿಯವರಿಗೆ ಪ್ರಿಯವಾಗಿತ್ತು. ಭೂಸುಧಾರಣೆ ತರುವುದಕ್ಕಾಗಿ ಇಲ್ಲಿ ಭೂಮಾಲೀಕರನ್ನೆಂತೋ ಹಾಗೇ ಬೆಳೆಯ ಗೇಣಿದಾರರನ್ನು ಮನವಿ ಮಾಡಿಕೊಳ್ಳಬೇಕೆಂಬುದು ಗಾಂಧೀ ವಿಚಾರವಾಗಿತ್ತು. ಟ್ರಸ್ಟಿಶಿಪ್ ಎಂದರೆ ಅದು ರಾಜರಿಗೂ, ಬಡವರಿಗೂ ಒಂದೇ ರೀತಿಯ ಹಕ್ಕುಗಳನ್ನು ಪ್ರತಿಪಾದಿಸುವ ಕನಸು ಎಂದು ಗಾಂಧಿಯವರು ಒಮ್ಮೆ ವಿವರಿಸಿದ್ದರು. ಬಹುಶಃ ಈ ವಿಷಯದಲ್ಲಿ ಗಾಂಧಿಯವರಿಗೂ ಅವರ ಕೆಲವು ನಿಷ್ಠಾವಂತ ಅನುಯಾಯಿಗಳಿಗೂ ಸಹಮತ ಮೂಡಲೇ ಇಲ್ಲ. ಗಾಂಧಿಯವರಿಗೆ ಬೇರೆಲ್ಲರಿಗಿಂತ ಹೆಚ್ಚು ನಿಕಟವಾಗಿದ್ದ ವ್ಯಕ್ತಿ ನೆಹರೂ. ಈ ವ್ಯತ್ಯಾಸ ಕುರಿತು ಅವರು ಅನೇಕ ಸಲ ಮಾತಾಡಿದ್ದರು. ಬರೆದಿದ್ದರು. ಗಾಂಧಿಯವರು ಈ ಎರಡರ ನಡುವೆ ಸಮನ್ವಯ ತರಲು ವಿಫಲರಾಗಿದ್ದಾರೆ ಎಂದೂ ಅವರು ಹೇಳಿದ್ದರು. ನೆಹರೂ ಅವರ ಪ್ರಕಾರ ಒಂದು ವ್ಯವಸ್ಥಿತ ಅರ್ಥವ್ಯವಸ್ಥೆ ಇಲ್ಲದೆ ಹಿಂದುಳಿದಿರುವ ಭಾರತವನ್ನು ಸುಧಾರಿಸಬೇಕಾದರೆ ರಾಜ್ಯದ ನಿಯಂತ್ರಣದಲ್ಲಿ ಕೈಗಾರಿಕಾ ಯೋಜನೆಯನ್ನು ರೂಪಿಸುವ ಅಗತ್ಯವಿತ್ತು. ಎರಡು ಹೊತ್ತಿನ ಕೂಳಿಗೆ

ಗತಿಯಿಲ್ಲದಿರುವ ಸಹಸ್ರಾರು ಜನರಿಗೆ ಸರಿಯಾದ ರೀತಿಯಲ್ಲಿ ಆಹಾರ ಒದಗಿಸಬೇಕಾದರೆ ಅದಷ್ಟು ಬೇಗನೆ, ಪೂರ್ಣಪ್ರಮಾಣದಲ್ಲಿ ವೈಜ್ಞಾನಿಕ ಕೃಷಿಯನ್ನು ಜಾರಿಗೆ ತರುವುದು ಅಗತ್ಯ ಎಂದು ನೆಹರೂ ಹೇಳುತ್ತಿದ್ದರು.

"ನೀವು, ವ್ಯವಸಾಯದಲ್ಲಿ ವಿಜ್ಞಾನ ಮತ್ತು ಯಂತ್ರಗಳ ಬಳಕೆಯನ್ನು ವೈಯಕ್ತಿಕವಾಗಿ ವಿರೋಧಿಸುತ್ತೀರಾ" ಎಂದು ಗಾಂಧಿಯವರನ್ನು ಕೇಳಿದೆ. ಇದಕ್ಕೆ "ಹೌದು" ಎಂದು ಹೇಳಿದ ಗಾಂಧಿಯವರು "ಟ್ರಾಕ್ಟರ್‌ನ ಬಳಕೆ ಮನುಷ್ಯನ ಶ್ರಮಕ್ಕೆ ಬದಲಿಯಾಗಿ ಬರುತ್ತದೆ. ಇದರಿಂದ ಮನುಷ್ಯನ ಕೈಗಳಿಗೆ ಕೆಲಸವಿಲ್ಲದಂತಾಗುತ್ತದೆ. ರಾಜ್ಯದ ನಿಯಂತ್ರಣದಲ್ಲಿರುವ ಅಥವಾ ರಾಷ್ಟ್ರೀಕೃತ ಕೈಗಾರಿಕೆಗಳಿಂದ ದೇಶವು ಗುಲಾಮರ ರಾಷ್ಟ್ರವಾಗುತ್ತದೆ" ಎಂದರು. ಭಾರತದ ಬಡತನ ಹಾಗೂ ಹಿಂದುಳಿದಿರುವಿಕೆಯ ನಿವಾರಣೆ ಹೇಗೆ ಸಾಧ್ಯ ಎಂಬ ಪ್ರಶ್ನೆಗೆ "ಜನ ಪರಿಶ್ರಮದಿಂದ, ಮಿದುಳನ್ನು ಬಳಸಿ ಕೆಲಸ ಮಾಡಬೇಕು. ಕೈ ಕಸುಬುಗಳಿಂದ ಭಾರತವು, ಅಮೆರಿಕಾವಷ್ಟೇ ಅಲ್ಲ ಜಗತ್ತಿನ ಬೇರಾವುದೇ ದೇಶಕ್ಕಿಂತ ಸಂತೋಷಭರಿತ ದೇಶವಾಗಬಹುದು." ಎಂದು ನನ್ನತ್ತ ನೋಡಿ ನಕ್ಕರು. "ಆದರೆ ಅದೆಲ್ಲ ಬರೀ ಬಡಾಯಿ ಅಷ್ಟೆ" ಎಂದರು.

"ಇಲ್ಲ, ಇದು ಬಡಾಯಿಯ ಮಾತಲ್ಲ. ಈಚಿನ ದಿನಗಳಲ್ಲಿ ಅಮೆರಿಕ ಸಂಪೂರ್ಣ ಸಂತೋಷಭರಿತವೇನೂ ಆಗಿಲ್ಲ" ಎಂದೆ. ಅಮೆರಿಕಾ ವಿಷಯ ಬಂದ ಕೂಡಲೇ ನಾನು ಗಾಂಧಿಯವರೊಂದಿಗೆ ಬಹಳ ದಿನಗಳಿಂದಲೂ ಚರ್ಚಿಸಬೇಕು ಅಂದುಕೊಂಡಿದ್ದ ವಿಷಯವನ್ನು ಪ್ರಸ್ತಾಪಿಸಿದೆ. ಪರಮಾಣು ಅಸ್ತ್ರಗಳ ತಯಾರಿಕೆ ಹೆಚ್ಚುತ್ತಿರುವ ಈ ಸಂದರ್ಭದಲ್ಲಿ ಪರಮಾಣು ಯುದ್ಧಭೀತಿಯ ಬಗ್ಗೆ ಪ್ರಾಸ್ತಾಪಿಸಿದೆ. ಹಿಂಸೆಯ ಪರಮಾತಿರೇಕವಾದ ಪರಮಾಣು ಅಸ್ತ್ರಗಳು ನಮ್ಮ ಅನಿಶ್ಚಿತ ಕೈಗಳಲ್ಲಿವೆ. ಈ ವಿಷಯದಲ್ಲಿ ಈ ಶಾಂತಿದೂತನ ಮಾರ್ಗದರ್ಶನವೇನಿರಬಹುದು ಎಂಬುದು ನನ್ನ ಕುತೂಹಲವಾಗಿತ್ತು. ಗಾಂಧಿಯವರೊಡನೆ ನಾನು ಈ ವಿಷಯಗಳ ಬಗ್ಗೆ ಮಾತಾಡುತ್ತಿರುವಾಗ ಗಾಂಧಿಯವರನ್ನು ಕುರಿತು ನನ್ನ ಮನೋಭಾವ ಬದಲಾಗುತ್ತಿರುವುದರ ಅನುಭವ ನನಗೆ ಆಗತೊಡಗಿತು. ಈ ಮನುಷ್ಯ ಸೊಂಟಕ್ಕೆ ತುಂಡು ಪಂಚೆ ಸುತ್ತಿದ್ದ, ಎತ್ತಿನ ಗಾಡಿ ಸಂಸ್ಕೃತಿಯ ಬಗ್ಗೆ, ಸಾಮಾಜಿಕ ಸಮಸ್ಯೆಗಳನ್ನು ಕುರಿತ ಪರಿಹಾರಗಳ ಬಗ್ಗೆ ಚಿತ್ರವಿಚಿತ್ರ ವಾದವಿಚಾರಗಳನ್ನುಳ್ಳ ಒಬ್ಬ ವಿಚಿತ್ರ ಅಸಾಮಿಯಾಗಿರದೆ ಒಬ್ಬ ಮಹಾಪುರುಷರಾಗಿ ಕಾಣತೊಡಗಿದ್ದರು.

ಭಾರತದ ಸಹಸ್ರಾರು ಮಂದಿ ಬಾಪು, ತಂದೆ ಎಂದು ಒಪ್ಪಿಕೊಂಡಿರುವ ಈ ವ್ಯಕ್ತಿಯು ನಿಸ್ಸಂದೇಹವಾಗಿಯೂ ಒಬ್ಬ ಮಹಾಪುರುಷ ಎಂದು ನನಗೆ ಮನವರಿಕೆಯಾಗಲು ಸಾಕಷ್ಟು ಕಾಲ ಹಿಡಿಯಿತು. ನನ್ನಂತಹ ಅಮೆರಿಕನ್ ಪ್ರಜೆಗೆ ಯಂತ್ರ ಯುಗ ಕುರಿತ ಅವರ ಪ್ರಾಚೀನ ಆಲೋಚನಾಧಾರೆ ಒಪ್ಪಿತವಾಗುವುದು ಕಷ್ಟ. ಯಂತ್ರವನ್ನು ನಿಜಕ್ಕೂ ಅದ್ಭುತ ಸೃಷ್ಟಿ ಎಂದು ಒಪ್ಪಿಕೊಂಡಿರುವ ನನಗೆ ಗಾಂಧಿಯವರ ವಿಚಾರಗಳು ಈಗಲೂ ಒಪ್ಪಿಗೆಯಾಗುವುದಿಲ್ಲ.

ಆದರೆ, ತೀರಾ ಅವ್ಯವಸ್ಥೆಯಲ್ಲಿದ್ದ ದೇಶವನ್ನು ಗಾಂಧಿ ಎಷ್ಟೊಂದು ಧೈರ್ಯದಿಂದ ಮತ್ತು ಅಧಿಕಾರಯುತವಾಗಿ ಮುನ್ನಡೆಸಿದ್ದನ್ನು ನೋಡಿದಾಗ ಮೊದಲ ಬಾರಿಗೆ ನನಗೆ

ಗಾಂಧಿಯವರು ಈ ದೇಶಕ್ಕೆ ಎಷ್ಟೊಂದು ಮುಖ್ಯ ಎಂಬುದು ಮನದಟ್ಟಾಗಿತ್ತು. ಇತ್ತೀಚಿನ ದಿನಗಳಲ್ಲಿ ಭಾರತದ ಒಂದು ಮಹತ್ವದ ಸಂದರ್ಭವನ್ನು ನಾನು ನೋಡಿದ್ದೆ. ಧಾರ್ಮಿಕ ವಿದ್ವೇಷದ ಬೆಂಕಿಯನ್ನು ತಣಿಸಲು ಗಾಂಧಿ ತಮ್ಮ ಜೀವವನ್ನೇ ಪಣವಾಗಿಟ್ಟಿದ್ದರು. ನೆಹರೂ ಹೇಳಿದಂತೆ ಮುಳುಗಿಹೋಗುತ್ತಿರುವ ಜಗತ್ತಿನಲ್ಲಿ ತಮ್ಮ ಉದ್ದೇಶ ಸಾಧನೆಗೆ ಬದ್ಧವಾಗಿದ್ದ ಗಾಂಧಿಯವರು ಒಂದು ಅಚಲಶಿಲೆಯಂತಿದ್ದರು. ಸತ್ಯದ ಬೆಳಕನ್ನು ತೋರಿಸಿದ್ದರು. ನಮ್ಮ ಪಾಶ್ಚಿಮಾತ್ಯ ಜಗತ್ತು ಸಹ ಇದೇ ರೀತಿ ಮುಳುಗುವ ಅಪಾಯದಲ್ಲಿದೆ. ಇಂಥ ಸಂದರ್ಭದಲ್ಲಿ ನಾವು ಗಾಂಧಿಯವರ ದೃಢ ನಿಲುವಿನಿಂದ ಮಾರ್ಗದರ್ಶನ ಪಡೆದುಕೊಳ್ಳಬೇಕಾಗಿದೆ ಎಂದು ನನಗನ್ನಿಸಿತು.

"ಅಮೆರಿಕಾ ಆಟಂಬಾಂಬ್ ತಯಾರಿಕೆಯನ್ನು ನಿಲ್ಲಿಸಬೇಕೆ?" ಎಂದು ಗಾಂಧಿಯನ್ನು ಕೇಳಿದೆ. ಅವರು ಒಂದಿಷ್ಟೂ ಹಿಂಜರಿಕೆಯಿಲ್ಲದೆ "ಹೌದು ನಿಲ್ಲಿಸಬೇಕು" ಎಂದು ಹೇಳಿದರು. ಈ ವಿಷಯದ ಬಗ್ಗೆ ನಾವು ತುಂಬ ಹೊತ್ತು ಮಾತಾಡಿದೆವು. ಗಾಂಧೀಜಿ ಮಧ್ಯೆಮಧ್ಯೆ ಏನನ್ನೋ ಆಲೋಚಿಸುತ್ತ ಒಮ್ಮೊಮ್ಮೆ ಮೌನ ತಾಳುತ್ತಾ, ಅತ್ಯಂತ ಕಾಳಜಿಯಿಂದ ಮಾತಾಡಿದರು. ನಾನು ಅವರ ಮಾತುಗಳನ್ನು ಬರೆದುಕೊಳ್ಳುತ್ತಾ ಹೋದೆ. ಆದರೆ ಜಗತ್ತಿಗೆ ಇದು ಅವರು ಕೊಟ್ಟ ಕೊನೆಯ ಸಂದೇಶವಿರಬಹುದು ಎಂದು ನಮ್ಮಿಬ್ಬರಿಗೂ ಆಗ ತಿಳಿಯಲಿಲ್ಲ. ಗಾಂಧಿಯ ಸಮ್ಮುಖದಲ್ಲಿರುವಾಗ ಯಾರೋ ಒಬ್ಬ ಅಸಾಧಾರಣ ಪುರುಷನ ಎದುರಿಗಿರುವಂತೆ ಅನ್ನಿಸುತ್ತಿತ್ತೆ ಎಂದು ನನ್ನನ್ನು ಅನೇಕರು ಕೇಳಿದ್ದಾರೆ. ಅದಕ್ಕೆ "ಹೌದು" ಎಂಬುದೇ ನನ್ನ ಉತ್ತರ. ಬೇರೆ ಎಲ್ಲ ದಿನಗಳಿಗಿಂತ ಆ ಕೊನೆಯ ದಿನ ನನಗೆ ಹಾಗನ್ನಿಸಿತು. ನನ್ನನ್ನು ಅಷ್ಟೆಲ್ಲ ಕಾಡುತ್ತಿದ್ದ ಸಂದಿಗ್ಧತೆಗಳು ದೂರವಾಗಿದ್ದವು. ನಮ್ಮೆಲ್ಲರಿಗಿಂತ ಅವರು ಬಹಳ ಮುಂದೆ ಹೋಗಿದ್ದರು. "ಗಾಂಧೀ ಈ ಮಣ್ಣಿನ ಮನುಷ್ಯನಲ್ಲ. ಆತ ತುಂಬ ಅಪರೂಪದ ಕಮ್ಮಟದಲ್ಲಿ ವಿಶೇಷ ವಸ್ತುವಿನಿಂದ ಎರಕಗೊಂಡ ವ್ಯಕ್ತಿ" ಎಂದು ನೆಹರೂ ಹೇಳುತ್ತಿದ್ದರು. ಗಾಂಧಿಯವರನ್ನು ಕೊನೆಯ ಗಳಿಗೆಯಲ್ಲಿ ನೋಡುವಾಗ ಯಾರೋ ಅಲೌಕಿಕ ವ್ಯಕ್ತಿಯೊಬ್ಬ ಆ ಕಣ್ಣುಗಳೊಳಗಿಂದ ನೋಡುತ್ತಿದ್ದಾನೆ ಅನ್ನಿಸಿತು.

"ಆಟಂಬಾಂಬನ್ನೂ ನೀವು ಅಹಿಂಸೆಯಿಂದಲೇ ಎದುರಿಸುತ್ತೀರಾ?" ಎಂದು ನಾನು ಕೇಳಿದೆ.

"ಹೌದು, ಅದಕ್ಕೆ ನಾನು ಹೇಗೆ ಉತ್ತರಿಸಲಿ" ಎನ್ನುತ್ತ ವೇಗವಾಗಿ ಚರಕಾ ತಿರುಗಿಸಿದರು ಗಾಂಧಿ. "ನಾನು ಅದನ್ನು ಪ್ರಾರ್ಥನಾ ಕ್ರಿಯೆಯಿಂದ (Prayerful Action) ಎದುರಿಸುತ್ತೇನೆ."

"ಅದು ಯಾವ ರೂಪದಲ್ಲಿರುತ್ತದೆ" ಎಂದು ನಾನು ಕೇಳಿದೆ. ಅದಕ್ಕೆ ಅವರು ಹೇಳಿದರು "ನಾನು ಭೂಗತನಾಗುವುದಿಲ್ಲ. ಅಡಗುದಾಣಗಳಿಗೆ ಹೋಗುವುದಿಲ್ಲ. ನಾನು ಹೊರಗೆದ್ದು ಬಂದು ತಲೆ ಎತ್ತಿ ನಿಲ್ಲುತ್ತೇನೆ. ತನ್ನ ಬಗ್ಗೆ ಈ ವ್ಯಕ್ತಿಗೆ ಯಾವ ದುರುದ್ದೇಶವೂ ಇಲ್ಲ ಎಂದು ನನ್ನ ಮುಖದಲ್ಲಿ ಪೈಲಟ್‌ಗೆ ಕಾಣುವಂತೆ ನಿಲ್ಲುತ್ತೇನೆ. ಅಷ್ಟು ದೂರದಿಂದ ಪೈಲಟ್‌ಗೆ ನನ್ನ ಮುಖ ಕಾಣುವುದಿಲ್ಲ ಎಂದು ಗೊತ್ತು. ಆದರೆ ನಮ್ಮ ಹೃದಯದಲ್ಲಿ ಆತನ ವಿರುದ್ಧ

ಯಾವುದೇ ಕೇಡಿನ ಭಾವನೆಯಿಲ್ಲ ಎಂಬುದು ಆತನಿಗೆ ಗೊತ್ತಾಗುತ್ತದೆ. ಆಗ ಆತನ ಕಣ್ಣು ತೆರೆಯುತ್ತವೆ. ಹಿರೋಶಿಮಾದಲ್ಲಿ ಸತ್ತ ಆ ಸಹಸ್ರಾರು ಮಂದಿ ಕೂಡ ಇಂಥದೇ ಪ್ರಾರ್ಥನಾ ಕ್ರಿಯೆಯಲ್ಲಿ ಸತ್ತಿದ್ದರೆ ಹೃದಯದಲ್ಲಿ ಇಂಥ ಪ್ರಾರ್ಥನೆ ತುಂಬಿಕೊಂಡು ಬಯಲಿಗೆ ಬಂದಿದ್ದರೆ ಆಗ ಈ ಯುದ್ಧ ಇಷ್ಟು ಕಳಂಕಕರವಾದ ರೀತಿಯಲ್ಲಿ ಕೊನೆಯಾಗುತ್ತಿರಲಿಲ್ಲ. ಈಗಿನ ಪ್ರಶ್ನೆಯೆಂದರೆ ಗೆದ್ದವರು ಯಾರು? Whether the victors are really victors or victims?" ಗಾಂಧಿ ತುಂಬ ನಿಧಾನವಾಗಿ ಮಾತಾಡುತ್ತಿದ್ದರು. ಅವರ ದನಿ ತುಂಬ ಮೆಲುವಾಗಿತ್ತು. "ನಮ್ಮದೇ ದುರಾಸೆ ಹಾಗೂ ಕರ್ತವ್ಯಲೋಪಗಳಿಂದಾಗಿ ಜಗತ್ತು ಈಗ ಶಾಂತಿಯನ್ನು ಕಳೆದುಕೊಂಡಿದೆ. ಇದು ನಿಜಕ್ಕೂ ಭಯಂಕರ" ಎಂದರು. ನನ್ನ ಸಮಯ ಮುಗಿದಿತ್ತು. ನಾನು ಹೊರಡುತ್ತೇನೆ ಎಂದು ಗಾಂಧಿಯವರಿಗೆ ಕೈ ಜೋಡಿಸಿ ನಮಸ್ಕಾರ ಹೇಳಿದೆ. ಆದರೆ ಗಾಂಧಿಯವರು ನನ್ನತ್ತ ಕೈ ಚಾಚಿ ಪಾಶ್ಚಾತ್ಯಶೈಲಿಯಲ್ಲಿ ಹಾರ್ದಿಕವಾಗಿ ಕೈಕುಲುಕಿದರು. ನಾನು ಅವರತ್ತ ತಿರುಗಿ "Good Bye, Good luck" ಹೇಳಿ ಹೊರಬಂದೆ.

ಇದಾಗಿ ಕೆಲವೇ ಗಂಟೆಗಳಾಗಿದ್ದವು. ಆಟಂಬಾಂಬನ್ನು ಸಹ ಅಹಿಂಸೆಯಿಂದಲೇ ಎದುರಿಸ ಬಹುದು ಎಂದು ನಂಬಿದ್ದ ಈ ವ್ಯಕ್ತಿ ರಿವಾಲ್ವರ್‌ನ ಬುಲೆಟ್‌ಗೆ ಬಲಿಯಾಗಿದ್ದ. ನಮಗೆಲ್ಲ ಈಗ ತಿಳಿದಿಗ್ಗುವಂತೆ ಅವರು ಕೆಳಗೆ ಬೀಳುವಾಗ ಕೈಗಳನ್ನು ಪ್ರಾರ್ಥನಾ ಭಂಗಿಯಲ್ಲಿ ಮೇಲೆತ್ತಿ ಹಿಡಿದಿದ್ದರು. ಅವರ ಬಾಯಿಂದ "ರಾಮ್" ಎಂಬ ಶಬ್ದ ಹೊರಟಿತ್ತು.

❑

ಅಧ್ಯಾಯ ೧೮

ಬೆಳಕು ಆರಿತು

ಹಂತಕನು ಗುಂಡುಗಳನ್ನು ಹಾರಿಸಿದಾಗ ನಾನು ಆ ಜಾಗದಿಂದ ಕೆಲವೇ ಬೀದಿಗಳಷ್ಟು ಆಚೆಗಿದ್ದೆ. ನನಗೆ ಸುದ್ದಿ ತಿಳಿಸಲು ನನ್ನ ಸ್ನೇಹಿತರು ತಕ್ಷಣವೇ ನನ್ನನ್ನು ಹುಡುಕಿಕೊಂಡು ಬಂದಿದ್ದರು. ಸ್ವಲ್ಪ ಹೊತ್ತಿಗೆಲ್ಲ ನಾನು ಅಲ್ಬುಕರ್ಕ್ ರಸ್ತೆಯ ಆ ಭವನದ ಬಳಿ ಬಂದಿದ್ದೆ. ಭಾರತದಲ್ಲಿ ಸುದ್ದಿ ಬಹಳ ಬೇಗ ಹರಡುತ್ತದೆ. ಅಷ್ಟರಲ್ಲಾಗಲೆ ಸಾವಿರಾರು ಜನ ದುರಂತದ ಸ್ಥಳಕ್ಕೆ ಧಾವಿಸಿ ಬಂದಿದ್ದರು. ಬಿರ್ಲಾ ಭವನದ ಸುತ್ತ ಸೇರಿದ ಜನರ ಗುಂಪಿನ ನಡುವೆ ದಾರಿ ಮಾಡಿಕೊಂಡು ಒಳಹೋಗುವುದೆ ಕಷ್ಟವಾಯಿತು. ಆದರೆ ಅಲ್ಲಿದ್ದ ಕಾವಲುಗಾರರು ನನ್ನ ಗುರುತು ಹಿಡಿದು ನನ್ನನ್ನು ಒಳಗೆ ಬಿಟ್ಟರು. ಗಾಂಧೀಜಿಯನ್ನು ಮಲಗಿಸಿದ್ದ ಕೋಣೆಗೆ ನಾನು ಹೋದೆ. ಗಾಂಧೀಜಿ ಮೃತರಾಗಿ ಇನ್ನೂ ಒಂದು ಗಂಟೆ ಕಾಲವೂ ಕಳೆದಿರಲಿಲ್ಲ. ಅವರ ತಲೆ ಅವರ ಕಾರ್ಯದರ್ಶಿ ಬ್ರಿಜ ಕೃಷ್ಣರವರ ತೊಡೆಯ ಮೇಲಿತ್ತು. ಗಾಂಧೀಜಿ ಬದುಕಿದ್ದಾಗಲೂ ಸದಾ ಅವರ ಸುತ್ತಮುತ್ತಲಲ್ಲೆ ಇರುತ್ತಿದ್ದ ಸೋದರನ ಮೊಮ್ಮಕ್ಕಳು, ಸೊಸೆಯರು ಮೊದಲಾದ ಬಂಧುಬಳಗದವರೆಲ್ಲ ಸಮೀಪದಲ್ಲಿಯೇ ಇದ್ದರು. ಗಾಂಧಿಯವರ ಮುಖ ಆಗಲೇ ಬದಲಾಗಿತ್ತು. ಅವರು ನಿದ್ದೆಯಲ್ಲಿದ್ದಾಗಲೂ ಅವರ ಮುಖಕ್ಕೆ ಅಸಾಧಾರಣ ಎಚ್ಚರದ ಸ್ಥಿತಿಯನ್ನು ತಂದುಕೊಡುತ್ತಿದ್ದ ಕಾಂತಿಯುಕ್ತ ಕಂದುಚರ್ಮ ತನ್ನ ಬಿಗಿ ಕಳೆದುಕೊಂಡಿತ್ತು. ಕೋಣೆಯೊಳಗೆ ಗಾಢವಾದ ಮೌನ. ಕೆಲವರು ಅಳುತ್ತಿದ್ದರು. ಅಲ್ಲಿ ಆವರಿಸಿದ್ದ ಮೌನದಲ್ಲಿ ಗೀತಾಪಠಣ ಮಾತ್ರ ಕಿವಿಗೆ ಕೇಳಿಸುತ್ತಿತ್ತು. ಗಾಂಧೀಜಿಗೆ ಸ್ವಲ್ಪ ದೂರದಲ್ಲಿ ಹಾಸಿದ್ದ ಜಮಖಾನೆಯ ಮೇಲೆ ಕುಳಿತಿದ್ದ ಹೆಂಗಸರ ಗುಂಪು ಗೀತಾಪಠಣ ಮಾಡುತ್ತಿತ್ತು. ಹಿಂದೂಗಳಲ್ಲಿ ಯಾರಾದರೂ ಸಾವಿಗೀಡಾದಾಗ ಪಠಣ ಮಾಡಲಾಗುವ ಗೀತೆಯ ಭಾಗ ಅದು. ಗಾಂಧೀಜಿಯವರ ಸಂದರ್ಭಕ್ಕೆ ಈ ಪಠಣ ಇನ್ನೂ ವಿಶೇಷವಾಗಿ ಹೊಂದಿಕೊಳ್ಳುತ್ತಿತ್ತು. ಅರ್ಜುನ ತನ್ನ ಸೋದರರು, ರಕ್ತಸಂಬಂಧಿಗಳೊಂದಿಗೆ ಪರಸ್ಪರ ಹೋರಾಡಲು ಮನಸ್ಸು ಬಾರದೆ ಶಸ್ತ್ರವನ್ನು ಕೆಳಗಿರಿಸುತ್ತಾನೆ. ಶ್ರೀಕೃಷ್ಣ ಅವನನ್ನು ಕುರಿತು ನಮ್ಮ ಕೆಲಸವನ್ನು ನಾವು ಮಾಡಬೇಕು. ಅದರ ಫಲಾಫಲಗಳು ಭಗವಂತನಿಗೆ ಸೇರಿವೆ. ಎಲ್ಲವೂ ಭಗವಂತನಿಂದಲೇ ಬರುತ್ತದೆ. ಕೊನೆಗೆ ಎಲ್ಲವೂ ಭಗವಂತನಿಗೇ ಸೇರುತ್ತದೆ ಎಂದು ಬೋಧಿಸುತ್ತಾನೆ.

ಹೆಂಗಸರ ಪಠಣ ಹಾಗೇ ಮುಂದುವರೆದಿತ್ತು. ಆ ಕೋಣೆಯಲ್ಲಿ ತುಂಬಿದ್ದ ಗಾಢ ದುಃಖವನ್ನು ಕಲಕುವಂತೆ ಗಾಜು ಒಡೆದ ಶಬ್ದ ಕೇಳಿಸಿತು. ಹೊರಗಿನ ಜನರ ನೂಕುನುಗ್ಗಲಿನ ಒತ್ತಡಕ್ಕೆ ಕಿಟಕಿ ಬಾಗಿಲುಗಳ ಗಾಜು ಒಡೆದಿದ್ದವು. ಮಹಾತ್ಮರ ಕೊನೆಯ ದರ್ಶನಕ್ಕಾಗಿ ಜನರ ಹಂಬಲವನ್ನು ವರ್ಣಿಸುವುದು ಸಾಧ್ಯವಿಲ್ಲ. ಮಹಾತ್ಮಾಜಿ ಸಾಯುತ್ತಾರೆ ಎಂದು

ಯಾರೂ ಅಂದುಕೊಂಡಿರಲಿಲ್ಲ. ಕೇವಲ ಹತ್ತು ದಿನಗಳ ಹಿಂದೆಯಷ್ಟೆ ಗಾಂಧೀಜಿಯ ಮೇಲೆ ಯಾರೋ ನಾಡಬಾಂಬನ್ನು ಎಸೆದಿದ್ದರು. ಕೆಲವೇ ಗಜಗಳ ಅಂತರದಲ್ಲಿ ಅದು ಗುರಿ ತಪ್ಪಿತ್ತು. ಆದರೆ ಅದು ಗಾಂಧಿಯವರನ್ನು ಹತ್ಯೆ ಮಾಡಬೇಕೆಂದಿದ್ದ ಮತಾಂಧ ಹಿಂದೂ ಹಂತಕರ ಮೊದಲ ಪ್ರಯತ್ನವೆಂದು ಯಾರಿಗೂ ಗೊತ್ತಾಗಲಿಲ್ಲ. ಗಾಂಧಿಯವರು ಇತ್ತೀಚಿನ ಉಪವಾಸ ಆರಂಭಿಸಿದಾಗ ಅವರ ಪ್ರಾಣದ ಬಗ್ಗೆ ತೀವ್ರ ಆತಂಕದ ಸ್ಥಿತಿ ಉಂಟಾಗಿತ್ತು. ಅಂತಹ ಸಂದರ್ಭದಲ್ಲಿಯೂ ಯಾರನ್ನಾದರೂ ಗಾಂಧಿಯವರ ಪ್ರಾಣಕ್ಕೆ ಅಪಾಯವಿದೆಯೇ ಎಂದು ಪ್ರಶ್ನಿಸಿದರೆ ಇಲ್ಲ. ನಾವು ಅದನ್ನು ಕಲ್ಪಿಸಿಕೊಳ್ಳುವುದಕ್ಕೂ ಸಾಧ್ಯವಿಲ್ಲ ಎಂದು ಹೇಳುತ್ತಿದ್ದರು. ಆದರೆ ಈಗ ಆ ಸಾವು ಸಂಭವಿಸಿಯೇ ಬಿಟ್ಟಿತು.

ಆ ದುರಂತ ತುಂಬಿದ ಕೋಣೆಯಿಂದ ನಾನು ಮೆಲ್ಲಗೆ ಹೊರಗೆ ಬಂದೆ. ದುಃಖಿಸುತ್ತಿದ್ದ ಜನಗಳ ಮಧ್ಯೆ ದಾರಿಮಾಡಿಕೊಂಡು ಗಾಂಧಿಯವರು ಕೊನೆಯುಸಿರೆಳೆದ ಜಾಗಕ್ಕೆ ಹೋದೆ. ಅಲ್ಲಿ ಬೆಳಕಿನ ಪ್ರಭೆಯೊಂದು ಹರಡಿತ್ತು. ಯಾರೋ ಒಂದು ಮೇಣದಬತ್ತಿ ಹಚ್ಚಿಟ್ಟಿದ್ದರು. ಕತ್ತಲು ತುಂಬಿದ ರಾತ್ರಿಯಲ್ಲಿ ಅದರ ಹೊಂಬಣ್ಣದ ಬೆಳಕು ಹರಡಿತ್ತು. ಕೆಲವು ಕಡ್ಡಿಗಳನ್ನು ಆ ಸ್ಥಳದಲ್ಲಿ ತ್ರಿಕೋನಾಕೃತಿಯಲ್ಲಿ ಜೋಡಿಸಿ ಸ್ಥಳದ ಗುರುತು ಮಾಡಿದ್ದರು. ಗಾಂಧಿಯವರು ಬಿದ್ದ ಸ್ಥಳವನ್ನು ನಿಖರವಾಗಿ ಗುರುತಿಸುವುದಕ್ಕಾಗಿ ಒಂದು ತಗಡಿನ ಡಬ್ಬಿಯನ್ನು ಅಲ್ಲಿಟ್ಟರು. ಸ್ವತಃ ಗಾಂಧಿಯವರೇ ಅಲ್ಲಿದ್ದಾರೇನೊ ಎಂಬಂತೆ ಜನರು ಅದರ ಮುಂದೆ ಭಕ್ತಿಯಿಂದ ಬಾಗಿ ನಮಸ್ಕರಿಸುತ್ತಿದ್ದರು. ಹೀಗೆ ನಮಸ್ಕರಿಸುತ್ತಿದ್ದವರಲ್ಲಿ ಎಲ್ಲ ಧರ್ಮಗಳವರೂ ಇದ್ದರು. ಅಲ್ಲಿದ್ದ ಮಣ್ಣನ್ನು ಕರವಸ್ತ್ರಗಳಲ್ಲಿ ಕಟ್ಟಿಕೊಂಡು ಹೋಗುತ್ತಿದ್ದರು.

ಆಗ ಗುಂಪಿನಲ್ಲಿ ಇದ್ದಕ್ಕಿದ್ದಂತೆ ಹೊಸ ಸಂಚಲನ ಉಂಟಾಯಿತು. ಗುಂಪಿನೊಂದಿಗೆ ನಾನೂ ತಳ್ಳಿಸಿಕೊಂಡು ಭವನದ ಮುಂಭಾಗಕ್ಕೆ ಬಂದಿದ್ದೆ. ಅಲ್ಲಿ ನೆಹರೂ ಜನರನ್ನುದ್ದೇಶಿಸಿ ಮಾತಾಡುವುದಕ್ಕಾಗಿ ಮತ್ತೊಮ್ಮೆ ಬಿರ್ಲಾ ಗೇಟಿನ ಮೇಲೆ ಹತ್ತಿ ನಿಂತಿದ್ದರು. ಬೀದಿ ದೀಪದ ಬೆಳಕು ಅವರ ಮೇಲೆ ಬಿದ್ದಿತ್ತು. ಗಾಂಧೀಜಿಯ ಸಾವಿನ ನೋವು ಮತ್ತು ಆಘಾತ ನೆಹರೂ ಮುಖದಲ್ಲಿ ವ್ಯಕ್ತವಾಗಿತ್ತು: "ಮಹಾತ್ಮಾಜಿ ತೀರಿಕೊಂಡರು, ಮಹಾಬೆಳಕೊಂದು ಆರಿಹೋಯಿತು. ನಮ್ಮೆಲ್ಲರ ಮೇಲೂ ದುಃಖ ವ್ಯಥೆಯ ಕಾರ್ಮೋಡ ಕವಿದಿದೆ. ಗಾಂಧಿಯವರು ಸ್ವರ್ಗದಿಂದಲೇ ನಮಗೆ ದಾರಿ ತೋರಿಸುತ್ತಾರೆ. ಆದರೆ ಈ ಮೊದಲು ಕಷ್ಟ ಎದುರಾದಾಗಲೆಲ್ಲ ಸಮಾಧಾನ ಪಡೆಯುವುದಕ್ಕಾಗಿ ಅವರ ಬಳಿ ಓಡುತ್ತಿದ್ದಂತೆ ಈಗ ಮಾಡುವುದಕ್ಕಾಗುವುದಿಲ್ಲ...." ಈ ಮಾತುಗಳನ್ನು ಹೇಳುವಾಗ ನೆಹರೂ ನಿಜವಾಗಿಯೂ ದುಃಖ ತಡೆಯಲಾರದೆ ಅಳತೊಡಗಿದರು. ಬಹುಶಃ ಬೇರೆ ಯಾವ ನಾಯಕರೂ ಸಹ ತೊಂದರೆಯ ಸಂದರ್ಭದಲ್ಲಿ ಸಮಾಧಾನ ಹಾಗೂ ಧೈರ್ಯಕ್ಕಾಗಿ ಗಾಂಧಿಯವರನ್ನು ನೆಹರೂ ಅವರಷ್ಟು ಹೆಚ್ಚಾಗಿ ಅವಲಂಬಿಸಿರಲಿಲ್ಲ. ನೆಹರೂ ಅತ್ತಾಗ ಇತರ ಸಾವಿರಾರು ಮಂದಿ ಅಳತೊಡಗಿದ್ದರು. ನಂತರ ನೆಹರು ತುಂಬಾ ಪ್ರಯಾಸದಿಂದ ತಮ್ಮ ಮಾತಿನ ಕೊನೆಯ ವಾಕ್ಯಗಳನ್ನು ಹೇಳಿದರು : "ಗಾಂಧೀಜಿಯವರು ಯಾವ ಆದರ್ಶಗಳಿಗಾಗಿ ಬದುಕಿದ್ದರೋ ಮತ್ತು ಯಾವ ಉದ್ದೇಶಕ್ಕಾಗಿ ಮೃತರಾದರೊ

ಅಂತಹ ಆದರ್ಶಗಳಿಗಾಗಿ ನಮ್ಮನ್ನು ನಾವು ಮುಡಿಪಾಗಿಟ್ಟುಕೊಳ್ಳುವ ಮೂಲಕ ಮಾತ್ರವೇ ಅವರ ಆತ್ಮಕ್ಕೆ ನಮ್ಮ ಅತ್ಯುತ್ತಮ ಸೇವೆ ಸಲ್ಲಿಸಬಹುದು."

ಆ ರಾತ್ರಿಯೆಲ್ಲ ಹಳೆಯ ದೆಹಲಿ ಮತ್ತು ಹೊಸ ದೆಹಲಿಯ ರಸ್ತೆಗಳಲ್ಲಿ ಜನವೋ ಜನ. ಈ ದುರಂತ ಸಂಭವಿಸಿದ ಎಷ್ಟೊ ಗಂಟೆಗಳ ನಂತರ ಮೊತ್ತಮೊದಲಬಾರಿಗೆ ಹಂತಕನ ಹೆಸರು ಕೇಳಿ ಬಂತು. ಈ ಕೃತ್ಯ ಮಾಡಿದವನು ಪೂನಾದ ಒಬ್ಬ ಆರ್‌ಎಸ್‌ಎಸ್ ಪತ್ರಿಕಾ ಸಂಪಾದಕ. ವಕ್ರ ಮನಸ್ಸಿನ ಯುವಕ ನಾಥೂರಾಂ ವಿನಾಯಕ ಗೋಡ್ಸೆ ಎಂದು ತಿಳಿಯಿತು. ಆತನನ್ನು ತಕ್ಷಣವೇ ಬಂಧಿಸಿ ಲಾಕಪ್‌ನಲ್ಲಿಡಲಾಗಿತ್ತು. ಆದರೆ ದುಃಖಿತ ಜನರ ದೃಷ್ಟಿಯಲ್ಲಿ ಇದು ಯಾರೋ ಒಬ್ಬ ವ್ಯಕ್ತಿ ಮಾಡಿದ ಕೃತ್ಯವಾಗಿರಲಿಲ್ಲ. ಮುಖಹೀನ ಶಕ್ತಿಯೊಂದು ಈ ಕತ್ಯ ಮಾಡಿತ್ತು. ಅಷ್ಟರಮಟ್ಟಿಗೆ ಜನರ ಅಭಿಪ್ರಾಯ ಸರಿಯಾಗೇ ಇತ್ತು.

ಧರ್ಮ ಸಹಿಷ್ಣುತೆಯ ಬಗ್ಗೆ ಇಡೀ ದೇಶದಲ್ಲಿ ಅತ್ಯಂತ ಶಕ್ತಿಯುತವೂ ಸ್ಪಷ್ಟವೂ ಆಗಿದ್ದ ಏಕೈಕ ದನಿಯಾಗಿದ್ದರು ಗಾಂಧಿ. ಆದರೆ ಈ ದನಿಯ ವಿರುದ್ಧದ ದನಿಗಳು ಉಳಿಯಬೇಕಾದರೆ ಗಾಂಧಿಯವರ ದನಿಯನ್ನು ಅಡಗಿಸಲೇಬೇಕಿತ್ತು. ಗಾಂಧಿಯವರನ್ನು ಒಬ್ಬ ಹಿಂದೂ ಧರ್ಮೀಯನೇ ಕೊಂದಿದ್ದೂ ಕೂಡ ಆಕಸ್ಮಿಕವೇನಲ್ಲ. ಗಾಂಧಿಯವರು ಯಾವ ಹಿಂದೂ ಧರ್ಮದ ವಿಶಾಲ ದೃಷ್ಟಿಕೋನವನ್ನು ಮತ್ತು ಉತ್ತಮಿಕೆಯನ್ನು ಎತ್ತಿಹಿಡಿದಿದ್ದರೋ ಅವರನ್ನು ಇಲ್ಲವಾಗಿಸಿದವನು ಅದೇ ಹಿಂದೂ ಧರ್ಮದಲ್ಲಿ ಅತ್ಯಂತ ಕೆಟ್ಟದ್ದು ಹಾಗೂ ಅತಿರೇಕವಾದದ್ದು ಏನೇನಿದೆಯೋ ಅದರ ಪ್ರತೀಕವಾಗಿದ್ದ.

ಬಹುದೀರ್ಘಕಾಲದಿಂದ ಬೆಳೆಸಿಕೊಂಡು ಬಂದ ಧಾರ್ಮಿಕ ವೈರತ್ವಗಳ ಇತಿಹಾಸ ಗಾಂಧಿಯವರ ಹತ್ಯೆಯ ಮೂಲಕ ತನ್ನ ಪರಾಕಾಷ್ಠ ಸ್ಥಿತಿ ಮುಟ್ಟಿತ್ತು. ವಿದೇಶೀಯರ ಒಡೆದು ಆಳುವ ನೀತಿ ಹಿಂದೂ ಮುಸ್ಲಿಮರು ಒಂದುಗೂಡದಂತೆ ಏನೇನೂ ಮಾಡಬೇಕೋ ಅವೆಲ್ಲವನ್ನೂ ಮಾಡಿತ್ತು. ಈ ಒಡಕಿನ ಲಾಭ ಪಡೆದವರು ಮುಸ್ಲಿಂ ಮೂಲಭೂತವಾದಿಗಳು. ಇದರಷ್ಟೇ ಮೂಲಭೂತವಾದಿಯಾಗಿದ್ದ ಹಿಂದೂ ಧರ್ಮ ಆರ್‌ಎಸ್‌ಎಸ್‌ನ್ನು ಹುಟ್ಟುಹಾಕಿ ಅವರಿಗೆ ಉತ್ತರ ಕೊಟ್ಟಿತ್ತು. ಗೋಡ್ಸೆಯ ವಿಚಾರಣೆ ನಡೆದಾಗ ಈ ಮತಾಂಧ ಯುವ ಚಳುವಳಿಗೆ ಪ್ರೋತ್ಸಾಹ ಕೊಟ್ಟಂತಹ ರಾಜ್ಯಗಳಲ್ಲಿಯೇ ಅದರ ಜಾಡು ಸಿಕ್ಕಿದ್ದು ಕೂಡ ಆಕಸ್ಮಿಕವೇನಲ್ಲ. ಈ ಜಾಡು ಗ್ವಾಲಿಯರ್‌ನಿಂದ ಆಳ್ವಾರ್‌ವರೆಗೆ ಹೋಗಿತ್ತು. ಆಳ್ವಾರ್ ಮಹಾರಾಜ ತನ್ನ ರಾಜ್ಯದಲ್ಲಿ ಪ್ರಜಾಸತ್ತಾತ್ಮಕ ಚಳುವಳಿಯನ್ನು ಹತ್ತಿಕ್ಕುವುದಕ್ಕಾಗಿ ಮತೀಯ ಕಲಹವನ್ನು ಸಮರ್ಥವಾಗಿ ಬಳಸಿಕೊಂಡಿದ್ದ. ಆತನ ಅರಮನೆ ಆರ್‌ಎಸ್‌ಎಸ್‌ನವರು ಸಭೆ ಸೇರುವ ಸ್ಥಳವಾಗಿತ್ತು. ಗಾಂಧಿಯವರ ಹತ್ಯೆಯಲ್ಲಿ ಭಾಗಿಯಾದ ಸಂದೇಹದ ಮೇಲೆ ಬಂಧಿತರಾದವರಲ್ಲಿ ಈ ರಾಜನೂ ಒಬ್ಬನಾಗಿದ್ದ. ಆದರೆ ಆರಂಭದ ಹಂತದಲ್ಲಿ ಈ ಹತ್ಯೆಯಲ್ಲಿ ಭಾಗಿಯಾದವರ ಸುಳಿವುಗಳೇನೂ ಕೇಳಿಬರಲಿಲ್ಲ. ಮತ್ತು ಸ್ವತಃ ಹಂತಕನ ಬಗ್ಗೆಯೂ ಕೂಡ ಆತನ ಹೆಸರಿನಿಂದ ಆತ ಉಚ್ಛಕುಲಕ್ಕೆ ಸೇರಿದವನು ಎಂಬುದೊಂದನ್ನು ಬಿಟ್ಟರೆ ಉಳಿದ ಯಾವ ಮಾಹಿತಿಯೂ ಸಿಕ್ಕಿರಲಿಲ್ಲ. ಈ ಹತ್ಯೆಯನ್ನು ಯಾರೋ ಒಬ್ಬ ವ್ಯಕ್ತಿ ನಡೆಸಿದ್ದಾನೆ ಎಂದು ಭಾವಿಸಿದ್ದ ಜನರು

ಆ ಪಾಪಿ ಅಂಗುಲ ಅಂಗುಲವಾಗಿ ನರಳಿ ಸಾಯುತ್ತಾನೆ. ಅವನು ಜೀವನದ ಕೊನೆಯ ಕ್ಷಣದವರೆಗೆ ಇದಕ್ಕಾಗಿ ಪರಿತಪಿಸುವುದು ಖಂಡಿತ ಎಂದು ಶಾಪ ಹಾಕುತ್ತಿದ್ದರು.

ಬೆಳಕು ಮೂಡುವ ಹೊತ್ತಿಗೆ ಬಿರ್ಲಾ ಭವನದ ಹುಲ್ಲು ಹಾಸು, ಉದ್ಯಾನ, ಸುತ್ತಮುತ್ತಲ ಮನೆಗಳ ಮೇಲೆ, ಅಲ್ಬುಕರ್ಕ್ ರಸ್ತೆ ಹಾಗೂ ಆ ರಸ್ತೆಗೆ ಸೇರುವ ಎಲ್ಲ ರಸ್ತೆಗಳಲ್ಲೂ ಜನಪ್ರವಾಹ ಹರಿದು ಬರತೊಡಗಿತ್ತು. ಅಂತಹ ಜನಸಾಗರದ ದೃಶ್ಯವನ್ನು ನಾನು ಈ ಮೊದಲು ಎಲ್ಲಿಯೂ ನೋಡಿರಲಿಲ್ಲ. ಎತ್ತರೆತ್ತರದ ಛಾವಣಿಗಳನ್ನುಳ್ಳ ಬಿರ್ಲಾಭವನ ಈ ದುಃಖ ಸಾಗರದ ಮಧ್ಯೆ ತಲೆ ಎತ್ತಿ ನಿಂತ ಬಂಡೆಗಲ್ಲಿನಂತೆ ಅಚಲವಾಗಿತ್ತು. ಅದರ ಮೇಲಿನ ಅಂತಸ್ತಿನಲ್ಲಿ ಎಲ್ಲರಿಗೂ ಕಾಣುವಂತೆ ಗಾಂಧೀಜಿಯ ದೇಹವನ್ನು ಇರಿಸಿದ್ದರು. ಗಾಂಧಿಯ ಮುಖ ಶಾಂತವಾಗಿತ್ತು. ಯಾವುದೇ ಭಾವನೆಗಳನ್ನು ತೋರಗೊಡದೆ ನಿರ್ಮಲವಾಗಿತ್ತು. ಗಾಂಧಿಯವರ ದೇಹಕ್ಕೆ ಹೊದಿಸಿದ್ದ ಅಚ್ಚ ಬಿಳಿಯ ಬಟ್ಟೆ ಸೂರ್ಯನ ಬೆಳಕಿನಲ್ಲಿ ಇನ್ನಷ್ಟು ಪ್ರಖರವಾಗಿ ಕಾಣುತ್ತಿತ್ತು. ಗಾಂಧಿಯವರ ಜೊತೆ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಅವರ ನಿಕಟವರ್ತಿಗಳು ಗಾಂಧಿಯವರ ದೇಹದ ಅಕ್ಕಪಕ್ಕಗಳಲ್ಲಿ ನಿಂತಿದ್ದರು. ಗಾಂಧಿಯವರಿಗೆ ಅತ್ಯಂತ ಹತ್ತಿರದವರು ಮತ್ತು ನಿಷ್ಠಾವಂತರೆಂದರೆ ನೆಹರೂ ಮತ್ತು ಪಟೇಲ್. ಅವರು ಗಾಂಧೀಜಿಯ. ತಲೆಯ ಬದಿಯಲ್ಲಿ ನಿಂತಿದ್ದರು. ಅದೇ ವಾರ ಪಟೇಲರು ನನ್ನೊಂದಿಗೆ ಮಾತಾಡುತ್ತಾ ಆರ್‌ಎಸ್‌ಎಸ್ ಯುವಕರಲ್ಲಿ ಕಂಡುಬರುತ್ತಿರುವ ಭಾವನೆ ಕೇವಲ ತಾತ್ಕಾಲಿಕ ಎಂದು ತಳ್ಳಿ ಹಾಕಿದನ್ನು ನೆನೆಸಿಕೊಂಡಾಗ ದುಃಖವಾಯಿತು.

ಸುಶೀಲಾ ಒಬ್ಬರನ್ನು ಹೊರತುಪಡಿಸಿ ಆಶ್ರಮದ ನಿಕಟವರ್ತಿಗಳೆಲ್ಲ ಅಲ್ಲಿದ್ದರು. ಕೆಲವೇ ದಿನಗಳ ಹಿಂದೆ ಈ ಮಹಿಳಾ ವೈದ್ಯೆ ಶಾಂತಿನಿಯೋಗದ ನೇತೃತ್ವ ವಹಿಸಿ ಪಾಕಿಸ್ತಾನಕ್ಕೆ ಹೋಗಿದ್ದರು. ಅವರು ಹೋಗಿದ್ದ ಸ್ಥಳದ ಹೆಸರು ಬಹಾವಲ್‌ಪುರ. ಅದು ಒಬ್ಬ ಮುಸ್ಲಿಂ ನವಾಬನ ಆಳ್ವಿಕೆಯಲ್ಲಿತ್ತು. ಅಲ್ಲಿ ಇತ್ತೀಚೆಗೆ ಹಿಂದೂಗಳ ಮೇಲೆ ಪುನಹ ಅತ್ಯಾಚಾರಗಳು ನಡೆದಿದ್ದವು. ಒಬ್ಬ ಹಿಂದೂ ಮಹಿಳೆ ಇಂತಹ ನಿಯೋಗವನ್ನು ಒಯ್ಯುವುದು ತುಂಬಾ ಅಪಾಯಕಾರಿಯಾಗಿತ್ತು. ಆದರೆ ಆಕೆಯ ಕುಟುಂಬ ಮೂಲತಃ ಇದೇ ಸ್ಥಳಕ್ಕೆ ಸೇರಿತ್ತು. ಅಲ್ಲಿ ನಡೆದ ಹಿಂಸಾಕೃತ್ಯಗಳಿಗೆ ಆಕೆಯ ಬಂಧುಗಳು ತುತ್ತಾಗಿದ್ದರು. ಜೈಲುವಾಸದ ದಿನಗಳಲ್ಲೂ ಗಾಂಧಿಯವರ ಯೋಗಕ್ಷೇಮ ವಹಿಸಿಕೊಂಡು ಜೊತೆಯಲ್ಲೆ ಇದ ಸುಶೀಲಾಗೆ, ಗಾಂಧಿಯವರ ಸಂದೇಶವಾಹಕಳಾಗಿ ಕೈಗೊಂಡ ಈ ಕೊನೆಯ ಕಾರ್ಯಭಾರದಿಂದಾಗಿ ಗಾಂಧಿಯ ಅಂತಿಮ ಕ್ಷಣದಲ್ಲೇ ಅವರ ಬಳಿ ಇರುವ ಅವಕಾಶ ತಪ್ಪಿಹೋಯಿತು.

ಬೆಳಿಗ್ಗೆ ಹನ್ನೊಂದು ಗಂಟೆಗೆ ಸರಿಯಾಗಿ ಗಾಂಧಿಯವರ ದೇಹವನ್ನು ಇಳಿಸಿದರು. ಹೂವುಗಳಿಂದ ಅಲಂಕೃತವಾದ ಸಶಸ್ತ್ರ ವಹಾನದ ಮೇಲೆ ಅವರ ದೇಹ ಇರಿಸಿದರು. ನೆಹರೂ ಪಟೇಲ್, ಬಲದೇವ್‌ಸಿಂಗ್ (ರಕ್ಷಣಾ ಮಂತ್ರಿ) ಈ ಅಂತಿಮ ಯಾತ್ರೆಯ ವ್ಯವಸ್ಥೆಯ ಉಸ್ತುವಾರಿ ವಹಿಸಿಕೊಂಡಿದ್ದರು. ಗಾಂಧಿಯವರ ದೇಹದ ಮೇಲೆ ತ್ರಿವರ್ಣಧ್ವಜವನ್ನು ಹೊದಿಸ ಲಾಯಿತು. ಅಂತಿಮ ಮೆರವಣಿಗೆ ಹೊರಟಿತು. ಜನಜಂಗುಳಿಯ ನಡುವೆ ಏನೋ

ಗಡಿಬಿಡಿಯಾದಂತೆ ಕಂಡಿತು. ನಾನು ಯಾವುದೋ ಕಟ್ಟಡದ ಛಾವಣಿಯ ಮೇಲೆ ನಿಂತು ಫೋಟೋ ತೆಗೆಯುತ್ತಿದ್ದೆ. ಶವವಾಹನದ ಬಳಿ ಮಹಿಳೆಯೊಬ್ಬಳು ನಡೆದು ಬರುತ್ತಿದ್ದಳು. ಆಕೆ ಸುಶೀಲಾ ಎಂದು ತಿಳಿಯಿತು. ಪಾಕಿಸ್ತಾನದಲ್ಲಿದ್ದ ಸುಶೀಲಾಗೆ ಸುದ್ದಿ ತಲುಪಿತ್ತು. ಒಂದು ವಿಶೇಷ ವಿಮಾನದಲ್ಲಿ ಅದೇ ಸಮಯಕ್ಕೆ ಸರಿಯಾಗಿ ಬಂದಿದ್ದಳು. ಗಾಂಧಿಯವರ ಪಾದದ ಮೇಲೆ ಬಿದ್ದು ಆಕೆ ಜೋರಾಗಿ ಅಳತೊಡಗಿದ್ದಳು.

ಅತ್ಯಂತ ದೊಡ್ಡ ಮೆರವಣಿಗೆ ಮುಂದಕ್ಕೆ ಚಲಿಸಿತು. ಅದು ಐದು ಮೈಲುಗಳ ಹಾದಿಯನ್ನು ಕ್ರಮಿಸಬೇಕಾಗಿತ್ತು. ದೇಶದ ಎಲ್ಲ ಭಾಗಗಳಿಂದ ಉಪನದಿಗಳಂತೆ ಹರಿದು ಬಂದ ಜನ ಈ ಮಹಾನದಿಯನ್ನು ಸೇರಿದ್ದರು. ಅನೇಕ ತಿಂಗಳುಗಳ ನಂತರ ಮುಸ್ಲಿಮರು ಮೊದಲ ಬಾರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಹೊರಬಂದು ಈ ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ಭಾರತದಲ್ಲಿರುವ ಮುಸ್ಲಿಮರು ಈ ದಿನ ತಮ್ಮ ತಂದೆಯನ್ನು ಕಳೆದುಕೊಂಡರು ಎಂದು ಯಾರೋ ಹೇಳಿದ್ದು ಕೇಳಿಸಿತು. ಈ ಮೆರವಣಿಗೆಯ ಮುಂಭಾಗದಲ್ಲಿ ಮಿಲಿಟರಿ ವಿನ್ಯಾಸದ ಸಶಸ್ತ್ರ ವಾಹನಗಳಿದ್ದವು. ಅಂತಿಮ ಯಾತ್ರೆಯ ವ್ಯವಸ್ಥೆಯನ್ನು ಮಾಡಲು ಸೇನೆಯನ್ನು ಕರೆಸಲಾಗಿತ್ತು. ಇದರಿಂದ ಈ ಮೆರವಣಿಗೆಗೆ ಬೇರೆಯದೇ ಛಾಯೆ ಬಂದಂತಿತ್ತು. ಇದರ ಹಿಂದೆ ಗೌರ್ನರ್ ಜನರಲ್ ಅವರ ಅಂಗರಕ್ಷಕ ಪಡೆಯ ರಾಹುತ ದಳ. ಇದರ ಹಿಂದೆ ಕೆಂಪು ನೀಲಿ ಸಮವಸ್ತ್ರದ ರಜಪುತಾನ ರೈಫಲ್ ದಳ ಹಾಗೂ ಇತರ ಮಿಲಿಟರಿ ಘಟಕಗಳು. ಇವರ ಹಿಂದೆ ಗಾಂಧಿಯವರ ಪಾರ್ಥಿವ ಶರೀರದ ಸಶಸ್ತ್ರ ವಾಹನ. ನನ್ನ ಹಿಂದಿದ್ದ ಯಾರೋ ಹೇಳುತ್ತಿದ್ದರು. ಅಹಿಂಸೆಯನ್ನು ಬೋಧಿಸಿದ ಮಹಾತ್ಮನನ್ನು ಮಿಲಿಟರಿ ವಾಹನದಲ್ಲಿ ತೆಗೆದುಕೊಂಡು ಹೋಗುವುದನ್ನು ನೋಡಿದರೆ ಕಣ್ಣೀರು ಉಕ್ಕುತ್ತದೆ ಎಂದು. ಈ ವಾಹನದ ಹಿಂದೆ ಖದ್ದರ್ ಉಡುಪಿನ ಜನರ ಗುಂಪು ನಡೆದುಕೊಂಡು ಬರುತ್ತಿತ್ತು. ಇದು ಮೆರವಣಿಗೆಗೆ ಸ್ವಲ್ಪ ಶಾಂತಿಯ ಕಳೆ ಮೂಡಿಸಿತ್ತು.

ಶವದಹನದ ಸ್ಥಳದಲ್ಲಿ ಶ್ರೀಗಂಧದ ಮರದ ತುಂಡುಗಳನ್ನು ಪೇರಿಸಲಾಗಿದ್ದ ಜಾಗದವರೆಗೆ ನಾನು ಹೋದೆ. ಮೂವರು ಹಿಂದೂ ಪುರೋಹಿತರು ಆ ಕೊರಡುಗಳ ಮೇಲೆ ತುಪ್ಪ ಸುರಿಯುತ್ತಿದ್ದರು. ಜೊತೆಗೆ ಸುಗಂಧಿತ ಕರ್ಪೂರವನ್ನು ಹಾಕುತ್ತಿದ್ದರು. ಆ ಸ್ಥಳಕ್ಕೆ ಹೊಂದಿ ಕೊಳ್ಳುವುದಿಲ್ಲ ಎನಿಸುವಂಥ ಒಂದು ದೊಡ್ಡ ಗುಂಪು ಬಂತು. ಅದರಲ್ಲಿ ಬೇರೆಬೇರೆ ರೀತಿಯ ಜನ ಇದ್ದರು. ಅವರೆಲ್ಲ ಕ್ಯಾಂಪ್‌ಫೈರಿನ ಸುತ್ತ ಕುಳಿತುಕೊಳ್ಳುವಂತೆ ನೆಲದ ಮೇಲೆ ಕುಳಿತರು. ಇದರಲ್ಲಿ ಲಾರ್ಡ್ ಮತ್ತು ಲೇಡಿ ಮೌಂಟ್ ಬ್ಯಾಟನ್, ಚೈನಾದ ರಾಯಭಾರಿ, ಮೌಲಾನಾ ಅಜಾದ್, ಗಾಂಧಿಯವರನ್ನು ಮಿಕಿಮೌಸ್ ಎಂದು ತಮಾಷೆಯಿಂದ ಕರೆಯುತ್ತಿದ್ದ ಕವಯಿತ್ರಿ ಸರೋಜಿನಿನಾಯಿಡು, ರಾಜಕುಮಾರಿ ಅಮೃತ್‌ಕೌರ್ ಮೊದಲಾದವರೆಲ್ಲ ಇದ್ದರು.

ಜನರ ಗುಂಪು ನುಗ್ಗಿಕೊಂಡು ಬಂದಾಗ ಅಲ್ಲಿ ಕುಳಿತವರೆಲ್ಲ ತರಾತುರಿಯಿಂದ ಮೇಲೇಳ ಬೇಕಾಯಿತು. ಮೆರವಣಿಗೆ ಹತ್ತಿರ ಬಂದಿತ್ತು. ಪುರೋಹಿತರು ಮಂತ್ರಪಠಣ ಆರಂಭಿಸಿದ್ದರು. ಗಾಂಧಿಯವರ ದೇಹವನ್ನು ಚಿತೆಗೆ ಅರ್ಪಿಸುತ್ತಿದ್ದಂತೆ ಬೆಂಕಿಯ ಕೆನ್ನಾಲಿಗೆಗಳು ಮೇಲೆದ್ದವು. ಜನರ ನೂಕುನುಗ್ಗಲು ಇನ್ನಷ್ಟು ಹೆಚ್ಚಾಯಿತು. ಜನರನ್ನು ಚೆದುರಿಸಲು ಕುದುರೆಗಳ ಮೇಲಿದ್ದ

ಪೊಲೀಸ್ ದಳದವರು ಲಾಠಿ ಬೀಸಿದ್ದರಿಂದ ಇನ್ನಷ್ಟು ಗೊಂದಲವಾಯಿತು. ಮಾರನೆಯ ಬೆಳಿಗ್ಗೆ ನೆಹರೂ ಅತ್ಯಂತ ಖಿನ್ನವಾದ ದನಿಯಲ್ಲಿ ಕೆಲವು ಮಾತುಗಳನ್ನು ಹೇಳಿದರು. "ನಮ್ಮ ಅತಿ ಅಮೂಲ್ಯ ಸಂಪತ್ತನ್ನು ನಾವು ರಕ್ಷಿಸಿಕೊಳ್ಳಲಿಲ್ಲ" ಎಂದರು. ಆಮೇಲೆ ಸಾಂಪ್ರದಾಯಿಕ ವಿಧಿಗಳೊಂದಿಗೆ ಚಿತಾಭಸ್ಮವನ್ನು ಭಾರತದ ಪವಿತ್ರ ನದಿಗಳಲ್ಲಿ ಹಾಕಲಾಯಿತು.

ರಾತ್ರಿಯೆಲ್ಲ ಉರಿದ ಈ ಅಜರಾಮರ ಬೆಂಕಿಯ ಒಂದೊಂದು ಪುಟ್ಟ ಜ್ವಾಲೆ ಅಲ್ಲಿದ್ದ ಸಹಸ್ರಾರು ಮಂದಿಯಲ್ಲಿ ಪ್ರತಿಯೊಬ್ಬರ ಹೃದಯದಲ್ಲೂ ಬೆಳಗುತ್ತದೆ ಎಂದು ನಾನು ಕಲ್ಪಿಸಿಕೊಂಡೆ. ಬಾಪೂ ಬಯಸಿದಂತೆಯೇ ಯಾವುದೇ ಬಲವಂತವಿಲ್ಲದೆ ಆಂತರಿಕ ಪರಿವರ್ತನೆಯ ಮೂಲಕವೇ ಜನರು ಸರಿಯಾದ ಪಥದಲ್ಲಿ ಮುಂದುವರೆಯುತ್ತಾರೆ ಎಂದು ಆಶಿಸಿದೆ. ಧರ್ಮಸಹಿಷ್ಣುತೆ ಮತ್ತು ಏಕತೆಗಾಗಿ ಅವರು ಮಾಡಿದ ಬಲಿದಾನ ಭಾರತಕ್ಕೆ ಒಂದು ತಿರುವು ತರಬಹುದು ಎಂದು ನಿರೀಕ್ಷಿಸಿದೆ. ಬೆಳಕು ತೋರಿಸುವುದಕ್ಕಾಗಿ ಗಾಂಧಿ ತಮ್ಮ ಜೀವವನ್ನೇ ಅರ್ಪಣೆ ಮಾಡಿದ್ದರು.

❑



ಮಾರ್ಗರೆಟ್ ಬರ್ಕ್‌ವೈಟ್

(೧೯೦೪-೧೯೭೧)

ಇಪ್ಪತ್ತನೇ ಶತಮಾನದ ಅಗ್ರಗಣ್ಯ ಫೋಟೊ ಜರ್ನಲಿಸ್ಟ್ ಎಂದು ಪರಿಗಣಿಸಲ್ಪಟ್ಟ ಅಮೆರಿಕನ್ ಮಹಿಳೆ. ೧೯೨೦-೩೦ರ ದಶಕಗಳ ಅನೇಕ ಛಾಯಾಚಿತ್ರ ಪತ್ರಕರ್ತರಂತೆ ಆಕೆಗೂ ಯಂತ್ರ ಪ್ರಪಂಚ ಹಾಗೂ ತಂತ್ರಜ್ಞಾನದ ಜಗತ್ತುಗಳು ಮೆಚ್ಚುಗೆಯ ವಿಷಯಗಳಾಗಿದ್ದವು. ೧೯೨೭ರಲ್ಲಿ ಆಕೆ ಕ್ಲಿವ್‌ಲ್ಯಾಂಡ್‌ಗೆ ಹೋಗಿ ವಾಸ್ತುಶಿಲ್ಪ ಹಾಗೂ ಕೈಗಾರಿಕಾ ವಿಷಯಗಳಲ್ಲಿ ವಿಶೇಷ ಪರಿಮಿತಿ ಪಡೆದಳು. ಯಂತ್ರಗಳದು ಕೃತ್ರಿಮತೆಯಿಲ್ಲದ ನಿರಾಭರಣ ಸೌಂದರ್ಯ ಎಂದು ಬರ್ಕ್‌ವೈಟ್ ಬಣ್ಣಿಸುತ್ತಾಳೆ. ಟೈಮ್ ಮತ್ತು ಲೈಫ್ ಮ್ಯಾಗಜೈನ್‌ಗಳನ್ನು ಒಳಗೊಂಡ ಫಾರ್ಚೂನ್ ಎಂಬ ಹೊಸ ಪತ್ರಿಕಾ ಬಳಗದಲ್ಲಿ ಕೆಲಸಕ್ಕೆ ಸೇರಿದ ಬರ್ಕ್‌ವೈಟ್ ಕೊನೆಯವರೆಗೂ ಈ ಪತ್ರಿಕಾ ಬಳಗದೊಂದಿಗೆ ನಂಟು ಉಳಿಸಿಕೊಂಡಳು. ಮಧ್ಯಪ್ರಾಚ್ಯದ ಕ್ಷಾಮಪೀಡಿತ ಜನಗಳ ಬವಣೆ ಕುರಿತಂತೆ ಫಾರ್ಚೂನ್ ಪತ್ರಿಕೆಗಾಗಿ ಒಂದು ಸಾಮಾಜಿಕ ಸಾಕ್ಷ್ಯಚಿತ್ರ The Drought...ನ್ನು ತೆಗೆದ ನಂತರ ಆಕೆಯ ವೃತ್ತಿಜೀವನದ ದಿಕ್ಕೇ ಬದಲಾಯಿತು. ಈ ಕ್ಷಾಮಪೀಡಿತರ ಬವಣೆಗಳು ಆಕೆಯನ್ನು ಎಷ್ಟು ಆಳವಾಗಿ ತಟ್ಟಿದವೆಂದರೆ ಅನಂತರದಲ್ಲಿ ಇಂತಹ ಚಿತ್ರಗಳನ್ನು ತೆಗೆಯುವುದೇ ಅವಳ ರೂಢಿಯಾಯಿತು.

ಫೋಟೊ ಜರ್ನಲಿಸಂಗೆಂದೇ ಲೈಫ್ ಮ್ಯಾಗಜೈನ್ ಆರಂಭಿಸಿದ ವಿಶೇಷ ವಿಭಾಗಕ್ಕಾಗಿ ಮೊಂಟಾನ ಅಣೆಕಟ್ಟು ಪ್ರಾಜೆಕ್ಟಿನ ಚಿತ್ರಗಳನ್ನು ತೆಗೆಯಲು ಹೋಗಿದ್ದ ಬರ್ಕ್‌ವೈಟ್, ಅಲ್ಲಿ ತನ್ನ ಸ್ವಂತ ಆಸಕ್ತಿಯಿಂದ ಸಮೀಪದ ಗಡಿನಾಡಿನ ಊರುಗಳ ಬದುಕಿನ ಚಿತ್ರಗಳನ್ನು ತೆಗೆದಳು. ಲೇಖಕ ಎರ್ಸ್‌ಕಿನ್ ಕಾಲ್ಡ್‌ವೆಲ್ ಅವರ ಜೊತೆಗೂಡಿ ದಕ್ಷಿಣದ ಶೇರ್‌ಕ್ರಾಪರ್‌ಗಳನ್ನು ಕುರಿತು ಈಕೆ ನಿರ್ಮಿಸಿದ 'You have seen their face' ಎಂಬ ಹೆಸರಿನ ಚಿತ್ರ, ಸಾಕ್ಷ್ಯಚಿತ್ರಗಳ ಪರಂಪರೆಯಲ್ಲಿ ಮೈಲಿಗಲ್ಲು ಸ್ಥಾಪಿಸಿತು. ನಂತರ ಕಾಲ್ಡ್‌ವೆಲ್ ಅವರನ್ನೇ ವಿವಾಹವಾದ ಬರ್ಕ್‌ವೈಟ್ ಪತಿಯ ಜೊತೆ ಸೇರಿ ಯುದ್ಧಪೂರ್ವ ಜಕೋಸ್ಲಾವಾಕಿಯ

ಬಗ್ಗೆ 'The North of Denube' ಎಂಬ ಕೃತಿಯನ್ನು ಅನಂತರ 'Say, is this USA' ಎಂಬ ಕೃತಿಯನ್ನು ರಚಿಸಿದಳು. ದ್ವಿತೀಯ ಮಹಾಯುದ್ಧದ ಸಂದರ್ಭದಲ್ಲಿ, ಸಂಯುಕ್ತ ಸಂಸ್ಥಾನದ ವಾಯುಸೇನಾಬಲದ ಸಮರ ಬಾತ್ಮೀದಾರಳಾಗಿ ಬರ್ಕ್‌ವೈಟ್ ಕೆಲಸ ಮಾಡಿದಳು. ಎಷ್ಟೋ ವೇಳೆ ಯುದ್ಧದ ಮುಂಚೂಣಿಯಲ್ಲಿ ಜನರಲ್ ಜಾರ್ಜ್ ಪ್ಯಾಟನ್ ಹಾಗೂ ತೃತೀಯ ಸೇನೆಯ ಜೊತೆ ನಿಂತು ಜರ್ಮನಿಯ ಕೊನೆಯ ದಿನಗಳನ್ನು ಚಿತ್ರಿಸಿದಳು. ಮರಣಶಿಬಿರಗಳ ಒಳಹೊಕ್ಕು 'The Living Dead of Buchenwald' ಎಂಬ ಕೃತಿ ರಚಿಸಿದಳು. ಇದಂತೂ ಛಾಯಾಗ್ರಹಣ ಇತಿಹಾಸದ ಅಮರ ಕೃತಿ ಎನಿಸಿದೆ. ಮಹಾಯುದ್ಧಾನಂತರದ ದಿನಗಳಲ್ಲಿ ಕೊರಿಯನ್ ಯುದ್ಧದ ಛಾಯಾಗ್ರಹಣ ಯೋಜನೆಯನ್ನು ನಿರ್ವಹಿಸುವಾಗ ಗೆರಿಲ್ಲಾ ಹೋರಾಟಕ್ಕಿಂತ ಮಾನವೀಯ ಆಸಕ್ತಿಯ ವಿಷಯಗಳ ಬಗೆಗೆ ಬರ್ಕ್‌ವೈಟ್ ಗಮನ ಕೇಂದ್ರೀಕರಿಸಿದಳು.


೧೯೫೦ರ ದಶಕದ ಮಧ್ಯಭಾಗದ ಹೊತ್ತಿಗೆ ಬರ್ಕ್‌ವೈಟ್ ವೃತ್ತಿಜೀವನದ ಉತ್ತುಂಗ ಶಿಖರ ಮುಟ್ಟಿದಳು. ಅನಂತರ ಪಾರ್ಕಿನ್‌ಸನ್ ಖಾಯಿಲೆಗೆ ತುತ್ತಾದ ಬರ್ಕ್‌ವೈಟ್ ಇತರರಲ್ಲಿ ಉತ್ಸಾಹ ತುಂಬುವ ಉದ್ದೇಶದಿಂದ ತನ್ನ ಪುನಃ ಚೇತರಿಕೆಯ ಅನುಭವಗಳನ್ನು ಬರೆದಳು. ಆಕೆಯ ಆತ್ಮಕಥನ 'Portrait of myself' ೧೯೬೩ರಲ್ಲಿ ಪ್ರಕಟವಾಯಿತು.

❑

ಬರ್ಕ್‌ವೈಟ್ ತೆಗೆದ ಛಾಯಾಚಿತ್ರಗಳು




'ಮಹಾವಲಸೆ', ಮೊದಲು ಇದಕ್ಕೆ ಕೊಟ್ಟ ಹೆಸರು 'ಜನರ ವಿನಿಮಯ'



'ಮಹಾವಲಸೆ'
ಹಿಂದೂಗಳು ಮತ್ತು
ಸಿಖ್ ಜನರು ಭಾರತಕ್ಕೆ,
ಮುಸ್ಲಿಮರು ಪಾಕಿಸ್ತಾನಕ್ಕೆ



'ಮಹಾವಲಸೆ' ಬಳಲಿಕೆಯಿಂದ ಕುಸಿದವರು



'ಮಹಾವಲಸೆ' ಹೆಂಗಸರು, ಮಕ್ಕಳು, ಕೈಲಾಗದವರನ್ನು ಹೊತ್ತು ಸಾಗಿದ ಎತ್ತಿನ ಗಾಡಿಗಳು



'ಮಹಾವಲಸೆ' ಮಾನವನ ಸಂಕಷ್ಟಗಳ ಮೇಲೆ ನಡೆಸಿದ ಮಹಾ ಪ್ರಯೋಗ



ಕಲ್ಕತ್ತೆಯಲ್ಲಿ ಪ್ರತ್ಯಕ್ಷ ಕದನ




ಲೂಟಿಯಲ್ಲಿ ಪಾಲುಗೊಂಡ ರಣಹದ್ದುಗಳು



ಪೂರ್ವಿಕರ ಸ್ಥಳವನ್ನು ಬಿಟ್ಟುಹೋಗುವುದೆಲ್ಲಿಗೆ ?



ಮುದುಕರು ಕೈಲಾಗದವರು ಹಿಂದೆಯೇ ಉಳಿದರು, ಕಾರವಾನ್ ಸಾಗಿತು....



ನಿಲ್ಲಲೂ ಶಕ್ತಿಯಿಲ್ಲ, ಅಕ್ಕಪಕ್ಕದವರು ತಂದುಕೊಟ್ಟ ಹಸಿರೆಲೆಗಳೇ ಜೀವಕ್ಕೆ ಆಧಾರ. ಬರಗಾಲಕ್ಕೆ ತುತ್ತಾದ ಹಳ್ಳಿಯನ್ನು ಈತನ ಮೊಮ್ಮಕ್ಕಳು ತೊರೆದು ಹೋಗಿ ವಾರಗಳೇ ಕಳೆದಿವೆ.



ಬರಗಾಲದ ಬವಣೆ : ಒಂದು ಕಾಳೂ ಉಳಿದಿಲ್ಲ




ಮಹಾತ್ಮ, ಅಂದಂದಿನ ರಾಜಕೀಯ ಬೆಳವಣಿಗೆಗಳತ್ತ ಕಣ್ಣಾಡಿಸುತ್ತ...




ಮಹಾತ್ಮರ ಮುಂಜಾನೆಯ ನಡಿಗೆ, ಮೊಮ್ಮಗಳು ಸೀತಾ ಮತ್ತು
ಸೋದರ ಮೊಮ್ಮಗಳು ಅಭಾ ಹಾಗೂ ಇತರ ಪರಿವಾರದೊಂದಿಗೆ



ಜವಾಹರಲಾಲ್ ನೆಹರು
ಭಾರತದ ಪ್ರಧಾನಮಂತ್ರಿ



ಪೂರ್ವದತ್ತ
ಮುಖಮಾಡಿದ ಜಿನ್ನಾ



ಮೌಲಾನ ಅಬ್ದುಲ್ ಕಲಾಂ ಅಜಾದ್
ಶಿಕ್ಷಣ ಸಚಿವರು, ಭಾರತದ ವಿಭಜನೆಯನ್ನು
ವಿರೋಧಿಸಿದ ಅಕ್ಕರೆಯ ಮುಸ್ಲಿಂ



ರ್ಕ್‌ವೈಟ್ ಕಂಡ ಭಾರತ' ಒಂದು
ಪರೂಪದ ಕೃತಿ. ಅಂದಿನ ಭಾರತದ ವಿವಿಧ
ುಖಗಳನ್ನು ದಾಖಲಿಸುವುದರ ಜೊತೆಗೆ
ತಂತ್ರ್ಯ ಸಂದರ್ಭದ ಬಹಳ ಮುಖ್ಯ
ಟ್ಟವಾದ ಭಾರತ ವಿಭಜನೆಯ ದಾರುಣ
ನುಭವಗಳನ್ನು ಸೇರಹಿಡಿದಿರುವ ಕೃತಿ ಇದು.
ಂಧೀಜಿಯವರ ಛಾಯಾಚಿತ್ರಗಳನ್ನು ಸೆರೆ
ಡಿಯಲು ಬಯಸಿದ ಕಲಾವಿದೆ ಆ
ನಗಳಲ್ಲಿ ತಾನು ಕಂಡ ಅನುಭವಗಳನ್ನು
ಾಗೂ ಗಾಂಧೀಜಿಯವರ ವ್ಯಕ್ತಿತ್ವದ
ನ್ನತ್ಯವನ್ನು ಇಲ್ಲಿ ಹೃದಯಸ್ಪರ್ಶಿ ಭಾವದಲ್ಲಿ
ರೆದಿಟ್ಟಿದ್ದಾರೆ.

• ಪ್ರೊ. ಎಸ್.ಜಿ. ಸಿದ್ಧರಾಮಯ್ಯ

